# ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ: ಲಿಂಗಸಂಬಂಧಿ ಅಧ್ಯಯನ

(ಹೈದರಾಬಾದ್-ಕರ್ನಾಟಕವನ್ನು ಅನುಲಕ್ಷಿಸಿ)

(ಕನ್ನಡ ವಿಶ್ವವಿದ್ಯಾಲಯ, ಹಂಪಿ, ಮಹಿಳಾ ಅಧ್ಯಯನ ವಿಭಾಗಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ)

ಸಂಶೋಧಕರು

ಭೀಮೇಶ

ಮಾರ್ಗದರ್ಶಕರು

ಡಾ. ಶೈಲಜ ಹಿರೇಮಠ

ಸಹ ಪ್ರಾಧ್ಯಾಪಕರು

ಮಹಿಳಾ ಅಧ್ಯಯನ ವಿಭಾಗ

ಮಹಿಳಾ ಅಧ್ಯಯನ ವಿಭಾಗ

ಭಾಷಾನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩೨೭೬

೨೦೧೫

# ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ: ಲಿಂಗಸಂಬಂಧಿ ಅಧ್ಯಯನ

(ಹೈದರಾಬಾದ್-ಕರ್ನಾಟಕವನ್ನು ಅನುಲಕ್ಷಿಸಿ)

(ಕನ್ನಡ ವಿಶ್ವವಿದ್ಯಾಲಯ, ಹಂಪಿ, ಮಹಿಳಾ ಅಧ್ಯಯನ ವಿಭಾಗಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ)



ಸಂಶೋಧಕರು
**ಭೀಮೇಶ**

ಮಾರ್ಗದರ್ಶಕರು
**ಡಾ. ಶೈಲಜ ಹಿರೇಮಠ**
ಸಹ ಪ್ರಾಧ್ಯಾಪಕರು
ಮಹಿಳಾ ಅಧ್ಯಯನ ವಿಭಾಗ

**ಮಹಿಳಾ ಅಧ್ಯಯನ ವಿಭಾಗ**
**ಭಾಷಾನಿಕಾಯ**
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ, ೫೮೩೨೭೬
**2015**

# ಸಂಶೋಧಕರ ಪ್ರಮಾಣ ಪತ್ರ

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ: ಲಿಂಗಸಂಬಂಧಿ ಅಧ್ಯಯನ (ಹೈದರಾಬಾದ್-ಕರ್ನಾಟಕವನ್ನು ಅನುಲಕ್ಷಿಸಿ) ಎಂಬ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಮಹಿಳಾ ಅಧ್ಯಯನ ವಿಭಾಗದ ಸಹ ಪ್ರಾಧ್ಯಾಪಕರಾದ ಡಾ. ಶೈಲಜ ಹಿರೇಮಠ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ.

ಪ್ರಸ್ತುತ ಮಹಾಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿ ಮತ್ತು ಇತರ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸಂಶೋಧಕರು

(ಭಿಮೇಶ)
ಮಹಿಳಾ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩೨೭೬

ದಿನಾಂಕ: 3/7/2015
ಸ್ಥಳ: ವಿದ್ಯಾರಣ್ಯ

# ಮಾರ್ಗದರ್ಶಕರ ದೃಢೀಕರಣ ಪತ್ರ

ಭೀಮೇಶ ಇವರು ಪಿಎಚ್.ಡಿ. ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ **ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ: ಲಿಂಗಸಂಬಂಧಿ ಅಧ್ಯಯನ (ಹೈದರಾಬಾದ್-ಕರ್ನಾಟಕವನ್ನು ಅನುಲಕ್ಷಿಸಿ)** ಎಂಬ ಈ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಮಹಿಳಾ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದಾರೆ.

ಪ್ರಸ್ತುತ ಮಹಾಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿ ಹಾಗೂ ಇತರ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ಮಾರ್ಗದರ್ಶಕರು

3.7.15

ದಿನಾಂಕ: 3.7.2015

ಸ್ಥಳ: ವಿದ್ಯಾರಣ್ಯ

**ಡಾ. ಶೈಲಜ ಹಿರೇಮಠ**
ಸಹ ಪ್ರಾಧ್ಯಾಪಕರು
ಮಹಿಳಾ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩೨೭೬

# ಪರಿವಿಡಿ

# ಅಧ್ಯಾಯ: ಒಂದು

## ಅಧ್ಯಯನ ಉದ್ದೇಶ, ವ್ಯಾಪ್ತಿ, ವೈಧಾನಿಕತೆ ಮತ್ತು ಸ್ವರೂಪ

## ಅಧ್ಯಾಯ:ಒಂದು

# ಅಧ್ಯಯನದ ಉದ್ದೇಶ, ವ್ಯಾಪ್ತಿ, ವೈಧಾನಿಕತೆ ಮತ್ತು ಸ್ವರೂಪ

ಒಂದು ದೇಶದ ಅಭಿವೃದ್ಧಿ ಆ ದೇಶದ ಮಾನವ ಅಭಿವೃದ್ಧಿಯನ್ನು ಅವಲಂಬಿಸಿರುತ್ತದೆ. ಇಲ್ಲಿ ಮಾನವ ಅಭಿವೃದ್ಧಿ ಎಂಬುದು ಸ್ತ್ರೀ-ಪುರುಷರಿಬ್ಬರನ್ನು ಒಳಗೊಳ್ಳುತ್ತದೆ. ಭಾರತದಲ್ಲಿ ಈ ಮಾನವ ಅಭಿವೃದ್ಧಿಯು ತುಂಬಾ ನಿಧಾನಗತಿಯಲ್ಲಿದೆ. ಹಾಗಾಗಿ ಭಾರತವು ಇನ್ನೂ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ಸಾಲಿನಲ್ಲಿಯೇ ಮುಂದುವರೆದಿದೆ. ಭಾರತವು ಹಳ್ಳಿಗಳ ತವರೂರು. ಹಳ್ಳಿಗಳಲ್ಲಿನ ಜನರು ಬಡತನ, ನಿರುದ್ಯೋಗ ಅಸಮಾನತೆ ಇನ್ನೂ ಮುಂತಾದ ಸಮಸ್ಯೆಗಳಿಂದ ಬಳಲುತ್ತಿರುವುದು ಎಲ್ಲರಿಗೂ ತಿಳಿದಿರುವ ವಿಷಯ. ದೇಶದ ಅಭಿವೃದ್ಧಿಯಾಗಬೇಕಾದರೆ ಗ್ರಾಮೀಣ ಭಾಗದ ಜನರ ಜೀವನ ಮಟ್ಟವೂ ಕೂಡ ಸುಧಾರಿಸಬೇಕಾಗುತ್ತದೆ. ಅದರಲ್ಲಿಯೂ ಸ್ತ್ರೀ-ಪುರುಷರು ಸಮಾನ ನೆಲೆಯಲ್ಲಿರುವಂತೆ ನೋಡಿಕೊಳ್ಳಬೇಕಾಗುತ್ತದೆ. ಇಂದು ಹಳ್ಳಿಗಳಲ್ಲಿನ ಜನರು ತಮ್ಮ ಉಪಜೀವನಕ್ಕಾಗಿ ಉದ್ಯೋಗವನ್ನರಸಿ ಬೇರೆ ಬೇರೆ ಪ್ರದೇಶಗಳಿಗೆ ವಲಸೆ ಹೋಗುತ್ತಿರುವುದು ವಾಸ್ತವ ಸತ್ಯ. ಇದನ್ನು ಮನಗಂಡ ಸರಕಾರ ಗ್ರಾಮೀಣ ಭಾಗದ ಜನರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವುದರ ಸಲುವಾಗಿ ಹಲವಾರು ಅಭಿವೃದ್ಧಿ ಯೋಜನೆಗಳನ್ನು ರೂಪಿಸುತ್ತಾ ಬಂದಿದೆ. ಅವುಗಳಲ್ಲಿ ಪ್ರಮುಖವಾಗಿ ಉದ್ಯೋಗ ಭರವಸೆ ಯೋಜನೆ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಕಾರ್ಯಕ್ರಮ, ಜವಾಹರ್ ರೋಜ್‌ಗಾರು ಯೋಜನೆ, ಸಂಪೂರ್ಣ ಗ್ರಾಮೀಣ ರೋಜ್‌ಗಾರ್ ಯೋಜನೆ, ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆ, ಜವಾಹರ್ ಗ್ರಾಮ ಸಮೃದ್ಧಿ ಯೋಜನೆ, ಸುವರ್ಣ ಗ್ರಾಮೋದಯ ಯೋಜನೆ, ರಾಷ್ಟ್ರೀಯ ಕೂಲಿಗಾಗಿ ಕಾಳು ಯೋಜನೆ ಹೀಗೆ ಅನೇಕ ಯೋಜನೆಗಳನ್ನು ಗ್ರಾಮೀಣ ಜನರ ಒಳತಿಗಾಗಿ ಜಾರಿಗೆ ತಂದಿದೆ. ಆದರೆ

ಈ ಯೋಜನೆಗಳು ಸುಧಾರಣೆಯನ್ನು ಕಂಡಿಲ್ಲ. ಗ್ರಾಮೀಣ ಜನರ ಕೇಂದ್ರಿತವಾಗಿ ರೂಪುಗೊಂಡ ಇಂತಹ ಯೋಜನೆಗಳು ಉದ್ದೇಶಿತ ಪ್ರಗತಿಯನ್ನು ಯಾಕೆ ಸಾಧಿಸಲಾಗುತ್ತಿಲ್ಲ ಎನ್ನುವ ಪ್ರಶ್ನೆಯು ಎದುರುಗೊಳ್ಳುತ್ತದೆ.

ಕೇಂದ್ರ ಸರಕಾರವು ಗ್ರಾಮೀಣ ಜನರಿಗೆ ಉದ್ಯೋಗವನ್ನು ಒದಗಿಸುವುದು ಮತ್ತು ಅವರ ಜೀವನ ಮಟ್ಟ ಸುಧಾರಿಸುವುದರ ಸಲುವಾಗಿ "ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ"ಯನ್ನು ಆಗಸ್ಟ್ ೨೩, ೨೦೦೫ರಂದು ಲೋಕಸಭೆಯಲ್ಲಿ ಸರ್ವಾನುಮತದಿಂದ ಅಂಗೀಕರಿಸಿ ಅದನ್ನು ಜಾರಿಗೆ ತಂದಿತು. ಫೆಬ್ರವರಿ ೨, ೨೦೦೬ರಂದು ದೇಶದ ಆಯ್ದ ಎರಡು ನೂರು ಜಿಲ್ಲೆಗಳಲ್ಲಿ ಜಾರಿಯಾಗಿ ನಂತರ ದೇಶದ ಎಲ್ಲಾ ಗ್ರಾಮೀಣ ಜಿಲ್ಲೆಗಳಿಗೆ ಈ ಯೋಜನೆಯನ್ನು ವಿಸ್ತರಿಸಲಾಯಿತು.

ಈ ಅಧ್ಯಯನವು ಹೈದರಾಬಾದ್ ಕರ್ನಾಟಕವನ್ನು ಕೇಂದ್ರವಾಗಿರಿಸಿಕೊಂಡಿದ್ದು, ಮೂರು ಹಂತದಲ್ಲಿ ವಿಸ್ತರಿಸಿಕೊಂಡಿದೆ. ೧. ಪ್ರಾದೇಶಿಕತೆ ೨. ಯೋಜನೆಯ ಸ್ವರೂಪ ೩. ಯೋಜನೆಯ ಅನುಷ್ಠಾನ ಸಂದರ್ಭದಲ್ಲಿನ ಸಮಸ್ಯೆಗಳು. ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯು ಕರ್ನಾಟಕದಲ್ಲಿ ಜಾರಿಯಲ್ಲಿದ್ದು, ಅದು ಮೊಟ್ಟ ಮೊದಲನೆಯದಾಗಿ ೨೦೦೬ರಲ್ಲಿ ಅತಿ ಹಿಂದುಳಿದ ಐದು ಜಿಲ್ಲೆಗಳಲ್ಲಿ ಅಂದರೆ ಹೈದರಾಬಾದ್ ಕರ್ನಾಟಕದ ಮೂರು ಜಿಲ್ಲೆಗಳಾದ ಬೀದರ್, ಗುಲ್ಬರ್ಗಾ, ರಾಯಚೂರು ಮತ್ತು ಮಧ್ಯ ಕರ್ನಾಟಕದ ಎರಡು ಜಿಲ್ಲೆಗಳಾದ ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಮಾತ್ರ ಈ ಯೋಜನೆ ಜಾರಿಗೆ ಬಂದಿತು. ನಂತರ ೨೦೦೮ರಲ್ಲಿ ರಾಜ್ಯಾದ್ಯಂತ ವಿಸ್ತರಿಸಿತು. ಮುಖ್ಯವಾಗಿ ಅಧ್ಯಯನದ ಅನುಕೂಲಕ್ಕಾಗಿ ರಾಯಚೂರು, ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಗಳನ್ನು ಆಯ್ದುಕೊಳಳಲಾಗಿದೆ. ಈ ಜಿಲ್ಲೆಗಳು ಹಿಂದುಳಿದ ಜಿಲ್ಲೆಗಳಾಗಿವೆ. ಈ ಹಿಂದುಳಿದಿರುವಿಕೆಗೆ ಕಾರಣಗಳನ್ನು ಹುಡುಕುವಾಗ ಜಾತಿಶ್ರೇಣೀಕರಣಗಳ, ಲಿಂಗ ಶ್ರೇಣೀಕರಣಗಳ ಪ್ರಶ್ನೆಗಳನ್ನು ಮುಖ್ಯವಾಗಿರಿಸಿಕೊಂಡಿದೆ. ಜಾತಿಶ್ರೇಣೀಕರಣ, ಲಿಂಗ ಶ್ರೇಣೀಕರಣಗಳಿಗೆ ಅನುಗುಣವಾಗಿ ರೂಪುಗೊಂಡ ವರ್ಗಶ್ರೇಣೀಕರಣ ಈ ಮೂರು ಸಂಗತಿಗಳು ಸೃಷ್ಟಿಸಿರುವ ಅನಕ್ಷರತೆ, ಬಡತನ, ನಿರುದ್ಯೋಗ, ಗುಳೆಹೋಗುವುದು, ಬಾಲ್ಯವಿವಾಹ, ದೇವದಾಸಿ ಪದ್ಧತಿ, ಅಪೌಷ್ಠಿಕತೆ ಈ ರೀತಿಯ ಸಾಮಾಜಿಕ ಅಸಮಾನತೆಗಳನ್ನು ಸೃಷ್ಟಿಸಿವೆ. ಹಾಗಾಗಿ ಈ ಎಲ್ಲಾ ಅಸಮಾನತೆಯ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಹೈದರಾಬಾದ್ ಕರ್ನಾಟಕ ಪ್ರದೇಶವನ್ನು ತೀರಾ ಹಿಂದುಳಿದ ಪ್ರದೇಶವೆಂದು ಗುರುತಿಸಲಾಗಿದೆ. ಈ ಪ್ರದೇಶಗಳ ಅಭಿವೃದ್ಧಿ ಮತ್ತು ಇಲ್ಲಿನ ಸಾಮಾಜಿಕ ಅಸಮಾನತೆಗಳನ್ನು ತೊಡೆದುಹಾಕಲು ಸರಕಾರದ ಯೋಜನೆಗಳು ಪ್ರಮುಖ ಪಾತ್ರವನ್ನು ವಹಿಸುತ್ತವೆ.

ಹೀಗಾಗಿ ಕೇಂದ್ರ ಸರಕಾರ "ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ"ಯನ್ನು ರೂಪಿಸಿತು. ಈ ಯೋಜನೆಯನ್ನು ರೂಪಿಸುವ ಅಧಿಕಾರಿಗಳಿಗೆ ಗ್ರಾಮೀಣ

ಜನರ ಬದುಕಿನ ಪರಿಪೂರ್ಣ ಪರಿಚಯವಿದೆಯೆ? ಗ್ರಾಮದಲ್ಲಿ ದಟ್ಟವಾಗಿರುವ ಜಾತಿ ಅಸಮಾನತೆಯನ್ನು, ಲಿಂಗ ಅಸಮಾನತೆಯನ್ನು ಪರಿಗಣಿಸಿ ಈ ಯೋಜನೆಯನ್ನು ರೂಪಿಸಲಾಗಿದೆಯೇ ಎಂಬುದನ್ನು ಪರಿಶೀಲಿಸುವ ಜರೂರಿದೆ. ಹೈದರಾಬಾದ್ ಕರ್ನಾಟಕದಲ್ಲಿ ಈ ಯೋಜನೆಯ ಪ್ರಸ್ತುತತೆಯ ಕುರಿತು ಮೊದಲ ಹಂತದಲ್ಲಿ ಚರ್ಚಿಸಲಾಗಿದೆ.

ಯೋಜನೆಯು ಲಿಂಗ ಸಂವೇದನೆಯನ್ನು ಹೊಂದಿದೆಯೇ ಎಂಬುದನ್ನು ಪರಿಶೀಲಿಸಲಾಗಿದೆ. ಸಂವಿಧಾನವು ಹೇಳುವ ಲಿಂಗ ಶ್ರೇಣೀಕರಣವಿಲ್ಲದ ಮತ್ತು ಜಾತಿಶ್ರೇಣೀಕರಣವಿಲ್ಲದ ಸಮಾನತೆ ಯೋಜನೆಯಲ್ಲಿದೆಯೆ? ಕಾನೂನು ಒಪ್ಪಿಕೊಳ್ಳುವ ಸಮಾನತೆಯನ್ನು ಪ್ರಸ್ತುತ ಯೋಜನೆಯು ಒಳಗೊಂಡಿದೆಯೇ ಎನ್ನುವುದನ್ನು ಪರಿಶೀಲಿಸುವ ಅಗತ್ಯವಿದೆ.

ಯೋಜನೆಯ ಅನುಷ್ಠಾನದ ಸಂದರ್ಭದಲ್ಲಿ ಅನುಷ್ಠಾನಗೊಳಿಸುವ ಅಧಿಕಾರಿಗಳು, ಪಂಚಾಯತ್ ಸದಸ್ಯರು ಲಿಂಗ ಸಂವೇದನೆಯನ್ನು ಹೊಂದಿದ್ದಾರೆಯೇ ಎನ್ನುವುದನ್ನು ಹಲವು ಪ್ರಶ್ನಾವಳಿಗಳ ಮೂಲಕ ತಿಳಿದುಕೊಳ್ಳಲು ಪ್ರಯತ್ನಿಸಲಾಗಿದೆ. ಪ್ರಶ್ನಾವಳಿಗಳನ್ನು ಅನುಷ್ಠಾನ ಸಂದರ್ಭದಲ್ಲಿ ಪಾಲ್ಗೊಳ್ಳುವ ಮೇಲ್‌ಸ್ತರದ ಅಧಿಕಾರಿಗಳಿಂದ ಕೆಳಹಂತದವರೆಗಿನ ಎಲ್ಲ ಅಧಿಕಾರಿಗಳನ್ನು ಕೇಂದ್ರೀಕರಿಸಿಕೊಳ್ಳಲಾಗಿದೆ. ಹಾಗೆಯೇ ಪಂಚಾಯತ್ ಸದಸ್ಯರನ್ನು, ಫಲಾನುಭವಿಗಳನ್ನು(ಮಹಿಳೆ–ಪುರುಷ ಇಬ್ಬರನ್ನು) ಕೇಂದ್ರವಾಗಿಟ್ಟು ಪ್ರಶ್ನಾವಳಿ ರೂಪಿಸಿಕೊಳ್ಳಲಾಗಿದೆ. ಪ್ರಶ್ನಾವಳಿಗಳು ಔಪಚಾರಿಕ, ಅನೌಪಚಾರಿಕ ಎರಡೂ ಸ್ವರೂಪವನ್ನು ಹೊಂದಿದೆ.

ಕರ್ನಾಟಕದ ಒಂದು ಭಾಗವಾದ ಹೈದರಾಬಾದ್ ಕರ್ನಾಟಕ ಪ್ರದೇಶದ ರಾಯಚೂರು, ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಈ ಯೋಜನೆ ಗ್ರಾಮೀಣ ಜನರಿಗೆ ಅಷ್ಟೊಂದು ಭದ್ರತೆಯನ್ನು ಒದಗಿಸಿಲ್ಲ. ಹಾಗೆಯೇ ಈ ಯೋಜನೆಯ ಜೊತೆ ಜೊತೆಗೆ ಸಮಾಜದಲ್ಲಿ ರೂಢಿಯಲ್ಲಿರುವ ಸಂಪ್ರದಾಯಗಳು, ಆಚರಣೆಗಳು, ರೂಢಿ ನಿಯಮಗಳು ಇವು ಅಭಿವೃದ್ಧಿಯ ಕುಂಠಿತಕ್ಕೆ ಕಾರಣವಾಗಿವೆ. ಇದರ ಒಂದು ಪರಿಣಾಮ ನೇರವಾಗಿ ಮಹಿಳೆಯರ ಮೇಲೆ ಉಂಟಾಗುತ್ತಿದೆ. ಗಂಡು–ಹೆಣ್ಣು ಎನ್ನುವ ಜೈವಿಕ ಭಿನ್ನತೆಯನ್ನು ಆಧರಿಸಿ ಸಮಾಜದಲ್ಲಿ ತಾರತಮ್ಯ ಪ್ರಾರಂಭವಾಗುತ್ತದೆ. ಹೀಗೆ ಇದರಿಂದ ಅಧಿಕಾರದ ಹಂಚಿಕೆಯ ಪ್ರಕ್ರಿಯೆ ಪ್ರಾರಂಭಗೊಳ್ಳುತ್ತದೆ. ಈ ಅಧಿಕಾರವು ಪ್ರಬಲ ವ್ಯಕ್ತಿ ಎನಿಸಿಕೊಂಡಿರುವ ಪುರುಷನ ಪಾಲಾಗಿಬಿಡುತ್ತದೆ. ಆಗ ಅನಿವಾರ್ಯವಾಗಿ ಮಹಿಳೆ ಪುರುಷನ ಅಧೀನದಲ್ಲಿಯೇ ಜೀವಿಸುವ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಪ್ರಸ್ತುತ ಹೈದರಾಬಾದ್–ಕರ್ನಾಟಕ ಪ್ರದೇಶದ ಗ್ರಾಮೀಣ ಭಾಗದಲ್ಲಿ ಈ ಮೇಲಿನ ಪರಿಸರವೇ ನಿರ್ಮಾಣವಾಗಿದೆ. ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಲಿಂಗ ಸಂಬಂಧಿ ಆಯಾಮಗಳನ್ನು ಗುರುತಿಸುವ ಕೆಲಸವನ್ನು ಸಮಾಜ ವಿಜ್ಞಾನಿಗಳು ಎಪ್ಪತ್ತು ಮತ್ತು ಎಂಬತ್ತರ ದಶಕಗಳಲ್ಲಿ ದೊಡ್ಡದಾಗಿ ಪ್ರಾರಂಭಿಸಿದರು. ಆದರೆ ಇದಕ್ಕೆ ಅಭಿವೃದ್ಧಿಯಲ್ಲಿ ಲಿಂಗ ಸಂಬಂಧಿ ಆಯಾಮಗಳನ್ನು ಕುರಿತು ಅಧ್ಯಯನಗಳಿಗೆ ಒಂದು ಸೈದ್ಧಾಂತಿಕ ನೆಲೆಗಟ್ಟನ್ನು ಗಳಿಸಿಕೊಟ್ಟ ಕೀರ್ತಿ ನೋಬೆಲ್ ಪ್ರಶಸ್ತಿ ಪುರಸ್ಕೃತ ಖ್ಯಾತ ಅರ್ಥಶಾಸ್ತ್ರಜ್ಞ ಅಮರ್ತ್ಯಸೇನ್

ಅವರಿಗೆ ಸಲ್ಲಬೇಕು. ಇವರ ಚಿಂತನೆಗಳನ್ನು ಕರ್ನಾಟಕದ ಹಲವು ಅರ್ಥಶಾಸ್ತ್ರಜ್ಞರು ಇಲ್ಲಿನ ಪ್ರದೇಶಕ್ಕೆ ಅನ್ವಯಿಸಿಕೊಂಡು ಈ ಪ್ರದೇಶದ ಅಭಿವೃದ್ಧಿಯ ಚಿಂತನೆಗಳನ್ನು ಮಾಡಿದ್ದಾರೆ. ಇಲ್ಲಿ ಮುಖ್ಯವಾಗಿ ಅತ್ಯಂತ ಹಿಂದುಳಿದ ಪ್ರದೇಶವನ್ನು ಕೇಂದ್ರೀಕರಿಸಿಕೊಂಡು ಹಲವಾರು ಅಧ್ಯಯನಗಳು ಬಂದಿರುವುದು ಕಾಣಬಹುದು. ಇಂತಹ ಲಿಂಗ ಸಂಬಂಧಿ ಆಯಾಮಗಳನ್ನು ಗಮನದಲ್ಲಿಟ್ಟುಕೊಂಡು ಅಧ್ಯಯನ ನಡೆಸಿದಾಗ ಮಹಿಳೆಯರಿಗೆ ಅಭಿವೃದ್ಧಿಯಲ್ಲಿ ಹಿನ್ನೆಡೆಯಾಗಿರುವುದು ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ ಹಲವು ಅಭಿವೃದ್ಧಿ ಕಾರ್ಯಕ್ರಮ ಯೋಜನೆಗಳನ್ನು ಅಧ್ಯಯನ ಮಾಡುವುದು ಮುಖ್ಯವಾಗುತ್ತದೆ. ಈ ನಿಟ್ಟಿನಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಆಗು ಹೋಗುಗಳ ಬಗ್ಗೆ ಅಧ್ಯಯನದ ಅವಶ್ಯಕತೆ ಇದೆ.

## ಅಧ್ಯಯನದ ಉದ್ದೇಶ

ಭಾರತದ ಸಂವಿಧಾನದಲ್ಲಿ ಉದ್ಯೋಗ ಮೂಲಭೂತ ಹಕ್ಕಾಗಿಲ್ಲ. ಆದರೆ ಪ್ರತಿಯೊಬ್ಬ ವ್ಯಕ್ತಿಯು ತನ್ನ ಸಾಮರ್ಥ್ಯಕ್ಕನುಸರಿಸಿ ದುಡಿಮೆ ಮಾಡುವ ಮೂಲಕ ಸಮಗ್ರ ಅಭಿವೃದ್ಧಿಗೆ ಕಾರಣವಾಗಬೇಕಾಗುತ್ತದೆ. ಅಂದರೆ ದುಡಿಯುವ ಕೈಗೆ ಕೆಲಸ ಕೊಡುವಂತಹ ಕಾಯ್ದೆ-ಯೋಜನೆಗಳ ಜರೂರು ಇರುತ್ತದೆ. ಈ ದಿಕ್ಕಿನಲ್ಲಿ ಸ್ವಾತಂತ್ರ್ಯ ಭಾರತದಲ್ಲಿ ಉದ್ಯೋಗ ಕೊಡುವ ಅಪೂರ್ವ ಕಾಯ್ದೆಯೊಂದು ಉದ್ಯೋಗ ಮೂಲಭೂತ ಹಕ್ಕಾಗಿಸುವ ಆಶಯದ ಮುನ್ನುಡಿಯಂತೆ ಬಂದಿರುವುದು ಭಾರತದ ಜನಸಾಮಾನ್ಯರು ಖುಷಿ ಮತ್ತು ಹೆಮ್ಮೆ ಪಡುವಂಥದ್ದು. ಆದರೆ ಸರಕಾರ ಮತ್ತು ಅಧಿಕಾರಿಗಳು ಅವುಗಳ ಪಾಲನೆಯಲ್ಲಿ ಅಥವಾ ಜಾರಿಯಲ್ಲಾಗಲಿ ಇಂದಿಗೂ ಸಮರ್ಪಕವಾಗಿ ಹಾಗೂ ನಿರ್ದಿಷ್ಟ ಪ್ರಮಾಣದ ಗುರಿಯನ್ನು ಸಾಧಿಸಿಲ್ಲ ಎಂದೇ ಹೇಳಬಹುದು. ಏಕೆಂದರೆ ಮಹಿಳಾ ಸಮುದಾಯಗಳಿಗೆ ನಾಗರಿಕ ಹಕ್ಕುಗಳ ಪರಿವೇ ಇಲ್ಲ. ಸ್ವಾತಂತ್ರ್ಯ ಬಂದು ಆರು ದಶಕಗಳು ಕಳೆದರೂ ಮಹಿಳೆಗೆ ಸ್ವಾತಂತ್ರ್ಯ ಇಲ್ಲವಾಗಿದೆ. ಭಾರತ ಸರಕಾರವು ಯಾವುದೇ ಯೋಜನೆಯನ್ನು ರೂಪಿಸಿದರೂ ಸಹ ಅವು ಮಹಿಳೆಯರ ಪಾಲಿಗೆ ಇಲ್ಲದಂತಾಗಿವೆ. ಅಂದರೆ ಅವು ಕೈಗೆ ಎಟುಕದಾಗಿದೆ. ಈ ಒಂದು ಸಾಲಿನಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯೂ ಸಹ ಒಂದಾಗಿದೆ. ಈ ಯೋಜನೆಯು ಕೇವಲ ದಲಿತ ಅಥವಾ ಹಿಂದುಳಿದ ವರ್ಗಕ್ಕೆ ಮಾತ್ರ ಸೀಮಿತವಾಗಿಲ್ಲ. ಬದಲಾಗಿ ಈ ಯೋಜನೆಯು ಆರ್ಥಿಕವಾಗಿ ಹಿಂದುಳಿದ ಸಮಾಜದ ಎಲ್ಲಾ ಕುಟುಂಬಗಳಿಗೂ ಅನ್ವಯಿಸುತ್ತದೆ. ಹಾಗಾಗಿ ಇಲ್ಲಿ ಮುಖ್ಯವಾಗಿ ಹಿಂದುಳಿದ ವರ್ಗ ಎಂಬುದನ್ನು ಎಲ್ಲಾ ಜಾತಿ ಸಮುದಾಯಗಳಲ್ಲಿನ ಆರ್ಥಿಕವಾಗಿ ಹಿಂದುಳಿದವರು ಎಂದೇ ಪರಿಭಾವಿಸಿಕೊಳ್ಳಲಾಗಿದೆ. ಈ ಹಿನ್ನಲೆಯಲ್ಲಿ ಉದ್ಯೋಗ ಖಾತರಿ ಯೋಜನೆಯು ಹಿಂದುಳಿದ ವರ್ಗದ ಮಹಿಳೆಯರ ಸಬಲೀಕರಣಕ್ಕೆ ಹೇಗೆ ಸಹಾಯಕವಾಗಿದೆ ಮತ್ತು ಹಿಂದುಳಿದ ವರ್ಗದ ಮಹಿಳೆಯರು ಈ ಯೋಜನೆಯನ್ನು ಹೇಗೆ ಪರಿಭಾವಿಸಿಕೊಂಡಿದ್ದಾರೆ

ಎಂಬುದನ್ನು ಸ್ಪಷ್ಟಪಡಿಸಿಕೊಳ್ಳುವ ಉದ್ದೇಶವನ್ನು ಹೊಂದಿದೆ. ಈ ಹಿನ್ನೆಲೆಯಲ್ಲಿ ಈ ಅಧ್ಯಯನವು ಕೆಳಕಂಡ ಉದ್ದೇಶಗಳನ್ನು ಒಳಗೊಂಡಿದೆ.

೧. ನರೇಗ ಯೋಜನೆಯಲ್ಲಿ ಹೆಣ್ಣುಮಕ್ಕಳು ಕೆಲಸ ಮಾಡುವಲ್ಲಿ ಪ್ರತ್ಯೇಕ ಶೌಚಾಲಯದ ನಿರ್ಮಾಣ ಮಾಡಿರಬೇಕು. ಚಿಕ್ಕ ಮಕ್ಕಳಿದ್ದರೆ ಆ ಮಕ್ಕಳನ್ನು ನೋಡಿಕೊಳ್ಳುವ ಆಯಗಳನ್ನು ನೇಮಿಸಬೇಕು. ಯೋಜನೆಯಲ್ಲಿ ಗರ್ಭಿಣಿ ಮತ್ತು ವಯಸ್ಸಾದ ಹೆಣ್ಣುಮಕ್ಕಳ ಶಕ್ತಿ ಸಾಮರ್ಥ್ಯಕ್ಕೆ ಅನುಗುಣವಾಗಿ ಕೆಲಸವನ್ನು ವರ್ಗೀಕರಿಸಿ ನೀಡಬೇಕು. ಕೆಲಸದ ಸಂದರ್ಭದಲ್ಲಿ ಅವಗಡಗಳು ಸಂಭವಿಸಿದಲ್ಲಿ ಪ್ರಾಥಮಿಕ ಚಿಕಿತ್ಸೆಯನ್ನು ಕೊಡಿಸುವ ವ್ಯವಸ್ಥೆ ಮಾಡಬೇಕು. ಅಂತೆಯೇ ಕೆಲಸದ ಸಂದರ್ಭದಲ್ಲಿ ಅನಾರೋಗ್ಯಕ್ಕೆ ತುತ್ತಾದಲ್ಲಿ ಸರಕಾರವೇ ಚಿಕಿತ್ಸೆಯ ಸಂಪೂರ್ಣ ವೆಚ್ಚವನ್ನು ಭರಿಸಬೇಕು. ಇಂತಹ ಮಾನವೀಯ ಅಂಶಗಳು ಈ ಯೋಜನೆಯಲ್ಲಿವೆ. ಇದರಲ್ಲಿ ಮಹಿಳೆಯ ಜೈವಿಕ ಸಮಸ್ಯೆಗಳನ್ನೂ ಗಮನಹರಿಸಲಾಗಿದೆ. ಈ ಅಂಶಗಳು ನರೇಗ ಯೋಜನೆಯ ಅನುಷ್ಠಾನದ ಸಂದರ್ಭದಲ್ಲಿ ಎಷ್ಟರಮಟ್ಟಿಗೆ ಕಾರ್ಯರೂಪಕ್ಕೆ ಬಂದಿವೆ? ಇದರ ಬಗ್ಗೆ ಮಹಿಳೆಯರ ಹೇಳಿಕೆಗಳು ಹೊರ ಹಾಕುವ ವಾಸ್ತವ ಸಂಗತಿಗಳು ಯಾವುವು? ಇದು ಪ್ರಾದೇಶಿಕತೆ, ಜಾತಿ ಮತ್ತು ಲಿಂಗದ ನೆಲೆಯಲ್ಲಿ ಹೇಗೆ ವ್ಯತ್ಯಾಸಗಳಾಗಿವೆ ಎನ್ನುವುದನ್ನು ಶೋಧಿಸುವುದು.

೨. ಗ್ರಾಮಪಂಚಾಯ್ತಿ ಅಧಿಕಾರಿಗಳು ಮತ್ತು ಚುನಾಯಿತ ಸದಸ್ಯರಲ್ಲಿ ಕೆಲವರಾದರೂ ಮಹಿಳೆಯರು ಇದ್ದಲ್ಲಿ ಇದರಿಂದಾಗಿ ಯೋಜನೆಯ ಅನುಷ್ಠಾನದ ಸಂದರ್ಭದಲ್ಲಿ ಮಹಿಳಾ ಕೂಲಿಕಾರರ ಬಗ್ಗೆ ಇವರು ತಳೆದಿರುವ ಧೋರಣೆಗಳು ಏನು? ಅಥವಾ ಮಹಿಳಾ ಕೂಲಿಕಾರರು ಮಹಿಳಾ ಚುನಾಯಿತ ಪ್ರತಿನಿಧಿಗಳು ಮತ್ತು ಗ್ರಾಮ ಪಂಚಾಯ್ತಿ ಅಧಿಕಾರಿಗಳ ಬಗ್ಗೆ ತಳೆಯುವ ನಿಲುವೇನು? ಅಧಿಕಾರಶಾಹಿಯಲ್ಲಿ ಗಂಡು ಹೆಣ್ಣಿನ ವ್ಯತ್ಯಾಸವಿದೆಯೇ? ಮುಂತಾದ ಸಂಗತಿಗಳನ್ನು ಹುಡುಕುವುದು.

೩. ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಮೂರು ಜಿಲ್ಲೆಗಳನ್ನು ಒಳಗೊಂಡಂತೆ ಹೈದರಬಾದ್-ಕರ್ನಾಟಕ ಭಾಗದಲ್ಲಿ ಕೂಲಿಕಾರರ ವಲಸೆ ಯಥೇಚ್ಚವಾಗಿದೆ. ಈ ವಲಸೆಗೆ ಇರುವ ಮುಖ್ಯ ಕಾರಣವೆಂದರೆ ಕೆಲಸ ಮತ್ತು ಅದಕ್ಕೆ ತಕ್ಕಂತೆ ಕೂಲಿ ಸಿಗದಿರುವುದು. ಆದರೆ ಈ ಭಾಗದಲ್ಲಿ ನರೇಗಾ ಯೋಜನೆಗಾಗಿ ಲಕ್ಷಾಂತರ ರೂಪಾಯಿಗಳನ್ನು ಗ್ರಾಮಪಂಚಾಯ್ತಿಗಳು ಖರ್ಚು ಮಾಡಿ ಕೂಲಿ ಕೆಲಸ ಕೊಟ್ಟಿದ್ದಾಗಿ ದಾಖಲೆಗಳಿವೆ. ಇದನ್ನು ನೋಡಿದರೆ ನರೇಗಾ ಯೋಜನೆಯು ಈ ಭಾಗದ ಕೂಲಿಕಾರರ ವಲಸೆಯನ್ನು ಯಾಕೆ ಕಡಿಮೆ ಮಾಡಿಲ್ಲ? ಮತ್ತು ಈ ವಲಸೆಯಿಂದಾಗಿ ಈ ಭಾಗದ ಮಹಿಳೆಯರು ಅನುಭವಿಸುವ ತೊಂದರೆಗಳಾವುವು? ಎನ್ನುವುದನ್ನು ಹುಡುಕುವುದು.

೪. ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಮೂರು ಜಿಲ್ಲೆಗಳನ್ನು ಒಳಗೊಂಡಂತೆ ಹೈದರಬಾದ್-ಕರ್ನಾಟಕ ಪ್ರದೇಶವು ಹಿಂದೂ-ಮುಸ್ಲಿಂ, ಹಲವು ಜಾತಿಗಳು, ಜಮೀನ್ದಾರರು ಮತ್ತು

ಜಮೀನಿಲ್ಲದ ರೈತರು ಇಂತಹ ವೈರುಧ್ಯಗಳಿಂದ ಕೂಡಿದೆ. ಹೀಗಾಗಿ ಈ ನರೇಗಾ ಯೋಜನೆಯ ಅನುಷ್ಠಾನದ ಸಂದರ್ಭದಲ್ಲಿ ಧಾರ್ಮಿಕ ನೆಲೆಯಲ್ಲಿ, ಜಾತಿಯ ನೆಲೆಯಲ್ಲಿ, ವರ್ಗದ ನೆಲೆಯಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಮತ್ತು ಪಾಲ್ಗೊಳ್ಳದಿರುವಿಕೆಗೆ ಕಾರಣಗಳೇನು? ಇದರಲ್ಲಿರುವ ವ್ಯತ್ಯಾಸಗಳ ಹಿನ್ನೆಲೆ ಏನು? ಎಂದು ಹುಡುಕುವುದು.

೫. ಉದ್ಯೋಗ ಖಾತರಿ ಯೋಜನೆಯು ಮಹಿಳೆಯರಿಗೆ ಯಾವ ರೀತಿಯ ಭದ್ರತೆಯನ್ನು( ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಇತ್ಯಾದಿ) ಒದಗಿಸಿದೆ ಎಂಬುದನ್ನು ಅರಿಯುವುದು.

೬. ಯೋಜನೆಯ ಕುರಿತಾಗಿ ಲಿಂಗ ಸಂಬಂಧಿ ಅಧ್ಯಯನ ಮಾಡುವುದರ ಜೊತೆಗೆ ಸ್ತ್ರೀವಾದಿ ಹಿನ್ನೆಲೆಯ ಒಳ ನೋಟಗಳನ್ನು ಗುರುತಿಸಿ ವಿಶ್ಲೇಷಣೆಗೆ ಒಳಪಡಿಸುವುದು.

೭. ಉದ್ಯೋಗ ಖಾತರಿ ಯೋಜನೆಯ ಕಾರ್ಯಾನುಷ್ಠಾನದಲ್ಲಿನ ಲಿಂಗ ಅಸಮಾನತೆಯ ನೆಲೆಗಳನ್ನು ಗುರುತಿಸುವುದರೊಂದಿಗೆ ಅದರ ಕಾರ್ಯ ಸ್ವರೂಪಗಳನ್ನು ಅಧ್ಯಯನಕ್ಕೆ ಒಳಪಡಿಸುವುದು.

೮. ಸಂವಿದಾನದ ನೀತಿ ನಿಯಮಗಳು ಈ ಯೋಜನೆಯಲ್ಲಿ ಎಷ್ಟರ ಮಟ್ಟಿಗೆ ಪಾಲಿತವಾಗುತ್ತಿವೆ ಮತ್ತು ಇವು ಲಿಂಗ ಸಮಾನತೆಯ ಅಂಶಗಳನ್ನು ಒಳಗೊಂಡಿವೆಯೇ ಅಥವಾ ಇಲ್ಲವೇ ಎಂಬುದನ್ನು ತಿಳಿಯುವುದು.

೯. ಈ ಯೋಜನೆಯ ಬಗ್ಗೆ ಜನರಲ್ಲಿ ಅರಿವನ್ನು ಮೂಡಿಸಲು ಜಿಲ್ಲಾ ಪಂಚಾಯತಿ, ತಾಲೂಕ ಪಂಚಾಯತಿ ಮತ್ತು ಗ್ರಾಮ ಪಂಚಾಯತಿಗಳು ಕೈಗೊಂಡಿರುವ ಕ್ರಮಗಳನ್ನು ತಿಳಿಯುವುದು.

೧೦. ಈ ಯೋಜನೆಯ ಕಾಮಗಾರಿಗಳಲ್ಲಾಗಲೀ ಅಥವಾ ಯೋಜನೆಯ ರೂಪಿಸುವ ಸಂದರ್ಭದ ಗ್ರಾಮ ಸಭೆಗಳಲ್ಲಾಗಲೀ ಮಹಿಳೆಯರ ಪಾಲ್ಗೊಳ್ಳುವಿಕೆಯ ಅಥವಾ ಬಾಗವಹಿಸುವಿಕೆಯ ಕುರಿತು ವಿಶ್ಲೇಷಣೆ ನಡೆಸುವುದು.

೧೧. ಯೋಜನೆಯಲ್ಲಿನ ತೊಡಕುಗಳನ್ನು ಕಂಡುಹಿಡಿಯುವಲ್ಲಿ ಮತ್ತು ಯೋಜನೆಯು ಸರಿಯಾದ ದಾರಿಯಲ್ಲಿ ಅನುಷ್ಠಾನಕ್ಕೆ ತರುವಲ್ಲಿ ಸರಕಾರೇತರ ಸಂಘ-ಸಂಸ್ಥೆಗಳ ಮತ್ತು ಇತರೆ ಸಂಘಟನೆಗಳ ಪಾತ್ರವೇನು ಎಂಬುದನ್ನು ತಿಳಿಯುವುದು.

೧೨. ಮಹಿಳೆಯರ ಅಭಿವೃದ್ಧಿ ಮತ್ತು ಸಬಲೀಕರಣಕ್ಕೆ ಈ ಯೋಜನೆಯು ಹೇಗೆ ಪೂರಕವಾಗಿದೆ ಎಂಬುದನ್ನು ವಿಶ್ಲೇಷಣೆಗೆ ಒಳಪಡಿಸುವುದು.

೧೩. ಉದ್ಯೋಗ ಖಾತರಿ ಯೋಜನೆಯ ಕಾಮಗಾರಿಗಳಲ್ಲಿ ಕೆಲಸವನ್ನು ಮಾಡಿ ಆ ಕೆಲಸದ ಕೂಲಿಯನ್ನು ಪಡೆಯಲು ಹಲವಾರು ಕಡೆಗಳಲ್ಲಿ ಹೋರಾಟಗಳು ನಡೆದಿವೆ.

ಈ ಹೋರಾಟದ ಸಂದರ್ಭದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯ ಪ್ರಮಾಣ ಎಷ್ಟಿದೆ ಮತ್ತು ಆ ಹೋರಾಟಗಳಲ್ಲಿ ಭಾಗಿಯಾದ ಕಾರಣಕ್ಕಾಗಿ ಮಹಿಳೆಯರು ಯಾವ ರೀತಿಯ ತೊಂದರೆಗಳನ್ನು ಅನುಭವಿಸುತ್ತಿದ್ದಾರೆ ಎಂಬುದನ್ನು ತಿಳಿಯುವುದು.

೧೪. ಈ ಯೋಜನೆಯು ಜಾರಿಗೊಂಡಾಗಿನಿಂದ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಕೆಲಸವನ್ನರಸಿ ಬೇರೆ ಊರುಗಳಿಗೆ ವಲಸೆ ಹೋಗುತ್ತಿರುವ ಜನರ ಪ್ರಮಾಣ ಎಷ್ಟಿದೆ ಎಂಬುದನ್ನು ಅರಿಯುವುದು.

ಒಟ್ಟಾರೆಯಾಗಿ ಉದ್ಯೋಗ ಖಾತರಿ ಯೋಜನೆಯನ್ನು ಲಿಂಗ ಸಂಬಂಧಿ ನೆಲೆಯಲ್ಲಿ ಅಧ್ಯಯನ ಮಾಡುವುದು ಅಧ್ಯಯನದ ಮುಖ್ಯ ಉದ್ದೇಶವಾಗಿದೆ.

**ಅಧ್ಯಯನದ ವ್ಯಾಪ್ತಿ**

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯು ರಾಷ್ಟ್ರವ್ಯಾಪಿಯಾದದ್ದು. ಆದಾಗ್ಯೂ ಆಯಾ ರಾಜ್ಯದ ಭೌಗೋಳಿಕ ಮತ್ತು ಆರ್ಥಿಕ ಸ್ಥಿತಿ-ಗತಿಗಳಿಗೆ ಅನುಗುಣವಾಗಿ ಪ್ರತಿ ರಾಜ್ಯದಲ್ಲಿಯೂ ಈ ಯೋಜನೆ ಒಂದು ವಿಶಿಷ್ಟ ಸ್ವರೂಪದಲ್ಲಿ ಚಾಲ್ತಿಯಲ್ಲಿದೆ. ಹಾಗಾಗಿ ಆಯಾ ರಾಜ್ಯಗಳ ವ್ಯಾಪ್ತಿಯಲ್ಲಿ ಸೂಕ್ಷ್ಮ ಅಧ್ಯಯನಗಳ ಅಗತ್ಯವಿದೆ. ಇಂತಹ ಅಧ್ಯಯನಗಳಿಂದ ಸರಕಾರವು ಆಡಳಿತಾತ್ಮಕವಾಗಿ ಉತ್ಪಾದಿಸುವ ಯೋಜನೆಯ ಅನುಷ್ಠಾನದ ಅಂಕಿ-ಅಂಶಗಳಿಗಿಂತ ವಾಸ್ತವ ಭಿನ್ನವಾಗಿರುತ್ತದೆ. ಪ್ರಸ್ತುತ ಅಧ್ಯಯನವನ್ನು ಹೈದರಾಬಾದ್ ಕರ್ನಾಟಕದ ಮೂರು ಜಿಲ್ಲೆಗಳಾದ ರಾಯಚೂರು, ಕೊಪ್ಪಳ ಮತ್ತು ಬಳ್ಳಾರಿಯನ್ನು ಕೇಂದ್ರವಾಗಿರಿಸಿಕೊಂಡಿದೆ. ಈ ವ್ಯಾಪ್ತಿಯಲ್ಲಿ "ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ"ಯ ಅನುಷ್ಠಾನವನ್ನು ಲಿಂಗದ ನೆಲೆಯಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಈ ಮೂರು ಜಿಲ್ಲೆಗಳಲ್ಲಿ ಬರುವಂತ ಪ್ರತಿಯೊಂದು ತಾಲೂಕಿನಿಂದ ಐದು ಗ್ರಾಮ ಪಂಚಾಯ್ತಿಗಳನ್ನು ಆಯ್ಕೆ ಮಾಡಿಕೊಂಡು ಅಧ್ಯಯನಕ್ಕೆ ಒಳಪಡಿಸಲಾಗಿದೆ.

**ಅಧ್ಯಯನದ ವೈಧಾನಿಕತೆ**

ಈ ಅಧ್ಯಯನವು ಸಂಪೂರ್ಣವಾಗಿ ಕ್ಷೇತ್ರಕಾರ್ಯದ ಮಾಹಿತಿಯನ್ನು ಹೆಚ್ಚಾಗಿ ಅವಲಂಬಿಸಿರುವುದರಿಂದ ಪ್ರಾಥಮಿಕ ಆಕರಗಳ ಸಂಗ್ರಹಣೆಗೆ ಹೆಚ್ಚಿನ ಒತ್ತನ್ನು ಕೊಡಲಾಗಿದೆ. ಮುಖ್ಯವಾಗಿ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕೃಷಿ ಕೂಲಿಕಾರರು, ಕೃಷಿ ಕೂಲಿಕಾರರ ಸಂಘಗಳು, ಮಹಿಳಾ ಸಂಘಗಳು, ಸರ್ಕಾರೇತರ ಸಂಘ-ಸಂಸ್ಥೆಗಳೂ ಸಹ ಈ ಯೋಜನೆಯ ಕುರಿತಾದ ಹಲವಾರು ಕಾರ್ಯಗಳಲ್ಲಿ ತೊಡಗಿಸಿಕೊಂಡಿವೆ. ಹಾಗೆಯೇ ಸರಕಾರಿ ಇಲಾಖೆಗಳ ಅಧಿಕಾರಿಗಳು, ಚುನಾಯಿತ ಸದಸ್ಯರು ಸಹ ಇದರ ವ್ಯಾಪ್ತಿಯಲ್ಲಿ ಬರುತ್ತಿರುವುದರಿಂದ ಇವರುಗಳೆಲ್ಲರನ್ನು ಸಂದರ್ಶಿಸಿ ಮಾಹಿತಿಯನ್ನು ಸಂಗ್ರಹಿಸಿಕೊಂಡು ಈ ಕುರಿತು ಚರ್ಚೆಗೆ

ಒಳಪಡಿಸಲಾಗಿದೆ. ಜೊತೆಗೆ ಸರಕಾರಿ ಧಾಖಲೆಗಳನ್ನೂ ಸಹ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಈ ಯೋಜನೆಯ ಕುರಿತಂತೆ ಬಂದ ಲೇಖನಗಳನ್ನು, ವರದಿಗಳನ್ನು, ಇಂಟರ್‌ನೆಟ್ ಮಾಹಿತಿಗಳನ್ನು ಅನುಷಂಗಿಕ ಆಕರವಾಗಿ ಬಳಸಿಕೊಳ್ಳಲಾಗಿದೆ. ಈ ಎಲ್ಲ ಮಾಹಿತಿಗಳನ್ನು ಆಧರಿಸಿ ಪರಿಮಾಣಾತ್ಮಕ, ಗುಣಾತ್ಮಕ ಮತ್ತು ಲೈಂಗಿಕತಾವಾದಿಯಲ್ಲದ ಸಂಶೋಧನಾ ವಿಧಾನಗಳನ್ನು ಅಳವಡಿಸಿಕೊಳ್ಳುವುದರ ಮೂಲಕ ಸ್ತ್ರೀವಾದಿ ಸಂಶೋಧನಾ ನೆಲೆಯಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

**ಅಧ್ಯಯನದ ಸ್ವರೂಪ**

ಈ ಮಹಾಪ್ರಬಂಧವು ಒಟ್ಟು ಏಳು ಅಧ್ಯಾಯಗಳನ್ನು ಒಳಗೊಂಡಿದ್ದು, ಅದರ ಸಾರವು ಈ ಕೆಳಗಿನಂತಿದೆ.

ಅಧ್ಯಾಯ ಒಂದು

**ಅಧ್ಯಯನದ ಪ್ರವೇಶ**

ಅಧ್ಯಾಯ ಒಂದರಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ವಿಷಯದ ತಾತ್ವಿಕ ಸ್ವರೂಪವನ್ನು ಸ್ಪಷ್ಟಪಡಿಸಿಕೊಳ್ಳಲಾಗಿದೆ. ಜೊತೆಗೆ ಅಧ್ಯಯನದ ಉದ್ದೇಶ, ವ್ಯಾಪ್ತಿ, ವೈಧಾನಿಕತೆ ಹಾಗೂ ಸ್ವರೂಪವನ್ನು ಒಳಗೊಂಡಿದೆ.

ಅಧ್ಯಾಯ–ಎರಡು

**ಅಧ್ಯಯನಗಳ ತಾತ್ವಿಕ ಸಮೀಕ್ಷೆ**

ಈ ಅಧ್ಯಾಯದಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗೆ ಸಂಬಂಧಿಸಿದಂತೆ ಇದುವರೆಗೂ ಪ್ರಕಟಗೊಂಡಿರುವ ಕೃತಿಗಳು, ಲೇಖನಗಳು, ಸರಕಾರಿ ದಾಖಲೆಗಳನ್ನು ಅಲ್ಲದೆ ಯೋಜನಾ ಮಾಸಪತ್ರಿಕೆ, ಇಪಿಡಬ್ಲ್ಯು ವಾರಪತ್ರಿಕೆ, ಇಂಗ್ಲಿಷ್ ಕೃತಿಗಳು, ದಿನಪತ್ರಿಕೆಗಳು, ಸಂಶೋಧನಾ ಲೇಖನಗಳು ಹಾಗೂ ಈ ಯೋಜನೆಯನ್ನಾಧರಿಸಿ ಈಗಾಗಲೇ ಮಂಡನೆಗೊಂಡ ಸಂಶೋಧನೆಗಳನ್ನು ವಿಮರ್ಶಾತ್ಮಕವಾಗಿ ಸಮೀಕ್ಷೆಗೆ ಒಳಪಡಿಸಲಾಗಿದೆ.

ಅಧ್ಯಾಯ–ಮೂರು

**ಅಧ್ಯಯನ ಕ್ಷೇತ್ರದ ಚಾರಿತ್ರಿಕ ಹಾಗೂ ಭೌಗೋಳಿಕ ಹಿನ್ನೆಲೆ**

ಈ ಅಧ್ಯಾಯದಲ್ಲಿ ಹೈದರಾಬಾದ್ ಕರ್ನಾಟಕಕ್ಕೆ ಸೇರಿದ ಮೂರು ಜಿಲ್ಲೆಗಳಾದ ರಾಯಚೂರು, ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲೆಗಳ ಚಾರಿತ್ರಿಕ ಹಿನ್ನೆಲೆ, ಭೌಗೋಳಿಕ ಹಿನ್ನೆಲೆ, ಸಾಮಾಜಿಕ ನೆಲೆಗಳ ಕುರಿತು ಚರ್ಚಿಸಲಾಗಿದೆ. ಮತ್ತು ಈ ಜಿಲ್ಲೆಗಳಲ್ಲಿ ಮಹಿಳೆಯರ ಸ್ಥಾನಮಾನ, ಧಾರ್ಮಿಕ ನೆಲೆಗಳು, ಜಾತಿ ನೆಲೆಗಳು, ಶೈಕ್ಷಣಿಕ ವ್ಯವಸ್ಥೆ ಹಾಗೂ ಮುಖ್ಯವಾಗಿ ರಾಜಕೀಯ ಸ್ಥಿತಿಗತಿಗಳನ್ನು ಕುರಿತು ಚರ್ಚೆಗೆ ಒಳಪಡಿಸಲಾಗಿದೆ. ಅಲ್ಲದೆ ಈ ಅಧ್ಯಾಯದಲ್ಲಿ ಸ್ವಾತಂತ್ರ್ಯ

ನಂತರದ ರಾಜಕೀಯ ಸ್ಥಿತಿಗತಿಗಳು ಹಾಗೂ ಪೂರ್ವದ ನಿಜಾಮನ ಆಡಳಿತ ವ್ಯವಸ್ಥೆಯನ್ನು ಕುರಿತಂತೆ ಇಲ್ಲಿ ಸ್ಥೂಲವಾಗಿ ವಿಶ್ಲೇಷಿಸಲಾಗಿದೆ.

ಅಧ್ಯಾಯ-ನಾಲ್ಕು

**ಉದ್ಯೋಗ ಖಾತರಿ ಯೋಜನೆಯ ಸ್ವರೂಪ**

ಈ ಅಧ್ಯಾಯದಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯ ಹಿನ್ನೆಲೆ, ಈ ಕಾಯಿದೆ ಯೋಜನೆಯಾಗಿ ರೂಪುಗೊಂಡ ಬಗೆ, ದೇಶ, ರಾಜ್ಯಗಳಲ್ಲಿ ಈ ಯೋಜನೆಯ ಜಾರಿ, ಈ ಯೋಜನೆಯ ಉದ್ದೇಶ, ಸ್ವರೂಪವನ್ನು ಕುರಿತು ಇಲ್ಲಿ ಚರ್ಚಿಸಲಾಗಿದೆ. ಅಲ್ಲದೆ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಕೆಲಸ/ಕಾರ್ಯಗಳು, ಅವುಗಳ ಜಾರಿಯಲ್ಲಿ ಗ್ರಾಮ ಪಂಚಾಯಿತಿಗಳ ಪಾತ್ರ, ವರ್ಷದಲ್ಲಿ ಕೂಲಿ ಕಾರ್ಮಿಕರಿಗೆ ನೂರುದಿನ ಉದ್ಯೋಗದ ಭರವಸೆಯ ಕುರಿತು ಅರಿವು ಮೂಡಿಸುವಂತಹದರ ಮಹತ್ವವನ್ನು ಕುರಿತು ಇಲ್ಲಿ ಹೇಳಲಾಗಿದೆ. ಜೊತೆಗೆ ಉದ್ಯೋಗ ಖಾತರಿ ಯೋಜನೆ ಜಾರಿಯಲ್ಲಿ ಅಧಿಕಾರಿ ವರ್ಗಗಳ ಪಾತ್ರ, ಹಣಕಾಸಿನ ನಿರ್ವಹಣೆ ಮುಂತಾದ ಅಂಶಗಳನ್ನು ಕುರಿತು ಚರ್ಚೆ ಮಾಡಲಾಗಿದೆ. ಒಟ್ಟಾರೆಯಾಗಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಸಮಗ್ರ ಚಿತ್ರಣವನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಅಧ್ಯಾಯ-ಐದು

**ಉದ್ಯೋಗ ಖಾತರಿ ಯೋಜನೆ : ಸರ್ಕಾರ ಮತ್ತು ಸರ್ಕಾರೇತರ ಸಂಘ ಸಂಸ್ಥೆಗಳ ಕಾರ್ಯಚಟುವಟಿಕೆಗಳು : ಪರಿಶೀಲನೆ**

ಈ ಅಧ್ಯಾಯದಲ್ಲಿ ಮುಖ್ಯವಾಗಿ ಉದ್ಯೋಗ ಖಾತರಿ ಯೋಜನೆಯ ಕುರಿತಂತೆ ಸರಕಾರಿ ಇಲಾಖಾ ಸಂಸ್ಥೆಗಳಾದ ಗ್ರಾಮ ಪಂಚಾಯತಿಗಳು, ತಾಲೂಕ ಪಂಚಾಯತಿಗಳು, ಜಿಲ್ಲಾ ಪಂಚಾಯತಿಗಳು ಹೀಗೆ ಹಲವು ಇಲಾಖೆಗಳು ಜನರಲ್ಲಿ ಅರಿವು ಮೂಡಿಸುವಂತಹ ಕಾರ್ಯದಲ್ಲಿ ತೊಡಗಿವೆ. ಹಾಗೆಯೇ ಜನರು ಈ ಯೋಜನೆಯ ಫಲಾನುಭವಿಗಳಾಗುವಂತೆ ನೋಡಿಕೊಳ್ಳುತ್ತಿವೆ. ಆದರೆ ಇವುಗಳು ನಿರ್ವಹಿಸುತ್ತಿರುವ ಅರಿವು ಕಾರ್ಯಕ್ರಮಗಳು ಜನರಿಗೆ ಸರಿಯಾಗಿ ತಲುಪುತ್ತಿಲ್ಲ. ಆದರೂ ಅರಿವು ಮೂಡಿಸುತ್ತಲೇ ಇವೆ. ಹಾಗೆಯೇ ಸರಕಾರೇತ ಸಂಘ ಸಂಸ್ಥೆಗಳು, ಸಂಘಟನೆಗಳು ಕೂಡ ಉದ್ಯೋಗ ಖಾತರಿ ಯೋಜನೆಗೆ ಸಂಬಂಧಿಸಿದಂತೆ ಸಾಮಾನ್ಯ ಜನರೂ ಇದರ ಫಲಾನುಭವಿಗಳಾಗಬೇಕು ಎಂಬ ನಿಟ್ಟಿನಲ್ಲಿ ಕಾರ್ಯ ಮಾಡುತ್ತಿವೆ. ಹಾಗಾಗಿ ಈ ಅಧ್ಯಾಯದಲ್ಲಿ ಸರಕಾರಿ ಮತ್ತು ಸರಕಾರೇತರ ಸಂಘ ಸಂಸ್ಥೆಗಳು ಈ ಯೋಜನೆಯ ಕುರಿತಂತೆ ಯಾವ ಯಾವ ವಿಧಾನಗಳ ಮೂಲಕ ಅರಿವನ್ನು ಮಾಡಿಸುತ್ತಿವೆ ಎಂಬುದನ್ನು ಮತ್ತು ಕೆಲವು ಸಂಘಟನೆಗಳು ತಮ್ಮದೇ ಆದಂತಹ ಕೆಲವು ನಿಯಮಗಳನ್ನು ಹೊಂದಿದ್ದು ಅವುಗಳು ಉದ್ಯೋಗ ಖಾತರಿ ಯೋಜನೆಯ ಕುರಿತಂತೆ ಕೆಲವು ಬೇಡಿಕೆಗಳನ್ನೂ ಸಹ ಸರಕಾರದ ಮುಂದಿಡುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗಿವೆ. ಒಟ್ಟಾರೆಯಾಗಿ ಈ ಮೇಲಿನ ಅಂಶಗಳನ್ನು ಒಳಗೊಂಡಂತಹ ಅಧ್ಯಾಯವನ್ನು ರೂಪಿಸಲಾಗಿದೆ.

ಅಧ್ಯಾಯ-ಆರು

**ಉದ್ಯೋಗದ ಹಕ್ಕೊತ್ತಾಯ : ಮಹಿಳೆ : ಪ್ರತಿಭಟನೆ**

ಈ ಅಧ್ಯಾಯದಲ್ಲಿ ೨೦೧೧ ಮಾರ್ಚ್ ತಿಂಗಳಲ್ಲಿ ಕೊಪ್ಪಳ ಜಿಲ್ಲೆಯಲ್ಲಿ ನಡೆದ ಲಾಠಿ ಚಾರ್ಜ್ ಪ್ರಕರಣ ಕುರಿತು ವಿಶ್ಲೇಷಣೆ ಮಾಡಲಾಗಿದೆ. ಕೂಲಿ ಕಾರ್ಮಿಕರ ಚಳವಳಿಯ ಸ್ವರೂಪ, ಅಂದು ಕೂಲಿಕಾರರ ಮೇಲೆ ಅಧಿಕಾರಿ ವರ್ಗದವರು ಹಾಗೂ ಪೊಲೀಸರು ನಡೆಸಿದ ದೌರ್ಜನ್ಯವನ್ನು ಖಂಡಿಸಿದ್ದುದು. ಈ ಎಲ್ಲಾ ಅಂಶಗಳನ್ನು ವಿಮರ್ಶಾತ್ಮಕವಾಗಿ ಚರ್ಚಿಸಲಾಗಿದೆ. ಅಲ್ಲದೆ ಕೂಲಿಕಾರರು, ರೈತರು-ಕಾರ್ಮಿಕರು ತೆಗೆದುಕೊಂಡ ನಿಲುವು, ಘಟನೆಯ ಬೆಳವಣಿಗೆ ಹಾಗೂ ಕೂಲಿಕಾರರಿಗೆ ವಿವಿಧ ಸಂಘ-ಸಂಸ್ಥೆಗಳು ನೀಡಿದ ಸಹಕಾರ, ಸರಕಾರದ ದ್ವಂದ್ವನೀತಿ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸರಕಾರ ನೀಡಿದ ಸ್ಪಷ್ಟನೆಯನ್ನು ಕುರಿತು ಇಲ್ಲಿ ನಿರೂಪಿಸಲಾಗಿದೆ. ಜೊತೆಗೆ ಈ ಪ್ರಕರಣ ಕುರಿತು ಕೂಲಿ ಕಾರ್ಮಿಕರು ನೀಡಿದ ಮೌಖಿಕ ನಿರೂಪಣೆ ಹಾಗೂ ಈ ಪ್ರಕರಣದ ವರ್ತಮಾನದ ಪರಿಣಾಮಗಳನ್ನು ಕೂಡ ಇಲ್ಲಿ ಅಭಿವ್ಯಕ್ತಿಸಲಾಗಿದೆ.

ಅಧ್ಯಾಯ – ಏಳು

**ಉದ್ಯೋಗ ಖಾತ್ರಿ ಯೋಜನೆ : ಲಿಂಗ ಸಂಬಂಧಿ ಆಯಾಮ**

ಈ ಅಧ್ಯಾಯ ಪ್ರಬಂಧದ ಕೇಂದ್ರಬಿಂದುವಾಗಿದೆ. ಉದ್ಯೋಗ ಖಾತರಿ ಯೋಜನೆಯ ನಿಯಮಗಳಲ್ಲಿ ಮತ್ತು ಈ ಯೋಜನೆಯ ಅನುಷ್ಠಾನದ ಸಂದರ್ಭದಲ್ಲಿ ಯೋಜನೆ ಎದುರಿಸುತ್ತಿರುವ ತೊಡಕುಗಳನ್ನು ಅರಿಯಲಾಗಿದೆ. ಹಾಗೆಯೇ ಈ ಯೋಜನೆ ಅನುಷ್ಠಾನಗೊಂಡ ನಂತರ ಕಾಮಗಾರಿಗಳಲ್ಲಿ ಮಹಿಳೆಯರು ಭಾಗವಹಿಸಿದ ಪ್ರಮಾಣ ಮತ್ತು ಕೂಲಿ ಪಡೆದುಕೊಂಡವರ ಸಂಖ್ಯೆ ಇವುಗಳನ್ನು ವಿಶ್ಲೇಷಿಸಲಾಗಿದೆ. ಮುಖ್ಯವಾಗಿ ಈ ಯೋಜನೆಯಲ್ಲಿ ಮಹಿಳೆಯರು ಪ್ರವೇಶ ಪಡೆಯುವುದೂ ಸಹ ತುಂಬಾ ಕಷ್ಟಕರವಾಗಿರುತ್ತದೆ. ಅಂತಹ ಸಂದರ್ಭದಲ್ಲಿ ಈ ಯೋಜನೆಯ ಫಲಾನುಭವಿಗಳಾಗಿ ಇದರ ಲಾಭವನ್ನು ಪಡೆದ ಮಹಿಳೆಯರನ್ನು ಗುರುತಿಸಲಾಗಿದೆ. ಮುಖ್ಯವಾಗಿ ಯೋಜನೆಯ ಅನುಷ್ಠಾನದಲ್ಲಾಗಲೀ, ಕಾಮಗಾರಿಯ ಸ್ಥಳದಲ್ಲಾಗಲೀ ಮತ್ತು ಕೂಲಿಯನ್ನು ಪಡೆಯುವ ಸಂದರ್ಭದಲ್ಲಾಗಲೀ ಮಹಿಳೆಯರು ಯಾವ ರೀತಿಯ ಹಿಂಸೆಯನ್ನು ಅನುಭವಿಸಿದ್ದಾರೆ ಮತ್ತು ಅನುಭವಿಸುತ್ತಿದ್ದಾರೆ ಎಂಬುದನ್ನು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಸಂಗ್ರಹಿಸಿದ ವಕ್ತೃಗಳ ಹೇಳಿಕೆಗಳ ಮೂಲಕ ವಿಶ್ಲೇಷಿಸಲಾಗಿದೆ. ಹಾಗೆಯೇ ಲಿಂಗ ತಾರತಮ್ಯದ ನೆಲೆಗಳು ಮಹಿಳೆಯನ್ನು ಹೇಗೆ ಪುರುಷನ ಅಧೀನಕ್ಕೆ ತಳ್ಳುತ್ತಿವೆ ಎಂಬುದನ್ನು ಸ್ತ್ರೀವಾದಿ ದೃಷ್ಟಿಕೋನದಿಂದ ವಿಶ್ಲೇಷಿಸಲಾಗಿದೆ.

ಅಧ್ಯಾಯ-ಎಂಟು

**ಸಮಾರೋಪ**

ಈ ಅಧ್ಯಾಯದಲ್ಲಿ ಒಟ್ಟಾರೆ ಅಧ್ಯಯನದಲ್ಲಿ ಕಂಡುಕೊಂಡಂತಹ ಅಂಶಗಳನ್ನು ಕ್ರೋಢೀಕರಿಸಿ ವಿಶ್ಲೇಷಿಸಲಾಗಿದೆ. ಹಾಗೆಯೇ ಸಂಶೋಧನೆಯ ಫಲಿತಗಳನ್ನು ಹೇಳಲಾಗಿದೆ. ಅಂತೆಯೇ ಅಧ್ಯಯನದ ಸಂದರ್ಭದಲ್ಲಿ ಎದುರಾದ ತಾತ್ವಿಕ ಮತ್ತು ವೈಧಾನಿಕತೆಯನ್ನು ಕುರಿತು ಚರ್ಚಿಸಲಾಗಿದೆ.

# ಅಧ್ಯಾಯ: ಎರಡು

## ಅಧ್ಯಯನಗಳ ತಾತ್ವಿಕ ಸಮೀಕ್ಷೆ

## ಅಧ್ಯಾಯ:ಎರಡು

# ಅಧ್ಯಯನಗಳ ತಾತ್ವಿಕ ಸಮೀಕ್ಷೆ

ಸರಕಾರದ ಯಾವುದೇ ಯೋಜನೆಗಳ ಕಾರ್ಯಚಟುವಟಿಕೆ ಮತ್ತು ಅದರ ಉಪಯೋಗ, ಜನಾಭಿಪ್ರಾಯ, ಅದರ ನ್ಯೂನ್ಯತೆಗಳು ಆಯಾ ಯೋಜನೆಯ ಪರಾಮರ್ಶೆಯಿಂದ ನಡೆಯುತ್ತದೆ. ಈ ಬಗೆಯ ಸರಕಾರಿ ಯೋಜನೆಯ ಪರಾಮರ್ಶೆಗಳು ಹೆಚ್ಚಾದಷ್ಟು ಆಯಾ ಯೋಜನೆಯ ಉಪಯೋಗದ ಪ್ರಮಾಣವನ್ನು ಹೆಚ್ಚು ಮಾಡಬಹುದಾಗಿದೆ. ಆದರೆ ಯೋಜನೆಗಳ ಪರಾಮರ್ಶೆ ಆಗಬೇಕಾದ ಪ್ರಮಾಣದಲ್ಲಿ ಆಗುವುದಿಲ್ಲ. ಈ ಕಾರಣ ಸರಕಾರಿ ಯೋಜನೆಗಳು ಯಥಾವತ್ತಾಗಿ ಸಾಗುತ್ತಿರುತ್ತವೆ. ಮುಖ್ಯವಾಗಿ ಭಾರತದ ಸಂದರ್ಭದಲ್ಲಿ ಇಪಿಡಬ್ಲ್ಯುನಂತಹ ಅಭಿವೃದ್ಧಿ ಪತ್ರಿಕೆಗಳಲ್ಲಿ ಸರಕಾರಿ ಯೋಜನೆಗಳ ವಿಮರ್ಶಾತ್ಮಕ ಪರಾಮರ್ಶೆ ನಡೆಯುತ್ತದೆ. ಆದರೆ ಪ್ರಾದೇಶಿಕ ಭಾಷೆಗಳಲ್ಲಿ ಈ ಬಗೆಯ ಗಂಭೀರ ಪರಾಮರ್ಶೆಗಳು ನಡೆಯುವುದು ವಿರಳ. ಅದರ ಕೊರತೆ ಈ ಅಧ್ಯಯನ ಮಾಡುವ ಸಂದರ್ಭದಲ್ಲಿ ಕಂಡುಬಂದಿದೆ.

ಈ ಅಧ್ಯಾಯದಲ್ಲಿ ಮುಖ್ಯವಾಗಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗೆ ಸಂಬಂಧಿಸಿದಂತೆ ನಡೆದ ಸರಕಾರಿ ವರದಿ, ವಿಮರ್ಶೆ, ಸಂಶೋಧನೆಗಳ ಬಗ್ಗೆ ಪರಿಶೀಲಿಸಲಾಗುವುದು. ಇಲ್ಲಿ ಈ ಅಧ್ಯಯನಗಳು ಪ್ರಮುಖವಾಗಿ ಯೋಜನೆಯ ಯಾವ ಸಂಗತಿಗಳನ್ನು ಗಮನಸೆಳೆದವು? ಯಾವ ನ್ಯೂನ್ಯತೆಗಳನ್ನು ಗುರುತಿಸಲು ಪ್ರಯತ್ನಿಸಿವೆ? ಈ ಅಧ್ಯಯನಗಳ ಮಿತಿಗಳೇನು? ಈ ಮೂಲಕ ಪ್ರಸ್ತುತ ಅಧ್ಯಯನಕ್ಕೆ ಪಡೆಯಬಹುದಾದ ಸಂಗತಿಗಳು ಮತ್ತು ರೂಪಿಸಿಕೊಳ್ಳಬಹುದಾದ ಪ್ರಶ್ನೆಗಳನ್ನು ಗುರುತಿಸಿಕೊಳ್ಳುವ ಪ್ರಯತ್ನವನ್ನು ಮಾಡಲಾಗುವುದು. ಇಲ್ಲಿ ಅಧ್ಯಯನಗಳ ಸಂಕ್ಷಿಪ್ತ ನೋಟ ಮತ್ತು ಅದರ ಮುಖ್ಯ ನೆಲೆಗಳನ್ನು ಟಿಪ್ಪಣಿ ಮಾಡುತ್ತಾ ಅದರ ಮಿತಿಗಳನ್ನು ಗುರುತಿಸುವ ಮಾದರಿಯಲ್ಲಿ ಈ ಸಮೀಕ್ಷೆಯಲ್ಲಿ ಮಾಡಲಾಗಿದೆ.

ಒಟ್ಟಾರೆ ಈ ಯೋಜನೆ ಕುರಿತಾಗಿ ಕೆಲವೆ ಲೇಖನಗಳು, ಬಿಡಿ ಬರಹಗಳು ಬಂದಿವೆ. ಇದರ ಸಫಲತೆ-ವಿಫಲತೆ ಕುರಿತಾಗಿ ದಿನ ಪತ್ರಿಕೆ, ವಾರಪತ್ರಿಕೆ ಮತ್ತು ಮಾಸಪತ್ರಿಕೆಗಳಲ್ಲಿ ಪ್ರಕಟವಾಗಿರುವುದು ಅಲ್ಲಲ್ಲಿ ಕಂಡುಬರುತ್ತವೆ. ಆದರೆ ಇಲ್ಲಿಯವರೆಗೂ ಕರ್ನಾಟಕದ ಸಂದರ್ಭದಲ್ಲಿ ಈ ಯೋಜನೆ ಕುರಿತಂತೆ ಸಂಶೋಧನಾತ್ಮಕವಾದ ಗಂಭೀರ ಅಧ್ಯಯನಗಳು ನಡೆದಿಲ್ಲ. ನಡೆದರೂ ಅದು ತೀರ ಕಡಿಮೆಯೇ. ಹೀಗಾಗಿ ಇದುವರೆಗೂ ಈ ಯೋಜನೆ ಕುರಿತು ಬಂದಿರುವಂತಹ ಬರಹಗಳನ್ನು ಗಮನಿಸಿ ಈ ಕೆಳಗಿನಂತೆ ಸಮೀಕ್ಷೆ ಮಾಡಲಾಗಿದೆ.

ಮಲ್ಲಿಕಾರ್ಜುನ ಜಿ.ಯರನಾಳ ಅವರು ಮಂಡಿಸಿದ "ರಾಷ್ಟ್ರೀಯ ಗ್ರಾಮೀಣ ಭರವಸೆ ಯೋಜನೆ: ಬೆಳಗಲಿ ಗ್ರಾಮದ ಕುರಿತ ಒಂದು ಅಧ್ಯಯನ" ಎಂಬ ಸಂಪ್ರಬಂಧದಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಕುರಿತು ಚರ್ಚಿಸಿದ್ದಾರೆ. ಈ ಸಂಪ್ರಬಂಧವು ಒಟ್ಟು ಆರು ಅಧ್ಯಾಯಗಳನ್ನು ಒಳಗೊಂಡಿದೆ.

ಸಂಶೋಧಕರು ಈ ಯೋಜನೆಯು ಜನತೆಗೆ ಉದ್ಯೋಗ ಒದಗಿಸುವ ಜನರ ಬದುಕಿನ ಭರವಸೆಯನ್ನು ಹೆಚ್ಚಿಸುವ ಕಾರ್ಯಕ್ರಮವೆಂದು ಪರಿಗಣಿಸಿದ್ದಾರೆ. ಅಲ್ಲದೆ ಒಬ್ಬ ಫಲಾನುಭವಿ ಒಂದು ವರ್ಷದಲ್ಲಿ ನೂರುದಿನಗಳ ಉದ್ಯೋಗ ಖಾತರಿಯನ್ನು ಹಕ್ಕಾಗಿ ಹೊಂದಬಲ್ಲ ಎಂಬ ಮಹತ್ವದ ಅಂಶವನ್ನು ಇಲ್ಲಿ ಚರ್ಚಿಸಿದ್ದಾರೆ.

ಸಮುದಾಯ ಮತ್ತು ಆಡಳಿತ ಯಂತ್ರದ ಸಹಭಾಗಿತ್ವ ಇದ್ದರೆ ಯಾವುದೇ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರಲು ಸಾಧ್ಯವೆನ್ನುವುದು ಇಲ್ಲಿಯ ಆಶಯವಾಗಿದೆ. ಅನೇಕ ರಾಜ್ಯಗಳಲ್ಲಿ ಅಧಿಕಾರಿಗಳು, ಸರಕಾರೇತರ ಸಂಸ್ಥೆಗಳು, ಗ್ರಾಮ ಸಮುದಾಯ ಮತ್ತು ಕೆಲಸಗಾರರು ಒಟ್ಟಾಗಿ ಕಾರ್ಯನಿರ್ವಹಿಸಿದರೆ ಅಂತಹ ಕಾರ್ಯಕ್ರಮವು ಹೆಚ್ಚು ಪರಿಣಾಮಕಾರಿಯಾಗುವುದು ಮತ್ತು ಫಲಪ್ರದವಾಗುವುದು ಎಂಬ ಮಾತನ್ನು ಒತ್ತಿ ಹೇಳುತ್ತಾರೆ.

ಅಲ್ಲದೆ ತಮ್ಮ ಸಂಪ್ರಬಂಧದಲ್ಲಿ ಯೋಜನೆಯ ಸ್ಥಿತಿ-ಗತಿಗಳನ್ನು ವಿವರಿಸುತ್ತಾ, ರಾಜ್ಯದ ಅನೇಕ ಜಿಲ್ಲೆಗಳಲ್ಲಿ ಈ ಯೋಜನೆ ಯಶಸ್ವಿಯಾಗಿದೆ ಮತ್ತು ಕೆಲವು ಜಿಲ್ಲೆಗಳಲ್ಲಿ ದಕ್ಷ ಅಧಿಕಾರಿಗಳ ಕೊರತೆ ಮತ್ತು ಜಾರಿಗೊಳಿಸುವಲ್ಲಿ ಅನುಸರಿಸಿದ ಕ್ರಮಗಳ ವೈಫಲ್ಯದಿಂದಾಗಿ ಈ ಯೋಜರ್ನೆ ಸ್ವಲ್ಪಮಟ್ಟಿಗೆ ಕಳೆಗುಂದುತ್ತಿದೆ. ಸಂಶೋಧಕರು ರಾಜ್ಯದಲ್ಲಿ ಈ ಯೋಜನೆಯ ಸಫಲತೆ ಮತ್ತು ವೈಫಲ್ಯತೆ ಅದಕ್ಕೆ ಕಾರಣವಾದ ಅಂಶಗಳನ್ನು ಕುರಿತು ಚರ್ಚಿಸಿದ್ದಾರೆ.

ಕೊನೆಗೆ ತಮ್ಮ ಅಧ್ಯಯನದ ಸಮಾರೋಪದ ಭಾಗದಲ್ಲಿ ಮುಂದಿನ ಅಧ್ಯಯನಕಾರರು ಅನುಸರಿಸಬೇಕಾದ ಸಂಗತಿಗಳ ಕುರಿತು ಮಾಹಿತಿ ನೀಡಿದ್ದಾರೆ.

ಡಾ.ಮೀನಾಕ್ಷಿ ಬಾಳಿ ಮತ್ತು ಕೆ.ನೀಲಾ ಇವರ ಸಂಪಾದಕತ್ವದಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆಯ ಯಶಸ್ವಿ ಅನುಷ್ಠಾನದ ಕೈಪಿಡಿಯಾದ 'ನೆಲದ ನಂಟು' ಎಂಬ ಕೃತಿಯು ನರೇಗಾ ಕಾಯ್ದೆಯ ಕುರಿತು ಮತ್ತು ಜನವಾದಿ ಸಂಘಟನೆಯು

ಈ ಕಾಯ್ದೆಯ ಅನುಷ್ಠಾನಕ್ಕೆ ತರುವಲ್ಲಿ ಯಾವ ಕ್ರಮಗಳನ್ನು ಅನುಸರಿಸಿದೆ ಎನ್ನುವುದರ ಕುರಿತು ಉಪಯುಕ್ತ ಮಾಹಿತಿ ನೀಡುತ್ತದೆ. ಈ ಕೃತಿಯಲ್ಲಿ ನರೇಗಾ ಕುರಿತು ಬಿಡಿ ಬರಹಗಳ ಮಾಹಿತಿ ಇದೆ ಮತ್ತು ಫೋಟೊಗಳು ಇಲ್ಲಿ ಲಿಂಗಸಂಬಂಧಿ ಕಣ್ಣೋಟದಿಂದ ಕಾಯ್ದೆಯನ್ನು ಗ್ರಹಿಸಿರುವುದು ಮುಖ್ಯವೆನಿಸುತ್ತದೆ. ಅಂದರೆ ಪ್ರಜಾಸತ್ತಾತ್ಮಕ ಸಂಘಟನೆಗಳು, ಪ್ರಜ್ಞಾವಂತ ವ್ಯಕ್ತಿ–ಶಕ್ತಿಗಳು ಈ ಕಾಯ್ದೆಯನ್ನು ಸಂಪೂರ್ಣ ಮನನ ಮಾಡಿಕೊಳ್ಳಬೇಕು. ಇನ್ನಷ್ಟು ಸಕಾರಾತ್ಮಕ ತಿದ್ದುಪಡಿಗಳೊಂದಿಗೆ ಈ ಕಾಯ್ದೆಯನ್ನು ಜಾರಿ ಮಾಡಲು ಪ್ರಯತ್ನಿಸಬೇಕು. ಅದರಲ್ಲೂ ಲಿಂಗ ಸಂಬಂಧಿ ನೆಲೆಯಿಂದ ಈ ಕಾಯ್ದೆಯನ್ನು ಅಧ್ಯಯನ ಮಾಡುವ ತಿದ್ದುಪಡಿಗಳಿಗಾಗಿ ಒತ್ತಾಯಿಸುವ ಜರೂರು ಇದೆ. ಕಾಮಗಾರಿಗಾಗಿ ಬಳಸುವ ಸಲಕರಣೆಗಳು ಮಹಿಳಾ ಉಪಯೋಗಿ ಸಲಕರಣೆಗಳಲ್ಲ. ಕಾಮಗಾರಿಯ ಕೆಲಸಗಳು ಪುರುಷರು ಮಾಡುವ ಸ್ವರೂಪದವಾಗಿವೆ. ಮುಖ್ಯವಾಗಿ ಕಟ್ಟೆಗಳ ನಿರ್ಮಾಣ, ಕಟ್ಟಡ ನಿರ್ಮಾಣದ ಕೆಲಸಗಳಿವೆ. ಈ ಕೆಲಸಗಳನ್ನು ಮಾಡಲು ಬಳಸುವ ಸಲಕರಣೆಗಳು ಪುರುಷರನ್ನು ಗಮನದಲ್ಲಿಟ್ಟುಕೊಂಡು ತಯಾರಿಸಲಾಗಿರುತ್ತದೆ. ಉದಾ: ಗುದ್ದಲಿ, ಆರೆ, ಸಲಿಕೆ, ಪಿಕಾಸಿ ಅತಿ ಭಾರದವಾಗಿರುತ್ತವೆ. ಗಾತ್ರದಲ್ಲಿಯೂ ದೊಡ್ಡವಿರುತ್ತವೆ. ಇವೇ ಸಲಕರಣೆಗಳನ್ನು ಮಹಿಳೆಯರು ಬಳಸಲು ಕಷ್ಟವಾಗುವುದೂ ಇದೆ. ತ್ವರಿತ ಕೆಲಸ ಆಗುವ ಹಾಗೆ ಮತ್ತು ಮಹಿಳೆಯರು ಬಳಸಲು ಅನುಕೂಲವಾಗುವಂತೆ ಸಲಕರಣೆಗಳು ಸಿದ್ಧಗೊಳಿಸಬೇಕಾದ ಅವಶ್ಯಕತೆ ಇದೆ. ಮಹಿಳೆ ಮನೆ ಒಳಗೂ, ಹೊರಗೂ ಕೆಲಸ ಮಾಡುವುದರಿಂದ ಮಾನಸಿಕವಾಗಿಯೂ ದೈಹಿಕವಾಗಿಯೂ ಕುಗ್ಗಿರುತ್ತಾಳೆ. ನರೇಗಾ ಶಾರೀರಿಕ ಶ್ರಮದ ಆಧಾರದ ಕೆಲಸ, ಹೀಗಿರುವಾಗ ಅವಳು ಕೆಲಸ ಮಾಡುವ ಸ್ಥಳದಲ್ಲಿ ಪ್ರಥಮ ಚಿಕಿತ್ಸೆ ಮಾತ್ರವಲ್ಲ. ಪ್ರಾಥಮಿಕ ಆರೋಗ್ಯ ಸಹಾಯಕಿಯರನ್ನು ನೇಮಿಸಿ ದಿನಕ್ಕೆ ಒಮ್ಮೆಯಾದರೂ ಭೇಟಿ ಮಾಡುವುದಾಗಬೇಕು. ಮತ್ತು ಮಹಿಳೆಯರ ಆರೋಗ್ಯಕ್ಕೆ ಸಂಬಂಧಪಟ್ಟಂತೆ ತಿಳುವಳಿಕೆ ಕೊಡುವ ಸಭೆಗಳನ್ನು ನಡೆಸಬೇಕು. ಅನಕ್ಷರಸ್ಥ ಮಹಿಳೆಯರನ್ನು ಸಾಕ್ಷರರನ್ನಾಗಿ ಮಾಡಲು ಸಾಕ್ಷರ ಕೇಂದ್ರಗಳನ್ನು ನಡೆಸುವುದು ಮತ್ತು ಅಕ್ಷರ ಕಲಿಸುವವರಿಗೆ ಒಂದು ಹಾಜರಿ ಕೊಡಲು ಸಾಧ್ಯವಾಗಬೇಕು(ಮೀನಾಕ್ಷಿ ಬಾಳಿ ಮತ್ತು ನೀಲಾ ಕೆ, ೨೦೧೦, ಕ್ರಿಯಾ ಪ್ರಕಾಶನ, ಬೆಂಗಳೂರು, ಪುಟ.೨೩). ಇಂತಹ ಸೂಕ್ಷ್ಮ ಸಂಗತಿಗಳನ್ನು ಈ ಕೃತಿಯಲ್ಲಿ ಗುರುತಿಸಲಾಗಿದೆ. ಹಾಗೆಯೇ ಇವುಗಳ ಜೊತೆಗೆ ಇನ್ನಷ್ಟು ಮಾಡಬೇಕಾದ ಕೆಲಸ ಕಾರ್ಯಗಳ ಬಗ್ಗೆ ಇಲ್ಲಿ ವಿವರಿಸಲಾಗಿದೆ.

ಮುಖ್ಯವಾಗಿ ಸದರಿ ಕಾಯ್ದೆಯ ಉಪಯುಕ್ತತೆ ಕುರಿತು ಇನ್ನು ಜನರಿಗೆ ಸಂಪೂರ್ಣ ಮಾಹಿತಿ ದಕ್ಕಿಲ್ಲ. ಕಾಯ್ದೆಯ ಅರಿವನ್ನು ಮೂಡಿಸಲು ವಿವಿಧ ಮಾಧ್ಯಮ ಬಳಸಿಕೊಂಡು ಗೋಡೆ ಬರಹ, ದೂರದರ್ಶನ, ಆಕಾಶವಾಣಿ, ಕರಪತ್ರ, ಬೀದಿನಾಟಕ, ವಿಚಾರ ಸಂಕಿರಣ, ಕಾರ್ಯಾಗಾರ, ತರಬೇತಿಗಳನ್ನು ಹಮ್ಮಿಕೊಳ್ಳಬೇಕು. ಉದ್ಯೋಗ ಪಡೆಯುವ ಜನರು ಮತ್ತು ಅದನ್ನು ಜನರಿಗೆ ಮುಟ್ಟಿಸುವ ಏಜೆನ್ಸಿ ಎರಡಕ್ಕೂ ತರಬೇತಿಯನ್ನು ನೀಡಬೇಕು. ನರೇಗಾ

ಜಾರಿಯ ಉಸ್ತುವಾರಿ ಮತ್ತು ಪಾರದರ್ಶಕತೆ ಕಾಪಾಡುವುದರಲ್ಲಿ ತೆಗೆದುಕೊಂಡ ಕ್ರಮಗಳನ್ನು ಇನ್ನಷ್ಟು ಬಿಗಿಗೊಳಿಸಬೇಕಿದೆ. ಈ ಕುರಿತು ದಾಖಲಾದ ದೂರುಗಳನ್ನು ಶೀಘ್ರವಾಗಿ ಮತ್ತು ಸಮರ್ಪಕವಾಗಿ ಬಗೆಹರಿಸುವಂತೆ ವ್ಯವಸ್ಥೆ ಮಾಡಬೇಕು. ಒದಗಿಸಿದ ಉದ್ಯೋಗಗಳ ಮಾಹಿತಿ ಮತ್ತು ಬಟವಾಡೆ ಮಾಡಿದ ಕೂಲಿ ಮೊತ್ತವನ್ನು ನಿಗದಿತ ರೂಪದಲ್ಲಿ ವಾರದೊಳಗೆ ಅದಕ್ಕಾಗಿ ಇರುವ ವೆಬ್‌ಸೈಟ್‌ನಲ್ಲಿ ದಾಖಲಾಗಬೇಕು. ಕೂಲಿ ಮೊತ್ತ ಪಾವತಿಸಲು ವಾರಗಳನ್ನು ಬಿಡಿ ತಿಂಗಳುಗಳೇ ವಿಳಂಬವಾಗುತ್ತಿರುವುದು ಸಾಮಾನ್ಯವಾಗಿದೆ. ಇದನ್ನು ತಪ್ಪಿಸಲು ಸಿಬ್ಬಂದಿಯನ್ನು ಇನ್ನಷ್ಟು ಚುರುಕುಗೊಳಿಸಬೇಕು. ಅಥವಾ ನರೇಗಾ ಕೆಲಸಕ್ಕಾಗಿಯೇ ಪ್ರತ್ಯೇಕ ಸಿಬ್ಬಂದಿ ನೇಮಕ ಮಾಡಬೇಕು. ನರೇಗಾ ಕಾಮಗಾರಿ ಕೆಲಸದ ಅಳತೆ ಮತ್ತು ಒಟ್ಟು ಲೆಕ್ಕ ಹಾಕುವುದರಲ್ಲಿ ಕೂಲಿಯ ದರದ ನಿಗದಿ ಮತ್ತು ಕೆಲಸದ ಗುರುತಿಸುವಿಕೆಯಲ್ಲಿ ಗ್ರಾಮಸಭೆ ಮತ್ತು ಪಂಚಾಯತ್ ಸಿಬ್ಬಂಧಿಯನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುತ್ತಿಲ್ಲ. ಇವರ ಭಾಗವಹಿಸುವಿಕೆಯನ್ನು ತಪ್ಪದೆ ಇರುವಂತೆ ನೋಡಿಕೊಳ್ಳಬೇಕು. ಆಗ ಕೆಲಸದ ಅಗತ್ಯ, ಕೆಲಸದ ಅಳತೆ, ಆ ಪ್ರದೇಶದ ಹವಾಮಾನ, ಉದ್ಯೋಗಿಗಳ ವಯಸ್ಸು, ಆರೋಗ್ಯ ಕೆಲಸದ ಕ್ಷಮತೆ ಇತ್ಯಾದಿಗಳನ್ನು ಗಮನದಲ್ಲಿಟ್ಟುಕೊಂಡು ಕಾಯ್ದೆ ಜಾರಿಗೊಳಿಸಲು ಸುಲಭವಾಗುತ್ತದೆ(ಪುಟ.೨೪-೨೫). ಹೀಗೆ ಕಾಯ್ದೆಯು ಸಾಮಾನ್ಯ ಜನರಿಗೆ ತಲುಪುವ ನಿಟ್ಟಿನಲ್ಲಿ ಮಾಡಬೇಕಾದ ಸಂಗತಿಗಳ ಬಗ್ಗೆ ಈ ಕೃತಿಯಲ್ಲಿನ ಅಂಶಗಳು ಸಹಕಾರಿಯಾಗಿವೆ. ಮುಂದುವರೆದಂತೆ ರಾಜ್ಯದಲ್ಲಿ ನರೇಗಾ ಅನುಷ್ಠಾನದತ್ತ ಜನವಾದಿ ಎಂಬ ಶೀರ್ಷಿಕೆ ಅಡಿಯಲ್ಲಿ ಬೀದರ್, ಬಸವಕಲ್ಯಾಣ, ಔರಾದ, ಹುಮನಾಬಾದ್ ಮತ್ತು ಬಾಲ್ಕಿ ಈ ಐದು ತಾಲೂಕುಗಳಲ್ಲಿ ಜನವಾದಿ ಮಹಿಳಾ ಸಂಘಟನೆಯು ನರೇಗಾದ ಬಗೆಗೆ ಜಾಗೃತಿಯನ್ನು ಮೂಡಿಸುವ ಕೆಲಸವನ್ನು ಆರಂಭ ಮಾಡಿದೆ. ಹಾಗೆಯೇ ಜನವಾದಿ ಮಹಿಳಾ ಸಂಘಟನೆಯು ಈ ಯೋಜನೆಯ ಅನುಷ್ಠಾನಕ್ಕೆ ತರುವಲ್ಲಿ ಯಾವ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ ಎನ್ನುವುದರ ಕುರಿತು ಮಾಹಿತಿಯನ್ನು ಒದಗಿಸಲಾಗಿದೆ. ಜಾಗೃತಿ ಜಾಥಗಳು, ಜಿಲ್ಲಾ ಮತ್ತು ತಾಲೂಕು ಮಟ್ಟದ ಸಮಾವೇಶಗಳು, ವಿಚಾರ ಸಂಕಿರಣಗಳ ಜೊತೆಗೆ ಜನರಿಗೆ ಜಾಬ್ ಕಾರ್ಡ್‌ಗಳನ್ನು ಒದಗಿಸುವ ನಿಟ್ಟಿನಲ್ಲಿ ಹಲವಾರು ಹೋರಾಟಗಳನ್ನು ಮಾಡುತ್ತಾ ಬಂದಿದೆ. ಮೇಲೆ ತಿಳಿಸಿದ ಐದು ತಾಲೂಕುಗಳಲ್ಲದೆ, ರಾಜ್ಯದ ದಾವಣಗೆರೆ, ರಾಯಚೂರು, ಕೋಲಾರ, ಮಂಡ್ಯ, ಚಿಕ್ಕಬಳ್ಳಾಪುರ ಮತ್ತು ಗುಲ್ಬರ್ಗಾ ಈ ಜಿಲ್ಲೆಗಳಲ್ಲಿಯೂ ಸಹ ಜನವಾದಿ ಮಹಿಳಾ ಸಂಘಟನೆಯು ತನ್ನ ಕಾರ್ಯಕ್ರಮಗಳನ್ನು ವಿಸ್ತರಿಸಿಕೊಂಡಿರುವುದರ ಕುರಿತು ಮಾಹಿತಿಯನ್ನು ಒದಗಿಸಲಾಗಿದೆ. ಹಾಗೆಯೇ ಖುಷಿಯ ಕ್ಷಣಗಳು ಎಂಬ ಶೀರ್ಷಿಕೆಯ ಅಡಿಯಲ್ಲಿ ನರೇಗಾ ಯೋಜನೆಯ ಸಂಪೂರ್ಣ ಲಾಭವನ್ನು ಪಡೆದ ಜನರು ಹೇಳಿಕೆಗಳನ್ನು ತಿಳಿಸಿದ್ದಾರೆ. ಉದಾ: ಬೀದರ್ ಜಿಲ್ಲೆಯ ತಾಳಮಡಗಿ ಗ್ರಾಮದ ೫೦ ವಯಸ್ಸಿನ ಮಹಿಳೆಯೊಬ್ಬರು ನಾವು ಸಭೆ ಮಾಡಲು ಹೋದಾಗ ತಮ್ಮ ಅನುಭವ ಹಂಚಿಕೊಂಡರು. "ನನಗೆ ಮೊದಲೆಲ್ಲ ಜಾತಿ

ಭಾವನೆ ತಲೆಯಲ್ಲಿ ಇತ್ರಿ ಆದ್ರೆ ಈ ಖಾತ್ರಿ ಕೆಲಸ ಸಿಕ್ಕಿದ ಮ್ಯಾಲೆ ಜಾತಿ ಬೇಧ ಮಾಡಬಾರದು ಅಂತ ಗೊತ್ತಾಯ್ತು. ನನ್ನ ಮಕ್ಕಳ ಮುಂದೆ ರೊಕ್ಕ ಕೊಡು ಅಂತ ಕೈಚಾಚುವುದು ತಪ್ಪಿದೆ" ಎಂದರು. ಹಳ್ಳಿಖೇಡ(ಬಿ) ಗ್ರಾಮದ ನೂರಾರು ಮಹಿಳೆಯರಂತೂ "ನಮ್ಮ ಜೀವನಕ್ಕೊಂದು ಆಧಾರ ಆಗಿದೇರಿ ಸರಿಯಾದ ಟೈಮಿಗೆ ಕೂಲಿ ಕೊಟ್ರ ಇನ್ನೂ ಚಲೋ ಆಗತಾದ" ಎನ್ನುವರು. ಹಾಗೆಯೇ ರಾಯಚೂರು ಜಿಲ್ಲೆಯ ಹಟ್ಟಿ ಗ್ರಾಮದ ಮಹಿಳೆಯರು ಈ ಕಾಯ್ದೆ ಬಂದಾಗಿನಿಂದ ತಮಗೆ ಜೀವನದಲ್ಲಿ ಧೈರ್ಯ ಬಂದಿದೆ" ಎಂದು ಹೇಳುತ್ತಾರೆ. ಗಂಡ ಸತ್ತ ಗಂಗಮ್ಮ ಮೊದಲ ಕೂಲಿ ಕೈಗೆ ಬಂದ ಮೇಲೆ ಖುಷಿಯಿಂದ ಕಣ್ಣೀರು ತಂದಳು. ಯಾಕೆಂದರೆ ಮನೆಯ ಬಾಡಿಗೆ ಕಟ್ಟಿರಲಿಲ್ಲ. ಮನೆಗೆ ಬೇಕಾದ ರೇಷನ್ ಪೂರ್ತಿ ತಂದಿರಲಿಲ್ಲ. ದಿನದ ಕೂಲಿ ಮೊದಲೆಲ್ಲ ಕೇವಲ ರೂ.೨೦-೨೫. ನರೇಗಾ ಕೂಲಿ ಅದಕ್ಕಿಂತಲೂ ಜಾಸ್ತಿ 'ಮೈಮುರಿದು ದುಡಿಲಾಕ ಒಲ್ಲೆನ್ನುವುದಿಲ್ಲ. ಆದರೆ ಕೊಡಬೇಕಾದ ಕೂಲಿ ಜೀವನಕ್ಕೆ ಸಾಕಾಗುವಷ್ಟಾದ್ರು ಇರಬೇಕಲ್ಲ. ನರೇಗಾ ಕೆಲಸ ಎರಡ ನೂರ ದಿನಕ್ಕ ಮಾಡಸ್ರಿ" ಎನ್ನುತ್ತಾಳೆ(ಪುಟ.೩೫-೩೬). ಕೃತಿಯ ಕೊನೆಯಲ್ಲಿ ನರೇಗಾ ಯೋಜನೆಯಲ್ಲಿ ಪಾಲ್ಗೊಳ್ಳಲು ಬೇಕಾದ ಅರ್ಜಿ ನಮೂನೆಗಳನ್ನು ಸಹ ಹಾಕಲಾಗಿದೆ. ಒಟ್ಟಾರೆಯಾಗಿ ಈ ಕೃತಿಯು ಲಿಂಗ ಸಂಬಂಧಿ ಆಯಾಮಗಳ ಅಡಿಯಲ್ಲಿ ಯೋಜನೆಯನ್ನು ಹೇಗೆ ಗ್ರಹಿಸಿಕೊಳ್ಳಬಹುದು ಎಂಬುದನ್ನು ಕುರಿತು ತಿಳಿಸಿಕೊಡುತ್ತದೆ.

ಡಾ.ರಾಮಣ್ಣ ಜಿ.ಟಿ, ಪ್ರೊ.ಎಂ.ಬಿ.ಹೆಗ್ಗಣ್ಣವರ ಮತ್ತು ಪ್ರೊ.ವಾಯ್.ಆಯ್.ಚವ್ಹಾಣ ಇವರುಗಳು ಬರೆದಿರುವಂತ ಮಾನವ ಹಕ್ಕುಗಳು, ಮಾಹಿತಿ ಹಕ್ಕುಗಳ ಅಧಿನಿಯಮ ಮತ್ತು ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಎಂಬ ಕೃತಿಯು ಏಳು ಅಧ್ಯಾಯಗಳನ್ನು ಒಳಗೊಂಡಿದೆ. ಈ ಕೃತಿಯ ಮೂರು ಜನ ಲೇಖಕರು ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳಲ್ಲಿ ಸಹಾಯಕ ಪ್ರಾಧ್ಯಾಪಕರಾಗಿರುವುದರಿಂದ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ಮತ್ತು ಸಾರ್ವಜನಿಕರಿಗೆ ಉಪಯುಕ್ತವಾಗುವಂತೆ ರಚಿಸಿದ್ದಾರೆ. ಈ ಕೃತಿಯ ಏಳನೆಯ ಅಧ್ಯಾಯದಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆಯ ಧ್ಯೇಯೋದ್ದೇಶಗಳೇನು? ಎನ್ನುವುದರ ಬಗ್ಗೆ ಮಾಹಿತಿಯನ್ನು ಒದಗಿಸುತ್ತದೆ. ಇದರ ಮುಖ್ಯ ಅಂಶಗಳೆಂದರೆ "ಭಾರತದ ಗ್ರಾಮಗಳು ಸಮಸ್ಯೆಗಳ ಆಗರವಾಗಿವೆ. ಕಾರಣ ಅವುಗಳ ನಿವಾರಣೆಗೆ ಸೂಕ್ತ ಪರಿಹಾರ ಕ್ರಮಗಳನ್ನು ಕೈಗೊಳ್ಳದಿರುವುದು. ಯೋಜನೆಗಳ ಅನುಷ್ಠಾನದಲ್ಲಿ ನಿಖರತೆ ಇಲ್ಲದಿರುವುದು. ಭ್ರಷ್ಟಾಚಾರ ಮತ್ತು ಜನತೆಯಲ್ಲಿ ತಿಳುವಳಿಕೆಯ ಕೊರತೆ, ಆದ್ದರಿಂದಲೇ ಭಾರತದ ಬಹುತೇಕ ಹಳ್ಳಿಗಳು ಇನ್ನೂ ಆರೋಗ್ಯ, ನೈರ್ಮಲ್ಯ, ಶುದ್ಧಕುಡಿಯುವ ನೀರು, ಸಾರಿಗೆ, ಬಡತನ, ನಿರುದ್ಯೋಗ, ಅನಕ್ಷರತೆ ಮೊದಲಾದ ಸಮಸ್ಯೆಗಳನ್ನು ಕಂಡುಹಿಡಿದು ಪರಿಹಾರಗಳನ್ನು ಕೈಗೊಂಡರೆ ಮಾತ್ರ ಗ್ರಾಮೀಣ ಅಭಿವೃದ್ಧಿ ಸಾಧ್ಯವಾಗುತ್ತದೆ(ಪುಟ.೧೧೮). ಹಾಗೆಯೇ ಇಷ್ಟೆಲ್ಲ ಮಾಹಿತಿಗಳ ಜೊತೆಗೆ ಮಹಾತ್ಮಗಾಂಧಿ

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಎನ್ನುವ ಶೀರ್ಷಿಕೆಯಡಿಯಲ್ಲಿ ಯೋಜನೆಯ ಆರಂಭದಿಂದ ಈ ತನಕ ಜಾರಿಯಾದ ಹಣಕಾಸಿನ ಬಗ್ಗೆ ವಿವರಿಸುತ್ತಾ ಹೋಗಿದ್ದಾರೆ. ಉದಾ: ೨೦೦೬-೦೭ನೇ ಸಾಲಿನಲ್ಲಿ ೧೧೦೦೦ ಸಾವಿರ ಕೋಟಿ ಹಣವನ್ನು ಸರಕಾರ ನೀಡಿರುತ್ತದೆ. ಹಾಗೆಯೇ ೨೦೦೮-೦೯, ೨೦೦೯-೧೦ ಮತ್ತು ೨೦೧೦-೧೧ರ ವರೆಗೆ ಸರಕಾರ ಎಷ್ಟೆಷ್ಟು ಹಣವನ್ನು ನೀಡಿದೆ ಎನ್ನುವುದರ ಬಗ್ಗೆ ಮಾಹಿತಿ ನೀಡಿರುತ್ತಾರೆ. "ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮವು ಒಂದು ಅಭೂತಪೂರ್ವ ಅಧಿನಿಯಮ. ಸಂವಿಧಾನದ ೭೩ನೇ ತಿದ್ದುಪಡಿಯಂತೆ ಆರ್ಥಿಕ ವಿಕಾಸ ಮತ್ತು ಸಾಮಾಜಿಕ ನ್ಯಾಯ ಪಡೆಯುವುದು ಪಂಚಾಯಿತಿಯ ಮೂಲಭೂತ ಹಕ್ಕಾಗಿದ್ದು, ಆ ನಿಟ್ಟಿನಲ್ಲಿ ಪಂಚಾಯಿತಿಯು ಕಾರ್ಯನಿರ್ವಹಿಸಲು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮವು ಅವಕಾಶ ಮಾಡಿಕೊಟ್ಟಿದೆ ಎಂದು ಹೇಳುವುದರ ಮೂಲಕ ಯೋಜನೆಯ ಮಹತ್ವವನ್ನು ತಿಳಿಸಲಾಗಿದೆ"(ಪುಟ.೧೧೯). ಮುಖ್ಯವಾಗಿ ಸಂವಿಧಾನದ ೭೩ನೇ ತಿದ್ದುಪಡಿಯು ಹಲವಾರು ವೈಶಿಷ್ಟ್ಯಗಳನ್ನು ಹೊಂದಿ ೧೯೯೨ರಲ್ಲಿ ಜಾರಿಗೆ ಬಂದಿತು. ಗ್ರಾಮಸಭೆಯ ಕುರಿತಂತೆ ಹೊಸ ವ್ಯಾಖ್ಯಾನವನ್ನು ನೀಡಿತು. ಅಂದರೆ ಈ ತಿದ್ದುಪಡಿಯ ಪ್ರಕಾರ ಗ್ರಾಮಸಭಾ ಎಂದರೆ ಪಂಚಾಯತಿಯನ್ನು ಚುನಾಯಿಸುವ ಒಂದು ಗ್ರಾಮ ಅಥವಾ ಗ್ರಾಮಗಳ ಗುಂಪಿನ ಮತದಾರರ ಪಟ್ಟಿಯಲ್ಲಿ ನೋಂದಾಯಿತರಾದ ವ್ಯಕ್ತಿಗಳ ಒಂದು ಮೂಲವೇ ಗ್ರಾಮ ಸಭಾ ಎಂದಿದೆ. ಹಾಗೆಯೇ ಗ್ರಾಮ, ಮಧ್ಯಂತರ ಮತ್ತು ಜಿಲ್ಲಾ ಮಟ್ಟದಲ್ಲಿ ಏಕರೂಪವಾದ ಮೂರು ಹಂತದ ಪಂಚಾಯತಿ ವ್ಯವಸ್ಥೆಗೆ ಅವಕಾಶ ಮಾಡಿಕೊಟ್ಟಿದೆ. ಆರ್ಥಿಕ ಅಬಿವೃದ್ಧಿಯ ಕುರಿತಂತೆ ೧೨ ಅಂಶಗಳು ಈ ಕಾಯಿದೆಯಲ್ಲಿವೆ. ಒಟ್ಟಾರೆಯಾಗಿ ಈ ಕಾಯಿದೆ ಗ್ರಾಮ ಮಟ್ಟದಿಂದ ಹಿಡಿದು ಜಿಲ್ಲಾ ಮಟ್ಟದವರೆಗೆ ಅಧಿಕಾರ ವಿಕೇಂದ್ರೀಕರಣ ಮತ್ತು ಆರ್ಥಿಕ ಅಭಿವೃದ್ಧಿಗೆ ಸಂಬಂಧಿಸಿದಂತೆ ಹಲವಾರು ಬದಲಾವಣೆಗಳನ್ನು ತಿದ್ದುಪಡಿಯಲ್ಲಿ ಮಾಡಲಾಗಿದೆ. ಹಾಗಾಗಿ ಈ ತಿದ್ದುಪಡಿಯು ಮುಖ್ಯವೆನಿಸುತ್ತದೆ.

ಅದೇ ರೀತಿಯಾಗಿ ಈ ಒಂದು ಲೇಖನದಲ್ಲಿ ಕಾಯ್ದೆಯ ಪ್ರಮುಖ ಲಕ್ಷಣಗಳು, ಉದ್ದೇಶಗಳು, ಕೂಲಿ ಕಾರ್ಮಿಕರ ಹಕ್ಕುಗಳು ಮತ್ತು ಅಧಿಕಾರಗಳು, ನೋಂದಣಿ ಕೆಲಸಕ್ಕಾಗಿ ಅರ್ಜಿ ಮತ್ತು ಉದ್ಯೋಗ ನೀಡಿಕೆ, ಕಡ್ಡಾಯವಾಗಿ ಪಾಲಿಸಬೇಕಾದ ನಿಯಮಗಳು, ಯೋಜನೆಯ ರಕ್ಷಣೆ, ಕಾಮಗಾರಿಗಳ ಆಯ್ಕೆ, ಕಾರ್ಯ ತಂಡಗಳ ರಚನೆ, ಯೋಜನಾ ಅನುಷ್ಠಾನ ವ್ಯವಸ್ಥೆ, ಗ್ರಾಮ ಪಂಚಾಯ್ತಿಯ ಜವಾಬ್ದಾರಿ ಮತ್ತು ಅಧಿಕಾರ, ಅಧಿನಿಯಮವನ್ನು ಕಾರ್ಯಗತಗೊಳಿಸುವಲ್ಲಿ ಗ್ರಾಮ ಪಂಚಾಯ್ತಿಗಳ ಪಾತ್ರ, ತಾಲೂಕು ಪಂಚಾಯಿತಿಯ ಜವಾಬ್ದಾರಿಗಳು, ಜಿಲ್ಲಾ ಪಂಚಾಯ್ತಿಯಿಂದ ಅನುಷ್ಠಾನ ವ್ಯವಸ್ಥೆ ಮತ್ತು ಜವಾಬ್ದಾರಿ ಇನ್ನೂ ಮುಂತಾದ ವಿಷಯಗಳ ಬಗ್ಗೆ ಮಾಹಿತಿಯನ್ನು ಒದಗಿಸುತ್ತದೆ. ಹಾಗೆಯೇ ಸರ್ಕಾರೇತರ(ಎನ್.ಜಿ.ಒ) ಸಂಸ್ಥೆಗಳ ಪಾತ್ರ ಎಂಬ ಶೀರ್ಷಿಕೆಯ ಅಡಿಯಲ್ಲಿ "ಈ

ಯೋಜನೆಯಡಿ ಕೆಲಸ ಮಾಡುವ ಕಾರ್ಮಿಕರ ಹಕ್ಕುಗಳ ಸಂರಕ್ಷಣೆ, ಸಾಮರ್ಥ್ಯಾಭಿವೃದ್ಧಿ, ಸಾಮಾಜಿಕ ಲೆಕ್ಕ ಪರಿಶೋಧನೆ ಇತ್ಯಾದಿ ಪ್ರಕ್ರಿಯೆಗಳ ಮೇಲ್ವಿಚಾರಣೆ ಅನುಕೂಲವಾಗುವಂತೆ ಪಾಲುದಾರರಾಗಿ ಸರ್ಕಾರೇತರ ಸಂಸ್ಥೆಗಳು ಭಾಗವಹಿಸಬಹುದಾಗಿದೆ. ಆದರೆ ಯಾವುದೇ ಪಂಚಾಯ್ತಿಗಳ ಅಧಿಕಾರಿಗಳು ಮತ್ತು ಚುನಾಯಿತ ಸದಸ್ಯರುಗಳು ಈ ಯೋಜನೆಯಲ್ಲಿ ಸರ್ಕಾರೇತರ ಸಂಸ್ಥೆಗಳ ಸಹಭಾಗಿತ್ವಕ್ಕೆ ಅವಕಾಶವನ್ನು ಮಾಡಿಕೊಟ್ಟಿಲ್ಲ(ಪುಟ.೧೩೧). ಈ ಯೋಜನೆಯು ಗ್ರಾಮೀಣ ಪ್ರದೇಶದ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯನ್ನು ಸಾಧಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ ಎನ್ನುವಂತಹ ಅಂಶಗಳ ಮೇಲೆ ಈ ಲೇಖನವು ಬೆಳಕು ಚಲ್ಲುತ್ತದೆ. ಹಾಗೆಯೇ ಅಧ್ಯಯನಕ್ಕೆ ಪೂರಕವಾದ ಅಂಶಗಳು ಈ ಕೃತಿಯಲ್ಲಿ ಕಂಡುಬರುತ್ತವೆ. ಒಟ್ಟಾರೆಯಾಗಿ ಈ ಕೃತಿಯು ಲಿಂಗ ಸಂಬಂಧಿ ಆಯಾಮಗಳ ನೆಲೆಯಲ್ಲಿ ರಚನೆಯಾಗದಿದ್ದರೂ ಸಹ ಒಟ್ಟಾರೆ ಯೋಜನೆಯ ಸಾಧಕ-ಬಾದಕಗಳನ್ನು ತಿಳಿಸಿಕೊಡುತ್ತದೆ.

ನ್ಯಾಷನಲ್ ಬುಕ್ ಟ್ರಸ್ಟ್ ಇಂಡಿಯಾ(೨೦೦೬) ಅವರು ಪ್ರಕಟಿಸಿದ ಉದ್ಯೋಗ ಖಾತರಿ ಕಾಯ್ದೆ ಒಂದು ಕಿರು ಹೊತ್ತಿಗೆ ಎಸ್.ಸೇತುರಾವ್ ಅವರು ಈ ಸಂಚಿಕೆಯಲ್ಲಿ ಉದ್ಯೋಗ ಖಾತರಿ ಯೋಜನೆ, ಕೆಲಸಗಾರರ ಹಕ್ಕುಗಳು, ನಿರುದ್ಯೋಗ ಭತ್ಯೆ, ಈ ಯೋಜನೆಯ ಪಾರದರ್ಶಕತೆ ಕುರಿತು ವಿಶ್ಲೇಷಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಅಧ್ಯಯನದ ಅನುಕೂಲಕ್ಕಾಗಿ ಇಲ್ಲಿನ ಸಮಗ್ರ ಮಾಹಿತಿಯನ್ನು ಬಳಸಿಕೊಳ್ಳಲಾಗಿದೆ. ೨೦೦೫ರಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆ ಒಂದು ಅನುಶಾಸನವಾಗಿ ಪ್ರಕಟಗೊಂಡ ನಂತರ ಅದರ ಕಾಯ್ದೆ ಕಾನೂನುಗಳ ಕುರಿತಾಗಿ ಮಹತ್ವದ ವಿಚಾರಗಳು ಈ ಕೃತಿಯಲ್ಲಿ ಅಡಕಗೊಂಡಿವೆ. ಈ ಕಾಯ್ದೆಯ ಪ್ರಕಾರ ಯಾವ ವಯಸ್ಕನೇ ಆಗಲಿ ಅರ್ಜಿ ಸಲ್ಲಿಸಿದ ೧೫ ದಿನಗಳ ಒಳಗಾಗಿ ಉದ್ಯೋಗ ಪಡೆಯುವ ಹಕ್ಕು ಪಡೆಯುತ್ತಾನೆ. ಅದರೊಂದಿಗೆ ಕೆಲವೊಂದು ಇತಿಮಿತಿಗಳಿಗೆ ಒಳಪಟ್ಟಿರಬೇಕಾಗುತ್ತದೆ. ಈ ಯೋಜನೆಯು ಅಸಂಘಟಿತ ಕೆಲಸಗಾರರ ಹಕ್ಕನ್ನು ರಕ್ಷಿಸುವ ಒಂದು ಸಾಧನವಾಗಿ ಮಾರ್ಪಟ್ಟಿದೆ. ಗ್ರಾಮೀಣ ಸಮಾಜದ ಸಾಮಾಜಿಕ ವ್ಯವಸ್ಥೆಯಲ್ಲಿ ಪಕ್ಷಪಾತವಿಲ್ಲದ ಸಮಾನತೆಯ ದ್ಯೋತಕವಾಗಿದೆ. ಹೈದ್ರಾಬಾದ್-ಕರ್ನಾಟಕದ ಗ್ರಾಮೀಣ ಭಾಗದ ಸ್ತ್ರೀ-ಪುರುಷರಿಗೆ ಉದ್ಯೋಗ ನೀಡುವ ಹಿನ್ನೆಲೆಯಲ್ಲಿ ಅವರ ಕುಟುಂಬವನ್ನು ಆರ್ಥಿಕತೆಯ ದೃಷ್ಟಿಯಿಂದ ಭದ್ರತೆ ಒದಗಿಸಲು ಈ ಯೋಜನೆಯನ್ನು ಭಾರತ ಸರಕಾರ ರೂಪಿಸಿದೆ. ಅದರಲ್ಲೂ ಮುಖ್ಯವಾಗಿ ಸ್ತ್ರೀ ಸಬಲೀಕರಣದ ಕಡೆಗೆ ಈ ಯೋಜನೆ ಮಹತ್ತರವಾದ ಹೆಜ್ಜೆಯನ್ನು ಇಟ್ಟಿದೆ. ಈ ಕೃತಿಯು ಸಾಮಾನ್ಯವಾಗಿ ಸರಕಾರವು ರೂಪಿಸಿದ ಹಲವು ನಿಯಾಮವಳಿಗಳನ್ನು ಹೊಂದಿದೆ. ಉದ್ಯೋಗ ಖಾತರಿಗೋಸ್ಕರ ಸಾಮಾನ್ಯ ಜನರು ಕೇಳುವ ಪ್ರಶ್ನೆಗಳು ಉದ್ಯೋಗ ಖಾತ್ರಿ ಯೋಜನೆಯ ಅನುಷ್ಠಾನ, ಕೆಲಸಗಾರರ ಹಕ್ಕುಗಳು, ನಿರುದ್ಯೋಗ ಭತ್ಯೆ, ಅಧಿಕಾರಿ ವರ್ಗಗಳ ಕಾರ್ಯಚಟುವಟಿಕೆ ಮತ್ತು ಅವರ ಹೊಣೆಗಾರಿಕೆ ಈ ಯೋಜನೆಯ ಪಾರದರ್ಶಕತೆ ಹೀಗೆ ಅನೇಕ ಅಂಶಗಳ ಕುರಿತಾಗಿ ಈ ಕೃತಿಯಲ್ಲಿ ಚರ್ಚಿಸಲಾಗಿದೆ.

ಡಾ.ಎಚ್.ಆರ್.ಕೃಷ್ಣಯ್ಯಗೌಡ ಅವರು ಬರೆದ ಗ್ರಾಮೀಣ ಅಭಿವೃದ್ಧಿ ಮತ್ತು ಸಹಕಾರ ಎಂಬ ಕೃತಿಯು ಗ್ರಾಮೀಣ ಬದುಕಿನ ಚೇತರಿಕೆಗಾಗಿ ಸರಕಾರ ರೂಪಿಸಿದ ಹಲವು ಯೋಜನೆಗಳಲ್ಲಿ ಒಂದಾದ ರಾಷ್ಟ್ರೀಯ ಉದ್ಯೋಗ ಖಾತರಿ ಕುರಿತಾಗಿ ಇಲ್ಲಿ ಪ್ರಸ್ತಾಪಿಸಲಾಗಿದೆ. ಈ ಯೋಜನೆಯ ಧ್ಯೇಯೋದ್ದೇಶಗಳು, ಮುಖ್ಯ ಲಕ್ಷಣಗಳು ಹಾಗೂ ಇದರಲ್ಲಿ ರಾಜ್ಯ ಮತ್ತು ಕೇಂದ್ರ ಸರಕಾರದ ನಿರ್ವಹಣೆಯ ಕುರಿತಾಗಿ ಪ್ರಮುಖವಾದ ಅಂಶಗಳು ಇಲ್ಲಿ ಚರ್ಚಿಸಲಾಗಿದೆ. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯು ಉದ್ಯೋಗ ಸೃಷ್ಟಿ, ಆದಾಯಗಳಿಕೆ, ಸಾಮರ್ಥ್ಯದ ಹೆಚ್ಚಳ ಮತ್ತು ಬಡವರ್ಗಗಳ ಜನರ ಸಬಲೀಕರಣದಲ್ಲಿ ಗಮನಾರ್ಹವಾದ ಪ್ರಗತಿಯನ್ನು ಹೇಗೆ ಸಾಧಿಸಿದೆ ಎಂಬ ವಿಚಾರಗಳನ್ನು ಈ ಕೃತಿ ಒಳಗೊಂಡಿದೆ. ಇಲ್ಲಿ ಉದ್ಯೋಗಾವಕಾಶಗಳ ಹೆಚ್ಚಳ, ವೇತನ ಗಳಿಕೆಯ ಸಾಮರ್ಥ್ಯವನ್ನು ವಿಸ್ತರಿಸುವಿಕೆ, ಬಡವರ್ಗಗಳ ಜನರ ಹಣಕಾಸಿನ ಅಂತರ್ವೇಶನ, ಉದ್ಯೋಗವನ್ನು ಪಡೆಯುವ ಹಕ್ಕು ಕೇಂದ್ರ ಸರಕಾರದ ನಿಧಿ ನೀಡಿಕೆ ನಿರ್ದಿಷ್ಟ ಗ್ರಾಮೀಣ ಅಭಿವೃದ್ಧಿ ಚಟುವಟಿಕೆಗಳ ಕುರಿತು ಇಲ್ಲಿ ನಿರೂಪಿಸಲಾಗಿದೆ.

ಅಬ್ದುಲ್ ನಜೀರ್‌ಸಾಬ್ ರಾಜ್ಯ ಗ್ರಾಮೀಣ ಅಭಿವೃದ್ಧಿ ಸಂಸ್ಥೆ ಪ್ರಕಟಿಸಿದ ದುಡಿಯುವ ಕೈಗಳಿಗೆ ಉದ್ಯೋಗ ಎಂಬ ಕೈಪಿಡಿಯಲ್ಲಿ(೨೦೦೬) ದುಡಿಯುವ ಕೈಗಳಿಗೆ ಉದ್ಯೋಗ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆ-೨೦೦೫ರ ಲೇಖನವು ಉದ್ಯೋಗ ಒದಗಿಸುವುದು, ಜನರ ಆರ್ಥಿಕ ಸಮಾನತೆಯನ್ನು ಕಾಪಾಡುವುದು, ಬಡವರ ಅಭಿವೃದ್ಧಿ ಮತ್ತು ಬಡತನಕ್ಕೆ ಕಾರಣಗಳು, ಕಾಮಗಾರಿಗಳ ಆಯ್ಕೆ ಮತ್ತು ಅನುಷ್ಠಾನ ಕುರಿತು ನೀಡುವ ಮಾಹಿತಿಯನ್ನು ಅಧ್ಯಯನಕ್ಕಾಗಿ ಬಳಸಿಕೊಳ್ಳಲಾಗಿದೆ. ಈ ಕೈಪಿಡಿಯು ಪಂಚಾಯತ್ ರಾಜ್ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳ ಹಾಗೂ ಸಿಬ್ಬಂದಿಗೆ ಉದ್ಯೋಗ ಖಾತರಿ ಯೋಜನೆ ಕುರಿತು ಮಾಹಿತಿ ನೀಡುವುದು, ಅದರ ಉದ್ದೇಶ, ಅನುಷ್ಠಾನ ಹಾಗೂ ಮಹತ್ವ ಕುರಿತಾಗಿ ಜನ ಸಾಮಾನ್ಯರಿಗೆ ತಿಳಿಯಪಡಿಸಲು ಇಲ್ಲಿ ಅನೇಕ ವಿಚಾರಗಳನ್ನು ಪ್ರಸ್ತಾಪಿಸಲಾಗಿದೆ. ಗ್ರಾಮೀಣ ಜನರ ಬದುಕನ್ನು ಹಸನಾಗಿಸಲು ಸರಕಾರವು ಈ ಹಿಂದೆ ಅನೇಕ ಯೋಜನೆಗಳನ್ನು ರೂಪಿಸಿದ್ದರೂ ಅವುಗಳು ಕೇವಲ ಹೆಸರಿಗೆ ಮಾತ್ರ ಯೋಜನೆಗಳಾಗಿದ್ದವು. ಆದರೆ ೨೦೦೫ರಲ್ಲಿ ಸರಕಾರವು ಗಂಭೀರವಾಗಿ ಚರ್ಚಿಸಿ ಗ್ರಾಮೀಣ ಭಾಗದ ಕಡು ಬಡವರಿಗೆ ಕನಿಷ್ಠ ಕೂಲಿಯನ್ನು ಒದಗಿಸಲು ಶಾಸನಬದ್ಧವಾದ ಈ ಒಂದು ಯೋಜನೆಯನ್ನು ರೂಪಿಸಿದೆ. ಈ ಯೋಜನೆಯು ಎಂತಹ ಫಲಾನುಭವಿಗಳಿಗೆ ನೀಡಬೇಕು, ಉದ್ಯೋಗಕ್ಕಾಗಿ ನೋಂದಣಿ ಪ್ರಕ್ರಿಯೆ ಗ್ರಾಮ ಪಂಚಾಯಿತಿ ವತಿಯಿಂದ ಉದ್ಯೋಗ ಕಾರ್ಡ್ ಹಾಗೂ ಪಾಸ್ ಪುಸ್ತಕ ವಿತರಣೆ, ಉದ್ಯೋಗ ನಿರ್ವಹಣೆ, ಕೂಲಿ ಪಾವತಿ, ನಿಧಿ ನಿರ್ವಹಣೆ ಹೀಗೆ ಅನೇಕ ವಿಚಾರಗಳು ಇಲ್ಲಿ ನಿರೂಪಿತವಾಗಿವೆ. ಅಲ್ಲದೆ ಗ್ರಾಮ ಸಭೆ, ಗ್ರಾಮ ಪಂಚಾಯಿತಿ, ತಾಲೂಕ ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಹಾಗೂ ಪಂಚಾಯತ್ ರಾಜ್ ಸಂಸ್ಥೆಗಳ ಪಾತ್ರವನ್ನು ಇಲ್ಲಿ ಸಂಕ್ಷಿಪ್ತವಾಗಿ

ನೀಡಲಾಗಿದೆ. ಗ್ರಾಮೀಣ ಜನರ ಸಾಮಾಜಿಕ ಭದ್ರತೆ, ನಿರುದ್ಯೋಗ ಭತ್ಯೆ, ಹಣಕಾಸಿನ ನಿರ್ವಹಣೆಗಳ ಕುರಿತಾಗಿ ಇಲ್ಲಿ ನಿರೂಪಣೆಗೊಂಡಿವೆ. ದುಡಿಯುವ ಕೈಗಳಿಗೆ ಉದ್ಯೋಗ ಒದಗಿಸುವ ಮೂಲಕ ಗ್ರಾಮೀಣ ಪ್ರದೇಶಗಳಲ್ಲಿ ಆರ್ಥಿಕ ಮತ್ತು ಸಾಮಾಜಿಕ ಭದ್ರತೆ ಒದಗಿಸುವ ಹಿನ್ನೆಲೆಯಲ್ಲಿ ಈ ಯೋಜನೆ ರೂಪಿತಗೊಂಡಿದೆ. ಅದರ ಪ್ರತಿಯೊಂದು ರೂಪರೇಷೆಯನ್ನು ಈ ಕೈಪಿಡಿಯಲ್ಲಿ ಹೊಂದಿದೆ.

ಅರಳಿ ನಾಗರಾಜ ಅವರ ಸಂಪಾದಕತ್ವದಲ್ಲಿ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಪ್ರಕಟಿಸಿದ 'ಜನಸಾಮಾನ್ಯರಿಗಾಗಿ ಕಾನೂನು ಮಾಹಿತಿ' ಕೃತಿಯಲ್ಲಿ ೨೦೦೫ರ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಎಂಬ ಲೇಖನವು ಉದ್ಯೋಗ ಖಾತರಿಯ ಬಗೆಗೆ ಗ್ರಾಮೀಣ ಜನರಿಗೆ ಕೇಂದ್ರ ಸರಕಾರವು ನಿಗದಿಗೊಳಿಸಿದ ದಿನಗೂಲಿ, ವರ್ಷಕ್ಕೆ ಕನಿಷ್ಠ ಒಂದು ನೂರು ದಿನಗಳ ಕೂಲಿ ಒದಗಿಸುವುದರ ಕುರಿತು ಹಲವು ಪ್ರಮುಖ ಅಂಶಗಳನ್ನು ಕುರಿತು ಈ ಕೃತಿ ಬೆಳಕು ಚಲ್ಲುತ್ತದೆ. ಗ್ರಾಮೀಣ ಪ್ರದೇಶದಲ್ಲಿ ಬಡ ಕುಟುಂಬಗಳ ಬದುಕಿನ ಭದ್ರತೆಗಾಗಿ ದೈಹಿಕ ಕೆಲಸ ಮಾಡಲಿಚ್ಛಿಸುವ ಪ್ರಾಪ್ತ ವಯಸ್ಕ ಸದಸ್ಯರಿಗೆ ಕೆಲಸ ನೀಡಿ ಕುಟುಂಬದ ಆರ್ಥಿಕತೆಗೆ ಸಹಾಯಕವಾಗುವ ಹಿನ್ನೆಲೆಯಲ್ಲಿ ಸರಕಾರದ ನಿಯಮಾವಳಿ ಕುರಿತಾಗಿ ಇಲ್ಲಿ ಸಾದರಪಡಿಸಲಾಗಿದೆ. ದೇಶದಲ್ಲಿ ಗ್ರಾಮೀಣ ಭಾಗದ ನಿರುದ್ಯೋಗ ಸಮಸ್ಯೆಯನ್ನು ದೂರ ಮಾಡಲು ಕೇಂದ್ರ ಸರಕಾರ ಹಾಗೂ ರಾಜ್ಯ ಸರಕಾರದ ಸಹಯೋಗದೊಂದಿಗೆ ಈ ಯೋಜನೆ ಬಡ ಕುಟುಂಬಗಳಿಗೆ ಭದ್ರವಾದ ನೆಲೆಯನ್ನು ಹೇಗೆ ರೂಪಿಸುತ್ತದೆ ಎಂಬುದರ ಕುರಿತು ಈ ಕೃತಿ ಮಹತ್ತರವಾದ ವಿಚಾರವನ್ನು ಪ್ರಸ್ತುತಪಡಿಸುತ್ತದೆ.

ಜಿಲ್ಲಾ ಪಂಚಾಯಿತಿ ಗುಲ್ಬರ್ಗಾ-೨೦೦೮ರಲ್ಲಿ ಪ್ರಕಟಿಸಿದ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಕರ್ನಾಟಕ ಸರಕಾರದ ಆದೇಶಗಳು, ಸುತ್ತೋಲೆಗಳು ಮತ್ತು ಮಾರ್ಗಸೂಚಿಗಳ ಕುರಿತಾಗಿ ಮಹತ್ವದ ಕೈಪಿಡಿಯನ್ನು ಪ್ರಕಟಿಸಿದೆ. ಇಲ್ಲಿ ಯೋಜನೆಯ ಉದ್ದೇಶ, ಪಾಲಿಸಬೇಕಾದ ಅಂಶಗಳು, ಕೆಲಸದ ವೇಳೆ ಇರಬೇಕಾದ ಸೌಕರ್ಯಗಳು, ಕೂಲಿಕಾರರ ಹಕ್ಕು, ಈ ಯೋಜನೆಯಡಿ ಕೈಗೊಳ್ಳಬಹುದಾದ ಕಾಮಗಾರಿಗಳು, ಕುಟುಂಬ ಉದ್ಯೋಗ ಚೀಟಿ, ಕೂಲಿ ಪಾವತಿ, ಕಾರ್ಮಿಕ ಆಯವ್ಯಯ, ಅನುಮೋದನೆ, ಸಾಮಾಜಿಕ ಲೆಕ್ಕ ಪರಿಶೋಧನೆ ಹಾಗೂ ಮಾಹಿತಿ ಹಕ್ಕು ಕುರಿತಾಗಿ ಅನೇಕ ಅಂಶಗಳು ಇದು ಒಳಗೊಂಡಿದೆ.

ಡಾ.ಮೀನಾಕ್ಷಿ ಬಾಳಿ ಅವರು ಬರೆದ 'ಕತ್ತಲಂಚಿನ ಕಿಡಿಗಳು'(ಆಗಸ್ಟ-೨೦೧೦) ಎಂಬ ಕೃತಿಯು ಹಲವಾರು ಲೇಖನಗಳನ್ನು ಒಳಗೊಂಡಿದೆ. ಇದರಲ್ಲಿರುವ ಬೆವರ ಸೋನೆಗೆ ಕಣ್ಣವಿಕ್ಕಿದವರ‍್ಯಾರು? ಎಂಬ ಲೇಖನವು ಉದ್ಯೋಗ ಖಾತ್ರಿಯ ಕುರಿತಾಗಿ ಹಲವು ಅಂಶಗಳನ್ನು ತಿಳಿಯಪಡಿಸುತ್ತಿದೆ. ಬಂಡವಾಳಶಾಹಿಗಳ ಖಾಸಗೀ ಸಂಸ್ಥೆಗಳ ಉಗಮ ಮತ್ತು ಕೈಗಾರಿಕೀಕರಣದಿಂದಾಗಿ ಜನಸಾಮಾನ್ಯರು ಕೆಲಸ ಕಳೆದುಕೊಂಡು, ತಮ್ಮ ಒಕ್ಕಲುತನದಿಂದ

ದೂರ ಸರಿಯುವಂತೆ ಆಗಿರುವುದು ಒಂದು ವಿಪರ್ಯಾಸದ ಸಂಗತಿಯೇ ಸರಿ. ಕೃಷಿ ಕೂಲಿ ಕಾರ್ಮಿಕರು ಬೀದಿಗೆ ಬಿದ್ದಿದ್ದಾರೆ. ಇಂತಹ ಹೊತ್ತಿನಲ್ಲಿ ಕೇಂದ್ರದಲ್ಲಿರುವ ಸರಕಾರ ಗ್ರಾಮೀಣ ಪ್ರದೇಶದ ಜನತೆಗಾಗಿ ೨೦೦೫ರಲ್ಲಿ ಉದ್ಯೋಗ ಖಾತರಿ ಯೋಜನೆಯನ್ನು ಜಾರಿಗೆ ತಂದಿದೆ. ದುಡಿಯುವ ಕೈಗಳಿಗೆ ಕೆಲಸವೆಂಬ ಮಹತ್ವದ ಯೋಜನೆ ಇದಾಗಿದೆ. ಗ್ರಾಮೀಣ ಪ್ರದೇಶದ ಬಡವ, ಮಧ್ಯಮ ಹಾಗೂ ಶ್ರೀಮಂತ ಎನ್ನದೇ ಪ್ರತಿ ಮನೆಗೂ ವರ್ಷದಲ್ಲಿ ನೂರು ದಿವಸ ಕೆಲಸ ನೀಡಬೇಕು. ಗಂಡು-ಹೆಣ್ಣು ಎನ್ನದೇ ಸಮಾನ ವೇತನವೆಂಬ ಈ ಕಾಯಿದೆ ನಿಜಕ್ಕೂ ಅಭಿನಂದನಿಯ. ಈ ಹಿಂದಿನ ಯೋಜನೆಗಳಲ್ಲಿ ಸ್ತ್ರೀ-ಪುರುಷರೆಂಬ ತಾರತಮ್ಯವಿತ್ತು. ಆದರೆ ಈ ತಾರತಮ್ಯವನ್ನು ಈ ಕಾಯಿದೆ ಹೋಗಲಾಡಿಸಿದೆ. ದೇಶದಾದ್ಯಂತ ೨೦೦ ಜಿಲ್ಲೆಗಳಲ್ಲಿ ಜಾರಿಗೆ ಬಂದ ಈ ಯೋಜನೆ ಕರ್ನಾಟಕದ ಸಂದರ್ಭದಲ್ಲಿ ಪ್ರಾರಂಭದ ದಿನಗಳಲ್ಲಿ ಐದು ಜಿಲ್ಲೆಗಳನ್ನು ಒಳಗೊಂಡಿತ್ತು. ಏಕೆಂದರೆ ಗ್ರಾಮೀಣ ಭಾಗದ ಜನಸಾಮಾನ್ಯರು ನಗರ ಪ್ರದೇಶಗಳಿಗೆ ವಲಸೆ ಹೋಗದೆ ತಮ್ಮ ಊರಿನಲ್ಲೇ ದುಡಿಮೆ ಮಾಡುತ್ತಾ ಆರ್ಥಿಕತೆಯಿಂದ ಕನಿಷ್ಟ ಪಕ್ಷ ಸಬಲರಾಗುವಂತೆ ಈ ಯೋಜನೆ ರೂಪಿತವಾಗಿದೆ ಎಂದು ಈ ಲೇಖನದಲ್ಲಿ ತಿಳಿಸಲಾಗಿದೆ.

ಜಿಲ್ಲಾ ಪಂಚಾಯತ್ ರಾಯಚೂರು, ಉದ್ಯೋಗ ಖಾತರಿ ಯೋಜನೆಯ ಅಡಿಯಲ್ಲಿ ನಿರ್ವಹಿಸಿದ ಕೆಲಸ ಕಾರ್ಯಗಳ ಮಹತ್ವದ ವಿಚಾರಗಳು ಈ ಕೈಪಿಡಿಯಲ್ಲಿ ಅಡಗಿವೆ. ಪಂಚಾಯಿತಿಗಳ ಅಡಿಯಲ್ಲಿ ಉದ್ಯೋಗ ಖಾತರಿ ಯೋಜನೆ ನಿರ್ವಹಿಸುವುದರ ಮೂಲಕ ಸಾಮಾನ್ಯ ಜನರಿಗೆ ಕೂಲಿ ಕೆಲಸ ನೀಡಿ ಅವರನ್ನು ಆರ್ಥಿಕವಾಗಿ ಸಬಲರನ್ನಾಗಿಸುವ ಮಹತ್ವದ ಯೋಜನೆ ಇದಾಗಿದೆ.

ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗೆ ಸಂಬಂಧಿಸಿದಂತೆ "ಯೋಜನಾ" ವಿಶೇಷ ಸಂಚಿಕೆಯಲ್ಲಿ (೨೦೦೮ ಆಗಸ್ಟ್ ಮಾಸಪತ್ರಿಕೆ) 'ಕರ್ನಾಟಕದಲ್ಲಿ ಉದ್ಯೋಗ ಖಾತರಿ ಯೋಜನೆ' ಈಶ್ವರ ದೈತೋಟ ಅವರ ಕರ್ನಾಟಕದಲಿ ಉದ್ಯೋಗ ಖಾತ್ರಿ ಯೋಜನೆ ಸಾಧಕ-ಬಾಧಕಗಳನ್ನು ಕುರಿತು ಹೇಳಿದ್ದಾರೆ. ಈ ಯೋಜನೆಯು ಫಲಾನುಭವಿಗಳಿಗೆ ಎಷ್ಟರ ಮಟ್ಟಿಗೆ ತಲುಪಿದೆ ಎಂಬುದನ್ನು ವಿಶ್ಲೇಷಿಸಿದ್ದಾರೆ. ಅಲ್ಲದೆ ಈ ಯೋಜನಾ ಸಂಚಿಕೆಯು ಯೋಜನೆಯ ಪಾರದರ್ಶಕತೆ, ಅಪಾರ ಸಾಮರ್ಥ್ಯ, ಜನರ ಭರವಸೆ, ಈ ಕಾಯಿದೆ ಜಾರಿಗೆ ಇರುವ ತೊಡಕುಗಳನ್ನು ಕುರಿತು ಸಮಗ್ರ ಮಾಹಿತಿಯನ್ನು ನೀಡುತ್ತದೆ.

ಉದ್ಯೋಗ ಖಾತ್ರಿ ಕುರಿತಾಗಿ ಒಟ್ಟು ಒಂಬತ್ತು ಲೇಖನಗಳನ್ನು ಹಲವು ಮಂದಿ ವಿದ್ವಾಂಸರು ಬರೆದಿದ್ದಾರೆ. ದೇಶದ ಅನೇಕ ರಾಜ್ಯಗಳಲ್ಲಿ ಈ ಯೋಜನೆಯ ಕುರಿತಾಗಿರುವ ಸ್ಥಿತಿ ಮತ್ತು ದುಃಸ್ಥಿತಿ ಕುರಿತಾಗಿ ಹಲವು ಅಂಶಗಳನ್ನು ಪ್ರಸ್ತಾಪಿಸಿದ್ದಾರೆ. ಓರಿಸ್ಸಾ, ಆಂಧ್ರ ಪ್ರದೇಶ ಇನ್ನೂ ಮುಂತಾದ ರಾಜ್ಯಗಳಲ್ಲಿರುವ ಈ ಉದ್ಯೋಗ ಖಾತರಿ ಯೋಜನೆಯ ಕುರಿತು ಇಲ್ಲಿ ಮಾಹಿತಿ ನೀಡಿದ್ದಾರೆ. ಆದರಲ್ಲೂ ಈಶ್ವರ ದೈತೋಟ ಅವರು ಕರ್ನಾಟಕದ ಸಂದರ್ಭದಲ್ಲಿ ಈ ಯೋಜನೆಯ ಪ್ರಗತಿಯ ಬಗ್ಗೆ ಸಮಗ್ರವಾದ ಮಾಹಿತಿಯನ್ನು ನೀಡುವಲ್ಲಿ

ಪ್ರಯತ್ನಿಸಿದ್ದಾರೆ. ೧೮ ವರ್ಷ ಮೀರಿದ ದೈಹಿಕವಾಗಿ ಶಕ್ತರಾದ ಸ್ತ್ರೀ-ಪುರುಷರಿಗೆ ಕುಟುಂಬವೊಂದಕ್ಕೆ ವರ್ಷದಲ್ಲಿ ನೂರು ದಿನಗಳ ಕೆಲಸ ನೀಡಿ ಜೀವನ ಭದ್ರತೆ ಒದಗಿಸಲು ಈ ಯೋಜನೆ ರೂಪಿತವಾಗಿದೆ. ಅದರ ಪ್ರತಿಯೊಂದು ಚಹರೆಯನ್ನು ಲೇಖಕರು ಗಂಭೀರವಾಗಿ ಗಮನಿಸಿ ಈ ಲೇಖನದಲ್ಲಿ ಪ್ರಸ್ತಾಪಿಸಿದ್ದಾರೆ. ಗ್ರಾಮೀಣ ಬಡ ಜನರ ಜೀವನ ಭದ್ರತೆಗಾಗಿ ಅವರು ಕೆಲಸಕ್ಕೆ ಬೇಡಿಕೆ ಸಲ್ಲಿಸಿದಾಗ ಅವರಿಗೆ ಕೂಲಿ ಒದಗಿಸಬೇಕೆಂಬುದು ಕಾರ್ಯಕ್ರಮದ ಮೂಲ ಉದ್ದೇಶ. ಜೊತೆಗೆ ಸಮರ್ಪಕವಾದ ಕಾಮಗಾರಿಗಳನ್ನು ಆಯ್ಕೆ ಮಾಡುವುದರ ಮೂಲಕ ಸಮುದಾಯದ ಮತ್ತು ವೈಯಕ್ತಿಕ ಆಸ್ತಿಗಳು ರೂಪಿತಗೊಂಡು ಸ್ಥಳೀಯ ಸಂಪತ್ತು ಮತ್ತು ಸೌಲಭ್ಯಗಳು ಊರ್ಜಿತಗೊಳ್ಳಬೇಕೆಂಬ ಮುನ್ನೆಚ್ಚರಿಕೆಯು ಇದರಲ್ಲಿದೆ. ನೀರು ಮೂಲಗಳ ಹೂರಣ, ಕಾಡು ಬೆಳೆಸುವಿಕೆ ಕಾಮಗಾರಿಗಳಿಂದ ಪರಿಸರದ ಮೇಲೆ ಉಂಟಾಗುವ ಸತ್ಪರಿಣಾಮ ಹೀಗೆ ಅನೇಕ ವಿಚಾರಗಳ ಜೊತೆಗೆ ಮಹಿಳೆಯರ ಆರ್ಥಿಕ ಸಬಲೀಕರಣ, ಸಂಕಷ್ಟ ಕಾಲದ ವಲಸೆಯಿಂದುಂಟಾಗುವ ಮಾನಸಿಕ ಒತ್ತಡದ ನಿವಾರಣೆ ಮುಂತಾದ ಮಹತ್ವದ ವಿಚಾರಗಳ ಕುರಿತಾಗಿ ಈ ಯೋಜನೆ ತುಂಬಾ ಫಲಕಾರಿಯಾಗಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕುಟುಂಬಗಳ ಒಡೆತನದ ಇಂದಿರಾ ಆವಾಸ, ಭೂ ಸುಧಾರಣಾ ಫಲಾನುಭವಿಗಳ, ಬಡತನ ರೇಖೆಗಿಂತ ಕೆಳಗಿನ ಕುಟುಂಬದವರ ಜಮೀನಿನ ಅಭಿವೃದ್ಧಿಗೆ ಅಗತ್ಯ ಕೆಲಸಗಳನ್ನು ನೀಡಿ ಸಾಮಾಜಿಕ, ಆರ್ಥಿಕ, ಸಮಾನತೆಯನ್ನು ಕಾಪಾಡುವಲ್ಲಿ ಹೆಚ್ಚು ಅನುಕೂಲಕರವಾದ ಯೋಜನೆ ಇದಾಗಿದೆ ಎಂದು ಲೇಖಕರು ಇಲ್ಲಿ ಚರ್ಚಿಸಿದ್ದಾರೆ.

ಬಿ.ಕೆ.ಕಿರಣ್ಮಯಿ ಅವರು ಸಂಪಾದಿಸಿದ ಯೋಜನಾ ಎಂಬ ಮಾಸ ಪತ್ರಿಕೆಯನ್ನು ಮಾರ್ಚ್ ೨೦೧೨ರಲ್ಲಿ ಪ್ರಕಟಿಸಿದೆ. ಇದರಲ್ಲಿ ಎಲ್.ಮಹಮದ್ ಮನ್ಸೂರು ಅವರ ಲೇಖನವನ್ನು ಕನ್ನಡಕ್ಕೆ ರಶ್ಮಿ ಎಸ್ ಅವರು ಬಡತನ ನಿರ್ಮೂಲನೆ ಎಂಬ ಹಿನ್ನೆಲೆಯಲ್ಲಿ ಉದ್ಯೋಗ ಖಾತರಿ ಕುರಿತಾಗಿ ಮಹತ್ವದ ಲೇಖನವನ್ನು ಅನುವಾದಿಸಿದ್ದಾರೆ. ಜನಸಾಮಾನ್ಯರ ಬಡತನ ನಿರ್ಮೂಲನೆಗಾಗಿ ರೂಪಿತವಾದ ದಿನಗೂಲಿಯ ಯೋಜನೆ ಇದಾಗಿದೆ. ಕೌಶಲ್ಯ ಪೂರ್ಣವಾದ ಕೆಲವೊಂದು ಕೆಲಸಗಳಲ್ಲಿಯೂ ಈ ಯೋಜನೆ ಅನುಷ್ಠಾನಗೊಳ್ಳುತ್ತದೆ. ಇದು ಕೇವಲ ಉದ್ಯೋಗ ಸೃಷ್ಟಿಯ ಪ್ರಕ್ರಿಯೆಯಾಗದೇ, ಆದಾಯ ಮೂಲವನ್ನು ಸೃಷ್ಟಿಸುವಂತಿರುತ್ತದೆ. ಕೃಷಿಹೊಂಡ ನಿರ್ಮಾಣ, ತೊಟ್ಟಿಗಳ ನಿರ್ಮಾಣ, ಕಾಲುವೆಗಳ ನಿರ್ಮಾಣದಂತಹ ಕಾರ್ಯಗಳನ್ನು ಈ ಯೋಜನೆಯ ಅಡಿಯಲ್ಲಿ ಕೈಗೊಳ್ಳಬಹುದಾಗಿದೆ. ಇದರಿಂದಾಗಿ ಅಂತರ್ಜಲ ಹೆಚ್ಚಾಗುವುದು, ಕೊಳವೆ ಬಾವಿಗಳಲ್ಲಿ ನೀರು ಹೆಚ್ಚಾಗುವುದು, ಅದಕ್ಕೆ ಪೂರಕವಾಗಿ ನೀರಾವರಿ ಕೃಷಿಚಟುವಟಿಕೆ ಅಧಿಕವಾಗುವುದು, ಇದು ಬರಗಾಲ ನಿರ್ವಹಣೆಗೂ ಸಂಬಂಧ ಪಟ್ಟಿದೆ. ಈ ಅರ್ಥದಲ್ಲಿ ಉದ್ಯೋಗ ಸೃಷ್ಟಿಯ ಜತೆ, ಆದಾಯ ಹೆಚ್ಚುವರಿಗೂ ಈ ಯೋಜನೆ ಕಾರಣವಾಗಿದೆ. ಅಲ್ಲದೆ ಬರಗಾಲ ಸಂದರ್ಭದಲ್ಲಿ ಗ್ರಾಮೀಣ ಜನತೆಗೆ ಕೂಲಿ ಕೆಲಸಗಳನ್ನು ನೀಡಿ ಅವರ ಬಡತನವನ್ನು ದೂರ ಮಾಡಲು ಕೈಗೊಂಡ ಯೋಜನೆ ಇದಾಗಿದೆ ಎಂದು ಲೇಖಕರು ಇದರಲ್ಲಿ ಅನೇಕ ವಿಚಾರಗಳನ್ನು ನಿರೂಪಿಸಿದ್ದಾರೆ.

ಬಿ.ಕೆ.ಕಿರಣ್ಮಯಿ ಅವರು ಸಂಪಾದಿಸಿದ ಯೋಜನಾ ಎಂಬ ಮಾಸಪತ್ರಿಕೆಯು ಆಗಸ್ಟ್ ೨೦೧೨ರಂದು ಪ್ರಕಟಣೆಗೊಂಡಿದೆ. ನಿರ್ಮಲಾಬುಚ್ ಅವರು 'ಮಹಿಳಾ ಪರ ಯೋಜನೆ: ಸಂಕಷ್ಟಗಳು' ಎಂಬ ಲೇಖನವಿದೆ. ಭಾರತೀಯ ಮಹಿಳಾಪರ ಯೋಜನೆಗಳು ಎದುರಿಸುತ್ತಿರುವ ಸವಾಲು ಹಾಗೂ ಪರಿಣಾಮಗಳ ಕುರಿತಾಗಿ ಇಲ್ಲಿ ಚರ್ಚಿಸಲಾಗಿದೆ. ಕುಟುಂಬಕ್ಕೆ ಮಹಿಳೆಯರ ಕೊಡುಗೆ ಅಪಾರ. ಮನೆಯೊಳಗೆ ಮತ್ತು ಮನೆಯ ಹೊರಗಡೆ ಹಲವಾರು ರೀತಿಯಲ್ಲಿ ಪಾತ್ರವನ್ನು ನಿರ್ವಹಿಸುತ್ತಾಳೆ. ಆದರೆ ಮಹಿಳಾಪರ ರೂಪಿಸಿದ ಯೋಜನೆಗಳು ನಿಜವಾದ ನೆಲೆಯಲ್ಲಿ ಜಾರಿಗೊಳ್ಳುತ್ತಿಲ್ಲ. ಈ ಯೋಜನೆಗಳು ಮಹಿಳೆಯರನ್ನು ಅಬಲೆಯರು ಎಂದು ಅವರನ್ನು ಗುರುತಿಸದೆ. ಅವರ ಸಾಮರ್ಥ್ಯಕ್ಕೆ ಮತ್ತು ಸಮಾನ ದರ್ಜೆಯ ಪ್ರಜೆಯೆಂದು ಗುರುತಿಸಿ ರೂಪುಗೊಳ್ಳಬೇಕು. ಅವರ ವ್ಯಕ್ತಿಗತ ಮಟ್ಟದಲ್ಲಿ ಯೋಚಿಸಿ ರೂಪಿಸಬೇಕೆ ಹೊರತು ಕುಟುಂಬದ ಭಾಗವಾಗಿ ಅಲ್ಲ. ಆದರೂ ಮಹಿಳಾ ಹಿನ್ನಡೆಗೆ ಅಸಮರ್ಪಕ ಅಧಿಕಾರ ವಿಕೇಂದ್ರೀಕರಣ ಮತ್ತು ಯೋಜನಾ ಸಂಪನ್ಮೂಲ ಹಾಗೂ ಪಿತೃ ಪ್ರಧಾನ ಧೋರಣೆಯು ಅವರಿಗೆ ತಡೆಯಾಗಬಾರದು ಹೀಗೆ ಲೇಖಕಿಯರು ಮಹಿಳೆಯರ ಪರವಾಗಿರುವ ಯೋಜನೆಗಳ ಕುರಿತು ಇಲ್ಲಿ ತಿಳಿಸಿದ್ದಾರೆ.

ಬಿ.ಕೆ.ಕಿರಣ್ಮಯಿ ಅವರು ಸಂಪಾದಿಸಿದ ಯೋಜನಾ ಡಿಸೆಂಬರ್ ೨೦೧೨ ಅಭಿವೃದ್ಧಿ ಮಾಸ ಪತ್ರಿಕೆಯಲ್ಲಿ ಆರ್.ಎಂ.ಉನ್ನತಿಯವರು ಉದ್ಯೋಗ ಖಾತರಿ ಯೋಜನೆಯಿಂದ ಅರಣ್ಯೀಕರಣ ಎಂಬ ಲೇಖನವನ್ನು ಬರೆದಿದ್ದಾರೆ. ಬೀದರ್ ಜಿಲ್ಲೆಯ ಐದು ತಾಲೂಕುಗಳಲ್ಲಿ ಒಂದಾದ ಔರಾದ್ ತಾಲೂಕಿನಲ್ಲಿ ಹೆಚ್ಚು ಭಾಗ ಬರಡು ಪ್ರದೇಶ. ಇಂತಹ ಬರಡು ಭಾಗದಲ್ಲಿಯೂ ಹಸುರಿನ ಹೊದಿಕೆ ಹೊದಿಸುವ ಕಾರ್ಯವನ್ನು ಉದ್ಯೋಗಖಾತರಿ ಯೋಜನೆಯಿಂದ ಮಾಡಲಾಗಿದೆ. ಸಾಮಾಜಿಕ ಅರಣ್ಯ ಯೋಜನೆಯಡಿ ಗುರುತಿಸಲಾದ ಅರಣ್ಯ ಪ್ರದೇಶದಲ್ಲಿ ಸಸಿಗಳನ್ನು ನೆಡಲು, ಅದಕ್ಕಾಗಿ ಗುಂಡಿಗಳನ್ನು ತೋಡಲು ಇಲ್ಲಿ ಉದ್ಯೋಗ ಖಾತರಿ ಯೋಜನೆಯ ನೆರವನ್ನು ಪಡೆಯಲಾಗಿದೆ. ಇವುಗಳ ಮೂಲಕ ಜಿಲ್ಲೆಯಾದ್ಯಂತ ಐದು ಲಕ್ಷಕ್ಕಿಂತ ಅಧಿಕ ಸಸಿಗಳನ್ನು ನೆಡಲಾಗಿದೆ. ಇದರಿಂದ ಜನಪರ ಯೋಜನೆಗಳನ್ನು ಪ್ರಕೃತಿ ಸಂಪತ್ತು ವೃದ್ಧಿಸಲು ಬಳಸಬಹುದೆಂದು ಹೇಳಬಹುದು. ಹೀಗೆ ಔರಾದ್ ತಾಲೂಕನ್ನು ಹಸಿರು ನೆಲವನ್ನಾಗಿಸಲು ಪ್ರಯತ್ನಿಸಿದ ವಿಚಾರ ಇಲ್ಲಿ ನಿರೂಪಿಸಿದೆ.

ನಮ್ಮ ಮಾನಸ ಏಪ್ರಿಲ್-೨೦೧೨ ಸಂಪುಟ-೫, ಸಂಚಿಕೆ-೧೨ ತಿಂಗಳ ಮಾಸ ಪತ್ರಿಕೆಯಲ್ಲಿ ಶಾರದ ಗೋಪಾಲ ಅವರು ರಾಷ್ಟ್ರೀಯ ಉದ್ಯೋಗ ಖಾತರಿ ಮತ್ತು ಮಹಿಳಾ ಸಬಲೀಕರಣ ಎಂಬ ವಿಷಯದ ಮೇಲೆ ಮಹತ್ವದ ಲೇಖನವನ್ನು ಬರೆದಿದ್ದಾರೆ. ಈ ಯೋಜನೆಯಿಂದ ಗ್ರಾಮೀಣ ಭಾಗದ ಮಹಿಳೆಯರ ಬದುಕು ಆರ್ಥಿಕವಾಗಿ ಸಬಲರಾಗಲು ಹೇಗೆ ಸಹಾಯಕ ಎಂಬ ವಿಚಾರಗಳ ಕುರಿತು ಚರ್ಚಿಸಿದ್ದಾರೆ. ಬದುಕುವ ಹಕ್ಕನ್ನು ನೀಡಿ, ಜೊತೆಗೆ ಸ್ತ್ರೀ-ಪುರುಷರಿಬ್ಬರಿಗೂ ಸಮಾನ ಕೂಲಿ ನೀಡುವುದರ ಮೂಲಕ ಸಮಾಜದಲ್ಲಿ ಇಬ್ಬರ ಸ್ಥಾನಮಾನ

ಸಮಾನ ಎಂಬ ವಿಚಾರವನ್ನು ಈ ಕಾಯ್ದೆ ಎತ್ತಿಹಿಡಿಯುತ್ತದೆ. ಈ ಉದ್ಯೋಗ ಖಾತರಿ ಯೋಜನೆಯು ಕೆಲವು ಗ್ರಾಮಗಳಲ್ಲಿ ಸುಸಜ್ಜಿತವಾಗಿ ನಡೆದರೆ ಮತ್ತೆ ಕೆಲವೊಂದು ಗ್ರಾಮಗಳಲ್ಲಿ ಸರಿಯಾದ ರೀತಿಯಲ್ಲಿ ಅನುಷ್ಠಾನವಾಗಿರಲಾರದು. ಕಾರಣ ಊರಿನ ಜಮೀನ್ದಾರಿ ನಾಯಕರು ಹೆಚ್ಚು ಕೂಲಿ ನೀಡದೇ ಕಡಿಮೆ ಕೂಲಿಯಿಂದ ಕೆಲಸ ನೀಡಲು ಮುಂದಾಗುತ್ತಾರೆ. ಇದಕ್ಕಾಗಿ ಉದ್ಯೋಗ ಖಾತರಿ ಯೋಜನೆಯಲ್ಲಿ ನೀಡುವ ಹೆಚ್ಚು ಕೂಲಿ ಕಡೆ ಜನ ವಾಲುತ್ತಾರೆ. ಈ ಲೇಖನದಲ್ಲಿ ಖಾನಾಪುರ ತಾಲೂಕಿನ ಆಂದೂರು ಎಂಬ ಗ್ರಾಮದಲ್ಲಿ ಹೆಚ್ಚಿನ ವೇತನಕ್ಕಾಗಿ ಪ್ರಭುತ್ವದ ವಿರುದ್ಧ ಹೋರಾಟದ ಕುರಿತು ಲೇಖಕಿ ಹಲವು ವಿಚಾರಗಳನ್ನು ಪ್ರಸ್ತಾಪಿಸಿದ್ದಾರೆ. ಅದರಲ್ಲೂ ಮಹಿಳೆಯರ ಸಬಲೀಕರಣಕ್ಕಾಗಿ ಅವರಲ್ಲಿ ಜಾಗೃತಿ ಮೂಡಿಸಿ ಆರ್ಥಿಕ ಬದುಕನ್ನು ವ್ಯವಸ್ಥಿತವಾಗಿ ಕಟ್ಟುವ ಕಡೆ ಈ ಲೇಖನ ಗಟ್ಟಿಗೊಂಡಿದೆ. ಗಂಡೇನಹಟ್ಟಿ, ಜುಂಜುವಾಡ, ಇಡಕಲ್, ಮಂಗೇನಕೊಪ್ಪ ಗ್ರಾಮಗಳಲ್ಲಿ ಮಹಿಳೆಯರು ನಡೆಸಿದ ಹೋರಾಟದ ಕುರಿತಾಗಿ ಹಲವು ವಿಚಾರಗಳು ಈ ಲೇಖನದಲ್ಲಿ ನಿರೂಪಿತಗೊಂಡಿದೆ.

ಕರ್ನಾಟಕ ವಿಕಾಸ-೨೦೧೩ ಮಾರ್ಚ್ ತಿಂಗಳಲ್ಲಿ ಪ್ರಕಟವಾದ ಕೆಲವೊಂದು ಲೇಖನಗಳು ಉದ್ಯೋಗ ಖಾತರಿ ಯೋಜನೆಗೆ ಸಂಬಂಧಪಟ್ಟಿವೆ. ಕೇಶವಮೂರ್ತಿಯವರು ಮುಂದಗೋಳಾ ತಾಲೂಕಿನ ಕೋಡಂಬಿ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ ಉದ್ಯೋಗ ಖಾತರಿ ಯೋಜನೆ ಅನುಷ್ಠಾನಗೊಂಡು ಅಲ್ಲಿಯ ಜನತೆಗೆ ಆರ್ಥಿಕವಾಗಿ ಹೇಗೆ ಸಹಾಯಕವಾಗಿದೆ ಎಂಬುದರ ಬಗೆಗೆ ಚರ್ಚಿಸಿದ್ದಾರೆ.

ಕರ್ನಾಟಕ ವಿಕಾಸ ಏಪ್ರಿಲ್-೨೦೧೩ ಮಾಸ ಪತ್ರಿಕೆಯಲ್ಲಿ ಉದ್ಯೋಗ ಖಾತರಿ ಯೋಜನೆ ಅಡಿಯಲ್ಲಿ ರೂಪಿತವಾದ ಕೃಷಿಹೊಂಡ, ಬಾವಿಗಳ ಸ್ವಚ್ಚತೆಮಾಡಿ ಅದನ್ನು ಮರು ಸೃಷ್ಟಿಸುವ ಮಹತ್ವದ ಕಾರ್ಯಗಳು ಈ ಯೋಜನೆಯಡಿ ಅನುಷ್ಠಾನಗೊಂಡಿರುವುದು ಈ ಸಂಚಿಕೆಯಲ್ಲಿ ಚರ್ಚಿತವಾಗಿವೆ.

ಪಾಟೀಲ ಪುಟ್ಟಪ್ಪ ಅವರು ಸಂಪಾದಿಸಿದ ಸ್ಪರ್ಧಾ ಪ್ರಪಂಚ-೨೦೦೯ ಜೂನ್ ತಿಂಗಳ ಸಂಚಿಕೆಯಲ್ಲಿ ಭಾರತದ ಗ್ರಾಮೀಣ ಅಭಿವೃದ್ಧಿ ಯೋಜನೆಗಳ ಕುರಿತಾಗಿ ಹಲವು ಅಂಶಗಳನ್ನು ನೀಡಲಾಗಿದೆ. ಅದರಲ್ಲೂ ಕರ್ನಾಟಕದ ಸಂದರ್ಭದಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಕುರಿತಾಗಿ ಅನೇಕ ವಿಚಾರಗಳನ್ನು ಇಲ್ಲಿ ತಿಳಿಯಪಡಿಸಿದ್ದಾರೆ. ಭಾರತ ಸರ್ಕಾರವು ಗ್ರಾಮೀಣ ಭಾಗದ ನಿರುದ್ಯೋಗವನ್ನು ಹೋಗಲಾಡಿಸಲು ಅನೇಕ ಪ್ರಗತಿಪರ ಯೋಜನೆಗಳನ್ನು ಜಾರಿಗೆ ತಂದರೂ ಯಾವ ಯೋಜನೆಯು ನಿರುದ್ಯೋಗ ಸಮಸ್ಯೆಯನ್ನು ನಿವಾರಿಸಲು ಸಾಧ್ಯವಾಗಿಲ್ಲ. ಹೀಗಾಗಿ ಈ ಯೋಜನೆಯ ಅನುಷ್ಠಾನದಲ್ಲಿ ಬದ್ಧತೆಯ ಕೊರತೆ ಕಾಣಿಸಿಕೊಂಡ ಪರಿಣಾಮ ಸಂವಿಧಾನಾತ್ಮಕ ಸ್ಥಾನನೀಡಿ ಈ ಉದ್ಯೋಗ ಖಾತರಿ ಯೋಜನೆಯನ್ನು ಜಾರಿಗೆ ತರಲಾಯಿತು. ಅಂದಿನ ಯು.ಪಿ.ಎ. ಸರಕಾರದ ಗ್ರಾಮೀಣಾಭಿವೃದ್ಧಿ ಸಚಿವರಾದ ರಘುವಂಶಸಿಂಗ್ ಅವರು ಈ ಯೋಜನೆಯು

ಅನುಷ್ಠಾನಗೊಳ್ಳಲು ಸಾಕಷ್ಟು ಪ್ರಯತ್ನಿಸಿದರು. ಹೀಗೆ ಯೋಜನೆಯ ಉದ್ದೇಶ, ಸ್ವರೂಪ, ಅದರ ವಿವಿಧ ಮುಖಗಳನ್ನು ಕುರಿತು ಈ ಸಂಚಿಕೆಯಲ್ಲಿ ತಿಳಿಸಿದ್ದಾರೆ.

ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ(ಎಸ್‌ಯುಸಿಐ) ಎಂಬ ಸಂಘಟನಾ ಮಾಸಪತ್ರಿಕೆ ಮೇ, ೨೦೧೦ರ ಸಂಚಿಕೆಯಲ್ಲಿ ಭ್ರಷ್ಟತೆಯೇ ಮೂರ್ತಿವೆತ್ತ ಯೋಜನೆ–ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಎಂಬ ಲೇಖನದಲ್ಲಿ ಕೇಂದ್ರ ಮತ್ತು ರಾಜ್ಯ ಸರಕಾರದ ಯೋಜನೆಗಳು ವಿಫಲಗೊಳ್ಳಲು ಮುಖ್ಯ ಕಾರಣಗಳ ಕುರಿತು ಇಲ್ಲಿ ಚರ್ಚಿಸಲಾಗಿದೆ. ರಾಜಕಾರಣಿಗಳ, ಅಧಿಕಾರಿಗಳ ಮತ್ತು ಶ್ರೀಮಂತರ ಜೇಬನ್ನು ತುಂಬಿಸುವ ಯೋಜನೆ ಉದ್ಯೋಗ ಖಾತ್ರಿ ಯೋಜನೆಯಾಗಿದೆ. ಇದು ಭ್ರಷ್ಟಾಚಾರದ ಅಡಿಯಲ್ಲಿ ಸಾಗಹಾಕುತ್ತಿದೆ. ಈ ಯೋಜನೆಯ ಅಡಿಯಲ್ಲಿ ಬಿಡುಗಡೆ ಹಣದಲ್ಲಿ ಶೇ.೭೦ರಷ್ಟು ಭಾಗ ಬಡ ಜನತೆಯನ್ನು ತಲುಪಿಲ್ಲ. ಈ ಯೋಜನೆಯ ಅಡಿಯಲ್ಲಿ ಅವ್ಯವಹಾರಗಳನ್ನು ನಡೆಸಲು ಹೇಗೆ ಸಾಧ್ಯವೋ ಅದೆಲ್ಲವನ್ನು ಮೀರಿ ಗುತ್ತಿಗೆದಾರರು, ಅಧಿಕಾರಿಗಳು ನಡೆಸುತ್ತಾರೆ. ಇಂತಹ ಭ್ರಷ್ಟತೆಯ ವಿರುದ್ಧ ಹೋರಾಡಲು ಜನ ಸಾಮಾನ್ಯರಲ್ಲಿ ಮಹತ್ವದ ಪ್ರಜ್ಞೆಯನ್ನು ಇಲ್ಲಿ ಮೂಡಿಸಲಾಗಿದೆ.

ಪಂಚಾಯತ್‌ರಾಜ್ ವಾರ್ತಾಪತ್ರ ಮೇ ೨೦೦೮ ಇದರಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಕುರಿತಾಗಿ ಸರಕಾರದ ಕಾಯಿದೆ ಕಾನೂನುಗಳ ವಿಚಾರವನ್ನು ತಿಳಿಸಲಾಗಿದೆ. ಜಗತ್ತಿನ ಯಾವ ರಾಷ್ಟ್ರದಲ್ಲೂ ಇಲ್ಲದ ಇಂತಹ ಯೋಜನೆಯನ್ನು ಪ್ರಥಮವಾಗಿ ಜಾರಿಗೆ ತಂದ ಕೀರ್ತಿ ಭಾರತದ್ದು. ಗ್ರಾಮೀಣ ಜನರಿಗೆ ಕಾನೂನಿನ ಅಡಿಯಲ್ಲಿ ಉದ್ಯೋಗ ನೀಡುವ ಮಹತ್ವದ ಯೋಜನೆ ಇದಾಗಿದೆ. ಈ ಯೋಜನೆಯ ಅಡಿಯಲ್ಲಿ ಮಾಡಬಹುದಾದ ಕೆಲಸ ಕಾರ್ಯಗಳ ವಿವರ ಇಲ್ಲಿದೆ.

ಇಪಿಡಬ್ಲ್ಯು ಜೂನ್ ೨೧, ೨೦೦೮ರಂದು ಸಿದ್ಧಾರ್ಥ ಮತ್ತು ಅನೀಶ್ ವನಾಯ್ಕಿ ಇವರಿಬ್ಬರು ಅಧ್ಯಯನ ಮಾಡಿ ಸಲ್ಲಿಸಿದ CAG Report on NREGA: Fact and Fiction ಎಂಬ ಲೇಖನದಲ್ಲಿ CAGಯು NREGA ಯೋಜನೆಯ ಅನುಷ್ಠಾನದ ಬಗೆಗೆ ಚರ್ಚಿಸುತ್ತದೆ. CAG ವರದಿಯು NREGA ಸಮಸ್ಯೆಯನ್ನು ಎತ್ತಿಹಿಡಿದು ಅದನ್ನು ಮುಂದೆ ಕಾರ್ಯಗತಗೊಳಿಸುವಲ್ಲಿ ಮಾಡಬೇಕಾದ ಮುಖ್ಯ ಕಾರ್ಯಚಟುವಟಿಕೆ ಕುರಿತು ಮಾಹಿತಿ ನೀಡುತ್ತದೆ.

ಇಪಿಡಬ್ಲ್ಯೂ ಡಿಸೆಂಬರ್ ೮, ೨೦೧೨ VOL XLVII NO-49ರಲ್ಲಿ ಭರತ್‌ಭಟ್ಟಿ ಅವರು Aadhaar-Enabled Payments for NREGA Workers ಎಂಬ ಕ್ಷೇತ್ರಾಧಾರಿತ ಸಂಶೋಧನಾತ್ಮಕ ಲೇಖನದಲ್ಲಿ NREGA ಕೂಲಿ ಕಾರ್ಮಿಕರ ಹಣ ಸಂದಾಯ ಹಿನ್ನೆಲೆಯಲ್ಲಿ ಇಲ್ಲಿ ಚರ್ಚಿತವಾಗಿದೆ. ಮಧ್ಯವರ್ತಿಗಳ ಅವ್ಯವಹಾರವನ್ನು ತಡೆಗಟ್ಟುವುದಕ್ಕೋಸ್ಕರ ಕೂಲಿ ಹಣ ನೀಡುವ ಅಧಿಕಾರವನ್ನು ಬ್ಯಾಂಕ್ ಮತ್ತು ಪೋಸ್ಟ್ ಆಫೀಸ್‌ಗಳಿಗೆ ನೀಡಲಾಯಿತು. ಆದರೆ

ಇಲ್ಲಿ ವ್ಯವಹಾರಕ್ಕಾಗಿ ಜನ ಸಂದಣಿ ಅಧಿಕ ಇರುವ ಕಾರಣ NREGA ಕಾರ್ಮಿಕರಿಗೆ ಕೂಲಿ ಹಣ ಪಡೆಯುವುದು ಕಷ್ಟಕರವಾಗತೊಡಗಿತು. ಕೆಲವೊಂದು ವೇಳೆ ತಾವು ದುಡಿದ ಹಣವನ್ನು ಪಡೆಯದೆ ಹಾಗೆಯೇ ಮನೆಗೆ ಹೋಗುವ ಪರಿಸ್ಥಿತಿ ಎದುರಾಗುತ್ತಿತ್ತು. ಈ ಸಮಸ್ಯೆಯನ್ನು ಹೋಗಲಾಡಿಸಲು ಸರಕಾರವು AEPS ಸಿಸ್ಟಮ್‌ನ್ನು ಜಾರಿಗೆ ತರಲಾಯಿತು. ಮುಂದೆ ಆಧಾರ್ ನಂಬರನ್ನು ಕಾರ್ಮಿಕರಿಗೆ ನೀಡಿ ತಮ್ಮ ಕೂಲಿ ಹಣವನ್ನು ಆಧಾರ್ ನಂಬರ್ ಮತ್ತು ಫಿಂಗರ್ ಪ್ರಿಂಟ್ ಈ ಎರಡು ಹೊಂದಾಣಿಕೆಯಾದರೆ ಮಾತ್ರ ಹಣ ಪಡೆಯುವ ವ್ಯವಸ್ಥೆಯನ್ನು ರೂಪಿಸಲಾಗಿದೆ.

ಇಪಿಡಬ್ಲ್ಯೂ ಮಾರ್ಚ್ ೪, ೨೦೦೬ರಂದು ಜೆ.ಕೃಷ್ಣಮೂರ್ತಿ ಅವರ Employment Guarantee and Crisis Response ಇಲ್ಲಿ ಆರ್ಥಿಕ ಸಂಕಷ್ಟ ಎದುರಾದಾಗ ಮತ್ತು ನೈಸರ್ಗಿಕ ವಿಕೋಪ ಉಂಟಾದಾಗ NREGA ಯೋಜನೆ ಜನ ಸಾಮಾನ್ಯರಿಗೆ ಬಳಕೆಯಾಗುವ ಬಗೆಯ ಕುರಿತು ಮಾಹಿತಿ ನೀಡಿದೆ. ಸುನಾಮಿ, ಭೂಕಂಪ, ಜ್ವಾಲಾಮುಖಿ ಮತ್ತು ಚಂಡ ಮಾರುತಗಳಿಂದ ಉಂಟಾಗುವ ಸಮಸ್ಯೆಗಳನ್ನು ಪರಿಹರಿಸಲು NREGA ಯೋಜನೆಯನ್ನು ಹೆಚ್ಚು ಪ್ರಸಿದ್ಧಿಗೊಳಿಸಲು ಇಲ್ಲಿ ಹೇಳಲಾಗಿದೆ.

ಇಪಿಡಬ್ಲ್ಯೂ ಜುಲೈ-೨೨, ೨೦೦೬ರಂದು ಬೇಲಾ ಭಟಿಯಾ ಮತ್ತು ಜೀನ್ ಡ್ರೆಜೆ ಇವರು ಕ್ಷೇತ್ರಕಾರ್ಯ ಕೈಗೊಂಡು ರೂಪಿಸಿದ Employment Guarantee in Jharkhand: Ground Realities ಎಂಬ ಲೇಖನವು ಜಾರ್ಖಂಡ್ ರಾಜ್ಯದ ಎರಡು ಜಿಲ್ಲೆಗಳಾದ ಪಲಮು ಮತ್ತು ಲತೆವಾರುನಲ್ಲಿ NREGA ಯೋಜನೆಯ ಕುರಿತಾಗಿ ತಿಳಿಯಪಡಿಸಲಾಗಿದೆ. ಯಾವುದೇ ಸೌಕರ್ಯವಿಲ್ಲದ ಹಳ್ಳಿಗಾಡಿನಲ್ಲಿ ಈ ಯೋಜನೆ ಹೇಗೆ ಅನುಷ್ಠಾನಗೊಂಡಿದೆ ಎಂಬುದರ ಕುರಿತು ಇಲ್ಲಿ ಸರ್ವೆ ಮಾಡಲಾಗಿದೆ. ಇಲ್ಲಿಯ ಕೆಲವು ಹಳ್ಳಿಗಳಲ್ಲಿ ಜಾಬ್‌ಕಾರ್ಡ್ ವಿತರಿಸಲು ಜವಾಬ್ದಾರಿಯುತ ಕೆಲಸ ಕಾರ್ಯಗಳು ನಡೆಯದ ಕಾರಣ ಇಲ್ಲಿ ಈ ಯೋಜನೆ ಹೆಚ್ಚು ಕಾರ್ಯೋನ್ಮುಖವಾಗುತ್ತಿಲ್ಲ. ಅಲ್ಲದೆ ಕೆಲವರಿಗೆ ಜಾಬ್‌ಕಾರ್ಡ್ ಇದ್ದರೂ ಕೆಲಸ ಸಿಗುತ್ತಿಲ್ಲ. ಹೀಗಾಗಿ ಈ ಯೋಜನೆಯ ಸಫಲತೆ ಮತ್ತು ವಿಫಲತೆಯ ಬಗೆಗೆ ಅಪರೂಪದ ಮಾಹಿತಿ ಇಲ್ಲಿ ಕಲೆ ಹಾಕಲಾಗಿದೆ.

### ದಿನ ಪತ್ರಿಕೆಗಳು

ಡಾ.ಭರತ್ ಝುಂಜನ್‌ವಾಲಾ ಅವರು ಮೇ ೨೪, ೨೦೦೯ರಂದು ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ 'ಉದ್ಯೋಗ ಖಾತ್ರಿ ಯೋಜನೆ ಬದುಕಿಗೇ ಕತ್ತರಿ ಹಾಕಿತು' ಎಂಬ ಲೇಖನವನ್ನು ಪ್ರಕಟಿಸಿದ್ದಾರೆ. ಈ ಲೇಖನದಲ್ಲಿ ಉದ್ಯೋಗ ಖಾತ್ರಿ ಯೋಜನೆಗೆ ಸಂಬಂಧಿಸಿದಂತೆ ಈ ಯೋಜನೆ ಕಾರ್ಮಿಕರ ಬದುಕಿಗೆ ಹೇಗೆ ಕತ್ತರಿಯಾಗುತ್ತಿದೆ ಮತ್ತು ಈ ಯೋಜನೆಯ ಆಳವಾದ ಸಮಸ್ಯೆಗಳೇನು? ಗಾಂಧೀಜಿಯವರ ಚಿಂತನೆಗೆ ಈ ಯೋಜನೆ ಅನುಗಣವಾಗಿದೆಯೇ? ಎಂಬುದನ್ನು ಸುದೀರ್ಘವಾಗಿ ಚರ್ಚಿಸುತ್ತಾರೆ. ಈ ಯೋಜನೆಯಡಿ ಸೃಷ್ಟಿಸಲಾದ ಉದ್ಯೋಗ

ವಿಭಿನ್ನ ನೆಲೆಗಟ್ಟಿನಲ್ಲಿದೆ. ಹೀಗಾಗಿ ಜನ ಸಾಮಾನ್ಯರ ಬದುಕನ್ನು ಆರ್ಥಿಕ ದುಸ್ಥಿತಿಯಿಂದ ಪರಿಹರಿಸಲು ಈ ಯೋಜನೆಯನ್ನು ಸರಕಾರ ರೂಪಿಸಿತು. ಆದರೆ ಪ್ರಬಲ ಅಧಿಕಾರಿ ವರ್ಗಗಳ ಕೈಯಲ್ಲಿ ಈ ಯೋಜನೆ ಸರಿಯಾದ ಕ್ರಮದಲ್ಲಿ ಬಳಕೆಯಾಗುವಲ್ಲಿ ವಿಫಲವಾಗಿದೆ. ಜನರಿಗೆ ಸರಿಯಾದ ರೀತಿಯಲ್ಲಿ ಪರಿಹಾರ ಸಿಗದೆ ಸೋರಿಕೆಯಿಂದ ಈ ಯೋಜನೆ ಇಂದಿಗೂ ಸಹ ಅತಂತ್ರ ಸ್ಥಿತಿಯಲ್ಲಿ ಬದುಕುತ್ತಿದೆ. ಇಂತಹ ಸಮಸ್ಯೆಯನ್ನು ಕುರಿತು ಈ ಲೇಖನವು ಪ್ರಸ್ತುತಪಡಿಸುತ್ತದೆ.

ವಿ.ಪ್ರಶಾಂತಮಿರ್ಲೆ ಅವರು ಜನವರಿ ೨೦, ೨೦೧೦ರಂದು ಪ್ರಜಾವಾಣಿ ಪತ್ರಿಕೆಯಲ್ಲಿ ಪ್ರಕಟಿಸಿದ "ಉದ್ಯೋಗ ಖಾತರಿಯೋ, ಗುತ್ತಿಗೆ ಖಾತರಿಯೋ? ಎಂಬ ಲೇಖನದಲ್ಲಿ ಈ ಉದ್ಯೋಗ ಖಾತರಿ ಯೋಜನೆ ಪ್ರಾರಂಭದಲ್ಲಿ ಗ್ರಾಮೀಣ ಜನರು ಜೀವನ ನಿರ್ವಹಣೆಗಾಗಿ ಉದ್ಯೋಗವನ್ನರಸಿ ಗುಳೆ ಹೋಗುವುದನ್ನು ತಪ್ಪಿಸುವುದಾಗಿತ್ತು. ಮತ್ತು ಸ್ಥಳೀಯವಾಗಿ ಜನರಿಗೆ ಉದ್ಯೋಗಾವಕಾಶವನ್ನು ಕಲ್ಪಿಸುವುದರ ಮೂಲಕ ನಿರುದ್ಯೋಗ ಸಮಸ್ಯೆಯನ್ನು ನಿವಾರಿಸಿ ಜನರ ಆರ್ಥಿಕ ಮಟ್ಟವನ್ನು ಹೆಚ್ಚಿಸುವುದಾಗಿತ್ತು. ಆದರೆ ಪ್ರಸ್ತುತ ಸಾಲಿನಲ್ಲಿ ದಿನಗೂಲಿ ಕಾರ್ಮಿಕರಿಗೆ ಬಳಕೆಯಾಗುವ ಹಣ ಮತ್ತು ಈ ಯೋಜನೆಯ ಬಗ್ಗೆ ಸಾಕಷ್ಟು ಪ್ರಚಾರ ಮಾಹಿತಿ ನೀಡಿ ನೋಂದಾಯಿಸಿಕೊಂಡು ಕುಟುಂಬಗಳ ಸದಸ್ಯರು ಕೆಲಸಕ್ಕೆ ಹಾಜರಾಗುತ್ತಾರೋ ಇಲ್ಲವೋ? ಹಾಜರಾದ ಕಾರ್ಮಿಕರಿಗೆ ನಿಗದಿತ ಅವಧಿಯ ಒಳಗೆ ಜಿಲ್ಲಾ ಆಡಳಿತ ಕೆಲಸ ನೀಡುತ್ತದೆ ಇಲ್ಲವೋ, ನೋಂದಾವಣೆ ಮತ್ತು ಬ್ಯಾಂಕಿನ ಖಾತೆ ತೆಗೆಯುವ ಕೆಲಸಗಳಿಂದಾಗಿ ಈ ಯೋಜನೆ ನಿಧಾನಗತಿಯಿಂದ ಸಾಗುತ್ತಿದೆಯೋ, ಅಲ್ಲದೆ ಕಾರ್ಮಿಕರು ಮಧ್ಯದಲ್ಲಿ ಕೆಲಸ ಬಿಟ್ಟು ಹೆಚ್ಚಿನ ಕೂಲಿಗಾಗಿ ನಗರ ಪ್ರದೇಶಗಳಿಗೆ ವಲಸೆ ಹೋಗುತ್ತಿದ್ದಾರೋ ಮತ್ತು ಉದ್ಯೋಗ ಖಾತರಿ ಯೋಜನೆಯ ಬಗ್ಗೆ ಸಾಕಷ್ಟು ಪ್ರಚಾರ ಮಾಹಿತಿಯನ್ನು ಗ್ರಾಮಸ್ಥರಿಗೆ ನೀಡಲು ಅಧಿಕಾರಿಗಳು ಯಾವ ರೀತಿಯಲ್ಲಿ ಕ್ರಮ ಕೈಗೊಂಡಿದ್ದಾರೆ ಎಂಬಂತಹ ಸೂಕ್ಷ್ಮ ಪ್ರಶ್ನೆಗಳನ್ನು ಎತ್ತುವ ಮೂಲಕ ಇದಕ್ಕೆ ಪರಿಹಾರೋಪಾಯಗಳನ್ನು ಕಂಡುಹಿಡಿಯಲು ಅಧಿಕಾರಿಗಳು ಕೈಗೊಳ್ಳಬೇಕಾದ ಕ್ರಮಗಳನ್ನು ಈ ಲೇಖಕರು ಪ್ರಸ್ತುತ ಲೇಖನದಲ್ಲಿ ಪ್ರಕಟಿಸಿದ್ದಾರೆ.

ಶಾರದ ಗೋಪಾಲ ಅವರು ಡಿಸೆಂಬರ್ ೨೮, ೨೦೧೦ರಂದು ಪ್ರಜಾವಾಣಿ ಪತ್ರಿಕೆಯಲ್ಲಿ "ಸ್ತ್ರೀ ಸಬಲೀಕರಣದತ್ತ ಒಂದೊಂದೇ ಹೆಜ್ಜೆ" ಎಂಬ ಲೇಖನವನ್ನು ಪ್ರಕಟಿಸಿದ್ದಾರೆ. ಈ ಉದ್ಯೋಗ ಖಾತರಿ ಯೋಜನೆಯು ಸ್ತ್ರೀ ಪುರುಷರಿಬ್ಬರಿಗೂ ಸಮಾನ ಕೂಲಿ ನೀಡುವುದರ ಮೂಲಕ ಸಮಾಜದಲ್ಲಿ ಇಬ್ಬರ ಸ್ಥಾನಮಾನ ಸಮಾನ ಎಂಬ ವಿಚಾರವನ್ನು ಎತ್ತಿಹಿಡಿದಿದೆ. ಪ್ರಾರಂಭದ ದಿನಮಾನಗಳಲ್ಲಿ ಈ ಯೋಜನೆಯ ಬಗ್ಗೆ ಜನ ಸಾಮಾನ್ಯರಿಗೆ ಸರಿಯಾದ ತಿಳುವಳಿಕೆ ಇಲ್ಲದ ಕಾರಣ ಈ ಉದ್ಯೋಗ ಖಾತ್ರಿಗೆ ಬಂದ ಹಣ ಹಿಂದಕ್ಕೆ ಹೋಯಿತು. ಎರಡು ಮತ್ತು ಮೂರು ವರ್ಷಗಳಲ್ಲಿ ಬಂದ ಹಣವನ್ನು ಗುತ್ತಿಗೆದಾರರು ಜನಸಾಮಾನ್ಯರಿಂದ ಕೆಲಸ ನಿರ್ವಹಿಸದೇ ಜೆಸಿಬಿ ಯಂತ್ರಗಳ ಮೂಲಕ ಕೆಲಸಗಳನ್ನು ನಿರ್ವಹಿಸತೊಡಗಿದರು.

ಇದಕ್ಕೆ ಪರಿಹಾರವಾಗಿ ತಮ್ಮ ತಮ್ಮ ಕುಟುಂಬಗಳ ಸದಸ್ಯರಿಗೆ ಜಾಬ್‌ಕಾರ್ಡ್ ವಿತರಿಸಿ ಹಣ ಪಡೆಯುವ ಲೂಟಿಕೋರತನದ ಉದ್ಯೋಗವನ್ನು ಸೃಷ್ಟಿಸಿಕೊಂಡರು. ಉದ್ಯೋಗ ಖಾತ್ರಿ ಯೋಜನೆಯಲ್ಲಿ ಹೆಚ್ಚಾಗಿ ಮಹಿಳೆಯರೇ ಕೂಲಿಕಾರರಾಗಿ ಹೋಗುವುದುಂಟು. ಆದರೆ ಉದ್ಯೋಗ ಖಾತ್ರಿ ಯೋಜನೆಯನ್ನು ಸೂಕ್ಷ್ಮವಾಗಿ ಪರಿಗಣಿಸಿದರೆ ಮಹಿಳಾ ಸಬಲೀಕರಣ ನಿಜಕ್ಕೂ ಇಲ್ಲಿ ಕಾಣಲಾರದು. ಬೆಳಗಾವಿ ಜಿಲ್ಲೆಯ ಉಕ್ಕೇರಿ ತಾಲೂಕಿನ ಮಹಿಳೆಯರು ತಾವು ಕೂಲಿ ಮಾಡಿದ ಹಣ ಪಡೆಯಲು ಎಂಟು ದಿನಗಳ ಕಾಲ ಧರಣಿ ನಡೆಸಿ ಕೊನೆಗೂ ಅಧಿಕಾರಿಗಳಿಂದ ತಮ್ಮ ಕೂಲಿ ಹಣ ಪಡೆದರು. ಇಂತಹ ಯೋಜನೆಯಡಿಯಲ್ಲಿ ಮಹಿಳೆಯರಿಗೆ ಉಂಟಾಗುವ ಅನೇಕ ಸಮಸ್ಯೆಗಳ ಮಹತ್ವದ ಚರ್ಚೆ ಈ ಲೇಖನದಲ್ಲಿದೆ.

ಕೆ.ನರಸಿಂಹಮೂರ್ತಿ ಅವರು ಜುಲೈ ೧೪, ೨೦೧೪ರಂದು ಪ್ರಜಾವಾಣಿ ಪತ್ರಿಕೆಯಲ್ಲಿ "ಜಾಬ್‌ಕಾರ್ಡ್ ಪರಿಷ್ಕರಣೆ" ಎಂಬ ಲೇಖನದಲ್ಲಿ ಕೋಲಾರ ಜಿಲ್ಲೆಯ ಐತರಾಸನಹಳ್ಳಿ ಗ್ರಾಮ ಪಂಚಾಯಿತಿ ಕುರಿತು ಮಹತ್ತರವಾದ ವಿಷಯವನ್ನು ಬರೆದಿದ್ದಾರೆ. ಈ ಪಂಚಾಯ್ತಿಯ ಅಭಿವೃದ್ಧಿ ಅಧಿಕಾರಿಣಿಯಾದ ವೈಶಾಲಿ ಸಾಗರ ಎಂಬುವವರು ನಿಜವಾದ ಜಾಬ್‌ಕಾರ್ಡ್‌ಗಳು ಇರಬೇಕಾದವರ ಬಳಿಯೇ ಇಲ್ಲದಿರುವುದರಿಂದ ಒಂದು ಆಂದೋಲನವನ್ನೇ ಸೃಷ್ಟಿಸಿದರು. ಮುಂದೆ ಗುತ್ತಿಗೆದಾರರಿಗೆ ನೂರು ರೂಪಾಯಿಗೆ ಜಾಬ್‌ಕಾರ್ಡ್ ಮಾರಿಕೊಂಡ ಕೂಲಿ ಕಾರ್ಮಿಕರ ಬಂಡವಾಳ ಗೊತ್ತಾದ ನಂತರ ಅಭಿವೃದ್ಧಿ ಅಧಿಕಾರಿಯವರು ಗ್ರಾಮದಲ್ಲಿ ನಿಜವಾಗಿ ದೊರೆಯಬೇಕಾದವರಿಗೆ ಕೆಲವು ಅಧಿಕಾರಿಗಳ ಬೆಂಬಲದಿಂದ ಕೂಲಿಕಾರ್ಮಿಕರಿಗೆ ಜಾಬ್‌ಕಾರ್ಡ್ ವಿತರಿಸಿದ ಬಗೆಗೆ ಇಲ್ಲಿ ಮಾಹಿತಿ ನೀಡಿದ್ದಾರೆ.

ಚಂದ್ರಹಾಸ ಹಿರೇಮಳಲಿ ಅವರು ಜುಲೈ ೨೮, ೨೦೧೪ರಂದು ಪ್ರಜಾವಾಣಿ ಪತ್ರಿಕೆಯಲ್ಲಿ "ಅಭಿವೃದ್ಧಿ ಕಾಯಕದ ಬಂಧು" ಎಂಬ ವಿಚಾರದ ಕುರಿತು ಬರೆದಿದ್ದಾರೆ. ಕಾಯಕ ಬಂದು ಎಂಬ ಈ ಹೆಸರು ಉದ್ಯೋಗ ಖಾತ್ರಿ ಯೋಜನೆಯಲ್ಲಿ ಈಚೆಗೆ ಪರಿಚಯಿಸಿದ ಪದನಾಮ. ಈ ಪದನಾಮವುಳ್ಳ ವ್ಯಕ್ತಿ ಉದ್ಯೋಗ ಖಾತ್ರಿ ಯೋಜನೆಯ ಕೂಲಿ ಕಾರ್ಮಿಕರ ಮೇಲುಸ್ತುವಾರಿಯನ್ನು ವಹಿಸಿಕೊಳ್ಳುವನು. ಇವನೂ ಸಹ ಒಬ್ಬ ಕೂಲಿ ಕಾರ್ಮಿಕ. ಇಂತಹ ಕಾಯಕ ಬಂಧು ಅನ್ನೋ ಪದನಾಮ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಜಾರಿಗೆ ಬಂದರೂ ಯಾರೂ ಸಹ ಈ ಕಲ್ಪನೆಯ ಅಡಿಯಲ್ಲಿ ಕೆಲಸ ನಿರ್ವಹಿಸುತ್ತಿಲ್ಲ. ಆದರೆ ಹೊಸ ನಗರ ತಾಲೂಕಿನ ರಿಪ್ಪನ್‌ಪೇಟೆ ಗ್ರಾಮದ ಟಿ.ಆರ್.ಕೃಷ್ಣಪ್ಪ ಅವರು ಈ ಯೋಜನೆಯ ವೈಫಲ್ಯವನ್ನು ಕಂಡು ತಮ್ಮ ಗ್ರಾಮದ ವ್ಯಾಪ್ತಿಯಲ್ಲಿ ಆಗಬೇಕಾದ ಕೆಲಸ ಕಾರ್ಯಗಳ ಪಟ್ಟಿ ಮಾಡಿಕೊಂಡರು. ಅಧಿಕಾರಿಗಳ ಬೆಂಬಲದಿಂದ ಗ್ರಾಮಗಳ ಮನೆ ಮನೆಗೆ ತೆರಳಿ ಜನರ ಮನಸ್ಸನ್ನು ಉದ್ಯೋಗ ಖಾತ್ರಿಯ ಕಡೆಗೆ ತಿರುಗಿಸಿ ಅವರಿಗೆ ಜಾಬ್‌ಕಾರ್ಡ್ ವಿತರಿಸಿದರು. ಅಲ್ಲಿಂದ ಕಾಯಕ ಬಂದು ಆಗಿ ಕೆಲಸ ನಿರ್ವಹಿಸಿದ ಇವರು ತಮ್ಮ ಸುತ್ತ ಮುತ್ತಲ ಗ್ರಾಮಗಳ ಸಾರ್ವಜನಿಕರಿಗೆ ಉಪಯೋಗವಾಗುವಂತಹ ಕೆಲಸವನ್ನು ಕೂಲಿಕಾರ್ಮಿಕರಿಂದ ಮಾಡಿಸಿದರ ಬಗೆಗೆ ಇಲ್ಲಿ ಅನೇಕ ವಿಚಾರಗಳು ವ್ಯಕ್ತವಾಗಿವೆ.

ವಿರೂಪಾಕ್ಷ ಹೊಕ್ರಾಣಿ ಅವರು ಜುಲೈ ೪, ೨೦೧೧ರಂದು ವಿಜಯ ಕರ್ನಾಟಕ ಅವಲೋಕನ ವಿಭಾಗಕ್ಕೆ ಬರೆದ "ಅಕ್ರಮ ಖಾತ್ರಿ ಯೋಜನೆ" ಎಂಬ ಲೇಖನದಲ್ಲಿ ಈ ಯೋಜನೆಯಲ್ಲಿ ಹೇಗೆ ಅಕ್ರಮಗಳು ನಡಿಯುತ್ತಿವೆ? ಯಾವ ರೀತಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಬೇಕು ಮತ್ತು ಈ ಅಕ್ರಮ ಹೇಗೆ ತಡೆಗಟ್ಟಬೇಕು ಎನ್ನುವುದರ ಕುರಿತು ಹಲವಾರು ಉಪಯುಕ್ತ ಸಲಹೆಗಳನ್ನು ನೀಡಿದ್ದಾರೆ. ಕೇಂದ್ರ ಸರಕಾರದ ಈ ಮಹತ್ವಕಾಂಕ್ಷಿಯ ಯೋಜನೆಯನ್ನು ಜನರಿಗೆ ಹೇಗೆ ತಲುಪಿಸಬೇಕು ಎಂಬುದನ್ನು ಹೇಳಿದಲ್ಲದೆ ಈ ಉದ್ಯೋಗ ಖಾತ್ರಿ ಯೋಜನೆ ಹೇಗೆ ಅಕ್ರಮ ಖಾತ್ರಿಯಾಗಿ ಗೊಂದಲಗಳನ್ನು ಸೃಷ್ಟಿಸುತ್ತದೆ ಎಂಬುದನ್ನು ಈ ಲೇಖನದಲ್ಲಿ ಚರ್ಚಿಸಲಾಗಿದೆ. ಜೊತೆಗೆ ಈ ಯೋಜನೆ ಆಡಳಿತ ರೂಢ ಪಕ್ಷದವರ ಕೈಗೊಂಬೆಯಾಗುತ್ತಿದೆ. ಮತ್ತು ಜಾಬ್‌ಕಾರ್ಡ್ ವಿತರಿಸುವಾಗ ಹೇಗೆ ಮೋಸ ನಡೆಯುತ್ತದೆ ಎಂಬುದನ್ನು ಈ ಲೇಖನದಲ್ಲಿ ಕಂಡುಕೊಳ್ಳಲಾಗಿದೆ. ಮತ್ತು ಗುತ್ತಿಗೆದಾರರು ಈ ಯೋಜನೆಯ ಅಭಿವೃದ್ಧಿಗೆ ಬಂದ ಹಣವನ್ನು ಹೇಗೆ ಪೋಲು ಮಾಡುತ್ತಾರೆ? ಪರಿಣಾಮವಾಗಿ ಈ ಯೋಜನೆ ಯಾವ ರೀತಿಯಾಗಿ ವೈಫಲ್ಯ ಆಗುತ್ತದೆ ಎಂಬುದನ್ನು ಕೂಡ ವಿರೂಪಾಕ್ಷ ಹೊಕ್ರಾಣಿ ಅವರು ಈ ಲೇಖನದಲ್ಲಿ ಪ್ರಕಟಿಸಿದ್ದಾರೆ.

ಎಂ.ಎಸ್.ಶ್ರೀರಾಮ್ ಅವರು ಜುಲೈ ೪, ೨೦೧೩ರ ವಿಜಯ ಕರ್ನಾಟಕ ಪತ್ರಿಕೆಯಲ್ಲಿ "ನರೇಗಾ, ರೂಪಾಯಿಗೊಂದು ಕಿಲೋ ಅಕ್ಕಿ ಇತ್ಯಾದಿ" ಎಂಬ ಲೇಖನವು ಸರಕಾರದ ನರೇಗಾ ಯೋಜನೆ ಹಾಗೂ ರಾಜ್ಯ ಸರಕಾರದ ಅಕ್ಕಿಭಾಗ್ಯ ಯೋಜನೆಯ ಕುರಿತಾಗಿದೆ. ಇಲ್ಲಿ ನರೇಗಾದಲ್ಲಿರಬಹುದಾದ ಉತ್ತಮ ಗುಣಗಳು ಅಂದರೆ ಶ್ರಮಕ್ಕೆ ತಕ್ಕಂತೆ ಕೂಲಿ ನೀಡುವ ಒಂದು ನಿಯಮಾವಳಿ ಅಕ್ಕಿ ವಿತರಿಸುವ ಯೋಜನೆಗೆ ರೂಪಿಸಿದರೆ ಉತ್ತಮ ಎಂಬಂತಹ ವಿಷಯಗಳು ಇಲ್ಲಿ ಚರ್ಚಿತವಾಗಿವೆ.

ಕೆ.ನೀಲಾ ಅವರು ಸೆಪ್ಟೆಂಬರ್ ೨೮, ೨೦೧೩ರಂದು ವಿಜಯ ಕರ್ನಾಟಕ ಪತ್ರಿಕೆಯಲ್ಲಿ "ಒಲ್ಲದ ಮನಸ್ಸಿನ ಯೋಜನೆಗಳು" ಎಂಬ ಲೇಖನವನ್ನು ಯೋಜನೆಗಳ ಕುರಿತಾಗಿ ಬರೆದಿದ್ದಾರೆ. ಸರಕಾರದ ಹಲವು ಯೋಜನೆಗಳು ವಿಫಲಗೊಳ್ಳಲು ಕಾರಣಗಳೇನು? ಎಂಬುದರ ಬಗೆಗೆ ಸೂಕ್ಷ್ಮವಾಗಿ ಬರೆದಿದ್ದಾರೆ. ನರೇಗಾ ಯೋಜನೆಯು ವೈಜ್ಞಾನಿಕ ಮಾದರಿಯಲ್ಲಿ ಇದ್ದರೂ ಕೆಲವು ರಾಜಕೀಯ ಪಕ್ಷಗಳ ಮುಖಂಡರು ತಮ್ಮ ಏಜೆಂಟರ ಕಿಸೆ ತುಂಬಲು ಈ ಕಾಯಿದೆಯ ಹಣ ವಿವಿಧ ರೀತಿಯಲ್ಲಿ ಪೋಲಾಗುತ್ತಿದೆ. ಹೀಗಾಗಿ ಈ ಯೋಜನೆಯ ಕುರಿತಾಗಿ ಪ್ರತ್ಯೇಕ ಕಾಯಂ ಸಿಬ್ಬಂಧಿ ನೇಮಿಸಿದ್ದರೆ ಇಂತಹ ಭ್ರಷ್ಟಾಚಾರ ತಡೆಗಟ್ಟಲು ಅನುಕೂಲವಾಗುತ್ತದೆ ಎಂಬ ನೆಲೆಯಲ್ಲಿ ಈ ಲೇಖನದಲ್ಲಿ ಚರ್ಚಿಸಲಾಗಿದೆ.

ಗ್ರಾಮೀಣ ಅಭಿವೃದ್ಧಿ ಸಚಿವಾಲಯ, ಭಾರತ ಸರ್ಕಾರದ ವತಿಯಿಂದ ಪ್ರಕಟಣೆಗೊಂಡ Mahatma Gandhi NREGA Sameeksha: Mahatma Gandhi Rashtriya Grameena Rozgar Guarantee Adhiniyam, 2005 par soda Adhyayanon ka Sankalan(2006-2012) ಎಂಬ

ಕೃತಿಯು ೨೦೧೨ರಲ್ಲಿ ಪ್ರಕಟಗೊಂಡಿದೆ. NREGA ಯೋಜನೆಯು ದೇಶದ ಅತ್ಯಂತ ಮಹಾತ್ವಕಾಂಕ್ಷಿ ಯೋಜನೆಯಾಗಿದೆ. ಗ್ರಾಮೀಣ ಭಾಗದ ಜನರಿಗೆ ಸಾಮಾಜಿಕ ಹಾಗೂ ಆರ್ಥಿಕ ಭದ್ರತೆ ಒದಗಿಸಲು ಈ ಯೋಜನೆಯನ್ನು ಸರಕಾರ ಕಾರ್ಯರೂಪಕ್ಕೆ ತಂದಿದೆ. ಈ ಯೋಜನೆಯ ಮೂಲ ತಾತ್ವಿಕ ಹಿನ್ನೆಲೆಯಲ್ಲಿ ಸ್ವರೂಪದ ಬಗೆಗೆ ಈ ಕೃತಿ ಮಹತ್ವದ ವಿಚಾರವನ್ನು ಸಾದರಪಡಿಸುತ್ತದೆ. ದೇಶದ ಗ್ರಾಮೀಣ ಭಾಗದ ಕುಟುಂಬಗಳು ಪ್ರತಿವರ್ಷ ನಾಲ್ಕನೆಯ ಒಂದು ಭಾಗ ಭಾಗವಹಿಸಿ ಇದರ ಸಫಲತೆ ಪಡೆದುಕೊಳ್ಳುವಿಕೆಯಲ್ಲಿ ಈ ಯೋಜನೆ ಸಹಕಾರಿಯಾಗಿದೆ. ದೇಶದಲ್ಲಿ ಈ ಯೋಜನೆಯಿಂದ ಸಾವಿರದ ಇನ್ನೂರು ಕೋಟಿ ಉದ್ಯೋಗವನ್ನು ಸೃಷ್ಟಿಮಾಡಿದೆ. ಇದರಿಂದ ಗ್ರಾಮೀಣ ಭಾಗದ ಜನತೆ ಒಂದು ಲಕ್ಷದ ಹತ್ತು ಸಾವಿರ ರೂಪಾಯಿಗಳ ವೇತನವನ್ನು ನೇರವಾಗಿ ಪಡೆದುಕೊಂಡಿದ್ದಾರೆ. ಇದರ ಸಾಪಲ್ಯತೆಯ ಕುರಿತಾಗಿ ವಿಶ್ವದಾದ್ಯಂತ ಅನೇಕ ಸಂಶೋಧಕರು, ಸಾಮಾಜಿಕ ಕಾರ್ಯಕರ್ತರು ಗಮನ ಸೆಳೆದು ಇದರ ಕುರಿತಾಗಿ ಅನೇಕ ರೀತಿಯ ಅಧ್ಯಯನಗಳು ನಡೆದಿವೆ. ವರದಿಯ ರೂಪದಲ್ಲಿರುವ ಈ ಕೃತಿಯು ಯೋಜನೆಯ ಕಾರ್ಯಕ್ರಮದ ಸಕರಾತ್ಮಕ ಮತ್ತು ಧನಾತ್ಮಕ ಪರಿಣಾಮದ ಅನುಷ್ಠಾನ, ನಿಯಂತ್ರಣ ಮತ್ತು ನಿರ್ಬಂಧಗಳನ್ನು ಗುರುತಿಸುವ ಉದ್ದೇಶದಿಂದ ಭಾರತ ಸರ್ಕಾರವು ಈ ಪುಸ್ತಕವನ್ನು ಹೊರತಂದಿದೆ.

ಉದ್ಯೋಗ ಖಾತ್ರಿ ಯೋಜನೆಯು ಗ್ರಾಮೀಣ ಭಾಗದಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಗೊಂಡಲ್ಲಿ ಆ ಭಾಗದ ಜನರ ಮೂಲಭೂತ ಸೌಯರ್ಕ, ಆರ್ಥಿಕ ಅಭಿವೃದ್ಧಿ ಸಮರ್ಥವಾಗಿರಲು ಸಾಧ್ಯತೆಗಳಿವೆ ಎಂಬ ರೀತಿಯಲ್ಲಿ ವಿವರಿಸುತ್ತದೆ.

NREGA and Quality of life of Benificiries ಎಂಬ ಇಂಗ್ಲಿಷ್ ಕೃತಿಯನ್ನು Bigi Thomas ಅವರು ೨೦೧೪ರಲ್ಲಿ ಪ್ರಕಟಿಸಿದ್ದಾರೆ. ಈ ಕೃತಿಯು ಗ್ರಾಮೀಣ ಭಾಗದ ಜನಸಾಮಾನ್ಯರ ಜೀವನ ಮಟ್ಟವನ್ನು ಸುಧಾರಿಸಲು ಸರ್ಕಾರ ಈ ಯೋಜನೆಯನ್ನು ರೂಪಿಸಿದೆ. ಬಡತನದಿಂದ ಬಳಲುತ್ತಿರುವ ಜನಗಳಿಗೆ ಉದ್ಯೋಗ ಖಾತ್ರಿಯ ಮೂಲಕ ಕನಿಷ್ಠ ವೇತನವನ್ನು ನೀಡಿ ಅವರ ಬಡತನವನ್ನು ಸುದಾರಿಸಲು ಈ ಯೋಜನೆಯ ಮಹತ್ವದ ಉದ್ದೇಶವಾಗಿದೆ. ದೇಶದ ಅಭಿವೃದ್ಧಿ ಗ್ರಾಮೀಣ ಜನರ ಬಡತನ ನಿವಾರಿಸಿ ಆರ್ಥಿಕವಾಗಿ ಸಬಲರನ್ನಾಗಿ ಮಾಡಿ ಅವರ ಜೀವನ ಮಟ್ಟವನ್ನು ಸುದಾರಿಸುವ ಗುರಿಯನ್ನು ಈ ಯೋಜನೆ ಹೊಂದಿದೆ. ಉದ್ಯೋಗ ಖಾತ್ರಿಯ ಕುರಿತಾಗಿ ಸಕರಾತ್ಮಕವಾದ ನಿಲುವನ್ನು ಈ ಕೃತಿ ತಿಳಿಯಪಡಿಸುತ್ತದೆ. ಅಲ್ಲದೇ ಫಲಾನುಭವಿಗಳು ಈ ಯೋಜನೆಯ ಮೂಲಕ ಪಡೆದುಕೊಂಡ ಲಾಭದ ಬಗೆಗೆ ವಿಶ್ಲೇಷಣೆಯನ್ನು ನೀಡುತ್ತದೆ. ಗ್ರಾಮೀಣ ಭಾಗದ ಜನರ ಆರೋಗ್ಯ, ಮಕ್ಕಳ ಪಾಲನೆ, ಪೋಷಣೆ, ಶಿಕ್ಷಣ, ಜೀವನಾದಾರ ಬಳಕೆ ವಸ್ತುಗಳ ಖರೀದಿ, ಆರ್ಥಿಕ ಪರಿಸ್ಥಿತಿ, ಜೀವನ ಮಟ್ಟಕ್ಕೆ ಸಂಬಂಧಿಸಿದ ಒಂದು ಉತ್ತಮವಾದ ಜೀವನ ಮಟ್ಟದ ಸುಧಾರಣೆಯ ಬಗೆಗೆ ಈ ಪುಸ್ತಕ ಅಮೂಲ್ಯವಾದ ವಿಚಾರವನ್ನು ನಿರೂಪಿಸುತ್ತದೆ.

Employment Guarantee Schemes: Job Creation and Policy in Developing countries and Emerging Markets ಈ ಕೃತಿಯನ್ನು ೨೦೧೨ರಲ್ಲಿ Michael J.Murray, Mathew Forstater Palgrave Macmillan ಎಂಬ ಲೇಖಕರು ಈ ಇಂಗ್ಲಿಷ್ ಕೃತಿಯಲ್ಲಿ ಉದ್ಯೋಗ ಸೃಷ್ಟಿಸುವಿಕೆಯಲ್ಲಿ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು ಅನುಸರಿಸುತ್ತಿರುವ ನೀತಿ ಹಾಗೂ ಮಾರುಕಟ್ಟೆ ವ್ಯವಸ್ಥೆಯ ಬಗೆಗೆ ಇಲ್ಲಿ ಚರ್ಚಿಸಲಾಗಿದೆ. ಮುಂದುವರೆದ ರಾಷ್ಟ್ರಗಳಾದ ಆಸ್ಟ್ರೇಲಿಯಾ ಮತ್ತು ಯುನೈಟೆಡ್ ಸ್ಟೇಟ್ಸ್‌ಗಳಲ್ಲಿ ಪ್ರತಿಯೊಬ್ಬ ವ್ಯಕ್ತಿಗೂ ಉದ್ಯೋಗದ ಭರವಸೆಯು ಇದ್ದೆ ಇರುತ್ತದೆ. ಆದರೆ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ನೇರ ಉದ್ಯೋಗ ಸೃಷ್ಟಿಯ ಅವಕಾಶಗಳ ಬಗೆಗೆ ಚಿಂತಿಸಬೇಕಾಗಿದೆ. ಅದರಲ್ಲೂ ವಿಶೇಷವಾಗಿ ಬ್ರಿಕ್ಸ್ ದೇಶಗಳಲ್ಲದೇ ಘಾನ, ಅರ್ಜೇಂಟಿನಾ ಹಾಗೂ ಭಾರತದಂತ ದೇಶಗಳಲ್ಲಿ ಉದ್ಯೋಗ ಸೃಷ್ಟಿಸುವಿಕೆಯು ಅತ್ಯವಶ್ಯಕವಾಗಿದೆ. ಇಲ್ಲಿ ಉದ್ಯೋಗದ ಭರವಸೆ, ಪರಿಸರ ಸಂರಕ್ಷಣೆ, ಆರ್ಥಿಕ ಅಭಿವೃದ್ಧಿ, ಶಿಕ್ಷಣ ಹಾಗೂ ನಿರುದ್ಯೋಗ ಇವುಗಳು ಸಮುದಾಯದ ಮೇಲೆ ಬೀರುವ ಪರಿಣಾಮಗಳ ಕುರಿತು ಇಲ್ಲಿ ಚರ್ಚಿಸಲಾಗಿದೆ.

National Rural Employment Guarantee Act: Issues, Challenges and Experiences ಎಂಬ ಇಂಗ್ಲಿಷ್ ಕೃತಿಯನ್ನು Sudha V.Menon ಇವರು ೨೦೦೮ರಲ್ಲಿ ಈ ಕೃತಿಯನ್ನು ರಚಿಸಿದ್ದಾರೆ. ಉದ್ಯೋಗ ಖಾತ್ರಿ ಯೋಜನೆಯ ಸಮಸ್ಯೆ ಸವಾಲುಗಳು ಎಂಬ ಮಹತ್ವದ ವಿಚಾರವನ್ನು ಇದು ಒಳಗೊಂಡಿದೆ. ಇದರ ಕುರಿತಾಗಿ ರೂಪುಗೊಂಡ ನೀತಿಗಳು ಕಾಯಿದೆಗಳ ಬಗೆಗೆ ಮಾಹಿತಿ ನೀಡಲಾಗಿದೆ. ಗ್ರಾಮೀಣ ಭಾಗದ ಜನರ ಬಡತನ ನಿವಾರಿಸಿ ಅವರ ಜೀವನ ಮಟ್ಟ ಸುಧಾರಣೆ ಕುರಿತು ನಿರೂಪಿಸಿದೆ. ಈ ಯೋಜನೆಯ ನೀತಿ ನಿಯಮಗಳು, ಕಾಯಿದೆ ಹಾಗೂ ಪಂಚಾಯತ್ ವ್ಯವಸ್ಥೆಯ ಬಗೆಗೆ ಈ ಕೃತಿಯಲ್ಲಿ ಚರ್ಚಿಸಿದೆ. ಜೊತೆಗೆ ಓರಿಸ್ಸಾ ರಾಜ್ಯದಲ್ಲಿ ಈ ಯೋಜನೆಯ ಅವ್ಯವಹಾರಗಳ ಬಗೆಗೆ ಅಧ್ಯಯನ ಮಾಡಲಾಗಿದೆ.

K.K. Bagchi ಅವರು ಸಂಪಾದಿಸಿದ Mahatma Gandhi National Rural Employment Guarantee act(MNREGA) as right to Employment: Assessment of impact and Effectiveness ಎಂಬ ಇಂಗ್ಲಿಷ್ ಕೃತಿಯು ೨೦೧೧ರಲ್ಲಿ ಪ್ರಕಟಗೊಂಡಿದೆ. ದೇಶದಲ್ಲಿ ಪ್ರಥಮ ಬಾರಿಗೆ ೨೦೦೫ರಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾನೂನು ಜಾರಿಗೆ ಬಂದಿತು. ಈ ಕಾಯಿದೆಯ ಪ್ರಕಾರ ಒಂದು ಹಣಕಾಸು ವರ್ಷದಲ್ಲಿ ನೂರು ದಿನಗಳ ಕೆಲಸವನ್ನು ಪ್ರತಿ ಕುಟುಂಬದ ಸದಸ್ಯರಿಗೆ ಕೊಡುವುದು ಕಡ್ಡಾಯವಾಗಿದೆ. ಈ ಕಾಯಿದೆಯನ್ನು ಫೆಬ್ರವರಿ ೨, ೨೦೦೬ರಂದು ದೇಶದಾದ್ಯಂತ ೨೦೦ ಜಿಲ್ಲೆಗಳಲ್ಲಿ ಜಾರಿಗೆ ತರಲಾಯಿತು. ನಂತರ ೨೦೦೮-೦೯ರಲ್ಲಿ ಈ ಕಾಯಿದೆಯನ್ನು ದೇಶದಾದ್ಯಂತ ವಿಸ್ತರಿಸುವುದರ ಜೊತೆಗೆ ಈ ಯೋಜನೆಯನ್ನು ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಎಂದು ಮರುನಾಮಕರಣ ಮಾಡಲಾಯಿತು. ಈ ಕಾಯಿದೆಯು ಇಂದು ಭಾರತದ

ಪ್ರತಿಯೊಂದು ರಾಜ್ಯದಲ್ಲಿ ಅಸ್ತಿತ್ವದಲ್ಲಿದ್ದು, ಭಾರತವಾದ್ಯಂತ ಹಲವಾರು ರಾಜ್ಯಗಳಲ್ಲಿ ಗ್ರಾಮೀಣ ಭಾಗದ ಜನರು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಕೆಲಸಕ್ಕೆ ಗುಳೆ ಹೋಗುವುದನ್ನು ತಪ್ಪಿಸಲು ಈ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡಲಾಗಿದೆ. ಈ ಕಾರ್ಯಕ್ರಮ ಭಾರತ ಸರ್ಕಾರದ ಮಹತ್ವಕಾಂಕ್ಷಿ ಯೋಜನೆಯಾಗಿದ್ದು, ಇದರ ಮೂಲ ಉದ್ದೇಶ ಬಡಜನರಿಗೆ ಗ್ರಾಮೀಣ ಪ್ರದೇಶಗಳಲ್ಲಿ ಕೂಲಿಯನ್ನು ಒದಗಿಸಿ ಗ್ರಾಮೀಣ ಭಾಗದ ಜನರ ಜೀವನಮಟ್ಟ ಸುಧಾರಣೆ ಮಾಡುವುದಾಗಿದೆ. ಈ ನಿಟ್ಟಿನಲ್ಲಿ ಈ ಕಾಯಕ್ರಮವನ್ನು ಯಸಸ್ವಿಗೊಳಿಸಲು ಹಲವಾರು ಮಾರ್ಪಾಡುಗಳು ಮತ್ತು ಹಲವಾರು ಸಂಶೋಧನೆಗಳು ನಡೆದಿವೆ.

ಬೇರೆ ಬೇರೆ ರಾಜ್ಯಗಳಲ್ಲಿ ಈ ಕಾರ್ಯಕ್ರಮ ಪರಿಣಾಮಕಾರಿ ಅನುಷ್ಠಾನ ಯಾವ ರೀತಿಯಾಗಿದೆ ಎಂಬುದನ್ನು ಹಲವಾರು ಲೇಖಕರು ತಮ್ಮದೇಯಾದ ಪ್ರಬಂಧ ರೂಪದಲ್ಲಿ ಈ ಪುಸ್ತಕದಲ್ಲಿ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡಿದ್ದಾರೆ. ಸಿಬ್ ರಂಜನ್ ಅವರು ಹೇಳುವಂತೆ; 'ಈ ಕಾರ್ಯಕ್ರಮ ಭಾರತದಲ್ಲಿ ಅತ್ಯುತ್ತಮವಾಗಿದ್ದು ಪರಿಣಾಮಕಾರಿಯಾಗಿ ಅನುಷ್ಠಾನವಾಗಬೇಕಿದೆ. ಈ ಕಾರ್ಯಕ್ರಮ ಅನುಷ್ಠಾನವಾದ ನಂತರ ಅದರ ಸಮಗ್ರ ಅನುಷ್ಠಾನ ಸರಿಯಾದ ರೀತಿಯಲ್ಲಿ ಆಗುತ್ತಿಲ್ಲ. ಇದಕ್ಕೆ ಕಾರಣ ರಾಜಕೀಯ ಇಚ್ಛಾಶಕ್ತಿಯ ಕೊರತೆ, ಅಧಿಕಾರಿಗಳ ನಿರ್ಲಕ್ಷತನ ಮತ್ತು ಸಮುದಾಯದ ಭಾಗವಹಿಸುವಿಕೆಯ ನಿರುತ್ಸಾಹವಾಗಿದೆ' ಎಂದಿದ್ದಾರೆ.

ಪ್ರಧಾನ ಮತ್ತು ಗೊಲಿಯತ್ ಅವರು ಹೇಳುವಂತೆ; ಈ ಕಾರ್ಯಕ್ರಮದ ಮೂಲ ಧ್ಯೇಯ ಬಡತನ ಮತ್ತು ನಿರುದ್ಯೋಗವನ್ನು ನಿರ್ಮೂಲನ ಮಾಡುವುದಾಗಿದ್ದು, ಈ ಕಾರ್ಯಕ್ರಮದಲ್ಲಿರುವ ದೌರ್ಬಲ್ಯ, ಅಡೆತಡೆಗಳನ್ನು ಸರಿಯಾಗಿ ಗುರುತಿಸಿ ಒಂದು ದಿಟ್ಟ ಹೆಜ್ಜೆ ಇಡಬೇಕಿದೆ. ಅದು ಅಲ್ಲದೇ ಈ ಕಾರ್ಯಕ್ರಮದ ಸಮಗ್ರ ಅನುಷ್ಠಾನ ನಿಧಾನಗತಿಯಲ್ಲಿ ಆಗುತ್ತಿದ್ದು ಅದರ ಪರಿಣಾಮ ಎಲ್ಲರಿಗೂ ಗೋಚರಿಸುತ್ತಿದೆ. ಈ ಕಾರ್ಯಕ್ರಮ ಪ್ರಜಾಪ್ರಭುತ್ವದ ಅಭಿವೃದ್ಧಿ ಸಂಕೇತವಾಗಿದ್ದು ಇದರ ಬೆಳವಣಿಗೆ ನಿಧಾನಗತಿಯಲ್ಲಿ ಸಾಗಿದೆ ಎಂದಿದ್ದಾರೆ.

ಮೌರ್ಯ ಮತ್ತು ಪಾಲ್ ಅವರ ವಿಶ್ಲೇಷಣೆ: ಈ ಕಾರ್ಯಕ್ರಮದ ಸಮಗ್ರ ಅನುಷ್ಠಾನಕ್ಕೆ ಅನುದಾನದ ಕೊರತೆಯಿಲ್ಲ ಬದಲಾಗಿ ಅನುದಾನವನ್ನು ಯಾವ ರೀತಿಯಾಗಿ ಬಳಕೆ ಮಾಡಬೇಕು ಎನ್ನುವುದೇ ದೊಡ್ಡ ಸಮಸ್ಯೆಯಾಗಿದೆ.

ಒಟ್ಟಾರೆ ಈ ಮೇಲೆ ನಿರೂಪಿಸಿದ ಕೃತಿಗಳ ಕುರಿತು ಹೇಳುವುದಾದರೆ ಈ ಯೋಜನೆಯ ಸಫಲತೆ ಮತ್ತು ವಿಫಲತೆ ಬಗೆಗೆ ಅನೇಕ ಜನ ಬರಹಗಾರರು ವಿವಿಧ ನೆಲೆಯಲ್ಲಿ ಅಧ್ಯಯನ ಮಾಡಿದ್ದಾರೆ. ಗ್ರಾಮೀಣ ಭಾಗದ ಜನರ ಬಡತನವನ್ನು ನಿವಾರಿಸಲು ಅವರನ್ನು ಆರ್ಥಿಕವಾಗಿ ಸಬಲರನ್ನಾಗಿ ಮಾಡಲು ಸೃಷ್ಟಿಯಾದ ಭಾರತ ಸರ್ಕಾರದ ಮಹತ್ವದ ಯೋಜನೆ ಇದಾಗಿದೆ. ಇದು ದೇಶದಾದ್ಯಂತ ಬಳಕೆಯಲ್ಲಿ ಬಂದರೂ ಕೆಲವು ಕಡೆ

ಯಶಸ್ಸು ಮತ್ತೆ ಕೆಲವು ಕಡೆ ಕುಂಠಿತಗೊಂಡಿದೆ. ಸರಕಾರಿ ಅಧಿಕಾರಿಗಳು, ಚುನಾಯಿತ ಪ್ರತಿನಿಧಿಗಳು, ಗುತ್ತಿಗೆದಾರರು, ಗ್ರಾಮೀಣ ಭಾಗದ ಪ್ರಬಲ ಸಮುದಾಯದ ಹಾಗೂ ಭೂಮಾಲೀಕ ವರ್ಗಗಳಿಂದ ಈ ಯೋಜನೆ ಕುಂಠಿತಗೊಳ್ಳಲು ಮಹತ್ವದ ಕಾರಣವಾಗಿದೆ.

ಜನಸಾಮಾನ್ಯರ ಬದುಕಿನ ಆಶಾಕಿರಣವೆಂದು ರೂಪಿತವಾದ ಈ ಯೋಜನೆ ಗ್ರಾಮೀಣ ಭಾಗದ ಜನರಿಗೆ ಸರಿಯಾದ ಕ್ರಮದಲ್ಲಿ ಬಳಕೆಯಾಗುತ್ತಿಲ್ಲ. ಇದಕ್ಕೆ ಪ್ರಮುಖ ಕಾರಣ ಅವರ ಅನಕ್ಷರತೆ ಹಾಗೂ ಯೋಜನೆಯ ಕುರಿತಾಗಿ ಸೂಕ್ತವಾದ ಪ್ರಜ್ಞೆ ಇಲ್ಲದೆ ಇರುವುದಾಗಿದೆ. ಹೀಗಾಗಿ ಯೋಜನೆಯು ಕುಂಠಿತಗೊಳ್ಳಲು ಕಾರಣೀಭೂತ ವ್ಯವಸ್ಥೆಯನ್ನು ಸುಧಾರಿಸುವ ಕ್ರಮವನ್ನು ಅನುಸರಿಸಿದರೆ ಈ ಯೋಜನೆ ಗ್ರಾಮೀಣ ಭಾಗದ ಜನರಿಗೆ ಸೂಕ್ತವಾದ ನೆಲೆಯಲ್ಲಿ ದೊರೆಯುತ್ತದೆ. ಇದರಿಂದ ಜನರು ಒಂದು ಕಡೆಯಿಂದ ಮತ್ತೊಂದು ಕಡೆಗೆ ವಲಸೆ ಹೋಗುವ ಪ್ರಕ್ರಿಯೆ ನಿಲ್ಲುವ ಸಾಧ್ಯತೆಗಳಿವೆ.

ಅವರ ಶ್ರಮಕ್ಕೆ ತಕ್ಕಂತೆ ಸೂಕ್ತ ವೇತನ ನೀಡುವ ಕ್ರಮಗಳು ಸರಿಯಾಗಿ ಜಾರಿಗೊಂಡರೆ ಗ್ರಾಮೀಣ ಜನರ ಜೀವನ ಮಟ್ಟ ಸುಧಾರಿಸಲು ಈ ಯೋಜನೆ ಸಹಕಾರಿಯಾಗುತ್ತದೆ. ಹೀಗೆ ಯೋಜನೆಯ ಅನುಷ್ಠಾನ, ಬಳಕೆ, ನೀತಿ, ಕಾಯಿದೆ ಹಾಗೂ ಸಫಲತೆ, ವಿಫಲತೆಯ ಬಗೆಗೆ ಮೇಲಿನ ಕೃತಿಗಳಲ್ಲಿ ಚರ್ಚಿತಗೊಂಡಿದೆ.

ಈ ಯೋಜನೆಯನ್ನು ಕುರಿತು ಬಂದ ಒಟ್ಟಾರೆ ಅಧ್ಯಯನಗಳ ಮಾದರಿಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಮುಖ್ಯವಾಗಿ ಮೂರು ನೆಲೆಗಳು ಕಂಡುಬರುತ್ತದೆ. ಮೊದಲನೆ ಮಾದರಿಯಲ್ಲಿ ಪರಿಚಯಾತ್ಮಕ ನೆಲೆ ಇದೆ. ಈ ಮಾದರಿಯಲ್ಲಿ ಸರಕಾರದ ಪ್ರಾಯೋಜಿತ ಅಧ್ಯಯನಗಳು ಮತ್ತು ವರದಿಗಳ ಸಂಖ್ಯೆ ದೊಡ್ಡದಿದೆ. ಇದರಲ್ಲಿ ಈ ಯೋಜನೆಗಾಗಿ ಮುಂಜೂರು ಮಾಡಿದ ಹಣ, ಖರ್ಚಾದದ್ದನ್ನು ತೋರಿಸುವ ಬಗೆ ದಟ್ಟವಾಗಿ ಕಾಣುತ್ತದೆ. ಈ ವರದಿಗಳಲ್ಲಿ ಜನರಿಗೆ ನರೇಗಾ ಯೋಜನೆಯನ್ನು ಪರಿಚಯಿಸಬೇಕು ಎನ್ನವುದೇ ಮುಖ್ಯ ಉದ್ದೇಶವಾದ ಕಾರಣ ಅದರ ವಿಮರ್ಶಾತ್ಮಕ ನೆಲೆ ಇರುವುದಿಲ್ಲ. ಈ ಪರಿಚಯ ಕೂಡ ತುಂಬಾ ಪ್ರಾಥಮಿಕವಾದ ಪರಿಚಯವಾಗಿದೆ. ಇಲ್ಲಿ ಯೋಜನೆಯನ್ನು ದುರುಪಯೋಗ ಮಾಡಿಕೊಳ್ಳಬಹುದಾದ ಮತ್ತು ಆ ಬಗ್ಗೆ ಜನರು ಎಚ್ಚರ ವಹಿಸಬಹುದಾದ ಸಂಗತಿಗಳು ಕೂಡ ಇರುವುದಿಲ್ಲ.

ಎರಡನೆ ಮಾದರಿಯಲ್ಲಿ ಯೋಜನೆಯ ಸರಕಾರಿ ವರದಿಗಳನ್ನು ಆಧರಿಸಿದ ಅಧ್ಯಯನಗಳಿವೆ. ಇವು ಸರಕಾರದ ಅಂಕೆ ಸಂಖ್ಯೆಗಳನ್ನು ಆಧರಿಸಿ ಅದರ ಸಾಧಕ ಭಾದಕಗಳನ್ನು ಚರ್ಚೆ ಮಾಡಲಾಗಿದೆ. ಇದರಲ್ಲಿ ಯೋಜನೆಯ ಯಶೋಗಾಥೆಯನ್ನು ಹೇಳುವ ಮಾದರಿ ಹೆಚ್ಚಾಗಿರುತ್ತದೆ. ಇಲ್ಲಿ ಆಂಶಿಕವಾಗಿ ನೈಜತೆ ಇರುತ್ತದಾದರೂ ಅದನ್ನು ಇಡೀ ಯೋಜನೆಗೆ ಅನ್ವಯಿಸಲಿಕ್ಕಾಗುವುದಿಲ್ಲ. ಈ ಬಗೆಯ ಅಧ್ಯಯನ ವರದಿಗಳು ಸರಕಾರಿ ವರದಿಯನ್ನು ಅನುಮಾನಿಸುವುದಿಲ್ಲ. ಅವುಗಳ ಸತ್ಯಾಸತ್ಯತೆಯ ಬಗ್ಗೆಯೂ ಗಂಭೀರವಾಗಿ ಆಲೋಚಿಸುವುದಿಲ್ಲ.

ಪ್ರಸ್ತುತ ಅಧ್ಯಯನದ ಸಂದರ್ಭದಲ್ಲಿ ಅನುಭವಕ್ಕೆ ಬಂದದ್ದೇನೆಂದರೆ ಗ್ರಾಮ, ತಾಲೂಕು, ಜಿಲ್ಲಾ ಪಂಚಾಯತಿಗಳು ಉತ್ಪಾದಿಸುವ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಅಂಕೆಸಂಖ್ಯೆಗಳಿಗೂ ಅವುಗಳ ನಿಜದ ಅನುಷ್ಠಾನಕ್ಕೂ ತುಂಬಾ ಅಂತರ ಕಂಡುಬಂದಿದೆ. ವಾಸ್ತವಕ್ಕೆ ಹತ್ತಿರವಿರುವ ಅಂಕೆಸಂಖ್ಯೆಗಳ ಪ್ರಮಾಣ ಕ್ಕಿಂತ ಅವಾಸ್ತವಿಕ ಅಂಕೆಸಂಖ್ಯೆಗಳ ಪ್ರಮಾಣವೆ ದೊಡ್ಡದಾಗಿದೆ. ಆದರೂ ಯೋಜನೆಯ ಯಶಸ್ಸನ್ನು ತೋರುವ ಅಧ್ಯಯನ ವರದಿಗಳನ್ನು ಪರಾಮರ್ಶೆ ಮಾಡದಿರುವುದು ದೊಡ್ಡ ಮಿತಿಯಾಗಿದೆ. ಕೆಲವೊಮ್ಮೆ ವಿಶ್ವವಿದ್ಯಾಲಯಗಳಲ್ಲಿ ಪದವಿಗಾಗಿ ಮಂಡನೆಯಾಗುವ ಪ್ರಬಂಧಗಳೂ ಬಹುತೇಕ ಸರಕಾರಿ ಅಂಕೆ ಸಂಖ್ಯೆಗಳನ್ನೇ ಅಧರಿಸಿರುವುದರಿಂದ ಹೆಚ್ಚು ವಿಮರ್ಶಾತ್ಮಕವಾಗಿಲ್ಲ.

ಮೂರನೆಯದಾಗಿ ವಿಮರ್ಶಾತ್ಮಕವಾದ ಅಧ್ಯಯನ ವರದಿಗಳಿವೆ. ಉದಾ: ಇಪಿಡಬ್ಲ್ಯು ನಂತಹ ಅಭಿವೃದ್ಧಿ ಪತ್ರಿಕೆಗಳಲ್ಲಿ ಕ್ಷೇತ್ರಕಾರ್ಯವನ್ನು ಆಧರಿಸಿದ ವಿಮರ್ಶಾತ್ಮಕ ಲೇಖನಗಳು ಪ್ರಕಟವಾಗಿವೆ. ಈ ಮಾದರಿಗಳು ಹೆಚ್ಚಾಗಿ ಮುದ್ರಣ ಮತ್ತು ವಿದ್ಯುನ್ಮಾನ ಮಾಧ್ಯಮಗಳಲ್ಲಿ ಕಂಡುಬರುತ್ತದೆ. ದಿನಪತ್ರಿಕೆಗಳ ವರದಿಗಳಲ್ಲಿ ಮೇಲು ನೋಟದ ವಿಮರ್ಶೆ ಇದ್ದರೆ, ಸಮಾಜ ವಿಜ್ಞಾನದ ಇಪಿಡಬ್ಲ್ಯುನಂತಹ ಗಂಭೀರ ಸಂಶೋಧನ ಪತ್ರಿಕೆಗಳಲ್ಲಿ ಯೋಜನೆಯ ಸೂಕ್ಷ್ಮವಾದ ವಿವರಗಳನ್ನು ಅದರಲ್ಲೂ ಜಾತಿ ಮತ್ತು ಲಿಂಗತಾರತಮ್ಯದ ನೆಲೆಗಳಲ್ಲಿ ವಿಶ್ಲೇಷಿಸಿದ್ದು ಕಾಣುತ್ತದೆ. ಪ್ರಸ್ತುತ ಅಧ್ಯಯನಕ್ಕೆ ಮೂರನೆ ವಿಮರ್ಶಾತ್ಮಕ ಮಾದರಿಯ ಅಧ್ಯಯನ ಮತ್ತು ಸಂಶೋಧನೆಗಳು ಪ್ರಭಾವ ಬೀರಿವೆ. ಮತ್ತು ಈ ಅಧ್ಯಯನಗಳ ವಿಮರ್ಶಾತ್ಮಕ ನೆಲೆಗಳನ್ನು ಗ್ರಹಿಸಿಕೊಂಡು ಆ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಕ್ಷೇತ್ರಕಾರ್ಯದಲ್ಲಿ ಮಾಹಿತಿ ಸಂಗ್ರಹಣೆ ಮತ್ತು ವಿಶ್ಲೇಷಣೆಯನ್ನು ಮಾಡಲಾಗಿದೆ. ಆ ಕಾರಣಕ್ಕಾಗಿ ಈವರೆಗೆ ಬಂದ ಮಹಾತ್ಮಗಾಂಧಿ ಗ್ರಾಮೀಣ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯ ಸಂಶೋಧನ ಪ್ರಬಂಧಗಳಿಗಿಂತ ಪ್ರಸ್ತುತ ಅಧ್ಯಯನವು ಭಿನ್ನವಾಗಿದೆ. ಇದರಲ್ಲಿ ಲಿಂಗ ಸಂಬಂಧಿ ಸೂಕ್ಷ್ಮಗಳನ್ನು ಮುಖ್ಯವಾಗಿ ಗಮನಿಸಲಾಗಿದೆ. ಈ ನೆಲೆಯಲ್ಲಿ ಒಟ್ಟಾರೆ ಯೋಜನೆಯ ಅನುಷ್ಠಾನದ ತೊಡಕುಗಳು ಮತ್ತು ಅದರ ಸಾಧ್ಯಾಸಾಧ್ಯತೆಗಳ ಬಗ್ಗೆ ವಿವೇಚಿಸಲಾಗಿದೆ.

# ಅಧ್ಯಾಯ: ಮೂರು

## ಅಧ್ಯಯನ ಕ್ಷೇತ್ರದ ಚಾರಿತ್ರಿಕ ಹಾಗೂ ಭೌಗೋಳಿಕ ಹಿನ್ನೆಲೆ

## ಅಧ್ಯಾಯ: ಮೂರು

# ಅಧ್ಯಯನ ಕ್ಷೇತ್ರದ ಚಾರಿತ್ರಿಕ ಹಾಗೂ ಭೌಗೋಳಿಕ ಹಿನ್ನೆಲೆ

ಪ್ರಸ್ತುತ ಅಧ್ಯಯನವು ಹೈದ್ರಾಬಾದ್ ಕರ್ನಾಟಕದ ಮೂರು ಜಿಲ್ಲೆಗಳನ್ನು ವ್ಯಾಪ್ತಿಯಾಗಿರಿಸಿಕೊಂಡಿದೆ. ಆದ್ದರಿಂದ ಈ ಪ್ರದೇಶದ ಭೌಗೋಳಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯನ್ನು ಸೂಕ್ಷ್ಮವಾಗಿ ಚರ್ಚಿಸುವುದು ಅವಶ್ಯಕವಾಗಿದೆ. ಇದನ್ನು ಗಮನದಲ್ಲಿರಿಸಿಕೊಂಡು ಅಧ್ಯಯನ ಕ್ಷೇತ್ರದ ಭೌಗೋಳಿಕತೆಯನ್ನು ಗುರುತಿಸುವುದು ಒಂದು ಭಾಗವಾದರೆ, ಇನ್ನೊಂದು ಬಗೆಯಲ್ಲಿ ಸಾಂಸ್ಕೃತಿಕ ಹಿನ್ನೆಲೆಯನ್ನು ಸ್ತ್ರೀವಾದಿ ನೆಲೆಯಲ್ಲಿ ವಿಶ್ಲೇಷಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಮೊದಲಿಗೆ ಹೈದ್ರಾಬಾದ್ ಕರ್ನಾಟಕ ಪ್ರದೇಶದ ಚಾರಿತ್ರಿಕ ಹಿನ್ನೆಲೆ, ಭೌಗೋಳಿಕ ಲಕ್ಷಣಗಳು, ಜನಸಂಖ್ಯೆ, ಶಿಕ್ಷಣ, ಸಾಮಾಜಿಕ, ರಾಜಕೀಯ, ಧಾರ್ಮಿಕ ಮತ್ತು ಆರ್ಥಿಕ ಸ್ಥಿತಿಗತಿ ಈ ಎಲ್ಲಾ ವಿಷಯಗಳ ಕುರಿತಾದ ಒಂದು ಸಂಕ್ಷಿಪ್ತ ಪರಿಚಯವಿದೆ. ಅಂತೆಯೇ ಸಂಶೋಧನೆಗೆ ಪೂರಕವಾಗಿ ಅಧ್ಯಯನ ವ್ಯಾಪ್ತಿಯ ಪ್ರದೇಶಗಳಾದ ರಾಯಚೂರು, ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಗಳ ಪರಿಚಯಾತ್ಮಕ ಸಂಗತಿಗಳನ್ನು ಚರ್ಚಿಸಲಾಗಿದೆ. ಇಲ್ಲಿನ ಭೌಗೋಳಿಕ ಮತ್ತು ಸಾಂಸ್ಕೃತಿಕ ಸಂಗತಿಗಳು ಈ ಸಂಶೋಧನೆಯ ಮುಂದಿನ ಅಧ್ಯಯನಗಳ ವಿಶ್ಲೇಷಣೆ ಮತ್ತು ವಿವರಣೆಗಳಿಗೆ ನೆರವಾಗುತ್ತವೆ. ಹಾಗಾಗಿ ಇಲ್ಲಿನ ವಿವರಗಳು ಪ್ರತ್ಯೇಕವಾಗಿರದೆ ಈ ಸಂಶೋಧನೆಯಲ್ಲಿ ಸಾವಯವ ಸಂಬಂಧವನ್ನು ಪಡೆದುಕೊಂಡಿವೆ. ಮುಂದೆ ಭೌಗೋಳಿಕ ಸಂಗತಿಗಳ ಉಲ್ಲೇಖ ಬಂದಾಗ ಅಲ್ಲಲ್ಲಿ ಅವುಗಳನ್ನು ಪುನರಾವರ್ತಿಸದೆ ಈ ಅಧ್ಯಾಯದ ನೆರವಿನಿಂದ ವಿಸ್ತರಿಸಲಾಗುತ್ತದೆ. ಈ ಕಾರಣದಿಂದಾಗಿ ಅಧ್ಯಯನದ ಮಾಹಿತಿಗಳು ಪ್ರಾಥಮಿಕ ಸಂಗತಿಗಳೆ ಆಗಿದ್ದರು ಅವುಗಳು ಮುಂದಿನ ಅಧ್ಯಾಯಗಳ ವಿಶ್ಲೇಷಣೆಯಲ್ಲಿ ವಿಭಿನ್ನ ಅರ್ಥಗಳನ್ನು ಪಡೆಯುತ್ತವೆ.

ಭಾರತವು ಜನಸಂಖ್ಯೆಯಲ್ಲಿ ಜಗತ್ತಿನ ಎರಡನೇ ಅತೀ ದೊಡ್ಡ ದೇಶ. ದೇಶದ ಒಟ್ಟು ಇಪ್ಪತ್ತೊಂಬತ್ತು ರಾಜ್ಯಗಳ ಪೈಕಿ ಕರ್ನಾಟಕವೂ ಒಂದಾಗಿದೆ. ಕರ್ನಾಟಕ ರಾಜ್ಯದಲ್ಲಿ ಆಡಳಿತದ ಅನುಕೂಲಕ್ಕಾಗಿ ಬೆಂಗಳೂರು, ಮೈಸೂರು, ಬೆಳಗಾಂ ಮತ್ತು ಗುಲ್ಬರ್ಗಾ ಒಳಗೊಂಡಂತೆ ಒಟ್ಟು ನಾಲ್ಕು ಕಂದಾಯ ವಿಭಾಗಗಳಿವೆ. ಪ್ರಸ್ತುತ ಗುಲ್ಬರ್ಗಾ, ರಾಯಚೂರು, ಬೀದರ್, ಬಳ್ಳಾರಿ, ಕೊಪ್ಪಳ ಮತ್ತು ಯಾದಗಿರಿ ಜಿಲ್ಲೆಗಳಿಂದ ಕೂಡಿದ ಗುಲ್ಬರ್ಗಾ ವಿಭಾಗವನ್ನೇ ಹೈದ್ರಾಬಾದ್ ಕರ್ನಾಟಕ ಪ್ರದೇಶವೆಂದು ಕರೆಯಲಾಗುತ್ತದೆ. ಮೊದಲಿಗೆ ಈ ಪ್ರದೇಶವು ಕರ್ನಾಟಕ ರಾಜ್ಯದ ಮೂರು ಜಿಲ್ಲೆಗಳನ್ನು ಅಂದರೆ ಬೀದರ್, ಗುಲ್ಬರ್ಗಾ ಮತ್ತು ರಾಯಚೂರು ಜಿಲ್ಲೆಗಳನ್ನು ಹೊಂದಿತ್ತು. ಚಾರಿತ್ರಿಕವಾಗಿ ಬಳ್ಳಾರಿ ಜಿಲ್ಲೆಯನ್ನು ಹೊರತುಪಡಿಸಿ ಉಳಿದ ಮೂರು ಜಿಲ್ಲೆಗಳು ಮಾತ್ರ ಹೈದ್ರಾಬಾದ್-ಕರ್ನಾಟಕದ ವ್ಯಾಪ್ತಿಗೆ ಒಳಪಟ್ಟಿದ್ದವು. ೧೯೫೬ರಲ್ಲಿ ಕರ್ನಾಟಕ ಏಕೀಕರಣಗೊಂಡು ಆಡಳಿತದ ಅನುಕೂಲಕ್ಕಾಗಿ ರಾಜ್ಯದಲ್ಲಿ ನಾಲ್ಕು ಕಂದಾಯ ವಿಭಾಗಗಳನ್ನು ರಚಿಸಲಾಯಿತು. ಪ್ರಾರಂಭದಲ್ಲಿ ಬಳ್ಳಾರಿ ಜಿಲ್ಲೆಯು ಬೆಂಗಳೂರು ಕಂದಾಯ ವಿಭಾಗದಲ್ಲಿತ್ತು. ನಂತರ ಅದನ್ನು ೧೯೬೬ ಫೆಬ್ರವರಿ ೧ರಂದು ಗುಲ್ಬರ್ಗಾ ಕಂದಾಯ ವಿಭಾಗಕ್ಕೆ ಸೇರಿಸಲಾಯಿತು".[೧] ಬಳ್ಳಾರಿ ಜಿಲ್ಲೆಯು ಗುಲ್ಬರ್ಗಾ ವಿಭಾಗದಲ್ಲಿ ಸೇರಿದ್ದರಿಂದ ಹೈದ್ರಾಬಾದ್ ಕರ್ನಾಟಕ ಪ್ರದೇಶದ ಒಂದು ಭಾಗವಾಗಿ ಈ ಜಿಲ್ಲೆಯು ಸೇರ್ಪಡೆಗೊಂಡಿತು. ಆ ನಂತರ ಈ ಪ್ರದೇಶದ ಅಭಿವೃದ್ಧಿಗಾಗಿ ೧೯೯೧ರಲ್ಲಿ ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಯನ್ನು ಸ್ಥಾಪಿಸಲಾಯಿತು. ಈ ಅಭಿವೃದ್ಧಿ ಮಂಡಳಿಯ ವ್ಯಾಪ್ತಿಯಲ್ಲಿ ಬಳ್ಳಾರಿ ಜಿಲ್ಲೆಯನ್ನೂ ಸಹ ಸೇರಿಸಲಾಯಿತು. ಹೀಗಾಗಿ ಇಂದಿನ ಹೈದ್ರಾಬಾದ್-ಕರ್ನಾಟಕ ಪ್ರದೇಶವೆಂದರೆ ಬೀದರ್, ಗುಲ್ಬರ್ಗಾ, ರಾಯಚೂರು, ಬಳ್ಳಾರಿ, ಕೊಪ್ಪಳ ಮತ್ತು ಯಾದಗಿರಿ ಈ ಆರು ಜಿಲ್ಲೆಗಳನ್ನು ಒಳಗೊಂಡ ಗುಲ್ಬರ್ಗಾ ವಿಭಾಗದ ಪ್ರದೇಶವಾಗಿದೆ.

### ೩.೧. ಚಾರಿತ್ರಿಕ ಹಾಗೂ ಭೌಗೋಳಿಕ ಹಿನ್ನೆಲೆ

ಹೈದ್ರಾಬಾದ್-ಕರ್ನಾಟಕ ಪ್ರದೇಶದ ಐತಿಹಾಸಿಕ ಮತ್ತು ಚಾರಿತ್ರಿಕ ಹಿನ್ನೆಲೆಗೂ ಈ ಪ್ರದೇಶದ ಅಭಿವೃದ್ಧಿಯ ಸ್ವರೂಪ ಮತ್ತು ಜನಸಾಮಾನ್ಯರ ಸ್ಥಿತಿ-ಗತಿಗಳಿಗೂ ಒಂದಕ್ಕೊಂದು ಸಂಬಂಧವಿದೆ. ಕಾರಣ ಈ ಪ್ರದೇಶವನ್ನು ಆಳಿದ ರಾಜವಂಶಗಳ ಆಳ್ವಿಕೆಯಿಂದ ಹಿಡಿದು ಬ್ರಿಟೀಷರ ಆಡಳಿತದವರೆಗೆ ಅಂದರೆ ಭಾರತಕ್ಕೆ ಸ್ವಾತಂತ್ರ್ಯ ಸಿಗುವವರೆಗೆ ಜನರ ಜೀವನ ವಿಧಾನಗಳು ತುಂಬಾ ಭಿನ್ನವಾಗಿದ್ದವು. ಹೈದ್ರಾಬಾದ್- ಕರ್ನಾಟಕ ಪ್ರದೇಶವು ಬ್ರಿಟೀಷರಿಂದ ಸ್ವಾತಂತ್ರ್ಯ ಪಡೆದರೂ ಅಂದಿನ ಸಂದರ್ಭದಲ್ಲಿ ಈ ಪ್ರದೇಶವನ್ನು ಆಳುತ್ತಿದ್ದ ನಿಜಾಮರಿಂದ ಸ್ವಾತಂತ್ರ್ಯಗೊಳ್ಳಲಿಲ್ಲ. ಹಾಗಾಗಿ ಸುಮಾರು ದಶಕಗಳವರೆಗೆ ಇಲ್ಲಿನ ಜನರು ಇನ್ನೊಬ್ಬರ ದಾಸ್ಯದಲ್ಲಿಯೇ ಜೀವನ ಸಾಗಿಸುವ ಅನಿವಾರ್ಯಕ್ಕೆ ಒಳಗಾಗಿದ್ದರು. ಇದು ಹೀಗೆಯೇ ಮುಂದುವರೆದು ಹೈದ್ರಾಬಾದ್- ಕರ್ನಾಟಕ ಭಾಗದ ಜನರು ಸ್ವತಂತ್ರವಾಗಿ ಜೀವನ ನಡೆಸಲು ಪರದಾಡುತ್ತಿರುವುದು ಕಂಡುಬರುತ್ತಿದೆ. ಹಾಗಾಗಿ ಇಲ್ಲಿನ ಜನರ ತೊಳಲಾಟದ ಜೀವನವನ್ನು

ಅರಿಯಲು ಚರಿತ್ರೆಯನು ಕೆದಕುವುದು ಅನಿವಾರ್ಯವಾಗಿದೆ. ಆದ್ದರಿಂದ ಈ ಚಾರಿತ್ರಿಕ ಹಿನ್ನೆಲೆಯನ್ನು ಅರ್ಥಮಾಡಿಕೊಳ್ಳದಿದ್ದರೆ ಈ ಭಾಗದ ಆರ್ಥಿಕ, ಸಾಮಾಜಿಕ, ಧಾರ್ಮಿಕ, ರಾಜಕೀಯ ಹಾಗೂ ಶೈಕ್ಷಣಿಕ ಸ್ಥಿತಿಗತಿಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುವುದಿಲ್ಲ. ಮೊದಲಿಗೆ ಹೈದ್ರಾಬಾದ್-ಕರ್ನಾಟಕದ ಚಾರಿತ್ರಿಕ ಹಿನ್ನೆಲೆಯನ್ನು ಸಂಕ್ಷಿಪ್ತವಾಗಿ ಕಟ್ಟಿಕೊಡುವುದರ ಜೊತೆಗೆ ಅಧ್ಯಯನದ ವ್ಯಾಪ್ತಿಗೆ ಒಳಪಡುವ ಮೂರು ಜಿಲ್ಲೆಗಳಾದ ರಾಯಚೂರು, ಕೊಪ್ಪಳ ಮತ್ತು ಬಳ್ಳಾರಿ ಪ್ರದೇಶಗಳ ಭೌಗೋಳಿಕ ಮತ್ತು ಸಾಂಸ್ಕೃತಿಕ ನೆಲೆಗಳನ್ನು ಪ್ರತ್ಯೇಕವಾಗಿಯೂ ಸೂಕ್ಷ್ಮವಾಗಿಯೂ ವಿವರಿಸಲು ಪ್ರಯತ್ನಿಸಲಾಗುವುದು. ಭಾರತದ ಚರಿತ್ರೆಯನ್ನು ಅಧ್ಯಯನ ಮಾಡುವಾಗ ಪುರುಷಕೇಂದ್ರಿತ ಇತಿಹಾಸವೆ ಮುನ್ನಲೆಗೆ ಬರುತ್ತದೆ. ಹಾಗಾಗಿ ಪುರುಷ ನಿರ್ಮಿತ ಚರಿತ್ರೆಯಲ್ಲಿ ಮಹಿಳೆ ಬದುಕಿ ಬಾಳಿದ್ದರ ದಾಖಲೆಗಳು ಎಲ್ಲಿಯೂ ಸಿಗುವುದಿಲ್ಲ. ಇದನ್ನೆ ಮಹಿಳಾ ಅಧ್ಯಯನಕಾರ್ತಿಯರು ಚರಿತ್ರೆ ಎಂಬುದು 'ಹಿಸ್‌ಸ್ಟೋರಿ' ಆಯಿತೇ ವಿನಃ 'ಹರ್‌ಸ್ಟೋರಿ' ಆಗಲೇ ಇಲ್ಲ ಎಂದು ಎಚ್ಚರಿಸುತ್ತಲೆ ಬಂದಿದ್ದಾರೆ. ಭಾರತದ ಚರಿತ್ರೆಯೆಂದರೆ ರಾಜಮಹಾರಾಜರ ಕಥೆಯಾಗಿದೆ. ರಾಣಿ-ರಾಜನ ಹೆಂಡತಿಯಾಗಿ ನೆಪ ಮಾತ್ರಕ್ಕೆ ಕಾಣಿಸಿಕೊಂಡು ಮರೆಯಾಗುತ್ತಾಳೆ. ಅವಳದೆ ಎಂಬು ಹೇಳಲ್ಪಟ್ಟ ಚಹರೆಗಳು ಯಾವುವೂ ದಾಖಲಾಗಲಿಲ್ಲ. ಇದು ಹೈದ್ರಾಬಾದ್-ಕರ್ನಾಟಕ ಚರಿತ್ರೆಯನ್ನು ನೋಡುವಾಗಲೂ ಅರಿವಿಗೆ ಬರುತ್ತದೆ. ಹೈದ್ರಾಬಾದ್-ಕರ್ನಾಟಕ ಪ್ರಾಂತ್ಯದ ಚಾರಿತ್ರಿಕ ಹಿನ್ನೆಲೆಯನ್ನು ನೋಡಿದಾಗ ಅರಸರುಗಳ ಮತ್ತು ನವಾಬರ ಚರಿತ್ರೆಯಾಗಿಯೆ ಗೋಚರಿಸುತ್ತದೆ. ಮಹಿಳೆಯರ ಗೈರು ಹಾಜರಿ ದೊಡ್ಡಮಟ್ಟದಲ್ಲಿ ಕಾಣುತ್ತದೆ. ಚರಿತ್ರೆಯಲ್ಲಿನ ಮಹಿಳೆಯ ಅಗೋಚರತೆಯ ಕುರಿತಂತೆ ಡಾ. ಶೈಲಜ ಹಿರೇಮಠರವರು ಕನ್ನಡ ವಿಶ್ವವಿದ್ಯಾಲಯದ ಮಹಿಳಾ ಅಧ್ಯಯನ ವಿಭಾಗದಿಂದ ದಿನಾಂಕ ೨೯-೩೦ ಮಾರ್ಚ್ ೨೦೧೩ ರಂದು ಆಯೋಜಿಸಿದ ಲಿಂಗವ್ಯವಸ್ಥೆಯ ಅಧ್ಯಯನಗಳು: ವಿಧಾನಗಳು, ವೈಧಾನಿಕತೆ ಮತ್ತು ಸಿದ್ಧಾಂತಗಳು ಎಂಬ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ "ವಿವಿಧ ಜ್ಞಾನ ವಲಯಗಳ ಚಿಂತನಾ ಕ್ರಮಗಳಲ್ಲಿ ಮಾನವ ಕೇಂದ್ರಿತ ಎಂಬ ಮಾತು 'ಪುರುಷ ಕೇಂದ್ರಿತ' ಎಂಬ ಅರ್ಥದಲ್ಲಷ್ಟೇ ಬಳಕೆಗೊಳ್ಳುತ್ತಿದ್ದು, ಮಾನವ ಚರಿತ್ರೆ ಎಂಬುದರಲ್ಲಿ ಸ್ತ್ರೀ ಒಳಗೊಂಡಿಲ್ಲ" ಎಂದು ಹೇಳುತ್ತಾರೆ. ಹಾಗಾಗಿ ಚರಿತ್ರೆ ಎಂಬುದು ಪ್ರಸ್ತುತ ಸಂದರ್ಭದಲ್ಲಿಯೂ ಸಹ ಪುರುಷ ನೆಲೆಯಲ್ಲಿಯೇ ವ್ಯಾಖ್ಯಾನಗೊಳ್ಳುತ್ತಿರುವುದನ್ನು ಕಾಣುತ್ತೇವೆ. ಹೈದ್ರಾಬಾದ್-ಕರ್ನಾಟಕ ಜಿಲ್ಲೆಗಳಲ್ಲಿ ಪ್ರಮುಖವಾದದ್ದು ಗುಲ್ಬರ್ಗಾ ಜಿಲ್ಲೆ. "ಈ ಜಿಲ್ಲೆ ದಖ್ಖನ್ ಪ್ರಸ್ಥಭೂಮಿಯ ಭಾಗ. ಉತ್ತರದಿಂದ ದಕ್ಷಿಣಕ್ಕೆ ಇಳಿಜಾರಾಗಿದ್ದು, ಈ ಪ್ರದೇಶ ಸಮುದ್ರ ಮಟ್ಟದಿಂದ ೩೦೦ ರಿಂದ ೬೦೦ಕಿ.ಮೀ. ಎತ್ತರದಲ್ಲಿದೆ.[3]

ಹೈದ್ರಾಬಾದ್-ಕರ್ನಾಟಕ ಜಿಲ್ಲೆಗಳಲ್ಲಿ ಒಂದಾಗಿರುವ ರಾಯಚೂರು ಜಿಲ್ಲೆಯು ಮೌರ್ಯ, ಕದಂಬ, ಬದಾಮಿ ಚಾಲುಕ್ಯರು, ಸೇವುಣರು, ವಿಜಯನಗರ ಅರಸರು ಮುಂತಾದ ರಾಜ ಮನೆತನಗಳ ಆಳ್ವಿಕೆಗೆ ಒಳಪಟ್ಟಿತ್ತು. "ದೋ ಆಬ್ ಪ್ರದೇಶವೆಂದು ಹೆಸರಾದ ಕೃಷ್ಣ-

ತುಂಗೆಯರ ಮಧ್ಯದಲ್ಲಿರುವ ರಾಯಚೂರು ಜಿಲ್ಲೆ ಕರ್ನಾಟಕದ ಎಲ್ಲಾ ಅರಸರಿಗೆ ಕಣ್ಸೆಳೆದ ಪ್ರದೇಶವಾಗಿತ್ತು".[5] "ರಾಯಚೂರು ಜಿಲ್ಲೆಯು ಸಂಪೂರ್ಣವಾಗಿ ವಿಜಯನಗರದ ಪತನದ ಅನಂತರ ಕೆಲಕಾಲ ಬೇರೆ ಬೇರೆ ಮುಸಲ್ಮಾನ ಸುಲ್ತಾನರ ವಶದಲ್ಲಿದ್ದು ಕೊನೆಗೆ ಅಸಫ್‌ಶಾಹಿ ಮನೆತನದ ಆಡಳಿತಕ್ಕೆ ಒಳಪಟ್ಟಿತು. ಕ್ರಿ.ಶ.೧೮೫೩ರಲ್ಲಿ ಈಸ್ಟ್ ಇಂಡಿಯಾ ಕಂಪೆನಿಯ ಒಪ್ಪಂದದಲ್ಲಿ ಈ ಜಿಲ್ಲೆಯು ಬ್ರಿಟಿಷರ ವಶವಾಯಿತು. ಕ್ರಿ.ಶ.೧೮೬೦ರಲ್ಲಿ ಮತ್ತೆ ಈ ಜಿಲ್ಲೆ ಅಸಫ್‌ಶಾಹಿ ಮನೆತನದ ಆಡಳಿತಕ್ಕೆ ಮರಳಿ ಬಂದಿತು. ಕ್ರಿ.ಶ.೧೯೦೫ರಲ್ಲಿ ಜಿಲ್ಲೆಯು ಮರು ವಿಂಗಡಣೆಯಾಗಿ "ದೋ ಆಬ್" ಜಿಲ್ಲೆ ಎಂಬ ಹೆಸರಿನಲ್ಲಿ ರಾಯಚೂರು, ಯಾದಗಿರಿ, ಯರಗೇರಿ, ದೇವದುರ್ಗ, ಮಾನ್ವಿ, ಆಲಂಪುರ, ಗದ್ವಾಲ ಎಂಬ ತಾಲೂಕುಗಳನ್ನು ಹೊಂದಿತ್ತು. ಇನ್ನು ಉಳಿದ ಭಾಗಗಳೆಂದರೆ ಲಿಂಗಸೂರು, ಕುಷ್ಟಗಿ, ಗಂಗಾವತಿ, ಸಿಂಧನೂರು, ಶಹಪುರ ಮೊದಲಾದ ತಾಲೂಕುಗಳನ್ನೊಳಗೊಂಡು ಲಿಂಗಸೂರು ಜಿಲ್ಲಾ ಕೇಂದ್ರವಾಗಿ ಕೆಲಸ ಮಾಡುತ್ತಿತ್ತು. ಇದೇ ರಾಯಚೂರು ಜಿಲ್ಲೆಯ ಭಾಗಗಳಾದ ಕೊಪ್ಪಳ, ಯಲಬುರ್ಗಾ ತಾಲೂಕುಗಳು ಸಾಲಾರಜಂಗನಿಗೆ ಸೇರಿದ ಪಾಯಗಾ ಭಾಗಗಳಾಗಿದ್ದವು".[೬] ಹೀಗೆ ಹಲವಾರು ರಾಜರ ಆಡಳಿತಕ್ಕೆ ಒಳಪಟ್ಟಿದ್ದ ರಾಯಚೂರು, ಬೀದರ್, ಗುಲ್ಬರ್ಗಾ ಈ ಮೂರು ಜಿಲ್ಲೆಗಳು ಕಾಲನಂತರದಲ್ಲಿ ಹೈದರಾಬಾದಿನ ನಿಜಾಮನ ಆಡಳಿತಕ್ಕೆ ಒಳಗಾದವು. ಈ ಜಿಲ್ಲೆಗಳಲ್ಲಿ ಸಾಕಷ್ಟು ಕನ್ನಡಿಗರಿದ್ದರೂ, ಈ ಪ್ರದೇಶ ಹೈದರಾಬಾದಿನ ನಿಜಾಮನ ಆಳ್ವಿಕೆಗೆ ಒಳಪಟ್ಟಿದ್ದರಿಂದಾಗಿ ಈ ಪ್ರಾಂತ್ಯವನ್ನು ಹೈದರಾಬಾದ್-ಕರ್ನಾಟಕ ಪ್ರಾಂತ್ಯವೆಂದು ಗುರುತಿಸಲಾಗುತ್ತಿತ್ತು.

ಬೀದರ್, ಗುಲ್ಬರ್ಗಾ, ರಾಯಚೂರು ಈ ಮೂರು ಜಿಲ್ಲೆಗಳು ಹಿಂದೆ ಹೈದ್ರಾಬಾದ್ ನಿಜಾಮನ ನೇರ ಆಳ್ವಿಕೆಗೆ ಒಳಪಟ್ಟಿದ್ದರೆ, ಅದೇ ಸಮಯದಲ್ಲಿ ಈ ಪ್ರದೇಶದ ಮತ್ತೊಂದು ಜಿಲ್ಲೆಯಾದ ಬಳ್ಳಾರಿಯೂ ಆಂಗ್ಲರ ಆಡಳಿತಕ್ಕೆ ಒಳಗಾಗಿ ಮದ್ರಾಸ್ ಪ್ರಾಂತ್ಯಕ್ಕೆ ಸೇರಿತ್ತು. ಈ "ಜಿಲ್ಲೆಯ ಇತಿಹಾಸ ಮೌರ್ಯರ ಕಾಲದಿಂದ ಪ್ರಾರಂಭವಾಗುತ್ತದೆ. ಬನವಾಸಿಯ ಕದಂಬರು, ಬದಾಮಿ ಚಾಲುಕ್ಯರು, ರಾಷ್ಟ್ರಕೂಟರು, ವಿಜಯನಗರದ ಅರಸರು ಈ ಪ್ರದೇಶದಲ್ಲಿ ಆಳಿದ್ದಾರೆ. ವಿಜಯನಗರದ ಪತನದ ನಂತರ ಈ ಜಿಲ್ಲೆ ಆದಿಲ್‌ಶಾಹಿ ಸುಲ್ತಾನರ ಮತ್ತು ಹಲವು ಪಾಳೇಗಾರರ ಆಳ್ವಿಕೆಗೆ ಒಳಪಟ್ಟಿತು. ತರುವಾಯ ಮರಾಠರು ಮತ್ತು ಮೊಗಲರು ಇಲ್ಲಿ ಅದಿಪತ್ಯ ನಡೆಸಿದರು".[೭]

"ಕ್ರಿ.ಶ.೧೭೬೮ರಲ್ಲಿ ಮೈಸೂರಿನ ಹೈದರಾಲಿಯು ಬಳ್ಳಾರಿಯ ಮೇಲೆ ಆಕ್ರಮಣ ನಡೆಸಿದನು. ನಂತರ ಅವನ ಮಗನಾದ ಟಿಪ್ಪು ಸುಲ್ತಾನನು, ೧೭೮೯ರಲ್ಲಿ ಆದವಾನಿಯ ಮೇಲೆ ಆಕ್ರಮಣ ನಡೆಸಿ ಬಳ್ಳಾರಿಯನ್ನು ವಶಪಡಿಸಿಕೊಂಡನು. ಮುಂದೆ ೧೭೯೯ರಲ್ಲಿ ಟಿಪ್ಪು ಸುಲ್ತಾನನ ಮೇಲೆ ಬ್ರಿಟಿಷರು, ಮರಾಠರು ಹಾಗೂ ಹೈದ್ರಾಬಾದ್ ನಿಜಾಮ ಇವರುಗಳ ಸೈನಿಕ ಆಕ್ರಮಣ ನಡೆಸಿದರು. ಈ ಯುದ್ಧದಲ್ಲಿ ಟಿಪ್ಪು ಹತನಾದನು. ಯುದ್ಧ ನಂತರ ಒಪ್ಪಂದದಂತೆ ಬಳ್ಳಾರಿ ಪ್ರದೇಶವು ಹೈದ್ರಾಬಾದ್ ನಿಜಾಮನ ವಶವಾಯಿತು. ಕ್ರಿ.ಶ.೧೮೦೦ರಲ್ಲಿ ಸಹಾಯಕ

ಸೈನ್ಯ ಪದ್ಧತಿಯನ್ನು ಒಪ್ಪಿಕೊಂಡ ನಿಜಾಮನು ಬಳ್ಳಾರಿ, ಅನಂತಪುರ, ಕರ್ನೂಲ್ ಮತ್ತು ಕಡಪ ಜಿಲ್ಲೆಗಳನ್ನು ಸಂಭಾವನೆ ಬಾಬ್ತು ಆಗಿ ಬ್ರಿಟಿಷರಿಗೆ ಕಾಣಿಕೆಯಾಗಿ ನೀಡಿದನು. ಹೀಗೆ ಬಳ್ಳಾರಿ ಪ್ರದೇಶವು ಕ್ರಿ.ಶ.೧೮೦೦ರಲ್ಲಿ ಬ್ರಿಟಿಷರ ನೇರ ಆಳ್ವಿಕೆಗೆ ಒಳಗಾಯಿತು. ಬ್ರಿಟಿಷರು ಬಳ್ಳಾರಿ ಪ್ರದೇಶವನ್ನು ಮದ್ರಾಸ್ ಪ್ರಾಂತ್ಯಕ್ಕೆ ಸೇರಿಸಿಕೊಂಡರು".[೬] ಹೀಗೆ ಬಳ್ಳಾರಿಯೂ ಕೂಡ ಚಾರಿತ್ರಿಕ ಏಳುಬೀಳಿನ ಇತಿಹಾಸವನ್ನು ಹೊಂದಿದೆ.

ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ ಸೇರಿದ ಇನ್ನೊಂದು ಜಿಲ್ಲೆ ಕೊಪ್ಪಳ. ಇದು ಪುರಾಣ ಪ್ರಸಿದ್ಧ ಮತ್ತು ಇತಿಹಾಸ ಪ್ರಸಿದ್ಧ ಸ್ಥಳವಾಗಿದೆ. ಈ ಪ್ರದೇಶದ ಚರಿತ್ರೆಯನ್ನು ಕ್ರಿ.ಪೂ.ಕಾಲಕ್ಕೆ ಒಯ್ಯಬಹುದಾಗಿದೆ. ಐತಿಹಾಸಿಕವಾಗಿ ತುಂಬಾ ಮಹತ್ವ ಪಡೆದಿರುವ ಅಶೋಕ ಚಕ್ರವರ್ತಿಗೆ ಸಂಬಂಧಿಸಿದ ಎರಡು ಶಾಸನಗಳು ಈ ಪ್ರದೇಶದಲ್ಲಿ ದೊರೆತಿವೆ. ಮೌರ್ಯರು, ಶಾತವಾಹನರು, ಕದಂಬರು, ಚಾಲುಕ್ಯರು, ಗಂಗರು, ರಾಷ್ಟ್ರಕೂಟರು, ಹೊಯ್ಸಳರು, ವಿಜಯನಗರ ಅರಸರು ಹೀಗೆ ಮುಂತಾದ ಅರಸು ಮನೆತನಗಳ ಚಕ್ರಾಧಿಪತ್ಯಗಳೊಂದಿಗೆ ಈ ಪ್ರದೇಶವು ಒಂದಲ್ಲ ಒಂದು ಬಗೆಯಲ್ಲಿ ಪ್ರಸಿದ್ಧಿಯನ್ನು ಪಡೆದಿದೆ. ಶಿಲಾಶಾಸನಗಳಲ್ಲಿ ಸಾಹಿತ್ಯಿಕ ಕೃತಿಗಳಲ್ಲಿ ಕೊಪ್ಪಳವನ್ನು ಕೊಪಣತೀರ್ಥ, ಆದಿತೀರ್ಥ, ಮಹಾತೀರ್ಥ, ಕೊಪಣಾಚಲ ಮುಂತಾದ ಹೆಸರುಗಳಿಂದ ಕರೆಯಲಾಗಿದೆ. ವಿಜಯನಗರ ಸಾಮ್ರಾಜ್ಯದ ಪತನ ನಂತರ ಈ ಪ್ರದೇಶವು ಬಿಜಾಪುರದ ಆದಿಲ್‌ಶಾನ ಆಳ್ವಿಕೆಗೆ ಒಳಪಟ್ಟಿತ್ತು. ಅಂದು ಈ ಸ್ಥಳವನ್ನು ಮುಜಾಫರ್‌ನಗರ ಎಂದು ಕರೆಯುತ್ತಿದ್ದರು. ೧೯೯೭ಕ್ಕೂ ಪೂರ್ವದಲ್ಲಿ ಕೊಪ್ಪಳ ಪ್ರದೇಶವು ರಾಯಚೂರು ಜಿಲ್ಲೆಯ ವ್ಯಾಪ್ತಿಗೆ ಒಳಪಟ್ಟಿತ್ತು. ೧೯೯೧ ರಿಂದ ಕೊಪ್ಪಳವನ್ನು ಪ್ರತ್ಯೇಕ ಜಿಲ್ಲೆಯನ್ನಾಗಿ ಮಾಡುವ ಸಲುವಾಗಿ ಅನೇಕ ಹೋರಾಟಗಳು ನಡೆಯುತ್ತಾ ಬಂದುದರ ಪರಿಣಾಮವಾಗಿ ಕರ್ನಾಟಕ ಸರಕಾರ ೧೯೯೭ ಆಗಸ್ಟ್ ೧೫ರಂದು ರಾಯಚೂರು ಜಿಲ್ಲೆಯನ್ನು ವಿಭಜಿಸಿ ಗಂಗಾವತಿ, ಕುಷ್ಟಗಿ, ಯಲಬುರ್ಗಾ ಮತ್ತು ಕೊಪ್ಪಳ ತಾಲೂಕುಗಳನ್ನು ಒಳಗೊಂಡ ಹೊಸ ಕೊಪ್ಪಳ ಜಿಲ್ಲೆಯನ್ನು ರೂಪಿಸಲಾಯಿತು. ಹೀಗೆ ಹೊಸ ಜಿಲ್ಲೆಯಾಗಿ ಪರಿವರ್ತನೆಗೊಂಡ ಕೊಪ್ಪಳವು ಅಭಿವೃದ್ಧಿಯ ವಿಷಯದಲ್ಲಿ ಹಲವಾರು ಬಗೆಯ ಏಳುಬೀಳುಗಳನ್ನು ಕಾಣುತ್ತಲೇ ಬರುತ್ತಿದೆ. ಕೊಪ್ಪಳವು ಒಂದು ಕಾಲದಲ್ಲಿ ಜೈನ ಧರ್ಮದ ಪ್ರಮುಖ ಕೇಂದ್ರವಾಗಿತ್ತು ಎಂಬುದೂ ಸಹ ಇತಿಹಾಸ ಪುಟಗಳಿಂದ ತಿಳಿದು ಬರುತ್ತದೆ. ಆದರೆ ಇಂದು ಜೈನ ಧರ್ಮದ ಕುರುಹುಗಳಾವುವೂ ಉಳಿಯದಿರುವುದು ಕಂಡುಬರುತ್ತದೆ. ಒಟ್ಟಿನಲ್ಲಿ ಕೊಪ್ಪಳವು ಐತಿಹಾಸಿಕ ಪ್ರಸಿದ್ಧಿಯನ್ನು ಪಡೆದ ಸ್ಥಳವಾಗಿದೆ.

ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ ಒಳಪಟ್ಟ ಆರು ಜಿಲ್ಲೆಗಳಲ್ಲಿ ಇಂದಿಗೂ ಸಹ ಊಳಿಗಮಾನ್ಯ ಪದ್ಧತಿ ರೂಢಿಯಲ್ಲಿರುವುದು ಕಂಡುಬರುತ್ತದೆ. ಆದರೆ ಇದನ್ನು ಪ್ರಶ್ನಿಸುವ ಮತ್ತು ತೊಡೆದುಹಾಕುವ ಪ್ರಯತ್ನಗಳು ನಡೆದಿವೆಯಾದರೂ ಸಂಪೂರ್ಣವಾಗಿ ಈ ಕಾರ್ಯ ನಡೆದಿಲ್ಲ. ಏಕೆಂದರೆ ಬಡತನ, ನಿರುದ್ಯೋಗ ಈ ಭಾಗದಲ್ಲಿ ತಾಂಡವವಾಡುತ್ತಿದೆ. ಹಾಗಾಗಿ

ಜಮೀನುದಾರರು ಈ ಕಾರಣಕ್ಕಾಗಿ ಹೆಚ್ಚಾಗಿ ಕಂಡುಬರುತ್ತಿರುವುದು ಇದರಿಂದ ತಿಳಿದುಬರುತ್ತಿದೆ. ಇದಕ್ಕೆ ಕಾರಣ ಇಲ್ಲದಿಲ್ಲ. ಅಂದರೆ "ಆಧುನಿಕ ಭಾರತದಲ್ಲಿ ಊಳಿಗಮಾನ್ಯ ಪದ್ಧತಿಯ ಅಂಶವೇನಾದರೂ ಅಳಿದುಳಿದಿದ್ದರೆ ಅದು ನಿಸ್ಸಂಶಯವಾಗಿ ಹೈದರಾಬಾದ್-ಕರ್ನಾಟಕ ಪ್ರದೇಶದಲ್ಲಿ ಎಂದು ಹೇಳಬಹುದು. ಯಾವುದೇ ರೀತಿಯ ಪ್ರಾತಿನಿಧಿಕ ಸಂಸ್ಥೆ ಅಲ್ಲಿ ಇರಲಿಲ್ಲವಷ್ಟೇ ಅಲ್ಲ. ನಾಗರಿಕ ಹಕ್ಕನ್ನು ನೀಡುವಂಥ ಯಾವುದೇ ರೀತಿಯ ಕುರುಹೂ ಇರಲಿಲ್ಲ"[೭] ಎಂದು ಅಭಿವೃದ್ಧಿ ಅಧ್ಯಯನದ ಹಿರಿಯ ಚಿಂತಕರಾದ ಟಿ.ಆರ್.ಚಂದ್ರಶೇಖರ್ ಅವರು ಅಭಿಪ್ರಾಯ ಪಡುತ್ತಾರೆ.

ಆಂಗ್ಲರು ೧೯೪೭ ಆಗಸ್ಟ್ ೧೫ರಂದು ಭಾರತಕ್ಕೆ ಸ್ವಾತಂತ್ರ್ಯವನ್ನು ನೀಡಿದ್ದರೆ, ನಿಜಾಮನ ಆಡಳಿತದಲ್ಲಿದ್ದ ಹೈದ್ರಾಬಾದ್-ಕರ್ನಾಟಕ ಪ್ರದೇಶದ ಜಿಲ್ಲೆಗಳಿಗೆ ೧೭ನೇ ಸೆಪ್ಟೆಂಬರ್ ೧೯೪೮ರಂದು ಸ್ವಾತಂತ್ರ್ಯ ಸಿಕ್ಕಿತು. ಭಾರತಕ್ಕೆ ಸ್ವಾತಂತ್ರ ದೊರೆತ ಸಂದರ್ಭದಲ್ಲಿ ಹೈದ್ರಾಬಾದ್, ಜಮ್ಮು ಕಾಶ್ಮೀರ ಮತ್ತು ಜುನಾಘಡ ರಾಜ್ಯಗಳು ಸ್ವತಂತ್ರ ಭಾರತಕ್ಕೆ ಸೇರ್ಪಡೆಗೊಳ್ಳಲು ತಮ್ಮ ಅಸಮ್ಮತಿಯನ್ನು ವ್ಯಕ್ತಪಡಿಸಿದವು. ಆಗ ಮೀರ್ ಉಸ್ಮಾನ್ ಆಲಿಖಾನ್ ಹೈದರಾಬಾದಿನ ನಿಜಾಮ್ ಆಗಿದ್ದನು. "ಈ ಮೂರು ರಾಜ್ಯಗಳು ಸ್ವತಂತ್ರ್ಯ ಭಾರತದಲ್ಲಿ ವಿಲೀನವಾಗಲು ಸಿದ್ಧವಾಗಿರಲಿಲ್ಲ. ಪಾಕಿಸ್ತಾನದೊಂದಿಗೆ ಭಾರತದಲ್ಲಿದ್ದ ಮುಸ್ಲಿಂ ಲೀಗ್‌ನೊಂದಿಗೆ ಸಖ್ಯ ಇಟ್ಟುಕೊಂಡು 'ಸ್ವತಂತ್ರ ಇಸ್ಲಾಮಿ ರಾಜ್ಯವಾಗಿ' ಮೆರೆಯಬೇಕು ಎಂದಿದ್ದನು".[೮] ಸ್ವತಂತ್ರ ಭಾರತದ ಅಂದಿನ ಮೊಟ್ಟ ಮೊದಲನೆ ಗೃಹ ಮಂತ್ರಿಯಾಗಿದ್ದ ಸರ್ಧಾರ್ ವಲ್ಲಭಬಾಯಿ ಪಟೇಲರು ನಡೆಸಿದ ಪೊಲೀಸ್ ಕಾರ್ಯಚರಣೆಗಳಿಂದಾಗಿ ಈ ಪ್ರದೇಶ ಸೆಪ್ಟೆಂಬರ್ ೧೮, ೧೯೪೮ರಂದು ಸ್ವತಂತ್ರ ಭಾರತಕ್ಕೆ ಸೇರಲು ಸಾಧ್ಯವಾಯಿತು. ಬಳ್ಳಾರಿ ಜಿಲ್ಲೆಯು ಹೈದರಾಬಾದ್-ಕರ್ನಾಟಕ ಭಾಗಕ್ಕೆ ಸೇರಿದ್ದದೂ ಸಹ ಒಂದು ಇತಿಹಾಸ. ಅಂದರೆ ರಾಜ್ಯಗಳ ಪುನರ್‌ವಿಂಗಡನೆಯಾದಾಗ ೧೯೫೩ರಲ್ಲಿ ಬಳ್ಳಾರಿ ಜಿಲ್ಲೆಯನ್ನು ಮೈಸೂರು ಪ್ರಾಂತ್ಯಕ್ಕೆ ಸೇರಿಸಲಾಯಿತು. ಈ ಹಿಂದೆ ಬಳ್ಳಾರಿ ಜಿಲ್ಲೆಯಲ್ಲಿ ಇದ್ದಂತಹ ಆದವಾನಿ, ಆಲೂರು ಮತ್ತು ರಾಯದುರ್ಗ ತಾಲೂಕುಗಳನ್ನು ಆಂಧ್ರಪ್ರದೇಶಕ್ಕೆ ವರ್ಗಾಯಿಸಲಾಯಿತು. ತದನಂತರ ೧೯೫೬ರಲ್ಲಿ ಮೈಸೂರು ಪ್ರಾಂತ್ಯ, ಮೈಸೂರು ರಾಜ್ಯವಾಗಿ ಪರಿವರ್ತನೆಗೊಂಡಿತು. ೧೯೭೩ರಲ್ಲಿ ದೇವರಾಜ ಅರಸು ಅವರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಮೈಸೂರು ರಾಜ್ಯಕ್ಕೆ ಕರ್ನಾಟಕವೆಂದು ನಾಮಕರಣ ಮಾಡಿದರು. ಏಕೀಕರಣಗೊಂಡ ನಂತರ "ಆಡಳಿತ ಅನುಕೂಲಕ್ಕಾಗಿ ರಾಜ್ಯವನ್ನು ನಾಲ್ಕು ಕಂದಾಯ ವಿಭಾಗಗಳನ್ನಾಗಿ ವಿಂಗಡಿಸಲಾಯಿತು. ಬೆಂಗಳೂರು, ಕೋಲಾರ, ತುಮಕೂರು, ಚಿತ್ರದುರ್ಗ ಮತ್ತು ಬಳ್ಳಾರಿ ಜಿಲ್ಲೆಗಳನ್ನು ಸೇರಿಸಿ ಬೆಂಗಳೂರು ಕಂದಾಯ ವಿಭಾಗವನ್ನಾಗಿ ರಚಿಸಲಾಯಿತು. ಮುಂದೆ ೧ ಫೆಬ್ರವರಿ ೧೯೬೬ರಂದು ಬಳ್ಳಾರಿ ಜಿಲ್ಲೆಯನ್ನು ಬೆಂಗಳೂರು ಕಂದಾಯ ವಿಭಾಗದಿಂದ ಬೇರ್ಪಡಿಸಿ ಅದನ್ನು ಗುಲ್ಬರ್ಗಾ ಕಂದಾಯ ವಿಭಾಗಕ್ಕೆ ಸೇರಿಸಲಾಯಿತು".[೯] ಹೀಗೆ ಬಳ್ಳಾರಿಯು ಹೈದ್ರಾಬಾದ್-ಕರ್ನಾಟಕ ಪ್ರದೇಶಕ್ಕೆ ಸೇರಲು ಆಯಾ ಕಾಲದ ರಾಜಕೀಯ ಹಿತಾಸಕ್ತಿಗಳ ಬಲಾಬಲವೂ ಕಾರಣವಾಯಿತು.

"ಕರ್ನಾಟಕ ರಾಜ್ಯ ಏಕೀಕರಣಗೊಂಡ ನಂತರ ಹೈದ್ರಾಬಾದ್-ಕರ್ನಾಟಕ ಪ್ರದೇಶಕ್ಕಾಗಿಯೇ ಪ್ರತ್ಯೇಕ ಅಭಿವೃದ್ಧಿ ಮಂಡಳಿ ರಚಿಸಬೇಕೆಂಬ ಬೇಡಿಕೆ ಬಂದಿತು. ಮೇ ೧೯೮೦ರಲ್ಲಿ ಹೈದ್ರಾಬಾದ್-ಕರ್ನಾಟಕ ಪ್ರದೇಶ ಅಭಿವೃದ್ಧಿ ಕುರಿತಂತೆ, ವರದಿ ಸಲ್ಲಿಸಲು ಕಮಿಟಿಯೊಂದನ್ನು ರಚಿಸಲಾಯಿತು. ಇದು ೧೯೮೧ರಲ್ಲಿ ತನ್ನ ವರದಿ ಸಲ್ಲಿಸಿ, ಈ ಪ್ರದೇಶದ ಅಭಿವೃದ್ಧಿಗಾಗಿ ಶಾಸನಬದ್ಧ ಮಂಡಳಿ ಒಂದನ್ನು ರಚಿಸುವಂತೆ ಶಿಫಾರಸ್ಸು ಮಾಡಿತು. ೧೯೮೯-೯೦ರ ಬಜೆಟ್‌ನಲ್ಲಿ ೨ ಕೋಟಿ ರೂಪಾಯಿಗಳನ್ನು ತೆಗೆದಿರಿಸಿ, ಹೈದ್ರಾಬಾದ್-ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಸ್ಥಾಪಿಸಲು ನಿರ್ಧರಿಸಲಾಯಿತು. ಸಂಪೂರ್ಣವಾದ ಹೈದ್ರಾಬಾದ್-ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಡಿಸೆಂಬರ್ ೩೧, ೧೯೯೨ರಲ್ಲಿ ಪ್ರಾರಂಭಗೊಂಡಿತು".[೧೦] ಮಂಡಳಿಯ ವ್ಯಾಪ್ತಿಯು ಬೀದರ್, ಗುಲ್ಬರ್ಗಾ, ರಾಯಚೂರು ಮತ್ತು ಬಳ್ಳಾರಿ ಜಿಲ್ಲೆಗಳ ವ್ಯಾಪ್ತಿಯನ್ನು ಒಳಗೊಂಡಿದೆ. ಇಂದು ಜಿಲ್ಲೆಗಳ ಪುನರ್ ವಿಂಗಡಣೆಯಿಂದಾಗಿ ಹೈದ್ರಾಬಾದ್-ಕರ್ನಾಟಕ ಪ್ರದೇಶವೆಂದರೆ ಬೀದರ್, ಗುಲ್ಬರ್ಗಾ, ರಾಯಚೂರು, ಬಳ್ಳಾರಿ, ಕೊಪ್ಪಳ ಮತ್ತು ಯಾದಗಿರಿ ಜಿಲ್ಲೆಗಳನ್ನು ಒಳಗೊಂಡ ಗುಲ್ಬರ್ಗಾ ಕಂದಾಯ ವಿಭಾಗವೇ ಆಗಿದೆ. ಒಟ್ಟಾರೆಯಾಗಿ ಹೈದರಾಬಾದ್ ಕರ್ನಾಟಕದ ವ್ಯಾಪ್ತಿಗೆ ಒಳಪಡುವ ಜಿಲ್ಲೆಗಳು ತಮ್ಮದೇ ಆದ ಇತಿಹಾಸವನ್ನು ಚರಿತ್ರೆಯಲ್ಲಿ ಹೊಂದಿವೆ. ಇಲ್ಲಿ ಮುಖ್ಯವಾಗಿ ಅಧ್ಯಯನದ ವ್ಯಾಪ್ತಿಗೆ ಒಳಪಡುವ ರಾಯಚೂರು, ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಗಳ ಚಾರಿತ್ರಿಕ ಹಿನ್ನೆಲೆಯನ್ನು ಒಟ್ಟಾರೆ ಹೈದರಾಬಾದ್ ಕರ್ನಾಟಕದ ಚರಿತ್ರೆಯ ಜೊತೆ ಕಟ್ಟಿಕೊಡಲಾಗಿದೆ.

## ಭೌಗೋಳಿಕ ಹಿನ್ನೆಲೆ

ಒಂದು ಪ್ರದೇಶದ ಅಭಿವೃದ್ಧಿಯು ಆ ಪ್ರದೇಶದ ಭೌಗೋಳಿಕ ವೈಶಿಷ್ಟ್ಯತೆಯನ್ನು ಅವಲಂಬಿಸಿರುತ್ತದೆ. ಮುಖ್ಯವಾಗಿ ಭೌಗೋಳಿಕ ವೈಶಿಷ್ಟತೆ ಎಂಬುದು ಆ ಪ್ರದೇಶದ ವಾಯುಗುಣ, ಭೂ ಸಂಪತ್ತು, ಖನಿಜ ಸಂಪತ್ತು, ಸಸ್ಯ ಸಂಪತ್ತು, ನದಿಗಳು, ಅರಣ್ಯ ಸಂಪತ್ತು ಹೀಗೆ ಹಲವಾರು ಅಂಶಗಳನ್ನು ಒಳಗೊಂಡಂತೆ ರೂಪಿತಗೊಂಡಿದೆ. ಮೊದಲು ಹೈದ್ರಾಬಾದ್ ಕರ್ನಾಟಕ ಭಾಗದಲ್ಲಿನ ಜಿಲ್ಲೆಗಳ ಭೂ ವಿಸ್ತೀರ್ಣ, ಜನಸಂಖ್ಯೆ ಕುರಿತ ಒಂದು ಪ್ರಾಥಮಿಕ ಮಾಹಿತಿಯನ್ನು ನೀಡುವುದು ಅಗತ್ಯವಾಗಿದೆ. ನಂತರದಲ್ಲಿ ಅಧ್ಯಯನದ ವ್ಯಾಪ್ತಿಗೆ ಸಂಬಂಧಪಟ್ಟಂತೆ ಮೂರು ಜಿಲ್ಲೆಗಳಲ್ಲಿ ಈ ಮೇಲಿನ ಅಂಶಗಳನ್ನು ಗುರುತಿಸುವ ಪ್ರಯತ್ನ ಇಲ್ಲಿ ಮಾಡಲಾಗಿದೆ.

ಭೌಗೋಳಿಕ ಪ್ರದೇಶಕ್ಕೆ ಸಂಬಂಧಿಸಿದಂತೆ ಹೈದರಾಬಾದ್-ಕರ್ನಾಟಕ ಪ್ರದೇಶದ ಒಟ್ಟು ಆರು ಜಿಲ್ಲೆಗಳ ಕುರಿತಂತೆ ಭೂವಿಸ್ತೀರ್ಣ ಮತ್ತು ಜನಸಂಖ್ಯೆಯ ಕುರಿತ ಮಾಹಿತಿಯನ್ನು ಈ ಕೆಳಗಿನ ಕೋಷ್ಟಕದಲ್ಲಿ ಗುರುತಿಸಲಾಗಿದೆ.

| ಕ್ರ.ಸಂ. | ಜಿಲ್ಲೆ | ಭೂ.ವಿಸ್ತೀರ್ಣ ಚ.ಕಿ.ಮೀ. | ಒಟ್ಟು ಜನಸಂಖ್ಯೆ | ಪುರುಷರು | ಮಹಿಳೆಯರು | ಲಿಂಗಾನುಪಾತ ಸಾವಿರ ಪುರುಷರಿಗೆ ಪ್ರಮಾಣ | ಒಟ್ಟು ಸಾಕ್ಷರತೆ |
|---|---|---|---|---|---|---|---|
| ೦೧. | ಬೀದರ್ | ೫೪೪೮ | ೧೭೦೩೩೦೦ | ೮೭೦೬೬೫ | ೮೩೨೬೩೫ | ೯೫೬ | ೭೦.೫೧% |
| ೦೨. | ಗುಲ್ಬರ್ಗಾ | ೧೦೯೫೪ | ೨೫೬೬೩೨೬ | ೧೩೦೧೭೫೫ | ೧೨೬೪೫೭೧ | ೯೭೧ | ೬೪.೮೫% |
| ೦೩. | ರಾಯಚೂರು | ೮೪೪೨ | ೧೯೨೮೮೧೨ | ೯೬೪೫೧೧ | ೯೬೪೩೦೧ | ೧೦೦೦ | ೫೯.೫೬% |
| ೦೪. | ಯಾದಗಿರಿ | ೫೨೭೦ | ೧೧೭೪೨೭೧ | ೫೯೦೩೨೯ | ೫೮೩೯೪೨ | ೯೮೯ | ೫೧.೮೩% |
| ೦೫. | ಕೊಪ್ಪಳ | ೫೫೭೦ | ೧೩೮೯೯೨೦ | ೬೯೯೯೨೬ | ೬೮೯೯೯೪ | ೯೮೬ | ೬೮.೦೯% |
| ೦೬. | ಬಳ್ಳಾರಿ | ೮೪೬೧ | ೨೪೫೨೫೯೫ | ೧೨೩೬೯೫೪ | ೧೨೧೫೬೪೧ | ೯೮೩ | ೬೭.೪೩% |

ಕೋಷ್ಟಕ: ೧. ಹೈದ್ರಾಬಾದ್ ಕರ್ನಾಟಕ ಭಾಗದ ಜಿಲ್ಲೆಗಳ ಜನಸಂಖ್ಯಾ ವಿವರ ೨೦೧೧ರ ಜನಗಣತಿ ಪ್ರಕಾರ ಮಾಹಿತಿ

೨೦೧೧ರ ಜನಗಣತಿಯ ಪ್ರಕಾರ ಕರ್ನಾಟಕದ ಒಟ್ಟು ಭೂ ವಿಸ್ತೀರ್ಣ ೧,೯೧,೭೯೧ ಚ.ಕಿ.ಮೀ.ಆಗಿದೆ. ಹಾಗೆಯೇ ಒಟ್ಟು ಜನಸಂಖ್ಯೆಯು ೬,೧೦,೯೫,೨೯೭ರಷ್ಟಿದೆ. ಇಲ್ಲಿ ಹೈದರಾಬಾದ್ ಕರ್ನಾಟಕದ ಭೂವಿಸ್ತೀರ್ಣ ೪೪,೧೪೫ ಚ.ಕಿ.ಮೀ.ನಷ್ಟಿದ್ದು ರಾಜ್ಯದ ಒಟ್ಟು ಭೂ ವಿಸ್ತೀರ್ಣದ ಶೇ.೨೩ರಷ್ಟು ಇದೆ. ಈ ಭಾಗದ ಒಟ್ಟು ಜನಸಂಖ್ಯೆಯು ೧೧,೨೧,೫೨೨ರಷ್ಟಿದ್ದು, ರಾಜ್ಯದ ಜನಸಂಖ್ಯೆಯ ಶೇ.೧೮.೩೫ರಷ್ಟಿದೆ. ಒಟ್ಟು ಜನಸಂಖ್ಯೆಯಲ್ಲಿ ಪುರುಷರ ಸಂಖ್ಯೆ ೫೬,೬೪,೧೪೦ ಮತ್ತು ಮಹಿಳೆಯರ ಸಂಖ್ಯೆ ೫೫,೫೧,೦೮೪ರಷ್ಟಿದೆ. ಹೈದ್ರಾಬಾದ್-ಕರ್ನಾಟಕ ಪ್ರದೇಶದಲ್ಲಿ ಗುಲ್ಬರ್ಗಾ ಜಿಲ್ಲೆಯು ಅತ್ಯಧಿಕ ಅಂದರೆ ೧೦,೯೫೪ ಚ.ಕಿ.ಮೀ. ಭೂ ವಿಸ್ತೀರ್ಣವನ್ನು ಹೊಂದಿದ್ದು, ಜನಸಂಖ್ಯೆಯ ಪ್ರಮಾಣವು ಕೂಡ ಅಧಿಕವಾಗಿದೆ. ಈ ಜಿಲ್ಲೆಯ ಒಟ್ಟು ಜನಸಂಖ್ಯೆಯು ೨೫,೬೬,೩೨೬ರಷ್ಟಿದೆ. ಒಟ್ಟು ಹೈದರಾಬಾದ್ ಕರ್ನಾಟಕ ಭಾಗದ ಜನಸಂಖ್ಯೆಗೆ ಹೋಲಿಸಿದರೆ ಶೇ.೨೨.೮೮ರಷ್ಟಿದೆ. ಹಾಗೆಯೇ ಹೈದ್ರಾಬಾದ್-ಕರ್ನಾಟಕ ಭಾಗದಲ್ಲಿ ಯಾದಗಿರಿ ಜಿಲ್ಲೆಯು ಅತೀ ಕಡಿಮೆ ಅಂದರೆ ೫೨೭೦ ಚ.ಕಿ.ಮೀ. ಭೂ ವಿಸ್ತೀರ್ಣ ಹೊಂದಿದೆ. ಈ ಜಿಲ್ಲೆಯ ಒಟ್ಟು ಜನಸಂಖ್ಯೆ ೧೧,೭೪,೨೭೧ರಷ್ಟಿದೆ. ಹೈದ್ರಾಬಾದ್-ಕರ್ನಾಟಕದ ಒಟ್ಟು ಜನಸಂಖ್ಯೆಗೆ ಹೋಲಿಸಿದರೆ ಶೇ.೧೦.೪೭ ರಷ್ಟಿದೆ. ಈ ಜಿಲ್ಲೆಯು ಅತೀ ಕಡಿಮೆ ಅಂದರೆ ಶೇ.೫೧.೮೩ರಷ್ಟು ಸಾಕ್ಷರತೆಯ ಪ್ರಮಾಣವನ್ನು ಹೊಂದಿದೆ. ಲಿಂಗಾನುಪಾತದಲ್ಲಿ ರಾಯಚೂರು ಜಿಲ್ಲೆಯು ಮೊದಲ ಸ್ಥಾನದಲ್ಲಿದೆ. ಅಂದರೆ ಮಹಿಳೆ ಮತ್ತು ಪುರುಷರ ಸಂಖ್ಯೆ ಸಮನಾಗಿದೆ. ಬೀದರ್ ಜಿಲ್ಲೆಯು ಅತ್ಯಂತ ಕಡಿಮೆ ಲಿಂಗಾನುಪಾತವನ್ನು ಹೊಂದಿದೆ. ಇಲ್ಲಿ ಮಹಿಳೆಯರ ಪ್ರಮಾಣ ೯೫೬ ರಷ್ಟಿದೆ. ಸಾಕ್ಷರತೆಯ ವಿಷಯಕ್ಕೆ ಬಂದರೆ ಬೀದರ್ ಜಿಲ್ಲೆಯು ಪ್ರಥಮ ಸ್ಥಾನವನ್ನು ಪಡೆಯುತ್ತದೆ. ಅಂದರೆ ಇಲ್ಲಿ ಶೇ.೭೦.೫೧ರಷ್ಟು ಸಾಕ್ಷರತೆಯ ಪ್ರಮಾಣವಿದೆ. ಅತೀ ಕಡಿಮೆ ಸಾಕ್ಷರತೆಯನ್ನು ಹೊಂದಿರುವ ಜಿಲ್ಲೆಯೆಂದರೆ ಯಾದಗಿರಿ. ಇಲ್ಲಿ ಶೇ.೫೧.೮೩ರಷ್ಟು ಸಾಕ್ಷರರಿದ್ದಾರೆ. ಹೀಗೆ ಹೈದ್ರಾಬಾದ್-ಕರ್ನಾಟಕ ಭಾಗದ ಒಟ್ಟು ಆರು ಜಿಲ್ಲೆಗಳ ಭೂ ವಿಸ್ತೀರ್ಣ ಮತ್ತು ಜನಸಂಖ್ಯೆಯ ವಿವರಣೆಯನ್ನು ನೀಡಲಾಗಿದೆ.

ಸಂಶೋಧನಾ ವಿಷಯಕ್ಕೆ ಸಂಬಂಧಿಸಿದಂತೆ ಮೂರು ಜಿಲ್ಲೆಗಳನ್ನು ಅಂದರೆ ರಾಯಚೂರು, ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಗಳನ್ನು ಆಯ್ಕೆ ಮಾಡಿಕೊಂಡಿದ್ದು ಈ ಜಿಲ್ಲೆಗಳ ಸಂಕ್ಷಿಪ್ತ ಮಾಹಿತಿಯನ್ನು ತಿಳಿಯುವುದು ಅವಶ್ಯಕವಾಗಿದೆ. ಹಾಗಾಗಿ ಈ ಭಾಗದ ಜನಸಂಖ್ಯೆ ಪ್ರಮಾಣವನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

| ನಗರ ಪ್ರದೇಶದ ಜನಸಂಖ್ಯೆ | | | | | | ಗ್ರಾಮೀಣ ಪ್ರದೇಶದ ಜನಸಂಖ್ಯೆ | | |
|---|---|---|---|---|---|---|---|---|
| ಕ್ರಸಂ. | ಜಿಲ್ಲೆಗಳು | ಒಟ್ಟು ಜನಸಂಖ್ಯೆ | ಪುರುಷರು | ಮಹಿಳೆಯರು | ಒಟು | ಪುರುಷರು | ಮಹಿಳೆಯರು | ಒಟ್ಟು |
| ೦೧. | ರಾಯಚೂರು | ೧೯೨೮೮೧೨ | ೨೪೬೫೩೯ | ೨೪೩೮೦೯ | ೪೯೦೩೪೮ | ೭೧೭೯೭೨ | ೭೨೦೪೯೨ | ೧೪೩೮೪೬೪ |
| ೦೨. | ಕೊಪ್ಪಳ | ೧೩೮೯೯೨೦ | ೧೧೬೯೬೮ | ೧೧೬೭೩೬ | ೨೩೩೭೦೪ | ೫೮೨೯೫೮ | ೫೭೩೨೫೮ | ೧೧೫೬೨೧೬ |
| ೦೩. | ಬಳ್ಳಾರಿ | ೨೪೫೨೫೯೫ | ೪೬೨೮೬೧ | ೪೫೭೩೭೮ | ೯೨೦೨೩೯ | ೭೭೪೦೯೩ | ೭೫೮೨೬೩ | ೧೫೩೨೩೫೬ |

ಕೋಷ್ಟಕ: ೨. ೨೦೧೧ರ ಜನಗಣತಿಯ ಪ್ರಕಾರ ಮೂರು ಜಿಲ್ಲೆಗಳ ಜನಸಂಖ್ಯೆ ವಿವರ

ರಾಯಚೂರು-ಕೊಪ್ಪಳ ಮತ್ತು ಬಳ್ಳಾರಿ ಈ ಮೂರು ಜಿಲ್ಲೆಗಳಲ್ಲಿ ಬಳ್ಳಾರಿ ಜಿಲ್ಲೆಯು ಅಧಿಕ ಜನಸಂಖ್ಯೆಯನ್ನು ಹೊಂದಿರುವ ಜಿಲ್ಲೆಯಾಗಿದೆ. ಹಾಗೆಯೇ ಅತ್ಯಂತ ಕಡಿಮೆ ಜನಸಂಖ್ಯೆಯನ್ನು ಕೊಪ್ಪಳ ಜಿಲ್ಲೆಯು ಹೊಂದಿದೆ. ಈ ಮೂರು ಜಿಲ್ಲೆಗಳಲ್ಲಿನ ಜನಸಂಖ್ಯೆಯನ್ನು ಗಮನಿಸಿದಾಗ ನಗರ ಪ್ರದೇಶದ ಜನಸಂಖ್ಯೆಗಿಂತ ಗ್ರಾಮೀಣ ಪ್ರದೇಶ ಜನಸಂಖ್ಯೆಯೇ ಅಧಿಕವಾಗಿದೆ.

**ಭೂ-ಸ್ವರೂಪ ಮತ್ತು ಕೃಷಿ**

ರಾಯಚೂರು, ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಭೂಮಿಯ ಸ್ವರೂಪ ಬೇರೆ ಬೇರೆಯಾಗಿದ್ದರೂ ಸಹ ಬೆಳೆಗಳಲ್ಲಿ ಭಿನ್ನತೆಯೇನೂ ಕಂಡುಬರುವುದಿಲ್ಲ. ರಾಯಚೂರು ಜಿಲ್ಲೆಯಲ್ಲಿ ಕಪ್ಪುಮಣ್ಣು, ಕೆಂಪುಮಣ್ಣು, ಮರಳು ಮಿಶ್ರಿತ ಮಣ್ಣಿನಿಂದ ಕೂಡಿರುವ ಭೂಮಿಯ ಭಾಗ ಕಂಡುಬರುತ್ತದೆ. ಇಲ್ಲಿನ ಕಪ್ಪುಮಣ್ಣು ತುಂಬಾ ಫಲವತ್ತತೆಯಿಂದ ಕೂಡಿದ್ದು, ಎರೆಮಣ್ಣು ಎಂಬ ಹೆಸರಿನಿಂದ ಕರೆಯಲ್ಪಡುತ್ತದೆ. ಈ ಮಣ್ಣು ರೈತ ಸ್ನೇಹಿಯಾಗಿದ್ದು ಕೃಷಿಗೆ ತುಂಬಾ ಅನುಕೂಲಕರವಾಗಿದೆ. ಏಕೆಂದರೆ ಅಧಿಕವಾಗಿ ತೇವಾಂಶವನ್ನು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯವನ್ನು ಹೊಂದಿದೆ. ನಂತರ ಕಪ್ಪು ಮಣ್ಣನ್ನು ಹೊರತುಪಡಿಸಿದರೆ ಕೆಂಪುಮಣ್ಣು, ಸವಳುಮಣ್ಣು, ಮರಳು ಮಿಶ್ರಿತಮಣ್ಣು, ಜೇಡಿಮಣ್ಣು ಇರುವುದನ್ನು ಕಾಣುತ್ತೇವೆ.

ರಾಯಚೂರು ಜಿಲ್ಲೆ ಶೇ.೬೦ಕ್ಕಿಂತ ಹೆಚ್ಚು ಕಪ್ಪುಮಣ್ಣಿನಿಂದ ಕೂಡಿರುವುದರಿಂದ ಈ ಭಾಗದಲ್ಲಿನ ರೈತರು ಸರಾಗವಾಗಿ ಉಸಿರಾಡುವಂತಾಗಿದೆ. ಆದರೆ ಈ ಕಾರಣಕ್ಕಾಗಿ ರಾಯಚೂರು ಜಿಲ್ಲೆ ಕೃಷಿಯಲ್ಲಿ ಮುಂದುವರೆದ ಅಥವಾ ಅಭಿವೃದ್ಧಿ ಹೊಂದಿದ ಜಿಲ್ಲೆ ಎಂದು ಹೇಳಲಾಗುವುದಿಲ್ಲ. ಏಕೆಂದರೆ ವ್ಯವಸಾಯದ ಭೂಮಿಗಳು ಕೆಲವರಲ್ಲಿ ಮಾತ್ರ ಕೇಂದ್ರೀಕೃತವಾಗಿರುವುದರಿಂದ ಬೆರಳೆಣಿಕೆಯಷ್ಟು ಜನರ ಬದುಕು ಸುಧಾರಿಸಿದೆ. ಇನ್ನು ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿನ ಕೆಲವು ಪ್ರದೇಶಗಳು ಕಪ್ಪುಮಣ್ಣಿನಿಂದ ಕೂಡಿದ್ದಾಗಿದ್ದರೆ, ಹಲವು ಪ್ರದೇಶಗಳು ಕೆಂಪು, ಸವಳು, ಮರಳು ಮಿಶ್ರಿತ ಮಣ್ಣಿನಿಂದ ಕೂಡಿದವುಗಳಾಗಿವೆ. ಈ ಭಾಗದಲ್ಲಿ ಕೆಲವು ಪ್ರದೇಶಗಳು ನೀರಾವರಿಯ ಪ್ರದೇಶಗಳಾಗಿವೆ. ಇನ್ನು ಹಲವು ಮಳೆಯಾಧಾರಿತ ಕೆಂಪುಮಣ್ಣಿನಿಂದ ಕೂಡಿದ ಭೂಭಾಗ ಕಂಡುಬರುತ್ತದೆ. ಹೈದರಾಬಾದ್-ಕರ್ನಾಟಕ ಪ್ರದೇಶವು ಫಲವತ್ತಾದ ಭೂಮಿಯನ್ನು ಹೊಂದಿರುವುದರಿಂದ ಹಲವಾರು ವಾಣಿಜ್ಯ ಮತ್ತು ವಾಣಿಜ್ಯೇತರ ಬೆಳೆಗಳನ್ನು ಬೆಳೆಯಲಾಗುತ್ತದೆ. ಮುಖ್ಯವಾಗಿ ಈ ಭಾಗದ ಬೆಳೆಗಳನ್ನು ೧. ನೀರಾವರಿ ಆಧಾರಿತ ಬೆಳೆಗಳು ೨. ಮಳೆಯಾಧಾರಿತ ಬೆಳೆಗಳು ಎಂದು ಎರಡು ವಿಧದಲ್ಲಿ ವಿಂಗಡಿಸಬಹುದು. ನೀರಾವರಿಯಾಧಾರಿತ ಬೆಳೆಗಳಾದ ಭತ್ತ, ಕಬ್ಬು, ಬಾಳೆ, ಹತ್ತಿ, ಮೆಣಸಿನಕಾಯಿ ಮುಂತಾದ ಬೆಳೆಗಳನ್ನು ಬೆಳೆಯಲಾಗುತ್ತದೆ. ಹಾಗೆಯೇ ಮಳೆಯಾಧಾರಿತ ಪ್ರದೇಶದಲ್ಲಿ ಶೇಂಗಾ, ಸೂರ್ಯಕಾಂತಿ, ಜೋಳ, ಸಜ್ಜೆ, ತೊಗರಿ, ಹಲಸಂದಿ, ಹೆಸರು, ಮೆಕ್ಕೆಜೋಳ, ಕುಸಿಬೆ, ಅವರೆಕಾಳು ಮುಂತಾದವುಗಳನ್ನು ಬೆಳೆಯಲಾಗುತ್ತದೆ. ಮುಖ್ಯವಾಗಿ

ವಾಣಿಜ್ಯ ಬೆಳೆಗಳಾದ ಭತ್ತ, ಕಬ್ಬು, ಹತ್ತಿ, ಕುಸುಬೆ, ಸೂರ್ಯಕಾಂತಿ, ಕಡಲೆ ಮುಂತಾದ ಬೆಳೆಗಳಿಗೆ ಜನರು ಹೆಚ್ಚಿನ ಪ್ರಾಶಸ್ತ್ಯವನ್ನು ನೀಡುತ್ತಿದ್ದಾರೆ.

ಅಧ್ಯಯನದ ವ್ಯಾಪ್ತಿಗೆ ಒಳಪಡುವ ರಾಯಚೂರು ಜಿಲ್ಲೆಯಲ್ಲಿ ಪ್ರಮುಖವಾಗಿ ಎರಡು ನದಿಗಳು ಹರಿಯುತ್ತವೆ. ರಾಯಚೂರು ಪ್ರದೇಶದ ಎಡಭಾಗದಲ್ಲಿ ತುಂಗಭದ್ರಾ ನದಿ ಹರಿಯುತ್ತಿದ್ದು, ಬಲಭಾಗದಲ್ಲಿ ಕೃಷ್ಣಾ ನದಿ ಹರಿಯುತ್ತಿದೆ. ಈ ಎರಡು ನದಿಗಳ ಮಧ್ಯದಲ್ಲಿ ರಾಯಚೂರು ಜಿಲ್ಲೆ ಇರುವುದರಿಂದ ಇದನ್ನು 'ದೋ ಅಬ್' ಪ್ರದೇಶವೆಂದು ಕರೆಯುತ್ತಾರೆ. ಹಾಗೆಯೇ ಕೊಪ್ಪಳದ ಉತ್ತರ ಭಾಗದಲ್ಲಿಯೂ ಮತ್ತು ಬಳ್ಳಾರಿ ಜಿಲ್ಲೆಯ ದಕ್ಷಿಣ ಭಾಗದಲ್ಲಿ ತುಂಗಭದ್ರಾ ನದಿ ಹರಿಯುತ್ತಿದೆ. ಬಳ್ಳಾರಿ ಜಿಲ್ಲೆ ಹಗರಿ ಮತ್ತು ಚಿನ್ನಹಗರಿ ನದಿಗಳನ್ನು ಒಳಗೊಂಡಿದೆ. ಸಣ್ಣ ಹರಿವುಗಳಿವೆ. ಒಟ್ಟಾರೆಯಾಗಿ ಈ ಮೂರು ಜಿಲ್ಲೆಗಳಿಗೆ ತುಂಗಭದ್ರಾ ನದಿಯು ವರದಾನವಾಗಿದೆ.

## ಖನಿಜ ಸಂಪತ್ತು ಮತ್ತು ಕೈಗಾರಿಕೆಗಳು

ಖನಿಜ ಸಂಪತ್ತು ದೇಶದ ಪ್ರಗತಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ರಾಯಚೂರು ಜಿಲ್ಲೆಯು ಚಿನ್ನದ ಗಣಿಗೆ ಹೆಸರಾಗಿದ್ದರೆ, ಬಳ್ಳಾರಿ ಜಿಲ್ಲೆಯು ಕಬ್ಬಿಣದ ಅದಿರು ಮತ್ತು ಮ್ಯಾಂಗನೀಸ್‌ಗೆ ಹೆಸರಾಗಿದೆ. ಕೊಪ್ಪಳದಲ್ಲಿ ಈ ರೀತಿಯ ಖನಿಜ ಸಂಪತ್ತು ಇಲ್ಲವೆಂದೇ ಹೇಳಬಹುದು. ಈ ರೀತಿ ಖನಿಜ ಸಂಪತ್ತು ಹೇರಳವಾಗಿರುವ ಕಾರಣಕ್ಕಾಗಿ ಉಕ್ಕು ಮತ್ತು ಕಬ್ಬಿಣದ ಅದಿರಿನ ಕಾರ್ಖಾನೆಗಳು ಬಳ್ಳಾರಿ ಜಿಲ್ಲೆಯಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ರಾಯಚೂರು ಜಿಲ್ಲೆಯಲ್ಲಿ ಹಟ್ಟಿ ಚಿನ್ನದ ಗಣಿ ಮತ್ತು ಶಕ್ತಿನಗರದ ಶಾಖೋತ್ಪನ್ನ ವಿದ್ಯುತ್ ಘಟಕಗಳು ಹಾಗೆಯೇ ದೇಶದ ಏಳು ರಾಜ್ಯಗಳಿಗೆ ವಿದ್ಯುತ್ತನ್ನು ಒದಗಿಸುವ ಸಲುವಾಗಿ ಪವರ್‌ಗ್ರಿಡ್ ಎನ್ನುವಂತಹ ಬೃಹತ್ ವಿದ್ಯುತ್ ತಯಾರಿಕ ಘಟಕವನ್ನು ರಾಯಚೂರು ಜಿಲ್ಲೆಯಲ್ಲಿ ನಿರ್ಮಿಸಲಾಗುತ್ತಿದೆ. ಬಳ್ಳಾರಿ ಜಿಲ್ಲೆಯು ಉಕ್ಕು ಮತ್ತು ಕಬ್ಬಿಣದ ತಯಾರಿಕೆಯಲ್ಲಿ ರಾಜ್ಯದಲ್ಲಿಯೇ ಮುಂದಿದ್ದು, ಹಲವಾರು ಕಾರ್ಖಾನೆಗಳನ್ನು ಹೊಂದಿದೆ. ಅವುಗಳಲ್ಲಿ ಮುಖ್ಯವಾಗಿ ತೋರಣಗಲ್ಲಿನ ಜಿಂದಾಲ್ ಕಾರ್ಖಾನೆಯು ಪ್ರಥಮ ಸ್ಥಾನದಲ್ಲಿದೆ. ನಂತರದಲ್ಲಿ ಬಿ.ಎಂ.ಎಂ. ಇಸ್ಪಾತ್, ಸ್ಮಯೋರ್ ಉಕ್ಕು ಮತ್ತು ಕಬ್ಬಿಣದ ಕಾರ್ಖಾನೆ, ಎನ್.ಎಂ.ಡಿ.ಸಿ ಮುಂತಾದ ಬೃಹತ್ ಕಾರ್ಖಾನೆಗಳು ಪ್ರಮುಖ ಸ್ಥಾನದಲ್ಲಿ ಕಂಡುಬರುತ್ತವೆ. ಈ ಜಿಲ್ಲೆಯಲ್ಲಿ ಗಣಿಗಾರಿಕೆ ಅತ್ಯಂತ ಹೇರಳವಾಗಿರುವ ಕಾರಣಕ್ಕಾಗಿ ಸ್ಪಾಂಜ್ ಐರನ್ ತಯಾರಿಸುವ ಕಾರ್ಖಾನೆಗಳ ಸಂಖ್ಯೆ ಅಧಿಕವಾಗಿವೆ. ಹಾಗೆಯೇ ಕುಡಿತಿನಿಯಲ್ಲಿರುವ ಶಾಖೋತ್ಪನ್ನ ವಿದ್ಯುತ್ ಘಟಕವು ಕೂಡ ಪ್ರಮುಖವಾಗಿದೆ. ಕೊಪ್ಪಳ ಜಿಲ್ಲೆಯಲ್ಲಿ ಕಿರ್ಲೋಸ್ಕರ್, ಕಲ್ಯಾಣಿ ಎಂಬ ಕಾರ್ಖಾನೆಗಳನ್ನು ಹೊರತುಪಡಿಸಿದರೆ ಬೇರೆ ಕಾರ್ಖಾನೆಗಳು ಕಂಡುಬರುವುದಿಲ್ಲ. ಇತ್ತೀಚೆಗೆ ಎಂ.ಎಸ್.ಪಿ.ಎಲ್. ಸಂಸ್ಥೆಯು ಉಕ್ಕು ಮತ್ತು ಕಬ್ಬಿಣ ತಯಾರಿಕ ಕಾರ್ಖಾನೆಗಳನ್ನು ಸ್ಥಾಪಿಸುತ್ತಿರುವುದು ಕಂಡುಬಂದಿದೆ. ಒಟ್ಟಾರೆಯಾಗಿ ರಾಯಚೂರು, ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಖನಿಜ

ಸಂಪತ್ತಿನ ಜೊತೆಗೆ ಆದನ್ನು ಆಧರಿಸಿ ಕಾರ್ಖಾನೆಗಳ ಸಂಖ್ಯೆಯು ಹೆಚ್ಚಾಗಿರುವುದನ್ನು ಕಾಣುತ್ತೇವೆ. ಆದರೆ ಈ ಜಿಲ್ಲೆಗಳಲ್ಲಿ ಕಾರ್ಖಾನೆಗಳು, ಅದಿರು ನಿಕ್ಷೇಪಗಳು, ಸ್ಥಾವರಗಳು ಕಾಲುವೆಗಳು ರೈತರ ಭೂಮಿಯನ್ನು ಹಸಿರಾಗಿಸಿದರೂ ಅವು ಉಂಟುಮಾಡುವ ಸಮಸ್ಯೆಗಳ ಸ್ವರೂಪವು ಕೂಡ ತುಂಬಾ ತೀವ್ರ ಸ್ವರೂಪದ್ದು. ಅಂದರೆ ರೈತ, ಕೂಲಿಕಾರ್ಮಿಕರನ್ನು ಅಭಿವೃದ್ಧಿಯೆಡೆಗೆ ಕರೆದುಕೊಂಡು ಹೋಗದೆ, ಹೆಚ್ಚಾಗಿ ಬಂಡವಾಳಶಾಹಿಗಳನ್ನು, ಮಧ್ಯಮ ದಲ್ಲಾಳಿ ವ್ಯಾಪಾರೀಕರಣವನ್ನು ಬಲಪಡಿಸುವ ಹುನ್ನಾರ ಹೆಚ್ಚಾಗುತ್ತಿದೆ. ಈ ಭಾಗದಲ್ಲಿ ರೈತರ ಭೂಮಿಯನ್ನು ಕಡಿಮೆ ಬೆಲೆಗೆ ಖರೀದಿಸಿ ಆ ಭೂಮಿಯಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಿ ಸ್ಥಳೀಯರಿಗೆ ಉದ್ಯೋಗ ಕೊಡದೆ ಮಾಲೀಕರು ವಂಚಿಸುತ್ತಿದ್ದಾರೆ. ಉದ್ಯಮಿಗಳು ವಿದೇಶಿ ಸಂಸ್ಕೃತಿಗೆ ಮಾರುಹೋಗಿ ಈ ಭಾಗದ ಜಿಲ್ಲೆಗಳ ಕೂಲಿಕಾರರ, ಕಾರ್ಮಿಕರ, ರೈತರ ಆರ್ಥಿಕ ದುಸ್ಥಿತಿಗೆ ಕಾರಣರಾಗುತ್ತಿದ್ದಾರೆ. ಇನ್ನು ಈ ಭಾಗದಲ್ಲಿ ಕೃಷಿ ಉತ್ಪನ್ನಗಳನ್ನು ಅವಲಂಬಿಸಿದಂತಹ ಕೈಗಾರಿಕೆಗಳೂ ಸಹ ಕಂಡುಬರುತ್ತವೆ. ಮುಖ್ಯವಾಗಿ ಭತ್ತ, ಕಬ್ಬು ಮುಂತಾದ ವಾಣಿಜ್ಯ ಬೆಳೆಗಳಿಗಾಗಿಯೇ ಸಣ್ಣ ಕೈಗಾರಿಕೆಗಳು ಉದ್ಭವಿಸಿವೆ. ಆದರೆ ಸಾರ್ವಜನಿಕ ವಲಯದ ಕೈಗಾರಿಕೆಗಳಿಗಿಂತ ಖಾಸಗೀ ವಲಯದ ಕೈಗಾರಿಕೆಗಳ ಸಂಖ್ಯೆ ಅಧಿಕವಾಗಿರುವುದನ್ನು ಕಾಣುತ್ತೇವೆ.

### ೩.೨. ಆರ್ಥಿಕ ಸ್ಥಿತಿ

ಒಂದು ಪ್ರದೇಶದ ಅಭಿವೃದ್ಧಿಯು ಆ ಪ್ರದೇಶದ ಆರ್ಥಿಕತೆಯ ಮೇಲೆ ನಿರ್ಧರಿತವಾಗಿರುತ್ತದೆ. ಇಲ್ಲಿ ಆರ್ಥಿಕತೆ ಎಂದರೆ ಜನರು ತಮ್ಮ ಮೂಲಭೂತ ಅವಶ್ಯಕತೆಗಳನ್ನು ಈಡೇರಿಸಿಕೊಳ್ಳುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗುವುದು. ಇದು ಒಂದು ಕುಟುಂಬದ ಆರ್ಥಿಕತೆಯನ್ನು ಸೂಚಿಸಿದರೆ, ಉತ್ತಮ ರಸ್ತೆಗಳು, ಆರೋಗ್ಯ, ಶಿಕ್ಷಣ, ಮಾರುಕಟ್ಟೆ ವ್ಯವಸ್ಥೆ, ಕೈಗಾರಿಕೆಗಳು ಮುಂತಾದವುಗಳು ಆರ್ಥಿಕತೆಯ ಸೂಚಕಗಳಾಗಿವೆ. ಒಂದು ಕುಟುಂಬದ ಆರ್ಥಿಕತೆ ಸುಧಾರಿಸಿದಂತೆಲ್ಲ ಆ ಕುಟುಂಬದ ಸದಸ್ಯರ ತಲಾ ಆದಾಯ ಹೆಚ್ಚಾಗುತ್ತಾ ಹೋಗುತ್ತದೆ. ಇದು ರಾಷ್ಟ್ರೀಯ ವರಮಾನಕ್ಕೆ ಪೂರಕವಾಗುತ್ತದೆ. ಹೈದರಾಬಾದ್ ಕರ್ನಾಟಕದ ಜನರು ಉದ್ಯೋಗ ಅರಸಿ ಬಹುಪಾಲು ರೈತರು ನಗರಗಳಿಗೆ ವಲಸೆ ಹೋಗುತ್ತಿರುವುದು, ಇಲ್ಲಿನ ಆರ್ಥಿಕ ಸ್ಥಿತಿಗೆ ಹಿಡಿದ ಕನ್ನಡಿಯಾಗಿದೆ.

ಸ್ವಾತಂತ್ರ್ಯ ನಂತರ ಈ ಪ್ರಾಂತ್ಯವು ಕರ್ನಾಟಕಕ್ಕೆ ಸೇರಿತು. ಕರ್ನಾಟಕಕ್ಕೆ ಸೇರಿ ಅರವತ್ತೇಳು ವರ್ಷಗಳು ಗತಿಸಿದ ನಂತರ ಈ ಅವಧಿಯಲ್ಲಿ ನಡೆದ ಅಭಿವೃದ್ಧಿಯ ನಿರಂತರ ಪ್ರಕ್ರಿಯೆಯಿಂದಾಗಿ ಈ ಭಾಗದ ಸಂಪೂರ್ಣ ಚಿತ್ರಣ ಬದಲಾಗಬಹುದೆಂದು ಊಹಿಸಲಾಗಿತ್ತು. ಆದರೆ ಈ ಕನಸು ನನಸಾಗದೆ ಉಳಿಯಿತು. ೧೯೮೦ರಲ್ಲಿ ರಾಜ್ಯದ ಆರನೇ ಪಂಚವಾರ್ಷಿಕ ಯೋಜನೆಯನ್ನು ಜಾರಿಗೆ ತರಲಾಯಿತು. ಈ ಯೋಜನೆಯಲ್ಲಿ ರಾಜ್ಯದ ವಿವಿಧ ಜಿಲ್ಲೆಗಳ ಅಭಿವೃದ್ಧಿಯ ಸೂಚಿಯನ್ನು ಸಿದ್ಧಪಡಿಸಲಾಯಿತು. ಆರ್ಥಿಕ ಹಾಗೂ ಸಾಮಾಜಿಕ ಕ್ಷೇತ್ರಕ್ಕೆ

ಸಂಬಂಧಿಸಿದಂತೆ ವಿವಿಧ ಸೂಚ್ಯಂಕಗಳನ್ನು ಹೊಂದಿರುವ ಈ ಸೂಚಿಯು ೧೯೬೦ರಿಂದ ೧೯೮೦ರ ವರೆಗೆ ವಿವಿಧ ಕಾಲಕ್ಕೆ ಸಂಬಂಧಿಸಿದಂತೆ ತಯಾರಿಸಲಾಗಿತ್ತು. ೧೯೮೦ರ ವರೆಗೆ ರಾಜ್ಯದಲ್ಲಿರುವ ೧೯ ಜಿಲ್ಲೆಗಳಲ್ಲಿ ಈ ಭಾಗದ ಮೂರು ಜಿಲ್ಲೆಗಳು ಅಭಿವೃದ್ಧಿಯಲ್ಲಿ ಕೊನೆಯ ಮೂರು ಸ್ಥಾನಗಳನ್ನು ಪಡೆದಿರುವುದು ಕಂಡುಬಂದಿದೆ. ವಿಶೇಷವಾಗಿ ಅಭಿವೃದ್ಧಿಯ ಸೂಚಿಯಲ್ಲಿ ರಾಯಚೂರು ಮತ್ತು ಬೀದರ್ ಸ್ವಲ್ಪ ಮಟ್ಟಿಗೆ ಹೆಚ್ಚಳವಾಗಿ ಅವು ರಾಜ್ಯದ ಸರಾಸರಿಗೆ ಹತ್ತಿರ ಬಂದಿವೆ. ಆದರೆ ಗುಲ್ಬರ್ಗಾ ಜಿಲ್ಲೆಯು ಆರ್ಥಿಕ ಸ್ಥಿತಿಗತಿಯಲ್ಲಿ ಯಾವುದೇ ಬದಲಾವಣೆ ಆಗದೆ ಇರುವುದು ಕಂಡುಬಂದಿದೆ. ಇವೇ ಸೂಚ್ಯಂಕಗಳನ್ನು ಬಳಸಿ ೨೦೦೦ದಲ್ಲಿ ಕೇವಲ ಹೈದರಾಬಾದ್-ಕರ್ನಾಟಕದ ಮೂರು ಜಿಲ್ಲೆಗಳಿಗೆ ಸೂಚಿಯನ್ನು ತಯಾರಿಸಿದಾಗ ಅಭಿವೃದ್ಧಿಯಲ್ಲಿ ಏರುಪೇರಾಗಿರುವುದು ಸ್ಪಷ್ಟವಾಗಿ ಗೋಚರಿಸಿದೆ. ಈ ಸಂದರ್ಭದಲ್ಲಿ ಗುಲ್ಬರ್ಗಾ ಜಿಲ್ಲೆಯು ಸ್ವಲ್ಪ ಸುಧಾರಿಸಿದ್ದು, ಉಳಿದೆರಡು ಜಿಲ್ಲೆಗಳು ಅಭಿವೃದ್ಧಿಯಲ್ಲಿ ಕುಸಿದಿರುವುದು ಕಂಡುಬಂದಿದೆ.

೨೦೦೦ರಲ್ಲಿ ಎಸ್.ಎಂ.ಕೃಷ್ಣ ಅವರ ನೇತೃತ್ವದ ಸರ್ಕಾರವು ಇಡೀ ರಾಜ್ಯದ ಹಿಂದುಳಿದಿರುವಿಕೆಯನ್ನು ಅಧ್ಯಯನ ಮಾಡಲು ನೇಮಿಸಿದ ಡಾ.ಡಿ.ಎಂ.ನಂಜುಂಡಪ್ಪ ಉನ್ನತಾಧಿಕಾರ ಸಮಿತಿಯು ರಾಜ್ಯದ ಉದ್ದಗಲಕ್ಕೂ ಪ್ರವಾಸ ಕೈಗೊಂಡು ಪ್ರಾದೇಶಿಕ ಅಸಮತೋಲನ ಕುರಿತು ಆಳವಾಗಿ ಅಧ್ಯಯನ ಮಾಡಿ ೨೦೦೨ರಲ್ಲಿ ಒಂದು ವರದಿಯನ್ನು ಸಲ್ಲಿಸಿತು. ಈ ವರದಿಯಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶವು ಅಭಿವೃದ್ಧಿಯಲ್ಲಿ ಮೈಸೂರು ಕರ್ನಾಟಕ ಮತ್ತು ಮುಂಬಯಿ ಕರ್ನಾಟಕಕ್ಕೆ ಹೋಲಿಸಿದಾಗ ನೂರು ವರ್ಷದಷ್ಟು ಹಿಂದುಳಿದಿದೆ ಎಂದು ಸ್ಪಷ್ಟವಾಗಿ ಹೇಳಲಾಗಿದೆ.[೧೧] ಹಾಗಾಗಿ ಈ ಭಾಗದ ಜನರು ಇಂದಿಗೂ ಉದ್ಯೋಗವನ್ನು ಅರಸಿ ಬೇರೆ-ಬೇರೆ ಪ್ರದೇಶಗಳಿಗೆ ವಲಸೆ ಹೋಗುತ್ತಿದ್ದಾರೆ. ಡಾ.ಡಿ.ಎಂ.ನಂಜುಂಡಪ್ಪ ವರದಿಯ ಪ್ರಕಾರ ಹೈದರಾಬಾದ್ ಕರ್ನಾಟಕ ಪ್ರದೇಶದ ೬ ಜಿಲ್ಲೆಗಳ ೩೧ ತಾಲೂಕುಗಳಲ್ಲಿ ಕೇವಲ ೩ ತಾಲೂಕುಗಳು ಸಾಪೇಕ್ಷವಾಗಿ ಅಭಿವೃದ್ಧಿ ಹೊಂದಿದ ತಾಲೂಕುಗಳು ಮತ್ತು ಉಳಿದ ೨೮ ತಾಲೂಕುಗಳು ಹಿಂದುಳಿದವು ಎಂದಿದೆ. ರಾಜ್ಯದ ೩೯ ಅತ್ಯಂತ ಹಿಂದುಳಿದ ತಾಲೂಕುಗಳ ಪೈಕಿ ೨೧ ತಾಲೂಕುಗಳು ಹೈದರಾಬಾದ್-ಕರ್ನಾಟಕ ಪ್ರದೇಶದಲ್ಲಿವೆ. ಈ ಭಾಗದ ಜಿಲ್ಲೆಗಳು ಇತ್ತೀಚೆಗೆ ಕೃಷಿ ಕ್ಷೇತ್ರ ಕುರಿತಂತೆ ಹಲವಾರು ಗಂಭೀರ ಸಮಸ್ಯೆಗಳನ್ನು ಎದುರಿಸುತ್ತಿವೆ. ಗುಲ್ಬರ್ಗಾ ಒಳಗೊಂಡಂತೆ ಹೈದರಾಬಾದ್-ಕರ್ನಾಟಕದ ಅನೇಕ ಜಿಲ್ಲೆಗಳಲ್ಲಿ ಮಳೆಯ ಪ್ರಮಾಣ ಕಡಿಮೆಯಾಗುತ್ತಿದೆ. ಗುಲ್ಬರ್ಗಾ ಜಿಲ್ಲೆಯ ವಾರ್ಷಿಕ ಸರಾಸರಿ ಮಳೆ ೭೧೨.೬ ಮೀ.ಮೀ. ಇದ್ದರೆ ಬಳ್ಳಾರಿಯಲ್ಲಿ ೬೨೪ ಮೀ.ಮೀ. ಇದೆ. ಆದರೆ ಇದು ಸಹ ಸರಿಯಾದ ಪ್ರಮಾಣದಲ್ಲಿ ಹಾಗೂ ಸಕಾಲದಲ್ಲಿ ಬರುತ್ತಿಲ್ಲ. ಜೊತೆಗೆ ಆಗಾಗ ಉಂಟಾಗುವ ಅತೀವೃಷ್ಟಿ, ಅನಾವೃಷ್ಟಿಯಂತಹ ವೈಪರೀತ್ಯಗಳಿಂದ ಉತ್ಪಾದನೆ ಕಡಿಮೆಯಾಗಿದೆ. ಇಲ್ಲಿನ ಸಿಂಗಟಲೂರು ಏತ ನೀರಾವರಿ ಯೋಜನೆ, ಕೃಷ್ಣಾ ಮೇಲ್ದಂಡೆ ಯೋಜನೆ, ಭೀಮ, ಚಂದ್ರಂಪಳ್ಳಿ

ನೀರಾವರಿ ಯೋಜನೆ, ಹತ್ತಿಕುಣಿ, ಸೌದಾಗರ್ ಆಣೆಕಟ್ಟು, ಬೆಣ್ಣೆತೊರೆ, ಅಮರ್ಜಾ ಯೋಜನೆಗಳು ಹಲವಾರು ವರ್ಷಗಳಿಂದ ಆಮೆಗತಿಯಲ್ಲಿ ಸಾಗಿವೆ. ಆದ್ದರಿಂದಾಗಿ ಸಪ್ತನದಿಗಳ ನಾಡಿನಲ್ಲಿ ಜನ ನೀರಿಗಾಗಿ ಪರಿತಪಿಸುವಂತಾಗಿದೆ. ಇಂತಹ ಅನೇಕ ಜ್ವಲಂತ ಸಮಸ್ಯೆಗಳು ಈ ಭಾಗದ ಆರ್ಥಿಕ ಅಭಿವೃದ್ಧಿಯ ಹಿನ್ನೆಡೆಗೆ ಪ್ರಮುಖ ಕಾರಣಗಳೆನ್ನಬಹುದಾಗಿವೆ.

ಜಾಗತೀಕರಣದಿಂದ ನಮ್ಮ ದೇಶಕ್ಕೆ ಬಂದೊದಗಿದ ಈ ದುರ್ದೆಶೆಯು ರಾಯಚೂರು ಜಿಲ್ಲೆಯಲ್ಲಿರುವ ಪರಿಸ್ಥಿತಿಗೆ ಭಿನ್ನವಾಗಿಲ್ಲ. ನವಾಬನ ದಾಸ್ಯದಿಂದ ಜನತೆ ಇನ್ನೂ ಹೊರಬಂದಿಲ್ಲ. ಇದರಿಂದ ಜಾಗತೀಕರಣ ಅನುಭವ ಅವರಿಗೆ ಗೋಚರಿಸುತ್ತಿಲ್ಲ. ಈ ಭಾಗದಲ್ಲಿನ ಆರೋಗ್ಯದ ಸಮಸ್ಯೆಗಳು ಒಳಗೊಂಡಂತೆ ಹಲವಾರು ಸಮಸ್ಯೆಗಳು ಜನರನ್ನು ಕಾಡುತ್ತಿವೆ. ಮುಖ್ಯವಾಗಿ ರಾಯಚೂರು ಜಿಲ್ಲೆಯ ಕೆಲವು ಪ್ರದೇಶಗಳು ಮಾತ್ರ ನೀರಾವರಿಯಿಂದ ಕೂಡಿದ್ದು, ಅಲ್ಲಿನ ಜನರು ಕೃಷಿಯಲ್ಲಿ ಬದಲಾವಣೆಯನ್ನು ಕಂಡುಕೊಂಡರೂ ಸಹ ಅವರ ಆರೋಗ್ಯ, ಶಿಕ್ಷಣ ಮುಂತಾದವುಗಳಿಗೆ ಸಂಬಂಧಿಸಿದಂತೆ ತೀರಾ ಹಿಂದುಳಿದಿದ್ದಾರೆ. ಇನ್ನು ಮಳೆಯನ್ನು ಅವಲಂಬಿಸಿ ಕೃಷಿ ಮಾಡುವ ಪ್ರದೇಶದಲ್ಲಿ ಮೂಲಭೂತ ಸೌಲಭ್ಯಗಳೂ ಸಹ ಇಲ್ಲದಿರುವುದನ್ನು ಕಾಣುತ್ತೇವೆ ಮತ್ತು ಈ ಪ್ರದೇಶವು ಕೈಗಾರಿಕೆಗಳಿಂದಲೂ ಸಹ ವಂಚಿತವಾಗಿದೆ. ಹಾಗಾಗಿ ಇಲ್ಲಿನ ಜನರು ಇಂದಿಗೂ ಕೂಲಿಯನ್ನು ಅರಸಿ ವಲಸೆ ಹೋಗುತ್ತಿದ್ದಾರೆ.

ನಿರುದ್ಯೋಗ, ನೀರಿನ ಬವಣೆ, ಶಿಕ್ಷಣ ವ್ಯಾಪಾರೀಕರಣ, ಬಡತನ ಇವೇ ಮುಂತಾದ ಜ್ವಲಂತ ಸಮಸ್ಯೆಗಳು ಈ ಜಿಲ್ಲೆಯಲ್ಲಿ ಜನರನ್ನು ಕಾಡುತ್ತಿವೆ. ಇಲ್ಲಿ ರೈತರ ಸ್ಥಿತಿಯೂ ಅಷ್ಟೇನು ಉತ್ತಮವಾಗಿಲ್ಲ. ರೈತ ಬೆಳೆದ ಬೆಳೆಗೆ ಉತ್ತಮ ಬೆಲೆ ಸಿಗದೆ ಕಂಗಾಲಾಗಿದ್ದಾನೆ. ಉತ್ತಮ ಬೀಜಗಳ ಕೊರತೆಯಿಂದಾಗಿ ಕೃಷಿಕರು ಕಂಗೆಟ್ಟಿದ್ದಾರೆ. ಕೈಗಾರಿಕೆಗಳು, ಕರಕುಶಲ ಕಲೆಗಳು ನಿಂತು ಹೋಗಿವೆ. ಕುಲಕಸುಬುಗಳಂತೂ ಕೇಳುವವರಿಲ್ಲದೆ ಹಳ್ಳಿಗಳ ಆರ್ಥಿಕ ಪರಿಸ್ಥಿತಿ ಚಿಂತಾಜನಕವಾಗಿದೆ. ಯುವಕರು ಉದ್ಯೋಗಗಳಿಲ್ಲದೆ ಜನರು ನಿರುದ್ಯೋಗಿಗಳಾಗಿದ್ದಾರೆ. ಇದರಿಂದಾಗಿ ಸಾಮಾನ್ಯ ಜನತೆ ಉದ್ಯೋಗವನ್ನರಿಸಿ ಹೊರರಾಜ್ಯಗಳಿಗೆ ಗುಳೆ ಅಥವಾ ವಲಸೆ ಹೋಗುವುದು ಸಾಮಾನ್ಯ ಸ್ಥಿತಿಯಂತಾಗಿದೆ. 

ಹಿಂದುಳಿದ ಜಿಲ್ಲೆ ಎನ್ನುವ ಹಣೆಪಟ್ಟಿಯ ಅಡಿಯಲ್ಲಿ ಮುಂದುವರಿಯುವ ತನ್ನೆಲ್ಲ ಸಾಮರ್ಥ್ಯವನ್ನು ತೋರಿಸುವಲ್ಲಿ ವಿಫಲವಾಗಿರುವ ರಾಯಚೂರು ಜಿಲ್ಲೆ ಅನೇಕ ವಿಷಯಗಳಲ್ಲಿ ಅವಕಾಶವಂಚಿತ ಜಿಲ್ಲೆ ಎಂಬುದನ್ನು ಯಾರೂ ಅಲ್ಲಗಳೆಯುವಂತಿಲ್ಲ. ಇದನ್ನು ಸಮರ್ಥಿಸುವಂತೆ ಮಹಿಳೆಯರ ಸ್ಥಿತಿಯು ಅಷ್ಟೇನು ಉತ್ತಮವಾಗಿಲ್ಲ. ವಿಶ್ವಸಂಸ್ಥೆ ೧೯೭೫ರ ವರ್ಷವನ್ನು ಮಹಿಳಾ ವರ್ಷವೆಂದೇ ಘೋಷಿಸಿತು. ೧೯೭೫ರಿಂದ ೮೫ರ ದಶಕವು ಮಹಿಳಾ ದಶಕವೆಂದೇ ಪ್ರಚಾರ ಪಡೆಯಿತು. ಆದರೆ ದಶಕಗಳೇ ಕಳೆದರೂ ರಾಯಚೂರು ಜಿಲ್ಲೆಯ ಸ್ತ್ರೀಯರ ಆರ್ಥಿಕ ಸ್ಥಿತಿಗತಿಯಲ್ಲೇನೂ ಯಾವ ಮಹತ್ವದ ಸುಧಾರಣೆಗಳಾಗಲಿಲ್ಲ. ಆಕೆಯ ಸಮಸ್ಯೆಗಳು ಮತ್ತು ಶೋಷಣೆಗಳ ರೂಪ-ಸ್ವರೂಪಗಳಲ್ಲಿ ಮೇಲ್ನೋಟಕ್ಕೆ ವ್ಯತ್ಯಾಸ ಕಂಡರೂ ಕೂಡ ಅವುಗಳು ಮುಂದುವರಿದಿರುವುದಂತೂ ಸ್ಪಷ್ಟವಾಗಿ ಗೋಚರಿಸುತ್ತದೆ.

ಕೃಷಿ ಪ್ರಧಾನವಾದ ಈ ಜಿಲ್ಲೆಯಲ್ಲಿ ಅನಕ್ಷರಸ್ಥ ದುಡಿಯುವ ಮಹಿಳೆಯರ ಸಂಖ್ಯೆ ಹೆಚ್ಚು. ಅಕ್ಷರಸ್ಥ ಮಹಿಳೆಯ ಸಮಸ್ಯೆ ಒಂದು ಬಗೆಯಾದರೆ, ಅನಕ್ಷರಸ್ಥ ಮಹಿಳೆಯರದು ಮತ್ತೊಂದು ರೀತಿಯಲ್ಲಿದೆ. ಅವರು ಪುರುಷನಷ್ಟೆ ಸಮನಾಗಿ ದುಡಿದರು ಕೂಲಿಯಲ್ಲಿ ತಾರತಮ್ಯವಿದೆ. ಸರಕಾರಿ ಹುದ್ದೆಯಲ್ಲಿ ಇರುವ ಮಹಿಳೆಯ ಸೌಲಭ್ಯಗಳು ಈ ಕಾರ್ಮಿಕ ಮಹಿಳೆಯರಿಗೆ ಇಲ್ಲದಿರುವುದು ಅವರನ್ನು ಇನ್ನಷ್ಟು ತೊಂದರೆಗೆ ಈಡುಮಾಡಿರುವುದರಿಂದ ಆರ್ಥಿಕ ಸ್ಥಿತಿ ದುರ್ಬಲವಾಗಿದೆ.

ನಾವು ಸಾಮಾನ್ಯವಾಗಿ ಭಾವಿಸಿರುವಂತೆ ಯಾವ ದೇಶ, ಪ್ರದೇಶದಲ್ಲಿ ಜನಸಂಖ್ಯೆಯ ಬೆಳವಣಿಗೆ ತೀವ್ರಗತಿಯಲ್ಲಿರುತ್ತದೋ ಅಲ್ಲಿ ಆರೋಗ್ಯ ಸಂಬಂಧಿ ಸ್ಥಿತಿಗತಿ ಕೆಳಮಟ್ಟದಲ್ಲಿರುತ್ತದೆ. ಕೊಪ್ಪಳ ಜಿಲ್ಲೆಗೆ ಸಂಬಂಧಿಸಿದಂತೆ ಈ ಮೇಲಿನ ಪ್ರಮೇಯವನ್ನು ಅನ್ವಯಿಸಬಹುದಾಗಿದೆ. ಕರ್ನಾಟಕದಲ್ಲಿ ಜನಸಂಖ್ಯೆಯು ತೀವ್ರಗತಿಯಲ್ಲಿ ಬೆಳೆಯುತ್ತಿರುವ ಜಿಲ್ಲೆಗಳಲ್ಲಿ ಕೊಪ್ಪಳವೂ ಒಂದು. ಈ ಜಿಲ್ಲೆಯಲ್ಲಿ ಜನಸಂಖ್ಯೆಗೆ ಸಾಪೇಕ್ಷವಾಗಿ ದುಡಿಯುವ ವರ್ಗ ಮತ್ತು ಕೃಷಿಕಾರ್ಮಿಕರ ಪ್ರಮಾಣಗಳ ರಾಜ್ಯಮಟ್ಟದಲ್ಲಿರುವುದಕ್ಕಿಂತ ಅಧಿಕವಾಗಿದೆ. ಆದ್ದರಿಂದಲೆ ಈ ಜಿಲ್ಲೆಯಲ್ಲಿ ಬಡತನದ ಪ್ರಮಾಣ ಮತ್ತು ಅದರ ತೀವ್ರತೆಯು ರಾಜ್ಯಮಟ್ಟಕ್ಕಿಂತ ಅಧಿಕವಾಗಿದೆ ಎಂದು ಹೇಳಬಹುದು. ಮೊದಲೆ ಆರ್ಥಿಕವಾಗಿ ಹಿಂದುಳಿದಿರುವ, ಅಭಿವೃದ್ಧಿಯ ದೃಷ್ಟಿಯಿಂದ ಕೆಳಮಟ್ಟದಲ್ಲಿರುವ ಕೊಪ್ಪಳ ಜಿಲ್ಲೆಯಲ್ಲಿ ಜನರಿಗೆ ದುಡಿಮೆಯು ಅನಿವಾರ್ಯವಾಗಿದೆ. ದುಡಿಮೆಯೇ ಅವರ ಬದುಕಾಗಿದೆ. ನೀರಾವರಿ ಪ್ರದೇಶವನ್ನು ಹೊಂದಿದ್ದರೂ ಅದು ಅಲ್ಪ ಮಾತ್ರ. ಹೆಚ್ಚಾಗಿ ಒಣ ಕೃಷಿ ಭೂಮಿಯನ್ನು ಹೊಂದಿದೆ. ಭತ್ತ ಇಲ್ಲಿನ ಪ್ರಧಾನವಾದ ಬೆಳೆ. ಅಲ್ಲದೆ ಈ ಜಿಲ್ಲೆ ಭೂ ರಹಿತ ಕೃಷಿ ಕಾರ್ಮಿಕರನ್ನು ಹೊಂದಿರುವ ಪ್ರದೇಶ. ಇದರಿಂದ ಭೂಮಾಲೀಕತ್ವದಲ್ಲಿ ತೀವ್ರ ಸ್ವರೂಪದ ಅಸಮಾನತೆ ಇರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಆದುದರಿಂದ ಇಲ್ಲಿ ಜಮೀನ್ದಾರಿಕೆ ವ್ಯವಸ್ಥೆ ಅಸ್ತಿತ್ವದಲ್ಲಿದೆ. ಹೀಗಾಗಿ ಕೃಷಿ ಕಾರ್ಮಿಕರ ಬದುಕು ಮತ್ತು ಸಣ್ಣ ರೈತರ ಸ್ಥಿತಿ ಚಿಂತಾಜನಕವಾಗಿದೆ. ಯೋಜಿತ ಅಭಿವೃದ್ಧಿಯ ಆರಂಭದ ದಿಸೆಯಲ್ಲಿ ಕೆಲವು ಉದ್ದಿಮೆಗಳನ್ನು ಹಿಂದುಳಿದ ವರ್ಗಗಳಲ್ಲಿ ಸ್ಥಾಪಿಸಿ ಅಲ್ಲಿನ ಸಮಸ್ಯೆಗಳನ್ನು ಪರಿಹರಿಸಲಾಗುತ್ತದೆ ಎಂಬ ನಂಬಿಕೆ ಈ ಪ್ರದೇಶದ ಜನರಲ್ಲಿತ್ತು. ಆದರೆ ಅದು ಸಾಧ್ಯವಾಗಲಿಲ್ಲ. ಪರಿಣಾಮವಾಗಿ ಅದು ಬೇರೊಂದು ಸಮಸ್ಯೆಯನ್ನು ಸೃಷ್ಟಿಮಾಡಿತು. ಜೊತೆಗೆ ಆರ್ಥಿಕ ಹಿನ್ನೆಡೆಗೆ ಕಾರಣವಾಯಿತು.

ಆರೋಗ್ಯಕ್ಕೆ ಸಂಬಂಧಿಸಿದಂತೆಯೂ ಮಹಿಳೆಯರ ಸ್ಥಿತಿಯು ಧಾರುಣವಾಗಿದೆ. ಈ ಜಿಲ್ಲೆಗೆ ಸಂಬಂಧಿಸಿದಂತೆ ಆರೋಗ್ಯ ಸೂಚಿ ದೊರೆಯುವುದಿಲ್ಲವಾದರೂ, ಅದು ವಿಭಜನಾಪೂರ್ವ ಜಿಲ್ಲೆಯಲ್ಲಿ ಮಾಹಿತಿ ಸಿಗುತ್ತದೆ. ಇದನ್ನು ಗಮನಿಸಿದಾಗ ಈ ಪ್ರದೇಶಕ್ಕೆ ಸಂಬಂಧಿಸಿದಂತೆ ಮಹಿಳೆಯ ಆರೋಗ್ಯ ದುಃಸ್ಥಿತಿಯಿಂದ ಕೂಡಿರುವುದು ಕಂಡುಬರುತ್ತದೆ. ಕಾರಣ ಈ ಜಿಲ್ಲೆಯಲ್ಲಿ ಬೆಳೆಯುತ್ತಿರುವ ತೀವ್ರ ಜನಸಂಖ್ಯೆ ಈ ಕುರಿತಂತೆ ಸರಕಾರವು ಕ್ರಮ ಕೈಗೊಳ್ಳಬೇಕಿದೆ.

ಇತ್ತೀಚೆಗೆ ಈ ಜಿಲ್ಲೆಯಲ್ಲಿ ಕೈಗಾರಿಕೆಗಳು ತಲೆ ಎತ್ತುತ್ತಿವೆ. ಕೈಗಾರಿಕೆಗಳು ಸ್ಥಾಪನೆಗೊಂಡ ಪ್ರದೇಶದ ಸುತ್ತಮುತ್ತಲಿನ ಹತ್ತಾರು ಹಳ್ಳಿಗಳ ಜನರು ಕೂಲಿಯನ್ನು ಅರಸಿ ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಿರುವುದು ಕಂಡುಬಂದಿದೆ. ಇಲ್ಲಿ ಇವರ ಜೀವನ ಮಟ್ಟ ಸ್ವಲ್ಪ ಸುಧಾರಿಸಿದೆ. ಆದರೂ ಆರೋಗ್ಯ ಮತ್ತು ಶಿಕ್ಷಣದ ಸಮಸ್ಯೆಗಳು ಗಂಭೀರವಾಗಿರುವುದನ್ನು ಕಾಣುತ್ತೇವೆ. ಕೈಗಾರಿಕೆಗಳು ಸ್ಥಾಪನೆಯಾದ ಪ್ರದೇಶದಿಂದ ಸುಮಾರು ಕಿ.ಮೀಟರ್‌ಗಳ ದೂರದಲ್ಲಿರುವ ಪ್ರದೇಶಗಳು ಮತ್ತು ಮಳೆಯನ್ನೇ ಅವಲಂಬಿಸಿ ಕೃಷಿಯಲ್ಲಿ ತೊಡಗಿರುವ ಪ್ರದೇಶಗಳಲ್ಲಿನ ಜನರ ಆರ್ಥಿಕತೆ ತುಂಬಾ ಶೋಚನೀಯವಾಗಿದೆ.

ಜಾಗತೀಕರಣದ ಈ ಹೊತ್ತಿನಲ್ಲಿ ಸಾಹಿತ್ಯಿಕ-ಸಾಂಸ್ಕೃತಿಕ ತಲ್ಲಣಗಳು ಎಲ್ಲೆಡೆಯೂ ತಾಂಡವವಾಡುತ್ತಿವೆ. ಭಾಷೆಯೂ ತನ್ನ ಅಸ್ತಿತ್ವವನ್ನು ಕಾಪಾಡಿಕೊಳ್ಳಬೇಕಿದೆ. ಗಡಿಬಿಕ್ಕಟ್ಟು ಉಲ್ಬಣಿಸುತ್ತಿದೆ. ಜಾಗತೀಕರಣದ ಅಹವಾಲುಗಳನ್ನು ಮುಂದುಮಾಡಿ ರೈತರ, ಕಾರ್ಮಿಕರ, ದಲಿತರ, ಅಲ್ಪಸಂಖ್ಯಾತರ ಮಹಿಳೆಯರ ಅಭಿವೃದ್ಧಿಯನ್ನು ಕಡೆಗಣಿಸಲಾಗುತ್ತಿದೆ. ಬಳ್ಳಾರಿ ಜಿಲ್ಲೆಯು ಇಂತಹ ಸಮಸ್ಯೆಯಿಂದ ಮುಕ್ತವಾಗಿಲ್ಲ. ಜಿಲ್ಲೆಯ ಆರ್ಥಿಕತೆಯನ್ನು ಗಮನಿಸಿದಾಗ ಜಿಲ್ಲೆಯಲ್ಲಿ ಕೃಷಿಯ ಪ್ರಾಬಲ್ಯ ಕಡಿಮೆಯಾಗಿ, ದ್ವಿತೀಯ ಮತ್ತು ತೃತೀಯ ವಲಯಗಳ ಪ್ರಾಬಲ್ಯ ಅಧಿಕಗೊಂಡಿರುವುದು ತೋರುತ್ತದೆ. ಇಂದಿಗೂ ಕೃಷಿ ಬಳ್ಳಾರಿ ಜಿಲ್ಲೆಯ ಜನತೆಯ ಮೂಲ ಜೀವನಾಧಾರ ಕಸುಬಾಗಿದೆ. ಪ್ರಾಥಮಿಕ ವಲಯವಾದ ಈ ಕ್ಷೇತ್ರದ ಮೇಲೆ ಅವಲಂಬನೆಯಾದ ಜನತೆಯ ಪ್ರಮಾಣ ಉಳಿದೆರಡು ವಲಯಗಳ ಅವಲಂಬನೆಗಿಂತಲೂ ಅಧಿಕವಾಗಿದೆ.

ಬಳ್ಳಾರಿ ಜಿಲ್ಲೆಯ ಒಟ್ಟು ಭೂಪ್ರದೇಶದಲ್ಲಿ ಶೇ.೩೭.೯ರಷ್ಟು ಪ್ರದೇಶ ಮಾತ್ರ ನೀರಾವರಿಗೆ ಒಳಪಟ್ಟ ಪ್ರದೇಶವಾಗಿದೆ. ಉಳಿದ ಶೇ.೬೩.೧ರಷ್ಟು ಮಳೆಯಾಧಾರಿತ ಒಣಬೇಸಾಯವಾಗಿದೆ. ಆದರೆ ಮಳೆ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಾ ಬರುತ್ತಿದೆ. ಇದರಿಂದ ಕೃಷಿ ಚಟುವಟಿಕೆಗಳು ಕುಂಟಿತವಾಗಿವೆ. ಅದರ ಪರಿಣಾಮ ರೈತರು ಮತ್ತು ಕಾರ್ಮಿಕರು ಆರ್ಥಿಕ ದುಃಸ್ಥಿತಿಯನ್ನು ಎದುರಿಸುತ್ತಿದ್ದಾರೆ. ಅಲ್ಲದೇ ಈ ಪ್ರದೇಶದಲ್ಲಿ ವಿದೇಶಿ ಮತ್ತು ಸ್ವದೇಶಿ ಬಂಡವಾಳದ ಉದ್ಯಮಗಳಲ್ಲಿ ಮಹಿಳೆಯರನ್ನು ಕಾಣುವುದು ಅಪರೂಪವಾಗಿದೆ. ಸರಕಾರ ಮತ್ತು ಉದ್ಯಮಗಳು ಮಹಿಳೆಯರಿಗೆ ಉದ್ಯೋಗ ನೀಡುವ ಭರವಸೆಯನ್ನು ನೀಡುತ್ತಲೆ ಮಹಿಳೆಯರನ್ನು ವಂಚಿಸುತ್ತಿವೆ. ಇವು ನೀಡಿರುವ ಕೆಲಸವಾದರೂ ಎಂತಹವು ನಾಲ್ಕನೆಯ ದರ್ಜೆಯ ಕೆಲಸ. ಹೀಗಾಗಿ ಮಹಿಳೆಯರ ಸಮಸ್ಯೆಗಳು ಗಂಭೀರವಾಗಿವೆ. ಆದರೆ ರಾಜಕೀಯವಾಗಿ ಮತ್ತು ಗಣಿಗಾರಿಕೆಯಿಂದ ರಾಜ್ಯದಲ್ಲಿ ಬಳ್ಳಾರಿ ತನ್ನ ಮಹತ್ವವನ್ನು ಉಳಿಸಿಕೊಂಡಿದೆ ಎಂದು ಹೇಳಬಹುದು. ಸಾಂಸ್ಕೃತಿಕವಾಗಿ ಈ ಜಿಲ್ಲೆ ಇನ್ನು ತನ್ನ ಚಾರಿತ್ರಿಕ ಮಹತ್ವವನ್ನು ಉಳಿಸಿಕೊಂಡಿದೆ. ಆದರೆ ನಗರೀಕರಣದಿಂದಾಗಿ ಮತ್ತು ಗಣಿಗಾರಿಕೆಯಿಂದ ನೀರು ಮತ್ತು ಆಹಾರ ಕಲುಷಿತಗೊಂಡು ಜನತೆಯ ಆರೋಗ್ಯದ ಮೇಲೆ ದುಷ್ಪರಿಣಾಮ

ಜೀರುತ್ತಿದೆ. ಸರಕಾರ ಈ ಕುರಿತು ಅನೇಕ ರಕ್ಷಣಾತ್ಮಕ ಕ್ರಮ ಕೈಗೊಂಡಿದೆಯಾದರೂ ಅವು ಜಾರಿಯಾಗಬೇಕಿದೆ. ಬಳ್ಳಾರಿ ಜಿಲ್ಲೆಯಲ್ಲಿ ಕೈಗಾರಿಕೆಗಳ ಸಂಖ್ಯೆ ಹೆಚ್ಚಾಗಿ ಕಂಡುಬಂದರೂ ಇವು ಕೆಲವು ತಾಲೂಕುಗಳಿಗೆ ಮಾತ್ರ ಸೀಮಿತವಾಗಿವೆ. ಅಂತೆಯೇ ಕಾರ್ಖಾನೆಗಳಲ್ಲಿ ಕೆಲಸ ಮಾಡಲು ಬೇಕಾದ ತಾಂತ್ರಿಕ ಕೌಶಲ್ಯವು ಈ ಜನರಿಗೆ ಇಲ್ಲವಾಗಿದೆ. ಆದ್ದರಿಂದ ಈ ಭಾಗದ ಜನರಿಗೆ ಕಾರ್ಖಾನೆಯ ತಾಂತ್ರಿಕ ಕೌಶಲ್ಯ ನೀಡಿ ಕೆಲಸಕ್ಕೆ ನೇಮಕ ಮಾಡಿಕೊಳ್ಳಬಹುದಾದ ಇಚ್ಛಾಶಕ್ತಿಯೂ ಕಾರ್ಖಾನೆಗಳ ಮಾಲೀಕರುಗಳಿಗೆ ಇಲ್ಲವಾಗಿದೆ. ಈ ವಿಷಯದಲ್ಲಿ ಸರಕಾರದ ನಡೆ ಕೂಡ ಕಾರ್ಖಾನೆ ಮಾಲೀಕರ ಪರವಾಗಿರುವಂತೆ ಕಾಣುತ್ತಿರುವುದು ಕಂಡುಬಂದಿದೆ. ಹಾಗಾಗಿ ಈ ಜಿಲ್ಲೆಯಲ್ಲಿಯೂ ಸಹ ಉದ್ಯೋಗವನ್ನರಸಿ ವಲಸೆ ಹೋಗುವವರ ಸಂಖ್ಯೆ ಅಧಿಕವಾಗಿದೆ. ಒಟ್ಟಾರೆಯಾಗಿ ಈ ಮೂರು ಜಿಲ್ಲೆಗಳಲ್ಲಿನ ಜನರ ಆರ್ಥಿಕತೆ ಸುಧಾರಿಸಿದೆ ಎಂದು ಮೇಲ್ನೋಟಕ್ಕೆ ಕಂಡುಬಂದರೂ ಸಹ ಆರ್ಥಿಕತೆಗೆ, ಅಭಿವೃದ್ಧಿಗೆ ಪೂರಕವಾದ ಹಲವಾರು ಅಂಶಗಳಲ್ಲಿ ಜ್ವಲಂತ ಸಮಸ್ಯೆಗಳು ಕಂಡುಬರುತ್ತಿವೆ.

ಈ ಮೂರೂ ಜಿಲ್ಲೆಗಳಲ್ಲಿನ ಜನರು ಕೃಷಿಯನ್ನು ಮತ್ತು ಕೈಗಾರಿಕೆಗಳನ್ನು ಹೆಚ್ಚಾಗಿ ಅವಲಂಭಿಸಿರುವುದು ಕಂಡುಬರುತ್ತದೆ. ಅದರಲ್ಲೂ ಹೆಚ್ಚಾಗಿ ಕೃಷಿಯನ್ನೇ ಅವಲಂಭಿಸಿದವರು ಇದ್ದಾರೆ. ಇದನ್ನು ೨೦೦೧ರ ನಂಜುಂಡಪ್ಪ ವರದಿಯನ್ನು ಗಮನಿಸಿದರೆ ವೇದ್ಯವಾಗುತ್ತದೆ. ಈ ವರದಿಯ ಪ್ರಕಾರ ಈ ಮೂರೂ ಜಿಲ್ಲೆಗಳಲ್ಲಿನ ಕೃಷಿ ಕಾರ್ಮಿಕರ ಸಂಖ್ಯೆಯನ್ನು ಕೆಳಗಿನ ಕೋಷ್ಟಕದಲ್ಲಿ ವಿವರಿಸಲಾಗಿದೆ.

ಮೂರು ಜಿಲ್ಲೆಗಳಲ್ಲಿನ ಒಟ್ಟು ಕೆಲಸಗಾರರ ಪೈಕಿ ಕೃಷಿ ಕಾರ್ಮಿಕರ ಲಿಂಗಾನುಪಾತ ಜಿಲ್ಲಾವಾರು ಶೇಕಡಾ ಪ್ರಮಾಣ.

| ಕ್ರಸಂ | ಜಿಲ್ಲೆ | ಕೆಲಸಗಾರರು | | | ಕೃಷಿ ಕಾರ್ಮಿಕರು | | | ಒಟ್ಟು ಕೆಲಸಗಾರರಿರುವ ಕೃಷಿ ಕಾರ್ಮಿಕರ ಶೇಕಡಾವಾರು | | |
|---|---|---|---|---|---|---|---|---|---|---|
| | | ಒಟ್ಟು | ಪುರುಷರು | ಮಹಿಳೆಯರು | ಒಟ್ಟು | ಪುರುಷರು | ಮಹಿಳೆಯರು | ಒಟ್ಟು | ಪುರುಷರು | ಮಹಿಳೆಯರು |
| ೦೧ | ರಾಯಚೂರು | ೭೨೬೫೭೪ | ೪೪೧೮೯೨ | ೨೮೪೬೮೨ | ೩೨೭೦೧೮ | ೧೨೪೦೧೭ | ೨೦೩೦೦೧ | ೪೫.೦೧ | ೨೮.೦೭ | ೭೧.೩೦ |
| ೦೨ | ಕೊಪ್ಪಳ | ೫೫೫೩೯೧ | ೩೨೫೦೨೪ | ೨೩೦೩೬೭ | ೨೩೩೬೩೬ | ೮೬೨೮೬ | ೧೪೭೩೫೦ | ೪೨.೦೭ | ೨೬.೫೫ | ೬೩.೯೬ |
| ೦೩ | ಬಳ್ಳಾರಿ | ೯೨೧೯೩೦ | ೫೬೪೬೫೯ | ೩೫೭೨೭೧ | ೩೬೦೪೨೯ | ೧೪೨೮೬೭ | ೨೧೭೫೬೨ | ೩೯.೧ | ೨೫.೩ | ೬೦.೮೯ |

ಮೂಲ : ಪ್ರಾದೇಶಿಕ ಅಸಮತೋಲನ ನಿವಾರಣಾ ಉನ್ನತಾಧಿಕಾರ ಸಮಿತಿ ಡಾ.ಡಿ.ಎಂ.ನಂಜುಂಡಪ್ಪ ವರದಿ. ಪುಟ ಸಂಖ್ಯೆ ೩೧೪

ಮೇಲಿನ ಕೋಷ್ಟಕದ ಅನ್ವಯ ಕೃಷಿ ಕಾರ್ಮಿಕರಾಗಿ ಪುರುಷರಿಗಿಂತ ಮಹಿಳೆಯರೇ ಹೆಚ್ಚಿನ ಪ್ರಮಾಣದಲ್ಲಿ ಇರುವುದನ್ನು ಕಾಣಲಾಗಿದೆ. ರಾಯಚೂರು ಜಿಲ್ಲೆಯಲ್ಲಿ ಶೇ. ೭೧.೩೦ರಷ್ಟು ಮಹಿಳಾ ಕೃಷಿ ಕಾರ್ಮಿಕರಿದ್ದರೆ, ಪುರುಷ ಕೃಷಿ ಕಾರ್ಮಿಕರ ಪ್ರಮಾಣ ಶೇ. ೨೮.೦೭ರಷ್ಟಿದೆ. ಹಾಗೆಯೇ ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಅನುಕ್ರಮವಾಗಿ ಶೇ. ೬೩.೯೬ ಮತ್ತು ಶೇ. ೬೦.೮೯ ರಷ್ಟಿರುವುದು ಕಂಡುಬರುತ್ತದೆ. ಈ ಸಮೀಕ್ಷೆ ೨೦೦೧ರಲ್ಲಿ ನಡೆದಿದೆಯಾದರೂ ಇಂದಿಗೂ ಸಹ ಕೃಷಿಯಲ್ಲಿ ಕೆಲಸಮಾಡುವವರ ಪ್ರಮಾಣ ಪುರುಷರಿಗಿಂತ ಮಹಿಳೆಯರದ್ದೇ ಅಧಿಕವಾಗಿದೆ.

"ಒಂದು ಪ್ರದೇಶದಲ್ಲಿ ಕೃಷಿ ಕೂಲಿಕಾರ್ಮಿಕರು ಹೆಚ್ಚಾಗಿರುವುದನ್ನು ಸಾಮಾನ್ಯವಾಗಿ ಕೂಲಿಕಾರರಲ್ಲಿರುವ ಕಡಿಮೆ ಮಟ್ಟದ ಸಾಕ್ಷರತೆ, ಕಡಿಮೆ ಆದಾಯ, ಅಪೌಷ್ಟಿಕತೆ ಮತ್ತು ಬಡತನವನ್ನು ಸೂಚಿಸುತ್ತದೆ".[೧] ಎಂಬ ಹೇಳಿಕೆಯು ಇಂದಿಗೂ ವಾಸ್ತವವೆನಿಸುತ್ತದೆ. ಕಾರಣ ರಾಯಚೂರು, ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಅನಕ್ಷರತೆ, ಅಪೌಷ್ಟಿಕತೆ ಮತ್ತು ಬಡತನ ಹೆಚ್ಚಿರುವುದನ್ನು ಕಾಣಬಹುದು. ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳಲ್ಲಿಗಿಂತ ಬಳ್ಳಾರಿ ಜಿಲ್ಲೆಯಲ್ಲಿ ಕೈಗಾರಿಕೆಗಳ ಸಂಖ್ಯೆ ಅಧಿಕವಾಗಿದ್ದು ಉದ್ಯೋಗದ ಅವಕಾಶಗಳು ವಿಪುಲವಾಗಿವೆ. ಆದರೆ ಆ ಉದ್ಯೋಗಾವಕಾಶಗಳು ಸ್ಥಳೀಯರಿಗೂ ದೊರೆಯದಂತಹ ಸ್ಥಿತಿಯಲ್ಲಿ ಪರಿಸ್ಥಿತಿ ನಿರ್ಮಾಣವಾಗಿದೆ. ಏಕೆಂದರೆ ವೃತ್ತಿ ಕೌಶಲ್ಯದ ಕಾರಣಕ್ಕಾಗಿ ಇಲ್ಲಿನ ಜನರನ್ನು ಉದ್ಯೋಗದ ಅವಕಾಶಗಳಿಂದ ದೂರ ಇಡುತ್ತಿದ್ದಾರೆ. ಹಾಗಾಗಿ ಇಲ್ಲಿನ ಜನರು ಹೆಚ್ಚಾಗಿ ಕೂಲಿ ಕಾರ್ಮಿಕರಾಗಿಯೇ ಕೈಗಾರಿಕೆಗಳಲ್ಲಿ ದುಡಿಯುತ್ತಿದ್ದಾರೆ. ಇವರ ದುಡಿತದಿಂದ ಬಂದ ಆದಾಯ ಕೇವಲ ಅವರ ಕುಟುಂಬ ನಿರ್ವಹಣೆಗೇ ಸಾಕಾಗುತ್ತಿದೆಯೇ ಹೊರತು ಹಣವನ್ನು ಉಳಿತಾಯ ಮಾಡುವ ಹಂತಕ್ಕಾಗಲೀ ಅಥವಾ ತಮ್ಮ ಮಕ್ಕಳ ಶಿಕ್ಷಣಕ್ಕಾಗಲೀ ಬಳಕೆಯಾಗದಿರುವುದನ್ನು ಕಾಣಬಹುದಾಗಿದೆ. ಹಾಗಾಗಿ ಇಲ್ಲಿನ ಬಹುತೇಕ ಜನರು ಬಡತನದಲ್ಲಿಯೇ ಜೀವನ ಸಾಗಿಸುತ್ತಿದ್ದಾರೆ. ಇನ್ನು ಕೂಲಿ ಅಥವಾ ವೇತನದ ವಿಚಾರಕ್ಕೆ ಬಂದಾಗ ಇಲ್ಲಯೂ ಸಹ ಅಸಮಾನತೆ ಇರುವುದನ್ನು ಕಾಣಬಹುದಾಗಿದೆ. ಅಂದರೆ ಕೃಷಿಯಲ್ಲಿ ದುಡಿಯುವ ಕಾರ್ಮಿಕರಿಗಾಗಲೀ ಅಥವಾ ಕೈಗಾರಿಕೆಗಳಲ್ಲಿ ದುಡಿಯುವ ಕಾರ್ಮಿಕರಿಗಾಗಲೀ ಸಮಾನವಾದ ವೇತನ ಅಥವಾ ಕೂಲಿ ಎಂಬುದಿಲ್ಲ. ಸ್ತ್ರೀ–ಪುರುಷರ ಕೂಲಿಗಳಲ್ಲಿ ಅಸಮಾನತೆ ಇದೆ.

ಇನ್ನು ರಾಯಚೂರು, ಕೊಪ್ಪಳ ಮತ್ತು ಬಳ್ಳಾರಿಯ ಕೆಲವು ತಾಲೂಕುಗಳಲ್ಲಿನ ಜನರು ಉದ್ಯೋಗವನ್ನರಸಿ ಬೇರೆ ಊರುಗಳಿಗೆ ಅಥವಾ ಬೇರೆ ರಾಜ್ಯಗಳಿಗೆ ವಲಸೆ ಹೋಗುತ್ತಿರುವುದನ್ನು ಕಾಣಬಹುದಾಗಿದೆ. ಕಾರಣ ಅವರು ಇರುವ ಸ್ಥಳಗಳಲ್ಲಿ ವರ್ಷವಿಡೀ ಕೆಲಸಗಳು ದೊರೆಯದಿರುವುದು. ಹಾಗೂ ಕೃಷಿ ಕಾರ್ಯಗಳನ್ನು ಅವಲಂಬಿಸಿದ ಜನರಿಗೆ ವರ್ಷದ ಕೆಲವು ತಿಂಗಳುಗಳಲ್ಲಿ ಮಾತ್ರ ದುಡಿಯಲು ಕೆಲಸಗಳು ದೊರೆಯುತ್ತವೆ. ಇನ್ನುಳಿದ ದಿನಗಳಲ್ಲಿ

ಅವರು ಕೆಲಸವಿಲ್ಲದೇ ಇರಬೇಕಾಗುತ್ತದೆ. ಹಾಗೆಯೇ ಇಲ್ಲಿ ಅವರಿಗೆ ಸಿಗುವಂತಹ ಕೂಲಿಯೂ ಸಹ ಅವರ ಜೀವನಕ್ಕೆ ಸಾಕಾಗುತ್ತಿಲ್ಲ. ಆ ಕಾರಣಕ್ಕಾಗಿ ಜನರು ವಲಸೆ ಹೋಗುತ್ತಿರುವುದು ಕಂಡುಬರುತ್ತಿದೆ.

ಇತ್ತೀಚಿನ ದಿನಗಳಲ್ಲಿ ಹೈದರಾಬಾದ್-ಕರ್ನಾಟಕ ಭಾಗದಲ್ಲಿ ಭೂಮಾಲೀಕತ್ವವು ಮಧ್ಯಮ ಮತ್ತು ದೊಡ್ಡ ಹಿಡುವಳಿದಾರರ ಹಿಡಿತದಲ್ಲಿದ್ದು, ಭೂ ಒಡೆತನವು ಅಸಮಾನತೆಯಿಂದ ಹಂಚಿಕೆಯಾಗಿದ್ದು ಅದು ಕೆಲವೇ ಕೆಲವು ಜನರ ಕೈಯಲ್ಲಿ ಕೇಂದ್ರೀಕೃತವಾಗಿರುವುದನ್ನು ಕಾಣುತ್ತೇವೆ. ಇದರಿಂದಾಗಿ ಭೂಮಾಲೀಕರ ಕೈ ಕೆಳಗೆ ಕೆಲಸ ಮಾಡುವ ಕೃಷಿ ಕಾರ್ಮಿಕರು ಅಥವಾ ಸಾಮಾನ್ಯ ರೈತರು ಹೆಚ್ಚು ಶ್ರಮಪಟ್ಟು ಹೆಚ್ಚು ಬೆರೆಯಬೇಕೆನ್ನುವ ಹುಮ್ಮಸ್ಸು ಕಂಡುಬರುವುದಿಲ್ಲ. ಇದರ ಪರಿಣಾಮದಿಂದಾಗಿ ಕೃಷಿ ಉತ್ಪನ್ನ ಕುಂಟಿತವಾಗುವುದು ಕಂಡುಬರುತ್ತದೆ. ಆರ್ಥಿಕವಾಗಿ ಉನ್ನತ ಸ್ತರದಲ್ಲಿರುವ ಹಾಗೂ ಕೃಷಿಯನ್ನು ಹೊರತುಪಡಿಸಿ ಇತರ ಆದಾಯ ಮೂಲಗಳನ್ನು ಹೊಂದಿರುವ ಭೂಮಾಲೀಕರು ಕೃಷಿಯಲ್ಲಿ ಆದಾಯ ಬಂದಷ್ಟು ಬರಲಿ ಎನ್ನುವ ಧೋರಣೆ ಹೊಂದಿದ್ದು, ಕೃಷಿ ಭೂಮಿಯನ್ನು ಬೇರೆ-ಬೇರೆ ಕೃಷಿಯೇತರ ಚಟುವಟಿಕೆಗಳಿಗೆ ತೊಡಗಿಸುವ ಮನೋಭಾವ ಹೊಂದಿರುತ್ತಾರೆ. ಒಟ್ಟಾರೆಯಾಗಿ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಯಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶವು ಕೆಳಮಟ್ಟದಲ್ಲಿದೆ. ಮನುಷ್ಯರ ಜೀವನಕ್ಕೆ ಬೇಕಾಗುವ ಮೂಲಭೂತ ಅವಶ್ಯಕತೆಗಳನ್ನು ನೀಡಲು ವಿಫಲವಾಗಿದೆ, ಲಿಂಗಾಧಾರಿತ ನೆಲೆಯಲ್ಲಿನ ಅಭಿವೃದ್ಧಿ ಅತಿ ಕೆಳಮಟ್ಟದಲ್ಲಿರುವುದು ಕಂಡುಬರುತ್ತದೆ. ಈ ರೀತಿಯ ಗಂಭೀರ ಸಮಸ್ಯೆಗಳಿಂದ ಮುಕ್ತಿಯನ್ನು ಪಡೆಯಲು ೨೦೦೨ರ ನಂಜುಂಡಪ್ಪ ವರದಿಯು ಕೆಲವು ಸಲಹೆಗಳನ್ನು ನೀಡಿದೆ. ವರದಿಯು ಹೇಳುವಂತೆ: "ಹಿಂದುಳಿದ ಪ್ರದೇಶದಲ್ಲಿ ಕೈಗಾರಿಕೆ ಅಭಿವೃದ್ಧಿಗೆ ಉತ್ತೇಜನ ನೀಡುವುದಕ್ಕಾಗಿ ಪ್ರಸ್ತುತ ಇರುವಂತ ರಿಯಾಯಿತಿ ದರದಲ್ಲಿ ಹಣಕಾಸು ನೆರವು, ಬಂಡವಾಳ ಹೂಡಿಕೆ, ಸಹಾಯಧನ, ಸಾಗಣೆ ಸಹಾಯಧನ, ಮಾರಾಟ, ತೆರಿಗೆ ರಿಯಾಯಿತಿ ಮುಂತಾದ ಯೋಜನೆಗಳು ಕೃಷಿ ಮತ್ತು ಅದಕ್ಕೆ ಸಂಬಂಧಿಸಿದ ಕ್ಷೇತ್ರಗಳಾದ ಡಿಪಿಎಪಿಯಂಥ ಕ್ಷೇತ್ರಗಳಲ್ಲಿರುವ ಯಾವುದೇ ಬಗೆಯ ಯೋಜನೆಗಳು ಮತ್ತು ಹಿಂದುಳಿದಿರುವಿಕೆಯನ್ನು ನಿವಾರಿಸುವಲ್ಲಿ ಅವುಗಳ ಪರಿಣಾಮಕಾರಿತ್ವವನ್ನು ಕಂಡುಕೊಳ್ಳುವ ದೃಷ್ಟಿಯಿಂದ ಬಡತನ ಮತ್ತು ನಿರುದ್ಯೋಗ ಸಮಸ್ಯೆಗಳನ್ನು ಹೋಗಲಾಡಿಸಲು ಸಾಧ್ಯವಿದೆ"[೧೩] ಈ ಹಿನ್ನೆಲೆಯಲ್ಲಿ ನಂಜುಂಡಪ್ಪ ವರದಿಯು ಮೇಲೆ ಹೇಳಿರುವ ಸಲಹೆಗಳನ್ನು ಸರಕಾರ ಯಥಾವತ್ತಾಗಿ ಜಾರಿಗೊಳಿಸಿದಲ್ಲಿ ಜನ ಜೀವನಕ್ಕೆ ಬೇಕಾಗುವ ಅವಶ್ಯಕತೆಗಳನ್ನು ಪರಿಹರಿಸಿಕೊಳ್ಳಬಹುದು.

**೩.೩. ಸಾಮಾಜಿಕ ನೆಲೆಗಳು**

ಹೈದರಾಬಾದ್ ಕರ್ನಾಟಕದ ಜನಸಮುದಾಯದ ಸಾಮಾಜಿಕ ಬದುಕಿನ ಕ್ರಮಗಳು ವೈವಿಧ್ಯತೆಯಿಂದ ಕೂಡಿವೆ. ಪ್ರಾಚೀನ ಕಾಲದಿಂದಲೂ ಐತಿಹಾಸಿಕ ಮತ್ತು ಸಾಂಸ್ಕೃತಿಕ

ಪರಂಪರೆಯ ಕೇಂದ್ರವಾಗಿದ್ದ ಹೈದರಾಬಾದ್ ಕರ್ನಾಟಕ ಪ್ರದೇಶವು ಅನೇಕ ರಾಜ ಮನೆತನಗಳನ್ನು ಮತ್ತು ರಾಜಕೀಯ ಏರಿಳಿತಗಳನ್ನು ಕಂಡಿದೆ. ಇಲ್ಲಿ ಕನ್ನಡ, ತೆಲುಗು, ಉರ್ದು, ಹಿಂದಿ ಮತ್ತು ಮರಾಠಿ ಇನ್ನು ಮುಂತಾದ ಅನೇಕ ಭಾಷೆಗಳನ್ನಾಡುವ ಜನಸಮುದಾಯಗಳು ಇಲ್ಲಿ ವಾಸಿಸುತ್ತಿವೆ. ಅಂದರೆ ಹಿಂದೂಗಳು, ಮುಸ್ಲಿಮರು, ಜೈನರು, ಬೌದ್ಧರು, ಕ್ರಿಶ್ಚಿಯನ್ನರು ಹೀಗೆ ವಿವಿಧ ಧರ್ಮೀಯ ಜನರಿದ್ದಾರೆ. ಇವರೆಲ್ಲರೂ ಸಮಾಜದ ಪ್ರತಿಯೊಂದು ಕಾರ್ಯಗಳಲ್ಲಿ ಅನ್ಯೋನ್ಯವಾಗಿ ಬೆರೆತು ಬಾಳುತ್ತಾ ಬಂದಿದ್ದಾರೆ. ಹೈದರಾಬಾದ್-ಕರ್ನಾಟಕ ಪ್ರಾಂತದ ನೆಲದಲ್ಲಿ ಆಳ್ವಿಕೆ ಮಾಡಿದ ಅನೇಕ ರಾಜ ಮನೆತನಗಳ ಹಾಗೂ ನವಾಬರ ಕಾಲದಿಂದಲೂ ನಡೆದುಕೊಂಡು ಬಂದ ಸಾಮಾಜಿಕ ಸಾಮರಸ್ಯವನ್ನು ಇಂದಿಗೂ ಸಹ ಇಲ್ಲಿನ ಜನಮಾನಸದಲ್ಲಿ ಕಾಣಬಹುದಾಗಿದೆ. ಈ ಭಾಗದಲ್ಲಿ ಯಥೇಚ್ಚವಾಗಿರುವ ಮೊಹರಂ ಹಬ್ಬವನ್ನು ನೋಡಿದರೆ ಧಾರ್ಮಿಕ ಸಾಮರಸ್ಯದ ಬದುಕು ಗಟ್ಟಿಯಾಗಿರುವುದು ತಿಳಿಯುತ್ತದೆ. ಈ ಕಾರಣದಿಂದಾಗಿ ಈ ಭಾಗದಲ್ಲಿ ಧಾರ್ಮಿಕ ಆಚರಣೆಗಳು ಮೂಲಭೂತವಾದವು ಇವು ಬೆಳೆಯದಿರುವುದು ಸಕಾರಾತ್ಮಕ ಬೆಳವಣಿಗೆಯಾಗಿದೆ. ಬಹುಪಾಲು ಕೆಳಜಾತಿಗಳು ದಲಿತ ಸಮುದಾಯಗಳು ಈ ಭಾಗದಲ್ಲಿ ಹೆಚ್ಚಾಗಿ ಜೀವಿಸುವುದರಿಂದಾಗಿ ಸಾಂಸ್ಕೃತಿಕ ಆಚರಣಲೋಕವೂ ದೊಡ್ಡದಿದೆ. ಈ ಸಾಂಸ್ಕೃತಿಕ ಆಚರಣಾ ಲೋಕವು ಈ ಭಾಗದ ಜನರನ್ನು ಸಾಮಾಜಿಕವಾಗಿ ಬೆಸೆದಿವೆ. ಆದರೆ ಸಾಂಸ್ಕೃತಿಕವಾಗಿ ಇಲ್ಲಿನ ಜನರಲ್ಲಿ ಸಾಮರಸ್ಯತೆ ಕಂಡುಬಂದರೂ ಸಹ ಅವರ ಜೀವನ ಮಟ್ಟವೇನೂ ಸುಧಾರಿಸಿಲ್ಲ. ಏಕೆಂದರೆ ಈ ಹಿಂದೆಯೇ ಹೇಳಿದಂತೆ ಇಲ್ಲಿನ ಹೆಚ್ಚಿನ ಪ್ರಮಾಣದ ಜನರು ಭೂ ಸಂಪನ್ಮೂಲದ ಕೊರತೆಯನ್ನು ಅನುಭವಿಸುತ್ತಿದ್ದಾರೆ. ಈ ಪ್ರದೇಶಗಳಲ್ಲಿ ಇಂದಿಗೂ ಸಹ ಜಮೀನ್ದಾರಿ ಪದ್ಧತಿ ರೂಢಿಯಲ್ಲಿರುವುದನ್ನು ಕಾಣಲಾಗಿದೆ. ಜೊತೆಗೆ ಜಾತಿ ತಾರತಮ್ಯ, ಲಿಂಗ ತಾರತಮ್ಯ ಅಧಿಕವಾಗಿವೆ. ಈ ಭಾಗದಲ್ಲಿನ ಜಮೀನ್ದಾರಿ ಪದ್ದತಿಯಿಂದಾಗಿ ಕೆಳವರ್ಗದ ಜನರು ಜಮೀನ್ದಾರರ ಮನೆಗಳಲ್ಲಿ ಅಲ್ಪ ಮೊತ್ತದ ಹಣಕ್ಕಾಗಿ ದುಡಿಯುತ್ತಿರುವ ಉದಾಹರಣೆಗಳು ಕಂಡುಬರುತ್ತಿವೆ. ಪ್ರತಿಯೊಂದು ಜಾತಿಯೂ ತಮಗೆ ನಿಗಧಿಪಡಿಸಿದ ಕುಲಕಸಬುಗಳಲ್ಲಿಯೇ ಮುಂದುವರೆಯುವಂತಹ ವ್ಯವಸ್ಥೆಯನ್ನು ಅತ್ಯಂತ ನಾಜೂಕಾಗಿ ಮುಂದುವರೆಸಿಕೊಂಡೇ ಬಂದಿದೆ. ಇದು ಇಂದು ನಿನ್ನೆಯದಲ್ಲ ಬದಲಾಗಿ ಇದಕ್ಕೆ ಹಲವಾರು ವರ್ಷಗಳ ಇತಿಹಾಸವೇ ಇದೆ. ಇದಕ್ಕೆ ಒಂದು ಉದಾಹರಣೆ ಎಂಬಂತೆ ಈ ಭಾಗದಲ್ಲಿ ನಿಜಾಮರು ಮತ್ತು ಪಾಳೇಗಾರರ ಆಳ್ವಿಕೆಯ ಸಂದರ್ಭದಲ್ಲಿ "ಸಂಸ್ಥಾನದ ಜಮೀನುದಾರರ ಮನೆಗೆಲಸ, ಜಮೀನಿನ ಕೆಲಸ ಅಥವಾ ಅವರು ಹೇಳಿದ ಯಾವ ಕೆಲಸವನ್ನೇ ಆಗಲಿ ಅವರ ಆಳುಗಳು ಸಂಬಳ ತೆಗೆದುಕೊಳ್ಳದೆ ಮಾಡಬೇಕಾಗಿತ್ತು. ವರ್ಷದಲ್ಲಿ ಕೆಲವು ದಿನ ಊರಿನ ಪ್ರತಿಯೊಂದು ಮನೆಯವರು ಜಮೀನುದಾರನ ಮನೆಯ ಕೆಲಸಗಳನ್ನು ಪ್ರತಿಫಲವಿಲ್ಲದೆ ಮಾಡಬೇಕಾಗಿತ್ತು. ಇದಕ್ಕೆ ಬಿಟ್ಟಿ ಚಾಕರಿ ಎನ್ನುತ್ತಿದ್ದರು. ಬುಡಕಟ್ಟು ಜನರು ವಾಸಿಸುವ ಪ್ರದೇಶಗಳು ಮತ್ತು ಅತ್ಯಂತ

ಹಿಂದುಳಿದ ಪ್ರದೇಶಗಳಲ್ಲಿ ಈ ಬಿಟ್ಟಿ ಅಥವಾ ಬೇಗಾರ ಪದ್ಧತಿ ಈಗಲೂ ರೂಢಿಯಲ್ಲಿದೆ. ಆಗ ಈ ಬಿಟ್ಟಿ ದುಡಿಮೆ ಸಾರ್ವತ್ರಿಕವಾಗಿತ್ತು. ಇಲ್ಲಿನ ಹಳ್ಳಿಗಳಲ್ಲಿ ಪ್ರತಿಯೊಂದು ಹರಿಜನ ಕುಟುಂಬದಲ್ಲಿಯೂ ಒಬ್ಬರು ಜಮೀನುದಾರರಲ್ಲಿ ಬಿಟ್ಟಿ ಕೆಲಸ ಮಾಡಲೇಬೇಕಾಗಿದ್ದಿತು. ಜಮೀನುದಾರರ ಕೆಲಸ ಮಾತ್ರವಲ್ಲದೆ ಜಮಾಬಂದಿಗೆಂದು ಹಳ್ಳಿಗೆ ಬರುವ ರೆವಿನ್ಯೂ ಆಡಳಿತದ ತಹಶೀಲ್ದಾರ, ಮಾಮಲೇದಾರ ಮುಂತಾದವರು ಹೇಳಿದ ಕೆಲಸಗಳನ್ನು ಬಿಟ್ಟಿಯಾಗಿ ಮಾಡಬೇಕಾಗಿದ್ದಿತು. ಅವರ ಅವಶ್ಯಕತೆಗಳನ್ನು ಪ್ರತಿಫಲವಿಲ್ಲದೆ ಪೂರೈಸಬೇಕಾಗಿತ್ತು. ಇದಕ್ಕೆ ಸರಬರಾಯಿ ಎನ್ನುತ್ತಿದ್ದರು. ಉದಾಹರಣೆಗೆ ಚರ್ಮದ ಕೆಲಸ ಮಾಡುವವರು ಜಮೀನುದಾರರ ಮೆಟ್ಟು, ಬಾವಿ ರಾಟೆಯ ಹಗ್ಗ ಮುಂತಾದವುಗಳನ್ನು ಕಾಸು ಪಡೆಯದೆ ಹೊಲಿದು ಕೊಡಬೇಕು. ಬೋಯರು, ಬೆಸ್ತರು, ಜಮೀನುದಾರರ ಪಲ್ಲಕ್ಕಿಗಳನ್ನು ಹೊರಬೇಕು. ಕ್ಷೌರಿಕರು ನಿತ್ಯ ಕ್ಷೌರಮಾಡಿ ರಾತ್ರಿ ಕಾಲೊತ್ತಬೇಕು. ಹೆಂಡ ಇಳಿಸುವವರು ಜಮೀನುದಾರರ ಕುಡಿತಕ್ಕೆ ಐದರಿಂದ ಹತ್ತು ಮರಗಳನ್ನು ಅಲಾಯದ್(ಮೀಸಲು) ಇಡಬೇಕು. ಬಡಗಿಗಳು, ಕಮ್ಮಾರರು, ಕುಂಬಾರರು, ಜಮೀನುದಾರರ ಎಲ್ಲಾ ಗೃಹಕೃತ್ಯದ ಉಪಕರಣಗಳನ್ನು ಬಿಟ್ಟಿ ಒದಗಿಸಬೇಕು. ಹಬ್ಬದ ದಿನಗಳಲ್ಲಿ ಅಥವಾ ಜಮೀನುದಾರರ ಮನೆಗೆ ಅತಿಥಿಗಳು ಬಂದಾಗ ಕುರುಬರು ಕುರಿ ಕೊಡಬೇಕು. ಹಳ್ಳಿಗಳ ಕಡು ಬಡವರು ತಮ್ಮ ಮನೆಯ ಹೆಣ್ಣು ಮಕ್ಕಳನ್ನು ಜಮೀನುದಾರರ ಮನೆಗಳಲ್ಲಿ ಜೀತದಾಳುಗಳಾಗಿ ಇರುವಂತೆ ಅವರು ಬಲಾತ್ಕರಿಸುತ್ತಿದ್ದರು. ಜಮೀನುದಾರರ ಮನೆಗಳಲ್ಲಿ ಮದುವೆಗಳಾದಾಗ ಹೆಣ್ಣುಕೊಟ್ಟ ಮಾವಂದಿರು ಬೀಗರಿಗೆ ಉಡುಗೊರೆ ಬಳುವಳಿಗಳ ಜೊತೆ ಈ ಹೆಣ್ಣು ಮಕ್ಕಳನ್ನು ಮದುಮಗಳ ಜೊತೆ ಕಳುಹಿಸುತ್ತಿದ್ದರು. ಈ ನತದೃಷ್ಟ ಹುಡುಗಿಯರು ಅನೇಕ ವೇಳೆ ಜಮೀನುದಾರರ ದೈಹಿಕ ತೀಟೆಗಳನ್ನು ತೀರಿಸಬೇಕಾಗಿದ್ದಿತು".[೧೪] ಇಂತಹ ದರ್ಪದ ಆಡಳಿತದಿಂದ ಈ ಭಾಗದ ಜನತೆ ಕಂಗಾಲಾಗಿದ್ದರು. ಪ್ರಭು ಸಮಾಜಕ್ಕೆ ಯಾವ ರೀತಿಯ ವಿರೋಧವನ್ನೂ ವ್ಯಕ್ತಪಡಿಸದಂತಹ ಸ್ಥಿತಿಯಲ್ಲಿದ್ದರು. ಹೀಗೆ ವ್ಯವಸ್ಥೆಯಲ್ಲಿ ಇಂದಿಗೂ ಸಹ ಕೆಳ ವರ್ಗಗಳ ಜನರ ದಾಸ್ಯದ ಜೀವನ ಮುಂದುವರೆದುಕೊಂಡೇ ಸಾಗಿದೆ.

ಈ ರೀತಿಯಾಗಿ ಜನಸಾಮಾನ್ಯರ ಬದುಕು ಜಮೀನುದಾರರ, ಶಾನುಭೋಗರ, ಜಹಗೀರುದಾರರ, ದೇಶಮುಖ್, ದೇಸಾಯಿಯವರ ಮರ್ಜಿ ಆಧರಿಸಿ ನಡೆಯುವಂಥದಾಗಿತ್ತು. ಇವತ್ತಿಗೂ ಈ ಹೈದ್ರಾಬಾದ್-ಕರ್ನಾಟಕ ಪ್ರದೇಶದಲ್ಲಿ ಸಾಮಾನ್ಯ ಜನರು ಶ್ರೀಮಂತರನ್ನು, ಜಮೀನುದಾರರನ್ನು ದೊರೆ, ಗೌಡ, ಪಟೇಲ, ಮಹಾರಾಜ ಮುಂತಾದ ಹೆಸರುಗಳಿಂದ ಸಂಬೋಧಿಸುತ್ತಾ, ಜೀ ಹುಜೂರ್ ಸಂಪ್ರದಾಯವನ್ನು ಹಳ್ಳಿ ಪರಿಸರಗಳಲ್ಲಿ ಅನುಸರಿಸಿಕೊಂಡು ಹೋಗುತ್ತಿರುವುದನ್ನು ಕಾಣುತ್ತೇವೆ. ಆರ್ಥಿಕ ಭದ್ರತೆಯಿಲ್ಲದೆ, ಅಕ್ಷರ ಜ್ಞಾನವಿಲ್ಲದೆ, ಬಡತನದಿಂದ ನಲುಗಿದ, ಅಂಧಾನುಕರಣೆಗಳ ಆಗರವಾಗಿರುವ ಈ ಪ್ರದೇಶದಲ್ಲಿ ಜನ ಆಧುನಿಕತೆಯ ಸೋಂಕಿಲ್ಲದೆ ಜೀವಿಸುತ್ತಿರುವುದು ಕಂಡುಬರುತ್ತದೆ.

ವಿವಿಧ ಭಾಷೆ, ಧರ್ಮ, ಜಾತಿ, ಪಂಥ, ವಿಭಿನ್ನ ಮತ್ತು ವಿಶಿಷ್ಟ ಸಂಸ್ಕೃತಿಯಿಂದ ಕೂಡಿದ ಈ ಪ್ರದೇಶವು ಕರ್ನಾಟಕದಲ್ಲಿಯೇ ತನ್ನ ಸಾಮಾಜಿಕ ಸ್ಥಾನವನ್ನು ಪ್ರತ್ಯೇಕವಾಗಿ ಗುರುತಿಸಿಕೊಂಡಿದೆ. ಹಾಗೆಯೇ ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಅತ್ಯಂತ ಹಿಂದುಳಿದ ಪ್ರದೇಶವಾಗಿದೆ. ಹಾಗಾಗಿ ಇಲ್ಲಿನ ಜನರ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಧಾರ್ಮಿಕ ಸ್ಥಿತಿಗತಿಗಳನ್ನು ತಿಳಿದುಕೊಳ್ಳಬೇಕಾದರೆ ಈ ಪ್ರದೇಶದ ರಾಜಕೀಯ ಸ್ಥಿತ್ಯಂತರಗಳು ಮತ್ತು ಕೌಟುಂಬಿಕ ಜೀವನವನ್ನು ಅವಲೋಕಿಸುವುದು ಅವಶ್ಯವಾಗಿರುತ್ತದೆ. "ಹೈದ್ರಾಬಾದ್ ಸಂಸ್ಥಾನದ ಆಡಳಿತದಲ್ಲಿ ಬ್ರಿಟಿಷರ ಅಧೀನದಲ್ಲಿ ನಿಜಾಮರು, ನಿಜಾಮರ ಅಧೀನದಲ್ಲಿ ಜಹಗೀರುದಾರರು, ಜಹಗೀರದಾರರ ಅಧೀನದಲ್ಲಿ ದುಡಿಯುವ ಸಾಮಾನ್ಯ ಜನರಿದ್ದರು".[೧೫] ನಿಜಾಮನ ಕಾಲದಿಂದಲೂ ಇವತ್ತಿನವರೆಗೂ ಹೈದ್ರಾಬಾದ್-ಕರ್ನಾಟಕ ಪ್ರಾಂತ್ಯದ ಕೂಲಿ ಕಾರ್ಮಿಕರ ಬದುಕು ಚಿಂತಾಜನಕವಾಗಿದೆ. ಇವತ್ತಿಗೂ ಈ ಭಾಗದಲ್ಲಿ ಜೀತಪದ್ಧತಿಯಂತಹ ಅನಿಷ್ಟ ಪದ್ಧತಿ ಜೀವಂತವಾಗಿರುವುದನ್ನು ಕಾಣುತ್ತೇವೆ.

"ಸ್ವಾತಂತ್ರ್ಯ ಚಳವಳಿಯ ಸಂದರ್ಭದಲ್ಲಿ ಬ್ರಿಟಿಷ್ ಸರಕಾರದ ನಿಷ್ಠಾವಂತನೆಂದು ಸಾಬೀತುಪಡಿಸಲು ನಿಜಾಮನು ತನ್ನ ಸಂಸ್ಥಾನದಲ್ಲಿ ಕೋಮುವಾದಿ ಹಾಗೂ ದಮನಕಾರಿ ನೀತಿಯನ್ನು ಜಾರಿಗೆ ತಂದನು. ಬ್ರಿಟೀಷರಿಗೆ ಬೇಕಾದುದು ಕೂಡಾ ಇದೇ ಆಗಿತ್ತು. ನಿಜಾಮ ಜನತೆಯ ಆಶೋತ್ತರಗಳಿಗೆ ಕಿವುಡಾನಾಗಿದ್ದನು. ಜನರು ನಿಜಾಮನ ನೇತೃತ್ವದಲ್ಲಿ ಜನಪ್ರಿಯ ಸರಕಾರ ರಚಿಸುವ ಕನಸು ಕಟ್ಟಿದರು. ಆದರೆ ಕಾಸಿಂ ರಜ್ವಿಯ ನಾಯಕತ್ವದಲ್ಲಿ ರಜಕಾರರು ಹೈದ್ರಾಬಾದ್ ಸಂಸ್ಥಾನದಲ್ಲಿ ನಡೆಸಿದ ಅತ್ಯಾಚಾರಗಳು ಅವರ್ಣನೀಯ. ಒಂದು ಕೈಯಲ್ಲಿ ಕುರಾನ್, ಇನ್ನೊಂದು ಕೈಯಲ್ಲಿ ಕತ್ತಿ ಹಿಡಿದ ಭಾರತದ ನಾಲ್ಕೂವರೆ ಕೋಟಿ ಮುಸ್ಲಿಮರೇ ನಮ್ಮ ಸೈನ್ಯ ಎಂಬ ಮಾತುಗಳಿಂದ ಪ್ರಚೋದಿಸುತ್ತಿದ್ದರು".[೧೬] ಎಂಬಂತಹ ವಿವರಣೆಗಳು ಬರುತ್ತವೆ. ವಾಸ್ತವವೆಂದರೆ ನಿಜಾಮನೂ ಕೂಡ ಬ್ರಿಟಿಷರ ಒಡೆದು ಆಳುವ ನೀತಿಯ ಬಲಿಪಶುವಾಗಿದ್ದನು. ಬ್ರಿಟಿಷರು ಸದಾ ಹಿಂದೂ ಮುಸ್ಲಿಂರಲ್ಲಿ ಒಡಕು ತರುವ ಕಾರ್ಯನೀತಿಯನ್ನು ನಿಜಾಮನ ಮೂಲಕ ಈಡೇರಿಸಿಕೊಳ್ಳುತ್ತಿದ್ದರು.

"ನಿಜಾಮ ಜನ ಸಾಮಾನ್ಯರ ಸುಖ-ದುಃಖಗಳನ್ನರಿಯದ ನಿರಂಕುಶ ಪ್ರಭುವಾಗಿದ್ದ ಎಂದು ಹಿರಿಯರು ಹೇಳಿದ ಒಂದು ವೃತ್ತಾಂತ ಹೀಗಿದೆ. ನಿಜಾಮ ಮಹಬೂಬ ಅಲಿಖಾನ ರಾಜ್ಯವಾಳುತ್ತಿದ್ದ ಕಾಲಕ್ಕೆ ಸಂಸ್ಥಾನದಲ್ಲಿ ಬರಗಾಲ ಬಿತ್ತು. ಜನರ ನಿಯೋಗವೊಂದು ನಿಜಾಮನನ್ನು ಭೇಟಿಯಾಗಿ ರಾಜ್ಯದಲ್ಲಿ ಬರಗಾಲ ಬಿದ್ದಿದೆ. ಜನರು ಹಸಿವೆಯಿಂದ ಕಂಗಾಲಾಗಿದ್ದಾರೆ. ಸರ್ಕಾರ ಏನಾದರೂ ಕ್ರಮ ಕೈಗೊಳ್ಳಬೇಕು ಎಂದು ತಮ್ಮ ಅಹವಾಲನ್ನು ಸಲ್ಲಿಸಿದರು. ಆಗ ನಿಜಾಮನು 'ಕ್ಯಾ ಲೋಗೋಂಕೊ ಘೀ ಖಿಚಡಿ ಭೀ ನಹಿ ಮಿಲ್ತಿ' (ಜನರಿಗೆ ಹುಗ್ಗಿ ತುಪ್ಪ ಕೂಡ ಸಿಗುವುದಿಲ್ಲವೇ?) ಎಂದು ಆಶ್ಚರ್ಯದಿಂದ ಕೇಳಿದನಂತೆ".[೧೭] ಇಂತಹ ಮೌಖಿಕ ಕಥನಗಳು ಕೆಲವು ಮುಸ್ಲಿಂ ನಾಯಕರ ಅಮಾನವೀಯ ಮುಖಗಳನ್ನೂ ಸಹ ಕಾಣಿಸುತ್ತವೆ.

"ನಿಜಾಮ ಸಂಸ್ಥಾನದಲ್ಲಿ ಯಾವ ಪ್ರಜೆಗೂ ಯಾವ ವಿಷಯದ ಮೇಲೂ ತನ್ನ ಅಭಿಪ್ರಾಯ ವ್ಯಕ್ತಪಡಿಸುವ ಸ್ವಾತಂತ್ರ್ಯವಿರಲಿಲ್ಲ. ನಿಜಾಮನ ಫರ್ಮಾನು(ಆಜ್ಞೆಗಳನ್ನು)ಯಾರೂ ಪ್ರಶ್ನಿಸುವಂತಿರಲಿಲ್ಲ. ಸಭೆ ಮೆರವಣಿಗೆಗಳನ್ನು ನಡೆಸಲು ಕೂಡ ಸರಕಾರದ ಅನುಮತಿ ಪಡೆಯಬೇಕಾಗಿದ್ದಿತು. ಯಾವ ಬರಹವೂ ಪತ್ರಿಕಾ ಬರಹವೂ ಕೂಡಾ ಸರಕಾರದ ಕಣ್ಣು ತಪ್ಪಿಸಿ ಪ್ರಕಟವಾಗುವಂತಿರಲಿಲ್ಲ. ಸೆನ್ಸಾರ್ ಅಷ್ಟು ಬಿಗಿಯಾಗಿತ್ತು. ದೇಶಾದ್ಯಂತ ಸ್ವಾತಂತ್ರ್ಯ ಚಳವಳಿಯ ನೇತಾರ ಪಕ್ಷವಾಗಿದ್ದ ಕಾಂಗ್ರೆಸ್ ಕೂಡ ಹೈದರಾಬಾದ್ ಸಂಸ್ಥಾನದಲ್ಲಿ ನಿಷೇಧಕ್ಕೆ ಒಳಗಾಗಿತ್ತು".[೧೮] ಈ ಬಗೆಯ ಬೆಳವಣಿಗೆಗಳು ಇಲ್ಲಿನ ರಾಜಕೀಯ ಪ್ರಜ್ಞೆಯ ಮೇಲೆಯೂ ಪ್ರಭಾವ ಬೀರಿವೆ.

"ಹೈದ್ರಾಬಾದ್ ಸಂಸ್ಥಾನದ ರಾಜಕೀಯ ಆರ್ಥಿಕ ವ್ಯವಸ್ಥೆ ನೂರಕ್ಕೆ ನೂರು ಪಾಳೆಗಾರಿಕೆ ಸ್ವರೂಪದ್ದಾಗಿತ್ತು. ಸಂಸ್ಥಾನದ ನೆಲದ ಒಟ್ಟು ೫,೩೦,೦೦,೦೦೦ ಎಕರೆ ವಿಸ್ತೀರ್ಣದಲ್ಲಿ ಸುಮಾರು ೬೦%ರಷ್ಟು ಭೂಮಿ ದಿವಾನಿ ಅಥವಾ ಖಾಲ್ಸಾ ಪ್ರದೇಶವೆಂದು ಕರೆಸಿಕೊಂಡಿತ್ತು. ಅಂದರೆ ಇಲ್ಲಿ ರೆವೆನ್ಯೂ ಆಡಳಿತದ ಸಂಪೂರ್ಣ ಅಧಿಕಾರ ಸರಕಾರದ್ದೆ. ಹತ್ತು ಪ್ರತಿಶತದಷ್ಟು ಜಮೀನು ನಿಜಾಮನ ಸ್ವಂತ ಆಸ್ತಿ. ಈ ಜಮೀನಿನಲ್ಲಿ ದುಡಿಯುತ್ತಿದ್ದ ರೈತರು ನಿಜಾಮನ ಖಾಯಂ ಜೀತದಾಳುಗಳಂತಿದ್ದರು. ಸರ್ಫಕಾಸ್ ಎಂದು ಕರೆಯುತ್ತಿದ್ದ ಈ ಜಮೀನಿನಿಂದ ನಿಜಾಮನಿಗೆ ವರ್ಷಕ್ಕೆ ಸ್ವಾತಂತ್ರ್ಯ ಪೂರ್ವದಲ್ಲಿಯೇ ೨೫,೦೦೦,೦೦೦ ರೂ.ಗಳಷ್ಟು ಆದಾಯವಿದ್ದಿತು. ಈ ಪ್ರದೇಶದ ರೈತರ ಬೆಳೆಯಲ್ಲಿ ಬಹುಭಾಗ ನಿಜಾಮನ ಸ್ವಂತ ಖಜಾನೆ ಸೇರಿದರೂ ಆತ ಈ ಪ್ರದೇಶದ ಅಭಿವೃದ್ಧಿಗೋಸ್ಕರ ಅಥವಾ ಅಲ್ಲಿ ದುಡಿಯುವ ಜನರ ಒಳಿತಿಗೋಸ್ಕರ ಒಂದು ಸವೆದ ಕಾಸನ್ನು ಖರ್ಚು ಮಾಡುತ್ತಿರಲಿಲ್ಲ. ತಮ್ಮ ದೇಶದ ಊಳಿಗಮಾನ್ಯತೆಯ ವಿರುದ್ಧ ಪ್ರಗತಿಪರ ಹೋರಾಟವನ್ನು ನಡೆಸಿದಂತಹ ಬ್ರಿಟಿಷ್ ವಸಾಹತುಶಾಹಿ ಬಂಡವಾಳ ಶಾಹಿಗಳು ಭಾರತದಲ್ಲಿ ಮಾತ್ರ ಊಳಿಗಮಾನ್ಯ ಶಕ್ತಿಗಳನ್ನೇ ಆಧರಿಸಿ ನೆಲೆ ನಿಂತರು. ವಸಾಹತುಶಾಹಿ ಲೂಟಿಗೆ ಅಗ್ಗದ ದರದಲ್ಲಿ ಕಚ್ಚಾವಸ್ತುಗಳು ಮತ್ತು ಅಗ್ಗದ ಶ್ರಮವೂ ಅಗತ್ಯವಾಗಿದ್ದವು. ನಮ್ಮ ದೇಶದ ಊಳಿಗಮಾನ್ಯ ರಚನೆಯು ಇವೆರಡನ್ನೂ ವಸಾಹತುಶಾಹಿಗಳಿಗೆ ಒದಗಿಸಿತು".[೧೯]

### ೩.೩.೧. ಕೌಟುಂಬಿಕ ನೆಲೆಗಳು

ಹೈದರಾಬಾದ್-ಕರ್ನಾಟಕ ಭಾಗದ ಸಾಮಾಜಿಕ ಜನಜೀವನದ ಪ್ರಮುಖ ಲಕ್ಷಣವೆಂದರೆ ಅವಿಭಕ್ತ ಕುಟುಂಬ ಪದ್ಧತಿ. ಹೈದರಾಬಾದ ಕರ್ನಾಟಕದಲ್ಲಿ ತೀರಾ ಇತ್ತೀಚಿನವರೆಗೂ ಅವಿಭಕ್ತ ಕುಟುಂಬ ಪದ್ಧತಿ ಕಂಡುಬರುತ್ತದೆ. ಇವತ್ತಿಗೂ ಕೂಡ ಕೆಲವು ಮನೆತನಗಳು ಕುಟುಂಬದ ಯಜಮಾನನಿಗೆ ಯಾವುದೇ ಪ್ರಶ್ನೆ ಮಾಡದೇ ಮನೆಯ ಮುಖ್ಯಸ್ಥನಿಗೆ ಸೂಕ್ತ ಗೌರವ ನೀಡುತ್ತಾ ಸಾಮರಸ್ಯದಿಂದ ಬಾಳುತ್ತಿದ್ದಾರೆ. ಹಲವಾರು ತಲೆಮಾರುಗಳಿಂದ ಪಾರಂಪರಿಕವಾಗಿ ಬಂದ ಸಂಪ್ರದಾಯಗಳನ್ನು ಮುಂದುವರಿಸಿಕೊಂಡು ಹೋಗುವುದರಲ್ಲಿ

ಅವಿಭಕ್ತ ಕುಟುಂಬಗಳು ಮಹತ್ವದ ಪಾತ್ರವಹಿಸಿವೆ. ಹಾಗಂತ ಹೈದರಾಬಾದ ಕರ್ನಾಟಕದಲ್ಲಿ ಕಂಡುಬರುವ ಎಲ್ಲಾ ಕುಟುಂಬಗಳು ಅವಿಭಕ್ತ ಕುಟುಂಬಗಳು ಎಂದು ಹೇಳಲಾಗುವುದಿಲ್ಲ. ಇತ್ತೀಚೆಗಿನ ನಗರೀಕರಣ, ಔದ್ಯೋಗಿಕರಣ ಮತ್ತು ಪಾಶ್ಚಿಮಾತ್ಯ ಸಂಸ್ಕೃತಿಯ ಪ್ರಭಾವದಿಂದ ಹೈದರಾಬಾದ್ ಕರ್ನಾಟಕ ಭಾಗದಲ್ಲಿ ಬದಲಾವಣೆಗಳು ಕಂಡುಬರುತ್ತಿವೆ. ಇದರಿಂದಾಗಿ ಪ್ರಸ್ತುತ ದಿನಮಾನದಲ್ಲಿ ಅವಿಭಕ್ತ ಕುಟುಂಬಗಳು ವಿಭಕ್ತ ಕುಟುಂಬಗಳಾಗಿ ಪಲ್ಲಟಗೊಂಡಿರುವುದನ್ನು ಕಾಣುತ್ತೇವೆ.

ಅವಿಭಕ್ತ ಕುಟುಂಬವಿರಲಿ ಅಥವಾ ವಿಭಕ್ತ ಕುಟುಂಬವಿರಲಿ ಕುಟುಂಬದ ಮುಖ್ಯಸ್ಥ ಪುರುಷನೇ ಆಗಿದ್ದಾನೆ. ಮಹಿಳೆಗೆ ತನ್ನ ಹಕ್ಕುಗಳನ್ನು ಪ್ರತಿಪಾದಿಸುವಂತಹ ಯಾವುದೇ ಸ್ವಾತಂತ್ರ್ಯವಿಲ್ಲ. ಮಹಿಳೆ ಪುರುಷನ ಅಡಿಯಾಳಾಗಿಯೇ ಜೀವಿಸುತ್ತಿರುವುದನ್ನು ಕಾಣಬಹುದಾಗಿದೆ. ಇತ್ತೀಚೆಗೆ ಈ ಭಾಗದ ಮಹಿಳೆಯರು ಸ್ತ್ರೀಶಕ್ತಿ ಸಂಘಗಳನ್ನು ಕಟ್ಟಿಕೊಳ್ಳುವುದರ ಮೂಲಕ ಸಾಮಾಜಿಕ ಜೀವನಕ್ಕೆ ತಮ್ಮನ್ನು ತಾವು ತೆರೆದುಕೊಂಡಿದ್ದಾರೆ. ಹಾಗೆಯೇ ರಾಜಕೀಯ ವಲಯಕ್ಕೂ ಪ್ರವೇಶಿಸಿದ್ದಾರೆ. ಆದರೆ ಇವರು ಸಂಪೂರ್ಣ ಸ್ವತಂತ್ರರಲ್ಲ.

**೩.೩.೨. ಜಾತಿ ನೆಲೆಗಳು**

ಹೈದರಾಬಾದ್-ಕರ್ನಾಟಕ ಭಾಗದಲ್ಲಿ ಹಲವಾರು ಜಾತಿ ಹಾಗೂ ಧಾರ್ಮಿಕ ಸಮುದಾಯಗಳು ನೆಲೆಯೂರಿವೆ. ಪ್ರಮುಖವಾಗಿ ಸಾಮಾನ್ಯ ವರ್ಗದವರು, ಹಿಂದುಳಿದ ವರ್ಗದವರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಮುದಾಯದವರು ಇಲ್ಲಿ ಕಂಡುಬರುತ್ತಾರೆ. ಇವುಗಳಲ್ಲಿ ವೀರಶೈವ ಲಿಂಗಾಯತ ಸಮುದಾಯವು ಈ ಭಾಗದ ಉನ್ನತವರ್ಗದ ಸಮುದಾಯಗಳಲ್ಲಿ ಒಂದಾಗಿದ್ದು, ಆರ್ಥಿಕವಾಗಿಯೂ ಪ್ರಬಲ ಕೋಮಿಗೆ ಸೇರಿದ ಸಮುದಾಯವಾಗಿದೆ. ಇವರು ಸಾಮಾನ್ಯವಾಗಿ ಎಲ್ಲಾ ಕಡೆ ನೆಲೆಸಿದ್ದಾರೆ. ಹಾಗೆಯೇ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಕೂಡ ಇಲ್ಲಿ ಹೆಚ್ಚಾಗಿ ನೆಲೆಸಿರುವುದು ಕಂಡುಬರುತ್ತದೆ. ಪರಿಶಿಷ್ಟ ಪಂಗಡದ ಜನಸಂಖ್ಯೆಯು ಇಲ್ಲಿನ ಒಟ್ಟು ಜನಸಂಖ್ಯೆಯ ಶೇ.೩೦ರಷ್ಟಿದೆ. ಅದರಲ್ಲೂ ಬಳ್ಳಾರಿ, ಸುರಪುರ, ರಾಯಚೂರುಗಳಲ್ಲಿ ಹೆಚ್ಚಾಗಿ ನೆಲೆಸಿದ್ದಾರೆ. ಮುಸ್ಲಿಂ ಸಮುದಾಯವು ಇನ್ನೊಂದು ಪ್ರಮುಖ ಸಮುದಾಯಗಳಲ್ಲಿ ಒಂದಾಗಿದೆ. ಬಹುಮನಿ ಕಾಲದಿಂದ ರಾಜಕೀಯವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಉನ್ನತ ಸ್ತರದಲ್ಲಿದ್ದು ಇಂದಿಗೂ ಸಮಾಜದಲ್ಲಿ ತನ್ನದೇ ಆದ ಪ್ರಭಾವ ಹೊಂದಿದ ಜನಾಂಗವಾಗಿದೆ. ಈ ಪ್ರದೇಶದಲ್ಲಿ ಜಾತೀಯತೆಯ ವಿಷ ಬೀಜಗಳು ಬಹಳಷ್ಟು ಪ್ರಬಲವಾಗಿ ಬೇರೂರಿದ್ದು, ಉನ್ನತವರ್ಗದ ಸಮುದಾಯಗಳು ಇತರ ಅಂಚಿನ ಸಮುದಾಯಗಳನ್ನು ತುಂಬಾ ಕೀಳಾಗಿ ಕಾಣುವುದು ಕಂಡುಬರುತ್ತದೆ.

ಜಾತಿಗೊಂದರಂತೆ ಮಠಗಳು, ಸಂಘಟನೆಗಳು, ಇಲ್ಲಿ ಸೃಷ್ಟಿಯಾಗಿರುವುದನ್ನು ಕಾಣುತ್ತೇವೆ. ಈ ಭಾಗದ ಜನರು ಕೃಷಿಯನ್ನು ಅವಲಂಬಿಸಿರುವುದರಿಂದ ಕೃಷಿ ಚಟುವಟಿಕೆಗಳಿಗೆ

ಸಹಕಾರಿಯಾಗುವ ಉಪಕರಣಗಳನ್ನು ತಯಾರಿಸುವಂತಹ ಸಮುದಾಯಗಳು ಸಹ ಇಲ್ಲಿರುವುದನ್ನು ಕಾಣುತ್ತೇವೆ. ಆಧುನಿಕತೆಯ ಪೂರ್ವದಲ್ಲಿ ಈ ಸಮುದಾಯಗಳಿಗೆ ಹೆಚ್ಚಿನ ಬೇಡಿಕೆ ಇತ್ತು. ಆದರೆ ಆಧುನಿಕತೆಯು ವಿಸ್ತರಿಸಿಕೊಂಡಂತೆಲ್ಲ ಸಾಂಪ್ರದಾಯಿಕ ಉಪಕರಣಗಳ ಸಂಖ್ಯೆ ಕಡಿಮೆಯಾಗಿ, ಆಧುನಿಕ ಉಪಕರಣಗಳ ಸಂಖ್ಯೆ ಹೆಚ್ಚಾಗಿವೆ. ಹಾಗಾಗಿ ಸಾಂಪ್ರದಾಯಿಕ ಉಪಕರಣಗಳನ್ನು ತಯಾರಿಸಿಯೇ ಜೀವನ ಸಾಗಿಸುತ್ತಿದ್ದ ಈ ಸಮುದಾಯಗಳು ಆಧುನಿಕತೆಯ ಪ್ರಭಾವಕ್ಕೆ ಸಿಲುಕಿ ಆತಂಕದಲ್ಲಿದ್ದಾರೆ (ಕುಂಬಾರ, ಕಂಬಾರ, ಚಮ್ಮಾರ, ಬಡಿಗ, ಮೇದಾರ, ಕೊರವ, ಕೊರಚ ಇತ್ಯಾದಿ). ಹಾಗಾಗಿ ಸಮಾಜದಲ್ಲಿ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಈ ಸಮುದಾಯಗಳು ಹೋರಾಟವನ್ನು ನಡೆಸುತ್ತಿವೆ. ಒಟ್ಟಾರೆಯಾಗಿ ಆಧುನಿಕತೆ ಮತ್ತು ಸಾಂಪ್ರದಾಯಿಕತೆ ಇವೆರಡರ ಮುಖಾ-ಮುಖಿಯಿಂದಾಗಿ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಯಾವುದನ್ನು ಸ್ವೀಕರಿಸಬೇಕು, ಯಾವುದನ್ನು ತಿರಸ್ಕರಿಸಬೇಕು ಎಂಬ ಆತಂಕದಲ್ಲಿದ್ದಾರೆ. ಒಟ್ಟಾರೆಯಾಗಿ ಈ ಭಾಗದ ಜನರ ಸಾಮಾಜಿಕ ಜೀವನ ತುಂಬಾ ಸರಳವಾಗಿದ್ದು ಇಲ್ಲಿನ ಪರಿಸರಕ್ಕೆ ಹೊಂದಿಕೊಂಡಂತೆ ಇದೆಯಾದರೂ ಅವರ ಸಾಮಾಜಿಕ ಸ್ಥಾನಮಾನಗಳು ತುಂಬಾ ಕೆಳಹಂತದಲ್ಲಿವೆ.

### ೩.೩.೩. ಮಹಿಳೆಯರ ಸ್ಥಾನಮಾನ

ಹೈದ್ರಾಬಾದ್-ಕರ್ನಾಟಕ ಪ್ರದೇಶದಲ್ಲಿ ಲಿಂಗ ತಾರತಮ್ಯ ಅಧಿಕವಾಗಿದ್ದು, ಮಹಿಳೆಯರ ಶಿಕ್ಷಣದ ಬಗ್ಗೆ ಹೆಚ್ಚಿನ ಕಾಳಜಿ ಇಲ್ಲವಾಗಿದೆ. ಸರಕಾರದಿಂದ ಹೆಣ್ಣು ಮಕ್ಕಳಿಗೆ ಹೆಚ್ಚಿನ ಅಥವಾ ವಿಶೇಷ ಸವಲತ್ತುಗಳು ದೊರೆಯುತ್ತಿದ್ದರೂ, ಇದಕ್ಕೆ ಈ ಭಾಗದ ಜನರು ಸ್ಪಂದಿಸುತ್ತಿರುವುದು ಕಡಿಮೆ. ಈ ಪ್ರದೇಶದಲ್ಲಿ ಬಡತನದಿಂದಾಗಿ ಹೆಣ್ಣಿನ ಸ್ಥಾನಮಾನ ಯಾವ ಮಟ್ಟದಲ್ಲಿದೆಯೆಂದರೆ, ಹೆಣ್ಣು ಶಿಶುವನ್ನು ಮಾರಾಟ ಮಾಡುತ್ತಿರುವ ಪ್ರಕರಣಗಳು ಈಗಲೂ ಪತ್ರಿಕೆಗಳಲ್ಲಿ ವರದಿಯಾಗುತ್ತಿವೆ. ಹೆಣ್ಣು ಮಗುವಿನ ಜನನವನ್ನು ಕಡೆಗಣಿಸುವ ಮತ್ತು ಗಂಡು ಮಗುವಿನ ಜನನವನ್ನು ನಿರೀಕ್ಷಿಸುವುದು ಎಲ್ಲಾ ಸಮುದಾಯಗಳಲ್ಲೂ ಪ್ರಬಲವಾಗಿದೆ. ವರದಕ್ಷಿಣೆಯ ಸಾವುಗಳು ಅಧಿಕವಾಗಿ ಸಂಭವಿಸುತ್ತಿವೆ. ೧೯೯೯ರ ಮಾನವ ಅಭಿವೃದ್ಧಿ ವರದಿಯ ಪ್ರಕಾರ ಸಾವಿನ ಪ್ರಮಾಣದ ಸರಾಸರಿ ರಾಜ್ಯದಲ್ಲಿ ೧೦೦೦ಕ್ಕೆ ೭೪ ಇದೆ. ಆದರೆ ಗುಲ್ಬರ್ಗಾದಲ್ಲಿ ಇದರ ಪ್ರಮಾಣ ೨೮೪ ಇದೆ. ಹಾಗೆಯೇ ಈ ಭಾಗದಲ್ಲಿ ತಾಯಂದಿರ ಮರಣದ ಪ್ರಮಾಣವೂ ಅಧಿಕವಾಗಿದೆ. ಅಂದರೆ ಮಹಿಳೆಯರಲ್ಲಿ ಗರ್ಭಾವಸ್ಥೆಯ ಮತ್ತು ಪ್ರಸವದ ಕ್ಲಿಷ್ಟಕರ ಅವಧಿಯಲ್ಲಿ ಮರಣಹೊಂದುವುದು ಅಧಿಕವಾಗಿದೆ. ಸಮಾಜದಲ್ಲಿ ಆಳವಾಗಿ ಬೇರೂರಿರುವ ಸಾಮಾಜಿಕ ಮತ್ತು ಸಾಂಸ್ಕೃತಿಕ ಆಚರಣೆಗಳೇ ಕಾರಣವಾಗಿವೆ. ಇನ್ನು ವಿವಾಹಕ್ಕೆ ಸಂಬಂಧಿಸಿದಂತೆ ಬಾಲ್ಯವಿವಾಹದ ಪ್ರಕರಣಗಳೂ ಸಹ ಕಂಡುಬರುತ್ತಿವೆ. ಬಡತನ, ನಿರುದ್ಯೋಗ, ಅನಕ್ಷರತೆ, ಹೆಣ್ಣಿನ ಜವಾಬ್ದಾರಿಯಿಂದ ನುಣಚಿಕೊಳ್ಳುವುದು ಹೀಗೆ ಹಲವಾರು ಕಾರಣಕ್ಕಾಗಿ ಈ ರೀತಿಯ ವಿವಾಹಗಳು ನಡೆಯುತ್ತಿರುತ್ತವೆ. ಆದರೆ ಈ ವಿವಾಹದಿಂದ ಮಹಿಳೆಯರ ಮೇಲೆಯೇ ಹೆಚ್ಚಿನ ದುಷ್ಪರಿಣಾಮಗಳಾಗುತ್ತಿವೆ.

ಬಡ ಕುಟುಂಬಗಳಲ್ಲಿ ಕುಟುಂಬದ ಜವಾಬ್ದಾರಿ ಮಹಿಳೆಯರ ಮೇಲೆ ಅಧಿಕವಾಗಿದೆ. ಆದರೆ ಕುಟುಂಬದ ಮುಖ್ಯಸ್ಥನ ಸ್ಥಾನ ಮಾತ್ರ ದೊರೆತಿಲ್ಲ. ಮಹಿಳೆಯರು ದುಡಿಮೆಯಲ್ಲಿ ತಾರತಮ್ಯಕ್ಕೆ ಒಳಗಾಗಿದ್ದು, ಮಹಿಳೆಯರಿಗೆ ಕಡಿಮೆ ಕೂಲಿ ಕೊಟ್ಟು ಹೆಚ್ಚು ದುಡಿಸಿಕೊಳ್ಳುವುದು ಸಾಮಾನ್ಯವಾಗಿದೆ. ಈ ಪ್ರದೇಶ ಹಿಂದುಳಿದಿರುವಿಕೆಗೆ ಕಾರಣಗಳನ್ನು ಹುಡುಕುವಾಗ ಜಾತಿ ಶ್ರೇಣೀಕರಣ, ಲಿಂಗ ಶ್ರೇಣೀಕರಣ ಮತ್ತು ಇವುಗಳಿಗನುಗುಣವಾಗಿ ರೂಪುಗೊಂಡ ವರ್ಗಶ್ರೇಣೀಕರಣ ಈ ಮೂರು ಸಂಗತಿಗಳು ಸೃಷ್ಟಿಸಿರುವ ಅಪೌಷ್ಠಿಕತೆ, ಅನಕ್ಷರತೆ, ಬಡತನ, ನಿರುದ್ಯೋಗ, ಗುಳೆ ಹೋಗುವುದು, ಬಾಲ್ಯವಿವಾಹ, ದೇವದಾಸಿ ಪದ್ಧತಿ ಈ ರೀತಿಯ ಸಾಮಾಜಿಕ ಅಸಮಾನತೆಯನ್ನು ಸೃಷ್ಟಿಸಿವೆ.

ಹೀಗಾಗಿ ಈ ಎಲ್ಲಾ ಅಸಮಾನತೆಯ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಹೈದರಾಬಾದ್ ಕರ್ನಾಟಕ ಪ್ರದೇಶವನ್ನು ತೀರಾ ಹಿಂದುಳಿದ ಪ್ರದೇಶವೆಂದು ಗುರುತಿಸಲಾಗಿದೆ. ಈ ಪ್ರದೇಶಗಳ ಅಭಿವೃದ್ಧಿ ಮತ್ತು ಇಲ್ಲಿನ ಸಾಮಾಜಿಕ ಅಸಮಾನತೆಗಳನ್ನು ತೊಡೆದುಹಾಕಲು ಸರಕಾರದ ಯೋಜನೆಗಳು ಪ್ರಮುಖ ಪಾತ್ರವನ್ನು ವಹಿಸುತ್ತವೆ. ಇತ್ತೀಚೆಗೆ ಸರ್ಕಾರ ಜಾರಿಗೊಳಿಸಿರುವ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಂತಹ ಕೆಲವು ಯೋಜನೆಗಳಿಂದಾಗಿ ಮಹಿಳೆಯರಲ್ಲಿ ಸ್ವಲ್ಪ ಮಟ್ಟಿನ ಆತ್ಮವಿಶ್ವಾಸ ಬೆಳೆಯುತ್ತಿದೆ. ಸ್ವ-ಸಹಾಯ ಗುಂಪಿನ ಸದಸ್ಯಳಾದ ಮಹಿಳೆ ಹೊಸ ಅನುಭವಗಳನ್ನು ಪಡೆಯುತ್ತಿದ್ದಾಳೆ. ರಾಯಚೂರು, ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಗಳನ್ನು ಒಳಗೊಂಡಂತೆ ಈ ಭಾಗಗಳಲ್ಲಿ ಜನರ ಜೀವನ ವ್ಯವಸ್ಥೆ ಸಾಮಾಜಿಕವಾಗಿ ಸುಧಾರಣೆಗೊಂಡಿದೆ. ಆದರೂ ಜಾತಿ ವ್ಯವಸ್ಥೆಯೆಂಬ ವಿಷವರ್ತುಲದಲ್ಲಿ ಸಿಲುಕಿದ್ದಾರೆ.

### ೩.೩.೪. ಧಾರ್ಮಿಕ ನೆಲೆಗಳು

ವಿವಿಧತೆಯಲ್ಲಿ ಏಕತೆಯನ್ನು ಸಾಧಿಸಿರುವ ಹೈದರಾಬಾದ್ ಕರ್ನಾಟಕ ಒಂದು ರೀತಿಯಲ್ಲಿ ಧಾರ್ಮಿಕ ಸಾಮರಸ್ಯದ ಭಾಗವಾಗಿದೆ. ಇಲ್ಲಿ ಹಿಂದೂ, ಮುಸ್ಲಿಂ, ಜೈನ, ಬೌದ್ಧ, ಸಿಖ್, ಕ್ರೈಸ್ತ ಮುಂತಾದ ಧರ್ಮಿಯರು ನೆಲೆಸಿದ್ದಾರೆ. ಮುಖ್ಯವಾಗಿ ಹಿಂದೂ-ಮುಸ್ಲಿಂ ಧರ್ಮಿಯರು ಈ ಭಾಗದಲ್ಲಿ ಬಹುಸಂಖ್ಯಾತರು. ಮೊಹರಂ, ಉರುಸ್‌ನಂತಹ ಹಬ್ಬಗಳು ಈ ಎರಡೂ ಧರ್ಮಗಳನ್ನು ಸಾಂಸ್ಕೃತಿಕವಾಗಿ ಬೆಸೆದಿವೆ. ಹಾಗಾಗಿ ಈ ಭಾಗದಲ್ಲಿ ಹಿಂದೂ-ಮುಸ್ಲಿಂರಲ್ಲಿ ಕೋಮು ಸಾಮರಸ್ಯ ನೆಲೆಸಿದೆ. ಇಲ್ಲಿ ಹಿಂದೂ ಮುಸ್ಲಿಂ ಶೈಲಿಯು ಸಮ್ಮಿಳಿತಗೊಂಡ ವಾಸ್ತುಶಿಲ ಕಲೆಯು ಹೆಚ್ಚಾಗಿ ಕಾಣುತ್ತದೆ. ಇಲ್ಲಿ ಹತ್ತು ಹಲವು ಜಾತಿಗಳು ನೆಲೆಸಿವೆ. ಈ ಜಾತಿಗಳ ಮಧ್ಯೆಯೂ ಒಂದು ಬಗೆಯ ಜಾತಿ ಸಾಮರಸ್ಯವೂ ನೆಲೆಸಿದೆ. ಮಾನವೀಯ ಮೌಲ್ಯಗಳಿಗೆ ಧರ್ಮಗಳು ಮಹತ್ವ ನೀಡಿದ್ದರೂ ಕೂಡ ಧರ್ಮದ ಹೆಸರಿನಲ್ಲಿ ಮಹಿಳೆಯರ ವಿರುದ್ಧ ದಿನನಿತ್ಯ ನಡೆಯುವ ಅನೇಕ ದೌರ್ಜನ್ಯಗಳಿಗೆ ಧರ್ಮದ ಪ್ರತ್ಯಕ್ಷ ಅಥವಾ ಪರೋಕ್ಷವಾದ ಬೆಂಬಲವಿರುವುದು ಮೇಲುನೋಟದಲ್ಲಿಯೇ ಕಂಡುಬರುತ್ತದೆ. ಜಗತ್ತಿನ ಎಲ್ಲಾ ಜಾತಿ

ಧರ್ಮಗಳಲ್ಲೂ ಪುರುಷ ಪ್ರಧಾನತೆಯನ್ನು ಸ್ತ್ರೀಯರ ಪರಾಧೀನತೆಯನ್ನು ಬೆಂಬಲಿಸುವ ವ್ಯವಸ್ಥೆ ಕಂಡುಬರುತ್ತದೆ. ಸ್ತ್ರೀಯರ ವಿಮೋಚನೆಗೆ ಧಾರ್ಮಿಕ ಮೂಲಭೂತವಾದಿಗಳು ಎಲ್ಲಾ ಬಗೆಯ ಅಡ್ಡಿಗಳನ್ನು ಉಂಟು ಮಾಡಿದ್ದಾರೆ. ಹನ್ನೆರಡನೆಯ ಶತಮಾನದಲ್ಲಿ ಬಸವಾದಿ ಶರಣರ ಧಾರ್ಮಿಕ ಕ್ರಾಂತಿಯಿಂದ ಹೈದರಾಬಾದ್-ಕರ್ನಾಟಕ ಪ್ರದೇಶದಲ್ಲಿ ಸ್ವಲ್ಪ ನಿರಾಳವಾಗಿ ಉಸಿರಾಡುತ್ತಿದ್ದಂತಹ ಮಹಿಳೆಯರು, ತದನಂತರದಲ್ಲಿ ಮುಸ್ಲಿಂ ಆಳರಸರ ಮೂಲಭೂತವಾದಿ ಧೋರಣೆಯಿಂದಾಗಿ ಘೋಷಾ ಪದ್ಧತಿಗೆ ಒಳಗಾಗಿರುವುದನ್ನು ಚಾರಿತ್ರಿಕ ದಾಖಲೆಗಳು ಸ್ಪಷ್ಟಪಡಿಸುತ್ತವೆ.

### ೩.೪. ಶೈಕ್ಷಣಿಕ ನೆಲೆಗಳು

ಹೈದರಾಬಾದ್-ಕರ್ನಾಟಕ ಪ್ರದೇಶ ಶೈಕ್ಷಣಿಕವಾಗಿ ಹಿಂದುಳಿದಿರುವಿಕೆಯು ಪ್ರಸಿದ್ಧ ನಾಣ್ಣುಡಿಯಾಗಿಬಿಟ್ಟಿದೆ. ಪಾಶ್ಚಿಮಾತ್ಯ ಶಿಕ್ಷಣದ ಪ್ರಭಾವದಿಂದ ಭಾರತದ ಉಳಿದ ಭಾಗದ ಪ್ರದೇಶಗಳು ಗಣನೀಯ ಪ್ರಗತಿ ಹೊಂದುತ್ತಿದ್ದರೆ ಹೈದರಾಬಾದ್ ಕರ್ನಾಟಕವು ವಿಶ್ವದಲ್ಲಿನ ಬೆಳವಣಿಗೆಗೆ ಸ್ಪಂದಿಸದೆ ಮೌಢ್ಯದಲ್ಲಿ ಮುಳುಗಿಬಿಟ್ಟಿತು. ಅಕ್ಷರಜ್ಞಾನದ ಕೊರತೆಯಿಂದಾಗಿ ಇಲ್ಲಿನ ಜನರು ಬಡತನ ಮತ್ತು ಅನಾರೋಗ್ಯದಿಂದ ನರಳುತ್ತಿದ್ದಾರೆ. ಈ ಪ್ರದೇಶದಲ್ಲಿದ್ದ ಆಂಗ್ಲ-ಭಾರತೀಯ ಭಾಷಾ ಸಂಯುಕ್ತ ಶಾಲೆಗಳನ್ನೆಲ್ಲ ನಿಜಾಮನು ಉರ್ದು ಶಿಕ್ಷಣ ಮಾಧ್ಯಮದ ಉಸ್ಮಾನಿಯ ಪ್ರೌಢಶಾಲೆಗಳಾಗಿ ಪರಿವರ್ತಿಸಿದನು. ಗ್ರಾಮೀಣ ಲಕ್ಷಣವನ್ನು ಹೊಂದಿದ್ದ ಹೈದರಾಬಾದ್ ಸಂಸ್ಥಾನದಲ್ಲಿ ಪ್ರಮುಖವಾಗಿ ಜನರ ಶಿಕ್ಷಣಕ್ಕೆ ಯಾವುದೇ ಸೌಲಭ್ಯಗಳನ್ನು ಒದಗಿಸಿರಲಿಲ್ಲ.

೧೯ನೇ ಶತಮಾನದ ಕೊನೆ ಭಾಗದಲ್ಲಿ ಹೈದರಾಬಾದ್ ನಗರದಲ್ಲಿ ಪ್ರಾರಂಭವಾಗಿದ್ದ ಕೆಲವು ಶಾಲೆಗಳು ಶ್ರೀಮಂತ ಮತ್ತು ಉನ್ನತ, ಮಧ್ಯಮ ವರ್ಗದ ಮುಸ್ಲಿಂ ಸಮುದಾಯದ ಹಾಗೂ ಕೆಲವೇ ಶ್ರೀಮಂತ ಹಿಂದೂ ಮನೆತನಗಳ ಮಕ್ಕಳಿಗೆ ಮಾತ್ರ ಶಿಕ್ಷಣ ಒದಗಿಸುವ ಕೇಂದ್ರಗಳಾಗಿದ್ದವು. ೧೯೩೧ರಲ್ಲಿ ಹೈದರಾಬಾದ್ ಕರ್ನಾಟಕದಲ್ಲಿದ್ದ ಉನ್ನತ ಶಿಕ್ಷಣ ಮಟ್ಟವೆಂದರೆ ಮುಖ್ತಾಬ್(ಮಾಧ್ಯಮಿಕ ಶಾಲೆ) ಆಗಿತ್ತು. ಇಂಥ ಶಾಲೆಗಳ ಸಂಖ್ಯೆ ಬೆರಳೆಣಿಕೆಯಷ್ಟಿದ್ದವು. ಶಾಲಾ ಅಧ್ಯಾಪಕರು ಮಾಸಿಕ ಮೂರು ರೂಪಾಯಿ ಸಂಬಳ ಪಡೆಯುತ್ತಿದ್ದರು. ಕೊಪ್ಪಳ ಮತ್ತು ರಾಯಚೂರು ವಿಭಾಗದ ವಿದ್ಯಾರ್ಥಿಗಳು ಪ್ರೌಢಶಾಲಾ ಶಿಕ್ಷಣಕ್ಕಾಗಿ ಬಹುದೂರದ ಗುಲ್ಬರ್ಗಾಕ್ಕೆ ಹೋಗಬೇಕಾಗಿತ್ತು. ಇಡೀ ಹೈದರಾಬಾದ್ ಕರ್ನಾಟಕ ಪ್ರದೇಶದ ಶೈಕ್ಷಣಿಕ ಅವಶ್ಯಕತೆ ಪೂರೈಸಲು ಗುಲ್ಬರ್ಗಾದಲ್ಲಿದ್ದ ಒಂದೇ ಒಂದು ಪ್ರೌಢಶಾಲೆಯನ್ನು ೧೯೩೭ರಲ್ಲಿ ಇಂಟರ್‌ಮೀಡಿಯೇಟ್ ಕಾಲೇಜಾಗಿ ಉನ್ನತ ದರ್ಜೆಗೇರಿಸಲಾಯಿತು. ಹದಿನಾರು ಜಿಲ್ಲೆಗಳನ್ನು ಹೊಂದಿದ್ದ ಇಡೀ ಹೈದರಾಬಾದ್ ಸಂಸ್ಥಾನದಲ್ಲಿ ವಿದ್ಯಾರ್ಜನೆಯ ಕೇಂದ್ರವಾಗಿ ಮತ್ತು ಹಿಂದೂ ಸಂಸ್ಕೃತಿಯನ್ನು ಉರ್ದುಮಯಗೊಳಿಸುವ ಉದ್ದೇಶದಿಂದಲೂ ಹೈದರಾಬಾದ್ ನಗರದಲ್ಲಿ ೧೯೧೭ರಲ್ಲಿ ಒಂದೇ ಒಂದು ಉಸ್ಮಾನಿಯ ವಿಶ್ವವಿದ್ಯಾಲಯವು ಸ್ಥಾಪಿಸಲ್ಪಟ್ಟಿತ್ತು.

ಶಿಕ್ಷಣ ಕ್ಷೇತ್ರದಲ್ಲಿ ಖಾಸಗಿ ಸಂಸ್ಥೆಗಳನ್ನು ಸಂಪೂರ್ಣವಾಗಿ ನಿರ್ಬಂಧಿಸಲಾಗಿತ್ತು. ಅವುಗಳಿಗೆ ಯಾವುದೇ ಬಗೆಯ ಪ್ರೋತ್ಸಾಹವಿರಲಿಲ್ಲ. ನಿಜಾಮನು ಒಡ್ಡಿದ ಎಲ್ಲಾ ಆತಂಕಗಳನ್ನು ಎದುರಿಸಿ, ಹೈದರಾಬಾದ್ ಪ್ರದೇಶಗಳಲ್ಲಿ ಸ್ಥಾಪಿಸಿದ ರಾಷ್ಟ್ರೀಯ ಶಾಲೆಗಳಿಗೆ ಸರಕಾರದ ಮನ್ನಣೆ ಪಡೆಯಲು ಸ್ವಾಮಿ ರಮಾನಂದ ತೀರ್ಥರು ದೊಡ್ಡ ಹೋರಾಟ ನಡೆಸಬೇಕಾಯಿತು".[೨೦] ಇವತ್ತಿಗೂ ಹೈದರಾಬಾದ್ ಕರ್ನಾಟಕ ಪ್ರದೇಶ ಕರ್ನಾಟಕದ ಬೇರೆ ಬೇರೆ ಪ್ರದೇಶಗಳಿಗೆ ಹೋಲಿಕೆ ಮಾಡಿ ನೋಡಿದರೆ ಶೈಕ್ಷಣಿಕವಾಗಿ ತುಂಬಾ ಹಿಂದುಳಿದಿರುವುದು ಕಂಡುಬರುತ್ತದೆ. ಅದರಲ್ಲಿಯೂ ಮಹಿಳೆಯರು ಶೈಕ್ಷಣಿಕವಾಗಿ ತುಂಬಾ ಹಿಂದುಳಿದಿದ್ದು, ಅವರ ಜೀವನ ಶೈಲಿ ನಿಕೃಷ್ಟ ಸ್ಥಿತಿಯಲ್ಲಿರುವುದು ಗೋಚರಿಸುತ್ತದೆ. ಹೈದರಾಬಾದ್ ಕರ್ನಾಟಕ ಪ್ರದೇಶದ ಮೂರು ಜಿಲ್ಲೆಗಳಾದ ರಾಯಚೂರು, ಕೊಪ್ಪಳ, ಬಳ್ಳಾರಿ ಜಿಲ್ಲೆಯ ಶೈಕ್ಷಣಿಕ ಮಟ್ಟವನ್ನು ಕೆಳಗಿನ ಕೋಷ್ಟಕದ ಮೂಲಕ ಬಿಚ್ಚಿಡಲಾಗಿದೆ.

ಶ್ರೇಣೀಕೃತ ಪುರುಷ ಪ್ರಧಾನ ಸಮಾಜ ವ್ಯವಸ್ಥೆ, ಅರ್ಥ ವ್ಯವಸ್ಥೆ ಮತ್ತು ರಾಜಕೀಯ ವ್ಯವಸ್ಥೆಯಲ್ಲಿ ಜೀವನದ ವಿವಿಧ ಅಂಶಗಳಲ್ಲಿ ಸ್ತ್ರೀ-ಪುರುಷರ ನಡುವೆ ಅಸಮಾನತೆ ಸರ್ವೇಸಾಮಾನ್ಯ. ಪುರುಷನಿಗೆ ಹೋಲಿಸಿದರೆ ಮಹಿಳೆಯರು ತುಂಬಾ ಅನಾನುಕೂಲತೆಯನ್ನು ಅನುಭವಿಸುತ್ತಿದ್ದಾರೆ. ಶಿಕ್ಷಣದಲ್ಲಿ ಸ್ತ್ರೀ-ಪುರುಷ ಅಸಮಾನತೆ ಎಂಬುದು ಭಾರತದಲ್ಲಿ ಮಹಿಳೆಯರು ಅನುಭವಿಸುವ ಒಂದು ಅತ್ಯಂತ ಗಮನಾರ್ಹ ಸಂಗತಿಯಾಗಿದೆ.

ಇತ್ತೀಚಿಗೆ ಮಹಿಳಾ ಸಾಕ್ಷರತೆಗೆ ಹೆಚ್ಚು ಒತ್ತು ನೀಡಿದ್ದಾಗ್ಯೂ ಮತ್ತು ಅದರಿಂದ ಮಹಿಳೆಯರ ಸಾಕ್ಷರತಾ ಮಟ್ಟ ಹೆಚ್ಚಿದ್ದಾಗ್ಯೂ, ಸಾಕ್ಷರತೆಯಲ್ಲಿ ಸ್ತ್ರೀಪುರುಷರ ನಡುವೆ ಅಂತರ ಭಾರತದಲ್ಲಿ ಇನ್ನೂ ಉಳಿದುಕೊಂಡುಬಂದಿದೆ. ಈ ಅಂತರಗಳು ಇತರ ವಿಷಯಗಳ ಜೊತೆಗೆ ಮಹಿಳಾ ಸ್ವಶಕ್ತೀಕರಣ, ಪ್ರಜನನ ಪ್ರಮಾಣ, ಸ್ಥೂಲ ಜನನ ಪ್ರಮಾಣ, ಶಿಶುಮರಣ ಪ್ರಮಾಣ, ತಾಯಿಮರಣ ಪ್ರಮಾಣ ಇತ್ಯಾದಿಗಳ ಮೇಲೆ ಪರಿಣಾಮ ಬೀರುತ್ತಿದೆ. ಸಾಕ್ಷರತೆ ಮತ್ತು ಮೂಲಭೂತ ಶಿಕ್ಷಣಕ್ಕೆ ಸಂಬಂಧಿಸಿದ ಸ್ತ್ರೀಪುರುಷರ ನಡುವಿನ ಅಸಮಾನತೆಯನ್ನು ಪ್ರಜ್ಞಾಪೂರ್ವಕವಾಗಿ ಕಡಿಮೆ ಮಾಡಬೇಕು. ಕರ್ನಾಟಕಕ್ಕೆ ಸಂಬಂಧಿಸಿದಂತೆ ಸಾಕ್ಷರತೆಯಲ್ಲಿ ಸ್ತ್ರೀಪುರುಷರ ನಡುವೆ ಅಸಮಾನತೆ ರಾಜ್ಯದ ಕೆಲವು ಭಾಗಕ್ಕಿಂತ ಇನ್ನೂ ಹಲವು ಭಾಗಗಳಲ್ಲಿ ಎದ್ದು ಕಾಣುತ್ತದೆ.

ಶಿಕ್ಷಣದಲ್ಲಿ ಸ್ತ್ರೀ-ಪುರುಷರ ಅಸಮಾನತೆಯನ್ನು ಕುರಿತಂತೆ ೨೦೦೧ರಲ್ಲಿಯೇ ಡಾ.ಡಿ.ಎಂ. ನಂಜುಂಡಪ್ಪ ವರದಿಯಲ್ಲಿ ಸಮೀಕ್ಷಿಸಲಾಗಿದೆ ಈ ವರದಿಯ ಪ್ರಕಾರ ಸಾಕ್ಷರತೆಯಲ್ಲಿ ಸ್ತ್ರೀಪುರುಷ ಅಸಮಾನತೆಯನ್ನು ಕುರಿತು ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

| ಕ್ರಸಂ. | ಹೆಸರು | ಸಾಕ್ಷರತಾ ಮಟ್ಟ | | ಸ್ತ್ರೀ-ಪುರುಷರ ಅಂತರ ಬಿಂದುಗಳಲ್ಲಿ |
|---|---|---|---|---|
| | | ಗಂಡು | ಹೆಣ್ಣು | |
| ೧ | ಬಳ್ಳಾರಿ | ೬೯.೫೯ | ೪೬.೧೬ | ೨೩.೪೩ |
| ೨. | ರಾಯಚೂರು | ೬೨.೦೨ | ೩೬.೮೪ | ೨೫.೧೮ |
| ೩. | ಕೊಪ್ಪಳ | ೬೯.೧೫ | ೪೦.೭೬ | ೨೮.೩೯ |

ಮೂಲ: ಪ್ರಾದೇಶಿಕ ಅಸಮತೋಲನ ನಿವಾರಣಾ ಉನ್ನತಾಧಿಕಾರ ಸಮಿತಿ ಡಾ.ಡಿ.ಎಂ.ನಂಜುಂಡಪ್ಪ ವರದಿ. ಪುಟ. ಸಂಖ್ಯೆ–೧೬೮

೨೦೦೧ರಲ್ಲಿನ ಅಂಕಿ ಅಂಶಗಳ ಪ್ರಕಾರ ಮೂರೂ ಜಿಲ್ಲೆಗಳಲ್ಲಿ ಕೊಪ್ಪಳ ಜಿಲ್ಲೆಯು ಸ್ತ್ರೀ ಪುರುಷರ ಸಾಕ್ಷರತೆಯ ಪ್ರಮಾಣದ ಅಂತರದಲ್ಲಿ ಮೊದಲನೇ ಸ್ಥಾನವನ್ನು ಪಡೆದಿದೆ. ನಂತರದಲ್ಲಿ ರಾಯಚೂರು ಮತ್ತು ಬಳ್ಳಾರಿ ಜಿಲ್ಲೆಗಳು ಅನುಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನವನ್ನು ಪಡೆದಿವೆ. ಇಲ್ಲಿ ಮುಖ್ಯವಾಗಿ ಪುರುಷ ಸಾಕ್ಷರರಿಗಿಂತ ಮಹಿಳಾ ಸಾಕ್ಷರರ ಪ್ರಮಾಣ ತುಂಬಾ ಕಡಿಮೆ ಇರುವುದನ್ನು ಮೂರೂ ಜಿಲ್ಲೆಗಳಲ್ಲಿನ ಅಂಕಿ ಅಂಶಗಳಿಂದ ತಿಳಿದುಬರುತ್ತದೆ. ಇನ್ನು ೨೦೧೧ರ ಜನಗಣತಿಯ ಪ್ರಕಾರ ಈ ಮೂರೂ ಜಿಲ್ಲೆಗಳನ್ನು ಒಳಗೊಂಡಂತೆ ಸ್ತ್ರೀ ಪುರುಷರ ಸಾಕ್ಷರತೆಯ ಪ್ರಮಾಣವನ್ನು ನೋಡುವುದಾದರೆ,

| | | ಸಾಕ್ಷರರ ಸಂಖ್ಯೆ | | | ಶೇಕಡವಾರು ಪ್ರಮಾಣ | | |
|---|---|---|---|---|---|---|---|
| ಕ್ರ.ಸಂ. | ಜಿಲ್ಲೆಗಳು | ಒಟ್ಟು | ಪುರುಷರು | ಮಹಿಳೆಯರು | ಒಟ್ಟು | ಪುರುಷರು | ಮಹಿಳೆಯರು |
| ೦೧. | ರಾಯಚೂರು | ೯೭೯೭೬೯೫ | ೭೭೨೧೩ | ೪೦೨೫೫೬ | ೫೯.೫೬ | ೭೦.೪೭ | ೪೮.೭೩ |
| ೦೨. | ಕೊಪ್ಪಳ | ೮೦೯೦೮೫ | ೪೬೮೭೮೫ | ೩೪೦೩೦೦ | ೬೮.೦೯ | ೭೮.೫೪ | ೫೭.೫೫ |
| ೦೩. | ಬಳ್ಳಾರಿ | ೧೪೨೧೬೨೧ | ೮೧೩೪೪೦ | ೬೦೮೧೮೧ | ೬೭.೪೩ | ೭೬.೬೪ | ೫೮.೦೯ |

**ಕೋಷ್ಟಕ:** ೩. ಜಿಲ್ಲಾವಾರು ಸಾಕ್ಷರತೆಯ ಪ್ರಮಾಣ ೨೦೧೧ರ ಜನಗಣತಿಯಂತೆ

ಮೂರು ಜಿಲ್ಲೆಗಳಲ್ಲಿ ಬಳ್ಳಾರಿ ಜಿಲ್ಲೆಯು ಸಾಕ್ಷರರ ಸಂಖ್ಯೆಯಲ್ಲಿ ಮೊದಲ ಸ್ಥಾನದಲ್ಲಿದೆ. ಅಂದರೆ ೧೪,೨೧,೬೨೧ ಜನರು ಸಾಕ್ಷರರಿದ್ದಾರೆ. ಹಾಗೆಯೇ ರಾಯಚೂರು ಜಿಲ್ಲೆಯು ಎರಡನೇ ಸ್ಥಾನದಲ್ಲಿದ್ದು ಸುಮಾರು ೯,೭೯,೭೬೯ ಜನರು ಸಾಕ್ಷರರಿದ್ದಾರೆ. ಮತ್ತು ಕೊಪ್ಪಳ ಜಿಲ್ಲೆಯು ೮,೦೯,೦೮೫ರಷ್ಟು ಸಾಕ್ಷರರನ್ನು ಒಳಗೊಂಡಿದ್ದು ಮೂರನೇ ಸ್ಥಾನದಲ್ಲಿದೆ. ಆದರೆ ಶೇಕಡವಾರು ಪ್ರಮಾಣದಲ್ಲಿ ಕೊಪ್ಪಳ ಜಿಲ್ಲೆಯೇ ಮೊದಲ ಸ್ಥಾನವನ್ನು ಪಡೆದಿದೆ. ಅಂದರೆ ಶೇ.೬೮.೦೯%ರಷ್ಟು ಸಾಕ್ಷರರನ್ನು ಹೊಂದಿದೆ. ರಾಜ್ಯದಲ್ಲಿ ಸಾಕ್ಷರತೆಗೆ ಸಂಬಂಧಿಸಿದಂತೆ ಕೊಪ್ಪಳಕ್ಕೆ ೨೬ನೇ ಸ್ಥಾನವೂ, ರಾಯಚೂರಿಗೆ ೨೭ನೇ ಸ್ಥಾನವೂ ಇದೆ. ರಾಜ್ಯದ ಜನಸಂಖ್ಯೆಯಲ್ಲಿ ಪಡೆದಿರುವುದಕ್ಕಿಂತ ಕಡಿಮೆ ಪಾಲನ್ನು ಅಕ್ಷರಸ್ಥರಲ್ಲಿ ಪಡೆದಿದ್ದರೆ ಅನಕ್ಷರಸ್ಥರಲ್ಲಿ ಮಾತ್ರ ರಾಜ್ಯದ ಜನಸಂಖ್ಯೆಯಲ್ಲಿ ಪಡೆದಿರುವುದಕ್ಕಿಂತ ಅಧಿಕಪಾಲು ಪಡೆದಿದೆ”[೨೧]. ಕೊಪ್ಪಳ ಜಿಲ್ಲೆಯ ಗ್ರಾಮೀಣ ಪ್ರದೇಶವನ್ನು ತೆಗೆದುಕೊಂಡರೆ ಇಲ್ಲಿ ಮಹಿಳೆಯರ ಸಾಕ್ಷರತೆ ಕೇವಲ ಶೇ.೧೯-೧೮ ಈ ಜಿಲ್ಲೆಯಲ್ಲಿರುವ ಪ್ರತಿ ಐವರು ಮಹಿಳೆಯರಲ್ಲಿ ನಾಲ್ವರು ಅನಕ್ಷರಸ್ಥರಾಗಿದ್ದಾರೆ. ಒಬ್ಬರು ಮಾತ್ರ ಅಕ್ಷರಸ್ಥರಾಗಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಮಹಿಳೆಯರ ಸಾಕ್ಷರತೆ ದೃಷ್ಟಿಯಿಂದ ಅತ್ಯಂತ ಹೀನಾಯ ಸ್ಥಿತಿಯಲ್ಲಿದೆ. ಈ ದಿಸೆಯಲ್ಲಿ ಗ್ರಾಮೀಣ ಪ್ರದೇಶ ಪಂಚಾಯತಿಗಳು ಹಾಗೂ ಸರಕಾರಗಳು ಎಚ್ಚೆತ್ತುಕೊಳ್ಳಬೇಕಿದೆ. ಹಾಗೆಯೇ ಬಳ್ಳಾರಿ ಜಿಲ್ಲೆ ೬೭.೪೩% ಮತ್ತು ರಾಯಚೂರು ಜಿಲ್ಲೆ ೫೯.೫೬%ರಷ್ಟು ಸಾಕ್ಷರರನ್ನು ಹೊಂದಿದ್ದು ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನದಲ್ಲಿದೆ. ಪುರುಷ ಮತ್ತು ಮಹಿಳೆಯರ ಸಾಕ್ಷರತೆಯನ್ನು ಗಮನಿಸಿದರೆ ಮಹಿಳೆಯರಿಗಿಂತ ಪುರುಷರೇ ಅಧಿಕ ಸಂಖ್ಯೆಯಲ್ಲಿ ಸಾಕ್ಷರತೆಯನ್ನು ಪಡೆದಿದ್ದಾರೆ. ಮಹಿಳಾ ಸಾಕ್ಷರತೆಯಲ್ಲಿ ಬಳ್ಳಾರಿ ಜಿಲ್ಲೆಯು ಮೊದಲ ಸ್ಥಾನವನ್ನು ಪಡೆದಿದೆ. ಅಂದರೆ ಇಲ್ಲಿ

೬೦೮೧೮೧ರಷ್ಟು ಮಹಿಳೆಯರು ಸಾಕ್ಷರತೆಯನ್ನು ಹೊಂದಿದ್ದು ಶೇ.೫೮.೯ರಷ್ಟು ಇದೆ. ಹಾಗೆಯೇ ಎರಡು ಮತ್ತು ಮೂರನೇ ಸ್ಥಾನದಲ್ಲಿ ರಾಯಚೂರು ೪೦೨೫೫೬ರಷ್ಟು(೪೮.೭೩%) ಮತ್ತು ಕೊಪ್ಪಳ ೩೪೦೩೦೦(೫೭.೫೫%)ರಷ್ಟು ಸಾಕ್ಷರತೆಯನ್ನು ಹೊಂದಿದ್ದಾರೆ. ಒಟ್ಟಾರೆಯಾಗಿ ಈ ಮೂರು ಜಿಲ್ಲೆಗಳಲ್ಲಿ ಮಹಿಳೆಯರಿಗಿಂತ ಪುರುಷರೇ ಅಧಿಕ ಸಂಖ್ಯೆಯಲ್ಲಿ ಸಾಕ್ಷರತೆಯನ್ನು ಹೊಂದಿದ್ದಾರೆ.

೨೦೦೧ರ ಜನಗಣತಿಯನ್ನು ಮತ್ತು ೨೦೧೧ರ ಜನಗಣತಿಯೊಂದಿಗೆ ಹೋಲಿಸಿ ನೋಡಿದರೆ ಈ ಮೂರೂ ಜಿಲ್ಲೆಗಳಲ್ಲಿನ ಜನರ ಸಾಕ್ಷರತೆಯ ಪ್ರಮಾಣ ೨೦೧೧ರಲ್ಲಿ ಗಣನೀಯವಾಗಿ ಹೆಚ್ಚಾಗಿರುವುದನ್ನು ಕಾಣಬಹುದಾಗಿದೆ. ಆದರೆ ಸ್ತ್ರೀ ಪುರುಷರ ಸಾಕ್ಷರತೆಯ ನಡುವಿನ ಅಂತರ ಮಾತ್ರ ಹಾಗೆಯೇ ಮುಂದುವರೆದಿರುವುದನ್ನು ಕಾಣಬಹುದಾಗಿದೆ.

"ಜಗತ್ತಿನ ಭೂಪಟದಲ್ಲಿ ಅನಕ್ಷರಸ್ಥರಿರುವ ಸ್ಥಳವನ್ನು ಕಪ್ಪು ಬಣ್ಣದಿಂದ ಗುರುತಿಸಿದರೆ ಭಾರತವು ಒಂದು ಕಪ್ಪು ಖಂಡದಂತೆ ಗೋಚರಿಸುತ್ತದೆ" ಎನ್ನುವ ಮಾತುಗಳು ಸಾಮಾಜಿಕ ಅಗತ್ಯತೆಯಾಗಿರುವ ಶಿಕ್ಷಣದ ದುಃಸ್ಥಿತಿಯನ್ನು ಸೂಚಿಸುತ್ತದೆ. ಮಗುವಿನ ಮಾನಸಿಕ ಮತ್ತು ಬೌದ್ಧಿಕ ಬದುಕು, ಅರಳುವುದು ಪ್ರಾಥಮಿಕ ಶಿಕ್ಷಣದ ಹಂತದಲ್ಲಿ. ಆದರೆ ಈ ಹಂತದಲ್ಲಿ ಹೈದರಾಬಾದ್ ಕರ್ನಾಟಕದ ಶೇ.೨೦ರಷ್ಟು ಮಕ್ಕಳು ಶಾಲೆಯಿಂದ ಹೊರಗುಳಿದಿದ್ದಾರೆ. ಇರುವ ಶೇ.೬೦ರಷ್ಟು ಶಾಲೆಗಳಲ್ಲಿ ನೀರಿಲ್ಲ, ಶೌಚಾಲಯವಿಲ್ಲ. ಲಿಂಗಸಂಬಂಧಿ ಸಾಕ್ಷರತೆಯ ಅಂತರಗಳು ಕೂಡ ಅಧಿಕ. ಮಾನವನ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಅಭ್ಯುದಯದಲ್ಲಿ ಶಿಕ್ಷಣದ ಪಾತ್ರ ಬಹಳ ಮುಖ್ಯವಾದದ್ದು. ಮೂಲಭೂತ ಶಿಕ್ಷಣವನ್ನು ಒದಗಿಸುವುದು ಸಂವಿಧಾನದ ಹೊಣೆಯಾಗಿದೆ. ಸಂವಿಧಾನದ ೪೫ನೇ ವಿಧಿ ಅನ್ವಯ, ೧೪ವರ್ಷ ವಯಸ್ಸಿನ ಎಲ್ಲಾ ಮಕ್ಕಳಿಗೆ ಉಚಿತ ಶಿಕ್ಷಣ ಒದಗಿಸುವುದು ಸಂವಿಧಾನದ ಆಶಯವಾಗಿದೆ. ಮಾನವ ಅಭಿವೃದ್ಧಿ ವಿಚಾರ ಪ್ರಣಾಳಿಕೆಯಲ್ಲಿ ಶಿಕ್ಷಣ ಎರಡನೇ ಸ್ಥಾನಪಡೆದಿದೆ. ಮಾನವ ಅಭಿವೃದ್ಧಿಗೆ ಅತ್ಯವಶ್ಯಕವಾಗಿರುವ 'ಧಾರಣಶಕ್ತಿ'ಯನ್ನು ಒದಗಿಸುವ ಗುಣ ಈ ಶಿಕ್ಷಣಕ್ಕಿದೆ. 'ಶಿಕ್ಷಣದ ವೈಫಲ್ಯವು ಅಭಿವೃದ್ಧಿಯ ಹಿನ್ನೆಡೆಗೆ ಕಾರಣವಾಗುತ್ತದೆ.

**೩.೫. ರಾಜಕೀಯ ಸ್ಥಿತಿ-ಗತಿ**

ಹೈದ್ರಾಬಾದ-ಕರ್ನಾಟಕವು ಕರ್ನಾಟಕ ರಾಜಕಾರಣದ ಇತಿಹಾಸಕ್ಕೆ ಸಂಬಂಧಿಸಿದಂತೆ ತನ್ನದೇ ಮಹತ್ವದ ಕೊಡುಗೆಯನ್ನು ನೀಡಿದೆ. ವಿಶೇಷವಾಗಿ ಬಳ್ಳಾರಿ, ಕೊಪ್ಪಳ ಮತ್ತು ರಾಯಚೂರು ಜಿಲ್ಲೆಗಳು ತಮ್ಮ ರಾಜಕೀಯ ಪ್ರತಿನಿಧಿಗಳನ್ನು ವಿಧಾನಸಭೆ ಮತ್ತು ಲೋಕಸಭೆಗೆ ಕಳುಹಿಸುವ ಮೂಲಕ ರಾಜಕೀಯ ಮಹತ್ವವನ್ನು ಉಳಿಸಿಕೊಂಡಿವೆ. ಈ ಜಿಲ್ಲೆಗಳ ಪ್ರಭಾವಿ ನಾಯಕರಾದ ಎಂ.ವೈ.ಘೋರ್ಪಡೆ, ಸಾಂಸ್ಕೃತಿಕ ನಾಯಕ ಎಂ.ಪಿ.ಪ್ರಕಾಶ್, ಎಚ್.ಜಿ.ರಾಮುಲು, ಬಿ.ಶ್ರೀರಾಮುಲು, ರಾಯಚೂರು ಜಿಲ್ಲೆಯವರಾದ ಎ.ವೆಂಕಟೇಶ ನಾಯಕ, ಎನ್.ಎಸ್. ಬೋಸರಾಜು, ಬಸವರಾಜ

ಪಾಟೀಲ, ಅನ್ಸಾರಿ ಹಲವಾರು ರಾಜಕೀಯ ಧುರೀಣರು ರಾಜಕೀಯ ಕ್ಷೇತ್ರದಲ್ಲಿ ಹೊಸ ಬದಲಾವಣೆಗಳನ್ನು ತಂದವರು.

ಅಲ್ಲದೆ ಈ ಭಾಗದಲ್ಲಿ ಸ್ವಾತಂತ್ರ ನಂತರ ಕೆಲವೇ ಕೆಲವು ಮಹಿಳಾ ಧುರೀಣರು ರಾಜಕೀಯ ಪ್ರವೇಶವನ್ನು ಪಡೆದರು. ಅವರಲ್ಲಿ ಸ್ತ್ರೀವಾದಿ ಹೋರಾಟಗಾರ್ತಿ ಬಿ.ಟಿ.ಲಲಿತನಾಯಕ್, ಜೆ.ಶಾಂತ, ವಿಜಯಲಕ್ಷ್ಮೀ ಗುಜ್ಜಲ, ಭಾಗೀರಥಿ ಮರುಳಸಿದ್ದನಗೌಡ ಮತ್ತು ಬಸವರಾಜೇಶ್ವರಿ ಅವರಂತ ರಾಜಕೀಯ ನಾಯಕಿಯರು ಕಾಣಸಿಗುತ್ತಾರೆ. ಪುರುಷ ಪ್ರಧಾನವಾದ ರಾಜಕೀಯ ವಲಯದಲ್ಲಿ ಇವರು ತಮ್ಮದೆ ವ್ಯಕ್ತಿತ್ವವನ್ನು ಉಳಿಸಿಕೊಂಡವರು.

ವಿಶೇಷವಾಗಿ ಬಳ್ಳಾರಿ ಜಿಲ್ಲೆಯನ್ನು ವೇದಿಕೆಯಾಗಿಸಿಕೊಂಡು ರಾಷ್ಟ್ರ, ರಾಜ್ಯ ಮತ್ತು ಪ್ರಾದೇಶಿಕ ಪಕ್ಷಗಳು ಅಧಿಕಾರದ ರಾಜಕಾರಣಕ್ಕಾಗಿ ಸಂಘರ್ಷದಲ್ಲಿ ತೊಡಗಿದ್ದು, ಜಿಲ್ಲೆಯ ಪ್ರಸ್ತುತ ರಾಜಕೀಯ ಸಂದರ್ಭವನ್ನು ಬಿಂಬಿಸುತ್ತದೆ. ಈ ಹೊತ್ತಿಗೂ ಜಿಲ್ಲೆಯ ಹೊರ ರಾಜಕಾರಣ ಈ ನೆಲವನ್ನು ರಂಗವನ್ನಾಗಿಸಿಕೊಂಡು ರೂಪಿಸುತ್ತಿರುವ ಚಳವಳಿಗಳನ್ನು, ಹೋರಾಟಗಳನ್ನು ಮತ್ತು ಅಭಿಪ್ರಾಯಗಳನ್ನು ಪರಿಶೀಲಿಸಿದರೆ ಪ್ರಸ್ತುತ ರಾಜಕೀಯ ಸಂದರ್ಭದ ಒಳಸುಳಿವು ಸ್ಪಷ್ಟವಾಗುತ್ತದೆ. ಹಾಗೂ ರಾಯಚೂರು, ಕೊಪ್ಪಳ ಜಿಲ್ಲೆಗಳು ಕೂಡ ರಾಜಕೀಯ ಹೋರಾಟದ ನೆಲೆಗಳಾಗಿವೆ ಎಂಬುದನ್ನು ಮರೆಯುವಂತಿಲ್ಲ. ಈ ಭಾಗದ ಜನರ ರಾಜಕೀಯ, ಉದ್ಯೋಗದ ಮೀಸಲಾತಿಗೆ ಒಂದು ಇತಿಹಾಸವೇ ಇದೆ. ಹೈದ್ರಾಬಾದ್ ಕರ್ನಾಟಕದ ಜನರ ಅಭಿವೃದ್ಧಿಗಾಗಿ ಮುಲ್ಕೀ ಕಾನೂನನ್ನು ಜಾರಿಗೆ ತರಲಾಗಿತ್ತು. ಅದರ ಸಂಕ್ಷಿಪ್ತ ಮಾಹಿತಿಯನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

### ೩.೫.೧. ಮುಲ್ಕೀ ಕಾನೂನು

ಸ್ವಾತಂತ್ರ್ಯ ಪೂರ್ವದಲ್ಲಿ ಹೈದರಾಬಾದ್ ಸಂಸ್ಥಾನದ ಆಡಳಿತ ಭಾಷೆ ಉರ್ದು ಆಗಿತ್ತು. ಆಡಳಿತದ ಎಲ್ಲಾ ವಲಯಗಳಲ್ಲಿ ಬಹಳಷ್ಟು ಅಧಿಕಾರಿಗಳು ಮತ್ತು ಇತರೆ ಕೆಲಸಗಾರರು ದೆಹಲಿ, ಲಕ್ನೋ ಮುಂತಾದ ಹೊರರಾಜ್ಯದಿಂದ ಬಂದವರಾಗಿದ್ದರು. ಅದರಲ್ಲಿಯೂ ವಿಶೇಷವಾಗಿ ಅಲಿಘರ್ ವಿಶ್ವವಿದ್ಯಾಲಯದಲ್ಲಿ ಪದವಿ ಪಡೆದವರು ಹೆಚ್ಚಾಗಿದ್ದರು. ಹಾಗೆಯೇ ವೃತ್ತಿಪರ ಕೋರ್ಸ್‌ಗಳಾದ ಮೆಡಿಕಲ್, ಇಂಜಿನಿಯರಿಂಗ್ ಮುಂತಾದ ಕೋರ್ಸ್‌ಗಳ ಪ್ರವೇಶದಲ್ಲಿಯೂ ಸಹ ಅಧಿಕ ಸಂಖ್ಯೆಯಲ್ಲಿ ಹೊರರಾಜ್ಯದವರೆ ಇರುತ್ತಿದ್ದರು. ಈ ಕಾರಣದಿಂದಾಗಿ ವೃತ್ತಿಪರ ಕೋರ್ಸ್‌ಗಳ ಪ್ರವೇಶ ಪಡೆಯುವಲ್ಲಿ ಮತ್ತು ಉದ್ಯೋಗದ ನೇಮಕಾತಿಗಳಿಂದ ಸ್ಥಳೀಯರು ವಂಚಿತರಾಗಿದ್ದರು.

ಈ ಪರಿಸ್ಥಿತಿಯನ್ನು ಮನಗಂಡಂತಹ ಮೀರ್ ಉಸ್ಮಾನ್ ಅಲಿಖಾನ್ ಅವರು ೧೯೧೯ರಲ್ಲಿ ಮುಲ್ಕೀ ಕಾನೂನನ್ನು ಜಾರಿಗೆ ತಂದನು. ಮುಲ್ಕೀ ಕಾನೂನಿನ ಪ್ರಕಾರ ಹೈದರಾಬಾದ್ ರಾಜ್ಯದ ಪ್ರತಿಯೊಂದು ನೇಮಕಾತಿಯಲ್ಲಿ ಮತ್ತು ಶೈಕ್ಷಣಿಕ ಪ್ರವೇಶಗಳಲ್ಲಿ ಸ್ಥಳೀಯರಿಗೆ

ಶೇ.೮೫ರಷ್ಟು ಮೀಸಲಾತಿಯನ್ನು ನೀಡಿ ಸ್ಥಾನಗಳನ್ನು ಕಾಯ್ದಿರಿಸುವ ಕಾನೂನನ್ನು ಜಾರಿಗೆ ತಂದನು. ಈ ಕಾನೂನೇ 'ಮುಲ್ಕೀರೂಲ್' ಎಂದು ಹೆಸರಾಯಿತು. ಮುಲ್ಕೀ ಎಂದರೆ ಸ್ಥಳೀಯರು ಎಂದರ್ಥ. ಉದ್ಯೋಗ ಮತ್ತು ಶಿಕ್ಷಣದಲ್ಲಿ ಸ್ಥಳೀಯರಿಗೆ ಸ್ಥಾನಗಳನ್ನು ಮೀಸಲಾಗಿಡುವ ಕಾನೂನು ಇದಾಗಿದೆ. ಈ ಕಾನೂನು ಕೂಡ ಹೈದರಾಬಾದ್-ಕರ್ನಾಟಕದಲ್ಲಿ ನಿರೀಕ್ಷಿತ ಬದಲಾವಣೆಯನ್ನು ತರಲಿಲ್ಲ. ಹೈದರಾಬಾದ್-ಕರ್ನಾಟಕದಲ್ಲಿ ಮುಲ್ಕೀ ರೂಲ್ ಕಾನೂನಾಗಿ ಉಳಿಯಿತೇ ಹೊರತು ಅನ್ವಯಿಕ ನೆಲೆಯಲ್ಲಿ ಅದು ವಿಸ್ತರಿಸಿಕೊಳ್ಳಲೇ ಇಲ್ಲ.

ಕರ್ನಾಟಕ ರಾಜ್ಯದ ಅತ್ಯಂತ ಹಿಂದುಳಿದ ಪ್ರದೇಶವಾದ ಹೈದರಾಬಾದ್ ಕರ್ನಾಟಕ ಭಾಗಕ್ಕೆ ಮುಲ್ಕೀ ಕಾನೂನು ಜಾರಿಯಾಗಬೇಕು ಎನ್ನುವುದು ಈ ಭಾಗದ ಜನರ ಬಹುದಿನದ ಕನಸಾಗಿತ್ತು. ಸತತ ನಾಲ್ಕು ದಶಕಗಳ ಹೋರಾಟದ ಪ್ರತಿಫಲವಾಗಿ ಇಂದು ಕೇಂದ್ರದ ಯುಪಿಎ ಸರಕಾರ ಸಂವಿಧಾನದ ೩೭೧ನೇ ಕಲಂಗೆ ತಿದ್ದುಪಡಿಯನ್ನು ತಂದಿತು. ಈ ಕಾನೂನಿನ ಆಧಾರದ ಮೇಲೆ ಹೈದರಾಬಾದ್-ಕರ್ನಾಟಕ ಭಾಗದ ಜನತೆ ಸಂವಿಧಾನದ ೩೭೧ನೇ ಕಲಂನಂತೆ ಸವಲತ್ತು ಪಡೆಯಲು ಅನುವು ಮಾಡಿಕೊಟ್ಟಿದೆ.

ಮುಲ್ಕೀ ಕಾನೂನಿನ ಆಧಾರದ ಮೇಲೆ ಇಂದು ಹೈ-ಕ ಕ್ಕೆ ೩೭೧(ಜೆ)ವಿಶೇಷ ಸೌಲಭ್ಯಗಳನ್ನು ಕೊಡಲಾಗಿದೆ. ಅಂತೆಯೇ ಇಂತಹ ವಿಶೇಷ ಸೌಲಭ್ಯವನ್ನು ಭಾರತದಲ್ಲಿ ನಾಗಾಲ್ಯಾಂಡ್ ೩೭೧(ಎ), ಅಸ್ಸಾಂ ೩೭೧(ಬಿ), ಮಣಿಪುರ ೩೭೧(ಸಿ), ಆಂಧ್ರಪ್ರದೇಶ ೩೭೧(ಡಿ)(ಇ), ಸಿಕ್ಕಿಂ ೩೭೧(ಎಫ್), ಮಿಜೋರಾಂ ೩೭೧(ಜಿ), ಅರುಣಾಚಲ ಪ್ರದೇಶ ೩೭೧(ಎಚ್), ಗೋವಾ ೩೭೧(ಐ) ಪ್ರದೇಶಗಳನ್ನು ಗುರುತಿಸಲಾಗಿದೆ. ಈ ಪ್ರದೇಶಗಳೂ ಕೂಡ ಬ್ರಿಟೀಶ್ ಆಡಳಿತದಿಂದಲೂ ಹಿಂದುಳಿದ ಪ್ರದೇಶಗಳೇ ಆಗಿದ್ದಂತವುಗಳು. ಹೀಗೆ ಮುಲ್ಕೀ ಕಾನೂನು ಇಂದು ಸಂವಿಧಾನದ ೩೭೧ನೇ ಕಲಂ ಆಗಿ ಜಾರಿಯಲ್ಲಿರುವುದನ್ನು ಕಾಣಬಹುದು. ಮುಖ್ಯವಾಗಿ ಈ ಹಿಂದೆಯೇ ಹೇಳಿದಂತೆ ಭಾರತಕ್ಕೆ ಸ್ವತಂತ್ರ ಸಿಕ್ಕರೂ ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ಸ್ವತಂತ್ರ ಸಿಕ್ಕಿರಲಿಲ್ಲ. ಹೈದರಾಬಾದ್ ನಿಜಾಮನ ವಶದಲ್ಲಿಯೇ ಇತ್ತು. ಹಾಗಾಗಿ ಈ ಭಾಗದ ರಾಜಕೀಯ ಧುರೀಣರು ನಿಜಾಮನಿಂದ ಮುಕ್ತಿಯನ್ನು ಪಡೆಯಲು ಹೈದರಾಬಾದ್ ವಿಮೋಚನಾ ಹೋರಾಟಕ್ಕೆ ಮುಂದಾಗಿದ್ದರು.

೧೯೪೭ ಆಗಸ್ಟ್ ೧೫ರಂದು ಭಾರತಕ್ಕೆ ಸ್ವಾತಂತ್ರ್ಯ ಬಂದರೂ, ನಿಜಾಮರ ಅಧೀನದಲ್ಲಿದ್ದ ಹೈದರಾಬಾದ್ ಸಂಸ್ಥಾನ ಮಾತ್ರ ನಿಜಾಮರ ಆಡಳಿತದ ಸಾರ್ವಭೌಮತ್ವದಿಂದಾಗಿ ಸ್ವತಂತ್ರ ಸಂಸ್ಥಾನವಾಗಿತ್ತು. ಇಡೀ ರಾಷ್ಟ್ರ ಬ್ರಿಟಿಷರ ಗುಲಾಮಗಿರಿಯಿಂದ ಮುಕ್ತವಾಗಿ, ಸ್ವಾತಂತ್ರ್ಯದ ಪರಿಸರದಲ್ಲಿ ತಲೆಯೆತ್ತಿದರೆ, ಹೈದರಾಬಾದ್ ಸಂಸ್ಥಾನದ ಜನ ಸಮುದಾಯ ಗುಲಾಮರಾಗಿಯೆ ಉಳಿಯಬೇಕಾದ ಅಸಹನೀಯ ರಾಜಕೀಯ ಪರಿಸ್ಥಿತಿ ಉಂಟಾಯಿತು. ನಿಜಾಮನು ೧೯೪೭ ಜನವರಿ ೨೬ರಂದು ಹೈದರಾದಾಬ್ ಸ್ವತಂತ್ರ ರಾಜ್ಯವೆಂದು ಪರ್ಮಾನು ಹೊರಡಿಸಿದ. ಆ ನಂತರ ಕಾಸಿಂ ರಜ್ವಿ ನೇತೃತ್ವದ ರಜಾಕಾರರ ದೌರ್ಜನ್ಯಗಳು ಈ ಭಾಗದಲ್ಲಿ ಅಶಾಂತತೆಯ

ವಾತವರಣವನ್ನು ಸೃಷ್ಟಿಸಿತು. ಇಂತಹ ಸ್ಥಿತಿಯಲ್ಲಿ ರಜಾಕಾರರ ವಿರುದ್ಧ ಹೋರಾಡಲು ಹೈದರಾಬಾದ್ ರಾಜ್ಯದ ಅನೇಕ ಪ್ರದೇಶಗಳಲ್ಲಿ ಸ್ವಾತಂತ್ರ್ಯ ಪ್ರೇಮಿಗಳು ಸಂಘಟಿತರಾಗತೊಡಗಿದರು. ಅದರಲ್ಲಿ ಸ್ವಾಮಿ ರಮಾನಂದ ತೀರ್ಥರ ನೇತೃತ್ವದಲ್ಲಿ ಸ್ವಾತಂತ್ರ್ಯ ಹೋರಾಟಗಾರರು ಮನೆ, ಮಠ ತೊರೆದು ಬೀದಿಗಿಳಿದು ಹೋರಾಟ ನಡೆಸಿದರು. ಇವರಿಗೆಲ್ಲ ಸ್ವಾಮಿ ರಮಾನಂದ ತೀರ್ಥರು ಪ್ರೇರಕ ಶಕ್ತಿಯಂತಿದ್ದರು. ಅಲ್ಲದೆ ರಮಾನಂದರು ಸನ್ಯಾಸಿಯಾಗಿದ್ದರೂ, ತಮ್ಮ ಸಾತ್ವಿಕ ವೃತ್ತಿಗೆ ವಿರುದ್ಧವಾಗಿ ರಾಜಕೀಯಕ್ಕಿಳಿದವರು”.[೨೨]

ರಜಾಕಾರರ ಹಿಂಸಾತ್ಮಕ ಕೃತ್ಯಗಳು ದಿನದಿಂದ ದಿನಕ್ಕೆ ಹೆಚ್ಚುತ್ತಾ ಹೋದಂತೆ ಸ್ವಾತಂತ್ರ್ಯ ಹೋರಾಟಗಾರರ ಸಂಘಟನೆಗಳು ಸಹ ಬಲಿಷ್ಠವಾದವು. ಸ್ವಾತಂತ್ರ್ಯ ಹೋರಾಟಗಾರರು ಹೈದರಾಬಾದ್ ರಾಜ್ಯದ ಗಡಿಯೊಳಗಿನ ರಜಾಕಾರರ ಅಮಾನವೀಯ ಹಿಂಸಾ ಕೃತ್ಯಗಳನ್ನು ಎದುರಿಸಲು ಸುಮಾರು ೧೦೦ ಶಿಬಿರಗಳನ್ನು ನಡೆಸಿದರು. ಕನಿಷ್ಠ ಒಂದೊಂದು ಶಿಬಿರದಲ್ಲಿ ೨೫ ರಿಂದ ೧೨೫ ಸ್ವತಂತ್ರ ಸೇನಾನಿಗಳು ಕಾರ್ಯ ನಿರ್ವಹಿಸುತ್ತಿದ್ದರು. ಶಿಬಿರಕ್ಕೊಬ್ಬ ಶಿಬಿರಾಧಿಪತಿ ಇರುತ್ತಿದ್ದರು. ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ಸೇರಿದ ಕೆಲವು ಪ್ರಮುಖರು ಶಿಬಿರಗಳಲ್ಲಿ ಶಿಬಿರಾಧಿಪತಿಗಳಾಗಿದ್ದರು. ಅವರುಗಳಲ್ಲಿ ಪ್ರಮುಖರಾದವರೆಂದರೆ, ರಾಜಾ ವೆಂಕಟಪ್ಪನಾಯಕ, ಅಳವಂಡಿ ಶಿವಮೂರ್ತಿಸ್ವಾಮಿ, ನಾರಾಯಣರಾವ್ ಕಾನಿಹಾಳ್, ಸರದಾರ ಶರಣಗೌಡ ಇನಾಂದಾರ, ದತ್ತಾತ್ರೇಯ ಅವರಾದಿ, ರಾಮಚಂದ್ರ ವೀರಪ್ಪಾ, ಡಾ.ಚುರ್ಚಿಹಾಳ್ ಮಠ, ಅಮರಸಿಂಹರಾಠೋಡ, ಚಂದ್ರಶೇಖರ ಪಾಟೀಲ್, ಮಟಮಾರಿನಾಗಪ್ಪ, ವಿ.ವಿ.ಪಾಟೀಲ್ ಮುಂತಾದವರು ಪ್ರಮುಖರಾಗಿದ್ದು, ಸಿಂಧಗಿ, ಗಜೇಂದ್ರಗಡ, ಕೆಸರಜವಾಳಗಾಗ, ಇಟಗಿ, ಮುಂಡರಗಿ, ದುದನಿ, ತಾಳಿಕೋಟೆಗಳಲ್ಲಿ ಶಿಬಿರಗಳನ್ನು ಸಂಘಟಿಸಲಾಗಿತ್ತು.

ಈ ತರಬೇತಿ ಶಿಬಿರಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ಶಿಬಿರಾರ್ಥಿಗಳಲ್ಲಿ ಕೆಲವರು ಶಸ್ತ್ರಾಸ್ತ್ರಧಾರಿಗಳಾಗಿದ್ದರು, ಇನ್ನು ಕೆಲವರು ನಿರಾಯುಧ ಸೇನಾನಿಗಳಾಗಿ ವಿವಿಧ ಮಾರುವೇಷದಲ್ಲಿ ಸಂಚರಿಸುತ್ತಾ, ರಜಾಕಾರ ಮತ್ತು ನಿಜಾಮನ ಸೈನ್ಯ ಹಾಗೂ ಪೊಲೀಸರ ಚಟುವಟಿಕೆಗಳ ಬಗ್ಗೆ ಗುಪ್ತ ಮಾಹಿತಿಯನ್ನು ಸಂಗ್ರಹಿಸಿ ಹೋರಾಟಗಾರರಿಗೆ ರವಾನಿಸುತ್ತಿದ್ದರು. ಸ್ವಾತಂತ್ರ್ಯ ಸೇನಾನಿಗಳು ರಜಾಕರ ಸೈನ್ಯದ ದೌರ್ಜನ್ಯ, ಅನ್ಯಾಯ ಮತ್ತು ಅಕ್ರಮವನ್ನು ಸಮರ್ಥವಾಗಿ ಎದುರಿಸುವ ಮತ್ತು ಹತ್ತಿಕ್ಕುವ ದೃಷ್ಟಿಯಿಂದ ಸಶಸ್ತ್ರಗಳನ್ನು ಉಪಯೋಗಿಸಲೇಬೇಕಾದ ಅನಿವಾರ್ಯತೆ ಉಲ್ಬಣಿಸಿತು. ಹೀಗಾಗಿ ರಾತ್ರಿಯ ವೇಳೆಯಲ್ಲಿ ರಜಾಕಾರರ ಕೇಂದ್ರಗಳ ಮೇಲೆ ಹಾಗೂ ಪೊಲೀಸ್ ಠಾಣೆಗಳ ಮೇಲೆ ಆಯುಧದಾರಿ ಸ್ವಾತಂತ್ರ್ಯ ಸೇನಾನಿಗಳು ದಾಳಿ ಮಾಡಿ ಅಲ್ಲಿದ್ದ ಆಯುಧಗಳನ್ನು ಮತ್ತು ಸಂಪತ್ತನ್ನು ಲೂಟಿ ಮಾಡಿ ಹೋರಾಟಕ್ಕೆ ಉಪಯೋಗಿಸಿಕೊಳ್ಳುತ್ತಿದ್ದರು. ಹಂತ ಹಂತವಾಗಿ ರಜಾಕಾರರ ಹಿಡಿತದಿಂದ ಒಂದೊಂದೇ ಹಳ್ಳಿಗಳನ್ನು ಬಿಡುಗಡೆಗೊಳಿಸಿ ತಮ್ಮ ವಶಕ್ಕೆ ತೆಗೆದುಕೊಂಡು ಸ್ವಾತಂತ್ರ್ಯ ಘೋಷಣೆ ಮಾಡುತ್ತಾ

ನಿಜಾಮರ ಆಡಳಿತವನ್ನು ಧಿಕ್ಕರಿಸಿದರು. ಹೀಗೆ ೧೯೪೮ರ ಜನವರಿ ವೇಳೆಗೆ ಸುಮಾರು ೬೯ ಹಳ್ಳಿಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡ ಸೇನಾನಿಗಳು ಸ್ವಾತಂತ್ರ್ಯ ಘೋಷಿಸಿಕೊಂಡರು.

ಹೀಗೆ ಶಿಬಿರಗಳು ರಜಾಕಾರರ ವಿರುದ್ಧದ ಹೋರಾಟಗಳಲ್ಲಿ ಯಶಸ್ವಿಯಾಗುತ್ತಾ ಸಾಗಿದ್ದವು. ಸ್ವಾತಂತ್ರ್ಯ ಹೋರಾಟಗಾರರು ರಮಾನಂದತೀರ್ಥರ ನೇತೃತ್ವದಲ್ಲಿ ಮಾಡು ಇಲ್ಲವೆ ಮಡಿ ಎನ್ನುವ ಸಂದೇಶದೊಂದಿಗೆ ವಿಮೋಚನಾ ಹೋರಾಟ ಸಾಗಿದ್ದ ಈ ಸಮಯದಲ್ಲಿ ಹೈದರಾಬಾದ್ ರಾಜ್ಯದಲ್ಲಿ ಉಂಟಾಗಿದ್ದ ಭಯಾನಕ ಸ್ಥಿತಿಯನ್ನು ಗಮನಿಸಿದ ಭಾರತ ಸರಕಾರ ತಕ್ಷಣವೇ ಹಿಂಸಾಕೃತ್ಯವನ್ನು ನಿಲ್ಲಿಸುವಂತೆ ಹಾಗೂ ಭಾರತದ ಒಕ್ಕೂಟದಲ್ಲಿ ವಿಲೀನವಾಗುವಂತೆ ನಿಜಾಮನಿಗೆ ಎಚ್ಚರಿಕೆಯ ಕರೆ ನೀಡಿತು. ಇಂತಹ ಎಚ್ಚರಿಕೆಯಿಂದ ಯಾವುದೇ ಪರಿಣಾಮ ಬೀರದ ಕಾರಣ ಭಾರತ ಸರಕಾರದ ಆಗಿನ ಗೃಹಮಂತ್ರಿಗಳಾಗಿದ್ದ ಸರ್ದಾರ್ ವಲ್ಲಭಬಾಯಿ ಪಟೇಲರು ಸೈನಿಕ ಕಾರ್ಯಚರಣೆಗೆ ಆದೇಶ ನೀಡಿದರು. ಇದರಿಂದ ದಿನಾಂಕ ೧೩.೦೯.೧೯೪೮ರಂದು ಭಾರತದ ಸೈನ್ಯ, ಸೊಲ್ಲಾಪುರದ ಮುಖಾಂತರ ಹೈದರಾಬಾದಿನತ್ತ ಸಾಗಿತು. ಆ ದಿನವೇ ಸಾಯಂಕಾಲ ಅಹ್ಮದ್‌ನಗರ, ಮಧ್ಯಪ್ರಾಂತ್ಯ, ಮದ್ರಾಸ್ ಮತ್ತು ಮೈಸೂರು ಕಡೆಯಿಂದಲೂ ಅನೇಕ ಸೈನಿಕ ತುಕಡಿಗಳು ಹೈದರಾಬಾದ್ ಗಡಿಯನ್ನು ಪ್ರವೇಶಿಸಿ ನಾಲ್ಕು ದಿಕ್ಕಿನಿಂದಲೂ ಹೈದರಾಬಾದ್ ರಾಜ್ಯದ ಮೇಲೆ ಮುತ್ತಿಗೆ ಹಾಕಲಾಯಿತು. ಸತತವಾಗಿ ಐದು ದಿನಗಳ ಕಾಲ ನಡೆದ ಸೈನಿಕ ಕಾರ್ಯಾಚರಣೆಯಿಂದ ನಿಜಾಮನ ಸೈನ್ಯ ಮತ್ತು ರಜಾಕಾರರ ಸೈನ್ಯವನ್ನು ಸಂಪೂರ್ಣವಾಗಿ ಹತ್ತಿಕ್ಕಲ್ಪಟ್ಟಿತು. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಹೈದರಾಬಾದ್ ನಿಜಾಮ, ರಾಜ್ಯವು ಭಾರತದ ಒಕ್ಕೂಟಕ್ಕೆ ಸೇರಿದೆ ಎಂದು ೧೯೪೮ ಸೆಪ್ಟೆಂಬರ್ ೧೭ರಂದು ಘೋಷಿಸಿ ಒಪ್ಪಂದಕ್ಕೆ ಸಹಿ ಹಾಕಿದನು. ಇದರಿಂದಾಗಿ ಅವಮಾನಿತನಾದ ಕಾಸಿಂ ರಜ್ವಿ ಮತ್ತು ಸಹಚರರು ಪಾಕಿಸ್ತಾನಕ್ಕೆ ಪಲಾಯನ ಮಾಡಿದರು. ಹೀಗೆ ೧೯೪೮ ಸೆಪ್ಟೆಂಬರ್ ೧೭ರಂದು ಹೈದರಾಬಾದ್ ಸಂಸ್ಥಾನವು ವಿಮೋಚನೆಗೊಂಡು ಭಾರತದ ಒಕ್ಕೂಟದಲ್ಲಿ ವಿಲೀನವಾಗಿ ಭಾರತ ದೇಶದ ಒಂದು ರಾಜ್ಯವಾಗಿ ಹೊರಹೊಮ್ಮಿತು ಎಂದು ತಿಳಿದು ಬರುತ್ತದೆ. ಕಾರ್ಯಾಚರಣೆಯ ನೇತೃತ್ವ ವಹಿಸಿದ್ದ ಸೈನ್ಯದ ಮುಖ್ಯಸ್ಥ ಜೆ.ಎನ್.ಚೌದರಿಯವರು ೧೯೪೮ ಸೆಪ್ಟೆಂಬರ್‌ನಿಂದ ೧೯೪೯ರ ವರೆಗೆ ರಾಜ್ಯ ಸರಕಾರದ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸಿದರು.

### ೩.೫.೨. ಸ್ವಾತಂತ್ರ್ಯ ನಂತರದ ರಾಜಕೀಯ ಸ್ಥಿತಿಗತಿಗಳು

ಸ್ವಾತಂತ್ರ್ಯನಂತರ ಹೈದರಾಬಾದ್ ಕರ್ನಾಟಕ ಪ್ರದೇಶವು ರಾಜಕೀಯವಾಗಿ ತುಂಬ ಬದಲಾವಣೆಗೆ ಒಳಪಟ್ಟಿದೆ. ಮುಖ್ಯವಾಗಿ ಇಲ್ಲಿನ ಜನರು ರಾಜಕೀಯ ರಂಗದಲ್ಲಿ ಪ್ರವೇಶವನ್ನು ಪಡೆದರು. ಹೀಗೆ ಪ್ರವೇಶ ಪಡೆದವರ ಸಂಖ್ಯೆಯಲ್ಲಿ ಪುರುಷರೇ ಅಧಿಕವಾಗಿರುವುದು ಕಂಡುಬರುತ್ತದೆ. ಮಹಿಳೆಯರು ರಾಜಕೀಯ ರಂಗವನ್ನು ಪ್ರವೇಶಿಸಿದ್ದರಾದರೂ ಅದು ಬೆರಣಿಕೆಯಷ್ಟು ಮಾತ್ರ. ಗ್ರಾಮ ಪಂಚಾಯ್ತಿ ಮಟ್ಟದಿಂದ ಹಿಡಿದು ಲೋಕಸಭೆಯವರೆಗೂ

ಮಹಿಳೆಯರ ರಾಜಕೀಯ ಪಾಲ್ಗೊಳ್ಳುವಿಕೆಯನ್ನು ಗಮನಿಸಿದರೆ ತುಂಬಾ ನಿರಾಸೆಯಾಗುತ್ತದೆ. ಇಂದಿಗೂ ಸಹ ಗ್ರಾಮ ಪಂಚಾಯ್ತಿ, ತಾಲೂಕು ಪಂಚಾಯ್ತಿ, ಜಿಲ್ಲಾ ಪಂಚಾಯ್ತಿ ಇವುಗಳನ್ನು ಹೊರತುಪಡಿಸಿದರೆ ವಿಧಾನಸಭೆ, ಲೋಕಸಭೆ ಮತ್ತು ರಾಜ್ಯಸಭೆ ಇವುಗಳಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ತುಂಬ ಕಡಿಮೆ. ಹಾಗಾಗಿ ರಾಜಕೀಯ ಪ್ರವೇಶಕ್ಕೆ ಸಂಬಂಧಿಸಿದಂತೆ ಸ್ತ್ರೀ-ಪುರುಷರ ನಡುವಿನ ತಾರತಮ್ಯದ ಕಂದಕ ಆಳವಾಗಿದೆ. ಮತ್ತು ಕೆಳಹಂತದ ರಾಜಕೀಯ ವಲಯಗಳಲ್ಲಿ ಮಹಿಳೆಯರು ಪಾಲ್ಗೊಳ್ಳುತ್ತಿದ್ದರೂ ಸಹ ಅವರು ಸ್ವಂತ ನಿರ್ಧಾರವನ್ನು ತೆಗೆದುಕೊಳ್ಳುವಲ್ಲಿ ವಿಫಲರಾಗಿದ್ದಾರೆ. ಇದಕ್ಕೆ ಮುಖ್ಯ ಕಾರಣ ಹೈದ್ರಾಬಾದ್ ಕರ್ನಾಟಕದ ಸಂಸ್ಥಾನಿಕ ಆಡಳಿತ ವ್ಯವಸ್ಥೆಯಲ್ಲಿ ಮಹಿಳೆಯರಿಗೆ ಪಾಲ್ಗೊಳ್ಳುವ ಅವಕಾಶಗಳು ಸೃಷ್ಟಿಯಾಗದೇ ಇರುವುದು.

ಅಂತೆಯೇ ಸಾಮಾಜಿಕ ವ್ಯವಸ್ಥೆಯಲ್ಲಿ ಮಹಿಳೆಗಿರುವ ಸ್ಥಾನಮಾನವು ತುಂಬಾ ಕೆಳಹಂತದಲ್ಲಿರುವ ದೃಷ್ಟಿ ಧೋರಣೆಗಳೆ ಇಲ್ಲಿಯೂ ಆಳವಾಗಿ ಬೇರೂರಿದ್ದವು. ವ್ಯವಸ್ಥೆಯಲ್ಲಿನ ಸಾಮಾಜಿಕ ಕಟ್ಟುಪಾಡುಗಳು ಮಹಿಳೆಯರ ಸ್ವಾತಂತ್ರ್ಯಕ್ಕೆ ಅಡ್ಡಿಯನ್ನುಂಟುಮಾಡುತ್ತಿವೆ. ಇತ್ತೀಚಿನ ದಿನಮಾನಗಳಲ್ಲಿ ಆಧುನಿಕತೆಯ ಪ್ರಭಾವದಿಂದಾಗಿ ಜನರ ಆಲೋಚನ ವಿಧಾನಗಳು ಸ್ವಲ್ಪಮಟ್ಟಿಗೆ ಬದಲಾಗುತ್ತಿವೆ. ಹಾಗಾಗಿ ಮಹಿಳೆಯರ ಸ್ವಾತಂತ್ರ್ಯಕ್ಕೆ ಇರುವ ಅಡ್ಡಿ ಆತಂಕಗಳು ಸ್ವಲ್ಪ ಸಡಿಲಗೊಂಡಂತೆ ಕಾಣುತ್ತಿವೆ. ಇದರ ಪರಿಣಾಮವಾಗಿ ಸಮಾನತೆಯ ಆಲೋಚನಾ ವಿಧಾನಗಳು ಮುನ್ನೆಲೆಗೆ ಬರುತ್ತಿವೆ. ಒಟ್ಟಾರೆಯಾಗಿ ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯ ನಂತರದವರೆಗೆ ರಾಜಕೀಯ ಸ್ಥಿತಿಗತಿಗಳನ್ನು ಗಮನಿಸಿದಾಗ ಈ ಭಾಗದ ಜನರ ರಾಜಕೀಯ ಪ್ರವೇಶ ಸುಧಾರಿಸಿದೆ ಎಂದು ಹೇಳಬಹುದು. ಆದರೆ ಆರ್ಥಿಕತೆ ಮತ್ತು ಅಭಿವೃದ್ಧಿಯ ವಿಷಯ ಬಂದಾಗ ಹಿಂದುಳಿಯುವಿಕೆ ಯಥಾಸ್ಥಿತಿಯಲ್ಲೆ ಮುಂದುವರಿದಿದೆ. ಈ ಆಧುನಿಕ ಪ್ರಕ್ರಿಯೆಗಳು ಹೈದರಾಬಾದ್ ಕರ್ನಾಟಕದಲ್ಲಿ ವಾಸಿಸುವ ಜನರ ಬದುಕಿನ ಮೇಲೆ ಪರಿಣಾಮ ಬೀರಿದ್ದು ಕಡಿಮೆ. ಅನಕ್ಷರತೆ ಮತ್ತು ಬಡತನದ ಕಾರಣಗಳು ಹೈದರಾಬಾದ್ ಕರ್ನಾಟಕದಲ್ಲಿನ ಬಹುಸಂಖ್ಯಾತ ಜನರ ಬದುಕಿನಲ್ಲಿ ಬದಲಾವಣೆಗಳನ್ನು ಮೂಡಿಸಲಿಲ್ಲ. ಬ್ರಿಟೀಷ್ ನಿಯಂತ್ರಣದಲ್ಲಿದ್ದ ಮೈಸೂರು ಸಂಸ್ಥಾನವು ತನ್ನ ಅನೇಕ ಸುಧಾರಣ ಕಾರ್ಯಕ್ರಮಗಳ ಮೂಲಕ ಹಿಂದುಳಿದ ವರ್ಗಗಳ ಜನರಿಗೆ ಬೆಳಕಾಯಿತು. ಮೈಸೂರು ಮಹಾರಾಜರು ಬ್ರಿಟೀಷ್ ಆಡಳಿತದ ವೈಖರಿ ಹಾಗೂ ಸುಧಾರಣಾ ಕಾರ್ಯಕ್ರಮಗಳಿಗೆ ಮನ ಸೋತಿದ್ದರು. ಹೀಗಾಗಿ ಮೈಸೂರು ಸಂಸ್ಥಾನಕ್ಕೆ ಒಳಪಡುವ ಭಾಗಗಳು ನೇರವಾಗಿ ಬ್ರಿಟೀಷ್ ಆಡಳಿತಕ್ಕೆ ಒಳಪಡದೇ ಇದ್ದರೂ ಬ್ರಿಟೀಷ್ ದೃಷ್ಟಿಕೋನವನ್ನು ಮೈಗೂಡಿಸಿಕೊಂಡ ಅರಸರಿಂದಾಗಿ ಈ ಭಾಗದಲ್ಲಿ ಸಾಮಾಜಿಕ ಅಭಿವೃದ್ಧಿ ಮುನ್ನುಡಿ ಬರೆಯಲಾಯಿತು. ಆದರೆ ಸಂಪೂರ್ಣವಾಗಿ ಸಾಮಾಜಿಕ ಅಭಿವೃದ್ಧಿ ಸಾಧ್ಯವಾಗಿಲ್ಲ ಎಂಬುದು ಗಮನಾರ್ಹ ವಿಚಾರವಾಗಿದೆ.

ಒಟ್ಟಾರೆಯಾಗಿ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಹಲವಾರು ಜ್ವಲಂತ ಸಮಸ್ಯೆಗಳು ಇಲ್ಲಿನ ಜನರನ್ನು ಇಂದಿಗೂ ಕಾಡುತ್ತಿವೆ. ಇದನ್ನು ೨೦೦೨ರಲ್ಲಿ ಸಿದ್ಧಪಡಿಸಿದ ಡಾ.ಡಿ.ಎಂ.ನಂಜುಂಡಪ್ಪ ವರದಿಯೂ ಸಹ ಸ್ಪಷ್ಟಪಡಿಸುತ್ತದೆ. ಆದರೆ ಈ ವರದಿಯನ್ನು ಜಾರಿಗೆ ತರಲು ಆಡಳಿತಾರೂಢ ರಾಜಕೀಯ ಪಕ್ಷಗಳು ಮುಂದೆಬರುತ್ತಿಲ್ಲ. ಮುಖ್ಯವಾಗಿ ಇಲ್ಲಿ ನೈಸರ್ಗಿಕ ಸಂಪತ್ತು ಅಧಿಕವಾಗಿದೆಯಾದರೂ ಅದನ್ನು ಜನರ ಅಭಿವೃದ್ಧಿಗಾಗಿ ಬಳಸುವ ನಿಟ್ಟಿನಲ್ಲಿ ರಾಜ್ಯದ ಆಡಳಿತ ನಡೆಸಿದ ಸರ್ಕಾರಗಳು ಕಾರ್ಯಪ್ರವೃತ್ತರಾಗಿಲ್ಲದಿರುವುದು ಕಂಡುಬರುತ್ತಿದೆ. ಕಾರಣ ರಾಜಕೀಯ ಇಚ್ಚಾಶಕ್ತಿಯ ಕೊರತೆ ಎಂದರೆ ತಪ್ಪಾಗಲಾರದು. ಅಲ್ಲದೆ ಇಲ್ಲಿ ಬಡತನ, ನಿರುದ್ಯೋಗ, ಅನಕ್ಷರತೆ, ಅಪೌಷ್ಟಿಕತೆ ಮತ್ತು ಅತಿವೃಷ್ಟಿ, ಅನಾವೃಷ್ಟಿ, ಪ್ರಕೃತಿ ವಿಕೋಪದಂತ ಸಮಸ್ಯೆಗಳು ಈ ಭಾಗದ ಜನತೆಯನ್ನು ಕಾಡುತ್ತಿದೆ. ೧೪ ವರ್ಷದ ಮಕ್ಕಳಿಗೆ ಉಚಿತ ಕಡ್ಡಾಯ ಶಿಕ್ಷಣ, ಸರ್ವಶಿಕ್ಷಣ ಅಭಿಯಾನ, ಅಕ್ಷರ ದಾಸೋಹ, ನಿರಂತರ ಶಿಕ್ಷಣ, ಮಧ್ಯಾಹ್ನದ ಬಿಸಿಯೂಟ ಯೋಜನೆ ಹಲವಾರು ಯೋಜನೆಗಳನ್ನು ಸರ್ಕಾರ ಜಾರಿಗೊಳಿಸಿದ್ದರೂ, ಶೈಕ್ಷಣಿಕವಾಗಿ ಇತರೆ ಜಿಲ್ಲೆಗಳಿಗೆ ಹೋಲಿಸಿದರೆ ಕಟ್ಟಕಡೆಯ ಸ್ಥಾನದಲ್ಲಿದೆ. ಅಲ್ಲದೆ ನಿರುದ್ಯೋಗ ಈ ಭಾಗದ ಜನತೆಯನ್ನು ಕಾಡುವ ಮತ್ತೊಂದು ಸಮಸ್ಯೆಯಾಗಿದೆ. ಸರಕಾರ ಇದನ್ನು ಹೋಗಲಾಡಿಸಲು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಜಾರಿಗೊಳಿಸಿದೆ. ಆದರೂ ಈ ಭಾಗದ ಜನತೆ ಉದ್ಯೋಗ ಅಥವಾ ಕೂಲಿಯನ್ನು ಅರಸಿ ಗುಳೆ ಹೋಗುತ್ತಿರುವುದು ವಿಪರ್ಯಾಸದ ಸಂಗತಿಯೇ ಸರಿ. ಈ ಹಿನ್ನೆಲೆಯಲ್ಲಿ ಈ ಯೋಜನೆ ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿಲ್ಲ ಎಂಬುದನ್ನು ಎತ್ತಿ ತೋರಿಸುತ್ತದೆ. ಅಲ್ಲದೆ ಈ ಭಾಗದಲ್ಲಿ ಜೀತ ಪದ್ಧತಿ ಇನ್ನೂ ಜೀವಂತವಾಗಿದೆ. ಭೂ ಒಡೆಯರು ಕಾರ್ಮಿಕರನ್ನು ಜೀತಕ್ಕೆ ಇಟ್ಟುಕೊಳ್ಳುವುದು, ಕಡಿಮೆ ಕೂಲಿಯಲ್ಲಿ ಮಹಿಳೆ ಮತ್ತು ಮಕ್ಕಳನ್ನು ದುಡಿಸಿಕೊಳ್ಳುತ್ತಿದ್ದಾರೆ. ರಾಯಚೂರು, ಕೊಪ್ಪಳ, ಬಳ್ಳಾರಿ ಜಿಲ್ಲೆಗಳಲ್ಲಿ ಮಹಿಳಾ ಸಮುದಾಯವನ್ನು ಕುಟುಂಬ ಸಮಾಜವನ್ನು ಕಾಡುತ್ತಿರುವ ಪುರುಷರ ಕುಡಿತದ ವಿರುದ್ಧ ಸರಾಯಿ ವಿರೋಧಿ ಅಂತಹ ಮಹತ್ವದ ಚಳವಳಿ, ಹೋರಾಟಗಳು ಈ ನಗರ ಪ್ರದೇಶಗಳಲ್ಲಿ ಕಾಣಿಸಿಕೊಂಡಿಲ್ಲ. ಆದರೆ ಇದಕ್ಕೆ ಅಪವಾದ ಎನ್ನುವಂತೆ ಗ್ರಾಮೀಣ ಪ್ರದೇಶಗಳಲ್ಲಿ ಸ್ತ್ರೀಶಕ್ತಿ ಸಂಘಗಳು ಇಂತಹ ಹೋರಾಟವನ್ನು ನಡೆಸಿರುವುದು ಸ್ವಲ್ಪಮಟ್ಟಿಗೆ ಕಂಡುಬರುತ್ತವೆ. ಬಡತನದಿಂದ ಅನಕ್ಷರತೆ, ಅನಕ್ಷರತೆಯಿಂದ ಅಜ್ಞಾನ, ಅಜ್ಞಾನದಿಂದ ಮೂಢನಂಬಿಕೆಗಳು ಒಂದಕ್ಕೊಂದು ಹೆಣೆದುಕೊಂಡು ಸ್ತ್ರೀಪುರುಷರಾದಿಯಾಗಿ ಎಲ್ಲರನ್ನು ಕಾಡುತ್ತಿವೆ. ವಿಶೇಷವಾಗಿ ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಸಾಮಾಜಿಕ ಅನಿಷ್ಟ ಪಿಡುಗು ದೇವದಾಸಿ ಪದ್ಧತಿ ಬಹುವ್ಯಾಪಕವಾಗಿ ವಿಸ್ತರಿಸಿದೆ. ಕೆಳಜಾತಿ ಮಹಿಳೆಯನ್ನು ದೇವರಿಗೆ ಬಿಡುವುದು ಮತ್ತು ಕಲೆಯ ಹೆಸರಿನಲ್ಲಿ ಮಹಿಳೆಯರನ್ನು ದುರ್ಬಳಕೆ ಮಾಡಿಕೊಳ್ಳುವುದು ಇಂದಿಗೂ ನಡೆಯುತ್ತಿದೆ. ಮಹಿಳಾ

ಸಂಘಟನೆಗಳು ಇವುಗಳ ವಿರುದ್ಧ ಬೇಕಾದಷ್ಟು ಪ್ರಭಾವಿಸಿವೆ. ಆದರೂ ಇದನ್ನು ಬೇರುಮಟ್ಟದಿಂದ ಇಂತಹ ಸಮಸ್ಯೆಗಳನ್ನು ನಾಶಮಾಡಲು ಸಾಧ್ಯವಾಗಿಲ್ಲ. ಅದಕ್ಕೆ ಕಾರಣಗಳು ಸಾಕಷ್ಟು ಇವೆ. ಈ ಭಾಗದಲ್ಲಿ ಬಡತನ, ಅನಕ್ಷರತೆ, ಅಜ್ಞಾನಗಳ ವಿರುದ್ಧ ಶೈಕ್ಷಣಿಕ ಆಂದೋಲನ, ವೈಜ್ಞಾನಿಕ, ವೈಚಾರಿಕ ತಿಳುವಳಿಕೆಯನ್ನುಂಟು ಮಾಡುವ ಕಾರ್ಯಕ್ರಮಗಳು ವ್ಯಾಪಕವಾಗಿ ನಡೆಯಬೇಕು. ಆ ಮೂಲಕ ಜನರಲ್ಲಿ ಅರಿವು, ಜಾಗೃತಿ ಮೂಡಿಸಬೇಕು. ಹೀಗಾದರೆ ಮಾತ್ರ ಇಂತಹ ಸಾಮಾಜಿಕ ಪಿಡುಗುಗಳನ್ನು ಹೋಗಲಾಡಿಸಲು ಸಾಧ್ಯ. ಇಂತಹ ಅನೇಕ ಸಾಮಾಜಿಕ ಸಮಸ್ಯೆಗಳು ಈ ಪ್ರದೇಶದಲ್ಲಿ ತಾಂಡವವಾಡುತ್ತಿದ್ದರೂ ಸರ್ಕಾರ ಅಭಿವೃದ್ಧಿಗೆ ಶ್ರಮಿಸದೆ ತನ್ನ ಮಲತಾಯಿ ಧೋರಣೆಯ ನೀತಿಯನ್ನು ಅನುಸರಿಸುತ್ತಿದೆ. ಇನ್ನಾದರೂ ಸರಕಾರ ಈ ಭಾಗದ ಅಭಿವೃದ್ಧಿಗೆ ಉಪಯುಕ್ತ ಯೋಜನೆಗಳನ್ನು ಜಾರಿಗೊಳಿಸಲು ಪ್ರಾಮಾಣಿಕ ಪ್ರಯತ್ನ ಮಾಡಬೇಕಿದೆ.

### ಅಡಿ ಟಿಪ್ಪಣಿಗಳು

೧. ಬಳ್ಳಾರಿ ಜಿಲ್ಲಾ ಗೆಜೆಟಿಯರ್, ಪುಟ.೯೧

೨. ಚನ್ನಣ್ಣ ವಾಲೀಕಾರ, ೧೯೯೮, ಹೈದ್ರಾಬಾದ್-ಕರ್ನಾಟಕ ಪ್ರದೇಶದ ಗ್ರಾಮ ದೇವತೆಗಳ ಜಾನಪದೀಯ ಅಧ್ಯಯನ, ದಲಿತ ಬಂಡಾಯ ಸಾಹಿತ್ಯ ಪ್ರಕಾಶನ ಕೇಂದ್ರ, ಗುಲ್ಬರ್ಗಾ, ಪುಟ.೨೪.

೩. ಬಳ್ಳಾರಿ ಜಿಲ್ಲಾ ಗೆಜೆಟಿಯರ್, ಪುಟ.೯೬

೪. ಅಜೀಜ್ ಅಬ್ದುಲ್ ಮತ್ತು ವಾಸುಕಿ ಕೆ.ಜಿ(ಸಂ) ೧೯೯೭, ಕರ್ನಾಟಕದ ಆರ್ಥಿಕತೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.ಪುಟ.೪೩.

೫. ರಾಮಸ್ವಾಮಿ ಎಸ್.ಆರ್, ೨೦೦೦, ಸರ್ದಾರ ವಲ್ಲಭಬಾಯಿ ಪಟೇಲ್, ಪ್ರಕಾಶನ, ಸ್ವಪ್ನ ಬುಕ್ ಹೌಸ್, ಬೆಂಗಳೂರು, ಪುಟ.೨೮.

೬ ಗೋಪಾಲ್‌ರಾವ್ ಹೇಜೀಬ್, ೨೦೦೧, ಹೈದ್ರಾಬಾದ್ ಮುಕ್ತಿ ಸಂಘರ್ಷ, ರಾಷ್ಟ್ರೋತ್ಥಾನ ಸಾಹಿತ್ಯ, ಬೆಂಗಳೂರು, ಪುಟ.೨೦.

೭. ವಸಂತ ಬನ್ನಾಡಿ, ೧೯೯೫, ಸಂಸ್ಕೃತಿ ಚಿಂತನೆ, ಅರಿವು ಬರಹ ಪ್ರಕಾಶನ, ಪುಟ.೪.

೮. ರಾಜಶೇಖರ ಜಿ, ೧೯೮೧, ತೆಲಂಗಾಣ ರೈತ ಹೋರಾಟ, ಸಮುದಾಯ ಪ್ರಕಾಶನ, ಬೆಂಗಳೂರು, ಪುಟ.೬-೮.

೯. ಛಾಯಾದೇಗಾಂವ್ಕರ್, ಅಭಿವೃದ್ಧಿಯ ಕಡೆಗೆ ಸಾಗುತ್ತಿದ್ದರೂ ಹಿಂದುಳಿದ ಹೈದ್ರಾಬಾದ್ ಕರ್ನಾಟಕ, ಸಂಯುಕ್ತ ಕರ್ನಾಟಕ, ೧೭.೩.೨೦೦೫. ಪುಟ.೫

೧೦. ರಝಾಕ ಉಸ್ತಾದ, ೨೦೧೧, ಹೈದರಾಬಾದ್ ಕರ್ನಾಟಕ ಕಥೆ-ವ್ಯಥೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. ಪುಟ.೧೭

೧೧. ಅದೇ, ಪುಟ. ೧೮

೧೨. ಪ್ರಾದೇಶಿಕ ಅಸಮತೋಲನ ಉನ್ನತಾಧಿಕಾರ ಸಮಿತಿ; ಕರ್ನಾಟಕ ಸರ್ಕಾರ, ೨೦೦೨; ಪುಟ.೩೦೮

೧೩. ಅದೇ, ಪುಟ. ೩೬

೧೪. ರಾಜಶೇಖರ ಜಿ, ೧೯೮೧, ತೆಲಂಗಾಣ ರೈತ ಹೋರಾಟ, ಸಮುದಾಯ ಪ್ರಕಾಶನ, ಬೆಂಗಳೂರು, ಪುಟ.೬-೮.

೧೫. ಅಮರೇಶ ನುಗಡೋಣಿ, ೨೦೦೦, ರಾಯಚೂರು ಜಿಲ್ಲೆಯಲ್ಲಿ ಹೈದರಾಬಾದ್ ಕರ್ನಾಟಕ ವಿಮೋಚನ ಚಳುವಳಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ.೨

೧೬. ರಾಮಸ್ವಾಮಿ ಎಸ್.ಆರ್, ೨೦೦೦, ಸರ್ದಾರ ವಲ್ಲಭಬಾಯಿ ಪಟೇಲ್, ಪ್ರಕಾಶನ, ಸ್ವಪ್ನ ಬುಕ್ ಹೌಸ್, ಬೆಂಗಳೂರು, ಪುಟ.೨೮.

೧೭. ಗೋಪಾಲ್‌ರಾವ್ ಹೇಜೀಬ್, ೨೦೦೧, ಹೈದ್ರಾಬಾದ್ ಮುಕ್ತಿ ಸಂಘರ್ಷ, ರಾಷ್ಟ್ರೋತ್ಥಾನ ಸಾಹಿತ್ಯ, ಬೆಂಗಳೂರು, ಪುಟ.೨೦.

೧೮. ರಾಜಶೇಖರ ಜಿ, ೧೯೮೧, ತೆಲಂಗಾಣ ರೈತ ಹೋರಾಟ, ಸಮುದಾಯ ಪ್ರಕಾಶನ, ಬೆಂಗಳೂರು.

೧೯. ವಸಂತ ಬನ್ನಾಡಿ, ೧೯೯೫, ಸಂಸ್ಕೃತಿ ಚಿಂತನೆ, ಅರಿವು ಬರಹ ಪ್ರಕಾಶನ, ಪುಟ.೪.

೨೦. ಛಾಯಾದೇಗಾಂವ್ಕರ್, ಅಭಿವೃದ್ಧಿಯ ಕಡೆಗೆ ಸಾಗುತ್ತಿದ್ದರೂ ಹಿಂದುಳಿದ ಹೈದ್ರಾಬಾದ್ ಕರ್ನಾಟಕ, ಸಂಯುಕ್ತ ಕರ್ನಾಟಕ, ೧೭.೩.೨೦೦೫. ಪುಟ. ೫

೨೧. ಚಂದ್ರಶೇಖರ್ ಟಿ.ಆರ್. (ಸಂಯೋಜಕರು), ೧೯೯೯, ಜಿಲ್ಲಾ ಅಭಿವೃದ್ಧಿ ಅಧ್ಯಯನ ಕೊಪ್ಪಳ, ಪುಟ. ೬೯

೨೨. ಸಂಯುಕ್ತ ಕರ್ನಾಟಕ, ವಿಶೇಷ ಪುರವಣಿ(ಹೈದರಾಬಾದ್ ವಿಮೋಚನೆ ಸ್ವರ್ಣ ಮಹೋತ್ಸವ) ದಿನಾಂಕ ೧೭-೦೯-೧೯೯೮, ಪುಟ.೧೪.

# ಅಧ್ಯಾಯ : ನಾಲ್ಕು

## ಉದ್ಯೋಗ ಖಾತರಿ ಯೋಜನೆಯ ಸ್ವರೂಪ

# ಅಧ್ಯಾಯ :ನಾಲ್ಕು

# ಉದ್ಯೋಗ ಖಾತರಿ ಯೋಜನೆಯ ಸ್ವರೂಪ

ಭಾರತ ದೇಶ ಹಳ್ಳಿಗಳ ದೇಶ. ಇಲ್ಲಿ ವಾಸಿಸುವ ಜನರ ಜೀವನಮಟ್ಟ ತುಂಬಾ ಶೋಚನೀಯ. ದೇಶದ ಪ್ರತಿಯೊಂದು ಗ್ರಾಮವೂ ಹಲವಾರು ಸಮಸ್ಯೆಗಳಿಂದ ತೊಳಲಾಡುತ್ತಿದೆ. ಮುಖ್ಯವಾಗಿ ವ್ಯವಸಾಯಕ್ಕೆ ಸಂಬಂಧಿಸಿದ ಸಮಸ್ಯೆಗಳು, ಶೈಕ್ಷಣಿಕ ಸಮಸ್ಯೆಗಳು, ಆರ್ಥಿಕ ಸಮಸ್ಯೆಗಳು, ಸಾಮಾಜಿಕ ಸಮಸ್ಯೆಗಳು, ಶೈಕ್ಷಣಿಕ ಸಮಸ್ಯೆಗಳು, ಆರೋಗ್ಯ ಮತ್ತು ವಸತಿ ಸಮಸ್ಯೆಗಳು, ಸಾರಿಗೆ ಸಂಪರ್ಕದ ಸಮಸ್ಯೆಗಳು ಹೀಗೆ ಹಲವಾರು ಸಮಸ್ಯೆಗಳಿಂದ ಗ್ರಾಮೀಣ ಪ್ರದೇಶಗಳು ಮುಕ್ತಿಯನ್ನು ಪಡೆದಿಲ್ಲ. ಹಾಗಾಗಿ ನಿರುದ್ಯೋಗ, ಅನಕ್ಷರತೆ, ಅಪೌಷ್ಟಿಕತೆ ಮತ್ತು ಬಡತನದಂತಹ ಹಲವು ಗಂಭೀರ ಸಮಸ್ಯೆಗಳು ಇಲ್ಲಿನ ಜನರನ್ನು ಆವರಿಸಿಕೊಂಡಿವೆ. ಗಾಂಧೀಜಿಯವರು "ಈ ದೇಶದ ಕಡುಬಡವರು ಹಸಿವಿನ ಯಾತನೆ ಮತ್ತು ನರಳುವಿಕೆಯಿಂದ ಮುಕ್ತರಾದಾಗ ಮಾತ್ರ ನಾವು ನಿಜವಾದ ಸ್ವಾತಂತ್ರ್ಯ ಪಡೆದಿದ್ದೇವೆ ಎಂದು ಹೇಳಬಹುದು. ಅಂತೆಯೇ ಸ್ವಾತಂತ್ರ್ಯ ಬಂದ ತಕ್ಷಣ ನಮ್ಮ ದೇಶಕ್ಕೆ ಎದುರಾದ ಭೂತಾಕಾರದ ಸವಾಲೇ ಬಡತನ ನಿವಾರಣೆ"[1] ಎಂದಿದ್ದಾರೆ. ಆದ್ದರಿಂದ ಬಡತನ ದೇಶಕ್ಕಂಟಿದ ಬಹುದೊಡ್ಡ ಪಿಡುಗಾಗಿದೆ. ಮುಖ್ಯವಾಗಿ ಹಳ್ಳಿಗಳಲ್ಲಿ ವಾಸಿಸುವ ಜನರ ತಲಾ ಆದಾಯ ಮತ್ತು ಜೀವನಮಟ್ಟ ತುಂಬಾ ಕಡಿಮೆ ಇದೆ. ಇವರಿಗೆ ಜೀವನೋಪಾಯದ ಮಾರ್ಗಗಳು ಸೀಮಿತ. ಹಾಗಾಗಿ ಜನರು ತಮ್ಮ ಜೀವನೋಪಾಯಕ್ಕಾಗಿ ಕೃಷಿಯನ್ನೇ ಹೆಚ್ಚಾಗಿ ಅವಲಂಭಿಸಿರುವುದನ್ನು ಕಾಣುತ್ತೇವೆ. ಇತ್ತೀಚಿನ ದಿನಗಳಲ್ಲಿ ಈ ಕೃಷಿಯೂ ಕೂಡ ಆಧುನಿಕತೆಗೆ ಒಳಗಾಗಿದ್ದರ ಪರಿಣಾಮವಾಗಿ, ಇದನ್ನೇ ಅವಲಂಬಿಸಿ ಜೀವಿಸುತ್ತಿದ್ದ ಕುಟುಂಬಗಳಿಗೆ ತುಂಬಾ ತೊಂದರೆಯಾಗಿದೆ. ಈ ಕುಟುಂಬಗಳು ತಮ್ಮ ಜೀವನೋಪಾಯಕ್ಕಾಗಿ ಕೆಲಸಗಳನ್ನು ಅಥವಾ

ಉದ್ಯೋಗವನ್ನರಸಿ ತಾವು ವಾಸಿಸುವ ಸ್ಥಳದಿಂದ ಬೇರೆ ಬೇರೆ ಊರುಗಳಿಗೆ ವಲಸೆ ಹೋಗುತ್ತಿರುವುದು ಕಂಡುಬಂದಿದೆ. ಆದರೆ ಹೀಗೆ ವಲಸೆ ಹೋದ ಕುಟುಂಬಗಳ ಆರ್ಥಿಕ ಸ್ಥಿತಿ ಸುಧಾರಿಸದಿರುವುದು ಒಂದು ಶೋಚನೀಯ ಸಂಗತಿ. ಹಾಗೆಯೇ ದುಡಿಯಲು ದೈಹಿಕವಾಗಿ ಸಮರ್ಥರಿರುವ ಹಲವಾರು ಜನರು ಹಳ್ಳಿಗಳಲ್ಲಿ ಇದ್ದಾರೆ. ಆದರೆ ಅವರಿಗೆ ಸರಿಯಾದ ಕೆಲಸಗಳಿಲ್ಲ.

ಇಂತಹ ಸಂದರ್ಭಗಳಲ್ಲಿ ಬಡತನದ ತೀವ್ರತೆ ಅಧಿಕವಾಗುವುದು ಸಹಜವೇ. ಬಡತನ ಅಥವಾ ಬಡತನದ ರೇಖೆಗಿಂತ ಕೆಳಗಿರುವವರನ್ನು ಸರಕಾರವು ಬಿಪಿಎಲ್ ಕುಟುಂಬಗಳು ಎಂದು ಗುರುತಿಸುತ್ತದೆ. ಇವರ ಸಂಖ್ಯೆ ಸಾಕಷ್ಟು ಪ್ರಮಾಣದಲ್ಲಿದೆ. ಆದರೆ ಅವರನ್ನು ಗುರುತಿಸುವಲ್ಲಿ ಸರಕಾರಗಳು ವಿಫಲವಾಗಿವೆ ಎಂದು ಹೇಳಬಹುದು. ಹಾಗಾಗಿ ಬಡತನ ಮತ್ತು ಬಡತನದ ರೇಖೆಗಿಂತ ಕೆಳಗಿರುವವರನ್ನು ಗುರುತಿಸುವುದು ತುಂಬಾ ಕಷ್ಟದ ಕೆಲಸವಾಗಿದೆ. ಆದರೂ ಬಡತನವನ್ನು ಅಳೆಯಲು ಒಂದು ಮಾನದಂಡವನ್ನು ರೂಪಿಸಲಾಗಿದೆ. ಅಂದರೆ "ಒಂದು ಕುಟುಂಬದ ವಾರ್ಷಿಕ ಆದಾಯ ರೂ. ೧೯,೨೬೧ಗಳಿಗಿಂತ ಕಡಿಮೆ ಇದ್ದರೆ ಅವರನ್ನು ಬಡತನದ ರೇಖೆಗಿಂತ(ಬಿಪಿಎಲ್) ಕೆಳಗೆ ಇರುವವರು ಎಂದು ಗುರುತಿಸಲಾಗುತ್ತಿದೆ. ಅಲ್ಲದೇ ಒಬ್ಬ ವ್ಯಕ್ತಿ ಸಾಕಷ್ಟು ಪ್ರಮಾಣದ ಪೌಷ್ಟಿಕ ಆಹಾರವನ್ನು ಪಡೆಯಲು ಸಾಧ್ಯವಾಗದಿದ್ದರೆ (೨೪೦೦ ಕ್ಯಾಲರಿ ಶಕ್ತಿಯನ್ನು ನೀಡುವಂತಹ ಸುಮಾರು ೫೦೦-೬೦೦ ಗ್ರಾಂ ಧಾನ್ಯ) ಅಂತಹವರನ್ನು ಸಹ ಬಡತನ ರೇಖೆಗಿಂತ ಕೆಳಗೆ ಇರುವವರು ಎಂದು ಪರಿಗಣಿಸಲಾಗುತ್ತಿದೆ".[೨] ಈ ಹಿಂದೆಯೇ ಹೇಳಿದಂತೆ ಬಡತನಕ್ಕೆ ಹಲವಾರು ಕಾರಣಗಳಿವೆ. ಆ ಕಾರಣಗಳ ಜೊತೆಗೆ ಜನರಲ್ಲಿನ ಸೋಮಾರಿತನ, ದುಶ್ಚಟಗಳಿಗೆ ಬಲಿಯಾಗುವುದು, ಹೆಚ್ಚು ಹೆಚ್ಚು ಮಕ್ಕಳನ್ನು ಹೊಂದಿರುವುದು, ಭವಿಷ್ಯದ ಕುರಿತು ಯೋಚಿಸದಿರುವುದು, ಕೆಲಸಗಳಲ್ಲಿ ನಿರತರಾಗಿದ್ದರೂ ಅದರಿಂದ ಬಂದ ಆದಾಯವನ್ನು ಉಳಿತಾಯ ಮಾಡದೇ ಇರುವುದು ಹೀಗೆ ಹತ್ತು ಹಲವು ಅಂಶಗಳು ಕಾರಣಗಳಾಗಿ ಕಂಡುಬರುತ್ತವೆ. ಮುಖ್ಯವಾಗಿ ಭಾರತದಲ್ಲಿನ ಒಟ್ಟು ಗ್ರಾಮೀಣ ಭಾಗಗಳಲ್ಲಿ ಭೂಮಿ ಒಡೆತನ ಇಲ್ಲದಿರುವ ಮತ್ತು ಕಡಿಮೆ ಭೂಮಿಯನ್ನು ಹೊಂದಿರುವವರ ಸಂಖ್ಯೆಯೇ ಅಧಿಕ. ಹಾಗಾಗಿ ಇವರು ಆರ್ಥಿಕವಾಗಿ ಮುಂದುವರಿಯಲು ಸಾಧ್ಯವಾಗುತ್ತಿಲ್ಲ. ಇವರು ರಾಷ್ಟ್ರೀಯ ವರಮಾನದ ಅಡಿಯಲ್ಲಿ ಗಣನೆಗೇ ಸಿಗುವುದಿಲ್ಲ. ಆದ್ದರಿಂದ ಗ್ರಾಮೀಣ ಭಾಗದ ಜನರು ಬಡತನದಲ್ಲಿಯೇ ಬದುಕನ್ನು ಸಾಗಿಸುವ ಅನಿವಾರ್ಯತೆಗೆ ಒಳಗಾಗಿರುವುದು ವಿಪರ್ಯಾಸವೇ ಸರಿ.

### ೪.೧. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯಿದೆಯ ಹಿನ್ನೆಲೆ

ಗ್ರಾಮೀಣ ಜನರನ್ನು ಕೆಲಸಗಳಲ್ಲಿ ತೊಡಗಿಸಿಕೊಳ್ಳುವ ಮತ್ತು ಆ ಮೂಲಕ ಅವರ ಬದುಕನ್ನು ಉತ್ತಮಗೊಳಿಸಿಕೊಳ್ಳುವ ಸಲುವಾಗಿ ಕೇಂದ್ರ ಸರಕಾರಗಳು ಹಲವಾರು ಯೋಜನೆಗಳನ್ನು ರೂಪಿಸುತ್ತಾ, ಜಾರಿಗೆ ತಂದಿವೆ. ಅವುಗಳಲ್ಲಿ ರಾಷ್ಟ್ರೀಯ ಗ್ರಾಮೀಣ

ಉದ್ಯೋಗ ಖಾತ್ರಿ ಕಾಯಿದೆಯೂ ಒಂದಾಗಿದೆ. ದೇಶದ ಅಭಿವೃದ್ಧಿಯಾಗಬೇಕಾದರೆ ಮೊದಲು ಹಳ್ಳಿಗಳು ಅಭಿವೃದ್ಧಿಯಾಗಬೇಕು. ಹಳ್ಳಿಗಳ ಅಭಿವೃದ್ಧಿ ಎಂದರೆ ಇಲ್ಲಿ ವಾಸಿಸುವ ಜನರ ಆರ್ಥಿಕ ಸ್ಥಿತಿ ಸುಧಾರಿಸಬೇಕು. ಹಾಗಾಗಿ ಸರಕಾರಗಳು ಗ್ರಾಮೀಣ ಭಾಗದ ಜನರನ್ನು ದೃಷ್ಟಿಯಲ್ಲಿಟ್ಟುಕೊಂಡೇ ಅವರ ಅಭಿವೃದ್ಧಿಗಾಗಿ ಹಲವಾರು ಯೋಜನೆಗಳನ್ನು ಜಾರಿಗೆ ತಂದಿವೆ. ಆದರೆ ಇವುಗಳಿಂದ ಜನರ ಆರ್ಥಿಕ ಬದುಕಿನಲ್ಲಿ ಯಾವುದೇ ಬದಲಾವಣೆಗಳು ಆಗಲಿಲ್ಲ. ಹೀಗೆ ವಿಫಲಗೊಂಡ ಯೋಜನೆಗಳು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯಿದೆಯ ಜಾರಿಗೆ ಹಿನ್ನೆಲೆಯಾಗಿ ಒದಗಿಬಂದವು.

೧೯೬೧ರಲ್ಲಿ ಗ್ರಾಮೀಣ ಭಾಗದ ನಿರ್ದಿಷ್ಟ ಪ್ರದೇಶಗಳಲ್ಲಿ ಉದ್ಯೋಗದ ಅಗತ್ಯವಿರುವ ಗ್ರಾಮೀಣ ಕೂಲಿಕಾರರಿಗೆ ವರ್ಷದಲ್ಲಿ ನೂರು ದಿನಗಳ ದುಡಿಮೆ ಒದಗಿಸುವುದರ ಸಲುವಾಗಿ 'ಉದ್ಯೋಗ ಭರವಸೆ ಯೋಜನೆ'ಯನ್ನು ಜಾರಿಗೆ ತರಲಾಯಿತು. ಆದರೆ ಇದು ಯಶಸ್ವಿಯಾಗದಾಯಿತು. ನಂತರ ೧೯೭೭, ೧೯೮೯ರಲ್ಲಿ ಸಂಗ್ರಹದಲ್ಲಿರುವ ಹೆಚ್ಚುವರಿ ಆಹಾರ ಧಾನ್ಯವನ್ನು ಬಳಸಿ ಗ್ರಾಮೀಣ ಜನರಿಗೆ ಮೂಲಭೂತ ಸೌಕರ್ಯಗಳನ್ನು ಸೃಷ್ಟಿಸಿ, ದುಡಿಯುವ ಕೈಗಳಿಗೆ ಕೆಲಸವನ್ನು ಒದಗಿಸುವುದರ ಸಲುವಾಗಿ 'ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಕಾರ್ಯಕ್ರಮ'ವನ್ನು ಜಾರಿಗೆ ತರಲಾಯಿತು. ಆದರೆ ಈ ಯೋಜನೆ ಪರಿಪೂರ್ಣತೆಯನ್ನು ಸಾಧಿಸಲಿಲ್ಲ. ನಂತರ ೧೯೮೩, ೧೯೮೯ರ ಅವಧಿಯಲ್ಲಿ ಭೂರಹಿತ ಕೃಷಿಕಾರ್ಮಿಕರಿಗೆ ಉದ್ಯೋಗವನ್ನು ಒದಗಿಸುವುದರ ಸಲುವಾಗಿ 'ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾರ್ಯಕ್ರಮ'ವನ್ನು ಜಾರಿಗೆ ತಂದಿತು. ಇದೂ ಕೂಡ ಫಲಿಸಲಿಲ್ಲ. ನಂತರ ೧೯೮೯-೯೦ ರಿಂದ ೧೯೯೩-೯೪ರ ಅವಧಿಯಲ್ಲಿ 'ಜವಾಹರ್ ರೋಜ್ಗಾರ್ ಯೋಜನೆ'ಯನ್ನು ಜಾರಿಗೆ ತರಲಾಯಿತು. ಈ ಯೋಜನೆಯ ಪ್ರಕಾರ ಗ್ರಾಮೀಣ ಪ್ರದೇಶಗಳಲ್ಲಿ ಉದ್ಯೋಗವನ್ನು ಸೃಷ್ಟಿಸುವುದು ಮತ್ತು ಈ ಭಾಗದ ಬಡಜನರಿಗೆ ಆಸ್ತಿ ನಿರ್ಮಾಣ ಮಾಡುವುದಾಗಿತ್ತು. ಹಾಗೆಯೇ ಈ ಯೋಜನೆಯ ಅನುಷ್ಠಾನದ ಸಂಪೂರ್ಣ ಜವಾಬ್ದಾರಿಯನ್ನು ಗ್ರಾಮ ಪಂಚಾಯಿತಿಗಳಿಗೆ ವಹಿಸಿಕೊಡಲಾಗಿತ್ತು. ಈ ಯೋಜನೆಯ ನಂತರ 'ಉದ್ಯೋಗ ಭರವಸೆ ಯೋಜನೆ'ಯನ್ನು ೧೯೯೩-೯೪ರಲ್ಲಿ ಆರಂಭಿಸಲಾಯಿತು. ಪ್ರಾರಂಭದಲ್ಲಿ ಈ ಯೋಜನೆ ತಾಲೂಕು ಕೇಂದ್ರಗಳಿಗೆ ಮಾತ್ರ ಸೀಮಿತವಾಗಿತ್ತು. ತದನಂತರದಲ್ಲಿ ಗ್ರಾಮೀಣ ಪ್ರದೇಶಗಳಿಗೆ ವಿಸ್ತರಿಸಿಕೊಂಡಿತು. ಗ್ರಾಮೀಣ ಪ್ರದೇಶಗಳಲ್ಲಿ ಕೃಷಿಕೂಲಿ ಲಭ್ಯವಾಗದ ಅವಧಿಯಲ್ಲಿ ಜನರಿಗೆ ೧೦೦ ದಿನಗಳ ಕಾಲ ಕೆಲಸವನ್ನು ಒದಗಿಸುವುದು, ಆ ಮೂಲಕ ಜನರಿಗೆ ಅನುಕೂಲವಾಗುವ ಆಸ್ತಿ ಸೃಷ್ಟಿಗೆ ಮೂಲ ಸೌಕರ್ಯಗಳನ್ನು ಒದಗಿಸುವುದಕ್ಕೆ ಆದ್ಯತೆಯನ್ನು ನೀಡಲಾಗಿತ್ತು. ನಂತರ ೧೯೯೯, ೨೦೦೨ರ ವರೆಗೆ 'ಜವಾಹರ್ ಗ್ರಾಮ ಸಮೃದ್ಧಿ ಯೋಜನೆ' ಜಾರಿಯಲ್ಲಿ ಬಂದಿತು. ಗ್ರಾಮೀಣ ಭಾಗದ ಜನರ ಜೀವನ ಮಟ್ಟ ಸುಧಾರಣೆಯ ಉದ್ದೇಶದಿಂದ ಈ ಯೋಜನೆ ಜಾರಿಗೆ ತರಲಾಗಿತ್ತು. ಹಾಗಾಗಿ ಸುಸ್ಥಿರ ಉದ್ಯೋಗ ಅವಕಾಶ ಮತ್ತು ಪೂರಕ

ಉದ್ಯೋಗಗಳ ಸೃಷ್ಟಿಗೆ ಹೆಚ್ಚಿನ ಆದ್ಯತೆಯನ್ನು ನೀಡಲಾಗಿತ್ತು. ಹಾಗೆಯೇ ಜನರ ಬೇಡಿಕೆಗಳಿಗೆ ಅನುಗುಣವಾಗಿ ಮೂಲಭೂತ ಸೌಲಭ್ಯಗಳನ್ನು ಒದಗಿಸುವ ಕಾರ್ಯ ಈ ಯೋಜನೆಯಿಂದಾಯಿತು. ಆದರೆ ಇದು ಯಶಸ್ವಿಯಾಗಲಿಲ್ಲ. ನಂತರದಲ್ಲಿ 'ಸಂಪೂರ್ಣ ಗ್ರಾಮೀಣ ರೋಜ್ಗಾರ್ ಯೋಜನೆ'ಯನ್ನು ಜಾರಿಗೆ ತರಲಾಯಿತು. ಈ ಯೋಜನೆಯ ಮುಖ್ಯ ಗುರಿಯೆಂದರೆ ಗ್ರಾಮೀಣ ಭಾಗದ ಬಡ ಜನರಿಗೆ ಈಗ ಇರುವಂತಹ ಉದ್ಯೋಗಗಳಿಗಿಂತ ಹೆಚ್ಚುವರಿ ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದು ಮತ್ತು ಆ ಮೂಲಕವಾಗಿ ಆಹಾರದ ಭದ್ರತೆಯನ್ನು ಒದಗಿಸುವುದಾಗಿತ್ತು. ಈ ಯೋಜನೆಯ ಅನುಷ್ಠಾನದ ಸಂಪೂರ್ಣವಾದ ಜವಾಬ್ದಾರಿಯನ್ನು ಪಂಚಾಯತ್‌ರಾಜ್ ಸಂಸ್ಥೆಗಳು ವಹಿಸಿಕೊಂಡಿದ್ದವು. ಈ ಯೋಜನೆಯ ನಂತರ ೨೦೦೪ರಲ್ಲಿ 'ರಾಷ್ಟ್ರೀಯ ಕೂಲಿಗಾಗಿ ಕಾಳು ಯೋಜನೆ'ಯು ಜಾರಿಗೆ ಬಂದಿತು. ಯೋಜನಾ ಆಯೋಗದಿಂದ ಗುರುತಿಸಲ್ಪಟ್ಟಂತಹ ದೇಶದ ೧೫೦ ಅತೀ ಹಿಂದುಳಿದ ತಾಲೂಕುಗಳಲ್ಲಿ ಹೆಚ್ಚುವರಿಯಾಗಿ ಉದ್ಯೋಗವನ್ನು ಸೃಷ್ಟಿಸುವ ಪ್ರಯತ್ನ ಮಾಡಲಾಯಿತು. ಈ ಎಲ್ಲಾ ಯೋಜನೆಗಳು ಗ್ರಾಮೀಣ ಪ್ರದೇಶಗಳಲ್ಲಿ ದುಡಿಯುವ ಕೈಗಳಿಗೆ ಉದ್ಯೋಗವನ್ನು ದೊರಕಿಸಿಕೊಡಲು ಮತ್ತು ಆ ಮೂಲಕ ಜನರ ಜೀವನ ಮಟ್ಟವನ್ನು ಸುಧಾರಿಸಲು ನಡೆಸಿದ ಪ್ರಯತ್ನಗಳಾಗಿವೆ. ಇಷ್ಟೆಲ್ಲಾ ಯೋಜನೆಗಳು ಜಾರಿಗೆ ಬಂದರೂ ಕೂಡ ಗ್ರಾಮೀಣ ಜನರ ಬದುಕಿನಲ್ಲಿ ಆರ್ಥಿಕ ಪರಿಸ್ಥಿತಿ ಅಭಿವೃದ್ಧಿಯೆಡೆಗೆ ಮುಖ ಮಾಡಲಿಲ್ಲ. ಏಕೆಂದರೆ ಈ ಯೋಜನೆಗಳನ್ನು ಅನುಷ್ಠಾನಕ್ಕೆ ತರುವಲ್ಲಿ ಮತ್ತು ಅನುಷ್ಠಾನದ ನಂತರ ಹಲವಾರು ತೊಡಕುಗಳು ಕಂಡುಬಂದವು. ಮುಖ್ಯವಾಗಿ,

೧. ಜನ ಸಾಮಾನ್ಯರಲ್ಲಿ ಈ ಯೋಜನೆಗಳ ಕುರಿತಾದ ಮಾಹಿತಿ ಇಲ್ಲದಾಯಿತು. ಈ ಕೊರತೆಯಿಂದಾಗಿ ಅವರು ಯೋಜನೆಯಲ್ಲಿ ಪಾಲ್ಗೊಳ್ಳದಿರುವುದು ಕಂಡುಬಂದಿತು.

೨. ಈ ಯಾವ ಯೋಜನೆಗಳಲ್ಲೂ ಕೂಡ ಸ್ತ್ರೀಪುರುಷರ ವೇತನ ಕುರಿತಂತೆ ಸಮಾನತೆ ಇಲ್ಲದಿರುವುದು ಒಂದು ಲೋಪವಾಯಿತು. ಜೊತೆಗೆ ಕೆಲವು ಸಂದರ್ಭಗಳಲ್ಲಿ ಕಡಿಮೆ ವೇತನವನ್ನು ಪಾವತಿಸಿರುವಂತಹ ಉದಾಹರಣೆಗಳೂ ಕಂಡುಬಂದವು. ಹಾಗಾಗಿ ಜನರು ಈ ಯೋಜನೆಗಳ ಬಗ್ಗೆ ಒಲವು ತೋರಲಿಲ್ಲ.

೩. ಗ್ರಾಮೀಣ ಭಾಗದ ಜನರಿಗೆ ಉದ್ಯೋಗವನ್ನು ಒದಗಿಸಿಕೊಡದೆ ಕಾಮಗಾರಿಗಳಲ್ಲಿ ಯಂತ್ರಗಳನ್ನು ಬಳಸಲಾಯಿತು. ಮತ್ತು ಕಳಪೆ ಗುಣಮಟ್ಟದ ಆಸ್ತಿಗಳನ್ನು ನಿರ್ಮಿಸಲಾಯಿತು. ಹೀಗಾಗಿ ಈ ಯೋಜನೆಗಳ ಮುಖ್ಯ ಉದ್ದೇಶಗಳೇ ಈಡೇರದಾಯಿತು.

೪. (ಈ ಯೋಜನೆಗಳ ನಿಯಮಗಳಲ್ಲಾಗಲೀ ಅಥವಾ ಅನುಷ್ಠಾನದಲ್ಲಾಗಲೀ ಪಾರದರ್ಶಕತೆ ಇಲ್ಲದೇ ಇರುವುದರಿಂದ ಮೇಲ್ವಿಚಾರಣೆಯ ಕೊರತೆಯನ್ನು ಅನುಭವಿಸಬೇಕಾಯಿತು.

ಹಾಗಾಗಿ ಯೋಜನೆಗಳು ವಿಫಲಗೊಳ್ಳಲು ಪ್ರಾರಂಭಿಸಿದವು. ಇಂತಹ ಪರಿಸ್ಥಿತಿಯಲ್ಲಿ ಗ್ರಾಮೀಣ ಭಾಗದ ಜನರಲ್ಲಿ ಬಡತನದ ತೀವ್ರತೆ ಹೆಚ್ಚಾಗತೊಡಗಿತ್ತು. ಈ ಬಡತನವನ್ನು ಹೋಗಲಾಡಿಸಿಕೊಳ್ಳಲು ಜನರು ವಲಸೆ ಹೋಗುವುದನ್ನು ಆರಂಭಿಸಿದರು. ಇದು ದೇಶದ ಅಭಿವೃದ್ಧಿಗೆ ತುಂಬಾ ಮಾರಕವಾದ ಸಂಗತಿಯಾಗಿತ್ತು. ಹಾಗಾಗಿ ಬಡತನದ ತೀವ್ರತೆಯನ್ನು ಕಡಿಮೆ ಮಾಡಲು ಮತ್ತು ವಲಸೆ ಹೋಗುವುದನ್ನು ತಪ್ಪಿಸಲು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯಿದೆಯನ್ನು ೨೦೦೫ರಲ್ಲಿ ಜಾರಿಗೆ ತರಲಾಯಿತು. ದಿನಾಂಕ ೭-೯-೨೦೦೫ರಂದು ವಿದ್ಯುಕ್ತವಾಗಿ ಚಾಲ್ತಿಗೆ ಬಂದ ಈ ಕಾಯ್ದೆಯು ಮೊದಲು ದೇಶದ ೨೦೦ ಜಿಲ್ಲೆಗಳಿಗೆ ಮಾತ್ರ ಸೀಮಿತವಾಗಿತ್ತು. ಕರ್ನಾಟಕ ರಾಜ್ಯಕ್ಕೆ ಸಂಬಂಧಿಸಿದಂತೆ ೧-೪-೨೦೦೬ರಲ್ಲಿ ಮೊದಲ ಹಂತದಲ್ಲಿ ಬೀದರ್, ಗುಲ್ಬರ್ಗಾ, ರಾಯಚೂರು, ದಾವಣಗೆರೆ ಮತ್ತು ಚಿತ್ರದುರ್ಗ ಈ ಐದು ಜಿಲ್ಲೆಗಳಲ್ಲಿ ಜಾರಿಗೆ ಬಂದಿತು. ನಂತರ ೧-೪-೨೦೦೭ರಿಂದ ಎರಡನೇ ಹಂತದಲ್ಲಿ ರಾಜ್ಯದ ಬೆಳಗಾಂ, ಬಳ್ಳಾರಿ, ಚಿಕ್ಕಮಗಳೂರು, ಶಿವಮೊಗ್ಗ, ಹಾಸನ ಮತ್ತು ಕೊಡಗು ಜಿಲ್ಲೆಗಳಿಗೆ ವಿಸ್ತರಿಸಿತು. ಹೀಗೆ ಕೇಂದ್ರ ಮತ್ತು ರಾಜ್ಯ ಮಟ್ಟದಲ್ಲಿ ಜಾರಿಯಾದ ಎಲ್ಲಾ ಪ್ರದೇಶಗಳಲ್ಲಿಯೂ ಕೂಡ ಈ ಕಾಯ್ದೆ ಜನಪ್ರಿಯತೆಯನ್ನು ಗಳಿಸಿತು. ಇದರಿಂದಾಗಿ ದಿನಾಂಕ ೧-೪-೨೦೦೮ರಿಂದ ರಾಜ್ಯದ ಉಳಿದ ಎಲ್ಲಾ ಜಿಲ್ಲೆಗಳಿಗೂ ವಿಸ್ತರಿಸಲಾಯಿತು. ಹೀಗೆ ವಿಸ್ತಾರಗೊಂಡಿರುವ ಈ ಕಾಯ್ದೆ ಇಂದಿಗೂ ಗ್ರಾಮೀಣ ಭಾಗಗಳಲ್ಲಿ ಸಮರ್ಥವಾಗಿ ಜಾರಿಯಲ್ಲಿರುವುದು ಕಂಡು ಬಂದಿದೆ.)

ಈ ಕಾಯ್ದೆ ಜಾರಿಗೆ ಬರುವುದಕ್ಕೂ ಮೊದಲು ಮಹಾರಾಷ್ಟ್ರ ರಾಜ್ಯವು ೧೯೭೬ರಲ್ಲಿ ಉದ್ಯೋಗ ಖಾತರಿ ಕಾಯಿದೆಯನ್ನು ಅಂಗೀಕರಿಸಿ ಜಾರಿಗೆ ತಂದಿತ್ತು. ಅದು ಇಂದಿಗೂ ಸಹ ಜಾರಿಯಲ್ಲಿದೆ. "ಕೆಲವು ವಿಚಾರಗಳಲ್ಲಿ ಮಹಾರಾಷ್ಟ್ರದ ಕಾಯಿದೆಯು, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆ ೨೦೦೫ಕ್ಕಿಂತಲೂ ಹೆಚ್ಚು ಶಕ್ತಿಶಾಲಿಯಾಗಿದೆ. ಮುಖ್ಯವಾಗಿ ಮಹಾರಾಷ್ಟ್ರದಲ್ಲಿನ ಉದ್ಯೋಗ ಖಾತರಿ ಕಾಯಿದೆ ಒಬ್ಬ ವ್ಯಕ್ತಿಗೆ ಅನಿಯಮಿತವಾದ ಉದ್ಯೋಗದ ಖಾತರಿಯನ್ನು ನೀಡುತ್ತದೆ. ಯಾವೊಬ್ಬ ವಯಸ್ಕನೇ ಆಗಲೀ ಯಾವಾಗ ಬೇಕಾದರೂ ಎಷ್ಟೇ ದಿನಗಳವರೆಗೆ ಉದ್ಯೋಗ ಅಪೇಕ್ಷಿಸಿ ಅರ್ಜಿ ಸಲ್ಲಿಸಬಹುದು. "ವರ್ಷಂಪ್ರತಿ ಒಂದು ಕುಟುಂಬಕ್ಕೆ ೧೦೦ ದಿನಗಳು ಎಂಬ ಮಿತಿ ಇಲ್ಲ".[೩] ಅಂದರೆ ೧೯೭೬ರಲ್ಲಿಯೇ ಮಹಾರಾಷ್ಟ್ರದಲ್ಲಿ ಈ ನಿಯಮ ಜಾರಿಯಾಗಿದ್ದು ಈ ಕಾಯ್ದೆಯೂ ಕೂಡ ೨೦೦೫ರ ಕಾಯಿದೆಗೆ ಹಿನ್ನೆಲೆಯಾಗಿ ನಿಲ್ಲುತ್ತದೆ ಎಂದು ಹೇಳಬಹುದು.

### ೪.೨. ಉದ್ಯೋಗ ಖಾತರಿ:ಒಂದು ಕಾಯಿದೆ ಮತ್ತು ಒಂದು ಯೋಜನೆ

ಗ್ರಾಮೀಣ ಪ್ರದೇಶದ ಬಡ ಜನರ ಅಭಿವೃದ್ಧಿಗಾಗಿ ಹಲವಾರು ಯೋಜನೆಗಳನ್ನು ಜಾರಿಗೆ ತಂದಿದೆ ನಿಜ. ಆದರೆ ಉದ್ಯೋಗ ಖಾತರಿಯನ್ನು ಒಂದು ಯೋಜನೆಯಾಗಿ ಮಾತ್ರ

ಜಾರಿಗೆ ತರದೆ ಒಂದು ನಿಯಮ ಅಥವಾ ಕಾಯ್ದೆಯಾಗಿ ರೂಪಿಸಿದುದು ಯಾಕೆ ಎಂಬ ಪ್ರಶ್ನೆ ಎದುರುಗೊಳ್ಳುತ್ತದೆ. ಕಾಯಿದೆ ಮತ್ತು ಯೋಜನೆ ಇವೆರೆಡರ ನಡುವೆ ಇರುವ ಸಂಬಂಧವೇನು ಅರ್ಥ ಮಾಡಿಕೊಳ್ಳಬೇಕಿದೆ. ಇದಕ್ಕೆ ಕಾರಣ ಇಲ್ಲದಿಲ್ಲ. ಯೋಜನೆ ಮತ್ತು ಕಾಯಿದೆ ಇವೆರಡರಕ್ಕೂ ತುಂಬಾ ವ್ಯತ್ಯಾಸಗಳಿವೆ. ಕಾಯಿದೆ ಒಂದು ರಾಷ್ಟ್ರೀಯ ಶಾಸನ. ಇದಕ್ಕೆ ಹಕ್ಕಿನ ಸ್ವರೂಪ ಇರುತ್ತದೆ. ಆದರೆ ಯೋಜನೆ ರಾಜ್ಯಕ್ಕೆ ಮಾತ್ರ ನಿರ್ದಿಷ್ಟಗೊಂಡಿರುತ್ತದೆ. ಉದ್ಯೋಗ ಖಾತರಿಯನ್ನು ಕಾರ್ಯರೂಪಕ್ಕೆ ತರುವ ಸಲುವಾಗಿ, ಆರು ತಿಂಗಳುಗಳ ಒಳಗಾಗಿ ಗ್ರಾಮೀಣ ಉದ್ಯೋಗ ಯೋಜನೆಯನ್ನು ಸಿದ್ಧಪಡಿಸುವಂತೆ ಅಂದಿನ ಕೇಂದ್ರ ಸರಕಾರ ಪ್ರತಿಯೊಂದು ರಾಜ್ಯಕ್ಕೂ ಪೂರ್ವಭಾವಿಯಾಗಿ ಆದೇಶಿಸುತ್ತದೆ. ನಂತರ ಎಲ್ಲಾ ರಾಜ್ಯಗಳ ಸಿದ್ಧಗೊಂಡ ಯೋಜನೆಗಳೆಲ್ಲವನ್ನೂ ಒಟ್ಟುಗೂಡಿಸಿ ಒಂದು ಕಾಯಿದೆಯಾಗಿ ರೂಪಿಸಲಾಯಿತು. ಈ ರೀತಿಯಾಗಿ ಈ ಕಾಯ್ದೆ ಉದ್ಯೋಗ ಖಾತರಿಗೊಂದು ಶಾಸನಬದ್ಧವಾದ ಬುನಾದಿಯನ್ನು ಹಾಕಿತು ಮತ್ತು ಉದ್ಯೋಗ ಖಾತರಿ ಕಾಯಿದೆಯನ್ನು ಜಾರಿಗೆ ತರಲು ಈ ಯೋಜನೆಗಳು ಒಂದು ಸಾಧನವಾಗಿ ಮಾರ್ಪಟ್ಟವು. ಹಾಗಾಗಿ ೨೦೦೫ರಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯಿದೆಯಾಗಿ ರೂಪುಗೊಂಡಿತು. ಇದರಿಂದ ಪ್ರತಿಯೊಂದು ರಾಜ್ಯವು ತನ್ನದೇ ಆದ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ರೂಪಿಸಿಕೊಳ್ಳುವ ಸ್ವಾತಂತ್ರ್ಯವನ್ನು ಪಡೆದಿರುತ್ತದೆ. ಆದರೆ ೨೦೦೫ರ ಕಾಯಿದೆಯ ಅನುಸೂಚಿ-೧ರಲ್ಲಿ ವಿವರಿಸಿರುವ ಕೆಲವೊಂದು ಮೂಲ ಸ್ವರೂಪಗಳಿಗೆ ಒಳಪಟ್ಟಿರುತ್ತದೆ. ಹಾಗಾಗಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆ-೨೦೦೫ರ ಅಡಿಯಲ್ಲಿ ರಾಜ್ಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗಳು ರೂಪುಗೊಳ್ಳುತ್ತವೆ.

ಹೀಗೆ ಇದು ಕಾಯಿದೆಯಾಗಿ ರೂಪುಗೊಂಡಿರುವುದರಿಂದ ಹಲವಾರು ಪ್ರಯೋಜನಗಳು ಇರುವುದನ್ನು ಕಾಣಲಾಗಿದೆ. ಅಂದರೆ ಇದು ಒಂದು ಕಾಯಿದೆಯಾಗಿರುವುದರಿಂದ ದುಡಿಯುವವರಿಗೆ ಕೆಲಸ ಎನ್ನುವುದು ಹಕ್ಕಾಗಿ ಪರಿಣಮಿಸಿದೆ. ಮತ್ತು ಉದ್ಯೋಗದ ಹಾಗೂ ಆಹಾರದ ಭದ್ರತೆಯನ್ನೂ ಒದಗಿಸಿದೆ. ಒಂದು ಯೋಜನೆಯಾಗಿ ರೂಪುಗೊಂಡಿದ್ದರೆ ಗ್ರಾಮೀಣ ಭಾಗದ ಜನರು ತಮ್ಮ ಹಕ್ಕಾಗಿ ಪರಿಗಣಿಸುತ್ತಿರಲಿಲ್ಲ. ಹಾಗೂ ಉದ್ಯೋಗದ ಭದ್ರತೆಯನ್ನು ಒದಗಿಸುತ್ತದೆ ಎಂಬ ಭರವಸೆಯೂ ಇರುತ್ತಿರಲಿಲ್ಲ. ಈ ಕಾಯಿದೆ ಜಾರಿಗೆ ಬರುವುದಕ್ಕೂ ಮೊದಲು ಜಾರಿಯಲ್ಲಿದ್ದಂತಹ ಯೋಜನೆಗಳನ್ನು ಗಮನಿಸಿದರೆ ವೇದ್ಯವಾಗುತ್ತದೆ. ಹೀಗೆ ಉದ್ಯೋಗ ಖಾತರಿ ಎಂಬುದು ಒಂದು ಕಾಯಿದೆಯಾಗಿ ಅಂದರೆ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆ-೨೦೦೫ರ ರೂಪದಲ್ಲಿ ಇಂದಿಗೂ ನಮ್ಮ ನಡುವೆ ಜೀವಂತವಾಗಿದೆ; ಜಾರಿಯಾದ ಕಾಯಿದೆಯು ಹಲವಾರು ಗುರಿ ಉದ್ದೇಶಗಳನ್ನು ಹೊಂದಿದೆ.

## ೪.೩. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆ-೨೦೦೫ರ ಉದ್ದೇಶಗಳು

೧. ಸ್ವ ಇಚ್ಛೆಯಿಂದ ಕೆಲಸವನ್ನು ಬಯಸಿ ಗ್ರಾಮ ಪಂಚಾಯಿತಿಗೆ ಅರ್ಜಿಯನ್ನು ಸಲ್ಲಿಸುವ ಗ್ರಾಮೀಣ ಪ್ರದೇಶದ ವಯಸ್ಕ ಸದಸ್ಯರ ಪ್ರತಿ ಕುಟುಂಬಕ್ಕೆ ಕಡ್ಡಾಯವಾಗಿ ೧೦೦ ದಿನಗಳವರೆಗೆ ಕೆಲಸವನ್ನು ನೀಡುವುದು.

೨. ಕುಟುಂಬದ ವ್ಯಾಪ್ತಿಯ ಕುರಿತು ಸ್ಪಷ್ಟತೆ ಇದ್ದು, ಇದರ ವ್ಯಾಪ್ತಿಯನ್ನು ಗಂಡ-ಹೆಂಡತಿ ಮತ್ತು ಅವರ ಮಕ್ಕಳು ಅಂದರೆ ಒಂದು ತಲೆಮಾರಿಗೆ ನಿಗದಿಪಡಿಸಲಾಗಿದೆ. ಅವಿಭಕ್ತ ಕುಟುಂಬಗಳಿದ್ದಲ್ಲಿ ವಯಸ್ಕ ದಂಪತಿಗಳ ಕುಟುಂಬ ಮತ್ತು ಅವರ ಮಕ್ಕಳನ್ನು ಒಂದು ಕುಟುಂಬ ಘಟಕವೆಂದು ಪರಿಗಣಿಸಲಾಗುವುದು.

೩. ಮಹಿಳೆಯರ ಸಬಲೀಕರಣದಲ್ಲಿ ಪ್ರಮುಖ ಪಾತ್ರವನ್ನು ವಹಿಸುವುದು.

೪. ಗ್ರಾಮೀಣ ಪ್ರದೇಶಗಳಲ್ಲಿ ನಡೆಯುತ್ತಿರುವ ವಲಸೆಯನ್ನು ತಡೆಗಟ್ಟುವುದು.

೫. ಒಂದು ಆರ್ಥಿಕ ವರ್ಷದಲ್ಲಿ ೧೦೦ ದಿನಗಳ ಕೆಲಸ ನೀಡುವ ಮೂಲಕ ಅಕುಶಲ ಕೂಲಿಕಾರರ ಜೀವನಕ್ಕೆ ಭದ್ರತೆಯನ್ನು ಒದಗಿಸುವುದು.

೬. ರೈತ ಕೂಲಿಕಾರರು ತಮ್ಮ ಕೃಷಿ ಭೂಮಿಯಲ್ಲಿ ಆದ್ಯತೆಯ ಮೇರೆಗೆ ಕೆಲಸ ಮಾಡುವ ಮೂಲಕ ಕೃಷಿಯನ್ನು ಮತ್ತು ತಲಾವಾರು ವರಮಾನವನ್ನು ಅಭಿವೃದ್ಧಿಪಡಿಸಿಕೊಳ್ಳುವುದು.

೭. ಗ್ರಾಮೀಣ ಜನರಿಗೆ ದೀರ್ಘಕಾಲದ ಜೀವನೋಪಾಯದ ಮಾರ್ಗಗಳನ್ನು ಒದಗಿಸುವುದು. ಹೀಗೆ ಹಲವಾರು ಉದ್ದೇಶಗಳನ್ನು ಹೊಂದಿದೆ.

## ೪.೪. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿನ ಕಾಮಗಾರಿಗಳು

ಈ ಯೋಜನೆಯಡಿಯಲ್ಲಿ ಹಲವಾರು ಕಾಮಗಾರಿಗಳನ್ನು ಹಮ್ಮಿಕೊಳ್ಳುವುದರ ಮೂಲಕ ಗ್ರಾಮೀಣ ಭಾಗದ ಜನರು ತಮ್ಮ ತಮ್ಮ ಊರುಗಳಲ್ಲಿಯೇ ಕೆಲಸಗಳನ್ನು ಮಾಡಲು ಅನುವು ಮಾಡಿಕೊಟ್ಟಿದೆ. ಮುಖ್ಯವಾಗಿ ಗ್ರಾಮೀಣ ಮಟ್ಟದಲ್ಲಿ ಜಲ ಸಂವರ್ಧನೆ, ಅರಣ್ಯೀಕರಣ, ಕೃಷಿಭೂಮಿ ಅಭಿವೃದ್ಧಿ, ಕೂಡು ರಸ್ತೆ ಅಭಿವೃದ್ಧಿ ಮುಂತಾದ ಕಾಮಗಾರಿಗಳನ್ನು ಎತ್ತಿಕೊಳ್ಳಬಹುದಾಗಿದೆ. ಅಂದರೆ ಈ ಕಾಯಿದೆಯ ಅನುಸೂಚಿ-೧ರಲ್ಲಿ ತಿಳಿಸಿರುವಂತೆ ಲೋಕೋಪಯೋಗಿ ಕೆಲಸಗಳು ಈ ಯೋಜನೆಯ ಕೇಂದ್ರಬಿಂದುವಾಗುತ್ತವೆ. ಅವುಗಳೆಂದರೆ,

೧. ನೀರು ಸಂರಕ್ಷಣೆ ಮತ್ತು ನೀರು ಸಂಗ್ರಹಣೆ ಯೋಜನೆ. ಇದರಲ್ಲಿ ತಿರುವು ಕಾಲುವೆ ನಿರ್ಮಾಣ (ಕಾಂಟೂರ್ ಟ್ರೆಂಚಸ್), ಕೆರೆ ಏರಿ ನಿರ್ಮಾಣ, ಇಂಗು ಗುಂಡಿ(ಅಂಡರ್‌ಗ್ರೌಂಡ್ ಡೈಕ್ಸ್), ಜಲ್ಲಿ ಕಟ್ಟುವುದು, ಮಣ್ಣು ತುಂಬುವುದು (ಗೇಬಿಯನ್ ಸ್ಟ್ರಕ್ಚರ್ಸ್), ಮಣ್ಣಿನಿಂದ ಕಟ್ಟೆ ಕಟ್ಟುವುದು, ನೀರು ತಡೆಯುವ ಕಟ್ಟೆ ಕಟ್ಟುವುದು (ಸ್ಟಾಪ್ ಡ್ಯಾಮ್ಸ್), ಜಿನುಗು ನೀರನ್ನು (ಸ್ಪ್ರಿಂಗ್ ಸೆಡ್) ಅಭಿವೃದ್ಧಿಪಡಿಸುವುದು ಸೇರಿರುತ್ತವೆ.

೨. ಬರ ತಡೆಗೆ ಅರಣ್ಯೀಕರಣ ಮಾಡುವುದು ಮತ್ತು ಗಿಡ ನೆಡಸುವುದು.

೩. ಅತಿ ಚಿಕ್ಕ ಮತ್ತು ಚಿಕ್ಕ ನೀರಾವರಿ ಕೆಲಸಗಳು ಸೇರಿದಂತೆ ನೀರಾವರಿ ಕಾಲುವೆ ನಿರ್ಮಿಸುವುದು.

೪. ನೀರಾವರಿ ಸೌಲಭ್ಯ ಕಲ್ಪಿಸುವ, ಹೊಂಡ ನಿರ್ಮಾಣ(ಡಗ್ ಔಟ್ ಫಾರ್ಮ ಪಾಂಡ್), ತೋಟಗಾರಿಕೆ, ಗಿಡ ನೆಡುವುದು, ಏರಿ ಕಟ್ಟುವುದು ಮತ್ತು ಶೆಡ್ಯೂಲ್ ಒಂದರ ಪ್ಯಾರಾ ೧ಸಿಯಲ್ಲಿ ನೀಡಿರುವ ವಿಶೇಷ ಮನೆಗಳವರು ಹೊಂದಿರುವ ಭೂಮಿಯನ್ನು ಅಭಿವೃದ್ಧಿಪಡಿಸುವುದು.

೫. ಕೆರೆ ಹೂಳು ಎತ್ತುವುದರ ಜೊತೆಗೆ ಪಾರಂಪರಿಕ ಕೆರೆಗಳ ನವೀಕರಣ.

೬. ಭೂ ಅಭಿವೃದ್ಧಿ.

೭. ಪ್ರವಾಹ ನಿಯಂತ್ರಣ ಮತ್ತು ತಗ್ಗುಪ್ರದೇಶದಲ್ಲಿರುವ ಮತ್ತು ಪ್ರವಾಹ ಭೀತಿ ಎದುರಿಸುತ್ತಿರುವ ಪ್ರದೇಶಗಳಲ್ಲಿ ನೀರು ನುಗ್ಗುವುದನ್ನು ತಡೆಯುವ ಕಾಮಗಾರಿಯನ್ನು ಮತ್ತು ಚರಂಡಿಯಲ್ಲಿ ನೀರು ಕಟ್ಟಿಕೊಳ್ಳುವುದನ್ನು ತಡೆದು ಸರಾಗವಾಗಿ ನೀರು ಹರಿಯುವ ಕಾಮಗಾರಿ, ಕರಾವಳಿ ತೀರದಲ್ಲಿ ಕಲ್ಕೊರೆತ ತಡೆಗೆ ತಡೆಗೋಡೆ ನಿರ್ಮಾಣ ಮತ್ತು ಪ್ರವಾಹ ನಿಯಂತ್ರಣ.

೮. ಹಳ್ಳಿಯೊಳಗೆ ರಸ್ತೆ, ಸೇತುವೆ ನಿರ್ಮಾಣದ ಜೊತೆಗೆ ಸರ್ವಕಾಲಿಕ ರಸ್ತೆ, ಹಳ್ಳಿಗೆ ಸಂಪರ್ಕ ಕಲ್ಪಿಸುವ ರಸ್ತೆ ನಿರ್ಮಾಣ.

೯. ಭಾರತ್ ನಿರ್ಮಾಣ್ ರಾಜೀವ್ ಗಾಂಧಿ ಸೇವಾ ಕೇಂದ್ರವನ್ನು ಜ್ಞಾನ ಸಂಪನ್ಮೂಲ ಕೇಂದ್ರವಾಗಿ ತಾಲೂಕು ಮಟ್ಟದಲ್ಲಿ ಕಟ್ಟಲು ಮತ್ತು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಗ್ರಾಮ ಪಂಚಾಯಿತಿ ಭವನ ನಿರ್ಮಾಣ.

೧೦. NADEP ಗೊಬ್ಬರ, ಎರೆಹುಳು ಗೊಬ್ಬರ, ದ್ರವ ಸೂತ್ರದ ಜೈವಿಕ ಎರೆಗೊಬ್ಬರ ತಯಾರಿಯಂಥ ಕೃಷಿಗೆ ಸಂಬಂಧಿಸಿದ ಕೆಲಸಗಳು.

೧೧. ಕೋಳಿಗೂಡು, ಕುರಿದೊಡ್ಡಿ ನಿರ್ಮಿಸುವುದು, ಕಚ್ಚಾನೆಲ ಸಮತಟ್ಟು ಮಾಡುವುದು. ದನ ದೊಡ್ಡಿಯಲ್ಲಿ ಗಂಜಲ ಶೇಖರಣಾ ಕಟ್ಟೆ ಮತ್ತು ಮೇಲಿನ ಕಟ್ಟೆ ಕಟ್ಟುವುದು ಮತ್ತು ದನದ ಮೇವಿಗಾಗಿ ಅಜೋಲಾ ಕಟ್ಟೆ ಕಟ್ಟುವುದು.

೧೨. ಸಾರ್ವಜನಿಕ ಕೆರೆಯಲ್ಲಿ ಮೀನುಗಾರಿಕೆ ಅಭಿವೃದ್ದಿಗೆ ಸಂಬಂಧಿಸಿದ ಕೆಲಸಗಳು.

೧೩. ಕರಾವಳಿ ತೀರದಲ್ಲಿ ಮೀನು ಒಣಗಿಸುವ ಅಂಕಣ ನಿರ್ಮಿಸುವುದು.

೧೪. ಗ್ರಾಮಾಂತರ ಪ್ರದೇಶದಲ್ಲಿ ಶುದ್ಧ ಕುಡಿಯುವ ನೀರಿಗೆ ಸಂಬಂಧಿಸಿದ ನೆನೆಗುಂಡಿ(ಸೋಕ್ ಪಿಟ್), ಮರುಶ್ಚೇತನ ಗುಂಡಿಗಳ(ರೀಚಾರ್ಜ್ ಪಿಟ್ಸ್) ನಿರ್ಮಾಣ.

೧೫. ಗ್ರಾಮೀಣ ಶೌಚಾಲಯಕ್ಕೆ ಸಂಬಂಧಿಸಿದ ಕೆಲಸಗಳಾದ ಪ್ರತಿ ಮನೆಗೆ ಶೌಚಾಲಯ ಕಟ್ಟಿಸಿಕೊಡುವುದು, ಶಾಲೆ ಅಂಗನವಾಡಿಗಳಲ್ಲಿ ಶೌಚಾಲಯ ನಿರ್ಮಿಸುವುದು ಮತ್ತು ಘನ ಮತ್ತು ದ್ರವ ರೂಪದ ತ್ಯಾಜ್ಯ ನಿರ್ವಹಣೆ ಮಾಡುವುದು.

೧೬. ಅಂಗನವಾಡಿ ಕೇಂದ್ರಗಳ ನಿರ್ಮಾಣ.

೧೭. ಶಾಲಾ ಮೈದಾನ ನಿರ್ಮಾಣ.

೧೮. ರಾಜ್ಯ ಸರ್ಕಾರದೊಂದಿಗೆ ಚರ್ಚಿಸಿ ಕೇಂದ್ರ ಸರ್ಕಾರದ ಗಮನಕ್ಕೆ ತಂದು ಅಂಗೀಕಾರ ಪಡೆದ ಇತರೆ ಯಾವುದೇ ಗ್ರಾಮೀಣಾಭಿವೃದ್ಧಿ ಕೆಲಸಗಳು.

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕೈಗೊಳ್ಳುವ ಉದ್ದೇಶಿತ ಕೆಲಸಗಳು ವಿಶಾಲ ತಳಹದಿಯಿಂದ ರೂಪಿಸಿದಂತವಾಗಿವೆ. ಇದರಿಂದಾಗಿಯೇ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯ (ಅನುಬಂಧ-೨ರ) ಅಡಿಯಲ್ಲಿ ಮತ್ತಷ್ಟು ಕೆಲಸಗಳನ್ನು ಸೇರಿಸಿ ಮಾರ್ಗದರ್ಶಿ ಸೂತ್ರಗಳನ್ನು ನೀಡಲಾಗಿದೆ. ದೀರ್ಘ ಬಾಳಿಕೆಯ ಸ್ವತ್ತಾಗಿ ಮತ್ತು ಪುನರ್ ಬಳಕೆ ಕಾರ್ಯಕ್ಕೆ ಬರುವ ಕಾಮಗಾರಿಗಳನ್ನು ಕೈಗೊಳ್ಳುವುದು ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯ ಉದ್ದೇಶಗಳಲ್ಲಿ ಒಂದು. ಹಾಗೆಯೇ ಗ್ರಾಮೀಣ ಪ್ರದೇಶಗಳಲ್ಲಿನ ಸಮಸ್ಯೆಗಳಿಗೆ ತಕ್ಕಂತೆ ಅಲ್ಲಿನ ಜನರ ಒತ್ತಾಸೆಗೆ ತಕ್ಕಂತೆ ಈ ಕಾಯಿದೆ ಅಡಿಯಲ್ಲಿ ನಿರ್ವಹಿಸಬೇಕಾದ ಕಾಮಗಾರಿಗಳ ಸಂಖ್ಯೆಯೂ ಅಧಿಕವಾಗಿವೆ. ಅಂದರೆ ಹೊಸ ಹೊಸ ಕಾಮಗಾರಿಗಳು ಈ ಕಾಯಿದೆ ಅಡಿಯಲ್ಲಿ ಚಾಲನೆಗೆ ಬಂದಿವೆ. ಹೀಗೆ ಚಾಲನೆಗೆ ಬಂದಿರುವಂತಹ ಕಾಮಗಾರಿಗಳು ಈ ಕಾಯಿದೆಯ ಕೆಲವು ನಿಯಮಗಳಿಗೆ ಒಳಪಟ್ಟಿರುತ್ತವೆ. ಅಂದರೆ

೧. ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯಡಿ ನೀಡಿರುವ ಅಂಗೀಕೃತ ಕೆಲಸಗಳ ಪಟ್ಟಿಯಿಂದ ನಿರೀಕ್ಷಿತ ಉದ್ಯೋಗ ಸೃಷ್ಟಿ ಆಗುವುದಿಲ್ಲ ಎಂಬ ನಂಬಿಕೆ ರಾಜ್ಯ ಸರ್ಕಾರಕ್ಕೆ ಇದ್ದರೆ, ಅಂಗೀಕೃತ ಪಟ್ಟಿಯಲ್ಲಿ ನೀಡಿರುವ ಕೆಲಸದ ಜೊತೆ ಮತ್ತಷ್ಟು ಹೆಚ್ಚುವರಿ ಉದ್ಯೋಗ ಸೃಷ್ಟಿ ಬಯಸಿದರೆ ಮತ್ತು ಹೆಚ್ಚುವರಿ ಹೊಸ ಕೆಲಸದಿಂದ ದೀರ್ಘ ಬಾಳಿಕೆಗೆ ಬರುವ ಸ್ವತ್ತಾಗಿ ಗ್ರಾಮೀಣ ಬಡಜನರ ಜೀವನೋಪಾಯದ ಸಂಪನ್ಮೂಲವಾಗುತ್ತದೆ ಎಂಬ ವಿಶ್ವಾಸವಿದ್ದರೆ ಕೇಂದ್ರ ಸರ್ಕಾರಕ್ಕೆ ಹೊಸ ಕಾಮಗಾರಿ ಪ್ರಸ್ತಾವನೆಯನ್ನು ಪರಿಶೀಲನೆಗೆ ಕಳುಹಿಸಿ ಒಪ್ಪಿಗೆ ಪಡೆಯಬಹುದು.

೨. ರಾಜ್ಯ ಸರ್ಕಾರ ಸಲ್ಲಿಸಿರುವ ಹೊಸ ಕಾಮಗಾರಿ ಕೆಲಸಗಳ ಪ್ರಸ್ತಾವನೆ ಈ ಕೆಳಕಂಡ ಅಂಶಗಳನ್ನು ಹೊಂದಿರಬೇಕು

ಎ. ಕೆಲಸಕ್ಕೆ ಸಮರ್ಥನೆ ಇರಬೇಕು

ಬಿ. ಕೆಲಸಗಾರರಾಗುವ ಜನರ ಸಂಖ್ಯೆ ಸಾಕಷ್ಟಿರಬೇಕು(ಕಾರ್ಮಿಕ ಸಾಮರ್ಥ್ಯ)

ಸಿ. ದೀರ್ಘ ಬಾಳಿಕೆಯ ಸ್ವತ್ತಾಗಿ ರೂಪಿತವಾಗಬೇಕು

ಡಿ. ಗ್ರಾಮೀಣ ಬಡಜನರ ಜೀವನೋಪಾಯಕ್ಕೆ ಈ ಕೆಲಸ ಹೇಗೆ ಬಲಿಷ್ಠ ಆಧಾರ ಒದಗಿಸುತ್ತದೆ ಎಂಬುದು ನಿರೂಪಿತವಾಗಬೇಕು

ಇ. ಸ್ಥಳೀಯ ಆರ್ಥಿಕ ಸ್ಥಿತಿ ಮತ್ತು ಜನರ ಜೀವನ ಗುಣಮಟ್ಟ ಸುಧಾರಿಸಿ ಉದ್ಯೋಗವಕಾಶ ಸೃಷ್ಟಿಸುವ ಮತ್ತು ಲಾಭ ತರುವಂಥ ಕೆಲಸವಾಗಿರಬೇಕು.

ಹೀಗೆ ಕೆಲವು ನಿಯಮಗಳನ್ನು ರಾಜ್ಯ ಸರಕಾರಗಳು ಪಾಲಿಸಬೇಕಾಗುತ್ತದೆ. ಹೀಗೆ ದೇಶದ ಪ್ರತಿಯೊಂದು ರಾಜ್ಯವೂ ಕೂಡ ತನ್ನ ರಾಜ್ಯದಲ್ಲಿನ ಗ್ರಾಮೀಣ ಭಾಗದ ಜನರು ವಲಸೆ ಹೋಗುವುದನ್ನು ತಡೆಗಟ್ಟುವುದು ಮತ್ತು ಆರ್ಥಿಕವಾಗಿ ಸಬಲರಾಗಲು ಕೇಂದ್ರ ಕಾಯಿದೆಯ ಅಡಿಯಲ್ಲಿ ಹಲವಾರು ಕಾಮಗಾರಿಗಳನ್ನು ಹಮ್ಮಿಕೊಳ್ಳಬಹುದಾಗಿದೆ.

**೪.೫. ಯೋಜನೆಯ ಅನುಷ್ಟಾನದಲ್ಲಿ ಪಂಚಾಯತ್‌ರಾಜ್ ಸಂಸ್ಥೆಗಳ ಪಾತ್ರ**

ಈ ಕಾಯಿದೆಯನ್ನು ಜಾರಿಗೆ ತರುವ ಜವಾಬ್ದಾರಿಯು ರಾಜ್ಯ ಸರಕಾರದಿಂದ ಹಿಡಿದು ಜಿಲ್ಲಾ, ತಾಲೂಕು, ಗ್ರಾಮ ಪಂಚಾಯ್ತಿಗಳವರೆಗೆ ವಿಸ್ತರಿಸಿಕೊಳ್ಳುತ್ತದೆ. ಅಧಿಕಾರದ ವಿಕೇಂದ್ರೀಕರಣದಂತೆ ಅನುಷ್ಠಾನದ ಜವಾಬ್ದಾರಿಯನ್ನು ವಿಕೇಂದ್ರೀಕರಿಸಿ ಕೊನೆಯಲ್ಲಿ ಗ್ರಾಮ ಪಂಚಾಯಿತಿಗಳಿಗೆ ನೇರವಾದ ಹೊಣೆಗಾರಿಕೆಯನ್ನು ನೀಡಲಾಗಿದೆ. ಮುಖ್ಯವಾಗಿ ಈ ಹಿಂದೆ ತಿಳಿಸಿದಂತೆ ರಾಜ್ಯ ಸರಕಾರ, ಜಿಲ್ಲಾ ಸಮನ್ವಯಾಧಿಕಾರಿ, ಕಾರ್ಯಕ್ರಮ ಅಧಿಕಾರಿ, ಮಧ್ಯವರ್ತಿ ಪಂಚಾಯಿತಿ, ಗ್ರಾಮ ಪಂಚಾಯಿತಿ, ಗ್ರಾಮ ಸಭೆ ಹಾಗೂ ಅನುಷ್ಟಾನ ಅಧಿಕಾರ ವರ್ಗಗಳು. ಈ ವಿಧದಲ್ಲಿ ಅಧಿಕಾರ ವರ್ಗಗಳ ನಡುವೆ ವಿಸ್ತಾರವಾದ ರೀತಿಯಲ್ಲಿ ಜವಾಬ್ದಾರಿಯು ಹಂಚಿಕೆಯಾಗಿರುತ್ತದೆ. ಮುಖ್ಯವಾಗಿ ಗ್ರಾಮ ಪಂಚಾಯತಿ, ತಾಲೂಕ ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಗಳು ತಮ್ಮದೇ ಆದಂತಹ ಕಾರ್ಯಗಳನ್ನು ನಿಭಾಯಿಸುತ್ತಿರುತ್ತವೆ.

**೪.೫.೧. ಗ್ರಾಮ ಪಂಚಾಯತಿಗಳ ಜವಾಬ್ದಾರಿ**

ಗ್ರಾಮ ಪಂಚಾಯತಿಗಳು ಪ್ರಸ್ತುತ ಸಂದರ್ಭದಲ್ಲಿ ಗ್ರಾಮಗಳ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರವನ್ನು ವಹಿಸಿವೆ. ದೇಶದ ಅಭಿವೃದ್ಧಿಗಾಗಿ ಜಾರಿಯಾದಂತಹ ಯಾವುದೇ ಯೋಜನೆಗಳಾಗಲೀ ಅವು ಗ್ರಾಮ ಪಂಚಾಯತಿಯ ಮೂಲಕವೇ ಅನುಷ್ಠಾನಗೊಳ್ಳಬೇಕಾಗುತ್ತದೆ. ಹಾಗಾಗಿ ಪ್ರತಿಯೊಂದು ಯೋಜನೆಯನ್ನೂ ಸಹ ತುಂಬಾ ಜತನದಿಂದ ಅನಿಷ್ಠಾನಗೊಳಿಸುವ ಜವಾಬ್ದಾರಿ ಗ್ರಾಮ ಪಂಚಾಯತಿಗಳಿಗಿದೆ. ಅದೇ ರೀತಿಯಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಅನುಷ್ಠಾನಗೊಳಿಸುವಲ್ಲಿಯೂ ಸಹ ಗ್ರಾಮ ಪಂಚಾಯತಿಗಳು ಹಲವಾರು ಜವಾಬ್ದಾರಿಗಳನ್ನು ನಿಭಾಯಿಸುತ್ತಿವೆ. ಮುಖ್ಯವಾಗಿ

- ವಾರ್ಡ್ ಅಥವಾ ಗ್ರಾಮ ಸಭೆಗಳ ಶಿಫಾರಸ್ಸುಗಳ ಅನ್ವಯ ಯೋಜನೆಗಳನ್ನು ಗುರುತಿಸಿ ಅಂತಹ ಯೋಜನೆಗಳನ್ನು ಜಾರಿಗೊಳಿಸುವುದು ಮತ್ತು ಮೇಲ್ವಿಚಾರಣೆ ಮಾಡುವುದು.

◂ ಯೋಜನೆಗಳನ್ನು ತಯಾರಿಸುವಾಗ ಅಂದಾಜು ಬೇಡಿಕೆಯ ಎರಡು ಪಟ್ಟು ಯೋಜನೆಗಳನ್ನು ತಯಾರಿಸುವುದು.

◂ ಪ್ರಸ್ತಾವನೆಗಳನ್ನು ಗ್ರಾಮ ಪಂಚಾಯತಿಯ ಉತ್ಪಾದನಾ ಸಮಿತಿ ಪರಿಶೀಲಿಸಬೇಕು ಹಾಗೂ ಈ ಪ್ರಸ್ತಾವನೆಗಳಿಗೆ ಗ್ರಾಮ ಸಭೆ ಮತ್ತು ಗ್ರಾಮ ಪಂಚಾಯತಿಯ ಅನುಮೋದನೆ ಪಡೆಯಬೇಕು.

◂ ವಿವಿಧ ಕಾಮಗಾರಿಗಳ ನಡುವಿನ ಆದ್ಯತಾ ಕ್ರಮವನ್ನು ಒಳಗೊಂಡಂತೆ ಅಭಿವೃದ್ಧಿ ಯೋಜನೆಗಳಿಗಾಗಿ ಪ್ರಸ್ತಾವನೆಗಳನ್ನು ಜಾರಿಗೊಳಿಸುವ ಮುಂಚೆ ಪರಿಷ್ಕರಣೆ ಹಾಗೂ ಪ್ರಾಥಮಿಕ ಅನುಮೋದನೆಗಾಗಿ ಕಾರ್ಯಕ್ರಮ ಅಧಿಕಾರಿಗೆ ಒಂದು ತಿಂಗಳೊಳಗಾಗಿ ಕಳುಹಿಸಬೇಕು.

◂ ಕಾರ್ಯಕ್ರಮ ಅಧಿಕಾರಿಯಿಂದ ಮಂಜೂರಾದಂತಹ ಯಾವುದೇ ಯೋಜನೆಯನ್ನು ಗ್ರಾಮ ಪಂಚಾಯತಿ ವ್ಯಾಪ್ತಿಯೊಳಗೆ ಕೈಗೆತ್ತಿಕೊಳ್ಳಬಹುದು.

◂ ನೋಂದಾಯಿಸಿದ ಅರ್ಜಿದಾರರಿಗೆ ಉದ್ಯೋಗ ಚೀಟಿಗಳನ್ನು ಹಾಗೂ ಪಾಸ್ ಪುಸ್ತಕಗಳನ್ನು ವಿತರಿಸಿ, ಉದ್ಯೋಗಾವಕಾಶಗಳನ್ನು ಕಲ್ಪಿಸುವುದು.

◂ ಗ್ರಾಮ ಪಂಚಾಯಿತಿಯು ಅರ್ಜಿದಾರರಿಗೆ ಉದ್ಯೋಗಾವಕಾಶಗಳನ್ನು ಹಂಚುವುದು ಹಾಗೂ ಅವರನ್ನು ಕೆಲಸಕ್ಕೆ ಹಾಜರಾಗುವಂತೆ ತಿಳಿಸುವುದು.

◂ ಈ ಕಾರ್ಯಯೋಜನೆಯಡಿಯಲ್ಲಿ ಕೈಗೊಳ್ಳುವ ಕಾಮಗಾರಿಗಳ ಅಗತ್ಯ, ತಾಂತ್ರಿಕ ಮಾನದಂಡಗಳು ಹಾಗೂ ಅಳತೆಯನ್ನು ಪೂರೈಸುವುದು.

◂ ಅರಣ್ಯ, ಲೋಕೋಪಯೋಗಿ ಮತ್ತು ನೀರಾವರಿ ಇಲಾಖೆಗಳು ಗ್ರಾಮ ಪಂಚಾಯತಿಯೊಂದಿಗೆ ಸಮಾಲೋಚಿಸಿ ಯೋಜನೆಗಳನ್ನು ತಯಾರಿಸಬಹುದು.

◂ ಯೋಜನೆಗಳನ್ನು ತಯಾರಿಸಲು ಭೂಸೇನೆ ನಿರ್ಮಿತಿ ಕೇಂದ್ರ, ಇಂಜಿನಿಯರಿಂಗ್ ಕಾಲೇಜ್ ಅಥವಾ ಕೃಷಿ ವಿಶ್ವವಿದ್ಯಾಲಯದ ನೇರವನ್ನು ಪಡೆಯಬಹುದು. ಇದಕ್ಕಾಗಿ ಯೋಜನೆಯ ಒಟ್ಟು ವೆಚ್ಚದ ಶೇ.೩ರಷ್ಟು ಸಲಹಾ ವೆಚ್ಚವನ್ನು ಪಾವತಿಸಬಹುದು. ಈ ಎಲ್ಲಾ ಕಾರ್ಯಗಳನ್ನು ಗ್ರಾಮ ಪಂಚಾಯತಿಗಳು ತಮ್ಮ ಕಾರ್ಯ ವ್ಯಾಪ್ತಿಯಲ್ಲಿ ನಿರ್ವಹಿಸಬೇಕಾಗುತ್ತದೆ. ಈ ಜವಾಬ್ದಾರಿಗಳ ಜೊತೆಗೆ ಇನ್ನು ಯೋಜನೆಯ ಅನುಷ್ಠಾನದ ಸಂದರ್ಭದಲ್ಲಿ ಗ್ರಾಮ ಪಂಚಾಯತಿಗಳು ಕೆಲವು ನಿಯಮಗಳನ್ನು ಪಾಲಿಸಬೇಕಾಗುತ್ತದೆ. ಗ್ರಾಮ ಪಂಚಾಯತಿಯು ಕನಿಷ್ಠ ಶೇ.೫೦ ರಷ್ಟು ಕಾಮಗಾರಿಗಳನ್ನು (ಅನುದಾನದ ರೂಪದಲ್ಲಿ) ನಿರ್ವಹಿಸುವುದು. ಜಿಲ್ಲಾ ಪಂಚಾಯತ್ ವ್ಯಾಪ್ತಿಗೆ ಬರುವ ಇಲಾಖೆಗಳ ಮೂಲಕ ಯೋಜನೆಯನ್ನು ಅನುಷ್ಠಾನಗೊಳಿಸಬೇಕು. ಅಗತ್ಯವಿದ್ದಲ್ಲಿ ಇತರೆ ಇಲಾಖೆಗಳು ಮತ್ತು ಸ್ವಸಹಾಯ ಸಂಘಗಳಿಗೆ ಕೆಲಸ ನೀಡಬಹುದಾಗಿದೆ. ಗ್ರಾಮ ಪಂಚಾಯತಿಯ ಉತ್ಪಾದನಾ ಸಮಿತಿಯು ಕಾಮಗಾರಿಗಳ ಅನುಷ್ಠಾನದ ಮೇಲುಸ್ತುವಾರಿ ಮಾಡಬೇಕು ಮತ್ತು ಗ್ರಾಮ

ಪಂಚಾಯಿತಿಯು ಉಪ ಸಮಿತಿಗಳನ್ನು ರಚಿಸಿ ವಹಿಸಬಹುದು. ಸಾಮಗ್ರಿಗಳಿಗಾಗಿ ಸಂದಾಯ ಮಾಡುವ ರೂ.೫೦೦ ಗಳಿಗಿಂತ ಹೆಚ್ಚಿನ ಸಂದಾಯಗಳನ್ನು ಅಕೌಂಟ್ ಪೇ ಚೆಕ್ ಮೂಲಕ ನೀಡತಕ್ಕದ್ದು. ಪ್ರತಿಯೊಂದು ಯೋಜನೆ ಅಥವಾ ಕಾಮಗಾರಿಯ ಕನಿಷ್ಠ ಎರಡು ಛಾಯಚಿತ್ರಗಳಿರಬೇಕು. ಸ್ವಂತ ಚೆಕ್‌ಗಳ ಮೇಲೆ ಪಡೆಯುವ ಹಣವು ಗರಿಷ್ಟ ರೂ.೫೦೦ ಗಳಿಗೆ ಸೀಮಿತವಾಗಿರತಕ್ಕದ್ದು. ಯೋಜನೆಯ ಅನುಷ್ಠಾನಕ್ಕೆ ಕಂಟ್ರಾಕ್ಟರ್‌ಗಳನ್ನು ಬಳಸಲೇಬಾರದು. ಯಂತ್ರಗಳ ಬಳಕೆ ಮಾಡುವುದಾದರೂ ಯೋಜನಾ ವೆಚ್ಚದ ಶೇ.೬೦ಕ್ಕೆ (ಅಂದರೆ ಕೂಲಿಯಾಗಿ ನೀಡಬೇಕಾದ ಮೊತ್ತಕ್ಕೆ) ಹೊಂದಾಣಿಕೆ ಮಾಡಿಕೊಳ್ಳತಕ್ಕದಲ್ಲ. ಅನಿವಾರ್ಯ ಸಂದರ್ಭಗಳಲ್ಲಿ ಶೇ.೪೦ರ ಭಾಗದಲ್ಲಿ ಯಂತ್ರಗಳ ಬಳಕೆ ಬಾಬ್ತು ವೆಚ್ಚವನ್ನು ಹೊಂದಾಣಿಕೆ ಮಾಡಿಕೊಳ್ಳಬಹುದು. ಹಾಜರಿ ಪಟ್ಟಿಗಳ ನಿರ್ವಹಣೆಗಾಗಿ ಕನಿಷ್ಠ ೫೦ ಕಾರ್ಮಿಕರಿಗೆ ಒಬ್ಬರಂತೆ ಅಕ್ಷರಸ್ಥರನ್ನು ನೇಮಿಸಿಕೊಳ್ಳಬಹುದು. ಹೀಗೆ ಗ್ರಾಮ ಪಂಚಾಯತಿಗಳ ಮೇಲೆಯೇ ಅಧಿಕ ಜವಾಬ್ದಾರಿಗಳಿರುವುದನ್ನು ಕಾಣಬಹುದಾಗಿದೆ.

### ೪.೫.೨. ತಾಲೂಕು ಪಂಚಾಯಿತಿಯ ಜವಾಬ್ದಾರಿ

ಉದ್ಯೋಗ ಖಾತರಿ ಯೋಜನೆಯನ್ನು ಜಾರಿಗೆ ತರುವಲ್ಲಿ ತಾಲೂಕು ಪಂಚಾಯತಿಗಳ ಜವಾಬ್ದಾರಿಯೂ ಸಹ ಮುಖ್ಯವಾಗಿರುತ್ತದೆ. ಅಂದರೆ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯಲ್ಲಿಯೇ ತಾಲೂಕು ಪಂಚಾಯತಿಗಳು ಮಾಡುವ ಕಾರ್ಯಗಳನ್ನು ಅಥವಾ ಜವಾಬ್ದಾರಿಗಳನ್ನು ಸೂಚಿಸಲಾಗಿದೆ. ಅವುಗಳೆಂದರೆ

- ಗ್ರಾಮ ಪಂಚಾಯಿತಿಯಿಂದ ಬಂದ ಪ್ರಸ್ತಾವನೆಗಳನ್ನು ಒಂದು ತಿಂಗಳೊಳಗೆ ಸಾಮಾನ್ಯಸ್ಥಾಯಿ ಸಮಿತಿ ಅಥವಾ ಸಾಮಾನ್ಯ ಸಭೆಯಲ್ಲಿಟ್ಟು ಅನುಮೋದನೆ ಪಡೆಯಬೇಕು.

- ಹೆಚ್ಚುವರಿ ಕಾಮಗಾರಿಗಳ ಅಗತ್ಯವಿದ್ದಲ್ಲಿ ಪ್ರಸ್ತಾವನೆಯನ್ನು ಗ್ರಾಮ ಪಂಚಾಯಿತಿಯಿಂದ ಎರಡು ತಿಂಗಳೊಳಗೆ ಪಡೆಯಬೇಕು. ಇಲ್ಲವೇ ಸಾಮಾನ್ಯ ಸ್ಥಾಯೀ ಸಮಿತಿಯ ಶಿಫಾರಸ್ಸಿನ ಮೇರೆಗೆ ತಾಲೂಕು ಪಂಚಾಯಿತಿಯೇ ತಯಾರಿಸಬೇಕು.

- ಸಾಮಾನ್ಯ ಸ್ಥಾಯಿ ಸಮಿತಿಯ ಶಿಫಾರಸ್ಸಿನ ಮೇರೆಗೆ ಒಂದು ಗ್ರಾಮ ಪಂಚಾಯತಿಗಿಂತ ಹೆಚ್ಚು ಗ್ರಾಮ ಪಂಚಾಯತಿಯೊಳಗೆ ಬರುವ ಯೋಜನೆಗಳನ್ನು ತಯಾರಿಸಬೇಕು.

- ಸಾಮಾನ್ಯ ಸ್ಥಾಯಿ ಸಮಿತಿಯು ಕಾಮಗಾರಿಗಳ ಅನುಷ್ಠಾನದ ಮೇಲುಸ್ತುವಾರಿ ಮಾಡಬೇಕು. ಹೀಗೆ ತಾಲೂಕು ಪಂಚಾಯತಿಗಳು ತಮ್ಮ ಜವಾಬ್ದಾರಿಗಳನ್ನು ಈ ಕಾಯಿದೆಯಡಿಯಲ್ಲಿ ನಿಭಾಯಿಸಬೇಕಾಗುತ್ತದೆ.

### ೪.೫.೩. ಜಿಲ್ಲಾ ಪಂಚಾಯಿತಿಯ ಜವಾಬ್ದಾರಿ

ಗ್ರಾಮ ಪಂಚಾಯತಿ ಮತ್ತು ತಾಲೂಕು ಪಂಚಾಯತಿಗಳ ನಂತರದಲ್ಲಿ ಮೇಲ್ಮಟ್ಟದ ಸ್ಥರದಲ್ಲಿ ಜಿಲ್ಲಾ ಪಂಚಾಯತಿಗಳು ಉದ್ಯೋಗ ಖಾತರಿ ಕಾಯಿದೆಯಡಿಯಲ್ಲಿ ತಮ್ಮ ಕಾರ್ಯವನ್ನು ನಿಭಾಯಿಸಬೇಕಾಗುತ್ತದೆ.

◂ ಸಾಮಾನ್ಯ ಸ್ಥಾಯಿ ಸಮಿತಿ ಶಿಫಾರಸ್ಸಿನ ಮೇರೆಗೆ ಒಂದು ತಾಲ್ಲೂಕಿಗಿಂತ ಹೆಚ್ಚು ತಾಲೂಕುಗಳ ವ್ಯಾಪ್ತಿಯಲ್ಲಿ ಬರುವ ಯೋಜನೆಗಳನ್ನು ತಯಾರಿಸಬೇಕು.

◂ ಸಾಮಾನ್ಯ ಸ್ಥಾಯಿ ಸಮಿತಿಯು ಕಾಮಗಾರಿಗಳ ಅನುಷ್ಠಾನದ ಮೇಲುಸ್ತುವಾರಿ ಮಾಡಬೇಕು.

◂ ಕಾರ್ಯಕ್ರಮದಡಿಯಲ್ಲಿ ಕೈಗೊಳ್ಳಲಾಗುವ ಯೋಜನೆಗಳಿಗೆ ಅಂತಿಮ ರೂಪ ನೀಡಿ ಅನುಮೋದಿಸಬೇಕು.

ಹೀಗೆ ಯೋಜನೆಯ ಅನುಷ್ಠಾನದ ಸಂದರ್ಭದಲ್ಲಿ ಗ್ರಾಮ ಪಂಚಾಯತಿ, ತಾಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಗಳಿಗೆ ಉದ್ಯೋಗ ಖಾತರಿ ಕಾಯಿದೆಯು ಪ್ರತ್ಯೇಕವಾಗಿ ಜವಾಬ್ದಾರಿಗಳನ್ನು ವಹಿಸಿಕೊಟ್ಟಿದೆ. ಒಟ್ಟಾರೆಯಾಗಿ ಉದ್ಯೋಗ ಖಾತರಿ ಯೋಜನೆಯನ್ನು ಅನುಷ್ಠಾನಕ್ಕೆ ತರುವಲ್ಲಿ ರಾಜ್ಯ ಸರಕಾರದಿಂದ ಹಿಡಿದು ಗ್ರಾಮ ಪಂಚಾಯ್ತಿಗಳವರೆಗೆ ಹಲವಾರು ಜವಾಬ್ದಾರಿಗಳು ಹಂಚಲ್ಪಟ್ಟಿವೆ.

**೪.೬. ಉದ್ಯೋಗ ಖಾರತಿ ಯೋಜನೆಯಲ್ಲಿ ಪ್ರಮುಖ ಭಾಗೀದಾರರು ಮತ್ತು ಅವರ ಜವಾಬ್ದಾರಿಗಳು**

ರಾಷ್ಟ್ರೀಯ ಗ್ರಮೀಣ ಉದ್ಯೋಗ ಖಾತರಿ ಕಾಯಿದೆಯನ್ವಯ ಕಾರ್ಯ ನಿರ್ವಹಣೆ ನಡೆಯುವ ಹಾದಿಯಲ್ಲಿ ಹಳ್ಳಿಯಿಂದ ಹಿಡಿದು ರಾಷ್ಟ್ರಮಟ್ಟದವರೆಗೆ ದೊಡ್ಡ ಸಂಖ್ಯೆಯ ಭಾಗೀದಾರರು ಇರುತ್ತಾರೆ. ಅವರಲ್ಲಿ ಮುಖ್ಯವಾಗಿ ಕೂಲಿ ಬಯಸುವವರು, ಗ್ರಾಮಸಭಾ, ಮೂರು ಹಂತದ ಪಂಚಾಯತ್ ರಾಜ್ ಸಂಸ್ಥೆಗಳು, ತಾಲೂಕು ಹಂತದಲ್ಲಿ ಕಾರ್ಯಕ್ರಮ ಅಧಿಕಾರಿ, ಜಿಲ್ಲಾ ಕಾರ್ಯಕ್ರಮ ಸಮನ್ವಯಾಧಿಕಾರಿ, ರಾಜ್ಯ ಸರಕಾರ, ಗ್ರಮೀಣಾಭಿವೃದ್ಧಿ ಸಚಿವಾಲಯ, ನಾಗರೀಕ ಸಮಾಜ ಮತ್ತು ಇತರ ಭಾಗೀದಾರರು ಪ್ರಮುಖರಾಗಿದ್ದಾರೆ.

೧. **ಗ್ರಾಮ ಮಟ್ಟ:** ಇದರಲ್ಲಿ ಕೂಲಿ ಬಯಸುವವರು, ಗ್ರಾಮಸಭಾ, ವಾರ್ಡ್‌ಸಭಾ ಮತ್ತು ಗ್ರಾಮ ಪಂಚಾಯತಿ ಕಂಡುಬರುತ್ತವೆ.

೨. **ತಾಲೂಕ ಮಟ್ಟ: ೨.೨.೧. ಕಾರ್ಯಕ್ರಮ ಅಧಿಕಾರಿ(ಪಿಓ):** ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗೆ (ಎಂಜಿಎನ್‌ಆರ್‌ಇಜಿಎಸ್) ಸಂಬಂಧಿಸಿದಂತೆ ತಾಲೂಕು ಮಟ್ಟದಲ್ಲಿ ಕಾರ್ಯಕ್ರಮ ಅಧಿಕಾರಿಯು ಸಂಯೋಜಕರಾಗಿ ಕೆಲಸ ನಿರ್ವಹಿಸುವರು. ಉದ್ಯೋಗಕ್ಕಾಗಿ ಯಾರೇ ಅರ್ಜಿ ಸಲ್ಲಿಸಿದರೂ ಅವರಿಗೆ ಹದಿನೈದು ದಿನಗಳ ಒಳಗಾಗಿ ಕೆಲಸ ದೊರೆಯುವಂತೆ ಮಾಡುವುದು ಪ್ರಾಥಮಿಕ ಜವಾಬ್ದಾರಿಯಾಗಿರುತ್ತದೆ. ಕಾರ್ಯಕ್ರಮ ಅಧಿಕಾರಿಯ ಇತರ ಮುಖ್ಯ ಜವಾಬ್ದಾರಿಗಳೆಂದರೆ,

೧. ಗ್ರಾಮಪಂಚಾಯತಿಗಳಿಂದ ಪಡೆದುಕೊಂಡ ಎಲ್ಲ ಯೋಜನಾ ಪ್ರಸ್ತಾವನೆಗಳನ್ನು ಪರಿಶೀಲಿಸಿ, ಕ್ರೋಢಿಕರಿಸಿ ತಾಲೂಕು ಯೋಜನೆಯನ್ನು ಸಿದ್ಧಪಡಿಸಿ ಜಿಲ್ಲಾ ಪಂಚಾಯತಿಗೆ ಪರಿಶೀಲನೆ ಹಾಗೂ ಕ್ರೋಢೀಕರಣಕ್ಕೆ ಸಲ್ಲಿಸುವುದು.

೨. ತಾಲ್ಲೂಕಿನಲ್ಲಿರುವ ಪ್ರತಿಯೊಂದು ಗ್ರಾಮಪಂಚಾಯತಿಯಲ್ಲಿ ಬರುವ ಕೆಲಸದ ಬೇಡಿಕೆಯನ್ನು ತಾಲ್ಲೂಕು ಯೋಜನೆಯಡಿಯಲ್ಲಿನ ಕಾಮಗಾರಿಗಳಿಗೆ ಉದ್ಯೋಗಾವಕಾಶಗಳನ್ನು ಹೊಂದಾಣಿಕೆ ಮಾಡುವುದು.

೩. ತಳಹಂತದ ಸಮೀಕ್ಷೆಯ (Baseline Survey) ಮೂಲಕ ಕೆಲಸದ ಬೇಡಿಕೆಯನ್ನು ನಿರ್ಧರಿಸಿರುವುದನ್ನು ಖಾತರಿಪಡಿಸಿಕೊಳ್ಳುವುದು.

೪. ತಾಲ್ಲೂಕಿನ ವ್ಯಾಪ್ತಿಯಲ್ಲಿ ಗ್ರಾಮ ಪಂಚಾಯಿತಿಗಳು ಹಾಗೂ ಇತರ ಅನುಷ್ಠಾನ ಸಂಸ್ಥೆಗಳಿಂದ ಕೈಗೊಳ್ಳಲಾಗಿರುವ ಕಾಮಗಾರಿಗಳ ಉಸ್ತುವಾರಿ ಹಾಗೂ ಮೇಲ್ವಿಚಾರಣೆ ಮಾಡುವುದು.

೫. ಎಲ್ಲ ಕೆಲಸಗಾರರಿಗೆ ಸಕಾಲದಲ್ಲಿ ಸರಿಯಾದ ಕೂಲಿ ಪಾವತಿಯಾಗುವಂತೆ ಹಾಗೂ ಸಕಾಲದಲ್ಲಿ ಉದ್ಯೋಗ ಒದಗಿಸಲಾಗದ ಸಂದರ್ಭಗಳಲ್ಲಿ ನಿರುದ್ಯೋಗ ಭತ್ಯೆ ಪಾವತಿಯಾಗುವಂತೆ ನೋಡಿಕೊಳ್ಳುವುದು.

೬. ಸಂಪನ್ಮೂಲಗಳನ್ನು ಪಡೆದುಕೊಂಡಿರುವುದಕ್ಕೆ, ಬಿಡುಗಡೆ ಮಾಡಿರುವುದಕ್ಕೆ ಹಾಗೂ ಬಳಕೆಮಾಡಿರುವುದರ ಬಗ್ಗೆ ಸರಿಯಾದ ಲೆಕ್ಕಗಳ ನಿರ್ವಹಣೆ.

೭. ತಾಲ್ಲೂಕಿನ ವ್ಯಾಪ್ತಿಯಲ್ಲಿ ಕುಂದುಕೊರತೆಗಳನ್ನು ನಿವಾರಿಸುವುದು. ಕಾರ್ಯಕ್ರಮ ಅಧಿಕಾರಿ ಪ್ರತಿಯೊಂದು ದೂರನ್ನೂ ದೂರು ದಾಖಲಾತಿ ಮಾಡುವ ವಹಿಯಲ್ಲಿ ದಾಖಲುಮಾಡಿಕೊಂಡು ದಿನಾಂಕ ಮತ್ತು ಕ್ರಮಸಂಖ್ಯೆ ಇರುವ ಸ್ವೀಕೃತಿಯನ್ನು ನೀಡತಕ್ಕದ್ದು. ಕಾಯ್ದೆಯ ೨೩(೬) ಪ್ರಕರಣಕ್ಕನುಗುಣವಾಗಿ ಕಾರ್ಯಕ್ರಮ ಅಧಿಕಾರಿಯು ಗ್ರಾಮ ಪಂಚಾಯಿತಿಯ ಮೂಲಕ ಕಾಯ್ದೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಕಾರ್ಯಾಚರಣೆ ಸಹ ಸೇರಿದಂತೆ ತಮ್ಮ ವ್ಯಾಪ್ತಿಗೆ ಸೇರಿದ ಎಲ್ಲ ದೂರುಗಳನ್ನು ೭ ದಿನಗಳೊಳಗೆ ಇತ್ಯರ್ಥ ಮಾಡತಕ್ಕದ್ದು. ಒಂದು ವೇಳೆ ಇಂಥ ಯಾವುದೇ ಒಂದು ದೂರು ಬೇರೆ ಯಾವುದೇ ಪ್ರಾಧಿಕಾರದ ತೀರ್ಮಾನದ ವ್ಯಾಪ್ತಿಗೆ ಬರುವುದಾದಲ್ಲಿ ಕಾರ್ಯಕ್ರಮ ಅಧಿಕಾರಿಯು ದೂರನ್ನು ಕುರಿತಂತೆ ಪ್ರಾಥಮಿಕ ತನಿಖೆಯನ್ನು ಮಾಡಿ ಏಳು ದಿನಗಳೊಳಗೆ ಅದನ್ನು ಸಂಬಂಧಪಟ್ಟ ಪ್ರಾಧಿಕಾರಕ್ಕೆ ಒಪ್ಪಿಸತಕ್ಕದ್ದು ಹಾಗೂ ಈ ಬಗ್ಗೆ ದೂರು ಸಲ್ಲಿಸಿದವರಿಗೆ ಮಾಹಿತಿ ನೀಡತಕ್ಕದ್ದು.

೮. ಸಾಮಾಜಿಕ ಪರಿಶೋಧನೆಯನ್ನು ನಡೆಸುವುದು ಹಾಗೂ ಅಗತ್ಯವಾದ ಕ್ರಮ ಕೈಗೊಂಡಿರುವುದನ್ನು ಖಾತರಿಪಡಿಸಿಕೊಳ್ಳುವುದು.

೯. ಎಲ್ಲ ಅನುಷ್ಠಾನ ಸಂಸ್ಥೆಗಳಿಗೆ ಸಂಬಂಧಪಟ್ಟಂತೆ ಉದ್ಯೋಗ ಚೀಟಿ ವಹಿ, ಉದ್ಯೋಗ ವಹಿ, ಕೆಲಸದ ವಹಿ, ಗ್ರಾಮಸಭೆ ನಿರ್ಣಯಗಳು ಎಲ್ಲ ಬಗೆಯ ಮಂಜೂರಾತಿ ಪತ್ರಗಳ ಪ್ರತಿಗಳು(ಆಡಳಿತಾತ್ಮಕ ಅಥವಾ ತಾಂತ್ರಿಕ ಅಥವಾ ಹಣಕಾಸು ಸಂಬಂಧಿ),

ಕಾಮಗಾರಿ ಅಂದಾಜು ಪಟ್ಟಿಗಳು, ಕಾಮಗಾರಿ ಪ್ರಾರಂಭದ ಆದೇಶ, ಹಾಜರಾತಿ ಪಟ್ಟಿ, ನೀಡಿಕೆ ಹಾಗೂ ಸ್ವೀಕೃತಿ ವಹಿ(Issue and Receipts Register), ಹಾಜರಾತಿವಹಿಗಳು, ಕೂಲಿ ಪಾವತಿ ವಹಿಗಳು, ಸಾಮಗ್ರಿಗಳ-ಬಿಲ್ಲುಗಳು ಮತ್ತು ವೋಚರುಗಳು(ಪ್ರತಿಯೊಂದು ಕೆಲಸಕ್ಕೆ ಸಂಬಂಧಪಟ್ಟಂತೆ), ಅಳತೆ ಪುಸ್ತಕಗಳು (ಪ್ರತಿಯೊಂದು ಕೆಲಸಕ್ಕೆ ಸಂಬಂಧಪಟ್ಟಂತೆ), ಆಸ್ತಿವಹಿ, ಹಿಂದಿನ ಸಾಮಾಜಿಕ ಲೆಕ್ಕ ಪರಿಶೋಧನೆಗಳ ಕುರಿತಂತೆ ಕೈಗೊಂಡ ಕ್ರಮಗಳ ವರದಿ, ಕುಂದುಕೊರತೆಗಳ ಹಾಗೂ ದೂರಗಳ ವಹಿಯಂಥ ಎಲ್ಲ ದಾಖಲೆಗಳು ಸರಿಯಾಗಿ ಲಭ್ಯವಿರುವಂತೆ ನೋಡಿಕೊಳ್ಳತಕ್ಕದ್ದು.

೧೦. ಸಾಮಾಜಿಕ ಪರಿಶೋಧನೆ ಹಾಗೂ ಇತರ ಪ್ರಕ್ರಿಯೆಗಳನ್ನು ನಿರ್ವಹಿಸಲು ಸಾಮಾಜಿಕ ಲೆಕ್ಕ ಪರಿಶೋಧನಾ ಘಟಕ (Social Audit Unit-SAU) ಇತರ ಇನ್ನಾವುದೇ ದಾಖಲೆಗಳನ್ನು ಸರಿಯಾದ ನಮೂನೆಯಲ್ಲಿ, ಸೂಕ್ತವಾದ ರೀತಿಯಲ್ಲಿ ಇಟ್ಟುಕೊಳ್ಳಲಾಗಿದೆಯೆಂಬುದನ್ನು ಖಚಿತಪಡಿಸಿಕೊಳ್ಳಬೇಕು. ಗ್ರಾಮಸಭೆಯ ನಿಗದಿತ ಸಭಾ ದಿನಾಂಕಕ್ಕಿಂತ ಕನಿಷ್ಠ ಹದಿನೈದು ದಿನಗಳಿಗಿಂತ ಮುಂಚೆ ಸಾಮಾಜಿಕ ಪರಿಶೋಧನೆ ನಡೆಸುವ ಸಲುವಾಗಿ ಈ ದಾಖಲೆಗಳು ಘಟಕಕ್ಕೆ ಲಭ್ಯವಾಗುವಂತೆ ನೋಡಿಕೊಳ್ಳಬೇಕು.

೧೧. ಗ್ರಾಮ ಪಂಚಾಯಿತಿಗಳ ಪ್ರತಿಯೊಂದು ಸಮೂಹದೊಳಗಡೆಯೂ(Cluster of the GPs) ಗ್ರಾಮ ಪಂಚಾಯಿತಿಗಳಿಗೆ ತಾಂತ್ರಿಕ ಬೆಂಬಲ ಒದಗಿಸುವ ಸಲುವಾಗಿ ಸಮೂಹ-ಮಟ್ಟದ ಸುಗಮ ಕಾರ್ಯನಿರ್ವಹಣ ತಂಡಗಳನ್ನು (Cluster level Facilitation Team) (CFTs) ರಚಿಸತಕ್ಕದ್ದು.

೧೨. ಸಿಎಫ್‌ಟಿಗಳ ಮೂಲಕ ತಾಂತ್ರಿಕ ಬೆಂಬಲವನ್ನು ಒದಗಿಸಲು ಅನುಕೂಲ ಮಾಡಿಕೊಡುವುದು.

೧೩. ಕೂಲಿ ನಿಯತವಾಗಿ ಹಾಗೂ ಸಕಾಲದಲ್ಲಿ ಪಾವತಿಯಾಗಲು ಅನುಕೂಲವಾಗುವಂತೆ ಹೊಸ ಖಾತೆಗಳನ್ನು ತೆರೆಸಲು ಬ್ಯಾಂಕುಗಳ ಹಾಗೂ ಅಂಚೆಕಚೇರಿಗಳ ಜೊತೆಯಲ್ಲಿ ಸಂಪರ್ಕ ಏರ್ಪಡಿಸುವುದು. ಹಾಗೆಯೆ, ಗ್ರಾಮ ಪಂಚಾಯಿತಿಗಳ ಮತ್ತು ತಾಲೂಕುಗಳ ನಡುವೆ, ತಾಲೂಕುಗಳ ಮತ್ತು ಜಿಲ್ಲೆಗಳ ನಡುವೆ ಎಲ್ಲ ಬಗೆಯ ಪತ್ರವ್ಯವಹಾರ ಮತ್ತು ಸಂಪರ್ಕ ಏರ್ಪಡಿಸಲು ಸಂಪರ್ಕಾಧಿಕಾರಿಯಾಗಿ ನೆರವಾಗುವುದು.

೧೪. ತಾಲೂಕು ಮಟ್ಟದಲ್ಲಿ ಎಂಜಿಎನ್‌ಆರ್‌ಇಜಿಎಸ್ ಅನುಷ್ಠಾನ ಮಾಡಲು ನೆರವಾಗುತ್ತಿರುವ ನಾಗರಿಕ ಸಮಾಜ ಸಂಸ್ಥೆಗಳೊಡನೆ (Civil Society Organisation) (CSOs) ಔಪಚಾರಿಕ ಮಾಸಿಕ ಸಭೆಗಳನ್ನು ಏರ್ಪಡಿಸುವುದು.

ತಾಲೂಕು ಹಂತದಲ್ಲಿ ಕಾರ್ಯನಿರ್ವಾಹಕ ಪ್ರಾಧಿಕಾರಿಗಳಾದ ತಹಶೀಲ್ದಾರ/ಕ್ಷೇತ್ರಾಭಿವೃದ್ಧಿ ಅಧಿಕಾರಿ (ತಾಲೂಕು ಡೆವಲಪ್‌ಮೆಂಟ್ ಆಫೀಸರ್)ಗಳನ್ನು ಕಾರ್ಯಕ್ರಮ ಅಧಿಕಾರಿಗಳನ್ನಾಗಿ

ಮಾಡಲಾಗಿರುತ್ತದೆ. ಈ ಅಧಿಕಾರಿಗಳು ತಮ್ಮ ಇತರ ಎಂದಿನ ಕೆಲಸ ಕಾರ್ಯಗಳ ಜೊತೆಯಲ್ಲಿ ಕಾರ್ಯಕ್ರಮ ಅಧಿಕಾರಿಗಳಾಗಿ ಸಹ ಕೆಲಸ ಮಾಡಬೇಕಾಗಿರುತ್ತದೆ. ಕೆಲವು ಸಂದರ್ಭಗಳಲ್ಲಿ, ತಮ್ಮ ಎಂದಿನ ಕೆಲಸಕಾರ್ಯಗಳ ಜೊತೆಯಲ್ಲಿ ಎಂಜಿಎನ್ಆರ್ಇಜಿಎ ಕೆಲಸಗಳನ್ನು ಕೂಡ ನಿರ್ವಹಿಸಲು ಅವರಿಗೆ ಕಷ್ಟಸಾಧ್ಯವಾಗಬಹುದು. ಹಾಗಾಗಿ ಎಸ್.ಸಿ/ ಎಸ್.ಟಿ/ಜಮೀನುರಹಿತ ಕೂಲಿಗಾರರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದು ಎಂಜಿಎನ್ಆರ್ಇಜಿಎ ಕೆಲಸಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಬೇಡಿಕೆಯಿದ್ದರೆ ಅದಕ್ಕಾಗಿಯೇ ನಿಗದಿತರಾದ ಒಬ್ಬ ಕಾರ್ಯಕ್ರಮ ಅಧಿಕಾರಿ(ಪಿಓ) ಇರುವುದು ಅಗತ್ಯವಾಗುತ್ತದೆ. ಈ ನಿಗದಿತ ಕಾರ್ಯಕ್ರಮ ಅಧಿಕಾರಿಯು ಎಂಜಿಎನ್ಆರ್ಇಜಿಎಗೆ ನೇರವಾಗಿ ಸಂಬಂಧಿಸದೆ ಇರುವ ಕೆಲಸಗಳನ್ನು ನಿರ್ವಹಿಸತಕ್ಕದ್ದಲ್ಲ.

ಕಾರ್ಯಕ್ರಮ ಅಧಿಕಾರಿ ಡಿಪಿಸಿಗೆ ಜವಾಬ್ದಾರರಾಗಿರುತ್ತಾರೆ. ಪಿಓ ಮತ್ತು ಅವರ ಸಿಬ್ಬಂದಿ ತಮ್ಮ ಜವಾಬ್ದಾರಿಗಳನ್ನು ಸರಿಯಾಗಿ ಜವಾಬ್ದಾರಿಯುತವಾಗಿ ನಿರ್ವಹಿಸದೆ ಹೋದರೆ ಅವರು ಕಾಯ್ದೆಯ ಪ್ರಕರಣ ೨೫ರ ಅವಕಾಶಗಳನ್ವಯ ಕ್ರಮಕ್ಕೆ ಅರ್ಹರಾಗಿರುತ್ತಾರೆ.

**ಮಧ್ಯಂತರ ಪಂಚಾಯತ್ (ತಾಲೂಕು ಪಂಚಾಯತಿ)**

ತಾಲೂಕು ಪಂಚಾಯಿತಿ ಮಟ್ಟದಲ್ಲಿ ಕಾರ್ಯಗಳು ಈ ಕೆಳಕಂಡಂತಿರುತ್ತವೆ.

೧. ತಾಲೂಕು ಹಂತದ ಯೋಜನೆಯನ್ನು ಅನುಮೋದಿಸಿ ಜಿಲ್ಲಾ ಹಂತದ ಜಿಲ್ಲಾ ಪಂಚಾಯಿತಿಗೆ ಅಂತಿಮ ಅನುಮೋದನೆಗಾಗಿ ಕಳುಹಿಸಿಕೊಡುವುದು.

೨. ಗ್ರಾಮ ಪಂಚಾಯತಿ ಮತ್ತು ತಾಲೂಕು ವ್ಯಾಪ್ತಿಯಲ್ಲಿ ಕೈಗೆತ್ತಿಕೊಂಡಿರುವ ಕಾರ್ಯಯೋಜನೆಗಳನ್ನು ಪರಿಶೀಲನೆ ಮತ್ತು ಉಸ್ತುವಾರಿ ಮಾಡುವುದು.

೩. ಹಾಗೆಯೆ, ಕಾಲ-ಕಾಲಕ್ಕೆ ರಾಜ್ಯ ಪರಿಷತ್ತು ಅದಕ್ಕೆ ವಹಿಸಿಕೊಡಬಹುದಾದ ಇತರ ಯಾವುದೇ ಕಾರ್ಯಗಳನ್ನು ನಿರ್ವಹಿಸುವುದು.

೪. ಸಂವಿಧಾನದ ಭಾಗ IX ಎಲ್ಲೆಲ್ಲಿ ಅನ್ವಯವಾಗುವುದಿಲ್ಲವೊ, ಅಂತಹ ಕಡೆಗಳಲ್ಲಿ ರಾಜ್ಯ ಸರ್ಕಾರಗಳ ಆ ದೇಶದ ಮೇರೆಗೆ ಸ್ಥಳೀಯ ಷರತ್ತುಗಳಿಗೆ/ಪ್ರಾಧಿಕಾರಗಳಿಗೆ ಸದರಿ ಜವಾಬ್ದಾರಿಗಳನ್ನು ವಹಿಸಿಕೊಡಲಾಗುತ್ತದೆ.

**೩. ಜಿಲ್ಲಾಹಂತ**

**೩.೧. ಜಿಲ್ಲಾ ಕಾರ್ಯಕ್ರಮ ಸಂಘಟನಾಧಿಕಾರಿ (District Programme Coordinator) (DPC)**

ರಾಜ್ಯ ಸರ್ಕಾರವು ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯನ್ನು (Chief Executive Officer) ಅಥವಾ ಜಿಲ್ಲಾಧಿಕಾರಿಯನ್ನು ಅಥವಾ ಸೂಕ್ತ ಸ್ಥಾನಮಾನಗಳನ್ನು ಹೊಂದಿರುವ ಜಿಲ್ಲಾ ಹಂತದ ಇತರ ಯಾವುದೇ ಅಧಿಕಾರಿಯನ್ನು ಡಿ.ಪಿ.ಸಿ.ಯಾಗಿ ಹೆಸರಿಸುತ್ತದೆ.

ಎಂಜಿಎನ್‌ಆರ್‌ಇಜಿಎ-೨೦೦೫ ಹಾಗೂ ಅದರನ್ವಯ ಹೇಳಲಾಗಿರುವ ನಿಯಮಗಳು ಮತ್ತು ಮಾರ್ಗದರ್ಶಕ ಸೂಚನೆಗಳಂತೆ ಜಿಲ್ಲೆಯಲ್ಲಿ ಸದರಿ ಕಾರ್ಯಯೋಜನೆಯಯ ಅನುಷ್ಠಾನದ ಜವಾಬ್ದಾರಿಯನ್ನು ಡಿ.ಪಿ.ಸಿ. ಹೊತ್ತಿರುತ್ತಾರೆ. ಡಿ.ಪಿ.ಸಿ. ಈ ಕೆಳಕಂಡ ಜವಾಬ್ದಾರಿಗಳನ್ನು ಕೂಡ ನಿರ್ವಹಿಸುತ್ತಾರೆ:

೧. ಡಿ.ಪಿ.ಸಿ. ತನ್ನ ಕಾರ್ಯಗಳನ್ನು ನಿರ್ವಹಿಸಲು ಸಹಾಯ ಮಾಡುವುದು.

೨. ತಾಲೂಕು ಪಂಚಾಯಿತಿ ಯೋಜನೆಗಳನ್ನು ಪಡೆದು ಇತರ ಅನುಷ್ಠಾನ ಸಂಸ್ಥೆಗಳಿಂದ ಪಡೆದ ಯೋಜನೆ ಪ್ರಸ್ತಾವಗಳನ್ನು ಒಟ್ಟುಗೂಡಿಸಿ ಅವುಗಳನ್ನೂ ಜಿಲ್ಲಾ ಯೋಜನೆಯಲ್ಲಿ ಸೇರಿಸಿ ಜಿಲ್ಲಾ ಪಂಚಾಯತ್ ಅನುಮೋದನೆಗಾಗಿ ಪ್ರಸ್ತುತಪಡಿಸುವುದು.

೩. ಕಾಮಗಾರಿಗಳ ಗುಚ್ಛಕ್ಕೆ (Shelf of Projects) ಸಕಾಲದಲ್ಲಿ ಮಂಜೂರಾತಿಯನ್ನು ನೀಡುವುದು.

೪. ತಾಲೂಕು ಮತ್ತು ಜಿಲ್ಲಾ ಹಂತಗಳಲ್ಲಿ ಹೊಸದಾಗಿ ಸೇರಿಸಲಾದ ಕಾರ್ಯಯೋಜನೆಗಳು ಮತ್ತೆ ಪ್ರಸ್ತುತಗೊಂಡು ಆಡಳಿತಾತ್ಮಕ ಮಂಜೂರಾತಿ ಅವುಗಳಿಗೆ ದೊರಕುವುದಕ್ಕಿಂತ ಮುಂಚೆ ಸಂಬಂಧಪಟ್ಟ ಗ್ರಾಮ ಸಭೆಗಳಿಂದ ಶಿಫಾರಸ್ಸು ಪಡೆದುಕೊಂಡು ಅನಂತರ ಆದ್ಯತೆ ಪಡೆದುಕೊಳ್ಳುವ ಹಾಗೆ ನೋಡಿಕೊಳ್ಳುವುದು.

೫. ಸಕಾಲದಲ್ಲಿ ಹಣಕಾಸು ಬಿಡುಗಡೆಯಾಗುವಂತೆ ಹಾಗೂ ಬಳಕೆಯಾಗುವಂತೆ ನೋಡಿಕೊಳ್ಳುವುದು.

೬. ಕಾಯ್ದೆಯಲ್ಲಿರುವಂತೆ ಅರ್ಹತೆಗನುಗುಣವಾಗಿ ಕೂಲಿ ಬಯಸುವವರಿಗೆ ಕೆಲಸಗಳು ದೊರಕುವಂತೆ ನೋಡಿಕೊಳ್ಳುವುದು.

೭. ಎಂಜಿಎನ್‌ಆರ್‌ಇಜಿಎ ಕೆಲಸಗಳಿಗೆ ಸಂಬಂಧಪಟ್ಟಂತೆ ಪಿ.ಓ.ಗಳ ಹಾಗೂ ಅನುಷ್ಠಾನ ಮಾಡುವ ಏಜೆನ್ಸಿಗಳ ಕಾರ್ಯ ನಿರ್ವಹಣೆಯನ್ನು ಪರಿಶೀಲಿಸುವುದು, ನಿಯಂತ್ರಿಸುವುದು ಹಾಗೂ ಉಸ್ತುವಾರಿ ಮಾಡುವುದು ಈ ಕೆಲಸಗಳನ್ನು ನೋಡಿಕೊಳ್ಳುವುದು.

೮. ಹಣಕಾಸು ದುರುಪಯೋಗ ಅಥವಾ ಹಣಕಾಸಿಗೆ ಸಂಬಂಧಪಟ್ಟಂತೆ ನಿಯಮಗಳಿಗೆ ಹೊರತಾದ ನಡವಳಿಕೆ ಇವುಗಳಿಗೆ ಪುರಾವೆಗಳು ಅಥವಾ ಮೇಲ್ನೋಟದ ಸಾಕ್ಷ್ಯಗಳು ದೊರೆತಾಗ ಪ್ರತಿಯೊಂದು ಸಂದರ್ಭದಲ್ಲಿಯೂ ಪ್ರಾಥಮಿಕ ಮಾಹಿತಿ ವರದಿ (ಎಫ್.ಐ.ಆರ್). ದಾಖಲಾಗುವಂತೆ ನೋಡಿಕೊಳ್ಳುವುದು.

೯. ಯೋಜನೆ ಅನುಷ್ಠಾನ ಸಂಸ್ಥೆಗಳನ್ನು (Project Implementation Agencies-PIAs) ಜಿಲ್ಲೆಯಾದ್ಯಂತ ನೇಮಕ ಮಾಡುವುದು. ಈ ಸಂದರ್ಭದಲ್ಲಿ ಕೆಲಸಗಳಿಗೆ ತಗಲುವ ವೆಚ್ಚದ ಕನಿಷ್ಠ ಶೇಕಡ ೫೦ರಷ್ಟು ಕಾಮಗಾರಿಗಳಿಗೆ ಗ್ರಾಮ ಪಂಚಾಯಿತಿಗಳೇ ಯೋಜನೆಯ ಅನುಷ್ಠಾನ ಸಂಸ್ಥೆಗಳಾಗಿರುವಂತೆ ಗಮನ ವಹಿಸುವುದು.

೧೦. ಕುಂದು-ಕೊರತೆಗಳನ್ನು ಸರಿಪಡಿಸುವ ಸಂಬಂಧವಾಗಿ ಅನುಸೂಚಿ IIರಲ್ಲಿ ಒದಗಿಸಲಾಗಿರುವಂತೆ ಜವಾಬ್ದಾರಿಗಳನ್ನು ನಿರ್ವಹಿಸುವುದು.

೧೧. ಜಿಲ್ಲೆಯ ವ್ಯಾಪ್ತಿಯಲ್ಲಿ ಎಂಜಿಎನ್‌ಆರ್‌ಇಜಿಎ ಕುರಿತಂತೆ ಮಾಹಿತಿ ಶಿಕ್ಷಣ ಹಾಗೂ ಸಂಪರ್ಕ ಆಂದೋಲನವನ್ನು ಹಮ್ಮಿಕೊಂಡು ಅದರ ಸಂಘಟನೆಯನ್ನು ನೋಡಿಕೊಳ್ಳುವುದು.

೧೨. ಜಿಲ್ಲೆಯಲ್ಲಿರುವ ಯೋಜನೆಯ ಭಾಗೀದಾರರುಗಳಿಗೆ ತರಬೇತಿ ನೀಡಲು ಮತ್ತು ಅವರ ಸಾಮರ್ಥ್ಯ ಹೆಚ್ಚುವಂತೆ ಮಾಡಲು ವಾರ್ಷಿಕ ಯೋಜನೆಗಳನ್ನು ಅಭಿವೃದ್ಧಿಪಡಿಸುವುದು.

೧೩. ರಾಜ್ಯ ಸರ್ಕಾರಕ್ಕೆ ಕಾಲ-ಕಾಲಕ್ಕೆ ಪ್ರಗತಿ ವರದಿಗಳನ್ನು ಮತ್ತು ಪರಿಷ್ಕೃತ ಮಾಹಿತಿಗಳನ್ನು ಸಲ್ಲಿಸುವುದು.

೧೪. ಎಲ್ಲ ಗ್ರಾಮಪಂಚಾಯಿತಿಗಳಲ್ಲಿ ಆರು ತಿಂಗಳಿಗೊಮ್ಮೆ ಸಾಮಾಜಿಕ ಪರಿಶೋಧನೆ ನಡೆಯುವಂತೆ ಹಾಗೂ ಈ ಸಾಮಾಜಿಕ ಪರಿಶೋಧನೆ ವರದಿಗಳಿಗನುಗುಣವಾಗಿ ಕ್ರಮಜಾರಿಯಾಗುವಂತೆ ನೋಡಿಕೊಳ್ಳುವುದು.

೧೫. ಜಾಬ್‌ಕಾರ್ಡ್‌ಗಳನ್ನು ವಿತರಣೆ ಮಾಡುವುದು, ಕೆಲಸಗಳಿಗಾಗಿ ಅರ್ಜಿಗಳನ್ನು ದಾಖಲಿಸಿಕೊಳ್ಳುವುದು, ಕೆಲಸಗಳ ಹಂಚಿಕೆ, ಮಜೂರಿ ಚೀಟಿಗಳ (Wage Slips) ಸಿದ್ಧತೆ, ನಿಧಿ ವರ್ಗಾವಣೆ ಆದೇಶಗಳು (Fund Transfer Orders-FTOs), ನಿರ್ವಹಿಸಲಾದ ಕೆಲಸಗಳಿಗೆ ಸಂಬಂಧಪಟ್ಟಂತೆ ನಮೂದುಗಳು, ನಿಧಾನವಾಗಿ ಪಾವತಿಗೊಂಡ ಮಂಜೂರಿ ವಿವರಗಳು, ನಿರುದ್ಯೋಗ ಭತ್ಯೆ ಪಾವತಿ ಇವೆಲ್ಲವನ್ನೂ ಎನ್.ಆರ್.ಇ.ಜಿ.ಎ. ಸಾಫ್ಟ್ ಮೂಲಕವೇ ನಿರ್ವಹಿಸಲಾಗುತ್ತಿದೆಯೆ ಹೇಗೆ ಎಂಬುದನ್ನು ನೋಡಿಕೊಳ್ಳುವುದು.

೧೬. ಷೆಲ್ಫ್ ಆಫ್ ವರ್ಕ್ಸ್ ವಿವರಗಳು, ಜಿ.ಪಿ.ಎಸ್. ಕೋ-ಆರ್ಡಿನೇಟುಗಳು, ಕಾರ್ಯಾನುಷ್ಠಾನದ ಸ್ಥಿತಿ, ಕೆಲಸಗಳನ್ನು ಕುರಿತಂತೆ ಮೂರು ವಿವಿಧ ಹಂತಗಳಲ್ಲಿ ತೆಗೆದ ಫೋಟೊಗಳು ಇವುಗಳಿಗೆ ಸಂಬಂಧಪಟ್ಟ ಎಲ್ಲ ನಮೂದುಗಳನ್ನು ಪ್ರತಿಯೊಂದು ಅಗತ್ಯವಾದ ಹಂತದಲ್ಲಿಯೂ ಎನ್.ಆರ್.ಇ.ಜಿ.ಎ.ಸಾಫ್ಟ್‌ನಲ್ಲಿ ನಮೂದಿಸಲಾಗಿದೆಯೇ ಎಂಬುದನ್ನು ನೋಡಿಕೊಳ್ಳಬೇಕು. ಕೆಲಸ ಪೂರೈಸಿದ ಬಗೆಗಿನ ಮಾಹಿತಿಯನ್ನು ಸಾಧ್ಯವಾದಷ್ಟೂ ಬೇಗ, ಆದರೆ ಯಾವುದೇ ಸಂದರ್ಭದಲ್ಲಿ ಕೆಲಸ ವಾಸ್ತವವಾಗಿ ಮುಗಿದ ಎರಡು ತಿಂಗಳ ಅವಧಿಗೆ ಮೀರದಂತೆ, ದಾಖಲಿಸಲಾಗುತ್ತಿದೆಯೆ ಎಂಬುದನ್ನು ನೋಡಿಕೊಳ್ಳಬೇಕು.

೧೭. ಅನುಷ್ಠಾನ ಮಾಡುತ್ತಿರುವ ಏಜೆನ್ಸಿಗಳ ಹಾಗೂ ಪಂಚಾಯಿತಿಗಳೂ ಒಳಗೊಂಡಂತೆ ಜಿಲ್ಲಾ ಮಟ್ಟದ ಪ್ರಾಧಿಕಾರಗಳ ಮೂಲಕ ಪಡೆಯಲಾದ ಎಲ್ಲ ಹಣಕಾಸು ವಿವರಗಳನ್ನು ಈ ರೀತಿಯಾಗಿ ನಿಧಿ ಸಂದಾಯವಾದ ಎರಡು ದಿನಗಳು ಮೀರಿದ ಅವಧಿಯೊಳಗೆ ಎನ್.ಆರ್.ಇ.ಜಿ.ಎ.ಸಾಫ್ಟ್‌ನಲ್ಲಿ ಅಳವಡಿಸಲಾಗಿದೆಯೇ ಎಂಬುದನ್ನು ದೃಢಪಡಿಸಿಕೊಳ್ಳಬೇಕು.

೧೮. ಆಯಾ ಜಿಲ್ಲೆಗಳಲ್ಲಿ ಸಂಬಂಧಿಸಿದ ಇಲಾಖೆಗಳೂ (Line Departments) ಸೇರಿದಂತೆ ಎಲ್ಲ ಸಂಬಂಧಪಟ್ಟ ಅಧಿಕಾರಿಗಳು ಮತ್ತು ಉದ್ಯೋಗಿಗಳು ಎನ್.ಆರ್.ಇ.ಜಿ.ಎ.ಸಾಫ್ಟ್ (NREGA Soft)ನಲ್ಲಿ ಅಗತ್ಯವಾದ ಎಲ್ಲ ಮಾಹಿತಿಗಳನ್ನು ಅಳವಡಿಸುತ್ತಾರೆಂಬುದನ್ನು ಖಾತರಿಪಡಿಸಿಕೊಳ್ಳತಕ್ಕದ್ದು.

## ೪. ರಾಜ್ಯಮಟ್ಟ

### ೪.೧. ರಾಜ್ಯ ಉದ್ಯೋಗ ಖಾತರಿ ಪರಿಷತ್ತು

ಎಂ.ಜಿ.ಎನ್‌ಆರ್‌ಇಜಿಎ ಕಾಯ್ದೆಯ ಪ್ರಕರಣ ೧೨ರಡಿಯಲ್ಲಿ ಪ್ರತಿಯೊಂದು ರಾಜ್ಯ ಸರ್ಕಾರವೂ ರಾಜ್ಯ ಉದ್ಯೋಗ ಖಾತರಿ ಪರಿಷತ್ತು (State Employment Guarantee Council-SEGC) ಎಂಬುದನ್ನು ಸ್ಥಾಪಿಸಬೇಕು. ಇದನ್ನು ರಾಜ್ಯ ಪರಿಷತ್ತು (State Council) ಎಂದು ಕರೆಯಬಹುದಾಗಿದೆ. ಪ್ರಸಕ್ತ ರಾಜ್ಯ ಪರಿಷತ್ತಿನ ಪಾತ್ರ ಮತ್ತು ಜವಾಬ್ದಾರಿಗಳು ಈ ಕೆಳಕಂಡಂತಿರುತ್ತವೆ.

೧. ಯೋಜನೆಯ ಅನುಷ್ಠಾನ ಕುರಿತಂತೆ ರಾಜ್ಯ ಸರ್ಕಾರಕ್ಕೆ ಸಲಹೆ ಸೂಚನೆಗಳನ್ನು ನೀಡುವುದು.

೨. ಮೇಲ್ವಿಚಾರಣೆ ಹಾಗೂ ಕುಂದುಕೊರತೆಗಳ ನಿವಾರಣೆ ಕಾರ್ಯವಿಧಾನಗಳನ್ನು ಕುರಿತಂತೆ ಮರುಪರಿಶೀಲನೆ ಮಾಡುವುದು ಹಾಗೂ ಉತ್ತಮಪಡಿಸಲು ಸಲಹೆ ನೀಡುವುದು.

೩. ರಾಜ್ಯದ ಒಳಗಡೆ ಯೋಜನೆಯನ್ನು ಮೌಲ್ಯಮಾಪನ ಮಾಡುವುದು ಹಾಗು ಉಸ್ತುವಾರಿ ಮಾಡುವುದು.

೪. ಕಾಯ್ದೆಯ ಅನುಸೂಚಿ ೧ರ ಪ್ಯಾರಾ ೧ಬಿ(xiv)ರನ್ವಯ ಕೇಂದ್ರ ಸರ್ಕಾರಕ್ಕೆ ಸಲ್ಲಿಸಬೇಕಾದ ಕಾಮಗಾರಿಗಳ ಪ್ರಸ್ತಾವಗಳನ್ನು ಕುರಿತು ಶಿಫಾರಸ್ಸು ಮಾಡುವುದು.

೫. ತನ್ನ ವ್ಯಾಪ್ತಿಯಲ್ಲಿ ಈ ಕಾಯ್ದೆಯ ಹಾಗೂ ಕಾರ್ಯಯೋಜನೆಗಳ ಕುರಿತಂತೆ ಆದಷ್ಟೂ ವ್ಯಾಪಕವಾಗಿ ಮಾಹಿತಿಯನ್ನು ಪ್ರಸಾರ ಮಾಡುವಲ್ಲಿ ನೆರವಾಗುವುದು.

೬. ರಾಜ್ಯ ಸರ್ಕಾರ ರಾಜ್ಯ ವಿಧಾನಸಭೆಗೆ ಸಲ್ಲಿಸಲು ಅನುಕೂಲವಾಗುವಂತೆ ವಾರ್ಷಿಕ ವರದಿಯನ್ನು ಸಿದ್ಧಪಡಿಸುವುದು.

### ೪.೨. ರಾಜ್ಯ ಸರ್ಕಾರ

ರಾಜ್ಯ ಸರ್ಕಾರದ ಜವಾಬ್ದಾರಿಗಳು ಈ ಕೆಳಕಂಡ ಅಂಶಗಳನ್ನು ಒಳಗೊಂಡಿರುತ್ತವೆ.

೧. ಕಾಯ್ದೆಯ ಪ್ರಕರಣ ೩೨ರ ಅನ್ವಯ ರಾಜ್ಯದ ಜವಾಬ್ದಾರಿಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಕುರಿತಂತೆ ನಿಯಮಗಳನ್ನು ರಚಿಸುವುದು.

೨. ರಾಜ್ಯದ ಸಲುವಾಗಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಅಭಿವೃದ್ಧಿಪಡಿಸುವುದು ಹಾಗೂ ಅಧಿಸೂಚನೆ ಮಾಡುವುದು.

೩. ಎಸ್.ಇ.ಡಿ.ಸಿ.ಯನ್ನು ರಚನೆ ಮಾಡುವುದು.

೪. ಸಾಕಷ್ಟು ಸಂಖ್ಯೆಯಲ್ಲಿ ಉನ್ನತ ಮಟ್ಟದ ವೃತ್ತಿಪರಿಣಿತರನ್ನೊಳಗೊಂಡ ರಾಜ್ಯಮಟ್ಟದ ಎಂ.ಜಿ.ಎನ್.ಆರ್.ಇ.ಜಿ.ಎಸ್. ಕಾರ್ಯಾನುಷ್ಠಾನ/ಅಭಿಯಾನವನ್ನು ರಚನೆ ಮಾಡುವುದು.

೫. ಎಂಜಿಎನ್‌ಆರ್‌ಇಜಿಎ ಪ್ರಕ್ರಿಯೆಗಳನ್ನು ಕುರಿತಂತೆ ಸಾಕಷ್ಟು ಮಂದಿ ಇರುವ ರಾಜ್ಯ ಮಟ್ಟದ ಸಾಮಾಜಿಕ ತಪಾಸಣೆಯನ್ನು ಕುರಿತಂತೆ ಸಕ್ರಿಯ ಬದ್ಧತೆಯುಳ್ಳ ಸಾಕಷ್ಟು ಮಂದಿ ಇರುವ ರಾಜ್ಯ ಮಟ್ಟದ ಸಾಮಾಜಿಕ ತಪಾಸಣೆ ಸಂಸ್ಥೆ/ನಿರ್ದೇಶನಾಲಯವನ್ನು ಸ್ಥಾಪನೆ ಮಾಡುವುದು.

೬. ರಾಜ್ಯ ಉದ್ಯೋಗ ಖಾತರಿ ನಿಧಿಯೊಂದನ್ನು(ಎಸ್.ಇ.ಜಿ.ಎಫ್). ಸ್ಥಾಪನೆ ಮಾಡುವುದು.

೭. ಎಂ.ಜಿ.ಎನ್.ಆರ್.ಇ.ಜಿ.ಎಸ್. ಬಜೆಟ್ಟಿನ ರಾಜ್ಯದ ಪಾಲು ನಿಗದಿತವಾಗಿ ಆರ್ಥಿಕ ವರ್ಷದ ಪ್ರಾರಂಭದಲ್ಲಿಯೇ ಬಿಡುಗಡೆಯಾಗಿ ಅದನ್ನು ಒಂದು ಆವರ್ತನ ನಿಧಿಯಾಗಿ ಬಳಕೆಮಾಡಲು ಸಾಧ್ಯವಾಗುವಂತೆ ನೋಡಿಕೊಳ್ಳಬೇಕು.

೮. ಎಂಜಿಎನ್‌ಆರ್‌ಇಜಿಎ ಯೋಜನೆಯನ್ನು ನಿರ್ವಹಿಸಲು ಪೂರ್ಣಾವಧಿಯ ನಿಷ್ಠಾವಂತ ಮತ್ತು ಕರ್ತವ್ಯಬದ್ಧರಾದ ಸಿಬ್ಬಂದಿ ಸರಿಯಾದ ಸ್ಥಳದಲ್ಲಿ ಇರುವಂತೆ ನೋಡಿಕೊಳ್ಳಬೇಕು. ಅದರಲ್ಲಿಯೂ ವಿಶೇಷವಾಗಿ ಉದ್ಯೋಗ ಖಾತರಿ ಸಹಾಯ (Employment Guarantee Assistant ರೋಜಗಾರ್ ಸಹಾಯಕ್), ಕಾರ್ಯಕ್ರಮ ಅಧಿಕಾರಿ(ಪಿ.ಓ.) ಹಾಗೂ ರಾಜ್ಯ, ಜಿಲ್ಲೆ ಮತ್ತು ಸಮೂಹ ಹಂತಗಳಲ್ಲಿ ಇವರುಗಳು ಲಭ್ಯವಿರುವಂತೆ ನೋಡಿಕೊಳ್ಳಬೇಕು.

೯. ಯೋಜನೆಯ ಪರಿಣಾಮಕಾರಿ ಅನುಷ್ಠಾನದ ಸಲುವಾಗಿ ಅಗತ್ಯವೆಂದು ಕಂಡುಬಂದ ಸಂದರ್ಭಗಳಲ್ಲಿ ಹಣಕಾಸು ಸಂಬಂಧವಾದ ಹಾಗೂ ಆಡಳಿತಾತ್ಮಕ ಅಧಿಕಾರಿಗಳನ್ನು ಡಿ.ಪಿ.ಸಿ. ಮತ್ತು ಕಾರ್ಯಕ್ರಮ ಅಧಿಕಾರಿಗೆ ವಹಿಸಿಕೊಡುವುದು.

೧೦. ತರಬೇತಿ, ತಾಂತ್ರಿಕ ಬೆಂಬಲ ಹಾಗೂ ಗುಣಮಟ್ಟ ನಿಯಂತ್ರಣ ವಿಧಾನಗಳಿಗಾಗಿ ವೃತ್ತಿಪರ ಏಜೆನ್ಸಿಗಳ ಒಂದು ಜಾಲ ಅಥವಾ ನೆಟ್‌ವರ್ಕ್ ಅನ್ನು ಸ್ಥಾಪಿಸಬೇಕು.

೧೧. ಎಂ.ಜಿ.ಎನ್.ಆರ್.ಇ.ಜಿ.ಎಸ್. ಪ್ರಕ್ರಿಯೆಗಳ ಮತ್ತು ಫಲಿತಾಂಶಗಳ ನಿಯತವಾದ ಮರುಪರಿಶೀಲನೆ, ಸಂಶೋಧನೆ, ಉಸ್ತುವಾರಿ ಹಾಗೂ ಮೌಲ್ಯಮಾಪನವನ್ನು ಮಾಡುವುದು.

೧೨. ಎಲ್ಲ ಹಂತಗಳಲ್ಲಿಯೂ ಕಾರ್ಯಯೋಜನೆಗೆ ಸಂಬಂಧಪಟ್ಟಂತೆ ಜವಾಬ್ದಾರಿತನ ಹಾಗೂ ಪಾರದರ್ಶಕತೆ ಇರುವಂತೆ ನೋಡಿಕೊಳ್ಳಬೇಕು.

೧೩. ರಾಜ್ಯದಾದ್ಯಂತ ಎಂಜಿಎನ್ಆರ್ಇಜಿಎ ಕುರಿತಂತೆ ಸಾಧ್ಯವಾದಷ್ಟು ವ್ಯಾಪಕವಾದ ಅರಿವನ್ನು ಮೂಡಿಸುವುದು.

೧೪. ಎಂಜಿಎನ್ಆರ್ಇಜಿಎ ಯೋಜನೆಯನ್ನು ಜಾರಿಗೆ ತರುವಲ್ಲಿ ಕೆಲಸಗಾರರನ್ನು ಕಲೆಹಾಕಿ ಸಹಕಾರ ನೀಡುತ್ತಿರುವ ನಾಗರಿಕ ಸಮಾಜ ಸಂಸ್ಥೆಗಳು ಕನಿಷ್ಠ ತಿಂಗಳಿಗೊಮ್ಮೆಯಾದರೂ ರಾಜ್ಯ, ಜಿಲ್ಲಾ ಹಾಗೂ ಬ್ಲಾಕ್ ಮಟ್ಟದ ಅಧಿಕಾರಿಗಳನ್ನು ಮತ್ತು ಸಿಬ್ಬಂದಿಯನ್ನು ಔಪಚಾರಿಕವಾಗಿ ಭೇಟಿಯಾಗಲು ಅನುಕೂಲವಾಗುವಂತೆ ಏರ್ಪಾಟು ಮಾಡುವುದು.

೧೫. ಕಾಯ್ದೆಯಲ್ಲಿ, ನಿಯಮಾವಳಿಗಳಲ್ಲಿ ಹಾಗೂ ಮಾರ್ಗಸೂಚಿಯಲ್ಲಿ ತೋರಿಸಲಾಗಿರುವ ಪ್ರಕ್ರಿಯೆಗಳಿಗೆ ಬದ್ಧವಾಗಿ ಕಾರ್ಯಗಳು ನಡೆಯುವಂತೆ ನೋಡಿಕೊಳ್ಳುವುದು.

## ೫. ಕೇಂದ್ರ ಮಟ್ಟ

### ೫.೧. ಕೇಂದ್ರ ಉದ್ಯೋಗ ಖಾತರಿ ಪರಿಷತ್ತು

ಮಾನ್ಯ ಗ್ರಾಮೀಣಾಭಿವೃದ್ಧಿ ಕೇಂದ್ರ ಸಚಿವರ ಅಧ್ಯಕ್ಷತೆಯಲ್ಲಿ ಕೇಂದ್ರ ಉದ್ಯೋಗ ಖಾತರಿ ಪರಿಷತ್ತು(ಸಿ.ಇ.ಜಿ.ಸಿ. ಅಥವಾ ಸೆಂಟ್ರಲ್ ಕೌನ್ಸಿಲ್) ರಚನೆಗೊಂಡಿರುತ್ತದೆ. ಕಾಯ್ದೆಯನ್ವಯ, ಸಿ.ಇ.ಜಿ.ಸಿ.ಯ ಪಾತ್ರ ಹಾಗೂ ಜವಾಬ್ದಾರಿಗಳು ಈ ಕೆಳಕಂಡಂತಿರುತ್ತವೆ.

೧. ಒಂದು ಕೇಂದ್ರೀಯ ಮೌಲ್ಯಮಾಪನ ಹಾಗೂ ಮೇಲ್ವಿಚಾರಣಾ ವ್ಯವಸ್ಥೆಯನ್ನು ರೂಪಿಸುವುದು.

೨. ಕಾಯ್ದೆಯ ಅನುಷ್ಠಾನವನ್ನು ಕುರಿತಂತೆ ಎಲ್ಲ ವಿಷಯಗಳಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರಕ್ಕೆ ಸಲಹೆ-ಸೂಚನೆಗಳನ್ನು ನೀಡುವುದು.

೩. ಮೇಲ್ವಿಚಾರಣೆ ಮತ್ತು ಕುಂದು-ಕೊರತೆಗಳ ನಿವಾರಣೆ ವ್ಯವಸ್ಥೆಯನ್ನು ಕಾಲಕಾಲಕ್ಕೆ ಮರುಪರಿಶೀಲಿಸಿ ಅವುಗಳನ್ನು ಉತ್ತಮಪಡಿಸಲು ಅಗತ್ಯವಾದ ಮಾರ್ಪಾಡುಗಳನ್ನು ಶಿಫಾರಸು ಮಾಡುವುದು.

೪. ಯೋಜನೆಯನ್ನು ಕುರಿತಂತೆ ಸಾಧ್ಯವಾದಷ್ಟು ಹೆಚ್ಚು ವ್ಯಾಪಕವಾಗಿ ಮಾಹಿತಿ ರವಾನೆಯಾಗುವಂತೆ ನೋಡಿಕೊಳ್ಳುವುದು.

೫. ಈ ಕಾಯ್ದೆಯ ಕಾರ್ಯಾಚರಣೆ ಕುರಿತಂತೆ ಮೇಲ್ವಿಚಾರಣೆ ಮಾಡುವುದು.

೬. ಈ ಕಾಯ್ದೆಯ ಜಾರಿಗೆ ಸಂಬಂಧಪಟ್ಟಂತೆ ಸಂಸತ್ತಿನ ಮುಂದೆ ಮಂಡಿಸಲು ವಾರ್ಷಿಕ ವರದಿಗಳನ್ನು ಕೇಂದ್ರ ಸರ್ಕಾರಕ್ಕೆ ಸಿದ್ಧಪಡಿಸಿಕೊಡುವುದು.

## ೫.೨. ಗ್ರಾಮೀಣಾಭಿವೃದ್ಧಿ ಸಚಿವಾಲಯ(ಎಂ.ಆರ್.ಡಿ.–MRD)

ಗ್ರಾಮೀಣಾಭಿವೃದ್ಧಿ ಸಚಿವಾಲಯವು ಎಂಜಿಎನ್‌ಆರ್‌ಇಜಿಎ ಕಾಯ್ದೆ ಅಥವಾ ಅಧಿನಿಯಮವನ್ನು ಜಾರಿಗೊಳಿಸುವ ಉಸ್ತುವಾರಿ ಸಚಿವಾಲಯವಾಗಿರುತ್ತದೆ. ಗ್ರಾಮೀಣಾಭಿವೃದ್ಧಿ ಸಚಿವಾಲಯದ ಪಾತ್ರ ಹಾಗೂ ಜವಾಬ್ದಾರಿಗಳು ಈ ಕೆಳಕಂಡಂತಿರುತ್ತವೆ.

೧. ಕಾಯ್ದೆಯ ಅಡಿಯಲ್ಲಿ ನಿಯಮಗಳನ್ನು ರೂಪಿಸುವುದು.

೨. ಕಾಯ್ದೆಯ ಪರಿಣಾಮಕಾರಿ ಜಾರಿಗೆ ಅಗತ್ಯವಾದ ಮಾರ್ಗದರ್ಶಕ ಸೂಚಿಯನ್ನು ಒದಗಿಸುವುದು.

೩. ರಾಜ್ಯ ಸರ್ಕಾರಗಳ ಬೇಡಿಕೆಗೆ ತಕ್ಕಂತೆ ಎಂಜಿಎನ್‌ಆರ್‌ಇಜಿಎ ಕಾಯ್ದೆಯಡಿಯಲ್ಲಿ ಅನುಮತಿ ನೀಡಬಹುದಾದ ಕೆಲಸಗಳ ಪಟ್ಟಿಯನ್ನು ಪರಿಶೀಲಿಸುವುದು.

೪. ಸಿ.ಇ.ಜಿ.ಸಿ.ಯನ್ನು ರಚನೆ ಮಾಡುವುದು.

೫. ರಾಷ್ಟ್ರೀಯ ಉದ್ಯೋಗ ಖಾತರಿ ನಿಧಿಯನ್ನು ಸ್ಥಾಪನೆ ಮಾಡುವುದು.

೬. ಎಂಜಿಎನ್‌ಆರ್‌ಇಜಿಎ ಕಾಯ್ದೆಯಡಿಯಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ಕೆಲಸಕಾರ್ಯಗಳನ್ನು ನಿರ್ವಹಿಸಲು ಗ್ರಾಮೀಣ ಅಭಿವೃದ್ಧಿ ಇಲಾಖೆಯಲ್ಲಿ ರಾಷ್ಟ್ರೀಯ ನಿರ್ವಹಣ ತಂಡವನ್ನು (ಎನ್.ಎಂ.ಟಿ.) ರಚನೆ ಮಾಡುವುದು.

೭. ಬಜೆಟ್ಟಿನಲ್ಲಿ ಹಣಕಾಸು ಒದಗಿಸಿ ಕೇಂದ್ರ ಸರ್ಕಾರದ ಪಾಲು ಸಕಾಲದಲ್ಲಿ ಬಿಡುಗಡೆಯಾಗುವಂತೆ ನೋಡಿಕೊಳ್ಳುವುದು.

೮. ಕಾಯ್ದೆಯ ಕಾರ್ಯಾಚರಣೆ ಕುರಿತಂತೆ ಸಂಕೀರ್ಣವಾದ ಅಂಶಗಳಿಗೆ ಸಂಬಂಧಪಟ್ಟಂತೆ ದತ್ತಾಂಶಗಳನ್ನು ಗುರುತಿಸಿ ಪಡೆದುಕೊಳ್ಳುವ ಸಲುವಾಗಿ ಎಂ.ಐ.ಎಸ್.ನ ನಿರ್ವಹಣೆ ಮತ್ತು ಬಳಕೆ.

೯. ಕಾಯ್ದೆಯ ಅನುಷ್ಠಾನದ ಸಾಮರ್ಥ್ಯ ಹಾಗೂ ಪಾರದರ್ಶಕತೆಯನ್ನು ಹೆಚ್ಚಿಸಲು ಮಾಹಿತಿ ತಂತ್ರಜ್ಞಾನದ (Information Technology) ಬೆಂಬಲ ಮತ್ತು ಪ್ರಯೋಜನವನ್ನು ಪಡೆದುಕೊಳ್ಳುವುದು.

೧೦. ಕಾಯ್ದೆಯ ಉದ್ದೇಶಗಳ ಸಾಧನೆಯ ನಿಟ್ಟಿನಲ್ಲಿ ಉತ್ತಮಪಡಿಸುವ ಪ್ರಕ್ರಿಯೆಗಳಿಗೆ ನೆರವಾಗುವ ಹೊಸ ಆಲೋಚನೆ ಮತ್ತು ಚಿಂತನೆಗಳಿಗೆ ಬೆಂಬಲ ನೀಡುವುದು.

೧೧. ಎಂಜಿಎನ್‌ಆರ್‌ಇಜಿಎ ಕಾಯ್ದೆಯ ನಿರ್ವಹಣೆಯಲ್ಲಿ ಮೇಲ್ವಿಚಾರಣೆ, ಮೌಲ್ಯಮಾಪನ ಮತ್ತು ಸಂಶೋಧನೆ ಇವುಗಳನ್ನು ಕೈಗೊಳ್ಳುವುದು.

೧೨. ಎಂಜಿಎನ್‌ಆರ್‌ಇಜಿಎ ಕಾಯ್ದೆಯಡಿಯಲ್ಲಿ ಅನುಷ್ಠಾನ ಕಾರ್ಯದಲ್ಲಿ ಪಿ.ಐ.ಎ.ಗಳಾಗಿ ರಾಜ್ಯ ಸರ್ಕಾರಗಳು ಬಳಕೆ ಮಾಡಬಹುದಾದ ಸಂಸ್ಥೆಗಳನ್ನು ಕಂಡುಕೊಂಡು ಅವುಗಳ ಸೂಚಿಯನ್ನು ಸಿದ್ದಪಡಿಸುವುದು. ಹಾಗೆಯೆ ಅವುಗಳ ಆಡಳಿತ ವೆಚ್ಚವನ್ನು ಭರಿಸಲು ನಿಧಿಯಲ್ಲಿ ಎಷ್ಟು ಶೇಕಡಾವಾರು ನೀಡಬಹುದೆಂದು ನಿರ್ಧರಿಸುವುದು.

**೬. ನಾಗರಿಕ ಸಮಾಜ**

ತೀರ ಕೆಳಗಿನ ಹಂತಗಳಲ್ಲಿ ಅಂದರೆ ತಳಹಂತದಲ್ಲಿ (Grass-Root Level) ಕೆಲಸ ಮಾಡುತ್ತಿರುವ ನಾಗರಿಕ ಸಮಾಜ ಸಂಸ್ಥೆಗಳು (ಸಿಎಸ್‌ಓಗಳು) ದುಡಿಮೆ ಮತ್ತು ಕೂಲಿ ಬಯಸುವವರ ನಡುವೆ ಅರಿವನ್ನು ಹುಟ್ಟುಹಾಕುವ ನಿಟ್ಟಿನಲ್ಲಿ ತುಂಬ ಗಮನಾರ್ಹ ಪಾತ್ರವಹಿಸಬಹುದು. ಎಂಜಿಎನ್‌ಆರ್‌ಇಜಿಎ ಕಾಯ್ದೆಯಡಿಯಲ್ಲಿ ಅದರ ಯೋಜನೆ, ಕಾರ್ಯಾನ್ವಯ ಹಾಗೂ ಸಾಮಾಜಿಕ ಲೆಕ್ಕ ಪರಿಶೋಧನೆಗಳಿಗೆ ಸಂಬಂಧಪಟ್ಟಂತೆ ಗ್ರಾಮ ಪಂಚಾಯಿತಿಗಳಿಗೆ ಮತ್ತು ರಾಜ್ಯ ಸರ್ಕಾರಗಳಿಗೆ ಬೆಂಬಲ ನೀಡಿ ಅವುಗಳ ಸಾಮರ್ಥ್ಯ ಅಭಿವೃದ್ಧಿ ಮಾಡಬಹುದು. ಸ್ವಸಹಾಯ ಗುಂಪುಗಳಿಗೆ (Self Helf Groups) ಯೋಜನೆಯ ಬಗ್ಗೆ ಅರಿವು, ಕೆಲಸಗಳನ್ನು ಸಂಘಟಿಸುವುದು, ಕಾರ್ಮಿಕರ ಹಕ್ಕುಗಳನ್ನು ಪಡೆದುಕೊಳ್ಳುವಲ್ಲಿ ಸಹಕರಿಸುವುದು ಹಾಗೂ ಸಾಮಾಜಿಕ ಉತ್ತರದಾಯಿತ್ವ ಇರುವಂತೆ ನೋಡಿಕೊಳ್ಳುವಲ್ಲಿ ನೇರವಾದ ಪಾತ್ರವನ್ನು ವಹಿಸಬಹುದು. ಈ ಕಾರ್ಯಗಳನ್ನು ನಿರ್ವಹಿಸಲು ನಾಗರೀಕ ಸಮಾಜ ಸಂಘಟನೆಗಳನ್ನು ಬಳಕೆ ಮಾಡಿಕೊಳ್ಳಲು ಯಾವ ಬಗೆಯ ರೂಪು-ರೇಷೆಗಳನ್ನು ಸಿದ್ಧಪಡಿಸಬೇಕು ಎಂಬ ವಿಚಾರವಾಗಿ ಹೇಳುತ್ತದೆ.

**೭. ಇತರ ಭಾಗಿದಾರರು**

ಇತರ ಭಾಗಿದಾರರಲ್ಲಿ ಈ ಕೆಳಕಂಡವರು ಸೇರಿರುತ್ತಾರೆ.

೧. ಸಾಮಾಜಿಕ ತಪಾಸಣೆ ಘಟಕ, ಜಾಗರೂಕತೆ ಮತ್ತು ಮೇಲ್ವಿಚಾರಣ ಸಮಿತಿಗಳು ಇವುಗಳ ಸದಸ್ಯರು.

೨. ಕಾರ್ಯಾನುಷ್ಠಾನ ಸಂಸ್ಥೆಗಳ ತಾಂತ್ರಿಕ ಸಿಬ್ಬಂದಿ

೩. ಎಂಜಿಎನ್‌ಆರ್‌ಇಜಿಎ ಕಾಯ್ದೆಯಡಿಯಲ್ಲಿ ಒಗ್ಗೂಡಿಸುವಿಕೆಗಾಗಿ (Convergence) MoUಗೆ ಸಹಿ ಮಾಡಿರುವ ಇಲಾಖೆಗಳು. ಉದಾಹರಣೆ, ಕೃಷಿ ಸಚಿವಾಲಯ, ಅರಣ್ಯ ಮತ್ತು ಪರಿಸರ ಸಚಿವಾಲಯ, ಜಲಸಂಪನ್ಮೂಲ ಸಚಿವಾಲಯ, ಗ್ರಾಮೀಣಾಭಿವೃದ್ಧಿ ಸಚಿವಾಲಯ, ಜಮೀನು ಸಂಪನ್ಮೂಲ ಇಲಾಖೆ (Department of Land Resources), ಕುಡಿಯುವ ನೀರು ಮತ್ತು ನೈರ್ಮಲ್ಯಪಾಲನೆ ಸಚಿವಾಲಯ ಇಂಥವುಗಳನ್ನು ಹೆಸರಿಸಬಹುದು.

೪. ಎಂಜಿಎನ್‌ಆರ್‌ಇಜಿಎ ಕಾಯ್ದೆಯಿಂದ ಪ್ರಯೋಜನ ಪಡೆಯುವಂತಹ ಕೃಷಿ ಇಲಾಖೆ, ಜಲ ಸಂಪನ್ಮೂಲ/ನೀರಾವರಿ ಇಲಾಖೆ, ಅರಣ್ಯ ಇಲಾಖೆ ಇತ್ಯಾದಿ.

ಈ ಮಧ್ಯಸ್ಥಗಾರರುಗಳ ಪಾತ್ರ ಮತ್ತು ಜವಾಬ್ದಾರಿಗಳನ್ನು ಕುರಿತಂತೆ ಎಚ್ಚರಿಕೆಯಿಂದ ಗಮನಹರಿಸುವುದು ಅಗತ್ಯ. ಮಾನವ ಸಂಪನ್ಮೂಲಗಳ ಬಗೆಗೆ ಈ ಪೈಕಿ ಕೆಲವನ್ನು ಕುರಿತಂತೆ ವಿವರಿಸಲಾಗಿದೆ.

ಎಂಜಿಎನ್‌ಆರ್‌ಇಜಿಎ ಕಾಯ್ದೆಯನ್ವಯ ಒದಗಿಸಲಾಗಿರುವ ಅವಕಾಶಗಳ ಪಾಲನೆಯಾಗುತ್ತಿದೆಯೆ ಎಂಬುದನ್ನು ಸರ್ಕಾರ ದೃಢಪಡಿಸಿಕೊಳ್ಳಬಹುದು. ಈ ಅವಕಾಶಗಳನ್ನು ಉಲ್ಲಂಘಿಸುವ ಯಾವುದೇ ವ್ಯಕ್ತಿಗಳು ಕಾಯ್ದೆಯ ಪ್ರಕರಣ ೨೫ರ ಅನ್ವಯ ಕ್ರಮಕ್ಕೆ ಬದ್ಧರಾಗಿರುತ್ತಾರೆ.

**೪.೭. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಲ್ಲಿ ಕಾಯಕಬಂಧು (ಮೇಟ್)ವಿನ ಪಾತ್ರ**

ಪ್ರತಿ ಕಾರ್ಯಕ್ಷೇತ್ರದಲ್ಲಿ ಕೆಲಸದ ಉಸ್ತುವಾರಿ ನೋಡಿಕೊಳ್ಳುವ ಕಾಯಕ ಬಂಧು ಇರಬೇಕು. ಕನಿಷ್ಠ ೫೦ಮಂದಿ ಕೆಲಸಗಾರರ ಗುಂಪಿಗೆ ಒಬ್ಬ ಕಾಯಕ ಬಂಧು ನೇಮಿಸಬೇಕು. ಆಯ್ಕೆಯಾದ ಕಾಯಕ ಬಂಧು ಕೆಲಸಗಾರರಿಂದ ಪಡೆಯಬೇಕಾದ ಕೆಲಸದ ಪ್ರಮಾಣ, ಅವರ ನಿರ್ವಹಣೆ ಹೊಣೆ ಮತ್ತು ಅವರಿಗೆ ನೀಡಬೇಕಾದ ವೇತನ ಜವಾಬ್ದಾರಿ ಮತ್ತು ಆತನ ಪಾತ್ರ ಈ ಕೆಳಕಂಡಂತೆ ಇರುತ್ತದೆ.

೧. ಕಾಯಕಬಂಧು ವಿದ್ಯಾವಂತನಾಗಿರಬೇಕು ಮತ್ತು ಎಂಜಿಎನ್‌ಆರ್‌ಇಜಿಎಸ್‌ನಲ್ಲಿ ಸ್ವಲ್ಪ ಸಮಯದವರೆಗಾದರು ಕೆಲಸವನ್ನು ನಿರ್ವಹಿಸಿರಬೇಕು.
೨. ಕಾಯಕ ಬಂಧುವಿನ ಆಯ್ಕೆ ಪಾರದರ್ಶಕ ನಡವಳಿಕೆ ಆಧಾರದ ಮೇಲೆ ನಡೆಯಬೇಕು. ಹಾಗೆಯೆ ಕಾಯಕ ಬಂಧುವಿನ ಆಯ್ಕೆಗೆ ಅಗತ್ಯವಾದ ಮಾನದಂಡಗಳಲ್ಲಿ ಕುಟುಂಬದ ಅರ್ಹತೆಯು ಮುಖ್ಯವಾಗಿರುತ್ತದೆ. ಮತ್ತು ಕಾಯಕ ಬಂಧುವಿನ ಸ್ಥಾನಕ್ಕೆ ಮಹಿಳೆಯರಿಗೆ ಮತ್ತು ವಿಭಿನ್ನ ಸಾಮರ್ಥ್ಯದಾರರಿಗೆ ಮೊದಲ ಆದ್ಯತೆ ನೀಡಬೇಕು.
೩. ಕಾಯಕ ಬಂಧುವು ಕೆಲಸಗಾರರ ಹಾಜರಾತಿ ಮತ್ತು ಆಯಾ ದಿನದ ಕೆಲಸ ಪ್ರಮಾಣವನ್ನು ಅಳೆಯುವ ತಿಳುವಳಿಕೆಯನ್ನು ತಾಂತ್ರಿಕ ಸಹಾಯಕರಿಂದ ಅಥವಾ ಕಿರಿಯ ಇಂಜಿನಿಯರ್‌ಗಳಿಂದ ಪಡೆದುಕೊಳ್ಳಬೇಕು. ಇದಕ್ಕಾಗಿ ಕಾಯಕಬಂಧುವಿಗೆ ಸರಿಯಾದ ಅಳತೆ ಪ್ರಮಾಣವನ್ನು ತಿಳಿಯುವ ತರಬೇತಿ ಹೊಂದಿರುವುದು ಅಗತ್ಯವಾಗಿರುತ್ತದೆ.
೪. ಅರ್ಹ ಇಂಜಿನಿಯರ್‌ಗಳು ನೀಡಿದ ಕೆಲಸದ ರೂಪುರೇಶೆಯನ್ನು ಕಾಯಕ ಬಂಧು ಕಾರ್ಯ ನಿರ್ವಹಿಸಬೇಕು.

೫. ಮಹಾತ್ಮಗಾಂಧಿ ಉದ್ಯೋಗ ಖಾತ್ರಿ ಯೋಜನೆಯಡಿ ನಡೆಯುವ ಕೆಲಸದ ಉಸ್ತುವಾರಿ ಹೊತ್ತ ಕಾಯಕಬಂಧು ಅಲ್ಲೆ ಕೆಲಸ ನಿರ್ವಹಿಸಬಾರದು.

೬. ಕಾಯಕ ಬಂಧುವಿನ ವೇತನ ಆತ/ಆಕೆಯ ಅರೆ ಕುಶಲಿ ಪಡೆವ ದಿನಗೂಲಿ ವೇತನಕ್ಕೆ ಸಮನಾಗಿರುತ್ತದೆ. ಯೋಜನಾ ವೆಚ್ಚದ ವರದಿ ತಯಾರಿಕೆಯಲ್ಲಿ ಕಾಯಕ ಬಂಧುವಿನ ವೇತನದ ಖರ್ಚನ್ನು ಉಪಕರಣಗಳ ಖರೀದಿ ವೆಚ್ಚದಲ್ಲಿ ನಮೂದಿಸಬೇಕು.

**ಕಾಯಕ ಬಂಧುವಿನ ಜವಾಬ್ದಾರಿಗಳು ಕೆಳಕಂಡಂತಿರುತ್ತವೆ**

೧. ಕೆಲಸದ ಉಸ್ತುವಾರಿ

೨. ಪ್ರತಿದಿನ ಹಾಜರಾತಿ ಪಟ್ಟಿ ತಯಾರಿಸುವುದು

೩. ಪ್ರತಿದಿನ ನಿಯೋಜಿತ ಕೆಲಸಗಾರರು ಮಾಡಬೇಕಾದ ಕೆಲಸಗಳನ್ನು ತಿಳಿಸುವುದು. ಮತ್ತು ಪ್ರತಿವಾರ ಕೆಲಸದ ಪ್ರಗತಿಯ ವಿವರ ದಾಖಲಿಸುವುದು

೪. ಕೆಲಸ ಬಯಸುವ ಜನರಿಗೆ ಉದ್ಯೋಗ ಪತ್ರ ದೊರಕಿಸಿಕೊಡಲು ಗ್ರಾಮ ಪಂಚಾಯತಿಯಲ್ಲಿರುವ ಗ್ರಾಮರೋಜ್‌ಗಾರ್ ಸಹಾಯಕರಿಗೆ ಉದ್ಯೋಗ ಅರ್ಜಿ ಸಲ್ಲಿಸಲು ನೆರವಾಗುವುದು.

೫. ಕೆಲಸದ ಅಗತ್ಯಕ್ಕೆ ತಕ್ಕಂತೆ ಒಬ್ಬ ಕೆಲಸಗಾರನನ್ನು ಅಥವಾ ಬಹು ಕೆಲಸಗಾರರ ಗುಂಪನ್ನು ನಿಯೋಜಿಸುವುದು. ಇದಕ್ಕೆ ಸಂಬಂಧಿಸಿದ ಮಾಹಿತಿ ವಿವರವನ್ನು ಗ್ರಾಮ ಪಂಚಾಯ್ತಿಗೆ ಸಲ್ಲಿಸುವುದು. ಇದರ ದಿನಾಂಕ ಹೊಂದಿದ ಸ್ವೀಕೃತಿ ಪತ್ರ ಪಡೆಯುವುದು.

೬. ಕೆಲಸದಲ್ಲಿ ಪಾಲ್ಗೊಂಡಿರುವವರನ್ನು ಗುರುತಿಸಲು ಗ್ರಾಮ ಪಂಚಾಯ್ತಿಗೆ ಸಹಕರಿಸಬೇಕು.

೭. ಕಾಲ ಕಾಲಕ್ಕೆ ಹಾಜರಾತಿ ಪಟ್ಟಿ ತುಂಬಿದ ವಿವರವನ್ನು ಗ್ರಾಮ ರೋಜ್‌ಗಾರ್ ಸಹಾಯಕನಿಗೆ ನೀಡಬೇಕು.

೮. ಕೆಲಸ ನಡೆಯುವ ಸ್ಥಳದಲ್ಲಿ ನಡೆಯುವ ಆಕಸ್ಮಿಕ ಅವಘಡಗಳಿಂದ ಗಾಯಗೊಂಡ ಕಾರ್ಮಿಕರಿಗೆ ಪ್ರಥಮ ಚಿಕಿತ್ಸೆ ನೀಡಲು ಮತ್ತು ಅಗತ್ಯವಾದ ಔಷಧಗಳ ವ್ಯವಸ್ಥೆ ಇರಬೇಕು.

೯. ಕೆಲಸಗಾರರ ಗುಂಪಿನಲ್ಲಿರುವ ಅನಕ್ಷರಸ್ಥ ಮಹಿಳಾ/ಪುರುಷ ಕಾರ್ಮಿಕರಿಗೆ ಸಹಿ ಮಾಡುವುದನ್ನು ಕಲಿಸಬೇಕು ಮತ್ತು ಅವರ ವೇತನವನ್ನು ಲೆಕ್ಕ ಹಾಕಿಕೊಳ್ಳುವುದನ್ನು ಕಲಿಸಬೇಕು.

೧೦. ಮಹಾತ್ಮಗಾಂಧಿ ಉದ್ಯೋಗ ಖಾತ್ರಿ ಯೋಜನೆಯಲ್ಲಿರುವ ಹಕ್ಕು ಮತ್ತು ಅಧಿಕಾರ ಪಡೆಯುವ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಬೇಕು.

ದೇಶದ ಹಲವು ರಾಜ್ಯಗಳಲ್ಲಿ ಕಾರ್ಯಕ್ಷೇತ್ರದ ಉಸ್ತುವಾರಿಯನ್ನು ಮಹಿಳಾ ಸ್ವಸಹಾಯ ಗುಂಪಿ(ಎಸ್‌ಎಚ್‌ಜಿ)ಗೆ ನೀಡಲಾಗುತ್ತದೆ. ಇಂಥ ಸೌಲಭ್ಯವನ್ನು ಮಹಾತ್ಮಗಾಂಧಿ ಉದ್ಯೋಗ ಖಾತ್ರಿ ಯೋಜನೆಯಲ್ಲೂ ಮುಂದುವರೆಸಿದರೆ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುತ್ತಾರೆ ಮತ್ತು ಇದರಿಂದ ಮಹಿಳಾ ಸ್ವಸಹಾಯ ಗುಂಪಿಗೆ ಆರ್ಥಿಕವಾಗಿ ಸಹಾಯವಾಗುತ್ತದೆ. ಸ್ಥಳೀಯವಾಗಿ ಸಿಗುವ ಇಂಜಿನಿಯರ್‌ಗಳು ಮತ್ತು ಲೆಕ್ಕ ಪರಿಶೋಧಕರು ಸಂಬಂಧಿತ ಸಮುದಾಯದವರಿಂದ ಪ್ರಾಥಮಿಕ ಹಂತದಲ್ಲಿ ಕಲಿಯಬಹುದಾದ ತಾಂತ್ರಿಕತೆ ಮತ್ತು ಲೆಕ್ಕ ಪರಿಶೋಧನೆ ತರಬೇತಿಯನ್ನು ಪಡೆಯಬಹುದು.

### ೪.೮. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯಲ್ಲಿ ನಿರುದ್ಯೋಗ ಭತ್ಯೆಯ ಪಾತ್ರ

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯಲ್ಲಿ ನಿರುದ್ಯೋಗ ಭತ್ಯೆಯ ಪಾತ್ರ ಬಹುದೊಡ್ಡದಾಗಿದೆ. ಇದು ಹಲವು ಪಾತ್ರಗಳನ್ನು ನಿರ್ವಹಿಸುವುದರ ಮೂಲಕ ಯೋಜನೆಯ ಪರಿಣಾಮಕಾರಿ ಬೆಳವಣಿಗೆಯಲ್ಲಿ ಸಹಕಾರಿಯಾಗುತ್ತದೆ. ಅಂದರೆ ಉದ್ಯೋಗ ಬಯಸುವವರಿಗೆ ಒಂದು ಪರಿಮಿತ ಅವಧಿಯಲ್ಲಿ ಕೆಲಸವನ್ನು ನೀಡುತ್ತದೆ. ಒಂದು ವೇಳೆ ಕೆಲಸ ನೀಡದಿದ್ದರೆ ಉದ್ಯೋಗ ಒದಗಿಸುವ ಕಾರ್ಯದಲ್ಲಿ ಸಂಬಂಧಿತ ಅಧಿಕಾರ ವರ್ಗದವರು ವಿಫಲಗೊಳ್ಳುತ್ತಿದ್ದಾರೆ ಎಂಬುದಕ್ಕೆ ಈ ನಿರುದ್ಯೋಗ ಭತ್ಯೆಯು ಸ್ಪಷ್ಟವಾದ ಸಂಕೇತವಾಗಿದೆ. ಈ ನಿರುದ್ಯೋಗ ಭತ್ಯೆಯನ್ನು ರಾಜ್ಯ ಸರಕಾರವೇ ಭರಿಸಬೇಕಾದ ಜವಾಬ್ದಾರಿ ಇರುವುದರಿಂದ ಕೆಲಸ ನೀಡದ ವೈಫಲ್ಯಕ್ಕಾಗಿ ರಾಜ್ಯ ಸರಕಾರಕ್ಕೆ ಈ ಭತ್ಯೆಯು ಒಂದು ರೀತಿಯಲ್ಲಿ ದಂಡವಾಗಿ ಅಥವಾ ಹೊರೆಯಾಗಿ ಪರಿಣಮಿಸುತ್ತದೆ. ರಾಜ್ಯ ಸರಕಾರಗಳು ಉದ್ಯೋಗ ಖಾತರಿ ಕಾಯಿದೆಯ ಅಡಿಯಲ್ಲಿಯೇ ನಿರುದ್ಯೋಗ ಭತ್ಯೆಯನ್ನು ನಿಗದಿಪಡಿಸಬೇಕಾಗುತ್ತದೆ. ಮುಖ್ಯವಾಗಿ ಕೆಲವು ನಿಯಮಗಳನ್ನು ಪಾಲಿಸಬೇಕಾಗುತ್ತದೆ. ಅಂದರೆ ಕಾಯಿದೆಯು ರಾಜ್ಯ ಸರ್ಕಾರಗಳಿಗೆ ಈ ಕೆಳಗಿನಂತೆ ಕೆಲವು ಮಾರ್ಗದರ್ಶನಗಳನ್ನು ನೀಡಿದೆ.

೧. ಕಾಯ್ದೆಯ ಪ್ರಕರಣ ೭(೨)ರ ಅನ್ವಯ ನೀಡಬೇಕಾದ ನಿರುದ್ಯೋಗ ಭತ್ಯೆಯ ಮೊಬಲಗನ್ನು ಗೊತ್ತುಪಡಿಸತಕ್ಕದ್ದು,

೨. ನಿರುದ್ಯೋಗ ಭತ್ಯೆಯನ್ನು ಪಾವತಿ ಮಾಡುವ ವಿಧಾನವನ್ನು ನಿಂತ್ರಣಗೊಳಿಸುವ ನಿಯಮಗಳನ್ನು ರೂಪಿಸತಕ್ಕದ್ದು.

೩. ನಿರುದ್ಯೋಗ ಭತ್ಯೆಯನ್ನು ನೀಡುವ ಸಲುವಾಗಿ ಆಯವ್ಯಯದಲ್ಲಿ ಅಗತ್ಯವಾದ ಅವಕಾಶಗಳನ್ನು ಮಾಡಿಕೊಳ್ಳತಕ್ಕದ್ದು.

೪. ರಾಜ್ಯ ಸರ್ಕಾರವು ನಿಗದಿ ಪಡಿಸುವ ವಿಧಾನ ತುಂಬಾ ಸರಳವಾಗಿರತಕ್ಕದ್ದು. ಸದರಿ ವಿಧಾನದಲ್ಲಿ ಈ ಕೆಳಕಂಡ ಅಂಶಗಳು ಒಳಗೊಂಡಿರಬಹುದು.

ಅ. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯ ಸಾಫ್ಟ್‌ನಲ್ಲಿರುವ ದತ್ತಾಂಶದ ಆಧಾರದ ಮೇಲೆ ಈ ಪಾವತಿ ಉದ್ದೇಶಕ್ಕಾಗಿ ನಿಗದಿಪಡಿಸಲಾಗಿರುವ ಎಸ್.ಇ.ಜಿ.ಎಸ್.ಅಥವಾ ಇನ್ನಾವುದಾದರು ನಿಧಿಯ ಮೂಲಕ ನಿರುದ್ಯೋಗ ಭತ್ಯೆ ಪಾವತಿಗಾಗಿ ಸ್ವಯಂ ಚಾಲಿತವಾಗಿ ಪಾವತಿ ಆದೇಶ ಜನರೇಟ್ ಆಗುವಂತೆ ಮಾಡುವುದು. (ಇದಕ್ಕಾಗಿ ಪ್ರತ್ಯೇಕ ಮಂಜೂರಾತಿ ಆದೇಶ ಬೇಕಾಗಿರುವ ಹಾಗೆ)

ಆ. ಈ ಬಗೆಯ ಪಾವತಿಯನ್ನು ಅದನ್ನು ನೀಡಬೇಕಾಗಿ ಬರುವ ದಿನಾಂಕದಿಂದ ೧೫ ದಿನಗಳನ್ನು ಮೀರದಂತೆ ಪಾವತಿ ಮಾಡತಕ್ಕದ್ದು. ಇಲ್ಲದಿದ್ದರೆ ಸಂಬಂಧಪಟ್ಟ ಕೆಲಸಗಾರರು ಮಜೂರಿ ಪಾವತಿ ಕಾಯ್ದೆ, ೧೯೩೬ (ಪೇಮೆಂಟ್ ಆಫ್ ವೇಜಸ್ಸ್ ಆಕ್ಟ್, ೧೯೩೬)ರ ಅನ್ವಯ ನಮೂದಿಸಲಾಗಿರುವಂತೆ ಅದೇ ತತ್ವಗಳ ಆಧಾರದ ಮೇಲೆ ಪರಿಹಾರವನ್ನು ಪಡೆಯಲು ಅರ್ಹರಾಗುತ್ತಾರೆ.

ಇ. ಮಜೂರಿ ಪಾವತಿ ಇತ್ಯಾದಿಗಳಂತೆ ನಿರುದ್ಯೋಗ ಭತ್ಯೆಯನ್ನು ಕೊಡುವ ಬ್ಯಾಂಕ್/ ಅಂಚೆ ಕಛೇರಿ ಖಾತೆಗೆ ಜಮಾ ಮಾಡತಕ್ಕದ್ದು.

೫. ಎಮ್.ಜಿ.ಎನ್.ಆರ್.ಇ.ಜಿ.ಎ. ಕಾಯ್ದೆಯ ಪ್ರಕರಣ-೮(೨)ರ ಅವಕಾಶಗಳಿಗೆ ಅನುಗುಣವಾಗಿ ನಿರುದ್ಯೋಗ ಭತ್ಯೆಯನ್ನು ಪಾವತಿ ಮಾಡದಿರುವುದು ಅಥವಾ ತಡವಾಗಿ ಪಾವತಿ ಮಾಡಿರುವುದು ಇಂತಹ ಪ್ರಕರಣಗಳಲ್ಲಿ ಡಿ.ಪಿ.ಸಿ. ಮೂಲಕ ರಾಜ್ಯ ಸರ್ಕಾರಕ್ಕೆ ಸಲ್ಲಿಸಲಾಗುವ ವಾರ್ಷಿಕ ವರದಿಯಲ್ಲಿ ಹೀಗೆ ಪಾವತಿ ಮಾಡದಿರುವುದಕ್ಕೆ ಇಲ್ಲವೆ ತಡವಾಗಿ ಪಾವತಿ ಮಾಡಿರುವುದಕ್ಕೆ ಕಾರಣಗಳನ್ನು ನಮೂದಿಸಿ ವಿವರಣೆ ನೀಡಿರತಕ್ಕದ್ದು.

೬. ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆಯ ಪ್ರಕರಣ-೮(೩)ರ ಅನ್ವಯ ಸಂಬಂಧ ಪಟ್ಟ ಕುಟುಂಬಕ್ಕೆ ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ನಿರುದ್ಯೋಗ ಭತ್ಯೆಯನ್ನು ಪಾವತಿ ಮಾಡಲು ಅಗತ್ಯವಾದ ಕ್ರಮವನ್ನು ರಾಜ್ಯ ಸರ್ಕಾರ ಕೈಗೊಳ್ಳಬಹುದು. ಇನ್ನು ನಿರುದ್ಯೋಗ ಭತ್ಯೆಯನ್ನು ಯಾವಾಗ ಮತ್ತು ಎಷ್ಟು ಪಾವತಿಸಬೇಕು ಎಂಬುದನ್ನೂ ಸಹ ಕಾಯಿದೆಯು ಕೂಲಂಕಷವಾಗಿ ವಿವರಿಸಿದೆ.

೭. ಯಾವುದೇ ಒಬ್ಬ ಅರ್ಜಿದಾರನಿಗೆ ಅವರಿಂದ ಅರ್ಜಿ ಪಡೆದ ೧೫ ದಿನಗಳ ಅವಧಿಯ ಒಳಗಾಗಿ ಉದ್ಯೋಗವನ್ನು ಒದಗಿಸಲಾಗದೆ ಹೋದರೆ ಅಂತವರು ದಿನಂಪ್ರತಿ ನಿರುದ್ಯೋಗ ಭತ್ಯೆ ಪಡೆಯಲು ಅರ್ಹರಾಗಿರುತ್ತಾರೆ. ಉದ್ಯೋಗಕ್ಕಾಗಿ ಮುಂಗಡ ಅರ್ಜಿ ಸಲ್ಲಿಸಿದ್ದ ಪಕ್ಷದಲ್ಲಿ, ಸದರಿ ದಿನದಿಂದ ಅಥವಾ ಅರ್ಜಿ ಸಲ್ಲಿಸಿದ ೧೫ ದಿನಗಳ ಒಳಗಾಗಿ, ಇವುಗಳಲ್ಲಿ ಯಾವುದು ಆನಂತರ ಬರುತ್ತದೆಯೋ ಅಂದಿನಿಂದ ಅವರಿಗೆ ಉದ್ಯೋಗ ದೊರಕಿಸಿಕೊಡಬೇಕು. ಇಲ್ಲದಿದ್ದರೆ ಅವರು ನಿರುದ್ಯೋಗ ಭತ್ಯೆ ಪಡೆಯಲು ಅರ್ಹರೆನಿಸಿಕೊಳ್ಳುತ್ತಾರೆ.

೨. ಕಾಯ್ದೆಯ ಪ್ರಕರಣ ೭ರ ಅನ್ವಯ ನಿರುದ್ಯೋಗ ಭತ್ಯೆಯನ್ನು ನೀಡಲಾಗುತ್ತದೆ. ಈ ರೀತಿ ನೀಡಲಾಗುವ ಭತ್ಯೆ ಯಾವುದೇ ಆರ್ಥಿಕ ವರ್ಷದಲ್ಲಿ ಮೊದಲ ೩೦ ದಿನಗಳಿಗಾಗಿ ಗೊತ್ತು ಮಾಡಲಾಗಿರುವ ಮಜೂರಿ ದರದ ಕಾಲು ಭಾಗ (೧/೪) ಕಡಿಮೆಯಿಲ್ಲದಷ್ಟು ಹಾಗೂ ಆ ಹಣಕಾಸು ವರ್ಷದ ಉಳಿದ ಅವಧಿಗೆ ಮಜೂರಿ ದರದ ಅರ್ಧಕ್ಕಿಂತ (೧/೨) ಕಡಿಮೆಯಿಲ್ಲದಷ್ಟು ಇರತಕ್ಕದ್ದು. ಹೀಗೆ ನಿರುದ್ಯೋಗ ಭತ್ಯೆಯನ್ನು ನಿಗಧಿಪಡಿಸಲಾಗಿದೆ.

ಇನ್ನು ಈ ನಿರುದ್ಯೋಗ ಭತ್ಯೆಯು ಅನ್ವಯವಾಗದೇ ಇರುವಂತಹ ಸನ್ನಿವೇಶಗಳನ್ನೂ ಸಹ ಉದ್ಯೋಗ ಖಾತರಿ ಕಾಯಿದೆಯು ಸ್ಪಷ್ಟವಾದ ಚಿತ್ರಣವನ್ನು ಒದಗಿಸಿಕೊಟ್ಟಿದೆ. ಯಾವುದೇ ಆರ್ಥಿಕ ವರ್ಷದಲ್ಲಿ ಯಾವುದೇ ಕುಟುಂಬಕ್ಕೆ ರಾಜ್ಯ ಸರ್ಕಾರ ನಿರುದ್ಯೋಗ ಭತ್ಯೆ ನೀಡಬೇಕಾದ ಹೊಣೆಗಾರಿಕೆ ಈ ಕೆಳಕಂಡ ಸಂದರ್ಭಗಳಲ್ಲಿ ಮುಗಿದು ಹೋಗುತ್ತದೆ.

ಅ. ಗ್ರಾಮ ಪಂಚಾಯಿತಿ ಅಥವಾ ಕಾರ್ಯಕ್ರಮ ಅಧಿಕಾರಿಗಳ ಮೂಲಕ ಸದರಿ ಕುಟುಂಬದ ಅರ್ಜಿದಾರ ಇಲ್ಲವೆ ಕುಟುಂಬದ ಕಡೆಯ ಪಕ್ಷ ಯಾರಾದರೂ ವಯಸ್ಕ ಸದಸ್ಯ ಕೆಲಸಕ್ಕೆ ಹಾಜರಾಗುವಂತೆ ನಿರ್ದೇಶನ ನೀಡಿದಾಗ ; ಅಥವಾ

ಆ. ಕೆಲಸವನ್ನು ಕೋರಲಾಗಿದ್ದ ಅವಧಿ ಪೂರೈಸಿ ಅರ್ಜಿದಾರ ಕುಟುಂಬದ ಯಾವೊಬ್ಬ ಸದಸ್ಯರು ಕೆಲಸಕ್ಕೆ ಹಾಜರಾಗದೆ ಹೋದಾಗ ; ಅಥವಾ

ಇ. ಅರ್ಜಿದಾರ ಕುಟುಂಬದ ವಯಸ್ಕ ಸದಸ್ಯರಿಗೆ ಹಣಕಾಸು ವರ್ಷದ ಅವಧಿಯ ಒಳಗೆ ಒಟ್ಟಾರೆಯಾಗಿ ಕಡೆಯ ಪಕ್ಷ ೧೦೦ ದಿನಗಳಷ್ಟು ಕೆಲಸ ಈಗಾಗಲೇ ದೊರಕಿದ್ದರೆ; ಅಥವಾ

ಈ. ಯಾವುದೇ ಹಣಕಾಸು ವರ್ಷದಲ್ಲಿ ಅರ್ಜಿದಾರ ಕುಟುಂಬಕ್ಕೆ ದೊರಕಿದ ಮಜೂರಿ ಮತ್ತು ನಿರುದ್ಯೋಗ ಭತ್ಯೆಗಳು ಒಟ್ಟು ಸೇರಿ ನೂರು ದಿನಗಳಿಗೆ ದೊರಕಬಹುದಾಗಿದ್ದ ಮಜೂರಿ ಮೊತ್ತಕ್ಕೆ ಸಮನಾದಾಗ.

ಉ. ಯಾವುದೇ ಒಬ್ಬ ಅರ್ಜಿದಾರ ತನ್ನ ಕುಟುಂಬಕ್ಕೆ ನೀಡಲಾದ ಉದ್ಯೋಗವನ್ನು ಒಪ್ಪಿಕೊಳ್ಳದೆ ಹೋಗುವ ಪಕ್ಷದಲ್ಲಿ; ಅಥವಾ

ಊ. ಕಾರ್ಯಕ್ರಮ ಅಧಿಕಾರಿ ಅಥವಾ ಉದ್ಯೋಗ ಒದಗಿಸುವ ಕಾರ್ಯಾಚರಣೆ ಏಜೆನ್ಸಿ ಕೆಲಸಕ್ಕೆ ಹಾಜರಾಗಲು ಯಾವುದೇ ಅರ್ಜಿದಾರ ಕುಟುಂಬಕ್ಕೆ ತಿಳಿಸಿದ ೧೫ ದಿನಗಳ ಒಳಗೆ ಆ ಕುಟುಂಬದ ವಯಸ್ಕ ಸದಸ್ಯರು ಕೆಲಸಕ್ಕೆ ಹಾಜರಾಗದೆ ಹೋದರೆ; ಅಥವಾ

ಇ. ಸಂಬಂಧಪಟ್ಟ ಉದ್ಯೋಗ ವಿತರಣೆ ಏಜೆನ್ಸಿಯ ಅನುಮತಿ ಇಲ್ಲದೆ ನಿರಂತರವಾಗಿ ಒಂದು ವಾರಕ್ಕಿಂತ ಹೆಚ್ಚು ಕಾಲ ಕೆಲಸದಿಂದ ಗೈರು ಹಾಜರಾದರೆ ಅಥವಾ

ಯಾವುದೇ ತಿಂಗಳಲ್ಲಿ ಒಂದು ವಾರಕ್ಕಿಂತ ಹೆಚ್ಚು ಕಾಲದವರೆಗೆ ಕೆಲಸದಿಂದ ಗೈರು ಹಾಜರಾದರೆ ಅಂತಹ ಅರ್ಜಿದಾರ ಕುಟುಂಬ ಈ ಕಾಯ್ದೆ ಅನ್ವಯ ಪಾವತಿಯಾಗಬೇಕಾಗಿರುವ ನಿರುದ್ಯೋಗ ಭತ್ಯೆಗೆ ಮೂರು ತಿಂಗಳಷ್ಟು ಅವಧಿಯವರೆಗೆ ಅರ್ಹವಾಗಿರುವುದಿಲ್ಲ, ಆದರೆ ಯಾವುದೇ ಸಮಯದಲ್ಲಿ ಯೋಜನೆಯಡಿಯಲ್ಲಿ ಉದ್ಯೋಗಕ್ಕಾಗಿ ಅರ್ಜಿ ಸಲ್ಲಿಸಲು ಆ ಕುಟುಂಬ ಅರ್ಹವಾಗಿರುತ್ತದೆ. ಹೀಗೆ ಹಲವು ನಿಬಂಧನೆಗಳೂ ಸಹ ಈ ಕಾಯಿದೆಯಲ್ಲಿ ಇರುವುದನ್ನು ಕಾಣಬಹುದಾಗಿದೆ.

**೪.೯. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯಲ್ಲಿ ಹಣಕಾಸಿನ ನಿರ್ವಹಣೆ**

ಉದ್ಯೋಗ ಖಾತರಿ ಯೋಜನೆಯಲ್ಲಿ ಹಣಕಾಸಿನ ನಿರ್ವಹಣೆಯೂ ಸಹ ಪ್ರಮುಖ ಅಂಶವಾಗಿರುತ್ತದೆ. ಮುಖ್ಯವಾಗಿ ಈ ಕೆಳಗಿನವರು ಬೇರೆ ಬೇರೆ ಮಟ್ಟಗಳಲ್ಲಿ ಹಣಕಾಸನ್ನು ನಿರ್ವಹಿಸುತ್ತಿರುತ್ತಾರೆ.

- ರಾಜ್ಯ ಮಟ್ಟದಲ್ಲಿ ರಾಜ್ಯ ಉದ್ಯೋಗ ಖಾತರಿ ಪರಿಷತ್ತು.
- ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಕಾರ್ಯಕ್ರಮ ಸಮನ್ವಯಾಧಿಕಾರಿ ಅಂದರೆ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ.
- ತಾಲೂಕು ಮಟ್ಟದಲ್ಲಿ ತಾಲೂಕು ಕಾರ್ಯಕ್ರಮ ಸಮನ್ವಯಾಧಿಕಾರಿ ಅಂದರೆ ತಾಲೂಕು ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ.
- ಗ್ರಾಮೀಣ ಮಟ್ಟದಲ್ಲಿ ಗ್ರಾಮ ಪಂಚಾಯಿತಿ.
- ಕೂಲಿಯನ್ನು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಮಾತ್ರ ನೀಡಬಹುದು.
- ಸಾಮಾಗ್ರಿ ವೆಚ್ಚವನ್ನು ಸಂಬಂಧಪಟ್ಟ ಕಾರ್ಯ ನಿರ್ವಾಹಕ ಏಜೆನ್ಸಿ ಮೂಲಕ ನೀಡಲಾಗುವುದು. ಹೀಗೆ ಈ ಕಾಯಿದೆಯಲ್ಲಿ ಹಣಕಾಸು ವ್ಯವಹಾರವನ್ನು ನಿರ್ಧಿಷ್ಟ ನಿಯುಮಗಳಿಗೆ ಅನುಗುಣವಾಗಿ ನಿರ್ವಹಿಸಲ್ಪಟ್ಟಿರುತ್ತದೆ. ಮುಖ್ಯವಾಗಿ ಈ ಯೋಜನೆಯಡಿಯಲ್ಲಿ ಕೆಲಸ ಮಾಡಿದ ಜನರಿಗೆ ಯಾವುದೇ ತೊಂದರೆಯಾಗದಂತೆ ಸಮಯಕ್ಕೆ ಸರಿಯಾಗಿ ಕೂಲಿಯನ್ನು ಒದಗಿಸುವ ಜವಾಬ್ದಾರಿ ಈ ಮೇಲಿನವರಿಗೆ ಇರುತ್ತದೆ.

**೪.೧೦. ಉದ್ಯೋಗ ಖಾತರಿ ಯೋಜನೆಯಲ್ಲಿ ದಾಖಲೆಗಳ ನಿರ್ವಹಣೆ**

ದಾಖಲೆಗಳ ಸೂಕ್ತ ರೀತಿಯ ನಿರ್ವಹಣೆಯು ಎಮ್‌ಎನ್‌ಆರ್‌ಇಜಿಎಯ ಅನುಷ್ಠಾನದ ಯಶಸ್ಸನ್ನು ಖಾತ್ರಿಗೊಳಿಸುವ ಪ್ರಮುಖ ಅಂಶಗಳಲ್ಲಿ ಒಂದಾಗಿದೆ. ಪ್ರಮುಖ ಸಲಹೆಗಳು, ಪ್ರಕ್ರಿಯೆಗಳು, ಫಲಿತಾಂಶಗಳು ಇತ್ಯಾದಿಗಳ ಮೇಲಿನ ಮಾಹಿತಿಯನ್ನು ಕರಾರುವಕ್ಕಾಗಿ, ಅನುಸೂಚಿತವಹಿಗಳಲ್ಲಿ ಜಿಲ್ಲೆ, ತಾಲೂಕು, ಗ್ರಾಮ ಪಂಚಾಯತಿ ಮತ್ತು ಅನುಷ್ಠಾನಗೊಳಿಸುವ

ಇತರ ಸಂಸ್ಥೆಗಳ ಮಟ್ಟದಲ್ಲಿ ದಾಖಲು ಮಾಡಬೇಕಾಗುತ್ತದೆ. ಕಂಪ್ಯೂಟರ್ ಆಧಾರಿತ ಎಂಐಎಸ್ ಸಹ ಇದೇ ಮಾಹಿತಿಯನ್ನು ವಿದ್ಯುನ್ಮಾನ ತಂತ್ರಾಂಶದ ಮೂಲಕ ಗಣಕೀಕರಿಸುವ ಮೂಲಕ ದಾಖಲೆಗಳನ್ನು ಸುಲಭವಾಗಿ ನಿರ್ವಹಿಸಬಹುದಾಗಿದೆ. ಆದುದರಿಂದ, ಅನುಸೂಚಿತ ದಾಖಲೆಗಳಲ್ಲಿ ಹೆಚ್ಚಿನವುಗಳನ್ನು ಎಂಐಎಸ್ ತಂತ್ರಾಂಶದಿಂದ ಡೌನ್‌ಲೋಡ್ ಮಾಡಿ ಮುದ್ರಿಸಿಕೊಳ್ಳಬಹುದು ಹಾಗೂ ಅವುಗಳ ದೃಢೀಕರಿಸಿದ ಪ್ರತಿಯನ್ನು ದಾಖಲೆಗಳಾಗಿ ನಿರ್ವಹಿಸಬಹುದು. ಇದರಿಂದ ಲೆಕ್ಕ ತಯಾರಿಯ ಸಮಯದ ಉಳಿತಾಯದೊಂದಿಗೆ ಪಾರದರ್ಶಕತೆ ಮತ್ತು ಉತ್ತರಾದಾಯಿತ್ವವನ್ನು ಕಾಯ್ದುಕೊಳ್ಳಬಹುದಾಗಿದೆ.

**ದಾಖಲೆಗಳ ನಿರ್ವಹಣೆ ಮತ್ತು ಜವಾಬ್ದಾರಿ**

೧. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ/ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ಕಾರ್ಯಕ್ರಮ ಅಧಿಕಾರಿ, ಹಾಗೂ ಜಿಲ್ಲಾ ಕಾರ್ಯಕ್ರಮ ಸಮನ್ವಯಾಧಿಕಾರಿಗಳು(ಡಿಪಿಸಿ) ಇವರುಗಳು ಅನುಗುಣವಾಗಿ ಪಂಚಾಯತ್ ಮಟ್ಟದಲ್ಲಿ, ತಾಲೂಕು ಮಟ್ಟದಲ್ಲಿ ಹಾಗೂ ಜಿಲ್ಲಾ ಮಟ್ಟದಲ್ಲಿ ಎಲ್ಲಾ ದಾಖಲೆಗಳನ್ನು ನಿರ್ವಹಿಸುವ ಜವಾಬ್ದಾರಿ ಹೊಂದಿರುತ್ತಾರೆ. ಅನುಷ್ಠಾನ ಸಂಸ್ಥೆಗಳಿಗೆ ಸಂಬಂಧಿಸಿದಂತೆ ನೋಡಲ್ ಇಲಾಖೆಗಳು ಎಲ್ಲಾ ದಾಖಲೆಗಳನ್ನು ನಿರ್ವಹಿಸುವ ಜವಾಬ್ದಾರಿ ಹೊಂದಿರುತ್ತಾರೆ.

**ನಿರ್ವಹಿಸಬೇಕಾದ ದಾಖಲೆಗಳ ವಿವರಗಳು**

೧. ವಿವಿಧ ಹಂತಗಳಲ್ಲಿ ವ್ಯವಸ್ಥಿತವಾಗಿ ಮಾಹಿತಿ ಸಂಗ್ರಹಣೆ ಮಾಡುವುದನ್ನು ಸುಗಮಗೊಳಿಸಲು ಹಾಗೂ ಸಂಪೂರ್ಣ ಪಾರದರ್ಶಕತೆ ಹಾಗೂ ಹೊಣೆಗಾರಿಕೆಗಾಗಿ, ಮಹಾತ್ಮಗಾಂಧಿ ಎನ್‌ಆರ್‌ಇಜಿಎ(NREGA)ದ ಅಡಿಯಲ್ಲಿ ಈ ಕೆಳಗಿನ ದಾಖಲೆಗಳನ್ನು ನಿರ್ವಹಿಸಬೇಕಾಗುತ್ತದೆ.

೨. ಟೆಂಡರ್/ಗುತ್ತಿಗೆ ದಾಖಲಾತಿ(ರಿಜಿಸ್ಟರ್)–ಈ ದಾಖಲಾತಿಯು ಗ್ರಾಮ ಪಂಚಾಯತಿಗಳ/ತಾಲೂಕು/ಜಿಲ್ಲೆಗಳು ನೀಡಿರುವ ಜಾಹೀರಾತು, ಟೆಂಡರುಗಳ ಮೇಲಿನ ಮಾಹಿತಿಯನ್ನು ಒಳಗೊಂಡಿರುವುದು. ವಿವರಗಳನ್ನು ಪರಿಶೀಲಿಸಲು ಹಾಗೂ ಖಚಿತಪಡಿಸಲು ಟೆಂಡರು ಜಾಹೀರಾತಿನ ಪ್ರತಿ ಹಾಗೂ ಅರ್ಜಿ ಹಾಕಿರುವ ಸಂಸ್ಥೆಗಳ, ಮಾರಾಟಗಾರರ ಪ್ರತಿಯನ್ನು ಪ್ರತ್ಯೇಕವಾದ ಕಡತದಲ್ಲಿ ನಿರ್ವಹಿಸಲಾಗುವುದು.

೩. ಈ ರಿಜಿಸ್ಟರ್‌ಗಳು ಹಾಗೂ ಕಡತಗಳು ಗ್ರಾಮ ಪಂಚಾಯತಿನ ಮಟ್ಟದಲ್ಲಿ ಪಂಚಾಯತ್ ಕಾರ್ಯದರ್ಶಿಯಿಂದ, ಬ್ಲಾಕ್ ಮಟ್ಟದಲ್ಲಿ ಕಾರ್ಯಕ್ರಮ ಅಧಿಕಾರಿಯಿಂದ ಹಾಗೂ ಜಿಲ್ಲಾ ಮಟ್ಟದಲ್ಲಿ ಡಿಪಿಸಿಯಿಂದ ನಿರ್ವಹಿಸಲ್ಪಡುತ್ತದೆ. ಟೆಂಡರುಗಳ/ಗುತ್ತಿಗೆಗಳ ವಿವರಣಾತ್ಮಕ ದಾಖಲೆಯು ಅಡಕ–೧೬ರಲ್ಲಿರುವಂತೆ ರಿಜಿಸ್ಟರ್‌ನಲ್ಲಿ ದಾಖಲಾಗಿರುತ್ತದೆ.

೪. ಸಾಮಗ್ರಿ ಪ್ರಾಪ್ತಿ ದಾಖಲಾತಿ(ರಿಜಿಸ್ಟರ್)– ಈ ದಾಖಲಾತಿಯು ತರಿಸಿಕೊಂಡಿರುವ ಸಾಮಗ್ರಿಗಳ ವಿವರಗಳನ್ನು ಒಳಗೊಂಡಿರುವುದು. ಈ ದಾಖಲಾತಿಯು ಗ್ರಾಮ

ಪಂಚಾಯತಿನ ಮಟ್ಟದಲ್ಲಿ ಪಂಚಾಯತ್ ಕಾರ್ಯದರ್ಶಿಯಿಂದ, ಬ್ಲಾಕ್ ಮಟ್ಟದಲ್ಲಿ ಕಾರ್ಯಕ್ರಮ ಅಧಿಕಾರಿಯಿಂದ ಹಾಗೂ ಜಿಲ್ಲಾ ಮಟ್ಟದಲ್ಲಿ ಡಿಪಿಸಿಯಿಂದ ಹಾಗೂ ಅನುಷ್ಠಾನಗೊಳಿಸುವ ಇತರ ಸಂಸ್ಥೆಗಳಿಂದ ನಿರ್ವಹಿಸಲ್ಪಡುತ್ತದೆ. ಸಾಮಗ್ರಿ ಪ್ರಾಪ್ತಿಯ ವಿವರಣೆಯು ಅಡಕ-೧೭ರಲ್ಲಿರುವಂತೆ ದಾಖಲಾತಿ ಪುಸ್ತಕದಲ್ಲಿ ದಾಖಲಾಗಿರುತ್ತದೆ.

೫. ಇ-ಹಾಜರಾತಿ ನೀಡಿದ ದಾಖಲಾತಿ (ರಿಜಿಸ್ಟರ್) ಈ ದಾಖಲಾತಿಯನ್ನು ಕಾರ್ಯನಿರ್ವಾಹಕ ಅಧಿಕಾರಿಯು ಹೊರಡಿಸಿರುವ, ಎನ್.ಆರ್.ಇ.ಜಿ.ಎ. ತಂತ್ರಾಂಶದಿಂದ ಪಡೆದಿರುವ ಇ-ಹಾಜರಾತಿ ದಾಖಲೆಯ ಮುದ್ರಿತ ಪ್ರತಿಯನ್ನು ಒಳಗೊಂಡಿರುತ್ತದೆ. ಅಸಾಧಾರಣ ಅಥವಾ ಅನಿವಾರ್ಯ ಸಂದರ್ಭಗಳಲ್ಲಿ ಹಾಜರಾತಿಯ ಹಾಳೆಗಳನ್ನು ಅಡಕ-೨ರಂತೆ ಕಾರ್ಯನಿರ್ವಾಹಕ ಅಧಿಕಾರಿಯು ದಾಖಲಾತಿಯಲ್ಲಿ ನಿರ್ವಹಿಸುವರು.

೬. ಗ್ರಾಮ ಪಂಚಾಯಿತಿಗಳಿಗೆ ಇ-ಹಾಜರಾತಿ ಸ್ವೀಕೃತಿ ದಾಖಲಾತಿ(ರಿಜಿಸ್ಟರ್) ಈ ದಾಖಲಾತಿ/ಫೋಲ್ಡರ್ ಕಾರ್ಯನಿರ್ವಾಹಕ ಅಧಿಕಾರಿಯು ಸ್ವೀಕರಿಸಿರುವ, ಎನ್.ಆರ್.ಇ.ಜಿ.ಎ. ತಂತ್ರಾಂಶದಿಂದ ಪಡೆದಿರುವ ಇ-ಹಾಜರಾತಿ ದಾಖಲೆಯ ಮುದ್ರಿತ ಪ್ರತಿಯನ್ನು ಒಳಗೊಂಡಿರುತ್ತದೆ. ಅಸಾಧಾರಣ ಅಥವಾ ಅನಿವಾರ್ಯ ಸಂದರ್ಭಗಳಲ್ಲಿ ಹಾಜರಾತಿಯ ಹಾಳೆಗಳನ್ನು ಅಡಕ-೧೨ರಂತೆ ಗ್ರಾಮ ಪಂಚಾಯಿತಿಗಳು ಹಾಗೂ ಇತರ ಅನುಷ್ಠಾನ ಸಂಸ್ಥೆಗಳು ನಿರ್ವಹಿಸುತ್ತವೆ. ಈ ದಾಖಲಾತಿಯನ್ನು ಕಾರ್ಯನಿರ್ವಾಹಕ ಅಧಿಕಾರಿಯಿಂದ ಇ-ಹಾಜರಾತಿ/ಕಾಗದದ ಹಾಜರಾತಿಯನ್ನು ಸ್ವೀಕರಿಸುವ ಗ್ರಾಮ ಪಂಚಾಯಿತಿ ಹಾಗೂ ಅನುಷ್ಠಾನಗೊಳಿಸುವ ಇತರ ಸಂಸ್ಥೆಗಳು ನಿರ್ವಹಿಸಬೇಕು.

೭. ಉದ್ಯೋಗ ಚೀಟಿ ಅರ್ಜಿ ದಾಖಲಾತಿ(ರಿಜಿಸ್ಟರ್) ಈ ದಾಖಲಾತಿಯು ಅರ್ಜಿದಾರರ ಹೆಸರು, ಅರ್ಜಿ ಸ್ವೀಕರಿಸಿದ ದಿನಾಂಕ ಹಾಗೂ ಉದ್ಯೋಗ ಚೀಟಿ ವಿತರಿಸಿದ ವಿವರಗಳನ್ನು ಒಳಗೊಂಡಿರುತ್ತದೆ. ಅಲ್ಲದೆ, ಯಾವುದೇ ಕಾರಣಕ್ಕಾಗಿ ಉದ್ಯೋಗ ಚೀಟಿಯ(ಗಳ)ನ್ನು ನೀಡಿರದಿದ್ದಲ್ಲಿ ಅದಕ್ಕೆ ಕಾರಣ/ಸಮರ್ಥನೆಯನ್ನು ದಾಖಲಿಸುವ ಅವಕಾಶವನ್ನು ಅದರಲ್ಲಿ ಒದಗಿಸಲಾಗುತ್ತದೆ. ಈ ರಿಜಿಸ್ಟರನ್ನು ಗ್ರಾಮ ಪಂಚಾಯತಿ ಮಟ್ಟದಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ/ಪಂಚಾಯತ್ ಕಾರ್ಯದರ್ಶಿ ಹಾಗೂ ತಾಲೂಕು ಮಟ್ಟದಲ್ಲಿ ಕಾರ್ಯನಿರ್ವಾಹಕ ಅಧಿಕಾರಿ ನಿರ್ವಹಿಸಬೇಕಾಗುತ್ತದೆ. ಉದ್ಯೋಗ ಚೀಟಿ ಅರ್ಜಿಯ ವಿವರವಾದ ದಾಖಲೆಯನ್ನು ಅಡಕ-೧೮ರ ಅನುಸಾರವಾಗಿ ದಾಖಲೆ ಪುಸ್ತಕದಲ್ಲಿ ನಿರ್ವಹಿಸಲಾಗುತ್ತದೆ.

೮. ಉದ್ಯೋಗ ದಾಖಲಾತಿ ಈ ದಾಖಲಾತಿ ಪುಸ್ತಕದಲ್ಲಿ ಕೆಲಸಕ್ಕೆ ಅರ್ಜಿ, ಕೆಲಸದ ಹಂಚಿಕೆ, ಕೆಲಸದ ನಿರ್ವಹಣೆ ಹಾಗೂ ಪಾವತಿಗಳು ಮತ್ತು ಕೆಲಸಗಾರರಿಗೆ ಪಾವತಿಯಾದ ನಿರುದ್ಯೋಗ ಭತ್ತೆ ಇವುಗಳ ವಿವರಗಳನ್ನು ಒಳಗೊಂಡಿರುತ್ತದೆ. ಈ ದಾಖಲಾತಿಯು

ಗ್ರಾಮ ಪಂಚಾಯತಿ ಮಟ್ಟದಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ/ಪಂಚಾಯತ್ ಕಾರ್ಯದರ್ಶಿ ಹಾಗೂ ತಾಲೂಕು ಮಟ್ಟದಲ್ಲಿ ಕಾರ್ಯಕ್ರಮ ಅಧಿಕಾರಿ ಹಾಗೂ ಅನುಷ್ಠಾನಗೊಳಿಸುವ ಇತರ ಸಂಸ್ಥೆಗಳು ನಿರ್ವಹಿಸಲ್ಪಡುತ್ತದೆ. ಅಡಕ-೧೯ಕ್ಕೆ ಅನುಸಾರವಾಗಿ ಕೆಲಸಗಳ ವಿವರಗಳ ದಾಖಲೆಯು ರಿಜಿಸ್ಟರ್‌ನಲ್ಲಿ ನಿರ್ವಹಿಸಲ್ಪಡುತ್ತದೆ.

೯. ಕೆಲಸಗಳು ದಾಖಲಾತಿಯ ಪುಸ್ತಕ- ಈ ದಾಖಲಾತಿಯಲ್ಲಿ ಪ್ರತಿಯೊಂದು ಕೆಲಸದ ವಿವರವನ್ನು ಕಾಮಗಾರಿಯ ಕ್ರಮ ಸಂಖ್ಯೆ, ಅನುಮೋದಿತ ಕಾಮಗಾರಿ ಗುಚ್ಛದ ಆದ್ಯತೆ, ಪಿಐಎಯ ಹೆಸರು ಮತ್ತು ವಿಳಾಸ, ಕೆಲಸ ಆರಂಭವಾದ ದಿನಾಂಕ, ಅದರ ಮೌಲ್ಯ, ಸ್ಥಾನ, ಮುಕ್ತಾಯಗೊಳಿಸಿದ ದಿನಾಂಕ, ಆಗಿರುವ ಖರ್ಚುವೆಚ್ಚಗಳು, ಸಂಪೂರ್ಣಗೊಳಿಸಿದ ಪ್ರಮಾಣ ಪತ್ರ ನೀಡಿರುವ ದಿನಾಂಕ, ಇವುಗಳ ವಿವರಗಳನ್ನು ಒಳಗೊಂಡಿರುತ್ತದೆ. ಈ ದಾಖಲಾತಿಯು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ/ಪಂಚಾಯಿತಿ ಕಾರ್ಯದರ್ಶಿಯಿಂದ ಹಾಗೂ ತಾಲೂಕು ಮಟ್ಟದಲ್ಲಿ ಕಾರ್ಯಕ್ರಮ ಅಧಿಕಾರಿಯಿಂದ ಹಾಗೂ ಅನುಷ್ಠಾನಗೊಳಿಸುವ ಇತರ ಸಂಸ್ಥೆಗಳಿಂದ ನಿರ್ವಹಿಸಲ್ಪಡುತ್ತದೆ. ಕೆಲಸಗಳ ವಿವರವಾದ ದಾಖಲೆಯು ಅಡಕ-೨೦ರಲ್ಲಿರುವಂತೆ ದಾಖಲಾತಿ ಪುಸ್ತಕದಲ್ಲಿ ನಿರ್ವಹಿಸಲ್ಪಡುತ್ತದೆ.

೧೦. ಆಸ್ತಿಗಳ ದಾಖಲಾತಿ ಪುಸ್ತಕ(ರಿಜಿಸ್ಟರ್) ಈ ಪುಸ್ತಕದಲ್ಲಿ ಆಸ್ತಿ ವಿವರ, ಅದರ ಮೌಲ್ಯ, ಸ್ಥಾನ, ಪ್ರಸ್ತುತ ಸ್ಥಿತಿಗತಿ, ಪಡೆಯಬಹುದಾದ ಲಾಭಗಳು ಹಾಗೂ ಕೆಲಸದ ವಿವರಗಳನ್ನು ಒಳಗೊಂಡಿರುತ್ತದೆ. ಈ ರಿಜಿಸ್ಟರ್ ಗ್ರಾಮ ಪಂಚಾಯತಿ ಮಟ್ಟದಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ/ಕಾರ್ಯದರ್ಶಿಯಿಂದ ಹಾಗೂ ತಾಲೂಕು ಮಟ್ಟದಲ್ಲಿ ಕಾರ್ಯಕ್ರಮ ಅಧಿಕಾರಿಯಿಂದ ಹಾಗೂ ಅನುಷ್ಠಾನಗೊಳಿಸುವ ಇತರ ಸಂಸ್ಥೆಗಳಿಂದ ನಿರ್ವಹಿಸಲ್ಪಡುತ್ತವೆ. ಆಸ್ತಿಗಳ ವಿವರವಾದ ದಾಖಲೆಯು ಅಡಕ-೨೧ಕ್ಕೆ ಅನುಗುಣವಾಗಿ ದಾಖಲಾತಿ ಪುಸ್ತಕದಲ್ಲಿ ನಿರ್ವಹಿಸಬೇಕು.

೧೧. ದೂರು ದಾಖಲಾತಿ ಪುಸ್ತಕ(ರಿಜಿಸ್ಟರ್)-ದೂರು ಸ್ವೀಕೃತಿ ದಿನಾಂಕ, ದೂರು ನೀಡಿದವರ(ಫಿರ್ಯಾದುದಾರರ) ವಿವರಗಳು, ದೂರಿನ ಮೇಲೆ ತೆಗೆದುಕೊಂಡಿರುವ ಕ್ರಮ, ಕ್ರಮ ಕೈಗೊಂಡ ವರದಿ(ಎಟಿಆರ್)ಯ ಮೇಲೆ ಫಿರ್ಯಾದುದಾರರ ಪ್ರತಿಕ್ರಿಯೆ ಹಾಗೂ ಅಂತಿಮ ವಿಲೇವಾರಿ ಮಾಡಿದ ದಿನಾಂಕ ಇವುಗಳ ವಿವರಗಳನ್ನು ಈ ದಾಖಲಾತಿಯು ಒಳಗೊಂಡಿರುತ್ತದೆ. ಈ ದಾಖಲಾತಿ ಪುಸ್ತಕ ಗ್ರಾಮ ಪಂಚಾಯತಿ ಮಟ್ಟದಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ/ಕಾರ್ಯದರ್ಶಿಯಿಂದ, ತಾಲೂಕು ಮಟ್ಟದಲ್ಲಿ ಕಾರ್ಯಕ್ರಮ ಅಧಿಕಾರಿಯಿಂದ ಹಾಗೂ ಜಿಲ್ಲಾ ಮಟ್ಟದಲ್ಲಿ ಡಿಪಿಸಿ ಹಾಗೂ ಅನುಷ್ಠಾನಗೊಳಿಸುವ ಇತರ ಸಂಸ್ಥೆಗಳಿಂದ ನಿರ್ವಹಿಸಲ್ಪಡುತ್ತದೆ.

**ಹಣಕಾಸು ದಾಖಲೆಗಳು**

೧. ವೋಚರ್ ದಾಖಲಾತಿ ಪುಸ್ತಕ–ಈ ದಾಖಲಾತಿಯಲ್ಲಿ ಕ್ರಮ ಸಂಖ್ಯೆಗೆ ಅನುಸಾರವಾಗಿ ಜೋಡಿಸಿದ ಎಲ್ಲ ವೋಚರ್ ವಿವರಗಳನ್ನು ಒಳಗೊಂಡಿರುತ್ತದೆ. ಇವುಗಳನ್ನು ನಗದು ಪುಸ್ತಕದಲ್ಲಿ ಮಾಡಿರುವ ನಮೂದಿಗೆ ಅನುಕ್ರಮವಾಗಿ ಹೊಂದಾಣಿಕೆ ಮಾಡಬೇಕಾಗುತ್ತದೆ. ಇತರ ವೆಚ್ಚಗಳ ವೋಚರುಗಳಿಂದ ಅನಿರೀಕ್ಷಿತ(ಕಂಟಿಜೆನ್ಸಿ) ವೆಚ್ಚಗಳ ವೋಚರುಗಳನ್ನು ಪ್ರತ್ಯೇಕಿಸಬೇಕಾಗುತ್ತದೆ. ಹಾಗೂ ಅದಕ್ಕೆ ಅನುಸಾರವಾಗಿ, ನಗದು ಪುಸ್ತಕ ಹೊಂದಿಸಬೇಕಾಗುತ್ತದೆ. ಈ ದಾಖಲಾತಿಯು ಪಂಚಾಯತಿ ಮಟ್ಟದಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿ/ಪಂಚಾಯತಿ ಕಾರ್ಯದರ್ಶಿಯಿಂದ, ತಾಲೂಕು ಮಟ್ಟದಲ್ಲಿ ಕಾರ್ಯಕ್ರಮ ಅಧಿಕಾರಿಯಿಂದ, ಜಿಲ್ಲಾ ಮಟ್ಟದಲ್ಲಿ ಡಿಪಿಸಿ ಹಾಗೂ ಇತರ ಅನುಷ್ಠಾನ ಸಂಸ್ಥೆಗಳಿಂದ ನಿರ್ವಹಿಸಲ್ಪಡುತ್ತದೆ.

೨. ಅನುದಾನ ದಾಖಲಾತಿ ಪುಸ್ತಕ–ಈ ದಾಖಲಾತಿಯು ಕೇಂದ್ರ ಹಾಗೂ ರಾಜ್ಯದಿಂದ ಸ್ವೀಕರಿಸಿರುವ ಎಲ್ಲಾ ಅನುದಾನಗಳ ನಮೂದಿಗಳ ವಿವರಗಳನ್ನು ಒಳಗೊಂಡಿರುತ್ತದೆ. ಸ್ವೀಕರಿಸಲಾದ ಮೊತ್ತದ ವಿವರಗಳು, ದಿನಾಂಕ ಹಾಗೂ ಸಹಾಯಧನದ ಮೂಲಗಳೊಂದಿಗೆ ನಿರ್ವಹಿಸಲ್ಪಡಬೇಕು ಹಾಗೂ ಕ್ಯಾಶ್ ಬುಕ್ಕಿನಲ್ಲಿ ಅದು ಪ್ರತಿಫಲಿಸಲ್ಪಡಬೇಕು. ಈ ದಾಖಲಾತಿಯು ಗ್ರಾಮ ಪಂಚಾಯತಿ ಮಟ್ಟದಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿ/ಪಂಚಾಯತ್ ಕಾರ್ಯದರ್ಶಿ, ತಾಲೂಕು ಮಟ್ಟದಲ್ಲಿ ಕಾರ್ಯಕ್ರಮ ಅಧಿಕಾರಿ, ಜಿಲ್ಲಾ ಮಟ್ಟದಲ್ಲಿ ಡಿಪಿಸಿ ಹಾಗೂ ಅನುಷ್ಠಾನಗೊಳಿಸುವ ಇತರ ಸಂಸ್ಥೆಗಳಿಂದ ನಿರ್ವಹಿಸಲ್ಪಡುತ್ತದೆ.

೩. ನಗದು ಪುಸ್ತಕ ಮತ್ತು ಲೆಡ್ಜರ್: ಎಲ್ಲಾ ಪಾವತಿಗಳು ಹಾಗೂ ಸ್ವೀಕೃತಿಗಳು ವಿವರವಾಗಿ ದಾಖಲಿಸಲ್ಪಡಬೇಕು.

೪. ದಾಸ್ತಾನು ಪುಸ್ತಕ (ರಿಜಿಸ್ಟರ್): ಈ ಪುಸ್ತಕವು ಎಂಜಿಎನ್ಆರ್ಇಜಿ (MGNREGA)ಯ ಅಡಿಯಲ್ಲಿ ಸ್ವೀಕರಿಸಿರುವ ಹಾಗೂ ಹೊರನೀಡಿರುವ ಸ್ಟಾಕ್ ವಸ್ತುಗಳ ವಿವರಗಳನ್ನು ಒಳಗೊಂಡಿರುತ್ತದೆ. ಈ ಪುಸ್ತಕವು ಗ್ರಾಮ ಪಂಚಾಯತಿನ ಮಟ್ಟದಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿ/ಪಂಚಾಯತ್ ಕಾರ್ಯದರ್ಶಿ, ತಾಲೂಕು ಮಟ್ಟದಲ್ಲಿ ಕಾರ್ಯಕ್ರಮ ಅಧಿಕಾರಿ, ಜಿಲ್ಲಾ ಮಟ್ಟದಲ್ಲಿ ಡಿಪಿಸಿ ಹಾಗೂ ಅನುಷ್ಠಾನಗೊಳಿಸುವ ಇತರ ಸಂಸ್ಥೆಗಳಿಂದ ನಿರ್ವಹಿಸಲ್ಪಡುತ್ತದೆ.

೫. ಮಾಸಿಕ ಸ್ವೀಕೃತಿ ಹಾಗೂ ಪಾವತಿ(ಖರ್ಚುವೆಚ್ಚ)ಗಳ ದಾಖಲಾತಿ ಪುಸ್ತಕ(ರಿಜಿಸ್ಟರ್) ಈ ಪುಸ್ತಕವು ದಿನವಹಿ ಹಣಕಾಸು ಸ್ವೀಕೃತಿ, ಖರ್ಚುವೆಚ್ಚ, ಅನುಷ್ಠಾನಗೊಳಿಸುವ ಸಂಸ್ಥೆಯಲ್ಲಿ ಲಭ್ಯವಿರುವ ಉಳಿಕೆಯ ಹಣ, ಇವೆಲ್ಲವುಗಳ ವಿವರಗಳನ್ನು

ಒಳಗೊಂಡಿರುತ್ತದೆ. ಜೊತೆಗೆ, ಬಳಕೆಯ ಪ್ರಮಾಣಪತ್ರದ (ಬೇಬಾಕಿ ಪ್ರಮಾಣಪತ್ರ) ಸಲ್ಲಿಕೆ ಹಾಗೂ ಉಳಿಕೆಯ ವಿವರಗಳೂ ಇರುತ್ತವೆ. ಈ ರಿಜಿಸ್ಟರ್ ಗ್ರಾಮ ಪಂಚಾಯತಿನ ಮಟ್ಟದಲ್ಲಿ ಪಂಚಾಯತ್ ಕಾರ್ಯದರ್ಶಿ, ಬ್ಲಾಕ್ ಮಟ್ಟದಲ್ಲಿ ಕಾರ್ಯಕ್ರಮ ಅಧಿಕಾರಿ, ಜಿಲ್ಲಾ ಮಟ್ಟದಲ್ಲಿ ಡಿಪಿಸಿ ಹಾಗೂ ಅನುಷ್ಠಾನಗೊಳಿಸುವ ಇತರ ಸಂಸ್ಥೆಗಳಿಂದ ನಿರ್ವಹಿಸಲ್ಪಡುತ್ತದೆ.

೬. ಬ್ಯಾಂಕ್ ಮರುಹೊಂದಾಣಿಕೆಯ ಸ್ಟೇಟ್‌ಮೆಂಟ್ ದಾಖಲಾತಿ ಪುಸ್ತಕ: ಈ ದಾಖಲಾತಿ ಪುಸ್ತಕ– ನಗದು ಪುಸ್ತಕದ ಬ್ಯಾಂಕ್ ಕಾಲಂಗೆ ಅನುಸಾರವಾದ ಉಳಿಕೆ(ಬ್ಯಾಲೆನ್ಸ್)ಗಳು ಹಾಗೂ ಎಂಜಿಎನ್‌ಆರ್‌ಇಜಿಗೆ ಮೀಸಲಾದ ಬ್ಯಾಂಕ್ ಖಾತೆಯಿಂದ ಹಿಂಪಡೆಯಲಾದ/ ಸ್ವೀಕೃತವಾದ ಮೊತ್ತದ ನಡುವಿನ ವ್ಯತ್ಯಾಸವನ್ನು ಸರಿಪಡಿಸುವ ಮರುಹೊಂದಾಣಿಕೆಯ ತೆಖ್ತೆಗಳನ್ನು ಒಳಗೊಂಡಿರುತ್ತದೆ. ಇದರ ಉದ್ದೇಶವೆಂದರೆ, ಬ್ಯಾಂಕಿಗೆ ಸಂಬಂಧಪಟ್ಟ ಎಲ್ಲಾ ವ್ಯವಹಾರಗಳೂ ಅನುಷ್ಠಾನಗೊಳಿಸುವ ಸಂಸ್ಥೆಗಳಿಂದ ತಮ್ಮ ನಗದು ಪುಸ್ತಕದಲ್ಲಿ ಸರಿಯಾಗಿ ದಾಖಲಿಸಲ್ಪಟ್ಟಿವೆ ಎನ್ನುವುದನ್ನು ಖಚಿತಪಡಿಸುವುದು.

## ೪.೧೧. ಜನ ಯೋಜನೆಯಾಗಿ ಉದ್ಯೋಗ ಖಾತರಿ ಯೋಜನೆ

ಜನರಿಗಾಗಿ ಜನರೇ ಸಿದ್ಧಪಡಿಸಿ ಕಾರ್ಯರೂಪಕ್ಕೆ ತರುವ ಯೋಜನೆಯೇ ಜನ ಯೋಜನೆ. ಈ ಹಿಂದೆ ಎಲ್ಲಾ ಯೋಜನೆಗಳನ್ನು ಪರಿಣಿತರು ದೂರದಲ್ಲೆಲ್ಲೋ ಕುಳಿತು ರೂಪಿಸುತ್ತಿದ್ದರು. ಇವರಿಗೆ ತಾಂತ್ರಿಕ ಜ್ಞಾನ ಸಾಕಷ್ಟು ಇದ್ದರೂ ಜನರ ಅಗತ್ಯಗಳ ಬಗ್ಗೆ ಇರುವ ತಿಳುವಳಿಕೆ ಸಾಕಾಗುತ್ತಿರಲಿಲ್ಲ. ಪ್ರದೇಶದಿಂದ ಪ್ರದೇಶಕ್ಕೆ ಜನರ ಅಗತ್ಯಗಳು ಬೇರೆ ಬೇರೆ ಇರುವುದರಿಂದ ಒಂದೇ ರೀತಿಯ ಯೋಜನೆ ಎಲ್ಲರಿಗೂ ಉಪಯೋಗವಾಗುತ್ತಿರಲಿಲ್ಲ. ಹಾಗಾಗಿ ಗ್ರಾಮೀಣ ಜನರ ಅಭಿವೃದ್ಧಿಗಾಗಿ ಜಾರಿಯಾದ ಹಲವಾರು ಯೋಜನೆಗಳು ಫಲಕಾರಿಯಾಗಲಿಲ್ಲ. ಆದರೆ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯಲ್ಲಿ ಈ ರೀತಿಯ ಸಮಸ್ಯೆ ಇಲ್ಲ. ಏಕೆಂದರೆ ಯೋಜನೆಯನ್ನು ರೂಪಿಸುವಲ್ಲಿ ಗ್ರಾಮೀಣ ಜನರ ಪಾತ್ರ ಮಹತ್ವದ್ದಾಗಿದ್ದು, ಜನರೇ ತಮ್ಮ ಅಗತ್ಯಗಳನ್ನು ಗುರುತಿಸಿಕೊಂಡು ಆದ್ಯತೆಯ ಮೇರೆಗೆ ಯೋಜನೆ ರೂಪಿಸಿಕೊಳ್ಳುವ ಅವಕಾಶ ಈ ಕಾಯಿದೆಯಲ್ಲಿದೆ. ಹಾಗಾಗಿ ಗ್ರಾಮೀಣ ಜನರ ಉಪಸ್ಥಿತಿ ಕಡ್ಡಾಯವಾಗಿರುತ್ತದೆ. ಈ ನಿಟ್ಟಿನಲ್ಲಿ ಯೋಜನೆಗಳನ್ನು ರೂಪಿಸುವಲ್ಲಿ ಉದ್ಯೋಗ ಖಾತರಿ ಕಾಯಿದೆಯು ಕೆಲವು ಹಂತಗಳನ್ನು ರೂಪಿಸಿದೆ.

### ಮೊದಲನೆಯ ಹಂತ

* ಗ್ರಾಮ ಪಂಚಾಯತಿಗಳು ವಾರ್ಡ್ ಅಥವಾ ವಸತಿ ಸಭೆ ಕರೆಯಲು ವ್ಯವಸ್ಥೆ ಮಾಡಬೇಕು.

* ಪಂಚಾಯತಿ ಸದಸ್ಯರು ಮತ್ತು ಕಾರ್ಯದರ್ಶಿಗಳು ಈ ಸಭೆಯ ಹೊಣೆಯನ್ನು ವಹಿಸಿಕೊಳ್ಳಬೇಕಾಗುತ್ತದೆ. ಸಭೆಯ ದಿನಾಂಕ, ಸ್ಥಳ, ಸಮಯ, ಉದ್ದೇಶ, ಇತ್ಯಾದಿಗಳನ್ನು

ಕುರಿತು ನೋಟಿಸು, ಡಂಗೂರ, ಮನೆ ಮನೆ ಭೇಟಿ, ಮನವೊಲಿಕೆ ಇತ್ಯಾದಿ ವಿಧಾನಗಳಿಂದ ವ್ಯಾಪಕವಾಗಿ ಪ್ರಚಾರ ಮಾಡುವುದರ ಮೂಲಕ ಸಭೆಯನ್ನು ಕರೆಯಬೇಕಾಗುತ್ತದೆ. ಈ ಸಭೆಯಲ್ಲಿ ೩೦ ರಿಂದ ೪೦ ಗ್ರಾಮಸ್ಥರು ಇರಬೇಕಾಗುತ್ತದೆ. ಈ ವಾರ್ಡ್ ಅಥವಾ ವಸತಿ ಸಭೆಯಲ್ಲಿ ಜನರು ತಿಳಿಸುವ ಎಲ್ಲಾ ಅಭಿವೃದ್ಧಿ ಕೊರತೆ ಅಥವಾ ಸಮಸ್ಯೆಗಳನ್ನು ಪಟ್ಟಿ ಮಾಡಬೇಕು. ಹಾಗೂ ಈ ಸಮಸ್ಯೆಗಳ ನಿವಾರಣೋಪಾಯಗಳನ್ನು ಚರ್ಚಿಸಿ ಆದ್ಯತೆಯ ಮೇರೆಗೆ ಪಟ್ಟಿ ಮಾಡಬೇಕಾಗುತ್ತದೆ. ಈ ಆದ್ಯತಾ ಪಟ್ಟಿಯನ್ನು ಬಹುಮತದ ಆಧಾರದಲ್ಲಿ ತಯಾರಿಸಬೇಕಾಗುತ್ತದೆ. ಒಂದು ವೇಳೆ ಯೋಜನೆಯ ಕುರಿತಾಗಲೀ ಅಥವಾ ಕಾಮಗಾರಿಗಳ ಕುರಿತಾಗಲೀ ಜನರಿಗೆ ಸಮಸ್ಯೆ ಅಥವಾ ಭಿನ್ನಾಭಿಪ್ರಾಯಗಳಿದ್ದಲ್ಲಿ, ಅವರು ಕೈ ಎತ್ತುವ ಮೂಲಕ ಆದ್ಯತೆಗೆ ಇರುವ ಬೆಂಬಲವನ್ನು ಸ್ಪಷ್ಟಪಡಿಸಿಕೊಳ್ಳಲು ಅವಕಾಶವಿರುತ್ತದೆ. ಗ್ರಾಮ ಪಂಚಾಯತಿಯು ಒಂದು ಕಾರ್ಯತಂಡವನ್ನು ರಚಿಸಬೇಕಾಗುತ್ತದೆ. ಈ ಕಾರ್ಯ ತಂಡಕ್ಕೆ ಪ್ರತಿವಾರ್ಡ ಸಭೆಯಿಂದ ವಿಷಯ ಚೆನ್ನಾಗಿ ಅರಿತಿರುವ, ವಿಚಾರಗಳನ್ನು ಚೆನ್ನಾಗಿ ಮಂಡಿಸುವ ಗ್ರಾಮಸ್ಥರನ್ನು ಆಯ್ಕೆ ಮಾಡಿಕೊಳಬೇಕಾಗುತ್ತದೆ.

**ಎರಡನೆಯ ಹಂತ**

- ಈ ಹಂತದಲ್ಲಿ ಜನಪ್ರತಿನಿಧಿಗಳು, ಸ್ಥಳೀಯ ಅಧಿಕಾರಿಗಳು ಹಾಗೂ ಸಾಮಾಜಿಕ ಕಾರ್ಯಕರ್ತರಿರುವ ವಲಯವಾರು ಕಾರ್ಯತಂಡಗಳನ್ನು ರಚಿಸಬೇಕು. ಪ್ರಾಥಮಿಕ ಮಾಹಿತಿ ಸಂಗ್ರಹ ತಂಡ, ಉತ್ಪಾದನಾ ವಲಯ ತಂಡ, ಸಾಮಾಜಿಕ ನ್ಯಾಯ ವಲಯ ತಂಡ, ಮೂಲಭೂತ ಸೌಕರ್ಯ ವಲಯ ತಂಡ ಇನ್ನು ಮುಂತಾದ ಅಗತ್ಯಕ್ಕೆ ಅನುಗುಣವಾಗಿ ತಂಡಗಳನ್ನು ರಚಿಸಬಹುದಾಗಿದೆ.

- ಹೀಗೆ ರಚನೆಗೊಂಡ ಕಾರ್ಯತಂಡಗಳು ವಸತಿ ಪ್ರದೇಶಗಳಿಗೆ ಬೇಟಿ ನೀಡಿ ಎಲ್ಲಾ ವಲಯಗಳಿಗೆ ಸಂಬಂಧಿಸಿದ ಮಾಹಿತಿ ಸಂಗ್ರಹಿಸಬೇಕು. ಗ್ರಾಮೀಣ ಜನರ ಭಾಗವಹಿಸುವಿಕೆಯ ಮೂಲಕ ಈಗಿರುವ ಸ್ಥಿತಿಯ ಸಮೀಕ್ಷೆ ಮತ್ತು ಊರಿನ ಅಭಿವೃದ್ಧಿಯಲ್ಲಿ ಏನೇನು ಕೊರತೆಗಳಿವೆ ಎಂಬುದನ್ನು ಗುರುತಿಸುವುದರ ಜೊತೆಗೆ ಊರಿನ ಜನರ ಬೇಡಿಕೆಗಳು ಏನೇನು ಎಂಬುದನ್ನು ಗುರುತಿಸಬೇಕಾಗುತ್ತದೆ.

- ಈ ಕಾರ್ಯತಂಡಗಳು ಸಂಗ್ರಹಿಸಿದ ಮಾಹಿತಿಯನ್ನು ಆಧರಿಸಿ ವಸತಿ ಅಥವಾ ವಾರ್ಡ್ ಸಭೆಗಳನ್ನು ಸಂಘಟಿಸಬೇಕಾಗುತ್ತದೆ. ಸಮೀಕ್ಷೆಯಲ್ಲಿ ಕಂಡುಕೊಂಡ ವಾಸ್ತವ ಸ್ಥಿತಿಯ ಅಂಶಗಳನ್ನು ಸಭೆಯ ಮುಂದೆ ಮಂಡಿಸಬೇಕಾಗುತ್ತದೆ. ಹೀಗೆ ಸಂಘಟಿಸಿದ ಸಭೆಗಳಲ್ಲಿ ಮುಖ್ಯವಾಗಿ ಕೆಲವು ಅಂಶಗಳ ಬಗ್ಗೆ ಚರ್ಚೆಗಳು ನಡೆಯುತ್ತವೆ. ಗುರುತಿಸಲಾದ ಕೊರತೆಗಳು ಮತ್ತು ಬೇಡಿಕೆಗಳ ಕುರಿತು ವಿವರವಾಗಿ ಚರ್ಚಿಸುವುದು, ಕೈಗೊಳ್ಳಬೇಕಾದ ಅಭಿವೃದ್ಧಿ ಕಾರ್ಯಗಳನ್ನು ಆದ್ಯತೆಯ ಮೇರೆಗೆ ಗುರುತಿಸುವುದರ ಮೂಲಕ ಪಟ್ಟಿ ಮಾಡುವುದು, ವಾರ್ಡ್ ಸಭೆಗಳಲ್ಲಿ ಗುರುತಿಸಲಾಗಿರುವ ಆದ್ಯತಾ ಪಟ್ಟಿಯಲ್ಲಿ ಉದ್ಯೋಗ ಖಾತರಿ ಯೋಜನೆಯ

ಮೂಲಕ ಕೈಗೆತ್ತಿಕೊಳ್ಳಬಹುದಾದ ಯೋಜನೆಗಳು ಯಾವುವು ಎಂಬುದನ್ನು ಗುರುತಿಸುವುದು. ಹೀಗೆ ಯೋಜನೆಗಳನ್ನು ಗುರುತಿಸುವಾಗ ಕಾಯಿದೆಯಲ್ಲಿ ಹೇಳಲಾಗಿರುವ ಲೋಕೋಪಯೋಗಿ ಕೆಲಸಗಳಿಗೆ ಮಾತ್ರ ಆದ್ಯತೆ ನೀಡಬೇಕಾಗುತ್ತದೆ. ಈ ಸಂದರ್ಭದಲ್ಲಿ ಪಟ್ಟಿ ಮಾಡಿರುವಂತಹ ಕೆಲಸಗಳಿಗೆ ವಾರ್ಡ್ ಸಭೆಯ ಜನ ಬೆಂಬಲವನ್ನು ಗಮನದಲ್ಲಿರಿಸಬೇಕಾಗುತ್ತದೆ. ದುಡಿಯುವ ಕೈಗಳಿಗೆ ಹೆಚ್ಚಿನ ಕೆಲಸ ಒದಗಿಸುವ ಕಾಮಗಾರಿಗಳಿಗೆ ಮೊದಲ ಪ್ರಾಶಸ್ತ್ಯ ನೀಡಬೇಕು. ಸುಸ್ಥಿರ ಅಭಿವೃದ್ಧಿಗೆ ಒತ್ತು ನೀಡುವ ಕಾಮಗಾರಿಗಳನ್ನು ಮಾತ್ರ ಆಯ್ಕೆ ಮಾಡಬೇಕು. ಸಮಸ್ಯೆಗಳ ಪರಿಹಾರಕ್ಕೆ ಇರುವ ಮಾರ್ಗಗಳನ್ನು ಪರಿಶೀಲಿಸಿ ಸೂಕ್ತವಾದುದನ್ನು ಆಯ್ಕೆ ಮಾಡಬೇಕು. ಜನಪ್ರತಿನಿಧಿಗಳು ಮತ್ತು ಜನರ ಬೇಡಿಕೆಗಳು ಕಾಯಿದೆಯ ಆಶಯದ ಒಳಗೆ ಇರುವಂತೆ ಸಮನ್ವಯ ಮಾಡಬೇಕು. ಜನಯೋಜನೆಯಲ್ಲಿ ಮುಂದಿನ ಹಂತವೇ ಗ್ರಾಮ ಸಭೆ. ಗ್ರಾಮ ಸಭೆಯನ್ನು ಪಂಚಾಯಿತಿಯ ಮೂಲಕ ಸಂಘಟಿಸಬೇಕು. ಎಲ್ಲಾ ವಾರ್ಡ್‌ಗಳ ಚುನಾಯಿತ ಪ್ರತಿನಿಧಿಗಳು, ಕ್ಷೇತ್ರ ಮಟ್ಟದ ಇಲಾಖೆ ಸಿಬ್ಬಂದಿ ಹಾಗೂ ಜನರು ಭಾಗವಹಿಸುವಂತೆ ಖಾತರಿಪಡಿಸಬೇಕು. ಗ್ರಾಮ ಸಭೆಯಲ್ಲಿ ಈ ಕೆಳಗಿನ ಪ್ರಕ್ರಿಯೆಗಳು ನಡೆಯಬೇಕು.

- ಗ್ರಾಮ ಸಭೆಗೆ ಉದ್ಯೋಗ ಖಾತರಿ ಯೋಜನೆಯ ಅಂಶಗಳೇನು, ಯೋಜನೆಯನ್ನು ಅನುಷ್ಠಾನಗೊಳಿಸುವ ವಿಧಾನ ಏನು ಎಂಬುದರ ಬಗ್ಗೆ ವಿವರವಾಗಿ ತಿಳಿಸಿ ಮನದಟ್ಟು ಮಾಡಬೇಕು.
- ವಸತಿ ಅಥವಾ ವಾರ್ಡ್ ಸಭೆಗಳ ಮೂಲಕ ಗುರುತಿಸಲಾದ ವಾಸ್ತವ ಸ್ಥಿತಿ ಹಾಗೂ ಬೇಡಿಕೆಗಳನ್ನು ಗ್ರಾಮಸಭೆಯ ಮುಂದೆ ಇಡಬೇಕು.
- ಉದ್ಯೋಗ ಖಾತರಿ ಯೋಜನೆಗೆ ಯಾವ ಯಾವ ಕಾಮಗಾರಿಗಳನ್ನು ಆಯ್ಕೆ ಮಾಡಲಾಗಿದೆ. ಆಯ್ಕೆ ಮಾಡುವಾಗ ಯಾವ ಮಾನದಂಡವನ್ನು ಇರಿಸಲಾಗಿದೆ ಎಂದು ಗ್ರಾಮ ಸಭೆಗೆ ವಿವರಿಸಬೇಕು.
- ಗ್ರಾಮ ಸಭೆಯಲ್ಲಿ ಈ ವಿಷಯಗಳ ಕುರಿತು ವಿವರವಾಗಿ ಚರ್ಚಿಸಿ ಜನರ ಅಭಿಪ್ರಾಯ ಹಾಗೂ ಸಲಹೆಗಳನ್ನು ಪಡೆದುಕೊಳ್ಳಬೇಕು.
- ನಂತರ ವಲಯವಾರು ಕಾರ್ಯತಂಡಗಳು ಸಿದ್ಧಪಡಿಸಿದ ಕರಡು ಯೋಜನಾ ಪ್ರಸ್ತಾವನೆಗಳನ್ನು ಗ್ರಾಮಸಭೆಯ ಮುಂದೆ ಇಡಬೇಕು.
- ಕರಡು ಯೋಜನೆಯ ಕುರಿತು ಮುಕ್ತವಾದ ಚರ್ಚೆಗೆ ಅವಕಾಶ ಕೊಡಬೇಕು.
- ಜನರು ನೀಡುವ ಸಲಹೆಗಳನ್ನು ಕರಡು ಯೋಜನೆಯಲ್ಲಿ ಸೇರಿಸಲು ಅವಕಾಶ ಕೊಡಬೇಕು.

ಗ್ರಾಮ ಸಭೆಯಲ್ಲಿ ನಡೆದ ಚರ್ಚೆ ಹಾಗೂ ಸಲಹೆಗಳ ಆಧಾರದಲ್ಲಿ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಕೈಗೊಳ್ಳಬಹುದಾದ ಕಾಮಗಾರಿಗಳ ಯೋಜನಾ ಪ್ರಸ್ತಾವನೆಗಳನ್ನು

ವಲಯವಾರು ಕಾರ್ಯತಂಡಗಳು ಅಂತಿಮಗೊಳಿಸಿ ಸಮನ್ವಯ ಮಾಡಬೇಕು. ಕೊನೆಯದಾಗಿ ಸ್ಪಷ್ಟ ರೂಪ ಪಡೆದ ಯೋಜನಾ ಪ್ರಸ್ತಾವನೆಗಳನ್ನು ಗ್ರಾಮ ಪಂಚಾಯಿತಿಯ ಸಾಮಾನ್ಯ ಸಭೆಯಲ್ಲಿ ಅಂಗೀಕರಿಸಬೇಕು. ಅಂಗೀಕಾರಗೊಂಡ ಯೋಜನೆ ಪ್ರಸ್ತಾವನೆಗಳನ್ನು ತಾಲೂಕು ಪಂಚಾಯಿತಿಯ ಕಾರ್ಯ ನಿರ್ವಾಹಕ ಅಧಿಕಾರಿಯವರಿಗೆ ಕಳುಹಿಸಿಕೊಡಬೇಕು.

### ೪.೧೨. ಮಹಿಳೆಯರು ಮತ್ತು ದುರ್ಬಲ ವರ್ಗದವರಿಗೆ ಆದ್ಯತೆ

ಉದ್ಯೋಗ ಖಾತರಿ ಯೋಜನೆಯಲ್ಲಿ ಮಹಿಳೆಯರಿಗೆ ಮತ್ತು ದುರ್ಬಲ ವರ್ಗದವರಿಗೆ ವಿಶೇಷವಾದ ಸ್ಥಾನವನ್ನು ನೀಡಲಾಗಿದೆ. ಈ ಕಾಯಿದೆಯಲ್ಲಿ ಎಂಟು ವಿಶೇಷ ಗುಂಪುಗಳನ್ನು ರಚಿಸಲಾಗಿದೆ. ಈ ಗುಂಪುಗಳಿಗೆ ಹೆಚ್ಚಿನ ಗಮನವನ್ನು ನೀಡುವುದರ ಮೂಲಕ ಅವರ ಜೀವನೋಪಾಯದ ಭದ್ರತೆಯನ್ನು ಒದಗಿಸಲಾಗುತ್ತಿದೆ. ಆ ಎಂಟು ಗುಂಪುಗಳನ್ನು ಈ ಕೆಳಗಿನಂತೆ ತಿಳಿಸಲಾಗಿದೆ.

೧. ಅಂಗವಿಕಲರು

೨. ಆದಿಕಾಲದ ಬುಡಕಟ್ಟು ಜನಾಂಗ

೩. ಅಲೆಮಾರಿ ಸೂಚಿತ ಜನಾಂಗ

೪. ಸೂಚಿತ ಬುಡಕಟ್ಟು ಜನಾಂಗ

೫. ವಿಶೇಷ ಸ್ಥಿತಿಯಲ್ಲಿರುವ ಮಹಿಳೆಯರು

೬. ೬೫ ವರ್ಷ ಮೀರಿದ ಹಿರಿಯ ನಾಗರೀಕರು

೭. ಎಚ್.ಐ.ವಿ. ಪೀಡಿತರು

೮. ಆಂತರಿಕವಾಗಿ ಸ್ಥಳಾಂತರಿಸಲ್ಪಟ್ಟ ಜನರು

ಇಲ್ಲಿ ಮುಖ್ಯವಾಗಿ ೧೯೯೫ರ ಕಾಯ್ದೆ (೧೯೯೬ರ ೧)ರಂತೆ (ಸಮಾನ ಅವಕಾಶ, ಹಕ್ಕುಗಳ ರಕ್ಷಣೆ ಮತ್ತು ಪೂರ್ಣ ಸಹಭಾಗಿತ್ವ) ಅಂಗ ವೈಕಲ್ಯ ಅಥವಾ ವಿವಿಧ ಅಶಕ್ತತೆ ಹೊಂದಿರುವ ವ್ಯಕ್ತಿಗಳನ್ನು ಅಂಗವಿಕಲರು ಎಂದು ಗುರುತಿಸುವಂತೆ ಶೇ.೪೦ರಷ್ಟು ಅಂಗವೈಕಲ್ಯ ಹೊಂದಿರುವವರನ್ನು ಉದ್ಯೋಗ ಖಾತರಿ ಯೋಜನೆಯಲ್ಲಿ ಬರುವ ವಿಶೇಷ ವರ್ಗವಾದ ದುರ್ಬಲ ಗುಂಪೆಂದು ಪರಿಗಣಿಸಲಾಗುತ್ತದೆ. ಇವರಿಗೆ ಪ್ರತ್ಯೇಕವಾದ ಕೆಲಸಗಳನ್ನೂ ಕೂಡ ಯೋಜನೆಯಲ್ಲಿ ಗುರುತಿಸಲಾಗಿದೆ. ಉದಾಹರಣೆಗೆ ದೈಹಿಕ ಅಂಗವಿಕಲತೆಯುಳ್ಳವರು ದುರ್ಬಲವಾದ ಒಂದು ಕೈಯಿಂದ ಮಾಡಬಹುದಾದ ಕೆಲಸಗಳೆಂದರೆ ಕುಡಿಯುವ ನೀರಿನ ವ್ಯವಸ್ಥೆ ಮಾಡುವುದು, ಗಿಡ ನೆಡುವುದು; ಎರಡೂ ಕೈಗಳು ದುರ್ಬಲವಿರುವ ಅಂಗವಿಕಲರು ಕೆಲಸಗಾರರ ಮಕ್ಕಳನ್ನು ನೋಡಿಕೊಳ್ಳುವುದು; ಗೂನು ಬೆನ್ನಿನ ಅಂಗವಿಕಲರು ಬಾಂಡಲಿಗೆ ಜೆಲ್ಲಿಯನ್ನು ತುಂಬುವುದು, ನೀರು ಚುಮಿಕಿಸುವುದು ಇನ್ನು ಮುಂತಾದವು. ಹೀಗೆ ಈ ಯೋಜನೆಯು ಅಂಗವಿಕಲರಿಗೂ ಕೂಡ ಕೆಲಸಗಳನ್ನು ಸೃಷ್ಟಿಸಿಕೊಟ್ಟಿದೆ.

"ವಿಶೇಷ ಸ್ಥಿತಿಯಲ್ಲಿರುವ ಮಹಿಳೆಯರು ಎಂದರೆ ವಿಧವೆಯರು, ಪತಿ ಪರಿತ್ಯಕ್ತರು ಮತ್ತು ನಿರಾಶ್ರಿತ ಮಹಿಳೆಯರು ಎಂದರ್ಥ. ಈ ರೀತಿಯ ಅಸಹಾಯಕ ಮಹಿಳೆಯರನ್ನು ಗ್ರಾಮ ಪಂಚಾಯಿತಿ ಗುರುತಿಸಿ ೧೦೦ ದಿನಗಳ ಕೆಲಸ ನೀಡಬೇಕಾಗುವುದನ್ನು ಖಾತ್ರಿಪಡಿಸಿಕೊಳ್ಳಬೇಕು. ಗರ್ಭಿಣಿಯರು ಮತ್ತು ಬಾಣಂತಿಯರನ್ನು ಪ್ರಸವಕ್ಕೆ ಮುನ್ನ ಕಡೆಯ ಪಕ್ಷ ೮ ತಿಂಗಳವರೆಗೆ ಮತ್ತು ಪ್ರಸವದ ನಂತರ ಕನಿಷ್ಠ ೧೦ ತಿಂಗಳ ವರೆಗೆ ವಿಶೇಷ ವರ್ಗವೆಂದು ಪರಿಗಣಿಸಬೇಕು. ಹಾಗೆಯೇ ವಿಶೇಷ ಕೆಲಸಗಳಾದ ಕಠಿಣ ಶ್ರಮರಹಿತ ಕೆಲಸ ಮತ್ತು ಅವರು ವಾಸಿಸುವ ಮನೆಗೆ ಸಮೀಪದಲ್ಲಿರುವಂತೆಯೇ ಕೆಲಸಗಳನ್ನು ಗುರುತಿಸಿ ಅವರುಗಳಿಗೆ ನೀಡಬೇಕು"[9]

ಅಲೆಮಾರಿ ಬುಡಕಟ್ಟು ಸಮುದಾಯಗಳಿಗೂ ಕೂಡ ಈ ಯೋಜನೆಯಲ್ಲಿ ಫಲಾನುಭವಿಗಳಾಗಲು ಅವಕಾಶವನ್ನು ಈ ಕಾಯಿದೆ ಕಲ್ಪಿಸಿಕೊಟ್ಟಿದೆ. ಈ ಬುಡಕಟ್ಟು ಸಮುದಾಯದವರು ಒಂದು ನಿರ್ಧಿಷ್ಟ ಸ್ಥಳದಲ್ಲಿ ನೆಲೆಸದೇ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಅಲೆಯುತ್ತಿರುತ್ತಾರೆ. ಹಾಗಾಗಿ ಇವರು ಯಾವುದೇ ಒಂದು ನಿರ್ಧಿಷ್ಟ ಗ್ರಾಮ ಪಂಚಾಯತಿಗೆ ಒಳಪಡುವುದಿಲ್ಲ. ಆ ಕಾರಣಕ್ಕಾಗಿ ಇವರು ಈ ಯೋಜನೆಯ ಪ್ರಯೋಜನೆಯಿಂದ ವಂಚಿತರಾಗುತ್ತಾರೆ. ಇದೂ ಅಲ್ಲದೆ ಇವರು ತಮ್ಮ ಗುರುತನ್ನು ನಿರೂಪಿಸಲು ಅಗತ್ಯವಾದ ಯಾವುದೇ ದಾಖಲೆಗಳನ್ನು ಹೊಂದಿರುವುದಿಲ್ಲ. ಹಾಗಾಗಿ ಇವರು ಸರಕಾರದ ಯಾವುದೇ ಸೌಲಭ್ಯಗಳಿಂದ ವಂಚಿತರಾಗಿರುತ್ತಾರೆ. ಆದರೆ ಉದ್ಯೋಗ ಖಾತರಿ ಯೋಜನೆಯಲ್ಲಿ ಕೆಲಸ ಮಾಡಲು ಇವರಿಗೆ ಅವಕಾಶ ಮಾಡಿಕೊಟ್ಟಿದೆ. ಇದಕ್ಕೆ ಜಿಲ್ಲಾ ಸಮನ್ವಯಾಧಿಕಾರಿಗಳು ಜಿಲ್ಲೆಯಲ್ಲಿರುವ ಅಲೆಮಾರಿ ಬುಡಕಟ್ಟು ಗುಂಪುಗಳನ್ನು ಗುರುತಿಸಿ, ಕಾರ್ಯಕ್ರಮ ಅಧಿಕಾರಿಗೆ ಅಧಿಕಾರವನ್ನು ನೀಡಿ ವಿಶೇಷ ಉದ್ಯೋಗ ಚೀಟಿಗಳನ್ನು ಒದಗಿಸಿಕೊಡಬೇಕಾಗುತ್ತದೆ. ಇದರಿಂದಾಗಿ ಅಲೆಮಾರಿ ಬುಡಕಟ್ಟು ಸಮುದಾಯಗಳು ಈ ಯೋಜನೆಯ ಫಲಾನುಭವಿಗಳಾಗುವುದರ ಜೊತೆಗೆ, ಒಂದು ಸ್ಥಳದಲ್ಲಿ ನೆಲೆ ನಿಲ್ಲಲು ಈ ಯೋಜನೆ ಅನುವು ಮಾಡಿಕೊಡುತ್ತದೆ.

### ೪.೧೩. ಕಾಮಗಾರಿಯ ಸ್ಥಳದಲ್ಲಿನ ಸೌಲಭ್ಯಗಳು

ಉದ್ಯೋಗ ಖಾತರಿ ಯೋಜನೆಯ ಕಾಮಗಾರಿ ನಡೆಯುವ ಸ್ಥಳಗಳಲ್ಲಿ ಹಲವು ಸೌಲಭ್ಯಗಳನ್ನು ಒದಗಿಸಿಕೊಡಬೇಕಾಗುತ್ತದೆ. ಮುಖ್ಯವಾಗಿ "ಶುದ್ಧವಾದ ಕುಡಿಯುವ ನೀರು, ಮಕ್ಕಳಿಗೆ ಹಾಗೂ ವಿಶ್ರಾಂತಿ ಸಮಯದಲ್ಲಿ ಕೆಲಸಗಾರರಿಗೆ ನೆರಳು, ಕೆಲಸ ಮಾಡುವ ಸಮಯದಲ್ಲಿ ಸಂಭವಿಸಬಹುದಾದ ಚಿಕ್ಕಪುಟ್ಟ ಗಾಯಗಳಿಗೆ ಚಿಕಿತ್ಸೆ, ಆರೋಗ್ಯಕ್ಕೆ ಅಪಾಯವನ್ನು ತಂದೊಡ್ಡುವ ಇನ್ನಾವುದೇ ಪ್ರಸಂಗಗಳಲ್ಲಿ ಚಿಕಿತ್ಸೆ, ಔಷದೋಪಚಾರಗಳನ್ನು ನೀಡುವುದಕ್ಕಾಗಿ ಸುಸಜ್ಜಿತ ಪ್ರಥಮ ಚಿಕಿತ್ಸೆ ಪೆಟ್ಟಿಗೆಯ ಲಭ್ಯತೆ. ಹೀಗೆ ಅನೇಕ ಸೌಲಭ್ಯಗಳನ್ನು ಒದಗಿಸಿಕೊಡಬೇಕಾಗುತ್ತದೆ. ಇಲ್ಲಿ ಮುಖ್ಯವಾಗಿ ಒಂದು ಕೆಲಸದ ಸ್ಥಳದಲ್ಲಿ ಕೆಲಸ ಮಾಡುವ

ಮಹಿಳೆಯರೊಂದಿಗೆ ಬರುವ ಆರು ವರ್ಷಗಳಿಗೂ ಕಮ್ಮಿ ವಯಸ್ಸಿನ ಮಕ್ಕಳು ಐದಕ್ಕಿಂತ ಹೆಚ್ಚು ಸಂಖ್ಯೆಯಲ್ಲಿದ್ದರೆ, ಅಂತಹ ಮಕ್ಕಳನ್ನು ನೋಡಿಕೊಳ್ಳುವುದಕ್ಕಾಗಿ ಮಹಿಳಾ ಕೆಲಸಗಾರರ ಪೈಕಿ ಒಬ್ಬಾಕೆಯನ್ನು ನಿಯೋಜಿಸಬಹುದು ಎಂದು ಕಾಯಿದೆ ತಿಳಿಸುತ್ತದೆ (ಅನುಸೂಚಿ-೧೧, ಪ್ಯಾರಾ ೨೮). ಅದು ಅಲ್ಲದೆ ಚಿಕ್ಕ ಮಕ್ಕಳನ್ನು ನೋಡಿಕೊಳ್ಳುವುದಕ್ಕೆಂದು ನಿಯೋಜಿತವಾದ ವ್ಯಕ್ತಿಗೆ ಉಳಿದ ಕೆಲಸಗಾರರಿಗೆ ದೊರೆಯುವಷ್ಟೇ ವೇತನ ಪಡೆಯುವ ಹಕ್ಕಿದೆ(ಅನುಸೂಚಿ-೧೧,ಪ್ಯಾರ೨೮)".[೫] ಹೀಗೆ ಹಲವು ಸೌಲಭ್ಯಗಳನ್ನು ಒದಗಿಸಬೇಕಾಗುತ್ತದೆ. ಈ ಎಲ್ಲಾ ಸೌಲಭ್ಯಗಳು ಕಾಯಿದೆಯಲ್ಲಿ ಸೂಚಿತವಾದವುಗಳೇ ಆಗಿವೆ. ಆದರೆ ಹೈದರಾಬಾದ್ ಕರ್ನಾಟಕದ ಪ್ರತಿಯೊಂದು ಗ್ರಾಮ ಪಂಚಾಯತಿ ವ್ಯಾಪ್ತಿಗಳಲ್ಲಿ ಈ ರೀತಿಯ ಸೌಲಭ್ಯಗಳನ್ನು ಒದಗಿಸಿಕೊಟ್ಟಿರುವ ಉದಾಹರಣೆಗಳು ತುಂಬಾ ಕಡಿಮೆ ಎಂದೇ ಹೇಳಬಹುದು. ಏಕೆಂದರೆ ಕಾಮಗಾರಿ ಸ್ಥಳಗಳಲ್ಲಿ ಸೌಲಭ್ಯಗಳಿಂದ ವಂಚಿತರಾದ ಹಲವಾರು ಪ್ರಕರಣಗಳು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಗುರುತಿಸಲಾಗಿದೆ. "ಬರಪೀಡಿತ ಪ್ರದೇಶಗಳಲ್ಲಿ ಉದ್ಯೋಗ ಖಾತ್ರಿ ಯೋಜನೆಯಲ್ಲಿನ ಮಾನವ ದಿನಗಳನ್ನು ೧೦೦ ರಿಂದ ೧೫೦ ದಿನಗಳಿಗೆ ಹೆಚ್ಚಳವಾಗಿರುವುದು ಕಂಡುಬರುತ್ತದೆ. ಈ ಬರಪೀಡಿತ ಪ್ರದೇಶಗಳಲ್ಲಿ ಕರ್ನಾಟಕ, ಗುಜರಾತ್, ಮಹಾರಾಷ್ಟ್ರ ಮತ್ತು ರಾಜಸ್ಥಾನ ರಾಜ್ಯಗಳ ೬೯೦ ತಾಲೂಕುಗಳನ್ನು ಆಯ್ಕೆಮಾಡಿಕೊಳ್ಳಲಾಗಿದೆ. ಈ ತಾಲೂಕುಗಳಲ್ಲಿನ ಜನರಿಗೆ ಈ ಯೋಜನೆಯಡಿಯಲ್ಲಿ ೧೫೦ ದಿನಗಳವರೆಗೆ ಕೆಲಸ ಕೊಡಲಾಗುತ್ತದೆ".[೬] ಇನ್ನು ಯೋಜನೆಯನ್ನು ನಗರ ಪ್ರದೇಶದ ಬಡಜನರಿಗೆ ವಿಸ್ತರಿಸುವ ಉದ್ದೇಶವನ್ನು ಹೊಂದಲಾಗಿದೆ. ಹೀಗೆ ಉದ್ಯೋಗ ಖಾತರಿ ಯೋಜನೆಯಲ್ಲಿ ಹಲವಾರು ಬದಲಾವಣೆಗಳು ಆಗುತ್ತಲೇ ಇರುತ್ತವೆ. ಮತ್ತು ಇನ್ನೂ ಹೆಚ್ಚಿನ ಪಾರದರ್ಶಕತೆಗೆ ಎಡೆಮಾಡಿಕೊಡುತ್ತದೆ.

**೪.೧೪. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯಲ್ಲಾದ ಬದಲಾವಣೆಗಳು**

ಈ ಕಾಯಿದೆಯ ಜಾರಿಯನ್ನು ಪ್ರಖರಗೊಳಿಸಲು ಕಾಯಿದೆಯಲ್ಲಿ ಹಲವಾರು ಬಗೆಯ ಬದಲಾವಣೆಗಳನ್ನು ಮಾಡುತ್ತಲೇ ಬರಲಾಗಿದೆ. ಈ ಬದಲಾವಣೆಗಳಿಗೆ ಕರ್ನಾಟಕ ರಾಜ್ಯವೂ ಒಳಪಟ್ಟಿದೆ. ಮೊದಲು ೨೦೦೫ರಲ್ಲಿ ಈ ಕಾಯಿದೆ ಪ್ರಾರಂಭವಾದಾಗ ಈ ಕಾಯಿದೆಯಡಿಯಲ್ಲಿ ಕೆಲಸಗಳನ್ನು ಮಾಡಿದವರಿಗೆ ಕೂಲಿಯ ದರವು ಒಂದು ಮಾನವ ದಿನಕ್ಕೆ ರೂ.೬೯-೦೦ ಇದ್ದದ್ದು ನಂತರ ೮೨ ರೂಪಾಯಿಗಳಿಗೆ ತಲುಪಿತು. ಇದಾದ ನಂತರ ಕೂಲಿಯ ದರವು ೧೦೦ ರೂಪಾಯಿಗಳಾಯಿತು. ಪ್ರಸ್ತುತ ಕೂಲಿಯು ೧೨೪ ರೂಪಾಯಿಗಳಾಗಿದೆ. ಇನ್ನು ಈ ದರವನ್ನು ೧೯೧ ರೂಪಾಯಿಗಳಿಗೆ ಹೆಚ್ಚಿಸುವ ಉದ್ದೇಶವನ್ನು ಹೊಂದಲಾಗಿದೆ ಎಂದು ಹೇಳಲಾಗುತ್ತಿದೆ. ಹೀಗೆ ಕೂಲಿಯ ಧರದಲ್ಲಿ ಕಾಲದಿಂದ ಕಾಲಕ್ಕೆ ಬದಲಾವಣೆಗಳು ಆಗುತ್ತಾ ಬಂದಿದೆ. ಕೂಲಿಯ ಧರದಲ್ಲಿ ಬದಲಾವಣೆಗಳು ಕಂಡುಬಂದರೂ ಸಹ ಸ್ತ್ರೀ-ಪುರುಷರಿಬ್ಬರಿಗೂ ಸಮಾನ ವೇತನವನ್ನು ನಿಗದಿಪಡಿಸಲಾಗಿದೆ. ಇದರಲ್ಲಿ ಯಾವುದೇ

ತಾರತಮ್ಯಗಳಿಲ್ಲ. ಕೂಲಿಯ ವಿಷಯದಲ್ಲಿ ಕಾಯಿದೆಯಲ್ಲಿ ಹಲವಾರು ಬದಲಾವಣೆಗಳು ಆಗಿದ್ದರೂ ಸಹ. ಕೂಲಿ ಮತ್ತು ಕೆಲಸಗಳ ವಿಷಯಗಳಲ್ಲಿ ಪ್ರತಿಯೊಂದು ರಾಜ್ಯವೂ ಕೂಡ ತಮ್ಮ ತಮ್ಮ ರಾಜ್ಯದ ಸಂಪನ್ಮೂಲಗಳಿಗೆ ಅನುಗುಣವಾಗಿ ಬದಲಾವಣೆ ಮಾಡಿಕೊಂಡಿವೆ. ಆದರೆ ಈ ಬದಲಾವಣೆಗಳು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆಯ ಅಡಿಯಲ್ಲಿಯೇ ಜಾರಿಯಲ್ಲಿರುತ್ತವೆ.

ಈ ಕಾಯಿದೆಯ ಪ್ರಮುಖ ಬದಲಾವಣೆಯೆಂದರೆ, "ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆ-೨೦೦೫" ಎಂದು ನಾಮಾಂಕಿತಗೊಂಡು ಜಾರಿಗೆ ಬಂದ ಈ ಕಾಯ್ದೆ, ದಿನಾಂಕ ೨ ಅಕ್ಟೋಬರ್ ೨೦೦೯ರಂದು "ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆ" ಎಂದು ಮರುನಾಮಾಂಕಿತಗೊಂಡಿತು. ಈ ದಿನ ಗಾಂಧೀಜಿಯವರ ಜಯಂತಿಯ ದಿನವಾಗಿದೆ. ಹೀಗೆ ಕಾಯಿದೆಯ ಹೆಸರನ್ನು ಬದಲಾಯಿಸಿದುದರ ಹಿಂದೆ ಮಹಾತ್ಮಗಾಂಧಿಜಿಯವರು ಕಂಡ "ಗ್ರಾಮ ಸ್ವರಾಜ್ಯದ" ಕನಸಿನ ಒತ್ತಾಸೆಯನ್ನು ಎತ್ತಿತೋರಿಸುತ್ತದೆ. ಭಾರತಕ್ಕೆ ಸ್ವಾತಂತ್ರ್ಯ ದೊರೆತಾಗ ಗಾಂಧೀಜಿಯವರು "ಈಗಲಾದರೋ ಭಾರತಕ್ಕೆ ಕೇವಲ ರಾಜಕೀಯ ಸ್ವಾತಂತ್ರ್ಯ ಸಿಕ್ಕಿದೆ. ಸಾಮಾಜಿಕ, ನೈತಿಕ ಮತ್ತು ಆರ್ಥಿಕ ಸ್ವಾತಂತ್ರ್ಯವು ಈ ದೇಶಕ್ಕೆ ಇನ್ನೂ ಸಿಕ್ಕಿಲ್ಲ"[೭] ಎಂದಿದ್ದರು. ಅಂದರೆ ಪ್ರತಿಯೊಂದು ಹಳ್ಳಿಯಲ್ಲಿಯೂ ಕೂಡ ಸಾಮಾಜಿಕ, ಆರ್ಥಿಕ ಮತ್ತು ನೈತಿಕ ಸ್ವಾವಲಂಬನೆ ಮತ್ತು ಸ್ವಾತಂತ್ರ್ಯ ನೆಲೆಸಿದಾಗ ಮಾತ್ರ ನಿಜವಾದ ಅರ್ಥದಲ್ಲಿ ಸ್ವಾತಂತ್ರ್ಯ ಬಂದಂತಾಗುತ್ತದೆ ಎಂಬುದು ಅವರ ವಾದವಾಗಿತ್ತು. ಮತ್ತು ಸ್ವಾತಂತ್ರ್ಯ ಎಂಬುದು ಕಟ್ಟ ಕಡೆಯ ಹಳ್ಳಿಯಿಂದ ಪ್ರಾರಂಭವಾಗಬೇಕು ಎಂಬುದು ಅವರ ಒತ್ತಾಸೆಯಾಗಿತ್ತು. ಹಾಗಾಗಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯು ಈ ಹಿನ್ನೆಲೆಯಲ್ಲಿಯೇ ಹಳ್ಳಿಗಳಲ್ಲಿನ ಜನರ ಆರ್ಥಿಕ ಮತ್ತು ಸಾಮಾಜಿಕ ಜೀವನವನ್ನು ಸುಧಾರಿಸುವ ನಿಟ್ಟಿನಲ್ಲಿ ಮುಂದುವರೆಯುತ್ತಿರುವುದರಿಂದ ಇದು ಗಾಂಧೀಜಿಯವರ ಕನಸಿಗೆ ಪುಷ್ಠಿ ನೀಡುವಂತಾಗಿದ್ದರಿಂದಾಗಿ ಈ ಕಾಯಿದೆಗೆ ಗಾಂಧೀಜಿಯವರ ಹೆಸರನ್ನು ಸೇರಿಸಲು ಕಾರಣ ಇದ್ದಿರಬಹುದು. ಹೀಗೆ ಕಾಯಿದೆಯ ಹೆಸರನ್ನೇ ಬದಲಾಯಿಸಿದುದು ಪ್ರಮುಖ ಬದಲಾವಣೆಯಾಗಿದೆ. ಹಾಗೆಯೇ ಕಾಮಗಾರಿಗಳ ವೆಚ್ಚಕ್ಕೆ ಸಂಬಂಧಿಸಿದಂತೆಯೂ ಕೂಡ ಬದಲಾವಣೆಯಾಗಿದೆ. ಕಾಯಿದೆಯು ಜಾರಿಯಾದ ಪ್ರಥಮದಲ್ಲಿ ಗ್ರಾಮ ಪಂಚಾಯತ್ ಮಟ್ಟದಲ್ಲಿ ಕೈಗೆತ್ತಿಕೊಳ್ಳಲಾಗುವ ಕಾಮಗಾರಿ ವೆಚ್ಚ ೬೦:೪೦ರ ಅನುಪಾತದಂತೆ ವೆಚ್ಚ ಮಾಡಬೇಕು ಎಂಬುದನ್ನು ನಿಗದಿಪಡಿಸಲಾಗಿತ್ತು. ಇಲ್ಲಿ ಶೇ.೬೦ರಷ್ಟು ಉದ್ಯೋಗ ಭತ್ಯೆಯದ್ದಾದರೆ, ಉಪಕರಣಗಳಿಗೆ ಶೇ.೪೦ರಷ್ಟು ಹಣ ವಿನಿಯೋಗವಾಗಬೇಕು. ಮಧ್ಯಂತರ ಪಂಚಾಯತ್ ಅಥವಾ ತಾಲೂಕು ಮಟ್ಟದಲ್ಲಿ ಕೆಲಸ ಕೈಗೆತ್ತಕೊಳ್ಳುವ ಏಜನ್ಸಿಗಳು ಸಹಾ ೬೦:೪೦ರ ಅನುಪಾತದ ಲೆಕ್ಕಾಚಾರದಲ್ಲೇ ವೆಚ್ಚ ನಿಬಾಯಿಸಬೇಕಾಗುತ್ತದೆ. ಆದರೆ ಇತ್ತೀಚಿನ ಬದಲಾವಣೆಯಂತೆ ಉದ್ಯೋಗ ಭತ್ಯೆಯನ್ನು ಶೇ.೫೧ ರಷ್ಟು ಮತ್ತು ಉಪಕರಣಗಳಿಗೆ

ಶೇ.೪೯ರಷ್ಟು ಹಣವನ್ನು ವೆಚ್ಚಮಾಡಬೇಕಾಗುತ್ತದೆ. ಹೀಗೆ ಕಾಯಿದೆಯಲ್ಲಿ ಹಲವಾರು ಬದಲಾವಣೆಗಳನ್ನು ಮಾಡಲಾಯಿತು. ಈ ಬದಲಾವಣೆಗಳನ್ನು ದೇಶದ ಪ್ರತಿಯೊಂದು ರಾಜ್ಯ ಸರಕಾರಗಳು ಪಾಲಿಸಬೇಕಾಗುತ್ತದೆ.

ಕಾಲಕಾಲಕ್ಕೆ ಉದ್ಯೋಗ ಖಾತರಿ ಕಾಯಿದೆಯಲ್ಲಿ ಬದಲಾವಣೆಗಳು ಆಗುತ್ತಾ ಬಂದಿದ್ದರೂ ಸಹ ಅನುಷ್ಠಾನದ ಸಂದರ್ಭದಲ್ಲಿ ಹಲವಾರು ಲೋಪದೋಷಗಳನ್ನು ಹೊಂದಿದೆ. ಹಾಗೆಯೇ ಇದರ ಮೇಲ್ವಿಚಾರಣೆಯೂ ಸಹ ತುಂಬಾ ಸಡಿಲಗೊಂಡಿರುವುದರಿಂದ ಅಲ್ಲಲ್ಲಿ ಅವ್ಯವಹಾರದ ಕೂಗು ಕೇಳಿಬರುತ್ತಿರುತ್ತವೆ. ಹಾಗೆಯೇ ಗ್ರಾಮ ಪಂಚಾಯತಿಗಳು ಈ ಯೋಜನೆಯನ್ನು ಸಂಪೂರ್ಣವಾಗಿ ಅನುಷ್ಠಾನಕ್ಕೆ ತರುವುದರಲ್ಲಿ ವಿಫಲತೆಯನ್ನು ಹೊಂದಿದೆ ಎನ್ನುವುದು ವಿಪರ್ಯಾಸದ ಸಂಗತಿ. ಗ್ರಾಮ ಪಂಚಾಯತಿಗಳು ಅನುಷ್ಠಾನಕ್ಕೆ ತಂದಿದ್ದರೂ ಸಹ ಆ ಪ್ರದೇಶದ ಜನರ ಜೀವನ ಮಟ್ಟದಲ್ಲಾಗಲಿ ಅಥವಾ ಆರ್ಥಿಕತೆಯಲ್ಲಾಗಲಿ ಬದಲಾವಣೆಗಳೇನೂ ಆಗಿಲ್ಲ. ಇದಕ್ಕೆ ಮುಖ್ಯ ಕಾರಣ ಈ ಯೋಜನೆಯ ಫಲಾನುಭವಿಗಳು ಅಥವಾ ಈ ಯೋಜನೆಯ ಲಾಭ ಕೇವಲ ಸ್ಥಿತಿವಂತರ ಪಾಲಾಗಿರುವುದು. ಇಂದು ಗ್ರಾಮೀಣ ಪ್ರದೇಶದ ಬಡ ಜನರು ಪರಾವಲಂಬಿಗಳಾಗಿಯೇ ಜೀವಿಸುತ್ತಿದ್ದಾರೆ. ಈ ಯೋಜನೆಯು ಜನರ ಪರಾವಲಂಬಿತನದಿಂದ ಸ್ವಾವಲಂಬಿ ಜೀವನದೆಡೆಗೆ ಚಲಿಸಲು ಸಹಕಾರಿಯಾಗಿದೆ. ಆದರೆ ವಾಸ್ತವದಲ್ಲಿ ಹಾಗಾಗುತ್ತಿಲ್ಲ. ಏಕೆಂದರೆ ಯೋಜನೆಯ ಅನುಷ್ಠಾನದ ಸಂದರ್ಭದಲ್ಲಿ ಮತ್ತು ಯೋಜನೆಯಲ್ಲಿನ ಕಾಮಗಾರಿಗಳನ್ನು ರೂಪಿಸುವಲ್ಲಿ ಹಲವಾರು ಸಮಸ್ಯೆಗಳು ಎದುರಾಗುತ್ತಿವೆ ಇದಕ್ಕೆ ಸಂಬಂಧಿಸಿದಂತೆ ಬಹಳಷ್ಟು ಉದಾಹರಣೆಗಳು ದೊರೆಯುತ್ತವೆ. ಹಾಗಾಗಿ ರಾಜ್ಯದಲ್ಲಿನ ಉತ್ತರ ಕರ್ನಾಟಕ ಭಾಗದ ಜನರು ಕೆಲಸವನ್ನರಸಿ ಇಂದಿಗೂ ಗುಳೆ ಅಥವಾ ವಲಸೆ ಹೋಗುತ್ತಿರುವುದು ಕಂಡುಬರುತ್ತದೆ.

ಮಹಾತ್ಮಾಗಾಂಧಿ ಉದ್ಯೋಗ ಖಾತರಿ ಕಾಯಿದೆಯಲ್ಲಿ ಕಂಡುಬರುವ ಪ್ರಮುಖ ಅಂಶವೆಂದರೆ ಮಾಹಿತಿಹಕ್ಕು ನಿಯಮ. ಉದ್ಯೋಗ ಖಾತರಿ ಕಾಯಿದೆಯಲ್ಲಿಯೇ ಇದರ ಉಲ್ಲೇಖವನ್ನು ಮಾಡಲಾಗಿದೆ. ಜನ ಸಾಮಾನ್ಯರು ಈ ಕಾಯಿದೆಯನ್ನು ಬಳಸಿಕೊಳ್ಳುವುದರ ಮೂಲಕ ಯೋಜನೆಯ ಸಂಪೂರ್ಣ ಚಿತ್ರಣವನ್ನು ಪಡೆಯಬಹುದಾಗಿದೆ.

ಜನರಿಗೆ ಸರಕಾರದ ಮತ್ತು ಸರ್ಕಾರದಿಂದ ನೆರವು ಪಡೆಯುವ ಸಂಸ್ಥೆಗಳಿಗೆ ಹಾಗೂ ಪ್ರಾಧಿಕಾರಗಳಿಗೆ ಸಂಬಂಧಿಸಿದ ಎಲ್ಲಾ ವಿಷಯಗಳ ಬಗ್ಗೆ ಮಾಹಿತಿ ಪಡೆಯುವ ಹಕ್ಕನ್ನು ನೀಡುವ ಕಾನೂನೇ ಮಾಹಿತಿ ಹಕ್ಕು ಕಾಯಿದೆ. ಉದ್ಯೋಗ ಖಾತರಿ ಕಾಯಿದೆಯ ಸಂದರ್ಭದಲ್ಲಿ ಮಾಹಿತಿ ಹಕ್ಕು ಕಾಯಿದೆಯನ್ನು ಈ ಕೆಳಗಿನ ಉದ್ದೇಶಗಳಿಗೆ ಬಳಸಿಕೊಳ್ಳಬಹುದು.

- ಸರ್ಕಾರದ ಕಾರ್ಯಕ್ರಮ ನಿಯಮಕ್ಕೆ ಅನುಸಾರವಾಗಿ ಸಮರ್ಪಕವಾಗಿ ನಡೆಯುವಂತೆ ನೋಡಿಕೊಳ್ಳಲು.

- ಜನರ ಹಣ ಜನರಿಗಾಗಿಯೇ ಖರ್ಚಾಗುವಂತೆ ನೋಡಿಕೊಳ್ಳಲು.
- ಹಣದ ಮತ್ತು ಅಧಿಕಾರದ ದುರುಪಯೋಗ ಆಗದಂತೆ ನೋಡಿಕೊಳ್ಳಲು.
- ಸರ್ಕಾರ ಮತ್ತು ಅನುಷ್ಠಾನ ಸಂಸ್ಥೆಗಳ ಹೊಣೆಗಾರಿಕೆಯನ್ನು ಖಾತರಿಪಡಿಸಲು.
- ಸರ್ಕಾರದ ಕೆಲಸ ಕಾರ್ಯಗಳಲ್ಲಿ ಪಾರದರ್ಶಕತೆ ತರಲು.
- ಸರ್ಕಾರದ ಕಾರ್ಯಕ್ರಮಗಳಲ್ಲಿ ಜನರ ಸಹಭಾಗಿತ್ವವನ್ನು ಖಾತರಿಪಡಿಸಲು.
- ನಮ್ಮ ಹಕ್ಕುಗಳನ್ನು ರಕ್ಷಿಸಿ, ಕರ್ತವ್ಯಗಳನ್ನು ನಿರ್ವಹಿಸಲು.

ಮಾಹಿತಿ ಹಕ್ಕು ಕಾಯಿದೆ ಬಳಸಿ ಹಕ್ಕೊತ್ತಾಯದಿಂದ ಹಲವಾರು ಮಾಹಿತಿಗಳು ಪಡೆಯಬಹುದಾಗಿದೆ. ಅವುಗಳೆಂದರೆ

- ವಾಸ್ತವ ಹಾಜರಾತಿ ಪುಸ್ತಕ ಅಥವಾ ಪಟ್ಟಿಯ ಪ್ರತಿ.
- ಖರೀದಿಗೆ ಸಂಬಂಧಿಸಿದ ರಶೀದಿಗಳು, ಬಿಲ್ಲುಗಳು ಮತ್ತು ಸ್ವೀಕೃತಿಗಳ ಪ್ರತಿಗಳು.
- ಅಳತೆ ಪುಸ್ತಕದ ಪ್ರತಿ.
- ಮಂಜೂರಾತಿ ಆದೇಶದ ಪ್ರತಿ
- ಇಂಜಿನಿಯರಿಂಗ್ ವಿನ್ಯಾಸದ ಪ್ರತಿ
- ಸೃಷ್ಟಿಸಿದ ಆಸ್ತಿ ದಾಖಲೆಗಳ ಪ್ರತಿಗಳು

ಹೀಗೆ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯಿದೆಯು ಈ ಎಲ್ಲಾ ನಿಯಮಾವಳಿಗಳನ್ನು ಹೊಂದಿದೆ. ಈ ಯೋಜನೆಯಲ್ಲಿ ಗ್ರಾಮೀಣ ಪ್ರದೇಶದ ಜನರು ತಮ್ಮ ಜೀವನ ಮಟ್ಟವನ್ನು ಸುಧಾರಿಸಿಕೊಳ್ಳುವ ಎಲ್ಲಾ ಅವಕಾಶಗಳನ್ನು ಒದಗಿಸಿಕೊಟ್ಟಿದೆ.

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯು ಪ್ರತೀ ಹಂತದಲ್ಲಿಯೂ ಲಿಂಗ ಸೂಕ್ಷ್ಮತೆಯ ಅಂಶಗಳನ್ನು ಹೊಂದಿದ್ದರೂ ಕೂಡ ಕೆಲವು ವಿಷಯಗಳಲ್ಲಿ ಪಿತೃ ಪ್ರಧಾನ ಮೌಲ್ಯಗಳಿಂದ ಮುಕ್ತವಾಗಿಲ್ಲ ಎಂದು ಹೇಳಬಹುದು. ಏಕೆಂದರೆ ಉದ್ಯೋಗ ಖಾತರಿ ಕಾಯಿದೆಯಲ್ಲಿ ಹೇಳುವಂತೆ ಕೆಲಸದ ಸ್ಥಳಗಳಲ್ಲಿ ಕೆಲಸ ಮಾಡುವ ಮಹಿಳೆಯರೊಂದಿಗೆ ಬರುವ ಆರು ವರ್ಷಗಳಿಗಿಂತ ಕಮ್ಮಿ ವಯಸ್ಸಿನ ಮಕ್ಕಳು ಐದಕ್ಕಿಂತ ಹೆಚ್ಚು ಸಂಖ್ಯೆಯಲ್ಲಿದ್ದರೆ, ಅಂತಹ ಮಕ್ಕಳನ್ನು ನೋಡಿಕೊಳ್ಳುವುದಕ್ಕಾಗಿ ಮಹಿಳಾ ಕೆಲಸಗಾರರ ಪೈಕಿ ಒಬ್ಬ ಮಹಿಳೆಯನ್ನು ನಿಯೋಜಿಸಬೇಕು ಎಂದು ತಿಳಿಸುತ್ತದೆ. ಅಂದರೆ ಮಕ್ಕಳಿಗಾಗಿ ಒಂದು ಶೆಲ್ಟರ್ ವ್ಯವಸ್ಥೆಯನ್ನು ಮಾಡಿಕೊಡಬೇಕು ಎಂದು ಹೇಳುತ್ತದೆ. ಆದರೆ ಯೋಜನಾಕಾರರಿಗೆ ಈ ಶೆಲ್ಟರ್ ಕಾನ್ಸೆಪ್ಟ್ ಯಾಕೆ ಬಂತು ಎಂಬ ಪ್ರಶ್ನೆಯನ್ನು ಹಾಕಿಕೊಳ್ಳುವುದು ಬಹುಮುಖ್ಯವೆನಿಸುತ್ತದೆ. ಏಕೆಂದರೆ ಅನೇಕ ಉದ್ಯೋಗ ವಲಯಗಳಲ್ಲಿ ಈ ಶೆಲ್ಟರ್ ವ್ಯವಸ್ಥೆ ಇಲ್ಲ. ಅಲ್ಲಿ ದುಡಿಯುವಂತಹ

ಪುರುಷರ ಸಂಖ್ಯೆ ಅಧಿಕವಾಗಿರುತ್ತದೆ. ಹಾಗಾಗಿ ಈ ಪ್ರಶ್ನೆ ಕಾಡುವುದು ಸಾಮಾನ್ಯ. ಅಂದರೆ ಯೋಜನೆಯನ್ನು ರೂಪಿಸಿದವರು ಇದನ್ನು ಜೆಂಡರ್ ಸ್ನೇಹಿಯಾಗಿ ನೋಡಿದ್ದಾರೆಯೇ? ಅಥವಾ ಸರಕಾರದ ಉದ್ದೇಶ ಖಚಿತವಾಗಿ ಹೆಚ್ಚು ಮಹಿಳೆಯರನ್ನು ಈ ಯೋಜನೆಯ ಪಾಲುದಾರರನ್ನಾಗಿ ಮಾಡುವುದಾಗಿತ್ತೆ? ಎಂಬ ಪ್ರಶ್ನೆಗಳು ಮುಖ್ಯವಾಗುತ್ತವೆ. ಏಕೆಂದರೆ ಪ್ರತಿಯೊಂದು ಕ್ಷೇತ್ರದಲ್ಲಿಯೂ ದುಡಿಯುವವರಿದ್ದಾಗ್ಯೂ ಕೂಡ ಅಲ್ಲಿ ಶೆಲ್ಟರ್ ವ್ಯವಸ್ಥೆ ಇಲ್ಲ. ಆದರೆ ಉದ್ಯೋಗ ಖಾತರಿ ಯೋಜನೆಯಲ್ಲಿ ಶೆಲ್ಟರ್ ವ್ಯವಸ್ಥೆ ಇದೆ. ಕುಟುಂಬದಲ್ಲಿ ಮಹಿಳೆಯರು ಮಕ್ಕಳನ್ನು ನೋಡಿಕೊಳ್ಳುವುದು ಅಪೇಕ್ಷಣೀಯ ಎಂದು ವ್ಯವಸ್ಥೆ ಹೇಗೆ ಅಪೇಕ್ಷೆ ಪಡುತ್ತದೆಯೋ ಹಾಗೆಯೇ ಸರಕಾರವೂ ಕೂಡ ಮಕ್ಕಳನ್ನು ನೋಡಿಕೊಳ್ಳುವುದು ಮಹಿಳೆಯರ ಜವಾಬ್ದಾರಿ ಎಂದು ಹೇಳುತ್ತಲೇ ಅವಳು ಉದ್ಯೋಗಕ್ಕೆ ಹೋದರೂ ಕೂಡ ಮಕ್ಕಳನ್ನು ಪೋಷಿಸಬೇಕು ಅನ್ನೋದನ್ನು ಅಪೇಕ್ಷಿಸುತ್ತಿದೆಯೇನೋ?!. ಆ ಮೂಲಕ ಸರಕಾರವು ಕುಟುಂಬದಲ್ಲಿನ ಪಿತೃಪ್ರಧಾನತೆಯನ್ನು ಅಧಿಕೃತಗೊಳಿಸುತ್ತದೆ. ಅಂದರೆ ಎಲ್ಲಿ ಪುರುಷ ಪ್ರಧಾನ ಉದ್ಯೋಗಗಳಿವೆಯೋ ಅಲ್ಲಿ ಶೆಲ್ಟರ್ ವ್ಯವಸ್ಥೆ ಇಲ್ಲ. ಆದರೆ ಉದ್ಯೋಗ ಖಾತರಿ ಯೋಜನೆಯಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ತೊಡಗಿಸಿಕೊಳ್ಳಬೇಕು ಎಂಬ ಕಾರಣಕ್ಕಾಗಿ ಶೆಲ್ಟರ್ ಕಾನ್‌ಸೆಪ್ಟ್ ಬಂದಿದೆ. ಕುಟುಂಬ ಸಂಸ್ಥೆಯು ಮಕ್ಕಳನ್ನು ನೋಡಿಕೊಳ್ಳುವುದು ಮಹಿಳೆಯರ ಜವಾಬ್ದಾರಿ ಎಂದು ಹೇಳುತ್ತದೆ. ಸರಕಾರವೂ ಕೂಡ ಮಹಿಳೆ ಉದ್ಯೋಗದಲ್ಲಿ ತೊಡಗಿಕೊಳ್ಳಲಿ ಎನ್ನುವಂತಹ ಪೂರಕವಾದ ಆಶಯವಿದ್ದರೂ ಕೂಡ ಅದು ನೇರವಾಗಿ ಕುಟುಂಬದೊಳಗಿನ ಪಿತೃ ಪ್ರಧಾನತೆಯನ್ನು ಸಂರಕ್ಷಿಸುತ್ತಿರುತ್ತದೆ ಹಾಗೆಯೇ ಮುಂದುವರೆಸುತ್ತಿರುತ್ತದೆ ಮತ್ತು ಸರಕಾರಿ ವಲಯಕ್ಕೂ ವಿಸ್ತರಿಸುತ್ತಿರುತ್ತದೆ. ಶತಶತಮಾನಗಳಿಂದಲೂ ಮಹಿಳೆಯನ್ನು ನಾಲ್ಕು ಗೋಡೆಗಳ ಮಧ್ಯೆ ಇಟ್ಟು, ಕುಟುಂಬದಲ್ಲಿ ಮಕ್ಕಳನ್ನು ನೋಡಿಕೊಳ್ಳುವ ಜವಾಬ್ದಾರಿಯನ್ನು ಮಹಿಳೆಗೆ ವಹಿಸಿಕೊಂಡೆ ಬರಲಾಗಿದೆ. ಇದು ಅವಳ ಕರ್ತವ್ಯ ಮತ್ತು ಜವಾಬ್ದಾರಿ ಎಂದು ಒಂದು ಅಘೋಷಿತ ನಿಯಮವನ್ನು ರೂಪಿಸಲಾಗಿದೆ. ಆದರೆ ಪುರುಷ ಇದರಿಂದ ದೂರ. ಈ ಬಗೆಯ ಮೌಲ್ಯಗಳು ಸರಕಾರ ರೂಪಿಸಿದ ಯೋಜನೆಗಳಲ್ಲಿಯೂ ವಿಸ್ತರಿಸಿ ದುಡಿಯುವ ವಲಯವನ್ನು ಆವರಿಸಿಕೊಂಡಿವೆ. ಹೀಗಾಗಿ ಈ ಹಿನ್ನೆಲೆಯಲ್ಲಿ ಸರಕಾರವು ಸಂವಿದಾನ ಮತ್ತು ಕಾನೂನು ಲಿಂಗ ಸಮಾನತೆಯ ಬಗ್ಗೆ ಎಷ್ಟೇ ಮಾತನಾಡಿದರೂ; ಉದ್ದೇಶ ಪೂರ್ವಕವಾಗಿಯಲ್ಲದಿದ್ದರೂ ತನಗೆ ಅರಿವಿಲ್ಲದಂತೆ ಪುರುಷ ಪ್ರಧಾನ ವ್ಯವಸ್ಥೆಯ ಮೌಲ್ಯಗಳನ್ನು ಅಂತರ್ಗತಗೊಳಿಸಿಕೊಂಡಿದೆ. ಹಾಗಾಗಿ ಈ ಪ್ರಕ್ರಿಯೆಯನ್ನು ಸಹಜ ಎಂದೇ ಬಾವಿಸುತ್ತದೆ. ಒಟ್ಟಾರೆಯಾಗಿ ಈ ಅಧ್ಯಾಯದಲ್ಲಿ ಕಾಯಿದೆಯಾಗಿ ಮತ್ತು ಒಂದು ಯೋಜನೆಯಾಗಿ ಉದೋಗ ಖಾತರಿಯ ಸ್ವರೂಪದ ಕುರಿತು ವಿವರಿಸಲಾಗಿದೆ. ಮುಂದಿನ ಅಧ್ಯಾಯಗಳಲ್ಲಿ ಪ್ರಕರಣ ಅಧ್ಯಾಯಗಳನ್ನು ಆಧರಿಸಿ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನ ಸಂದರ್ಭದಲ್ಲಿನ ತೊಡಕುಗಳನ್ನು ಸ್ಥೂಲವಾಗಿ ವಿವರಿಸಲು ಪ್ರಯತ್ನಿಸಲಾಗುವುದು.

## ಅಡಿ ಟಿಪ್ಪಣಿಗಳು

೧. ಎಂ.ಸಿ.ಶೈಲಜ ಮತ್ತು ಇತರರು, ೨೦೦೬, ಗಾಂಧೀಜಿ(ಉದೃತ);ದುಡಿಯುವ ಕೈಗಳಿಗೆ ಉದ್ಯೋಗ, ಅಬ್ದುಲ್ ನಜೀರ್‌ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಮೈಸೂರು, ಪುಟ III.

೨. ಅದೇ ಪುಟ. ೨

೩. ಸೇತೂರಾಮನ್ ಎಸ್, ೨೦೦೬, ಉದ್ಯೋಗ ಖಾತರಿ ಕಾಯಿದೆ ಒಂದು ಪರಿಚಯ ಹೊತ್ತಿಗೆ, ನ್ಯಾಷನಲ್ ಬುಕ್‌ಟ್ರಸ್ಟ್, ಇಂಡಿಯಾ, ಹೊಸ ದೆಹಲಿ, ಪುಟಸಂಖ್ಯೆ-೭

೪. ಶಂಕರ ಕೆ.ಆರ್. (ಸಂ), ೨೦೧೩, ಎಂ.ಎನ್.ಆರ್.ಇ.ಜಿ.ಎ ಮಾರ್ಗಸೂಚಿ, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಮೈಸೂರು, ಪುಟ.೧೨೦.

೫. ಸೇತೂರಾಮ್ ಎಸ್, ೨೦೦೬, ಉದ್ಯೋಗ ಖಾತರಿ ಕಾಯಿದೆ ಒಂದು ಪರಿಚಯ ಹೊತ್ತಿಗೆ, ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ, ಪುಟ.೧೪.

೬. ಕನ್ನಡ ಪ್ರಭ ದಿನಪತ್ರಿಕೆ, ೧೨ನೇ ಫೆಬ್ರವರಿ, ೨೦೧೨.

೭. ಪ್ರ.ಠಾಕೂರದಾಸ್‌ಬಂಗ್, ಗಾಂಧೀಜಿ ಉದೃತ. ೧೯೯೮, ಗ್ರಾಮ ಸ್ವರಾಜ್ಯ, ಕರ್ನಾಟಕ ಸರ್ವೋದಯ ಸಾಹಿತ್ಯ ಸಮಿತಿ, ಬೆಂಗಳೂರು, ಪುಟ.೨.

# ಅಧ್ಯಾಯ:ಐದು

## ಉದ್ಯೋಗ ಖಾತರಿ ಯೋಜನೆ : ಸರ್ಕಾರ ಮತ್ತು ಸರ್ಕಾರೇತರ ಸಂಘ-ಸಂಸ್ಥೆಗಳ ಕಾರ್ಯಚಟುವಟಿಕೆಗಳು : ಪರಿಶೀಲನೆ

೫.೧. ಉದ್ಯೋಗ ಖಾತರಿ ಯೋಜನೆಯ ಅರಿವು ಮೂಡಿಸುವಿಕೆಯಲ್ಲಿ ಸರಕಾರಿ ಇಲಾಖೆಗಳ ಪಾತ್ರ

೫.೨. ಉದ್ಯೋಗ ಖಾತರಿ ಯೋಜನೆಯ ಅರಿವು ಮೂಡಿಸುವಿಕೆಯಲ್ಲಿ ಸರಕಾರೇತರ ಸಂಘ-ಸಂಸ್ಥೆಗಳ ಪಾತ್ರ

# ಅಧ್ಯಾಯ:ಐದು

# ಉದ್ಯೋಗ ಖಾತರಿ ಯೋಜನೆ : ಸರ್ಕಾರ ಮತ್ತು ಸರ್ಕಾರೇತರ ಸಂಘ-ಸಂಸ್ಥೆಗಳ ಕಾರ್ಯಚಟುವಟಿಕೆಗಳು : ಪರಿಶೀಲನೆ

ಯಾವುದೇ ಯೋಜನೆಯಾಗಲೀ ಜಾರಿಗೆ ಬಂದಿತೆಂದರೆ ಅದು ಸಾಮಾನ್ಯ ಜನರನ್ನು ದೃಷ್ಟಿಯಲ್ಲಿಟ್ಟುಕೊಂಡು ಜಾರಿಯಾಗಿರುತ್ತದೆ. ಹಾಗೆಯೇ ಭಾರತದಂತಹ ದೇಶದಲ್ಲಿ ಎಷ್ಟೋ ಪ್ರಗತಿಪರ ಯೋಜನೆಗಳು ಜಾರಿಯಾಗಿವೆ ಮತ್ತು ಜಾರಿಯಲ್ಲಿವೆ. ಇವುಗಳೆಲ್ಲವೂ ಗ್ರಾಮೀಣ ಭಾಗದ ಜನರು ಅಂದರೆ ಸಾಮಾನ್ಯ ಜನರ ಅಭಿವೃದ್ಧಿಯನ್ನು ಗುರಿಯಾಗಿಸಿಕೊಂಡೇ ಜಾರಿಯಾದಂತಹವು. ಆದರೆ ವಾಸ್ತವದಲ್ಲಿ ಈ ಅಭಿವೃದ್ಧಿ ಯೋಜನೆಗಳಾವುವೂ ಸಂಪೂರ್ಣವಾಗಿ ಯಶಸ್ವಿಗೊಂಡಿರದೇ ಇರುವುದನ್ನು ಕಾಣಬಹುದಾಗಿದೆ. ಇದಕ್ಕೆ ಮುಖ್ಯ ಕಾರಣ ದೇಶವು ಹೆಚ್ಚಿನ ಸಂಖ್ಯೆಯಲ್ಲಿ ಗ್ರಾಮೀಣ ಪ್ರದೇಶಗಳಿಂದ ಕೂಡಿದ್ದು ಇಲ್ಲಿನ ಜನರು ಶಿಕ್ಷಣದಿಂದ ವಂಚಿತರಾಗಿರುವುದು. ಹಾಗೆಯೇ ಸಾಮಾಜಿಕ ಇಚ್ಛಾಶಕ್ತಿಯ ಕೊರತೆ ಹೆಚ್ಚಾಗಿ ಕಂಡುಬರುತ್ತಿರುವುದು ಮುಖ್ಯ ಕಾರಣವಾಗಿದೆ. ಅಂದರೆ ಈ ಅಭಿವೃದ್ಧಿ ಯೋಜನೆಗಳ ಬಗ್ಗೆ ಸಂಪೂರ್ಣವಾಗಿ ತಿಳಿದುಕೊಂಡವರು ಸಹ ಅದನ್ನು ಸಾಮಾನ್ಯ ಜನರಿಗೆ ರವಾನಿಸುವ ಇಚ್ಛಾಶಕ್ತಿಯನ್ನು ತೋರುತ್ತಿಲ್ಲ. ಗ್ರಾಮೀಣ ಜನರಲ್ಲಿ ಶಿಕ್ಷಣದ ಕೊರತೆಯ ಕಾರಣವಾಗಿ ಇವರೂ ಸಹ ಯೋಜನೆಗಳ ಬಗ್ಗೆ ತಿಳಿದುಕೊಳ್ಳುವ ಮತ್ತು ಅದರ ಫಲಾನುಭವಿಗಳಾಗಬೇಕೆಂಬ ಇಚ್ಛಾಶಕ್ತಿಯನ್ನು ಹೊಂದದೇ ಇರುವುದು, ಇವುಗಳು ಯೋಜನೆಯ ವಿಫಲತೆಗೆ ಕಾರಣವಾಗಿವೆ. ಹಾಗೆಯೇ ಬಡತನ, ಮೂಢನಂಬಿಕೆ, ಸಾಂಪ್ರದಾಯಿಕ ಆಚಾರ ವಿಚಾರಗಳು, ಅನೇಕ ಅನಿಷ್ಠ ಪದ್ಧತಿಗಳ ಆಚರಣೆಗಳಿಂದ ಜನರು ತೊಳಲಾಡುತ್ತಿದ್ದಾರೆ. ಹಾಗಾಗಿ ಸರಕಾರದ ಯಾವುದೇ ಯೋಜನೆಗಳಾಗಲೀ ಅವುಗಳ ಅರಿವು ಜನರಲ್ಲಿ ಇಲ್ಲದಿರುವುದನ್ನು ಕಾಣಲಾಗುತ್ತದೆ.

ಜೊತೆಗೆ ಶಿಕ್ಷಣವನ್ನು ಹೊಂದಿರುವಂತಹ ಎಷ್ಟೋ ಜನರು ಗ್ರಾಮೀಣ ಭಾಗದ ಜನರನ್ನು ವಂಚಿಸುವಂತಹ ಸಂದರ್ಭಗಳೂ ಹೆಚ್ಚಾಗಿವೆ. ಗ್ರಾಮೀಣ ಭಾಗದಲ್ಲಿನ ಜನರು ಯೋಜನೆಗಳ ಅರಿವನ್ನು ಮತ್ತು ಅದರ ಲಾಭವನ್ನು ಪಡೆಯಲು ಆಗುತ್ತಿಲ್ಲ. ಹಾಗೆಯೇ ೨೦೦೬ರಲ್ಲಿ ಜಾರಿಗೆ ಬಂದಂತಹ ಉದ್ಯೋಗ ಖಾತರಿ ಯೋಜನೆಯು ಸಹ ಪ್ರತಿಯೊಂದು ಗ್ರಾಮ ಪಂಚಾಯತಿ ಮಟ್ಟದಲ್ಲಿ ಜಾರಿಗೊಂಡಿದೆಯಾದರೂ ಅದು ಸಂಪೂರ್ಣವಾಗಿ ತನ್ನ ಉದ್ದೇಶವನ್ನು ಈಡೇರಿಸಿಕೊಳ್ಳುವಲ್ಲಿ ಸಾಧ್ಯವಾಗುತ್ತಿಲ್ಲ. ಏಕೆಂದರೆ ಇದರ ಅರಿವು ಗ್ರಾಮೀಣ ಭಾಗದ ಜನರಲ್ಲಿ ಇಲ್ಲದೇ ಇರುವುದು. ಹಾಗೂ ಯೋಜನೆಯ ಅನುಷ್ಠಾನದ ಸಂದರ್ಭದಲ್ಲಿ ಹಲವಾರು ಲಿಂಗ ಸಂಬಂಧಿ ತಾರತಮ್ಯಗಳು ಎದುರಾಗಿರುವುದು. ಇವು ಯೋಜನೆಯ ತೊಡಕುಗಳಾಗಿವೆ. ಹಾಗಾಗಿ ಹೈದರಾಬಾದ್ ಕರ್ನಾಟಕದ ಜನರು ಇಂದಿಗೂ ವಲಸೆ ಹೋಗುತ್ತಿರುವುದು ಕಂಡುಬರುತ್ತಿದೆ. ಉದ್ಯೋಗ ಖಾತರಿ ಯೋಜನೆಯ ಕುರಿತಂತೆ ಅರಿವು ಮೂಡಿಸುವ ಸಲುವಾಗಿ ವ್ಯವಸ್ಥೆಯಲ್ಲಿ ಹಲವಾರು ಸರಕಾರಿ ಮತ್ತು ಸರಕಾರೇತರ ಸಂಘಸಂಸ್ಥೆಗಳು ಪ್ರಯತ್ನಿಸುತ್ತಿವೆ. ಈ ನಿಟ್ಟಿನಲ್ಲಿ ಗ್ರಾಮೀಣ ಭಾಗದ ಜನರು ಯೋಜನೆಯನ್ನು ಸಂಪೂರ್ಣವಾಗಿ ಅರಿಯುವುದು ಮತ್ತು ಇದರ ಲಾಭವನ್ನು ಪಡೆಯುವುದು ಮುಖ್ಯವಾಗಿರುತ್ತದೆ. ತಮ್ಮ ಜೀವನ ಮಟ್ಟವನ್ನು ಸುಧಾರಿಸುವ ನಿಟ್ಟಿನಲ್ಲಿ ಈ ಅರಿವು ಕಾರ್ಯಕ್ರಮಗಳು ತುಂಬಾ ಉಪಯುಕ್ತವಾಗಿವೆ. ಮುಖ್ಯವಾಗಿ ಗ್ರಾಮೀಣ ಭಾಗಗಳಲ್ಲಿ ಕೆಲವು ಸ್ತ್ರೀಶಕ್ತಿ ಸಂಘಟನೆಗಳು, ರೈತ ಸಂಘಟನೆಗಳು, ಕೃಷಿ ಕೂಲಿಕಾರರ ಸಂಘಗಳು, ಎನ್.ಜಿ.ಓ.ಗಳು ಇನ್ನು ಹಲವಾರು ಪ್ರಗತಿಪರ ಸಂಘಟನೆಗಳು ಈ ಯೋಜನೆಯ ಅರಿವು ಮೂಡಿಸುವ ಕಾರ್ಯದಲ್ಲಿ ನಿರಂತರವಾಗಿ ಪ್ರಯತ್ನಸುತ್ತಲೇ ಬಂದಿವೆ. ಇವುಗಳು ಕೇವಲ ಅರಿವು ಮೂಡಿಸುವುದಕ್ಕೆ ಮಾತ್ರ ಸೀಮಿತವಾಗಿರದೇ ಯೋಜನೆಯಲ್ಲಿ ಇರುವಂತಹ ತೊಡಕುಗಳು ಯಾವುವು? ಅವುಗಳನ್ನು ಬಗೆಹರಿಸುವುದು ಹೇಗೆ? ಮತ್ತು ಯೋಜನೆಯು ಇನ್ನೂ ಪ್ರಖರವಾಗಿ ಜಾರಿಯಾಗಬೇಕಾದರೆ ಯಾವ ಕ್ರಮಗಳನ್ನು ಅನುಸರಿಸಬೇಕು? ಮತ್ತು ಯೋಜನೆಯಲ್ಲಿ ಹೊಸ ಹೊಸ ಕಾಮಗಾರಿಗಳನ್ನು ಜಾರಿಗೊಳಿಸುವುದು ಹೇಗೆ? ಆ ಮೂಲಕ ಸಾಮಾನ್ಯ ಜನರಿಗೆ ಉದ್ಯೋಗಗಳನ್ನು ಹೇಗೆ ಸೃಷ್ಟಿಸಬೇಕು? ಎಂಬಂತಹ ಅಂಶಗಳನ್ನು ಇಟ್ಟುಕೊಂಡು ವ್ಯವಸ್ಥೆಯಲ್ಲಿ ಕಾರ್ಯಪ್ರವೃತ್ತವಾಗಿವೆ. ಇವುಗಳ ಜೊತೆಗೆ ಸರಕಾರಿ ಸಂಸ್ಥೆಗಳು ಕೂಡ ಗ್ರಾಮೀಣ ಭಾಗದ ಜನರಿಗೆ ಈ ಯೋಜನೆಯ ಅರಿವು ಮೂಡಿಸುವ ಕಾರ್ಯದಲ್ಲಿ ತೊಡಗಿಕೊಂಡಿವೆ. ಗ್ರಾಮೀಣ ಭಾಗದ ಜನರು ಎಂದರೆ ಕೇವಲ ಪುರುಷರು ಮಾತ್ರವಲ್ಲ ಇದರಲ್ಲಿ ಮಹಿಳೆಯರೂ ಸಹ ಒಳಗೊಳ್ಳುತ್ತಾರೆ. ಈ ಅರಿವು ಕಾರ್ಯಕ್ರಮಗಳು ಇಬ್ಬರನ್ನೂ ಒಳಗೊಳ್ಳುವಂತೆ ನಡೆಯಬೇಕಾಗಿದೆ. ಏಕೆಂದರೆ ಪುರುಷ ಪ್ರಧಾನವಾದ ಭಾರತೀಯ ಸಮಾಜದಲ್ಲಿ ಮಹಿಳೆಯರನ್ನು ಕಡೆಗಣಿಸಲಾಗಿದೆ. ಆ ಕಾರಣಕ್ಕಾಗಿ ಗ್ರಾಮೀಣ ಭಾಗದಲ್ಲಾಗಲೀ ಅಥವಾ ನಗರ

ಪ್ರದೇಶಗಳಲ್ಲಾಗಲೀ ಸರಕಾರದ ಕಾರ್ಯಕ್ರಮಗಳು ಅಥವಾ ಸರ್ಕಾರೇತರ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವವರು ಹೆಚ್ಚಿನ ರೀತಿಯಲ್ಲಿ ಪುರುಷರೇ ಆಗಿರುತ್ತಾರೆ. ಇಲ್ಲಿ ಮಹಿಳೆಯರಿಗೆ ಪ್ರವೇಶವನ್ನು ನಿರಾಕರಿಸಿರುತ್ತಾರೆ. ಅಂದರೆ ಮಹಿಳೆಯರನ್ನು ಸಾಮಾಜಿಕ ಮೌಲ್ಯಗಳಡಿಯಲ್ಲಿ ಕಟ್ಟಿಹಾಕಲಾಗಿದೆ. ಹಾಗಾಗಿ ಈ ಅರಿವು ಕಾರ್ಯಕ್ರಮಗಳನ್ನು ಏರ್ಪಡಿಸುವವರೂ ಸಹ ಲಿಂಗ ಸಮಾನತೆಯ ದೃಷ್ಟಿಯನ್ನಿಟ್ಟುಕೊಂಡು ಮಾಡಬೇಕಾಗುತ್ತದೆ. ಮತ್ತು ಈ ಎಚ್ಚರವನ್ನು ಸದಾ ವಹಿಸಬೇಕಾಗುತ್ತದೆ. ಈ ದೃಷ್ಟಿಯಲ್ಲಿ ಈ ಅಧ್ಯಾಯದಲ್ಲಿ ಗ್ರಾಮೀಣ ಭಾಗದ ಜನರಿಗೆ ಯೋಜನೆಯ ಕುರಿತಂತೆ ಅರಿವು ಮೂಡಿಸುವಿಕೆಯನ್ನು ಮತ್ತು ಯೋಜನೆಯು ಪ್ರಖರವಾಗಿ ಜಾರಿಯಾಗಲು ಹಮ್ಮಿಕೊಂಡ ಅಥವಾ ಕಾರ್ಯಗತಗೊಳಿಸಿದ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಸಂಸ್ಥೆಗಳನ್ನು ಎರಡು ಬಗೆಗಳಲ್ಲಿ ವಿಂಗಡಿಸಿಕೊಳ್ಳಲಾಗಿದೆ. ಒಂದು ಸರಕಾರಿ ಇಲಾಖೆಗಳು ಮತ್ತು ಎರಡನೆಯದಾಗಿ ಸರಕಾರೇತರ ಸಂಸ್ಥೆಗಳು.

**೫.೧. ಉದ್ಯೋಗ ಖಾತರಿ ಯೋಜನೆಯ ಅರಿವು ಮೂಡಿಸುವಿಕೆಯಲ್ಲಿ ಸರಕಾರಿ ಇಲಾಖೆಗಳ ಪಾತ್ರ**

ಉದ್ಯೋಗ ಖಾತರಿಯು ಮುಖ್ಯವಾಗಿ ಗ್ರಾಮೀಣ ಭಾಗದ ಜನರನ್ನು ಕೇಂದ್ರೀಕರಿಸಿ ಜಾರಿಗೆ ಬಂದಂತದ್ದಾಗಿದೆ. ಹಾಗಾಗಿ ಇಲ್ಲಿ ಗ್ರಾಮೀಣ ಜನರನ್ನೇ ದೃಷ್ಟಿಯಲ್ಲಿಟ್ಟುಕೊಳ್ಳಲಾಗಿದೆ. ಇಲ್ಲಿನ ಜನರು ಹೆಚ್ಚಾಗಿ ಅನಕ್ಷರಸ್ಥರಾಗಿದ್ದು ಇವರಿಗೆ ಸರಕಾರಿ ಯೋಜನೆಗಳ ಬಗ್ಗೆ ಅರಿವು ಇರುವುದು ತುಂಬಾನೇ ಕಡಿಮೆ. ಆ ಕಾರಣಕ್ಕಾಗಿ ಉದ್ಯೋಗ ಖಾತರಿಯು ಯಾವುದೇ ರೀತಿಯ ಪರಿಣಾಮಕಾರಿ ಸ್ವರೂಪದಲ್ಲಿ ಬದಲಾವಣೆಯನ್ನು ಕಂಡಿಲ್ಲ. ಇದಕ್ಕೆ ಕಾರಣವೇನು ಎಂಬುದನ್ನು ತಿಳಿಯ ಹೊರಟರೆ. ಮೊದಲನೆಯದಾಗಿ ಜನರಿಗೆ ಇದರ ಅರಿವೇ ಇಲ್ಲದಿರುವುದು ಕಂಡುಬರುತ್ತದೆ. ಗ್ರಾಮ ಮಟ್ಟದಲ್ಲಿ ಗ್ರಾಮ ಪಂಚಾಯತಿಗಳೆ ಸರಕಾರದ ಕೇಂದ್ರ ಬಿಂದುಗಳಾಗಿರುತ್ತವೆ. ಹಾಗಾಗಿ ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿ ಬರುವಂತಹ ಎಲ್ಲಾ ಹಳ್ಳಿಗಳಲ್ಲೂ ಜನರು ಇದರ ಲಾಭವನ್ನು ಪಡೆಯಬೇಕು ಎಂಬ ದೃಷ್ಟಿಯಲ್ಲಿಟ್ಟುಕೊಂಡು ಹಲವಾರು ಅರಿವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತವೆ. ಗ್ರಾಮ ಪಂಚಾಯತಿಗಳು ಪ್ರತಿಯೊಂದು ಗ್ರಾಮಗಳಲ್ಲಿಯೂ ಉದ್ಯೋಗ ಖಾತರಿ ಯೋಜನೆಯ ವಿವರಗಳನ್ನು ಮುಖ್ಯವಾಗಿ ಗೋಡೆ ಬರಹಗಳನ್ನು ಮಾಡುವುದರ ಮೂಲಕ ಅರಿವು ಮೂಡಿಸುತ್ತದೆ. ಆದರೆ ಗ್ರಾಮೀಣ ಭಾಗದ ಜನರು ಅನಕ್ಷರಸ್ಥರಾಗಿರುವುದರಿಂದ ಈ ಗೋಡೆ ಬರಹಗಳು ಯಾವುದೇ ಪರಿಣಾಮಕಾರಿಯಾಗುವುದಿಲ್ಲ. ಹಾಗೆಂದು ಈ ಗೋಡೆ ಬರಹಗಳನ್ನು ಮಾಡುವುದು ಸೂಕ್ತವಲ್ಲ ಎಂದು ಹೇಳುತ್ತಿಲ್ಲ. ಬದಲಾಗಿ ಗೋಡೆ ಬರಹದ ಜೊತೆ ಜೊತೆಯಲ್ಲಿ ಪ್ರತೀ ಗ್ರಾಮದಲ್ಲಿಯೂ ಗೋಡೆಯ ಮೇಲೆ ಬರೆದಿರುವುದನ್ನು ಓದಿ ತಿಳಿಸಿ ಹೇಳುವಂತಹ ಕಾರ್ಯ ನಡೆಯಬೇಕಾಗಿದೆ. ಇದು ಆಯಾ ಗ್ರಾಮದ ಪಂಚಾಯತಿ ಸದಸ್ಯರಿಂದಲೇ ನಡೆಯಬೇಕು. ಆಗ ಮಾತ್ರ

ಅನಕ್ಷರಸ್ಥರಿಗೂ ಸಹ ಇದರ ಅರಿವಾಗುತ್ತದೆ. ಆದರೆ ಈ ಕೆಲಸ ನಡೆಯುತ್ತಿಲ್ಲ. ಹಾಗೆಯೇ ಡಂಗೂರ ಸಾರಿಸುವ ಮೂಲಕ ಗ್ರಾಮಗಳಲ್ಲಿ ಸಭೆಗಳನ್ನು ಕರೆಯುವುದು ಮತ್ತು ಆ ಮೂಲಕ ಜನರಿಗೆ ಜಾಗೃತಿಯನ್ನು ಮೂಡಿಸುವ ಕೆಲಸಗಳನ್ನು ಕೆಲವು ಗ್ರಾಮ ಪಂಚಾಯತಿಗಳಲ್ಲಿ ಮಾಡಲಾಗುತ್ತಿದೆ. ಹಾಗೆಯೇ ಕೆಲವು ಬಿತ್ತಿ ಪತ್ರಗಳನ್ನೂ ಸಹ ಮಾಡಿಸಿ ಹಂಚಲಾಗುತ್ತದೆ. ಗ್ರಾಮ ಸಭೆಗಳಲ್ಲಿ ಯೋಜನೆಗೆ ಸಂಬಂಧಿಸಿದಂತೆ ಅರಿವು ಮೂಡಿಸುವ ಸಲುವಾಗಿ ಹಲವು ಕಾರ್ಯಕ್ರಮಗಳ ಕುರಿತಂತೆ ವಿವರಿಸಲಾಗಿರುತ್ತದೆ. ಹಾಗೆಯೇ ಬೀದಿ ನಾಟಕಗಳನ್ನು ಆಡಿಸುವ ಮೂಲಕ ಜನರಲ್ಲಿ ಅರಿವು ಮೂಡಿಸುವ ಕೆಲಸಗಳನ್ನೂ ಸಹ ಮಾಡಲಾಗುತ್ತಿದೆ. ಹೀಗೆ ಗ್ರಾಮ ಪಂಚಾಯತಿಗಳು ತಮ್ಮ ಕಾರ್ಯ ವ್ಯಾಪ್ತಿಯಲ್ಲಿ ಜನರಿಗೆ ಈ ಯೋಜನೆಯ ಬಗ್ಗೆ ಅರಿವು ಮೂಡಿಸಲು ತನ್ನದೇ ಆದಂತಹ ಕ್ರಮಗಳನ್ನು ಹಮ್ಮಿಕೊಳ್ಳುತ್ತಿವೆ. ಕಾಮಗಾರಿಗಳನ್ನು ರೂಪಿಸುವ, ಜಾಬ್‌ಕಾರ್ಡ್‌ಗಳನ್ನು ಮಾಡಿಸುವುದು, ಕೆಲಸಗಳ ಸ್ವರೂಪದ ಕುರಿತಂತೆ ಹಲವು ಬಗೆಯಲ್ಲಿ ಕಾರ್ಯಗಳನ್ನು ಮಾಡುತ್ತಿವೆ.

ಗ್ರಾಮ ಪಂಚಾಯತಿಗಳಲ್ಲಿನ ಅಧಿಕಾರಿವರ್ಗಗಳ ಪಾತ್ರ ಇಲ್ಲಿ ಪ್ರಮುಖವಾಗಿರುತ್ತದೆ. ಆ ನಿಟ್ಟಿನಲ್ಲಿ ಗ್ರಾಮ ಪಂಚಾಯತಿಗಳ ಅಧಿಕಾರಿಗಳೂ ಸಹ ಅಭಿವೃದ್ಧಿ ಈ ಅರಿವು ಮೂಡಿಸುವಂತಹ ಕಾರ್ಯಗಳಲ್ಲಿ ತೊಡಗಿಕೊಂಡಿರುವುದು ಕಂಡುಬರುತ್ತಿದೆ. ಇದಕ್ಕೆ ಉತ್ತಮ ಉದಾಹರಣೆ ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನ ಪಾಪಿನಾಯಕನಹಳ್ಳಿ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಯಾಗಿರುವಂತಹ ಮಂಜುಳಾರಾಣಿಯವರು, ಉದ್ಯೋಗ ಖಾತರಿ ಯೋಜನೆಯ ಕುರಿತಂತೆ ಜನರಲ್ಲಿ ಅರಿವು ಮೂಡಿಸುವಂತಹ ಕಾರ್ಯದಲ್ಲಿ ತೊಡಗಿಕೊಂಡಿರುವುದನ್ನು ಕಾಣಬಹುದಾಗಿದೆ. ಇವರು ಹೇಳುವಂತೆ "ಗ್ರಾಮ ಪಂಚಾಯತಿಯಲ್ಲಿ ಮುಖ್ಯವಾಗಿ ಈ ಯೋಜನೆಗೆ ಸಂಬಂಧಿಸಿದಂತೆ ಜನರಲ್ಲಿ ಸ್ವಲ್ಪನೂ ಕೂಡ ಅರಿವು ಇಲ್ಲದೇ ಇರುವುದನ್ನು ಗಮನಿಸಿ ಮೊದಲು ಪ್ರತಿಯೊಂದು ಗ್ರಾಮಕ್ಕೆ ಭೇಟಿಕೊಟ್ಟು ಅಲ್ಲಿನ ಜನರನ್ನು ಸಂದರ್ಶಿಸಿಸಲಾಗಿದೆ. ಜೊತೆಗೆ ಮಹಿಳೆಯರನ್ನು ದೃಷ್ಟಿಯಲ್ಲಿಟ್ಟುಕೊಂಡೆ ಪ್ರತಿಯೊಂದು ಮನೆ ಮನೆಗೂ ಹೋಗಿ ಆ ಕುಟುಂಬದ ಜನರೊಂದಿಗೆ ಮಾತನಾಡುವುದರ ಮೂಲಕ ಯೋಜನೆಯ ಕುರಿತಂತೆ ವಿವರಿಸಲಾಗಿದೆ. ಅದರಲ್ಲಿಯೂ ಈಗ ಪ್ರತಿಯೊಂದು ಗ್ರಾಮಗಳಲ್ಲಿಯೂ ಸಹ ಸ್ತ್ರೀಶಕ್ತಿ ಸಂಘಗಳು ಇರುವುದರಿಂದ ಆ ಸಂಘಗಳಲ್ಲಿನ ಎಲ್ಲಾ ಸದಸ್ಯರನ್ನು ಗ್ರಾಮ ಪಂಚಾಯತಿಗೆ ಕರೆಯಿಸಿಕೊಂಡು ಯೋಜನೆಗೆ ಸಂಬಂಧಿಸಿದಂತೆ ಹಲವು ಬಗೆಯಲ್ಲಿ ವಿವರಿಸಿ ಹೇಳುವ ಮೂಲಕ ಗ್ರಾಮ ಪಂಚಾಯತಿ ಸದಸ್ಯರಿಗೂ ಸಹ ಸರಕಾರವು ಹಲವು ಕೈಪಿಡಿಗಳನ್ನು ಮುದ್ರಿಸಿ ಕೊಡಲಾಗಿದೆ. ಅದನ್ನು ಪ್ರತಿದಿನ ಗಮನಿಸುವಂತೆ ಸೂಚಿಸುತ್ತೇನೆ" ಎಂದರು. ಹೀಗೆ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಯಾಗಿ ಮಂಜುಳಾರಾಣಿಯವರು ಉದ್ಯೋಗ ಖಾತರಿ ಯೋಜನೆಯ ಅರಿವು ಮೂಡಿಸಲು ಹಲವು ಪ್ರಯತ್ನಗಳನ್ನು ಮಾಡುತ್ತಿರುವುದು

ಕಂಡುಬರುತ್ತದೆ. ಹೀಗೆಯೇ ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿಯೂ ಈ ಯೋಜನೆಯ ಬಗ್ಗೆ ಅರಿವು ಮೂಡಿಸುವಂತಹ ಕಾರ್ಯಗಳು ಪಂಚಾಯತಿ ಅಧಿಕಾರಿಗಳಿಂದಲೇ ನಡೆಯಬೇಕಾಗಿದೆ.

**೫.೨. ಉದ್ಯೋಗ ಖಾತ್ರಿ ಯೋಜನೆಯ ಅರಿವು ಮೂಡಿಸುವಿಕೆಯಲ್ಲಿ ಸರಕಾರೇತರ ಸಂಘಸಂಸ್ಥೆಗಳ ಪಾತ್ರ**

ಸರಕಾರದ ಯೋಜನೆಗಳ ಕುರಿತಾಗಿ ಅರಿವು ಮೂಡಿಸುವ ಕಾರ್ಯದಲ್ಲಿ ಸರಕಾರದ ಇಲಾಖೆಗಳಿಗಿಂತ ಸರಕಾರೇತರ ಸಂಘ ಸಂಸ್ಥೆಗಳೇ ಹೆಚ್ಚಿನ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಯಾವುದೇ ಸಂಘಟನೆಗಳಾಗಲೀ ಅಥವಾ ಸ್ವಯಂ ಸೇವಾ ಸಂಸ್ಥೆಗಳಾಗಲೀ ಅದು ಇದ್ದಕಿದ್ದಂತೆ ಉದ್ಭವಿಸಿಬಿಡೋದಿಲ್ಲ. ಅವುಗಳ ಹುಟ್ಟಿಗೆ ಹಲವಾರು ಕಾರಣಗಳಿರುತ್ತವೆ. ಹಲವಾರು ಉದ್ದೇಶಗಳು ಮತ್ತು ಆ ಉದ್ದೇಶಗಳನ್ನು ಈಡೇರಿಸಿಕೊಳ್ಳುವಂತಹ ಇಚ್ಛಾಶಕ್ತಿ ಅವುಗಳಲ್ಲಿ ಇರುತ್ತವೆ. ಈ ಬಗೆಯ ಸಮಾಜಮುಖಿ ಉದ್ದೇಶಗಳನ್ನು ಹೊಂದಿರುವ ಮತ್ತು ಅವುಗಳನ್ನು ಈಡೇರಿಸಲು ಇರುವಂತಹ ಪ್ರಾಮಾಣಿಕ ಇಚ್ಛಾಶಕ್ತಿಯನ್ನು ಹೊಂದಿರುವಂತಹ ಸಂಘಟನೆಗಳ ಸಂಖ್ಯೆ ತುಂಬಾ ಕಡಿಮೆ ಎಂದು ಹೇಳಬಹುದು. ಮುಖ್ಯವಾಗಿ ಹೈದರಾಬಾದ್ ಕರ್ನಾಟಕದ ವ್ಯಾಪ್ತಿಯಲ್ಲಿ ಈ ಬಗೆಯ ಸಂಘಟನೆಗಳು ತಮ್ಮ ಕಾರ್ಯವ್ಯಾಪ್ತಿಯಲ್ಲಿ, ಹಲವು ಮಿತಿಗಳ ನಡುವೆ ಜನಪರ ಕೆಲಸಗಳನ್ನು ಮಾಡುತ್ತಲೇ ಬಂದಿವೆ. ಅಂತಹವುಗಳಲ್ಲಿ ಮುಖ್ಯವಾದವು ಜನವಾದಿ ಮಹಿಳಾ ಸಂಘಟನೆ, ರೈತ ಸಂಘಟನೆ, ಕೂಲಿಕಾರರ ಸಂಘ ಹೀಗೆ ಹಲವಾರು ಸಂಘಟನೆಗಳು ಕೆಲಸ ನಿರ್ವಹಿಸುತ್ತಿವೆ. ಇವುಗಳು ಸಾಮಾನ್ಯ ಜನರನ್ನು ಮುಖ್ಯವಾಗಿಸಿಕೊಂಡು ಜನರು ಈ ಯೋಜನೆಯಲ್ಲಿ ತೊಡಗಿಕೊಳ್ಳುವಂತೆ ಮಾಡುವ ಮತ್ತು ಆ ಮೂಲಕ ತಮ್ಮ ಆರ್ಥಿಕ ಜೀವನವನ್ನು ಉತ್ತಮಗೊಳಿಸಿಕೊಳ್ಳಲು ನೆರವಾಗುತ್ತಿವೆ. ಇವುಗಳು ಉದ್ಯೋಗ ಖಾತರಿ ಯೋಜನೆಯ ಕುರಿತಂತೆ ಮಾಡಿದಂತಹ ಕೆಲಸಗಳನ್ನು ವಿವರಿಸುವುದು ಮುಖ್ಯವಾಗುತ್ತದೆ.

ಹೈದರಾಬಾದ್ ಕರ್ನಾಟಕದಲ್ಲಿ ಈಗಾಗಲೇ ಅಸ್ತಿತ್ವದಲ್ಲಿರುವ ಸಂಘಟನೆಗಳಲ್ಲಿ ಮುಖ್ಯವಾಗಿ ಜನವಾದಿ ಮಹಿಳಾ ಸಂಘಟನೆ ರಾಜ್ಯದ ನಾನಾ ಭಾಗಗಳಲ್ಲಿ ಸಂಚರಿಸಿ ಉದ್ಯೋಗ ಖಾತರಿ ಯೋಜನೆಯ ಕುರಿತಾಗಿ ಜನರಲ್ಲಿ ಅರಿವು ಮೂಡಿಸುವ ಕಾರ್ಯದಲ್ಲಿ ತೊಡಗಿಕೊಂಡಿದೆ. ಏಕೆಂದರೆ ಈ ಸಂಘಟನೆ ಜನರ ನಡುವೆ ಚಲಿಸುವ ಮತ್ತು ಜನರಿಂದಲೇ ಬದಲಾವಣೆಯನ್ನು ಬಯಸುವ ಉದ್ದೇಶವನ್ನು ಹೊಂದಿದೆ. ಆ ಕಾರಣಕ್ಕಾಗಿ ಈ ಸಂಘಟನೆ ಜನರೊಳಗೊಂದಾಗಿ ಕಾರ್ಯ ನಿರ್ವಹಿಸುತ್ತಿದೆ. "ಮಹಿಳೆಯರ ಸ್ವಾವಲಂಬಿ ಬದುಕಿಗಾಗಿ ಜನವಾದಿ ಮಹಿಳಾ ಸಂಘಟನೆಯು ನಿರಂತರವಾಗಿ ಚಟುವಟಿಕೆಗಳನ್ನು ನಡೆಸುತ್ತಾ ಬಂದಿದೆ. ಉದ್ಯೋಗ ಮೂಲಭೂತ ಹಕ್ಕಾಗಬೇಕು ಎಂಬುದು ಜನವಾದಿಯ ನಿಲುವು"[1]. ಈ ಹಿನ್ನೆಲೆಯಲ್ಲಿ ಈ ಸಂಘಟನೆ ಬೀದರ್, ಕಲಬುರ್ಗಿ, ದಾವಣಗೆರೆ, ಮಂಡ್ಯ, ರಾಯಚೂರು, ಕೋಲಾರ, ಚಿಕ್ಕಬಳ್ಳಾಪುರ ಮುಂತಾದ ಜಿಲ್ಲೆಗಳಲ್ಲಿ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

ಮುಖ್ಯವಾಗಿ ಈ ಸಂಘಟನೆಯು ಲಿಂಗ ಸಮಾನತೆಯ ನೆಲೆಯಲ್ಲಿಯೇ ಕಾರ್ಯ ನಿರ್ವಹಿಸುತ್ತಿದೆ. ಅನೇಕ ವಿಚಾರ ಸಂಕಿರಣಗಳು, ಜಾಗೃತಿ ಜಾಥಾಗಳು ಹೀಗೆ ಹತ್ತು ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ. ಇದಕ್ಕೆ ಉತ್ತಮ ಉದಾಹರಣೆ ಎಂದರೆ ಜನವಾದಿ ಮಹಿಳಾ ಸಂಘಟನೆಯು ಬೀದರ್ ಜಿಲ್ಲೆ ಬಸವಕಲ್ಯಾಣ, ಔರಾದ್, ಹುಮನಾಬಾದ್ ಮತ್ತು ಬಾಲ್ಕಿ ಈ ತಾಲೂಕುಗಳಲ್ಲಿ ಸಂಘಟನೆಯು ಕೆಲಸಗಳನ್ನು ಮಾಡಿದೆ. ಜಿಲ್ಲೆಯಾದ್ಯಂತ ಕನಿಷ್ಠ ನೂರು ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಇದರಿಂದ ಸಾವಿರಾರು ಜನರಿಗೆ ಕೆಲಸ ದೊರೆತಿದೆ. "ದೆಹಲಿಯಲ್ಲಿ ನಡೆದ ಉದ್ಯೋಗ ಖಾತರಿಯ ರಾಷ್ಟ್ರೀಯ ಸಮಾವೇಶಕ್ಕೆ ಕಣಕಟ್ಟ ಮತ್ತು ಹುಣಚಗೇರ ಗ್ರಾಮಗಳಿಂದ ಆಶ್ರಫ್ ಬೀ ಮತ್ತು ಪುತಳಾಬಾಯಿ ಹಿರೋಳಿ ಎಂಬ ಇಬ್ಬರು ಕೂಲಿಕಾರರು ಹೋಗಿ ಭಾಗವಹಿಸಿದ್ದರು. ಇದು ಜನವಾದಿ ಮಹಿಳಾ ಸಂಘಟನೆಯ ಸಾಧನೆಯಾಗಿದೆ"[3].

ಮೊದಲು ಹೈದರಾಬಾದ್ ಕರ್ನಾಟಕ ವ್ಯಾಪ್ತಿಯಲ್ಲಿ ಈ ಉದ್ಯೋಗ ಖಾತರಿ ಕಾಯಿದೆ ಜಾರಿಗೆ ಬಂದಾಗ ಜನರು ಇದರ ಬಗ್ಗೆ ತಪ್ಪಾಗಿ ತಿಳಿದುಕೊಂಡಿದ್ದರು. ಹಾಗೆಯೇ ಇದರ ಅಪಪ್ರಚಾರವೂ ನಡೆಯಿತು. ಮುಖ್ಯವಾಗಿ ಇದೊಂದು ರೈತ ವಿರೋಧಿ ಕಾಯಿದೆ. ಇದು ಕೂಲಿಕಾರರಿಗೆ ಹೆಚ್ಚು ಕೂಲಿಕೊಟ್ಟು ತನ್ನ ಕಡೆ ಸೆಳೆದುಕೊಳ್ಳುತ್ತದೆ. ಗ್ರಾಮ ಪಂಚಾಯತಿಗಳು ನೂರು ದಿನ ಕೆಲಸ ಕೊಟ್ಟರೆ ಕೂಲಿ ಕಾರ್ಮಿಕರು ರೈತರ ಹೊಲಗಳಲ್ಲಿ ಕೆಲಸಕ್ಕೆ ಬರುವುದಿಲ್ಲ. ಒಂದು ವೇಳೆ ಹೊಲದ ಕೆಲಸಕ್ಕೆ ಬಂದರೆ ಹೆಚ್ಚಿನ ಕೂಲಿಯ ಬೇಡಿಕೆಯನ್ನು ಮುಂದೊಡ್ಡುತ್ತಾರೆ. ಹಾಗಾಗಿ ಸರಕಾರವೇ ಜನರನ್ನು ದಾರಿ ತಪ್ಪಿಸುತ್ತಿದೆ. ಇದೊಂದು ರೈತ ವಿರೋಧಿ ಕಾಯಿದೆ ಎಂಬುದಾಗಿ ಈ ಕಾಯಿದೆಯ ಬಗ್ಗೆ ಅಪಪ್ರಚಾರ ಮಾಡಲಾಗಿತ್ತು.ಇಂತಹ ಸಂದರ್ಭದಲ್ಲಿ ಜನವಾದಿ ಮಹಿಳಾ ಸಂಘಟನೆಯು ಈ ಭಾಗದಲ್ಲಿ ಸಂಚರಿಸಿ, ಜನರಲ್ಲಿ ಅರಿವನ್ನು ಮೂಡಿಸುವಂತಹ ಕೆಲಸಗಳನ್ನು ಮಾಡಿದೆ. ರಾಯಚೂರು, ಕಲಬುರ್ಗಿ, ಚಿಕ್ಕಬಳ್ಳಾಪುರ, ಕೋಲಾರ, ಮಂಡ್ಯ ಮತ್ತು ದಾವಣಗೆರೆ ಮುಂತಾದ ಜಿಲ್ಲೆಗಳಲ್ಲಿ ಜನರಿಗೆ ಅರಿವು ಮೂಡಿಸಿ ಅವರಿಗೆ ಈ ಯೋಜನೆಯಲ್ಲಿ ಕೆಲಸ ಸಿಗುವ ಹಾಗೆ ಮಾಡಿದ್ದಾರೆ. ಮುಖ್ಯವಾಗಿ ಗ್ರಾಮೀಣ ಭಾಗಗಳಲ್ಲಿನ ಕೆಲವು ಮುಖಂಡರು ಕೆಲಸಗಾರರ ಹೆಸರಿನಲ್ಲಿರುವ ಜಾಬ್ ಕಾರ್ಡ್ ಹಾಗೂ ಪಾಸ್ ಪುಸ್ತಕಗಳನ್ನು ಇಟ್ಟುಕೊಂಡು, ಜನರಿಗೆ ಸುಳ್ಳು ಹೇಳಿ ಸಹಿ ಪಡೆದು, ಕೆಲಸ ಮಾಡಿಸದೇ ನೂರಿನ್ನೂರು ರೂಪಾಯಿಗಳನ್ನು ಕೊಟ್ಟು ಉಳಿದ ಸಾವಿರಾರು ರೂಪಾಯಿಗಳನ್ನ ಲಪಾಟಾಯಿಸುವ ಅನೇಕ ಪ್ರಕರಣಗಳನ್ನು ಜನವಾದಿ ಸಂಘಟನೆ ಬಯಲಿಗೆಳೆಯುವುದರ ಮೂಲಕ ಜನರಲ್ಲಿ ಅರಿವನ್ನು ಮೂಡಿಸುವ ಕೆಲಸ ಮಾಡಿದೆ.

ಈ ಯೋಜನೆಯು ಕೆಲವು ಮಿತಿಗಳ ನಡುವೆಯೇ ಲಿಂಗ ಸೂಕ್ಷ್ಮದ ನೆಲೆಯಲ್ಲಿಯೇ ರೂಪಿಸಲ್ಪಟ್ಟಿದೆ. ಆದರೆ ಕೆಲಸದ ಅನುಷ್ಠಾನದ ಸಂದರ್ಭದಲ್ಲಿ ಕೆಲವು ಬದಲಾವಣೆಗಳನ್ನು

ಮಾಡಿಕೊಳ್ಳಬೇಕಾದ ಅಗತ್ಯತೆ ಇದೆ. ಆ ಮೂಲಕ ನಿಯಮದಲ್ಲಿ ತಿದ್ದುಪಡಿಗಳಾಗಬೇಕು ಎಂದು ಒತ್ತಾಯಿಸುತ್ತದೆ. ಅಂದರೆ ಕಾಮಗಾರಿಗಾಗಿ ಬಳಸುವಂತಹ ಸಲಕರಣೆಗಳು ಮಹಿಳಾ ಉಪಯೋಗಿ ಸಲಕರಣೆಗಳಲ್ಲ. ಇವು ಪುರುಷರನ್ನು ದೃಷ್ಟಿಯಲ್ಲಿಟ್ಟುಕೊಂಡು ತಯಾರಿಸಿದವುಗಳಾಗಿವೆ. ತ್ವರಿತ ಕೆಲಸ ಆಗುವ ಹಾಗೆ ಮತ್ತು ಮಹಿಳೆಯರು ಬಳಸಲು ಅನುಕೂಲವಾಗುವಂತೆ ಸಲಕರಣೆಗಳು ಸಿದ್ಧಗೊಳಿಸಬೇಕಾದ ಅವಶ್ಯಕತೆ ಇದೆ. ನರೇಗ ಶಾರೀರಿಕ ಶ್ರಮದ ಆಧಾರದ ಕೆಲಸವಾಗಿದೆ. ಹೀಗಿದ್ದಾಗ ಮಹಿಳೆ ಕೆಲಸ ಮಾಡುವಂತಹ ಸ್ಥಳದಲ್ಲಿ ಪ್ರಥಮ ಚಿಕಿತ್ಸೆ ಮಾತ್ರವಲ್ಲ, ಪ್ರಾಥಮಿಕ ಆರೋಗ್ಯ ಸಹಾಯಕಿಯರನ್ನು ನೇಮಿಸಿ, ದಿನಕ್ಕೆ ಒಮ್ಮೆಯಾದರೂ ಭೇಟಿ ನೀಡುವಂತಾಗಬೇಕು. ಮಹಿಳೆಯರ ಆರೋಗ್ಯಕ್ಕೆ ಸಂಬಂಧಪಟ್ಟಂತೆ ತಿಳುವಳಿಕೆ ಕೊಡುವಂತಹ ಸಭೆಗಳನ್ನು ನಡೆಸಬೇಕು, ಹಾಗೆಯೇ ಅನಕ್ಷರಸ್ಥ ಮಹಿಳೆಯರು ಸಾಕ್ಷರರಾಗಲು ಸಾಕ್ಷರ ಕೇಂದ್ರಗಳನ್ನು ನಡೆಸಬೇಕು. ಕೊನೆಯದಾಗಿ ಮಹಿಳೆಯರು ಸರಳವಾಗಿ ಮಾಡುವಂತಹ ಕೆಲಸಗಳಾದ ನರ್ಸರಿ, ಬೀಜಗಳ ಸಂಗ್ರಹ, ಹೈನುಗಾರಿಕೆ, ಎರೆಹುಳು ಗೊಬ್ಬರ ತಯಾರಿಕೆ ಮುಂತಾದ ಕೆಲಸಗಳನ್ನು ನರೇಗದಡಿಯಲ್ಲಿ ಜಾರಿಗೆ ತರಬೇಕು. ಅಂದಾಗ ಮಾತ್ರ ಮಹಿಳೆಯರು ಈ ಯೋಜನೆಯ ಸಂಪೂರ್ಣ ಲಾಭವನ್ನು ಪಡೆಯುತ್ತಾರೆ. ಎಂಬಂತಹ ಹಲವು ಹಕ್ಕೊತ್ತಾಯಗಳನ್ನು ಹೊಂದಿದೆ. ಇವುಗಳ ಜೊತೆಗೆ ಈ ಯೋಜನೆಯನ್ನು ನಗರ ಪ್ರದೇಶಗಳಿಗೂ ವಿಸ್ತರಿಸಬೇಕು, ನೂರು ದಿನಗಳಿಂದ ಇನ್ನೂರು ದಿನಗಳವರೆಗೆ ಕೆಲಸದ ದಿನಗಳನ್ನು ಹೆಚ್ಚಿಸಬೇಕು, ಕೂಲಿಯಲ್ಲಿಯೂ ಸಹ ಹೆಚ್ಚಳವಾಗಬೇಕು ಇಂತಹ ಬೇಡಿಕೆಗಳನ್ನೂ ಸಹ ಸಂಘಟನೆಯು ಸರಕಾರದ ಮುಂದಿಟ್ಟಿದೆ. ಈ ಎಲ್ಲಾ ಅಂಶಗಳಿಗೆ ಸಂಬಂಧಿಸಿದಂತೆ ಜನವಾದಿ ಸಂಘಟನೆಯು ಗ್ರಾಮೀಣ ಭಾಗಗಳಲ್ಲಿ ಸಭೆಗಳನ್ನು ಕರೆಯುವುದರ ಮೂಲಕ ಜನರಲ್ಲಿ ಅರಿವನ್ನು ಮೂಡಿಸುತ್ತಲೇ ಬಂದಿದೆ ಎಂದು ಹೇಳಬಹುದಾಗಿದೆ.

ಹೀಗೆ ಜನವಾದಿ ಮಹಿಳಾ ಸಂಘಟನೆಯು ಉದ್ಯೋಗ ಖಾತರಿ ಯೋಜನೆಯಲ್ಲಿನ ಲೋಪದೋಷಗಳನ್ನು ಹುಡುಕುತ್ತಲೇ ಅವುಗಳನ್ನು ಸರಿಪಡಿಸುವಂತಹ ಕೆಲಸವನ್ನು ಮಾಡುತ್ತಿದೆ ಎಂಬುದು ಈ ಅಂಶಗಳಿಂದ ತಿಳಿದುಬರುತ್ತದೆ. ಆದರೆ ಕೆಲಸದ ಸಂದರ್ಭದಲ್ಲಿ ಬಳಸುವಂತಹ ಸಲಕರಣೆಗಳು ಬದಲಾಗಬೇಕು ಎಂಬುದು ಮತ್ತೆ ಲಿಂಗ ತಾರತಮ್ಯಕ್ಕೆ ಎಡೆಮಾಡಿಕೊಡುತ್ತದೆ. ಏಕೆಂದರೆ ವ್ಯವಸ್ಥೆಯಲ್ಲಿ ಪುರುಷನಷ್ಟೇ ಸಾಮರ್ಥ್ಯವನ್ನು ಹೊಂದಿದ ಮಹಿಳೆಯರೂ ಇದ್ದಾರೆ ಹಾಗೆಯೇ ಏನೂ ಕೆಲಸ ಮಾಡಲೂ ಸಾಧ್ಯವಿಲ್ಲದ ಪುರುಷರೂ ಇದ್ದಾರೆ. ಹಾಗೆಂದು ಮಹಿಳೆಯರೆಲ್ಲರೂ ಕೂಡ ಪುರುಷ ರೂಪಿತ ಸಲಕರಣೆಗಳನ್ನು ಬಳಸಲು ಸಾಧ್ಯವಾಗುವುದಿಲ್ಲ ಎಂದು ಸಾಮಾನ್ಯೀಕರಿಸಿ ಹೇಳುವುದು ತಪ್ಪಾಗುತ್ತದೆ. ಅವರವರ ಸಾಮರ್ಥ್ಯಕ್ಕೆ ತಕ್ಕಂತೆ ಕೆಲಸಗಳನ್ನು ಮಾಡುತ್ತಾರೆ. ಆದರೆ ಮೇಲಿನ ಕಾರಣವನ್ನು ಮುಂದುಮಾಡಿ ಕೆಲಸದ ಸ್ಥಳಗಳಲ್ಲಿ ಬಳಸುವಂತಹ ಸಲಕರಣೆಗಳನ್ನು ಮಹಿಳೆಯರಿಗೆ ಮತ್ತು ಪುರುಷರಿಗೆ ಪ್ರತ್ಯೇಕವಾಗಿ

ವಾಡಿದ್ದೇ ಆದರೆ ಆಗ ಮತ್ತೆ ಮಹಿಳೆಯರು ಅಸಮರ್ಥರು ಎಂಬುದನ್ನು ಸಾಬೀತುಪಡಿಸಿದಂತಾಗುತ್ತದೆ. ಹಾಗೆಯೇ ಸಾಮರ್ಥ್ಯ ಅಥವಾ ಯಾವುದೇ ಒಂದು ಸಲಕರಣೆಯನ್ನು ಬಳಸುವುದು ಎಂಬುದು ಅದು ನಿರಂತರವಾಗಿ ತಮ್ಮ ತಮ್ಮ ಅಭ್ಯಾಸ ಬಲದಿಂದ ರೂಢಿಗತಗೊಂಡಿರುತ್ತದೆ. ಇಲ್ಲಿಯವರೆಗೆ ಪುರುಷರು ಬಳಸುವಂತಹ ಸಲಕರಣೆಗಳನ್ನು ಮಹಿಳೆಯರಿಂದ ದೂರ ಇಡಲಾಗಿತ್ತು ಹಾಗಾಗಿ ಅವುಗಳನ್ನು ಬಳಸುವುದು ಅವರಿಗೆ ಸ್ವಲ್ಪ ಕಷ್ಟವಾಗಬಹುದೇ ವಿನಃ ಅದೇ ಸಲಕರಣೆಗಳನ್ನು ಬಳಸುವುದು ರೂಢಿಗತಗೊಂಡರೆ ಅದು ಯಾವುದೂ ಕಷ್ಟವಾಗುವುದಿಲ್ಲ. ಹಾಗಾಗಿ ಸಲಕರಣೆಯಲ್ಲಿ ಬದಲಾವಣೆಯನ್ನು ತರುವುದರ ಮೂಲಕ ಮತ್ತೆ ತಾರತಮ್ಯಕ್ಕೆ ಎಡೆಮಾಡಿಕೊಟ್ಟಂತಾಗುತ್ತದೆ. ಇದರ ಕುರಿತಂತೆ ಆಲೋಚಿಸುವ ಅಗತ್ಯತೆ ಇದೆ.

ಉದ್ಯೋಗ ಖಾತರಿ ಯೋಜನೆಯು ಸರಿಯಾದ ಕ್ರಮದಲ್ಲಿ ಜಾರಿಯಾಗುವಂತೆ ಮಾಡುವ ನಿಟ್ಟಿನಲ್ಲಿ 'ಕರ್ನಾಟಕ ರಾಜ್ಯ ರೈತ ಸಂಘ'ವೂ ಕೂಡ ಶ್ರಮಿಸುತ್ತಿದೆ. ಇದು ಉದ್ಯೋಗ ಖಾತರಿ ಯೋಜನೆಯ ಕುರಿತಂತೆ ಜನರಲ್ಲಿ ಅರಿವು ಮೂಡಿಸುವಂತಹ ಕೆಲಸಗಳನ್ನು ಮಾಡುತ್ತಿದೆ. ಈ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ರೈತ ಸಂಘವು ತನ್ನದೇ ಆದಂತಹ ಗುರಿ ಉದ್ದೇಶಗಳನ್ನು ಹೊಂದಿದೆ.

ಸಂಘಟನೆಯು ಹಲವು ವರ್ಷಗಳಿಂದ ತನ್ನ ಕಾರ್ಯಗಳನ್ನು ಮಾಡುತ್ತಾ ಬಂದಿದೆ. ಅನ್ಯಾಯದ ವಿರುದ್ಧ ಪ್ರತಿಭಟಿಸುತ್ತಿದೆ. ವ್ಯವಸ್ಥೆಯಲ್ಲಿ ನಡೆಯುವಂತಹ ಭ್ರಷ್ಟಾಚಾರದ ವಿರುದ್ಧ ಮಾತನಾಡೋಕೆ ಯಾರು ತಯಾರಿರುವುದಿಲ್ಲ. ಈ ಭ್ರಷ್ಟಾಚಾರದಲ್ಲಿ ಮುಖ್ಯವಾಗಿ ಅಧಿಕಾರಿಗಳದ್ದು ಲೋಪದೋಷವಿದೆ. ಜನಪ್ರತಿನಿಧಿಗಳದ್ದು ಲೋಪದೋಷವಿದೆ. ಜನರದ್ದು ಲೋಪದೋಷವಿದೆ. ಹಾಗಾಗಿ ಈ ಭ್ರಷ್ಟಾಚಾರವನ್ನು ತೊಡೆದು ಹಾಕಲು ಈ ಸಂಘಟನೆಯು ಮುಂದಾಗಿರುವುದು ಕಂಡುಬಂದಿದೆ. ಇನ್ನು ಈ ಯೋಜನೆ ಕುರಿತಂತೆ ಸಂಘಟನೆಯು ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸಿದೆ ಹಾಗೆಯೇ ಕಾರ್ಯರೂಪಕ್ಕೂ ತಂದಿದೆ. ಹೈದರಾಬಾದ್ ಕರ್ನಾಟಕ ವ್ಯಾಪ್ತಿಯಲ್ಲಿ ಜನರು ಸಾಮಾನ್ಯವಾಗಿ ಬರಗಾಲ ಬಂದಾಗ ಗುಳೆ ಹೋಗುವಂತಹದ್ದು, ಅತೀವೃಷ್ಟಿಯಾದಾಗ ಗುಳೆ ಹೋಗುವಂತಹ ಪ್ರಕ್ರಿಯೇ ನಿರಂತರವಾಗಿ ನಡೆದಿರುತ್ತದೆ. ಈ ಉದ್ಯೋಗ ಖಾತ್ರಿ ಯೋಜನೆ ಎನ್ನುವಂತಹದ್ದನ್ನು ಗುಳೆ ಹೋಗುವಂತಹ ಪ್ರಕ್ರಿಯೆಯನ್ನು ತಡೆಯಲಿಕ್ಕೆ ತಂದಂತಹ ಒಂದು ಯೋಜನೆಯಾಗಿದ್ದರಿಂದ. ರೈತ ಸಂಘಟನೆಯ ವತಿಯಿಂದ ಹಲವಾರು ಬಾರೀ ದುಡಿಯುವ ಕೈಗಳಿಗೆ ಕೆಲಸ ಕೊಡಿಸಲಾಗಿದೆ, ಉದ್ಯೋಗ ಸೃಷ್ಟಿ ಮಾಡಲಾಗಿದೆ ಹಾಗೆಯೇ ವಲಸೆ ಹೋಗೋದನ್ನು ತಡೆಯಲಾಗಿದೆ. ಆ ಒಂದು ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ರೂಪಿಸಿಕೊಂಡಿದ್ದಾರೆ.

ಈ ಯೋಜನೆ ಅಡಿಯಲ್ಲಿ ಕೂಲಿಕಾರರಿಗೆ ಜಾಬ್‌ಕಾರ್ಡ್ ಮಾಡಿಸುವುದು, ಪ್ರತ್ಯೇಕವಾಗಿ ಬ್ಯಾಂಕ್ ಖಾತೆ ತೆಗೆಸುವುದು ಹಾಗೂ ಕೂಲಿಕಾರರ ಖಾತೆಗೆ ಹಣ ಜಮಾ ಆಗುವಂತೆ ಮಾಡುವುದು. ಹೀಗೆ ಹಲವು ಕೆಲಸಗಳನ್ನು ಮಾಡುತ್ತಿದೆ.

ಈ ಯೋಜನೆ ತಳಮಟ್ಟದಿಂದ ಸುಧಾರಣೆ ಆಗಬೇಕೆಂಬ ನಿಟ್ಟಿನಲ್ಲಿ ಈ ಸಂಘಟನೆಯು ಕೆಲವು ಯೋಜನೆಗಳನ್ನು ರೂಪಿಸಿದೆ. ಗ್ರಾಮ ಪಂಚಾಯ್ತಿಯಿಂದ ಹಿಡಿದು ಆಡಳಿತ ಯಂತ್ರದಲ್ಲಿ ಬದಲಾವಣೆ ಆದ್ರೆ ಈ ಯೋಜನೆ ಯಶಸ್ವಿ ಆಗೋದಕ್ಕೆ ಸಾಧ್ಯವಾಗುತ್ತೆ. ಅಂದರೆ ಪ್ರತಿಯೊಂದು ಹಳ್ಳಿಯಲ್ಲಿ ಜನಾಂದೋಲನ ಆಗ್ಬೇಕು. ಜನರಿಗೆ ಈ ಯೋಜನೆಯ ಬಗ್ಗೆ ಸ್ಪಷ್ಟ ಕಲ್ಪನೆ ಬರಬೇಕು. ಇವತ್ತು ಕೃಷಿಹೊಂಡ ಮಾಡುವುದರಿಂದ ಬರೀ ಆ ಹೊಲದ ರೈತರಿಗೆ ಅಷ್ಟೇ ಅಲ್ಲ, ಇಡೀ ಸಮಾಜಕ್ಕೆ ಉಪಯೋಗ ಆಗುತ್ತದೆ. ಅಂತರ್ಜಲ ಮಟ್ಟ ಹೆಚ್ಚಾಗುತ್ತದೆ ಅನ್ನುವಂತ ತಿಳುವಳಿಕೆ ಪ್ರತಿಯೊಬ್ಬ ಜನರಲ್ಲಿ ಬರಬೇಕು. ಈಗ ಹೆಚ್ಚುತ್ತಿರುವ ಜನಸಂಖ್ಯೆಗೆ ಮುಂದಿನ ದಿನಮಾನದಲ್ಲಿ ಸರಕಾರಕ್ಕೆ ನೀರು ಕೊಡುವುದಕ್ಕೆ ಆಗುವುದಿಲ್ಲ. ಭೂಮಿಯ ಒಳಗಡೆ ನೀರು ಇಲ್ಲದಿದ್ದರೆ ಮಳೆಯಿಂದ ಬಿದ್ದ ನೀರು ಹರಿದುಕೊಂಡು ಹೋಗಿ ಸಮುದ್ರ ಸೇರುತ್ತದೆ. ಹಾಗೆ ಆಗುವುದರಿಂದ ಮುಂದಿನ ಮನುಕುಲದ ಗತಿಯೇನು ಎನ್ನುವಂತ ದೂರದೃಷ್ಟಿ ಯಾರಿಗೂ ಇಲ್ಲದಂತಾಗಿದೆ. ಹಾಗಾಗಿ ಪ್ರತಿಯೊಬ್ಬ ಪಂಚಾಯ್ತಿ ಸದಸ್ಯರಿಗೆ ಈ ವಿಷಯದಲ್ಲಿ ತರಬೇತಿಯ ಅವಶ್ಯಕತೆ ಇದೆ ಎಂಬುದನ್ನು ತಿಳಿಸುತ್ತದೆ.

ಜನರಿಗೆ ಈ ಯೋಜನೆಯಲ್ಲಿ ಕೆಲಸ ತೆಗೆದುಕೊಳ್ಳುವುದು ಪ್ರತಿಯೊಬ್ಬರ ಹಕ್ಕು. ಹಾಗಾಗಿ ಈ ಯೋಜನೆಯಲ್ಲಿ ದುಡಿದ ಕೂಲಿ ಪ್ರತಿಯೊಬ್ಬರೂ ಪಡೆಯುವಂತಾಗಬೇಕು. ಅಂದರೆ ದುಡಿಯುವಂತ ಪ್ರತಿಯೊಬ್ಬ ಕಾರ್ಮಿಕರಿಗೆ ಮತ್ತು ರೈತಾಪಿ ವರ್ಗಕ್ಕೆ ತಮ್ಮ ಹಕ್ಕಿನ ಬಗ್ಗೆ ಪರಿಕಲ್ಪನೆ ಬರಬೇಕು ಅಂದಾಗ ಮಾತ್ರ ಈ ಯೋಜನೆ ಯಶಸ್ವಿಯಾಗುತ್ತದೆ. ಅಂದರೆ ಇದರ ಉದ್ದೇಶ ಇಷ್ಟೇ ಈ ಯೋಜನೆ ಯಾರಿಗಾಗಿ ಜಾರಿಗೆ ಬಂದಿದೆ. ಯಾಕಾಗಿ ಜಾರಿಗೆ ಬಂದಿದೆ. ಯಾವ ಉದ್ದೇಶಕ್ಕಾಗಿ ಜಾರಿಗೆ ಬಂದಿದೆ ಎನ್ನುವಂತ ತಿಳುವಳಿಕೆ ಇಲ್ಲದಿದ್ದರಿಂದ ಪ್ರಸ್ತುತ ಅವ್ಯವಹಾರಗಳು ಹೆಚ್ಚಾಗುತ್ತಿವೆ. ಆದ್ದರಿಂದ ಇದರ ಬಗ್ಗೆ ನಿಜವಾದ ಅರಿವು ಮೂಡಿದಾಗ ಅವರು ಬದಲಾವಣೆ ಆಗಬಹುದು ಎಂಬುದು ಈ ಸಂಘಟನೆಯ ಆಶಯವಾಗಿದೆ.

ಈ ಸಂಘಟನೆಯು ಯೋಜನೆಯಲ್ಲಿ ಹಲವಾರು ಬದಲಾವಣೆಗಳು ಆಗಬೇಕಿದೆ ಎಂಬಂತಹ ಹಕ್ಕೊತ್ತಾಯಗಳನ್ನು ಸರಕಾರದ ಮುಂದಿಟ್ಟಿದೆ. ಮುಖ್ಯವಾಗಿ ರೈತ ಎರಡು ಎತ್ತು ಕಟ್ಟಿಕೊಂಡು ಗಳೇವು ಬಾಡಿಗೆ ಹೊಡೆಸುತ್ತಾನೆ. ಅವರಿಗೆ ಮುನ್ನೂರಿಂದ ಐದ್ನೂರು ರೂಪಾಯಿ ಬಾಡಿಗೆ ಕೊಡಲಾಗುತ್ತದೆ. ಅಂತವರಿಗೆ ಉತ್ತೇಜನ ಮಾಡಿಕೊಡಲಿಕ್ಕೆ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಅವಕಾಶ ಮಾಡಿಕೊಡಬೇಕು. ಹಂಗಾದಾಗ ಸ್ವಲ್ಪ ಮಟ್ಟಿಗೆ ಉಪಯೋಗ ಆಗುತ್ತದೆ. ಅಂದರೆ

ಈ ಸಂಘಟನೆಯ ಪ್ರಕಾರ ಬಾಡಿಗೆ ಗಳೇವು ತೆಗೆದುಕೊಂಡರೆ ಇದರ ಬಾಡಿಗೆ ಐದ್ನೂರು ರೂಪಾಯಿ ಕೊಡಬೇಕಾಗುತ್ತದೆ. ಇದರಲ್ಲಿ ಮುನ್ನೂರು ರೂಪಾಯಿ ರೈತರಿಂದ ಕೊಡಿಸಬೇಕು. ಇನ್ನೂ ಮುನ್ನೂರು ರೂಪಾಯಿ ಸರ್ಕಾರ ಕೊಡಬೇಕು.ಇಲ್ಲಿ ಸರ್ಕಾರ ಅರ್ಧ ಕೂಲಿ ಕೊಟ್ಟ ಹಾಗೆ ಆಗುತ್ತದೆ. ಹೀಗೆ ಮಾಡುವುದರಿಂದ ಎರಡು ಎತ್ತು ಕಟ್ಟಿಕೊಂಡು ಜೀವನ ಮಾಡವಂತಹ ರೈತರಿಗೆ ನೂರು ರೂಪಾಯಿ ಜಾಸ್ತಿ ಕೂಲಿ ಸಿಕ್ಕ ಹಾಗೆ ಆಗುತ್ತದೆ. ಇದರಿಂದಾಗಿ ರೈತರಿಗೂ ಉತ್ತೇಜನ ನೀಡಿದ ಹಾಗೆ ಆಗುತ್ತದೆ. ಅದೇ ರೀತಿ ಕಳೇ ತೆಗೆಯುವುದಕ್ಕಾಗಲಿ, ಹೊಡ್ಡು ಹಾಕುವುದಕ್ಕಾಗಲಿ, ಹತ್ತಿ ಬಿಡುಸುವುದಕ್ಕಾಗಲಿ ಅಥವಾ ಹೊಲಗಳಿಗೆ ಔಷಧ ಹೊಡೆಯುವುದಕ್ಕಾಗಲಿ ಈ ರೀತಿಯ ಕೆಲಸಗಳಿಗೆ ಈ ಯೋಜನೆಯ ಹಣವನ್ನು ವಿನಿಯೋಗ ಮಾಡಿಕೊಂಡರೆ ಸರಿಯಾಗಿ ಅನುಷ್ಟಾನ ಆಗಬಹುದು. ಮತ್ತು ಗುಳೆ ಹೋಗುವುದನ್ನು ತಡೆಯಬಹುದು ಎಂಬುದು ರೈತ ಸಂಘಟನೆಯವರ ಬೇಡಿಕೆಯಾಗಿದೆ. ಇಲ್ಲಿ ಮುಖ್ಯವಾಗಿ ಉದ್ಯೋಗ ಖಾತರಿ ಯೋಜನೆಯಿಂದ ರೈತರು ಲಾಭ ಪಡೆಯುತ್ತಾರೆ ಸರಿ. ಆದರೆ ಯಾವ ರೈತರಿಗೆ ಈ ಬಗೆಯ ಸೌಲಭ್ಯಗಳನ್ನು ಒದಗಿಸಬಹುದು ಎಂಬುದು ಅಸ್ಪಷ್ಟವಾಗಿದೆ. ಹಾಗೆಯೇ ಕೃಷಿಭೂಮಿ ಇಲ್ಲದವರಿಗೆ ಇಲ್ಲಿ ಪ್ರವೇಶವೇ ಇಲ್ಲವಾಗಿದೆ. ಹಾಗಾಗಿ ಇವರು ಹೇಳುವುದಕ್ಕೆ ಹಲವಾರು ಮಿತಿಗಳಿವೆ ಆದರೂ ಸಹ ಕರ್ನಾಟಕ ರಾಜ್ಯ ರೈತ ಸಂಘವು ಎಲ್ಲಾ ಮಿತಿಗಳ ನಡುವೆಯೇ ರಾಜ್ಯಾದ್ಯಂತ ತನ್ನ ಕಾರ್ಯವನ್ನು ಮಾಡುತ್ತಿದೆ.

ಉದ್ಯೋಗ ಖಾತರಿ ಯೋಜನೆಯು ಸರಿಯಾದ ಕ್ರಮದಲ್ಲಿ ಅನುಷ್ಠಾನಗೊಳ್ಳಲು ಮತ್ತು ಆ ಮೂಲಕ ಕೂಲಿಕಾರರಿಗೆ ಸರಿಯಾದ ರೀತಿಯ ಕೂಲಿ ದೊರೆಯುವಂತೆ ಮಾಡಲು 'ಕರ್ನಾಟಕ ಪ್ರಾಂತ ಕೂಲಿಕಾರರ ಸಂಘ'ವೂ ಸಹ ಪ್ರಯತ್ನಿಸುತ್ತಿದೆ. ಈ ಸಂಘದ ರಾಯಚೂರು ಜಿಲ್ಲಾಧ್ಯಕ್ಷರಾದಂತಹ ಕರಿಯಪ್ಪ ಹಚ್ಚೊಳ್ಳಿ ಇವರನ್ನು ಭೇಟಿಯಾಗಿ ಮಾತನಾಡಿಸಿದಾಗ ಇವರು ತಮ್ಮ ಅಭಿಪ್ರಾಯವನ್ನು ಈ ರೀತಿ ವ್ಯಕ್ತಪಡಿದರು.

ಉದ್ಯೋಗ ಖಾತ್ರಿ ಯೋಜನೆಗೆ ಸಂಬಂಧಿಸಿದಂತೆ ರಾಯಚೂರು ಮತ್ತು ದೇವದುರ್ಗ ತಾಲೂಕಿನಲ್ಲಿ ಸಂಘಟನೆವತಿಯಿಂದ ನಮೂನೆ ೧ರಲ್ಲಿ ಜಾಬ್‌ಕಾರ್ಡ್ ಮಾಡಿಸುವುದು, ನಮೂನೆ ೬ರಲ್ಲಿ ಕೆಲಸವನ್ನು ಕೇಳುವುದು ಆ ನಂತರ ನಮೂನೆ ೮ರಲ್ಲಿ ಕೆಲಸಕ್ಕೆ ಕರೆಯುವುದು ಮತ್ತು ನಿರುದ್ಯೋಗ ಭತ್ಯೆಗಾಗಿ ಅರ್ಜಿ ಸಲ್ಲಿಸುವುದು ಹೀಗೆ ಈ ಎಲ್ಲಾ ಹಂತಗಳಲ್ಲಿಯೂ ಈ ಸಂಘಟನೆ ಉತ್ತಮ ರೀತಿಯಲ್ಲಿ ಕೆಲಸ ಮಾಡುತ್ತಿದೆ. ಹೀಗೆ ಮಾಡುತ್ತಿರುವುದರಿಂದ ರಾಯಚೂರು ಮತ್ತು ದೇವದುರ್ಗ ತಾಲೂಕಿನ ಕೆಲವು ಪಂಚಾಯ್ತಿಗಳಲ್ಲಿ ಉದ್ಯೋಗ ಖಾತರಿ ಯೋಜನೆಯ ಕೆಲಸಗಳು ಚೆನ್ನಾಗಿ ನಡೆಯುತ್ತಿವೆ. ಈ ಸಂಘಟನೆಯು ಹಲವು ಗ್ರಾಮ ಪಂಚಾಯತಿಗಳಲ್ಲಿ ಕ್ಷೇತ್ರ ಕಾರ್ಯವನ್ನು ಕೈಗೊಂಡು ಯೋಜನೆ ಸರಿಯಾಗಿ

ನಡೆಯದಿರುವುದಕ್ಕೆ ಹಲವು ಕಾರಣಗಳನ್ನು ಗುರುತಿಸಿದೆ. ಮುಖ್ಯವಾಗಿ ಗ್ರಾಮೀಣ ಭಾಗಗಳಲ್ಲಿ ಜನ ಪ್ರತಿನಿಧಿಗಳ ಇಚ್ಛಾಶಕ್ತಿ ಎನ್ನುವುದಕ್ಕಿಂತ ಭೂಮಾಲೀಕರ(ಲ್ಯಾಂಡ್ ಲಾರ್ಡ್ ಫೋರ್ಸ್) ವಿರೋಧ ಹೆಚ್ಚಾಗಿ ಕಂಡುಬರುತ್ತದೆ. ಏಕೆಂದರೆ ಯಾವುದೇ ಪಂಚಾಯ್ತಿಗೆ ಹೋದರೂ ಕೂಡ ಆ ಪಂಚಾಯ್ತಿಯ ಅಧ್ಯಕ್ಷರು ಮತ್ತು ಸದಸ್ಯರುಗಳು ಭೂ ಮಾಲೀಕರೇ ಆಗಿರುತ್ತಾರೆ. ಆದ್ದರಿಂದ ಉದ್ಯೋಗ ಖಾತರಿ ಯೋಜನೆಯ ಕೂಲಿ ಕೆಲಸವನ್ನು ದುಡಿಯುವ ವರ್ಗಕ್ಕೆ ಸರಳವಾಗಿ ಕೊಟ್ಟರೆ ಯಾರು ಕೂಡ ತಮ್ಮ ಜಮೀನು ಕೆಲಸಕ್ಕೆ ಬರಲು ಇಷ್ಟ ಪಡುವುದಿಲ್ಲ. ಎಂಬ ಕಾರಣಕ್ಕೆ ಮತ್ತು ಅದೇ ಭೂಮಾಲೀಕರ ಹೊಲದ ಕೆಲಸಕ್ಕೆ ಹೋದರೆ ಮಹಿಳೆಯರಿಗೆ ಕೇವಲ ಅರವತ್ತರಿಂದ ಎಪ್ಪತ್ತು ರೂಪಾಯಿ ಕೂಲಿ ಇರುತ್ತದೆ. ಹಾಗಾಗಿ ಯಾರು ಕೂಡ ತಮ್ಮ ಜಮೀನು ಕೆಲಸಕ್ಕೆ ಬರೋದಿಲ್ಲ ಎನ್ನುವಂತಹ ಹುನ್ನಾರದಿಂದಾಗಿ ಈ ಯೋಜನೆಯ ಕೆಲಸವನ್ನು ಜನರಿಗೆ ಕೊಡದೆ ಯಂತ್ರಗಳಿಂದ ಮಾಡಿಸಿ ದುಡಿಯುವ ವರ್ಗವನ್ನು ವಂಚಿಸುವಂತಹ ಕೆಲಸ ಮಾಡುತ್ತಿದ್ದಾರೆ.

ಹಾಗೆಯೇ ಸರಕಾರದ ಅಧೀನದಲ್ಲಿ ಕೆಲಸ ಮಾಡುವಂತಹ ಅಧಿಕಾರಿಗಳು ಈ ಒಂದು ಕಾಯಿದೆಯನ್ನು ಭೂಮಾಲೀಕ ವರ್ಗದ ಜೊತೆ ಶಾಮೀಲಾಗಿ ಲೂಟಿ ಮಾಡುವಂತಹ ಕೆಲಸ ಮಾಡುತ್ತಿದ್ದಾರೆ. ಸಂವಿಧಾನ ಬದ್ಧವಾಗಿ ಜಾರಿಗೊಂಡಂತಹ ಕಾಯಿದೆಯನ್ನು ಪರಿಪಾಲನೆ ಮಾಡುವವರೆ ಅದರ ಮೂಲ ಉದ್ದೇಶವನ್ನು ಉಲ್ಲಂಘಿಸಿರುವುದರಿಂದಾಗಿ ಈ ಯೋಜನೆ ವಿಫಲವಾಗುತ್ತಿದೆ. ಆದರೆ ಯೋಜನೆಯನ್ನು ಕಾಯಿದೆಯಾಗಿ ಜಾರಿಗೆ ತಂದಿರುವುದರಿಂದ ಯಾವುದೇ ಸರಕಾರ ಅಧಿಕಾರಕ್ಕೆ ಬಂದರೂ ಕೂಡ ಈ ಕಾಯಿದೆಯನ್ನು ಇಂಪ್ಲಿಮೆಂಟೇಶನ್ ಮಾಡಲೇಬೇಕು ಎನ್ನುವುದು ಕೂಡ ಅಧಿಕಾರಿ ವರ್ಗಕ್ಕೆ ಗೊತ್ತಾಗಬೇಕು ಎನ್ನುವುದು ಸಂಘಟನೆಯವಾದವಾಗಿದೆ.

ಸಂಘಟನೆಯು ಮುಖ್ಯವಾಗಿ ಜನ ಜಾಗೃತರಾಗಬೇಕು ಮತ್ತು ಪ್ರಶ್ನೆ ಮಾಡುವ ಮನೋಭಾವನೆ ಪ್ರತಿಯೊಬ್ಬರಲ್ಲಿಯೂ ಬರಬೇಕು ಅಂದಾಗ ಮಾತ್ರ ಸಾದ್ಯವಾಗುತ್ತದೆ ಎಂದು ಹೇಳುತ್ತದೆ. ಈಗಾಗಲೇ ಜಿಲ್ಲೆಯಾದ್ಯಂತ ಸಿಂಧನೂರು, ದೇವದುರ್ಗ, ಲಿಂಗಸೂರು, ಮಾನ್ವಿ ಮತ್ತು ರಾಯಚೂರನ್ನು ಒಳಗೊಂಡಂತೆ ಎಲ್ಲಾ ಕಡೆ ಸಂಘಟನೆಯ ವತಿಯಿಂದ ಹಲವಾರು ಕಾರ್ಯಗಾರಗಳನ್ನು ಹಮ್ಮಿಕೊಂಡು ಕಾಯಿದೆಯಲ್ಲಿ ಇರುವಂತ ಪ್ರತಿಯೊಂದು ಸೌಲಭ್ಯವನ್ನು ಕುರಿತು ಕೂಲಿ ಕಾರ್ಮಿಕರಿಗೆ ಜಾಗೃತಿ ಮೂಡಿಸುತ್ತಿದೆ. ಮುಖ್ಯವಾಗಿ ಅಧಿಕಾರಿಗಳ ಮಟ್ಟದಲ್ಲಿ ನಡೆಯುವಂತಹ ಸಭೆ ಸಮಾರಂಭಗಳಿಗೆ ಜನರ ಮಧ್ಯೆ ಕೆಲಸ ಮಾಡುವಂತಹ ಸಂಘಟನೆಗಳನ್ನು ಆಹ್ವಾನಿಸುವುದಿಲ್ಲ. ಹಾಗಾಗಿ ಈ ಸಂಘಟನೆಯ ಪ್ರಕಾರ ಒಂದು ವೇಳೆ ಆಹ್ವಾನಿಸಿದ್ದೆಯಾದರೆ ಗ್ರಾಮೀಣ ಪ್ರದೇಶದ ಕೃಷಿ ಕೂಲಿಕಾರರ ನೈಜವಾದ ವಾಸ್ತವ ಸ್ಥಿತಿಯನ್ನು ಅಧಿಕಾರಿಗಳಿಗೆ ಮನದಟ್ಟು ಮಾಡಿ ಈ ಯೋಜನೆಯ ಫಲ ಕೂಲಿಕಾರರಿಗೆ ಸಿಗಬೇಕಾದರೆ ಏನು ಮಾಡಬೇಕು?

ಮತ್ತು ಜನಪ್ರತಿನಿಧಿಗಳ, ಮದ್ಯವರ್ತಿಗಳ, ಭೂಮಾಲೀಕರ ಪಾಲಾಗದಂತೆ ತಡೆಯಬೇಕೆಂದರೆ ಯಾವ ರೀತಿಯ ಕ್ರಮ ಕೈಗೊಳ್ಳಬೇಕು? ಹಾಗೆಯೇ ಕೆಲಸದ ಸ್ಥಳದಲ್ಲಿ ಕೃಷಿ ಕೂಲಿಕಾರರಿಗೆ ಇರುವ ಸೌಲಭ್ಯಗಳು ಸಮರ್ಥವಾಗಿ ಜಾರಿಯಾಗಬೇಕಾದರೆ ಏನು ಮಾಡಬೇಕೆಂಬುದರ ಬಗ್ಗೆ ಸಲಹೆ-ಸೂಚನೆ ಕೊಡಲಾಗುತ್ತದೆ ಎಂಬುದು ಈ ಸಂಘಟನೆಯವಾದವಾಗಿದೆ.

ಇನ್ನೊಂದು ಮುಖ್ಯವಾದಂತ ವಿಷಯ ಹೇಳಬೇಕೆಂದರೆ ಈ ಯೋಜನೆಯಲ್ಲಿ ಅತೀ ಹೆಚ್ಚು ಭಾಗವಹಿಸುವಂತಹವರು ಮಹಿಳೆಯರಾಗಿದ್ದಾರೆ. ಇವರಿಗೆ ಹಲವಾರು ಬಗೆಯ ಕಿರುಕುಳಗಳನ್ನು ಕೊಡಲಾಗುತ್ತಿದೆ ಎಂಬ ಅಂಶವನ್ನು ಬಯಲಿಗೆಳೆದಿದೆ. ಈ ಸಂಘಟನೆಯು ಗುರುತಿಸಿರುವ ಹಾಗೆ ಮಹಿಳೆಯರನ್ನು ಈ ಯೋಜನೆಯಿಂದ ದೂರ ಇಡುವ ಸಲುವಾಗಿ ದೂರದ ಪ್ರದೇಶದಲ್ಲಿ ಕೆಲಸ ಕೊಡುವುದು. ತೀರ ಬಿಗುವು(ಗಟ್ಟಿ) ಇರತಕ್ಕಂತ ಗುಡ್ಡಗಾಡು ಪ್ರದೇಶದಲ್ಲಿ ಕಾಮಗಾರಿ ಅನುಷ್ಠಾನಗೊಳಿಸಿ ನೆಲ ತೋಡೋದಕ್ಕೆ ಹೇಳುವುದು. ಆ ನಂತರ ಭೂಮಿ ಕೆಲಸವನ್ನು ಕಡಿಮೆ ಮಾಡಿ ಮಟೇರಿಯಲ್ಸ್ ಬಳಸಿ ಮಾಡುವಂತಹ ಕಟ್ಟಡ ಕೆಲಸಗಳಿಗೆ ಆದ್ಯತೆ ಕೊಡುವುದು ಇವುಗಳ ಕಾರಣವಾಗಿ ಮಹಿಳೆಯರ ಪಾಲ್ಗೊಳ್ಳುವಿಕೆ ಕಡಿಮೆಯಾಗುತ್ತಿದೆ. ಹಾಗಾಗಿ ಈ ಸಂಘಟನೆಯು ಕೆಲವು ಉದ್ದೇಶಗಳನ್ನು ಸರಕಾರದ ಮುಂದಿಡಲು ಬದ್ಧವಾಗಿದೆ. ಅವುಗಳೆಂದರೆ ಈ ನಾಡಿನ ನೆಲ, ಜಲ ಸಂರಕ್ಷಣೆ ಮಾಡುವುದಕ್ಕೆ ಬಂದಂತಹ ಯೋಜನೆಯನ್ನು ಎಲ್ಲೋ ಒಂದು ಕಡೆ ದಾರಿ ತಪ್ಪಿಸುವಂತಹ ಕೆಲಸ ಮಾಡಲಾಗುತ್ತಿದೆ. ಅಭಿವೃದ್ಧಿಯ ದೃಷ್ಟಿಯಿಂದ ಕಟ್ಟಡ ಕೆಲಸಗಳಿಗೆ ಈ ಯೋಜನೆಯನ್ನು ಬಳಸಿಕೊಳ್ಳಬಹುದು ಆದರೆ ಮುಖ್ಯವಾಗಿ ಇದು ನೆಲ ಮತ್ತು ಜಲ ಸಂರಕ್ಷಣೆಯ ಕೆಲಸಕ್ಕೆ ಪ್ರಥಮ ಆದ್ಯತೆಯನ್ನು ನೀಡುವುದಾಗಬೇಕು. ಹಾಗೆಯೇ ಅಧಿಕಾರಿಗಳು ಅರಣ್ಯೀಕರಣ ಮಾಡಬೇಕು ಎಂದು ಹೇಳಿ ಗುಡ್ಡಗಾಡು ಪ್ರದೇಶದಲ್ಲಿ ಗಿಡಗಳನ್ನು ನೆಡುವುದಕ್ಕೆ ಮೇಜರ್‌ಮೆಂಟ್ ಮಾಡುತ್ತಾರೆ. ಗುಡ್ಡಗಾಡು ಪ್ರದೇಶದಲ್ಲಿ ಮಹಿಳೆಯರು ನೆಲವನ್ನು ಅಗೆದು ಗುಂಡಿಗಳನ್ನು ತೋಡುವುದಕ್ಕೆ ಆಗುತ್ತದೆಯೇ ಎನ್ನುವಂತಹದ್ದು ಕೂಡ ಸರಕಾರ ಗಮನಿಸಬೇಕು. ಅದರ ಜೊತೆಗೆ ಕೆಲಸಕ್ಕೆ ಬಳಸುವ ಪರಿಕರಗಳು ಕೂಡ ಮಹಿಳೆಯರಿಗೆ ಅನುಕೂಲವಾಗುವ ರೀತಿಯಲ್ಲಿ ಹೊಸದಾಗಿ ನಿರ್ಮಾಣ ಮಾಡಬೇಕು ಮತ್ತು ಮಹಿಳೆಯರು ಗುಡಿಕೈಗಾರಿಕೆಗಳಲ್ಲಿ ತಯಾರು ಮಾಡುವ ಗೃಹೋಪಯೋಗಿ ವಸ್ತುಗಳಿಗೆ ಮಾರುಕಟ್ಟೆ ವ್ಯವಸ್ಥೆಯನ್ನು ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಕಲ್ಪಿಸಿ ಮಹಿಳಾ ಸಬಲೀಕರಣಕ್ಕೆ ನಾಂದಿ ಹಾಡಬೇಕು ಎಂಬಂತಹ ಅಂಶಗಳ ಬಗ್ಗೆ ಸರಕಾರದ ಗಮನಕ್ಕೆ ತರುವಂತಹ ಕೆಲಸಗಳನ್ನು ಮಾಡುತ್ತಿದೆ.

ಒಟ್ಟಾರೆಯಾಗಿ ಈ ಯೋಜನೆ ಸಮರ್ಥವಾಗಿ ನಡಿಯಬೇಕಾದರೆ ಪ್ರತಿ ಜಿಲ್ಲೆಯಲ್ಲಿ ಮತ್ತು ಪ್ರತಿಯೊಂದು ತಾಲೂಕಿನಲ್ಲಿ ಪ್ರತ್ಯೇಕವಾದ ಕಛೇರಿ ಪ್ರಾರಂಭವಾಗಬೇಕು. ಅದಕ್ಕಾಗಿ ಪ್ರತ್ಯೇಕ ಸಿಬ್ಬಂದಿಗಳನ್ನು ನೇಮಿಸಬೇಕು. ಪ್ರತ್ಯೇಕ ಅಧಿಕಾರಿಯನ್ನು ನೇಮಕ ಮಾಡಬೇಕು.

ತಕ್ಷಣಕ್ಕೆ ಕೆಲಸದ ಅರ್ಜಿಗಳು ವಿಲೇವಾರಿಯಾಗಬೇಕು. ಅಂದಾಗ ಮಾತ್ರ ಈ ಯೋಜನೆ ಸಮರ್ಥವಾಗಿ ಜಾರಿಯಾಗುತ್ತದೆ ಎಂಬುದು ಸಂಘಟನೆಯ ಮುಖ್ಯ ಉದ್ದೇಶವಾಗಿದೆ. ಇವರೂ ಸಹ ಜನವಾದಿ ಮಹಿಳಾ ಸಂಘಟನೆಯಂತೆ ಕೆಲಸದ ಸ್ಥಳದಲ್ಲಿ ಬಳಸುವಂತಹ ಪರಿಕರಗಳಲ್ಲಿ ಬದಲಾವಣೆಯನ್ನು ಬಯಸುತ್ತಿದ್ದಾರೆ. ಆದರೆ ಇದರ ಹಿಂದೆ ತಾರತಮ್ಯದ ಅಂಶ ಕೂಡಿದೆ ಎಂಬುದು ಅವರಿಗೆ ತಿಳಿದಿಲ್ಲ ಎಂಬುದು ಕಂಡುಬರುತ್ತಿದೆ.

ಇವು ಸಂಘಟನೆಗಳ ವಿಷಯವಾದರೆ ಇನ್ನು ಸ್ವಯಂ ಸೇವಾ ಸಂಸ್ಥೆಗಳ ವಿಷಯವೇ ಬೇರೆಯಾಗಿದೆ. ಅವುಗಳೂ ಸಹ ತಮ್ಮ ಸಂಸ್ಥೆಗಳ ಅಡಿಯಲ್ಲಿ ಪ್ರತ್ಯೇಕವಾದಂತಹ ಸಂಘಗಳನ್ನು ರಚಿಸಿಕೊಂಡು ಕೂಲಿಕಾರರಿಗೆ ಸಹಕಾರಿಯಾಗಿರುವುದು ಕಂಡುಬರುತ್ತಿದೆ. ಈ ನಿಟ್ಟಿನಲ್ಲಿ ರಾಯಚೂರಿನ ಪ್ರೇರಣಾ ಸಂಸ್ಥೆಯು ತನ್ನ ಅಡಿಯಲ್ಲಿ 'ಗ್ರಾಮೀಣ ಕೂಲಿ ಕಾರ್ಮಿಕರ ಸಂಘಟನೆ'ಯನ್ನು ರಚಿಸಿಕೊಂಡಿದ್ದು ಅದರ ಮೂಲಕ ಉದ್ಯೋಗ ಖಾತರಿ ಯೋಜನೆಯ ಸರಿಯಾದ ಅನುಷ್ಠಾನಕ್ಕೆ ಪ್ರಯತ್ನಿಸುತ್ತಿದೆ. ಈ ಸಂಘಟನೆಯ ಮೂಲ ಉದ್ದೇಶವೆಂದರೆ ಶೋಷಣೆ ರಹಿತ ಸಮತಾ ಸಮಾಜ ನಿರ್ಮಾಣ ಮಾಡುವುದು. ಕೂಲಿಕಾರ್ಮಿಕರಿಗೆ ಕನಿಷ್ಠ ವೇತನ ಜಾರಿ ಮಾಡಿಸುವುದು. ಗ್ರಾಮೀಣ ಕೂಲಿ ಕಾರ್ಮಿಕರ ಸಂಘಟನೆಗೆ ಸೇರಿದ ಪ್ರತಿಯೊಂದು ಕುಟುಂಬಕ್ಕೆ ಈ ಉದ್ಯೋಗ ಖಾತ್ರಿ ಯೋಜನೆಯಡಿ ನೂರು ದಿನಗಳ ಕೂಲಿ ಕೆಲಸವನ್ನು ಕೊಡಿಸುವುದು ಮತ್ತು ಪ್ರತಿಯೊಂದು ಹಳ್ಳಿಯಲ್ಲಿ ಕೂಲಿಕಾರರ ಗುಂಪುಗಳ ರಚನೆ ಮಾಡುವುದು ಸಂಸ್ಥೆಯ ಉದ್ದೇಶವಾಗಿದೆ.

ಮೊದಲಿಗೆ ಈ ಸಂಸ್ಥೆಯು ಪ್ರತಿಯೊಂದು ಗ್ರಾಮಕ್ಕೆ ಹೋಗಿ ಅಲ್ಲಿನ ಮಹಿಳೆಯರಿಗೆ ಗ್ರಾಮೀಣ ಕೂಲಿಕಾರ್ಮಿಕರ ಸಂಘಟನೆಯ ಬಗ್ಗೆ ಮತ್ತು ಉದ್ಯೋಗ ಖಾತ್ರಿ ಯೋಜನೆಯ ಬಗ್ಗೆ ಸಂಪೂರ್ಣವಾದ ಮಾಹಿತಿಯನ್ನು ನೀಡುತ್ತದೆ. ಆ ನಂತರ ಸಂಘಟನೆ ಸೇರುವುದರಿಂದ ಏನು ಪ್ರಯೋಜನ ಮತ್ತು ಸೇರದೆ ಇರುವುದರಿಂದ ಏನು ನಷ್ಟವಾಗುತ್ತದೆ ಎನ್ನುವಂತಹ ಸಂಪೂರ್ಣವಾದಂತ ಅಂಶಗಳ ಕುರಿತಾಗಿ ಜನರಲ್ಲಿ ಅರಿವು ಮೂಡಿಸುವಂತಹ ಕೆಲಸ ಮಾಡುತ್ತದೆ. ಸಂಘಟನೆ ಸೇರಲಿಕ್ಕೆ ಸದಸ್ಯತ್ವ ಶುಲ್ಕವೆಂದು ಹತ್ತು ರೂಪಾಯಿ ಪಡೆಯುತ್ತಾರೆ. ಹಾಗೆಯೇ ಸಂಘಟನೆಯನ್ನು ಸೇರಿದ ಪ್ರತಿಯೊಂದು ಕುಟುಂಬದಿಂದ ಈ ಯೋಜನೆಯ ಒಂದು ದಿನದ ಕೂಲಿಯನ್ನು ವಾರ್ಷಿಕ ಶುಲ್ಕವಾಗಿ ಸಂಘಟನೆಗೆ ಕಟ್ಟಬೇಕಾಗುತ್ತದೆ. ಪ್ರತಿಯೊಬ್ಬರು ಕಟ್ಟಿದ ಸದಸ್ಯತ್ವ ಶುಲ್ಕ ಮತ್ತು ವಾರ್ಷಿಕ ಶುಲ್ಕ ತಾಲೂಕು ಕಾರ್ಯಕಾರಿ ಸಮಿತಿ ಅಕೌಂಟಿಗೆ ಜಮಾ ಆಗುತ್ತದೆ. ಕೂಲಿಕಾರ್ಮಿಕರು ಕಟ್ಟಿದ ಹಣದ ಒಂದು ಭಾಗ ಗ್ರಾಮೀಣ ಮಟ್ಟದಿಂದ ಹಿಡಿದು ರಾಜ್ಯ ಮಟ್ಟದ ಹೋರಾಟಗಳಿಗೆ ಉಪಯೋಗಿಸುತ್ತಾರೆ. ಎರಡನೆಯ ಭಾಗ ಸಾಮಾಜಿಕ ಭದ್ರತೆಗಾಗಿ ಮಾಡುವಂತಹ ಹೋರಾಟಗಳಿಗೆ ಬಳಸಿಕೊಳ್ಳುತ್ತಾರೆ. ಹೈದ್ರಾಬಾದ್-ಕರ್ನಾಟಕದ ಪ್ರತಿಯೊಂದು ಜಿಲ್ಲೆಯಲ್ಲಿಯೂ ಈ ಸಂಘಟನೆ ಕೆಲಸ ಮಾಡುತ್ತಿದ್ದು

ರಾಯಚೂರು ಜಿಲ್ಲೆಯಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ಹೇಳಬಹುದು. ಹಾಗೆಯೇ ಪ್ರತಿಯೊಂದು ಪಂಚಾಯ್ತಿಯಲ್ಲಿ ಸಂಘಟನೆಯ ವತಿಯಿಂದ ಅಲ್ಲಿನ ಸ್ಥಳೀಯ ವಿದ್ಯಾವಂತ ಯುವಕ ಮತ್ತು ಯುವತಿಯರನ್ನು ಪಂಚಾಯ್ತಿಗೊಬ್ಬರಂತೆ ಕಾರ್ಯಕರ್ತರನ್ನಾಗಿ ನೇಮಕ ಮಾಡಿರುತ್ತಾರೆ. ಇಲ್ಲಿ ತಾಲೂಕ ಮಟ್ಟದಲ್ಲಿ ಕಾರ್ಯಕರ್ತರಾಗಿ ಮತ್ತು ಅಲ್ಲಿನ ಸ್ಥಳೀಯರು ಪಂಚಾಯ್ತಿ ಮಟ್ಟದ ಕಾರ್ಯಕರ್ತರಾಗಿ ಕೆಲಸ ನಿರ್ವಹಿಸುತ್ತಾರೆ. ಕೂಲಿಕಾರ್ಮಿಕರು ಸ್ಥಳೀಯವಾಗಿ ಎದುರಿಸುವಂತಹ ಪ್ರತಿಯೊಂದು ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಕೆಲಸ ನಿರ್ವಹಿಸುತ್ತಾರೆ. ಸಂಘಟನೆಯನ್ನು ಒಪ್ಪಿ ಬಂದಂತಹ ಕುಟುಂಬಗಳಿಗೆ ಜಾಬ್‌ಕಾರ್ಡ್ ಇದೆಯೋ? ಅಥವಾ ಇಲ್ಲವೋ? ಎಂಬುದನ್ನು ಖಾತ್ರಿ ಪಡಿಸಿಕೊಳ್ಳಲಾಗುತ್ತದೆ. ನಂತರ ಬ್ಯಾಂಕ್‌ನಲ್ಲಿ ಅಕೌಂಟ್ ಇದೆನಾ? ಅಥವಾ ಇಲ್ಲವೋ ಎಂಬುದನ್ನು ತಿಳಿದುಕೊಂಡ ನಂತರ ಜಾಬ್‌ಕಾರ್ಡ್ ಇಲ್ಲದವರಿಗೆ ಜಾಬ್‌ಕಾರ್ಡ್ ಮತ್ತು ಬ್ಯಾಂಕಿನಲ್ಲಿ ಅಕೌಂಟ್ ಓಪನ್ ಮಾಡಿಸಲಾಗುತ್ತದೆ. ನಂತರ ಪ್ರತಿಯೊಂದು ಕುಟುಂಬಕ್ಕೆ ಕೆಲಸ ಕೊಡಿಸುವುದರಿಂದ ಹಿಡಿದು, ಕೂಲಿ ಕೊಡಿಸುವುದು, ನಿರುದ್ಯೋಗ ಭತ್ಯೆ ಕೊಡಿಸುವುದು ಮತ್ತು ಡಿಲೇ ಪೇಮೆಂಟ್ ಕೊಡಿಸುವವರೆಗಿನ ಎಲ್ಲಾ ಕೆಲಸ ಕಾರ್ಯಗಳನ್ನು ಸಂಘಟನೆಯ ಪಂಚಾಯತ್ ಮಟ್ಟದ ಕಾರ್ಯಕರ್ತರು ಮಾಡುತ್ತಾರೆ. ಸಂಘಟನೆಯ ಪ್ರತಿಯೊಬ್ಬ ಮಹಿಳೆಯು ಬ್ಯಾಂಕಿನ ಮುಂದೆ ಸಾಲಿನಲ್ಲಿ ನಿಂತುಕೊಂಡು ದುಡಿದಂತ ವೇತನವನ್ನು ಬಿಡಿಸಿಕೊಂಡು ಬರುವಂತ ವ್ಯವಹಾರಿಕ ಜ್ಞಾನ ಅವರಲ್ಲಿ ಬರುವಂತೆ ಅವರಿಗೆ ಅನೇಕ ತರಬೇತಿಗಳನ್ನು ಕೊಡುತ್ತಿದ್ದಾರೆ. ಹಾಗಾಗಿ ಈ ಸಂಘಟನೆ ಯಾವ ಯಾವ ಪಂಚಾಯ್ತಿಯಲ್ಲಿ ಕೆಲಸ ಮಾಡುತ್ತದೆಯೋ ಅಲ್ಲೆಲ್ಲ ಮಹಿಳೆಯರು ಜಾಗೃತರಾಗಿದ್ದಾರೆ.

ಮುಖ್ಯವಾಗಿ ಮಹಿಳೆಯರ ಹೆಸರಲ್ಲಿ ಜಾಬ್‌ಕಾರ್ಡ್ ಇರುವುದು ಮತ್ತು ಅವರೇ ಬ್ಯಾಂಕಿಗೆ ಹೋಗಿ ತಾವು ದುಡಿದ ಹಣವನ್ನು ಬಿಡಿಸಿಕೊಂಡು ಬರುವುದು ಪುರುಷರಿಗೆ ಸಹಿಸಿಕೊಳ್ಳಲಾಗುವುದಿಲ್ಲ. ಆಗ ಅವರು ತಮ್ಮ ಹೆಂಡತಿಗೆ ಹಿಂಸೆಯನ್ನು ಕೊಡಲು ಆರಂಭಿಸುತ್ತಾರೆ. ಇಂತಹ ಸಂದರ್ಭದಲ್ಲಿ ಮಹಿಳೆಯರಿಗೆ ಆಗುವಂತಹ ಹಿಂಸೆಯನ್ನು ತಪ್ಪಿಸುವ ಕೆಲಸಗಳನ್ನೂ ಸಹ ಮಾಡುತ್ತಿದೆ. ಹೀಗೆ ಹಲವಾರು ವಿಧದಲ್ಲಿ ಕೆಲಸಗಳನ್ನು ಈ ಸಂಘಟನೆಯು ನಿರ್ವಹಿಸುತ್ತಿದೆ.

ಇನ್ನು ಈ ಸಂಘಟನೆಯು ಕೆಲವು ಬೇಡಿಕೆಗಳನ್ನು ಸರಕಾರದ ಮುಂದಿರಿಸಿದೆ. ಅವುಗಳೆಂದರೆ ಕನಿಷ್ಠ ವೇತನ ಜಾರಿಯಾಗಬೇಕು. ಸರಕಾರಿ ನೌಕರರಿಗೆ ಇದ್ದಂತೆ ಸರಕಾರಿ ರಜಾ ದಿನಗಳಲ್ಲಿ ಮತ್ತು ಭಾನುವಾರದಿನದಂದು ಕೂಡ ಉದ್ಯೋಗ ಖಾತ್ರಿ ಕಾರ್ಮಿಕರಿಗೆ ಕೂಲಿ ಕೊಡುವಂತಾಗಬೇಕು. ಕೂಲಿ ಕಾರ್ಮಿಕರಿಗೆ ಮಹಿಳೆಯರಿಗೆ ರಜಾ ಕೊಡಬೇಕು. ವಯಸ್ಸಾದ ಮೇಲೆ ಕನಿಷ್ಠ ಎರಡು ಸಾವಿರ ಪಿಂಚಣಿ ಪ್ರತಿಯೊಬ್ಬ ಕೂಲಿ ಕಾರ್ಮಿಕರಿಗೆ ಸಿಗುವಂತಾಗಬೇಕು.

ಮಹಿಳೆಯರು ಮನೆಯಲ್ಲಿ ಮಾಡುವ ಕೆಲಸಕ್ಕೂ ಕೂಡ ಕೂಲಿ ಕೊಡುವಂತಾಗಬೇಕು. ಈ ಎಲ್ಲಾ ಬೇಡಿಕೆಗಳನ್ನು ಸರಕಾರ ಜಾರಿಗೆ ತರಬೇಕೆಂದು ಡೆಲ್ಲಿಯಲ್ಲಿ ಹೋರಾಟ ಮಾಡಿದ್ದಾರೆ. ಇವುಗಳೆಲ್ಲವು ಈ ಸಂಸ್ಥೆಯ ಮುಂದಿನ ಹೆಜ್ಜೆಗಳಾಗಿವೆ.

ಒಟ್ಟಾರೆಯಾಗಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯನ್ನು ಸರಿಯಾದ ರೀತಿಯಲ್ಲಿ ಜಾರಿಗೆ ತರಲು ಸರಕಾರದ ಒಂದು ಅಂಗವಾಗಿರುವ ಗ್ರಾಮ ಪಂಚಾಯತಿಗಳು ಉದ್ಯೋಗ ಖಾತರಿ ಯೋಜನೆಯ ಕುರಿತಂತೆ ಜನರಿಗೆ ಅರಿವನ್ನು ಮೂಡಿಸುವ ಸಲುವಾಗಿ ನಾನಾ ರೀತಿಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿವೆ. ಆದರೆ ಸಾಮಾನ್ಯ ಜನರಿಗೆ ತಲುಪುವಲ್ಲಿ ಯಶಸ್ವಿಯಾಗಿಲ್ಲದಿರುವುದು ವಿಪರ್ಯಾಸದ ಸಂಗತಿಯೇ ಸರಿ. ಹಾಗೆಯೇ ಸರಕಾರೇತರ ಸಂಘಸಂಸ್ಥೆಗಳೂ ಸಹ ಕಾರ್ಯಪ್ರವೃತ್ತವಾಗಿದ್ದು ಇವುಗಳು ಜನರನ್ನು ತಲುಪುವಲ್ಲಿ ಸ್ವಲ್ಪ ಮಟ್ಟಿಗೆ ಯಶಸ್ವಿಯಾಗಿವೆ ಎಂದು ಹೇಳಬಹುದು. ಮುಖ್ಯವಾಗಿ ಈ ಎಲ್ಲಾ ಸಂಘಟನೆಗಳು ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನದ ಸಂದರ್ಭದಲ್ಲಿನ ತೊಡಕುಗಳನ್ನು ಅಥವಾ ಸಮಸ್ಯೆಗಳನ್ನು ಕಂಡುಹಿಡಿಯುವಲ್ಲಿ ಮತ್ತು ಅವುಗಳಿಗೆ ಪರಿಹಾರವನ್ನು ಸೂಚಿಸುವಲ್ಲಿ ಹಲವಾರು ಕ್ರಮಗಳನ್ನು ಕೈಗೊಂಡಿವೆ. ಈ ಕ್ರಮಗಳನ್ನು ತೆಗೆದುಕೊಳ್ಳುವ ಸಂದರ್ಭದಲ್ಲಿ ಜನರಿಗೆ ಅರಿವನ್ನು ಮೂಡಿಸುವಂತಹ ಕೆಲಸಗಳನ್ನೂ ಸಹ ಮಾಡುತ್ತಿವೆ. ಜೊತೆಗೆ ಉದ್ಯೋಗ ಖಾತರಿ ಯೋಜನೆಯಲ್ಲಿ ಯಾವ ಯಾವ ಬದಲಾವಣೆಗಳು ಮಾಡಬೇಕಾಗಿದೆ ಎಂಬುದರ ಕುರಿತಂತೆ ಸಲಹೆ ಸೂಚನೆಗಳನ್ನೂ ಸಹ ನೀಡುತ್ತಲಿವೆ. ಇಲ್ಲಿನ ಕೆಲವು ಬದಲಾವಣೆಗಳು ಪುರುಷಶಾಹಿ ಚಿಂತನೆಯ ಭಾಗವಾಗಿಯೂ ಇರುವುದನ್ನು ಕಾಣಬಹುದಾಗಿದೆ. ಆದರೂ ಒಟ್ಟಾರೆಯಾಗಿ ಹೈದರಾಬಾದ್ ಕರ್ನಾಟಕದಲ್ಲಿ ಸರಕಾರಿ ಮತ್ತು ಸರಕಾರೇತರ ಸಂಘ ಸಂಸ್ಥೆಗಳ ಕಾರಣವಾಗಿ ಇಲ್ಲಿನ ಜನರು ಸ್ವಲ್ಪಮಟ್ಟಿಗಿನ ಅರಿವನ್ನು ಪಡೆದಿದ್ದಾರೆ. ಆ ಮೂಲಕ ತಮ್ಮ ಜೀವನವನ್ನು ಸುಧಾರಿಸಿಕೊಳ್ಳುತ್ತಿದ್ದಾರೆ ಎಂದು ಹೇಳಬಹುದು.

**ಅಡಿಟಿಪ್ಪಣಿಗಳು**

೧. ಮೀನಾಕ್ಷಿ ಬಾಳಿ ಮತ್ತು ನೀಲಾ ಕೆ.; ೨೦೧೦; ನೆಲದ ನಂಟು; ಜನವಾದಿ ಮಹಿಳಾ ಸಂಘಟನೆ ರಾಜ್ಯ ಸಮಿತಿ; ಪು–೩.

೨. ಅದೇ ಪು–೩೨.

# ಅಧ್ಯಾಯ: ೬

## ಉದ್ಯೋಗದ ಹಕ್ಕೊತ್ತಾಯ : ಮಹಿಳೆ : ಪ್ರತಿಭಟನೆ

೬.೧. ಹಿನ್ನೆಲೆ

೬.೨. ಪ್ರತಿಭಟನೆಯ ಆರಂಭದ ಸ್ವರೂಪ

೬.೩. ಘಟನೆಯ ನಂತರದ ಬೆಳವಣಿಗೆಗಳು

೬.೩.೧. ರೈತಪರ ಸಂಘಟನೆಗಳ ಪಾತ್ರ

೬.೩.೨. ಲಾಠಿಚಾರ್ಜ್ ಕುರಿತ ಸರ್ಕಾರದ ವರದಿ

೬.೪. ಸರಕಾರದ ದ್ವಂದ್ವ ನೀತಿ

೬.೫. ಕರಾಳದಿನ ಆಚರಣೆ

೬.೬. ಪ್ರಕರಣದ ಮೌಖಿಕ ನಿರೂಪಣೆಗಳು

೬.೭. ಪ್ರಕರಣದ ವರ್ತಮಾನದ ಪರಿಣಾಮ

## ಅಧ್ಯಾಯ:೬

# ಉದ್ಯೋಗದ ಹಕ್ಕೊತ್ತಾಯ : ಮಹಿಳೆ : ಪ್ರತಿಭಟನೆ

ಉದ್ಯೋಗ ಖಾತರಿ ಯೋಜನೆಯು ಸಾಮಾನ್ಯ ಜನರಿಗೂ ಹಕ್ಕಿನ ಪರಿಭಾಷೆಯನ್ನು ಕಲ್ಪಿಸಿಕೊಟ್ಟಿದೆ. ಹಾಗಾಗಿ ಪ್ರತಿಯೊಂದು ಗ್ರಾಮ ಪಂಚಾಯತಿಗಳಲ್ಲಿನ ಜನರು ಈ ಯೋಜನೆಯಡಿ ತಮ್ಮ ಹಕ್ಕಿನ ಮೂಲಕ ಪ್ರತಿಫಲವನ್ನು ಪಡೆಯುವ ಅವಕಾಶವನ್ನು ಹೊಂದಿದ್ದಾರೆ. ಈ ಕಾರಣಕ್ಕಾಗಿ ರಾಜ್ಯದ ಹಲವು ಜಿಲ್ಲೆಗಳ ಗ್ರಾಮ ಪಂಚಾಯತಿಗಳಲ್ಲಿ ಉದ್ಯೋಗದ ಚೀಟಿಯನ್ನು ಪಡೆಯಲು, ಕೆಲಸದ ಸ್ಥಳಗಳಲ್ಲಿ ಸೌಲಭ್ಯಗಳನ್ನು ಪಡೆಯಲು ಹಾಗೆಯೇ ಕೆಲಸಕ್ಕಾಗಿ ಅರ್ಜಿ ಸಲ್ಲಿಸಿದ ನಂತರವೂ ಗ್ರಾಮ ಪಂಚಾಯತಿಗಳು ೧೫ ದಿನದೊಳಗೆ ಕೆಲಸಗಳನ್ನು ನೀಡದೆ ಇದ್ದಾಗ ನಿರುದ್ಯೋಗ ಭತ್ಯೆಯನ್ನು ಪಡೆಯಲು ಮತ್ತು ಕಾಮಗಾರಿಗಳು ಮುಕ್ತಾಯಗೊಂಡ ನಂತರ ಕೂಲಿಯನ್ನು ಪಡೆಯಲು ಹೀಗೆ ಹಲವು ಕಾರಣಗಳಿಗಾಗಿ ಸಂಘಟಿತ ಹೋರಾಟಗಳು ನಡೆದಿವೆ. ಈ ಹಿನ್ನಲೆಯಲ್ಲಿ ಉದ್ಯೋಗ ಖಾತರಿ ಯೋಜನೆಯಲ್ಲಿ ಕೆಲಸವನ್ನು ಮಾಡಿ, ಕೆಲಸದ ವೇತನದಿಂದ ವಂಚಿತರಾಗಿ ಅದನ್ನು ಪಡೆಯಲು ಹೋರಾಟ ಮಾಡಿ ಹಲವು ಸಮಸ್ಯೆಗಳಿಗೆ ಒಳಗಾದಂತಹ ಕೊಪ್ಪಳ ಜಿಲ್ಲೆಯ ಜನರು ಹಲವು ಕಾರಣಗಳಿಗೆ ಮುಖ್ಯವಾಗಿದ್ದಾರೆ. ಅಂದರೆ ಇಲ್ಲಿನ ಜನರು ತಾವು ದುಡಿದಂತಹ ಕೂಲಿಯನ್ನು ಪಡೆಯಲು ಧರಣಿ ನಿರತರಾದಾಗ ಅವರ ಮೇಲೆ ಲಾಠಿಚಾರ್ಜ್ ಮಾಡಲಾಯಿತು. ಈ ಪ್ರತಿಭಟನೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರೇ ಇದ್ದರು. ಇದರ ಕಾರಣವಾಗಿ ಮಹಿಳೆಯರು ಹಲವು ಸಮಸ್ಯೆಗಳನ್ನು ಅನುಭವಿಸಬೇಕಾಯಿತು. ಇದು ತುಂಬಾ ಸಂಕೀರ್ಣವಾದಂತಹ ಅಂಶವಾಗಿದೆ. ಹಾಗಾಗಿ ಉದ್ಯೋಗ ಖಾತರಿ ಯೋಜನೆಯಲ್ಲಿ ದುಡಿದಂತಹ ಕೂಲಿಯನ್ನು ಪಡೆಯುವ ಕಾರಣಕ್ಕಾಗಿ ಮಹಿಳೆಯರು ಲಾಠಿಚಾರ್ಜ್‌ಗೆ ಒಳಗಾಗಿ ಹಲವು ಸಮಸ್ಯೆಗಳಿಗೆ ಗುರಿಯಾಗಿರುವಂತಹ ಪ್ರಕರಣಗಳು ರಾಜ್ಯದ ಯಾವ ಭಾಗದಲ್ಲಿಯೂ

ನಡೆದಿಲ್ಲ. ಈ ಹಿನ್ನಲೆಯಲ್ಲಿ ಈ ಅಧ್ಯಾಯವು ಮುಖ್ಯವಾಗಿ ಕೊಪ್ಪಳ ಜಿಲ್ಲೆಯ ಕೊಪ್ಪಳ ತಾಲೂಕನ್ನು ಕೇಂದ್ರವಾಗಿಸಿಕೊಂಡಿದೆ ಮತ್ತು ಈ ಪ್ರಕರಣದಿಂದ ಘಾಸಿಗೊಳಗಾದ ಮಹಿಳೆಯರನ್ನು ಮತ್ತು ಪುರುಷರನ್ನು ಕ್ಷೇತ್ರಕಾರ್ಯದ ಮೂಲಕ ಬೇಟಿಯಾಗಿ ಹಲವು ಅಂಶಗಳನ್ನು ಸಂಗ್ರಹಿಸಲಾಗಿದೆ. ಇದರ ಒಟ್ಟಾರೆ ಪ್ರಕರಣವನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

### ೬.೧. ಹಿನ್ನೆಲೆ

ಕೊಪ್ಪಳ ಜಿಲ್ಲೆಯು ರಾಯಚೂರು ಜಿಲ್ಲೆಯಿಂದ ಬೇರ್ಪಟ್ಟು ೧೯೯೭ರಲ್ಲಿ ಅಸ್ತಿತ್ವಕ್ಕೆ ಬಂದಿತು. ಪ್ರತಿಯೊಂದು ಜಿಲ್ಲೆಯು ತನ್ನದೆ ಆದ ವಿಶಿಷ್ಟತೆಯನ್ನು ಹೊಂದಿರುವಂತೆ ಕೊಪ್ಪಳ ಜಿಲ್ಲೆಯು ಪ್ರಾದೇಶಿಕ ವೈಶಿಷ್ಟ್ಯತೆಯನ್ನು ಮೈಗೂಡಿಸಿಕೊಂಡಿದೆ. ಪ್ರಾದೇಶಿಕವಾಗಿ ಹೈದರಾಬಾದ್-ಕರ್ನಾಟಕ ಪ್ರಾಂತ್ಯಕ್ಕೆ ಸೇರಿದ ಜಿಲ್ಲೆಯಾಗಿದ್ದು ಅತ್ಯಂತ ಹಿಂದುಳಿದ ಜಿಲ್ಲೆಗಳಲ್ಲಿ ಒಂದಾಗಿದೆ. ಇಲ್ಲಿನ ಜನರು ಕೃಷಿ ಮತ್ತು ಕೃಷಿಯೇತರ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದಾರೆ. ಮಳೆಯ ಅಭಾವದಿಂದ ಜಿಲ್ಲೆಯ ರೈತರ ಬದುಕು ಸದಾ ಕಷ್ಟದಲ್ಲಿದೆ. ಈ ಜಿಲ್ಲೆ ತುಂಗಭದ್ರ ಆಣೆಕಟ್ಟಿನ ಪ್ರದೇಶಕ್ಕೆ ಹೊಂದಿಕೊಂಡಿದ್ದರೂ ನೀರಾವರಿ ವ್ಯವಸ್ಥೆ ಅಸಮರ್ಪಕವಾಗಿದೆ. ತುಂಗಭದ್ರ ಹಿನ್ನೀರಿನಿಂದಾಗಿ ಇಲ್ಲಿಯ ಬಹುತೇಕ ಭೂಮಿಯು ನೀರಾವರಿಗೆ ಒಳಪಟ್ಟಿಲ್ಲ. ಆದ್ದರಿಂದ ಈ ಭಾಗದ ಜನರಲ್ಲಿ ಗುಳೆ ಹೋಗುವ ಪ್ರಕ್ರಿಯೆ ಹೆಚ್ಚಾಗಿದೆ.

ಕೊಪ್ಪಳ ತಾಲೂಕಿನ ಬೂದುಗುಂಪ, ಇಂದರಗಿ, ಇರಕಲ್‌ಗಡಾ, ಹಾಸಗಲ್ ಮತ್ತು ಹಿರೇಬಗನಾಳ್ ಗ್ರಾಮ ಪಂಚಾಯ್ತಿಗಳಲ್ಲಿ ಉದ್ಯೋಗ ಖಾತ್ರಿ ಯೋಜನೆಯ ಭಾಗವಾಗಿ ದುಡಿದ ಹಣವನ್ನು ಕೂಲಿ ಕಾರ್ಮಿಕರಿಗೆ ಕೊಡದ ಕಾರಣ ಈ ಭಾಗದ ಜನರು ಧರಣಿಯನ್ನು ಮಾಡಿದ್ದರು. ಇದರಿಂದಾಗಿ ಈ ಯೋಜನೆಯಲ್ಲಿ ತಾವು ದುಡಿದ ಶ್ರಮಕ್ಕೆ ತಕ್ಕ ಕೂಲಿಯನ್ನು ಕೇಳಲು ಧರಣಿ ಕುಳಿತುಕೊಂಡ ಕಾರಣವಾಗಿ ಅವರ ಮೇಲೆ ಲಾಟಿ ಚಾರ್ಜ್ ಮಾಡಲಾಗಿತ್ತು. ಇದು ರಾಜ್ಯವಾಪಿ ದೊಡ್ಡ ಸುದ್ದಿಯಾಗಿತ್ತು. ಈ ಪ್ರಕರಣದಲ್ಲಿ ಲಾಟಿ ಚಾರ್ಜ್‌ಗೆ ಒಳಗಾದವರಲ್ಲಿ ಮಹಿಳೆಯರೇ ಹೆಚ್ಚಾಗಿದ್ದರು. ಹಾಗಾಗಿ ಇದರಿಂದ ಮಹಿಳೆಯರ ಮೇಲೆಯೇ ಹೆಚ್ಚಿನ ಪರಿಣಾಮ ಬೀರಿತು. ಈ ಕಾರಣಕ್ಕಾಗಿ ಹೆಣ್ಣುಮಕ್ಕಳ ಭಾಗವಹಿಸುವಿಕೆ ಮತ್ತು ಅವರು ಅನುಭವಿಸಿದ ನೋವು ಉದ್ಯೋಗ ಖಾತ್ರಿ ಯೋಜನೆಯಲ್ಲಿನ ಲಿಂಗದ ನೆಲೆಯಲ್ಲಿ ನಡೆಯುವ ಶೋಷಣೆಯನ್ನು ತೋರಿಸುವಂತಿದೆ. ಹಾಗಾಗಿ ಈ ಪ್ರಕರಣದ ವಾಸ್ತವವನ್ನು ಅರಿಯುವ ಉದ್ದೇಶದಿಂದ ಈ ಐದು ಗ್ರಾಮಪಂಚಾಯತಿಗಳಲ್ಲಿ ಕ್ಷೇತ್ರಕಾರ್ಯ ಕೈಗೊಂಡು ಸುಮಾರು ನೂರಕ್ಕೂ ಹೆಚ್ಚು ಜನರನ್ನು ಭೇಟಿಯಾಗಿ ಮಾಹಿತಿಯನ್ನು ಸಂಗ್ರಹಿಸಲಾಯಿತು. ಹೀಗೆ ಸಂಗ್ರಹಿಸಿದ ಮಾಹಿತಿಯನ್ನು ಕೊಡುವುದರ ಜೊತೆಗೆ ವಿಶ್ಲೇಷಣೆಯನ್ನು ಮಾಡಲಾಗಿದೆ. ಅಗತ್ಯವೆನಿಸಿದಲ್ಲಿ ವಕ್ತೃಗಳ ಹೇಳಿಕೆಯನ್ನು ಬಳಸಿಕೊಳ್ಳಲಾಗಿದೆ.

ಬಡಜನರ ಆರ್ಥಿಕ ಬದುಕನ್ನು ಸುಧಾರಿಸಲು ಸರಕಾರವು ಉದ್ಯೋಗ ಖಾತ್ರಿ ಯೋಜನೆಯನ್ನು ರೂಪಿಸಿದೆ. ಇಂತಹ ಯೋಜನೆಯು ಈ ಭಾಗದ ಜನರಿಗೆ ಸರಿಯಾಗಿ

ತಲುಪುವಲ್ಲಿ ವಿಫಲಗೊಂಡಿದೆ. ನರೇಗಾ ಯೋಜನೆಯಲ್ಲಿ ಪ್ರಾಮಾಣಿಕವಾಗಿ ಕೂಲಿ ಕೆಲಸ ಮಾಡಿ ವೇತನ ಕೇಳಿದ್ದಕ್ಕೆ ಕೂಲಿ ಕಾರ್ಮಿಕರ ಮೇಲೆ ಹಿಂಸಾತ್ಮಕ ದೌರ್ಜನ್ಯವನ್ನು ಮಾಡಲಾಯಿತು. ಈ ರೀತಿಯ ದುರ್ಬಳಕೆಗೆ ಇಲ್ಲಿಯ ಪಂಚಾಯ್ತಿ ಚುನಾಯಿತ ಪ್ರತಿನಿಧಿಗಳು ಹಾಗೂ ಅಧಿಕಾರಿ ವರ್ಗವೇ ಕಾರಣವಾಗಿದೆ. ಹಾಗಾಗಿ ಮೇಲೆ ತಿಳಿಸಿದ ಐದು ಗ್ರಾಮ ಪಂಚಾಯತಿಗಳ ಕುರಿತಂತೆ ಸಂಕ್ಷಿಪ್ತ ಮಾಹಿತಿನ್ನು ನೀಡುವುದು ಮುಖ್ಯವೆನಿಸುತ್ತದೆ. ಹಿರೇಬಗನಾಳ್ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಒಟ್ಟು ಜನಸಂಖ್ಯೆ ೯೩೪೩. ಇದರಲ್ಲಿ ೪೭೮೪ರಷ್ಟು ಪುರುಷರು, ೪೫೫೯ರಷ್ಟು ಮಹಿಳೆಯರು ಇದ್ದಾರೆ. ಹಾಸಗಲ್ ಪಂಚಾಯ್ತಿಯಲ್ಲಿ ಒಟ್ಟು ಜನಸಂಖ್ಯೆ ೮೭೭೭ರಷ್ಟಿದೆ. ಇದರಲ್ಲಿ ಪುರುಷರು ೪೯೪೧ ಹಾಗೂ ಮಹಿಳೆಯರು ೩೮೩೬ ಇರುತ್ತಾರೆ. ಇಂದರಗಿ ಇಲ್ಲಿಯ ಒಟ್ಟು ಜನಸಂಖ್ಯೆ ೮೦೩೦ ಇದೆ. ಇದರಲ್ಲಿ ೪೦೭೭ ಪುರುಷರು ೩೯೫೩ ಮಹಿಳೆಯರಿದ್ದಾರೆ. ಹಾಗೆಯೇ ಇರಕಲ್‌ಗಡಾ ಪಂಚಾಯ್ತಿಯ ಒಟ್ಟು ಜನಸಂಖ್ಯೆ ೧೩೯೯೬ ಇದರಲ್ಲಿ ೬೫೦೪ ಪುರುಷರು ಹಾಗೂ ೬೯೫೨ ಮಹಿಳೆಯರಿದ್ದಾರೆ. ಈ ಐದು ಪಂಚಾಯ್ತಿಗಳ ವ್ಯಾಪ್ತಿಯಲ್ಲಿ ಸರ್ಕಾರ ಕೈಗೊಂಡ ನರೇಗಾ ಯೋಜನೆ ಇಲ್ಲಿಯ ಸಾಮಾನ್ಯ ಜನರಿಗೆ  ಸಮರ್ಪಕವಾಗಿ ಬಳಕೆಯಾಗಿಲ್ಲದಿರುವುದು ಕಂಡುಬಂದಿದೆ. ಆದ್ದರಿಂದ ಈ ಭಾಗದ ಜನರು ಹೆಚ್ಚು ಕೂಲಿಯನ್ನು ಅರಿಸಿಕೊಂಡು ಬೇರೊಂದು ಭಾಗಕ್ಕೆ ವಲಸೆ ಹೋಗುತ್ತಿದ್ದಾರೆ. ಮದ್ಯಮ ಹಾಗೂ ಕೆಳವರ್ಗದ ಜನ ಸಮುದಾಯಗಳಲ್ಲಿ ಈ ಮಾದರಿಯ ಗುಳೆ ಹೋಗುವ ವ್ಯವಸ್ಥೆ ಹೆಚ್ಚಾಗಿದೆ. ಇದು ಇವರ ಮಕ್ಕಳ ಶಿಕ್ಷಣ ಕುಂಠಿತಗೊಳ್ಳಲು ಪ್ರಮುಖ ಕಾರಣವಾಗಿದೆ. ಈ ಭಾಗದ ರೈತ ಕೂಲಿಕಾರರು ನರೇಗಾ ಕೂಲಿಗಾಗಿ ಮಾಡಿದ ಪ್ರತಿಭಟನೆ ಅಧಿಕಾರ ವಿಕೇಂದ್ರಿಕರಣದ ಸಂಸ್ಥೆಗಳ ಅಧಿಕಾರಶಾಹಿಯನ್ನು ಬಿಂಬಿಸುತ್ತಿದೆ.

**೬.೨. ಪ್ರತಿಭಟನೆಯ ಆರಂಭದ ಸ್ವರೂಪ**

೨೦೦೮–೦೯ನೇ ಸಾಲಿನಲ್ಲಿ ಈ ಯೋಜನೆಯನ್ನು ದೇಶದಾದ್ಯಂತ ವಿಸ್ತರಿಸಿದಾಗ, ಕೊಪ್ಪಳ ಜಿಲ್ಲೆಯು ಇದರ ವ್ಯಾಪ್ತಿಗೆ ಒಳಪಟ್ಟಿತು. ಅನುಷ್ಠಾನಗೊಂಡ ಆರಂಭದ ದಿನಗಳಿಂದಲೂ ಕೊಪ್ಪಳ ತಾಲೂಕಿನ ಬೂದಗುಂಪ, ಇಂದರಗಿ, ಇರಕಲ್‌ಗಡಾ, ಹಾಸಗಲ್ ಮತ್ತು ಹಿರೇಬಗನಾಳ್ ಗ್ರಾಮ ಪಂಚಾಯ್ತಿಗಳಲ್ಲಿ ಉದ್ಯೋಗ ಖಾತರಿ ಯೋಜನೆಯನ್ನು ನಿಯಮಾನುಸಾರ ಅನುಷ್ಠಾನಗೊಳಿಸದಿರುವುದು ಕಂಡುಬಂದಿದೆ. ಈ ಮಾಹಿತಿ  ಕ್ಷೇತ್ರಕಾರ್ಯ ಅಧ್ಯಯನದಿಂದ ತಿಳಿದು ಬಂದ ಸಂಗತಿ. ಮುಖ್ಯವಾಗಿ ಉದ್ಯೋಗ ಖಾತರಿ ಯೋಜನೆಯು ಕೂಲಿಕಾರ್ಮಿಕರಿಗೆ, ಸಣ್ಣ ಮತ್ತು ಅತೀ ಸಣ್ಣ ರೈತರಿಗೆ ತುಂಬಾ ಅನುಕೂಲಗಳನ್ನು ಒದಗಿಸಿಕೊಟ್ಟಿದೆ. ಈ ಯೋಜನೆಯು ಕುಶಲವಲ್ಲದ ಅಕುಶಲ ಕೆಲಸವನ್ನು ಬಯಸಿ ಬರುವಂತ ಪ್ರತಿಯೊಂದು ಕುಟುಂಬಕ್ಕೆ ನೂರು ದಿನಗಳ ಕೆಲಸ ನೀಡುತ್ತದೆ. ಹಾಗೆಯೇ ಸಣ್ಣ ಮತ್ತು ಅತೀ ಸಣ್ಣ ರೈತರ ಜಮೀನಿನಲ್ಲಿ ಕೃಷಿ ಹೊಂಡಗಳನ್ನು, ಗಿಡ ನೆಡುವುದು, ಚೆಕ್‌ಡ್ಯಾಮ್, ಬದು ನಿರ್ಮಾಣ, ಭೂಮಿ ಸಮತಟ್ಟು ಮಾಡುವುದು ಇನ್ನು ಮುಂತಾದ ಕೆಲಸಗಳನ್ನು

ಮಾಡಿಸಲು ಅವಕಾಶವನ್ನು ಒದಗಿಸಿಕೊಟ್ಟಿದೆ. ಈ ಕಾರಣಗಳಿಗಾಗಿ ಯೋಜನೆಯು ಏಕ ಕಾಲದಲ್ಲಿ ಬಡ ಕೂಲಿಕಾರರಿಗೂ ಮತ್ತು ಸಣ್ಣ, ಅತೀ ಸಣ್ಣ ರೈತರಿಗೂ ಒಂದು ವರದಾನವಾಗಿ ಪರಿಣಮಿಸಿದೆ. ಆದರೆ ಈ ಭಾಗದಲ್ಲಿನ ಗ್ರಾಮ ಪಂಚಾಯತಿಗಳು ಈ ಎಲ್ಲಾ ಅವಕಾಶಗಳನ್ನು ರೈತರಿಗಾಗಲಿ ಅಥವಾ ಬಡ ಕೂಲಿಕಾರರಿಗಾಗಲೀ ಅವಕಾಶಗಳನ್ನು ಒದಗಿಸಿಕೊಟ್ಟಿಲ್ಲದಿರುವುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡುಬಂದಿದೆ.

ಕೊಪ್ಪಳ ತಾಲೂಕಿನ ಐದು ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿನ ಬಹುತೇಕ ಜನರು ಕೂಲಿ ಕಾರ್ಮಿಕರಾಗಿದ್ದಾರೆ. ಇವರು ದಿನವೂ ದುಡಿಯಬೇಕು ಬಂದ ಕೂಲಿಯಿಂದ ಜೀವನವನ್ನು ನಡೆಸಬೇಕು. ಅಂದರೆ ತಮ್ಮ ಊರಿನ ಅಥವಾ ತಮ್ಮ ಸುತ್ತಲಿನ ಊರಿನ ಜಮೀನ್ದಾರರ ಹೊಲಗಳಲ್ಲಿ ಕೆಲಸವನ್ನು ನಿರ್ವಹಿಸಿ ಅದರಿಂದ ಬಂದಂತಹ ಕೂಲಿಯಿಂದ ಜೀವನ ನಡೆಸುವವರ ಸಂಖ್ಯೆ ಅಧಿಕವಾಗಿದೆ. ಕೆಲವು ಸಂದರ್ಭಗಳಲ್ಲಿ ಜನರು ಕೆಲಸವನ್ನರಸಿ ಬೇರೆ ಬೇರೆ ಊರುಗಳಿಗೆ ವಲಸೆ ಹೋಗುತ್ತಿದ್ದಾರೆ. ಇದು ಬಡ ಕೂಲಿಕಾರರ ವಿಷಯವಾದರೆ, ಇನ್ನು ಈ ಬಾಗದಲ್ಲಿ ಸಣ್ಣ ರೈತರು ಮತ್ತು ಅತೀ ಸಣ್ಣ ರೈತರು ಹಾಗೆಯೇ ರೈತ ಜಮೀನನ್ನು ಕೋರಿಗೆ (ಕೌಲಿಗೆ, ಪಾಲಿಗೆ) ತೆಗೆದುಕೊಂಡಂತಹ ರೈತರ ಸಂಖ್ಯೆ ಅಧಿಕವಾಗಿದ್ದು ಇವರೂ ಸಹ ಹಲವು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಇವರು ತಮ್ಮ ಜಮೀನಿನಲ್ಲಿ ಯಾವುದಾದರೂ ಬೆಳೆಯನ್ನು ಬೆಳೆಯಬೇಕಾದರೆ ಭೂಮಿಯನ್ನು ಉತ್ತುವುದರಿಂದ ಹಿಡಿದು ಬೀಜ ಬಿತ್ತುವುದು, ಗೊಬ್ಬರವನ್ನು ಬಳಸುವುದು ಹಾಗೆಯೇ ರಾಸಾಯನಿಕ ಔಷಧಿಗಳನ್ನು ಬಳಸುವುದು ಹೀಗೆ ಹಲವು ಕಾರಣಗಳಿಗಾಗಿ ಹಣದ ಅವಶ್ಯಕತೆ ಇರುತ್ತದೆ. ಈ ಹಣವನ್ನು ಅವರು ಹೊಂದಿರುವುದಿಲ್ಲ ಹಾಗಾಗಿ ಅದನ್ನು ಪಡೆಯಬೇಕೆಂದರೆ ತಮ್ಮ ತಮ್ಮ ಊರುಗಳಲ್ಲಿಯ ಜಮೀನ್ದಾರರನ್ನು ಅವಲಂಬಿಸಿರುವುದು ಕಂಡುಬಂದಿದೆ. ಇದು ಈ ಭಾಗದಲ್ಲಿನ ನೈಜ ಸ್ಥಿತಿ.

ಬೂದಗುಂಪಾ ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿ ರೈತ ಸಂಘಟನೆ ಕಾರ್ಯ ನಿರ್ವಹಿಸುತ್ತಿದೆ. ಸರಕಾರದಿಂದ ಬಂದಂತಹ ಯಾವುದೇ ಅಭಿವೃದ್ಧಿ ಪರ ಯೋಜನೆಯಾಗಲೀ ಅದರ ಕುರಿತಾದ ಅರಿವನ್ನು ಜನರಿಗೆ ಮೂಡಿಸುತ್ತಿದೆ. ಬೂದಗುಂಪಾ ಗ್ರಾಮ ಪಂಚಾಯತಿಯಲ್ಲಿ ಉದ್ಯೋಗ ಖಾತರಿ ಯೋಜನೆಯನ್ನು ಜಾರಿಗೆ ತರುವಲ್ಲಿ ವಿಫಲವಾದಂತಹ ಸಂದರ್ಭದಲ್ಲಿ ರೈತ ಸಂಘಟನೆಯು ಜನರಿಗೆ ಈ ಯೋಜನೆಯ ಅರಿವನ್ನು ಮೂಡಿಸಿದೆ. ಹಾಗೆಯೇ ಜನರು ಈ ಯೋಜನೆಯಡಿಯಲ್ಲಿ ಕೆಲಸ ಕೇಳುವಂತೆ ಪ್ರೇರೇಪಿಸಿದೆ. ಆದರೆ ಹೀಗೆ ಉದ್ಯೋಗ ಖಾತರಿ ಯೋಜನೆಯ ಬಗ್ಗೆ ಅರಿವು ಮೂಡಿಸಲು ಮುಂದಾದ ಸಂದರ್ಭದಲ್ಲಿ ಮೊದಲು ಬೂದಗುಂಪ ಗ್ರಾಮದಲ್ಲಿನ ಬಡ ಕುಟುಂಬದ ಮಹಿಳಾ ಕೂಲಿಕಾರರನ್ನು, ಸಣ್ಣ ಮತ್ತು ಅತೀ ಸಣ್ಣ ರೈತರನ್ನು ಮತ್ತು ಪುರುಷ ಕೂಲಿಕಾರರನ್ನು ರೈತ ಸಂಘಟನೆಯಲ್ಲಿ ಸದಸ್ಯರಾಗುವಂತೆ ಮಾಡಿದ್ದಾರೆ. ನಂತರ ಗ್ರಾಮ ಪಂಚಾಯತಿಯಲ್ಲಿನ

ಯೋಜನೆಗಳ ಬಗ್ಗೆ ಅರಿವು ಮೂಡಿಸುವ ಕಾರ್ಯ ಪ್ರಾರಂಭಿಸಿದ್ದಾರೆ. ಹೀಗೆ ಮಾಡುವುದರ ಮೂಲಕ ತಮ್ಮ ಸಂಘಟನೆಯನ್ನು ಬಲ ಪಡಿಸಿಕೊಳ್ಳುವ ಕಾರ್ಯಕ್ಕೆ ಮುಂದಾಗಿದ್ದಾರೆ. ಬಡ ಕೂಲಿಕಾರರು, ಸಣ್ಣ ಮತ್ತು ಅತೀ ಸಣ್ಣ ರೈತರು ಇವರೆಲ್ಲರ ಸಹಾಯದಿಂದ ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿನ ಮೂಲಭೂತ ಸಮಸ್ಯೆಗಳಿಗೂ ಪರಿಹಾರವನ್ನು ಕಂಡುಕೊಂಡಿದ್ದಾರೆ. ಆದರೆ ಗ್ರಾಮದಲ್ಲಿನ ಎಲ್ಲಾ ಬದಲಾವಣೆಗೆ ಬಡ ಕೂಲಿಕಾರರು, ಸಣ್ಣ ಮತ್ತು ಅತೀ ಸಣ್ಣ ರೈತರು ಕಾರಣಕರ್ತರಾಗಿದ್ದರೂ ಇವರ್‍ಯಾರೂ ಮುನ್ನಲೆಗೆ ಬರಲಿಲ್ಲ. ಬದಲಾಗಿ ರೈತ ಸಂಘಟನೆಯ ಹೆಸರು ಮುನ್ನಲೆಗೆ ಬಂದಿರುವುದು ಕಂಡುಬಂದಿದೆ. ಕಾರಣವೆಂದರೆ ಈ ಸಂಘಟನೆಗೆ ಸೇರಿದ ಬಡ ಕೂಲಿಕಾರರು, ಸಣ್ಣ ಮತ್ತು ಅತೀ ಸಣ್ಣ ರೈತರೆಲ್ಲರೂ ಈಗಾಗಲೇ ರೈತ ಸಂಘಟನೆಯ ಸದಸ್ಯತ್ವವನ್ನು ಪಡೆದುಕೊಂಡಿದ್ದರು. ಮತ್ತು ಅವರ ಬೆಂಬಲದ ಮೂಲಕ ಹೋರಾಟಕ್ಕೆ ಇಳಿದಿದ್ದರು. ಈ ಕಾರಣಕ್ಕಾಗಿ ಕೂಲಿಕಾರರಾಗಲೀ ಅಥವಾ ಸಣ್ಣ ಮತ್ತು ಅತಿ ಸಣ್ಣ ರೈತರಾಗಲೀ ಸಮಾಜದಲ್ಲಿ ಗುರುತಿಸಿಕೊಳ್ಳಲಿಲ್ಲ. ಮುಂದೆ ರೈತ ಸಂಘಟನೆಯು ಬೂದಗುಂಪಾ ಗ್ರಾಮ ಪಂಚಾಯತಿಯ ಪಕ್ಕದ ಗ್ರಾಮ ಪಂಚಾಯತಿಗಳಾದ ಇಂದರಗಿ, ಇರಕಲ್‌ಗಡಾ, ಹಾಸಗಲ್ ಮತ್ತು ಹಿರೇಬಗನಾಳ್‌ಗಳಲ್ಲಿಯೂ ತನ್ನ ಸಂಘಟನೆಯನ್ನು ಬಲಪಡಿಸಿಕೊಂಡಿದೆ. ಅಂದರೆ ಈ ಭಾಗದಲ್ಲಿನ ಬಡ ಕೂಲಿಕಾರರನ್ನು, ಸಣ್ಣ ರೈತರನ್ನು ತಮ್ಮ ಸಂಘಟನೆಯ ಸದಸ್ಯತ್ವವನ್ನು ಪಡೆಯುವಂತೆ ಪ್ರೇರೇಪಿಸಿದ್ದಾರೆ. ಹೀಗೆ ಬಡ ಕೂಲಿಕಾರರು, ಸಣ್ಣ ಮತ್ತು ಅತೀ ಸಣ್ಣ ರೈತರು ತಮ್ಮ ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿ ಯಾವುದೇ ಹೋರಾಟವನ್ನು ಮಾಡಿದರೂ ಸಹ ರೈತ ಸಂಘಟನೆಯ ಹೆಸರಿನಲ್ಲಿಯೇ ಮಾಡಬೇಕಾದ ಅನಿವಾರ್ಯತೆಗೆ ಒಳಗಾದರು. ಇದರ ಪರಿಣಾಮವೇ ಮುಂದೆ ಕೊಪ್ಪಳದಲ್ಲಿನ ಲಾಠಿಚಾರ್ಜ್ ಘಟನೆಯ ಪರಿಣಾಮವನ್ನು ಎದುರಿಸಬೇಕಾಯಿತು. ಉದ್ಯೋಗ ಖಾತರಿ ಯೋಜನೆಯಲ್ಲಿ ದುಡಿದ ಕೂಲಿಯನ್ನು ಕೇಳಿದ್ದಕ್ಕಾಗಿ ಕೊಪ್ಪಳದಲ್ಲಿ ಬಡ ಕೂಲಿಕಾರರು ಮತ್ತು ಸಣ್ಣ ಮತ್ತು ಅತಿಸಣ್ಣ ರೈತರು ಪೊಲೀಸರಿಂದ ಲಾಠಿ ಏಟಿಗೆ ಬಲಿಯಾಗಬೇಕಾಯಿತು. ಇದರ ಸಂಪೂರ್ಣ ಮಾಹಿತಿಯನ್ನು ವಿಶ್ಲೇಷಣೆಗೆ ಒಳಪಡಿಸುವುದು ಮುಖ್ಯವೆನಿಸುತ್ತದೆ.

ಬೂದಗುಂಪಾ, ಇಂದರಗಿ, ಇಲಕಲ್‌ಗಡಾ, ಹಾಸಗಲ್ ಮತ್ತು ಹಿರೇಬಗನಾಳ್ ಗ್ರಾಮ ಪಂಚಾಯತಿ ವ್ಯಾಪ್ತಿಗಳಲ್ಲಿನ ಬಡ ಕೂಲಿಕಾರರು, ಸಣ್ಣ ಮತ್ತು ಅತೀ ಸಣ್ಣ ರೈತರು ಉದ್ಯೋಗ ಖಾತರಿ ಯೋಜನೆಯಲ್ಲಿ ತಮಗೆ ಕೆಲಸ ಕೊಡುವಂತೆ ಗ್ರಾಮ ಪಂಚಾಯತಿಯ ಮೇಲೆ ಒತ್ತಡವನ್ನು ಹಾಕಿದ್ದಾರೆ. ಪರಿಣಾಮವಾಗಿ ಗ್ರಾಮ ಪಂಚಾಯತಿಯ ಅಧಿಕಾರಿಗಳು ಮತ್ತು ಚುನಾಯಿತ ಸದಸ್ಯರು ಉದ್ಯೋಗ ಖಾತರಿಯನ್ನು ಅನುಷ್ಠಾನಗೊಳಿಸಿ ಇವರನ್ನು ಕೆಲಸಕ್ಕೆ ಆಹ್ವಾನಿಸಿದ್ದಾರೆ. ಈ ಆಹ್ವಾನದ ಪ್ರಕಾರ ಬೂದುಗುಂಪ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಸುಮಾರು ೪೦೦ಜನ, ಇಂದರಗಿ ಗ್ರಾಮ ಪಂಚಾಯತಿಯಲ್ಲಿ ೩೫೦ಜನ, ಇರಕಲ್‌ಗಡಾ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಸುಮಾರು ೪೦೦ ಜನ, ಹಾಸಗಲ್

ಗ್ರಾಮ ಪಂಚಾಯತಿಯಲ್ಲಿ ೩೫೦ ಜನ ಮತ್ತು ಹಿರೇಬಗನಾಳ್ ಗ್ರಾಮ ಪಂಚಾಯತಿಯಲ್ಲಿ ೩೦೦ ಜನ ಕೂಲಿ ಕಾರ್ಮಿಕರು ಏಕಕಾಲದಲ್ಲಿ ಯೋಜನೆಯ ಕೆಲಸದಲ್ಲಿ ತೊಡಗಿಕೊಂಡರು. ಪ್ರತಿಯೊಂದು ಕುಟುಂಬದಿಂದ ಕನಿಷ್ಠ ಇಬ್ಬರು ಮೂರು ಜನರಂತೆ ನಿರಂತರವಾಗಿ ನಲವತ್ತರಿಂದ ನಲವತ್ತೈದು ದಿನಗಳ ಕಾಲ ಕೆಲಸವನ್ನು ಮಾಡಿದ್ದಾರೆ. ಒಂದು ಆರ್ಥಿಕ ವರ್ಷದಲ್ಲಿ ಪಂಚಾಯತಿಯವರು ನೀಡಬೇಕಾದ ನೂರು ದಿನಗಳ ಕೆಲಸವನ್ನು ಪೂರೈಸಿದ್ದಾರೆ. ಯೋಜನೆಯ ನಿಯಮದ ಪ್ರಕಾರ ಕೆಲಸ ಮಾಡಿದ ಹದಿನೈದು ದಿನಗಳ ಒಳಗಾಗಿ ಕೂಲಿ ಪಾವತಿಸಬೇಕು. ಆದರೆ ಕೆಲಸ ಮುಗಿಸಿ ಒಂದು ತಿಂಗಳಿನ ಮೇಲಾದರೂ ಗ್ರಾಮ ಪಂಚಾಯತಿಯ ಅಧಿಕಾರಿಗಳು ಕೆಲಸ ಮಾಡಿದ ಕೂಲಿಕಾರರಿಗೆ ಕೂಲಿ ಪಾವತಿಸಲಿಲ್ಲ. ಬದಲಾಗಿ ಗ್ರಾಮ ಪಂಚಾಯತಿ ಸದಸ್ಯರು ಮತ್ತು ಅಧಿಕಾರಿಗಳು ಸರಕಾರದಿಂದ ಹಣ ಬಿಡುಗಡೆಯಾಗಿಲ್ಲವೆಂದು ಸುಳ್ಳು ನೆಪಗಳನ್ನು ಹೇಳುತ್ತಾ ಸಾಗಿದ್ದಾರೆ. ಇದು ಸುಮಾರು ಒಂದರಿಂದ ಒಂದೂವರೆ ವರ್ಷದವರೆಗೆ ಹೀಗೆ ಮುಂದುವರೆಯಿತು. ಆದರೆ ಕೂಲಿ ಪಾವತಿಯಲ್ಲಿ ಅವ್ಯವಹಾರ ನಡೆದಿತ್ತು. ಇದು ಗ್ರಾಮದವರಾರಿಗೂ ಗಮನಕ್ಕೆ ಬಂದಿರಲಿಲ್ಲ. ಅಂದರೆ ಪಂಚಾಯತಿ ಸದಸ್ಯರು ಮತ್ತು ಅಧಿಕಾರಿ ವರ್ಗದವರು ಸೇರಿಕೊಂಡು ಉದ್ಯೋಗ ಖಾತರಿ ಯೋಜನೆಯಲ್ಲಿ ಕೆಲಸ ಮಾಡದೆ ಇರುವಂತ, ಆರ್ಥಿಕವಾಗಿ ಸಬಲರಾದವರ ಹೆಸರಲ್ಲಿ ಹಾಜರಾತಿಯನ್ನು ಹಾಕಿ ಅವರ ಹೆಸರಿಗೆ ಹಣವನ್ನು ಪಾವತಿ ಮಾಡಿದ್ದರು. ಆ ಮೂಲಕ ನಿಜವಾದ ಕೂಲಿಕಾರರಿಗೆ ಅನ್ಯಾಯವನ್ನು ಎಸಗಿದ್ದರು. ಈ ವಿಷಯ ಬಹಿರಂಗಗೊಂಡಿತು. ಇದನ್ನು ತಿಳಿದಂತ ನಿಜವಾದ ಕೂಲಿ ಕಾರ್ಮಿಕರು, ತಾವು ಕೆಲಸ ಮಾಡಿದ ನೂರು ದಿನಗಳ ಕೂಲಿಯನ್ನು ಪಾವತಿಸಬೇಕೆಂದು ಬೂದಗುಂಪ, ಇಂದರಗಿ, ಇರಕಲ್‌ಗಡಾ, ಹಾಸಗಲ್ ಮತ್ತು ಹಿರೇಬಗನಾಳ್ ಗ್ರಾಮ ಪಂಚಾಯತಿಗಳ ಮುಂದೆ ಧರಣಿಯನ್ನು ಮಾಡಿದ್ದಾರೆ. ಆಗ ಧರಣಿ ಕುಳಿತ ಸ್ಥಳಕ್ಕೆ ಬಂದ ಪಂಚಾಯತಿಯ ಮೇಲಾಧಿಕಾರಿಗಳು ಈ ಪ್ರಕರಣವನ್ನು ಕೂಲಂಕುಶವಾಗಿ ಪರಿಶೀಲಿಸಿ ಹಣವನ್ನು ನಿಜವಾದ ಕೂಲಿ ಕಾರ್ಮಿಕರಿಗೆ ಪಾವತಿಸುವಂತ ಕೆಲಸ ಮಾಡುತ್ತೇವೆಂದು ಭರವಸೆಯನ್ನು ನೀಡಿದರು. ಆದರೆ ಈ ಭರವಸೆ ಹುಸಿಯಾಯಿತು. ಏಕೆಂದರೆ ತಪ್ಪಿತಸ್ಥರ ವಿರುದ್ಧ ಯಾವುದೇ ರೀತಿಯ ಕಾನೂನು ರೀತಿಯ ಕ್ರಮಕೈಗೊಳ್ಳದೆ ಇಡೀ ಪ್ರಕರಣವನ್ನು ಮುಚ್ಚಿ ಹಾಕುವಂತಹ ಹುನ್ನಾರಗಳು ನಡೆದವು.

ಇದರಿಂದಾಗಿ ಸಮಸ್ಯೆ ಮತ್ತೆ ದೊಡ್ಡದಾಯಿತು. ಮುಂದೆ ಎಲ್ಲರೂ ಸೇರಿ ಕೊಪ್ಪಳ ತಾಲೂಕು ಪಂಚಾಯ್ತಿಯ ಮುಂದೆ ಧರಣಿಯನ್ನು ಮಾಡಲು ತೀರ್ಮಾನ ತೆಗೆದುಕೊಂಡಿದ್ದಾರೆ. ಒಂದು ವೇಳೆ ಅದಕ್ಕೂ ಮೀರಿ ಕೂಲಿ ಪಾವತಿಸದೇ ಹೋದರೆ ತಾಲೂಕು ಪಂಚಾಯ್ತಿಗೆ ಬೀಗಮುದ್ರೆಯನ್ನು ಹಾಕಲು ನಿರ್ಧರಿಸಿದ್ದರು. ಆ ನಂತರ ಕೊಪ್ಪಳ ತಾಲೂಕ ಪಂಚಾಯತಿಗೆ ಹೋಗಿ ಸಂಬಂಧಿಸಿದ ಜಿಲ್ಲಾಧಿಕಾರಿಗಳಿಗೆ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಮತ್ತು ತಾಲೂಕು ಪಂಚಾಯ್ತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ

ಮನವಿಪತ್ರವನ್ನು ಕೊಡಲಾಯಿತು. ಆದರೆ ಯಾವೊಬ್ಬ ಅಧಿಕಾರಿಯೂ ಈ ಸಮಸ್ಯೆಯನ್ನು ಪರಿಹರಿಸೋಕೆ ಮುಂದೆ ಬರಲಿಲ್ಲ.

ದಿನಾಂಕ ೧೮ ಮಾರ್ಚ್ ೨೦೧೧ರಂದು ತಾಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿ ಅವರು ಉದ್ಯೋಗ ಖಾತರಿ ಯೋಜನೆಯ ಬಿಲ್ ಪಾವತಿ ವಿಳಂಬವಾಗಿರುವ ಕುರಿತು ಚರ್ಚಿಸಲು ಕೂಲಿಕಾರರ ಸಮ್ಮುಖದಲ್ಲಿ ವಿಶೇಷ ಸಭೆಯನ್ನು ಕರೆದರು. ಈ ಸಭೆಯಲ್ಲಿ ಮಹಿಳಾ ಹಾಗೂ ಪುರುಷ ಕಾರ್ಮಿಕರು, ಕರ್ನಾಟಕ ರಾಜ್ಯ ರೈತ ಸಂಘ, ಹಸಿರು ಸೇನೆ ಮತ್ತು ಸರಕಾರಿ ಅಧಿಕಾರಿಗಳು ಪಾಲ್ಗೊಳ್ಳಲು ಸೂಚಿಸಲಾಗಿತ್ತು. ಆದರೆ ಈ ಸಭೆಗೆ ಯಾವೊಬ್ಬ ಅಧಿಕಾರಿ ಹಾಗೂ ತಾಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿ ಕಛೇರಿ ಒಳಗಿದ್ದರೂ ಸಭೆಗೆ ಹಾಜರಾಗಲಿಲ್ಲ. ಇದರಿಂದ ಸಿಟ್ಟಿಗೆದ್ದ ಮಹಿಳಾ ಕೂಲಿಕಾರ್ಮಿಕರು ತಾಲೂಕ ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗೆ ಘೇರಾವ್ ಹಾಕಿ ತರಾಟೆಗೆ ತೆಗೆದುಕೊಂಡಿದ್ದಾರೆ. ಆಗ ತಾಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿ ಹೊರಹೋಗಲು ಯತ್ನಿಸಿದ್ದಾರೆ. ಆದರೆ ಮಹಿಳಾ ಕೂಲಿ ಕಾರ್ಮಿಕರು ಅವರನ್ನು ಹೊರ ಹೋಗಲು ತಡೆದಿದ್ದಾರೆ. ಪರಿಸ್ಥಿತಿ ಕೈ ಮೀರುವುದನ್ನು ಅರ್ಥಮಾಡಿಕೊಂಡ ಕಾರ್ಯನಿರ್ವಾರ್ಹಕ ಅಧಿಕಾರಿ ಅವರು 'ಪ್ರಕರಣವನ್ನು ಪರಿಶೀಲಿಸಿ ಕ್ರಮ ಕೈಗೊಳ್ಳುತ್ತೇನೆ' ಎಂದು ಹೇಳಿದ ಮೇಲೆ ಘೇರಾವ್ ಹಿಂಪಡೆದಿದ್ದಾರೆ. ಆದ್ರೆ ಇದಾವುದೂ ಫಲಕಾರಿಯಾಗಲಿಲ್ಲ. ಈ ಮೊದಲೇ ಮನವಿ ಪತ್ರದಲ್ಲಿ ತಿಳಿಸಿದಂತೆ ದಿನಾಂಕ ೨೨-೩-೨೦೧೧ರಂದು ಈ ಐದು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವಂತ ಪ್ರತಿಯೊಂದು ಗ್ರಾಮದ ಕೂಲಿಕಾರ್ಮಿಕ ಮಹಿಳೆಯರು ಮತ್ತು ಪುರುಷರು ಸುಮಾರು ೫೦೦ ರಿಂದ ೬೦೦ ಜನ ಸೇರಿ ಕೊಪ್ಪಳ ತಾಲೂಕು ಪಂಚಾಯತಿಯ ಎದುರು ಧರಣಿಗೆ ಕುಳಿತುಕೊಂಡಿದ್ದಾರೆ. ಇದು ಅನಿರ್ಧಿಷ್ಠಾವಧಿವರೆಗೆ ಮುಂದುವರೆಯಿತು. ಮುಂದೆ ಈ ಧರಣಿ ಬೇರೆಯದೇ ಸ್ವರೂಪವನ್ನು ಪಡೆಯಿತು.

ಕೂಲಿ ಕಾರ್ಮಿಕರಿಂದ ಪ್ರಾರಂಭವಾದ ಈ ಧರಣಿ ಮೊದಲ ದಿನ ಶಾಂತವಾಗಿ ನಡೆಯುತ್ತದೆ. ಈ ಧರಣಿಯಲ್ಲಿ ಹೆಚ್ಚಾಗಿ ಮಹಿಳಾ ಕೂಲಿ ಕಾರ್ಮಿಕರು ಭಾಗವಹಿಸಿದ್ದರು. ಅದರಲ್ಲೂ ವಿಶೇಷವಾಗಿ ಚಿಕ್ಕ ಮಕ್ಕಳ ತಾಯಂದಿರು, ವಿಧವಾ ಮಹಿಳೆಯರು ಮತ್ತು ವಯಸ್ಸಾದ ಮಹಿಳೆಯರಿದ್ದರು. ಧರಣಿಯ ಮೊದಲನೆಯ ದಿನ ಮುಗಿಯುತ್ತಾ ಬಂದರೂ ಯಾವ ಅಧಿಕಾರಿಯೂ ಸಮಸ್ಯೆಯನ್ನು ಆಲಿಸಲು ಬರಲಿಲ್ಲ. ಇದರಿಂದಾಗಿ ಧರಣಿ ನಿರತ ಮಹಿಳಾ ಮತ್ತು ಪುರುಷ ಕಾರ್ಮಿಕರು ಆ ದಿನ ರಾತ್ರಿ ತಾಲೂಕು ಪಂಚಾಯತಿಯ ಆವರಣದಲ್ಲಿಯೆ ಕಳೆದಿದ್ದಾರೆ. ಧರಣಿಯು ಎರಡನೇ ದಿನಕ್ಕೆ ಮುಂದುವರೆಯಿತು. ಆ ದಿನ ಧರಣಿಯಲ್ಲಿ ನೂರಾರು ಜನ ಕೂಲಿ ಕಾರ್ಮಿಕರು ಮತ್ತು ರೈತ ಕೂಲಿಕಾರ್ಮಿಕರು ಹೊಸದಾಗಿ ಸೇರಿಕೊಂಡರು. ಹೆಚ್ಚೆಚ್ಚು ಜನ ಕೂಲಿಕಾರ್ಮಿಕರು ಧರಣಿಯಲ್ಲಿ ಪಾಲ್ಗೊಂಡಂತೆಲ್ಲ ಧರಣಿಯು ತೀವ್ರಗತಿಯ ಸ್ವರೂಪ ಪಡೆಯಿತು. ತಪ್ಪಿತಸ್ಥ ಚುನಾಯಿತ ಪ್ರತಿನಿಧಿಗಳ ವಿರುದ್ಧ

ಮತ್ತು ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಘೋಷಣೆಗಳನ್ನು ಹಾಕಿದ್ದಾರೆ. ಆ ಮೂಲಕ ತಪ್ಪಿತಸ್ಥರಿಗೆ ಕಾನೂನು ರೀತಿಯ ಸೂಕ್ತ ಶಿಕ್ಷೆಯಾಗಬೇಕೆಂದು ಒತ್ತಾಯಿಸಿದ್ದಾರೆ. ಇಷ್ಟೆಲ್ಲ ಬೆಳವಣಿಗೆಗಳು ನಡೆದರೂ ಕೂಡ ಚುನಾಯಿತ ಸದಸ್ಯರಾಗಲಿ, ಅಧಿಕಾರಿಗಳಾಗಲಿ ಧರಣಿ ನಿರತ ಕೂಲಿ ಕಾರ್ಮಿಕರನ್ನು ಮಾತನಾಡಿಸಲು ಬರಲಿಲ್ಲ. ಧರಣಿಯ ಎರಡನೇ ದಿನವೂ ಮುಗಿಯಿತು. ಇದರಿಂದಾಗಿ ಧರಣಿ ನಿರತ ಮಹಿಳಾ ಕೂಲಿ ಕಾರ್ಮಿಕರು ಹಾಗೂ ಪುರುಷ ಕೂಲಿಕಾರ್ಮಿಕರು ತುಂಬಾ ಕೋಪಗೊಂಡಿದ್ದರು. ಇದಕ್ಕೆ ಕಾರಣ ಇಲ್ಲದಿರಲಿಲ್ಲ. ಚಿಕ್ಕ-ಚಿಕ್ಕ ಮಕ್ಕಳನ್ನು, ವಯಸ್ಸಾದ ವೃದ್ಧರನ್ನು ಮನೆಯಲ್ಲಿ ಬಿಟ್ಟು ಬಂದಿದ್ದರು ಹಾಗಾಗಿ ಅವರ ಕೋಪ ಮುಗಿಲು ಮುಟ್ಟಿತ್ತು. ಈ ಎಲ್ಲವನ್ನು ಸಹಿಸಿಕೊಂಡು ಎರಡನೆಯ ದಿನದ ರಾತ್ರಿಯನ್ನು ತಾಲೂಕು ಪಂಚಾಯ್ತಿಯ ಆವರಣದಲ್ಲಿಯೇ ಕಳೆದಿದ್ದಾರೆ. ಏಕೆಂದರೆ ನಾಳೆಯಾದರೂ ಸಂಬಂಧಿಸಿದ ಅಧಿಕಾರಿಗಳು ಬಂದು ತಮ್ಮ ಸಮಸ್ಯೆಯನ್ನು ಪರಿಹರಿಸಿ ತಾವು ದುಡಿದಂತ ಕೂಲಿ ಹಣ ತಮ್ಮ ಕೈ ಸೇರುವಂತೆ ಮಾಡಬಹುದು ಎನ್ನುವಂತ ಭರವಸೆಯೊಂದಿಗೆ ಮತ್ತು ನೂರು ದಿನಗಳ ಕಾಲ ಬೆವರು ಸುರಿಸಿ ದುಡಿದ ಬೆವರಿನ ಪ್ರತಿಫಲ ಸಿಕ್ಕಿದ್ದೆಯಾದರೆ ತಮ್ಮ ತಕ್ಷಣದ ಆರ್ಥಿಕ ಸಂಕಷ್ಟಗಳು ಮಾಯವಾಗುತ್ತವೆ ಎನ್ನುವಂತಹ ಕಾರಣದಿಂದಾಗಿ ಎರಡನೆಯ ದಿನವೂ ಕಳೆದಿದ್ದಾರೆ.

ಧರಣಿಯು ಮೂರನೆಯ ದಿನಕ್ಕೆ ಮುಂದುವರೆಯಿತು. ಆ ದಿನವೂ ಯಾವೊಬ್ಬ ಅಧಿಕಾರಿಯು ಬಂದು ಮಾತನಾಡಿಸಲಿಲ್ಲ. ಇದರಿಂದ ಕೋಪೋದ್ರಿಕ್ತಗೊಂಡ ಎಲ್ಲಾ ಕಾರ್ಮಿಕರು ಮನವಿ ಪತ್ರದಲ್ಲಿ ತಿಳಿಸಿರುವಂತೆ ನಾಲ್ಕನೆಯ ದಿನ ತಾಲೂಕು ಪಂಚಾಯತಿಗೆ ಬೀಗ ಮುದ್ರೆಯನ್ನು ಹಾಕಲು ಮುಂದಾಗಿದ್ದಾರೆ. ಆಗ ದಿಢೀರನೆ ಆಗಮಿಸಿದ ಪೊಲೀಸ್ ಅಧಿಕಾರಿಗಳು ಇದ್ದಕ್ಕಿದ್ದಂತೆ ಇವರ ಮೇಲೆ ಲಾಠಿ ಚಾರ್ಜ್ ಮಾಡಿದ್ದಾರೆ. ಮಹಿಳೆಯರು, ವಯಸ್ಸಾದ ವೃದ್ಧರು, ಚಿಕ್ಕ ಮಕ್ಕಳ ತಾಯಂದಿರು ಎನ್ನದೆ ಪ್ರತಿಯೊಬ್ಬ ಕೂಲಿ ಕಾರ್ಮಿಕರನ್ನು ಮನಬಂದಂತೆ ಲಾಠಿಯಿಂದ ಥಳಿಸಿದ್ದಾರೆ. ಪೆಂಡಾಲಿಗೆ ಹಾಕಿದ ಕಟ್ಟಿಗೆಯಿಂದ ಹೊಡೆದಿದ್ದಾರೆ. ಬೂಟುಗಾಲಿನಿಂದ ಒದ್ದಿದ್ದಾರೆ. ಈ ಘಟನೆಯಲ್ಲಿ ಕೆಲವರಿಗೆ ಕೈ ಕಾಲು ಮುರಿದಿವೆ. ಹಾಗೆಯೇ ಮಹಿಳೆಯರೆಂದು ಲೆಕ್ಕಿಸದೆ ಮಹಿಳೆಯರ ಮೈಮೇಲಿನ ಬಟ್ಟೆಗಳನ್ನು ಹಿಡಿದು ಎಳೆದಾಡಿ ಓಡಾಡಿಸಿ ಹೊಡೆದಿದ್ದಾರೆ. ಪೊಲೀಸರು ಇರಕಲ್‌ಗಡಾದ ಅನ್ನಪೂರ್ಣಮ್ಮನ ತುರುಬು ಹಿಡಿದು ಜೋರಾಗಿ ತಳ್ಳಿದ ಪರಿಣಾಮವಾಗಿ ಆಕೆ ತಾಲೂಕು ಪಂಚಾಯತಿಯ ಮೆಟ್ಟಿಲಿಗೆ ಬಿದ್ದಿದ್ದಾಳೆ. ಅದರಿಂದ ಆಕೆಯ ಗರ್ಭಕೋಶಕ್ಕೆ ಬಲವಾದ ಪೆಟ್ಟು ಬಿದ್ದು ತನ್ನ ಗರ್ಭಕೋಶವನ್ನೇ ಕಳೆದುಕೊಂಡಿದ್ದಾಳೆ. . ಹಲವರಿಗೆ ಗಾಯಗಳಾಗಿವೆ. ಕೈ ಕಾಲುಗಳು ಮುರಿದಿವೆ.

ಧರಣಿಯನ್ನು ಮೊದಲು ಕೂಲಿಕಾರರು, ಸಣ್ಣ ಮತ್ತು ಅತೀ ಸಣ್ಣ ರೈತರೆಲ್ಲರೂ ಸೇರಿ ಮಾಡಲು ಮುಂದಾಗಿದ್ದರು ಆದರೆ ಅವರಾರಿಗೂ ಧರಣಿಯನ್ನು ಹೇಗೆ ಮಾಡಬೇಕೆಂಬ ಸಮರ್ಪಕವಾದ ಮಾಹಿತಿ ಅವರಲ್ಲಿ ಇರಲಿಲ್ಲ. ಹಾಗಾಗಿ ಇವರು ತಮ್ಮ ಗ್ರಾಮದಲ್ಲಿನ ರೈತ

ಸಂಘಟನೆಯ ಮೊರೆ ಹೋಗಿದ್ದಾರೆ. ರೈತ ಸಂಘಟನೆಯವರು ಈ ಹೋರಾಟಕ್ಕೆ ಬೇಕಾದಂತಹ ರೂಪುರೇಷೆಯನ್ನು ತಯಾರಿಸಿತು. ನಂತರ ಅವರ ನೇತೃತ್ವದಲ್ಲಿಯೇ ಕೂಲಿಕಾರರು, ಸಣ್ಣ ಮತ್ತು ಅತೀ ಸಣ್ಣ ರೈತರು ಧರಣಿಯಲ್ಲಿ ಪಾಲ್ಗೊಳ್ಳಬೇಕಾದ ಅನಿವಾರ್ಯತೆಯನ್ನು ಎದುರಿಸಬೇಕಾಯಿತು. ಈ ಧರಣಿಯ ನೇತೃತ್ವವನ್ನು ರೈತ ಸಂಘಟನೆಯ ಮುಖಂಡರೇ ವಹಿಸಿಕೊಂಡಿದ್ದರು. ಹಾಗಾಗಿ ಲಾಠಿ ಚಾರ್ಜ್ ಸಂದರ್ಭದಲ್ಲಿ ಧರಣಿಯ ನೇತೃತ್ವ ವಹಿಸಿದ್ದ ಕರ್ನಾಟಕ ರಾಜ್ಯ ರೈತ ಸಂಘದ ಕೊಪ್ಪಳ ಜಿಲ್ಲಾಧ್ಯಕ್ಷರಾದ ಹನುಮಂತಪ್ಪ ಹೊಳೆಯಾಚೆ, ಸಿಪಿಐಎಂಎಲ್‌ನ ಪ್ರದಾನ ಕಾರ್ಯದರ್ಶಿ ಕೆ.ಬಿ.ಗೋನಾಳ್, ಸಿಐಟಿಯು ಜಿಲ್ಲಾಧ್ಯಕ್ಷರಾದ ಬಸವರಾಜ ನರೇಗಲ್, ಭೀಮಸೇನ ಒಂಟೆತ್ತಿನವರ್ ಮತ್ತು ರಾಜ್ಯ ರೈತ ಸಂಘದ ಸದಸ್ಯರಾದ ದುರುಗಪ್ಪ ಇಂದರಗಿ, ರಮೇಶ ಬೇಳೂರು ಮತ್ತು ರಾಮಣ್ಣ ಇಂದರಗಿ ಅವರನ್ನು ಒಟ್ಟು ಒಂಬತ್ತು ಜನರನ್ನು ಧರಣಿ ಸಂದರ್ಭದಲ್ಲಿ ಅರೆಸ್ಟ್ ಮಾಡಿ ಬಳ್ಳಾರಿಯ ಸೆಂಟ್ರಲ್ ಜೈಲಿಗೆ ಹಾಕಿದರು. ಇದಾದ ನಂತರ ಬಂಧನಕ್ಕೊಳಗಾದವರನ್ನು ಬಿಡುಗಡೆ ಮಾಡಬೇಕೆಂದು ಕೂಲಿ ಕಾರ್ಮಿಕ ಮಹಿಳೆಯರು ತಾಲೂಕು ಪಂಚಾಯತಿ ಮುಂದೆ ಧರಣಿ ಕುಳಿತುಕೊಂಡಿದ್ದಾರೆ. ಈ ಸಂದರ್ಭದಲ್ಲಿ ಜಿಲ್ಲೆಯ ಮತ್ತು ಹೊರ ಜಿಲ್ಲೆಗಳ ಪ್ರಗತಿಪರ ಸಂಘಟನೆಗಳ ನಾನಾ ಮುಖಂಡರು ಇವರನ್ನು ಬೆಂಬಲಿಸಿದ್ದಾರೆ. ಈ ಧರಣಿ ಮೂರು ದಿನಗಳವರೆಗೂ ನಡೆದರೂ ಅಧಿಕಾರಿಗಳು ಸ್ಪಂದಿಸಿಲ್ಲ. ಬದಲಾಗಿ ನೀವು ಧರಣಿ ಮುಂದುವರಿಸಿದರೆ ನಿಮ್ಮನ್ನೂ ಬಂಧಿಸುತ್ತೇವೆಂದು ಮಹಿಳೆಯರಿಗೆ ಬೆದರಿಕೆ ಹಾಕಿದ್ದಾರೆ. ಇದರಿಂದ ಭಯಭೀತರಾದ ಮಹಿಳೆಯರು ಧರಣಿ ಬಿಟ್ಟು ತಮ್ಮ ತಮ್ಮ ಊರುಗಳಿಗೆ ಮರಳಿದ್ದಾರೆ. ಇದಾದ ನಂತರ ಬಂಧನಕ್ಕೊಳಗಾದವರು ಜಾಮೀನಿನ ಮೇಲೆ ಬಿಡುಗಡೆಯಾಗಿದ್ದಾರೆ. ಕೇವಲ ಇವರ ಮೇಲಲ್ಲದೆ ಧರಣಿಯಲ್ಲಿ ಪಾಲ್ಗೊಂಡ ಅರವತ್ತೇಳು ಜನರ ಮೇಲೆ ಪೊಲೀಸ್ ಇಲಾಖೆಯು ಎಫ್‌ಐಆರ್ ಮಾಡಿ ಕೇಸ್ ದಾಖಲಿಸಿದೆ. ಈ ಅರವತ್ತೇಳು ಜನರಲ್ಲಿ ಬಡ ಕೂಲಿಕಾರರೇ ಅಧಿಕ ಸಂಖ್ಯೆಯಲ್ಲಿದ್ದಾರೆ.

ಉದ್ಯೋಗ ಖಾತ್ರಿ ಯೋಜನೆಯಲ್ಲಿ ಕೂಲಿಕಾರರು ತಾವು ದುಡಿದ ಕೂಲಿಯನ್ನು ಕೇಳಲು ತಾಲೂಕು ಪಂಚಾಯತಿಯ ಮುಂದೆ ಧರಣಿ ಮಾಡಿದವರನ್ನು ರಕ್ಷಿಸುವ ಬದಲು ಅವರನ್ನು ಹಿಂಸಿಸುವ ಕಾರ್ಯಕ್ಕೆ ಕೈ ಹಾಕಿದುದು ಪೊಲೀಸರ ಕಾರ್ಯ ವೈಖರಿಯನ್ನು ಎತ್ತಿ ಹಿಡಿಯುವಂತಿದೆ. ಏಕೆಂದರೆ ಧರಣಿ ನಿರತ ಕೂಲಿ ಕಾರ್ಮಿಕರು ಯಾವುದೇ ಸಾರ್ವಜನಿಕ ಆಸ್ತಿಗಾಗಲೀ ಅಥವಾ ಸರಕಾರದ ಆಸ್ತಿಗಾಗಲೀ ತೊಂದರೆಯನ್ನು ಮಾಡಿರಲಿಲ್ಲ. ಆ ಉದ್ದೇಶವೂ ಅವರಿಗೆ ಇರಲಿಲ್ಲ. ಬದಲಾಗಿ ತಾಲೂಕ ಪಂಚಾಯತಿಗೆ ಬೀಗಮುದ್ರೆಯನ್ನು ಹಾಕಿ ನ್ಯಾಯಕ್ಕಾಗಿ ಪ್ರತಿಭಟಿಸುವುದು ಅವರ ಉದ್ದೇಶವಾಗಿತ್ತು. ಹಾಗಾಗಿ ಮೂರು ದಿನಗಳ ಕಾಲ ಹಗಲು ರಾತ್ರಿಯೆನ್ನದೆ, ಊಟಕ್ಕಾಗಿ ಪರದಾಡುತ್ತಲೇ ಧರಣಿ ನಿರತರಾಗಿದ್ದ ಜನರು ಧರಣಿಯ ನಾಲ್ಕನೆಯ ದಿನ ತಾಲೂಕ ಪಂಚಾಯತಿ ಇಲಾಖೆಗೆ ಬೀಗ ಹಾಕಲು ಮುಂದಾದಾಗ

ಯಾವುದೇ ಮಾತುಕತೆಯಿಲ್ಲದೆ ಒಮ್ಮಿಂದೊಮ್ಮೆಲೆ ಕೂಲಿಕಾರರ ಮೇಲೆ ಎರಗಿ ಲಾಠಿಚಾರ್ಜ್ ಮಾಡಿದುದು ಪೊಲೀಸರ ಅಮಾನುಷ ಕೃತ್ಯಕ್ಕೆ ಹಿಡಿದ ಕನ್ನಡಿಯಂತಿದೆ. ಮಹಿಳೆಯರು, ಮುದುಕರು, ಮದುಕಿಯರು, ಗರ್ಭಿಣಿಯರು ಎನ್ನದೇ ಲಾಟಿಗಳಿಂದ ಸಿಕ್ಕ ಸಿಕ್ಕಲ್ಲಿ ಹೊಡೆದಿದ್ದಾರೆ. ಮಾನವೀಯ ಮೌಲ್ಯಗಳೇ ಇಲ್ಲವೇನೋ ಎಂಬಂತೆ ಕೂಲಿಕಾರರ ಮೇಲೆ ಲಾಠಿ ಚಾರ್ಜ್ ಮಾಡಿದುದನ್ನು ಕರ್ನಾಟಕದ ಹಲವಾರು ಸಂಘಟನೆಗಳು ವಿರೋಧಿಸಿದ್ದು ಈಗ ಚರಿತ್ರೆ. ಆದರೆ ಈ ಲಾಠಿಚಾರ್ಜ್‌ನಿಂದ ಎಷ್ಟೋ ಜನ ಕೂಲಿಕಾರರು ಇನ್ನೂ ಸುಧಾರಿಸಿಲ್ಲ. ಕರ್ನಾಟಕ ರಾಜ್ಯ ರೈತ ಸಂಘದ ಸದಸ್ಯರಾದ ನಿಂಗನಗೌಡರು ಹೇಳುವಂತೆ "ಕೂಲಿ ಕಾರ್ಮಿಕರಿಗೆ ಜಾಮೀನು ಸಿಗದಂತೆ ತುಂಬಾ ಕ್ರಿಟಿಕಲ್ ಆದಂತಹ ಸೆಕ್ಷನ್‌ಗಳನ್ನು ಪೊಲೀಸರು ಹಾಕಿದ್ದಾರೆ. ಕೂಲಿಕಾರ್ಮಿಕರ ಮೇಲೆ ಮಾಡಿದ ಕೇಸಿನಿಂದಾಗಿ ಕೂಲಿಕಾರ್ಮಿಕರು ಚೇತರಿಸಿಕೊಳ್ಳಲು ಸಾಧ್ಯವಾಗದೆ ಅಕ್ಷರಶಃ ಬೀದಿಪಾಲಾಗಿದ್ದಾರೆ. ಇವತ್ತಿಗೂ ಕೇಸ್ ಕೋರ್ಟಿನಲ್ಲಿ ನಡಿಯುತ್ತಿದೆ. ಇದರಿಂದಾಗಿ ಕೂಲಿಕಾರರು ಸತತವಾಗಿ ನಾಲ್ಕು ವರ್ಷಗಳಿಂದ ಕೋರ್ಟಿಗೆ ಅಡ್ಡಾಡುತ್ತಿದ್ದಾರೆ. ಆವತ್ತಿನಿಂದ ಇವತ್ತಿನವರೆಗೂ ಉದ್ಯೋಗ ಖಾತ್ರಿಯ ಕೆಲಸವೆಂದರೆ ಬೆಚ್ಚಿ ಬೀಳುವಂತ ಮತ್ತು ಭಯದ ವಾತಾವರಣದಲ್ಲಿ ಬದುಕುವಂತ ಸ್ಥಿತಿ ನಿರ್ಮಾಣವಾಗಿದೆ. ಇಷ್ಟಾದರೂ ಕೂಲಿಕಾರರ ಬೆನ್ನುಬಿಡದ ಪೊಲೀಸ್ ಇಲಾಖೆಯವರು ಹಗೆ ಸಾಧಿಸುತ್ತಾ, ಒಂದಿಲ್ಲ ಒಂದು ರೀತಿಯಲ್ಲಿ ಹಿಂಸೆಯನ್ನು ನೀಡುತ್ತಿದ್ದಾರೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ದುಡಿದ ಕೂಲಿ ಕೇಳುವುದು ಪ್ರತಿಯೊಬ್ಬ ಶ್ರೀಸಾಮಾನ್ಯನ ಹಕ್ಕಾಗಿದ್ದರೂ ಕೂಡ ಅದು ಕೊಪ್ಪಳ ಲಾಠಿಚಾರ್ಜ್ ಪ್ರಕರಣಕ್ಕೆ ಒಳಗಾದ ರೈತರ ಪಾಲಿಗೆ ಇಲ್ಲದಂತಾಗಿದೆ" ಎಂದು ತಮ್ಮ ನೋವನ್ನು ಹೇಳಿಕೊಂಡರು. ಈ ಇಡೀ ಪ್ರಕರಣವನ್ನು ಕೂಲಂಕುಶವಾಗಿ ಅವಲೋಕಿಸಿದರೆ ನ್ಯಾಯಾಂಗ ವ್ಯವಸ್ಥೆಯ ಅಡಿಯಲ್ಲಿ ಕೆಲಸ ನಿರ್ವಹಿಸಬೇಕಾದ ರಕ್ಷಣಾ ಇಲಾಖೆಯವರು ಯಾವುದೋ ಒತ್ತಡಗಳಿಗೆ ಮಣಿದು ಕೂಲಿಕಾರರನ್ನು ರಕ್ಷಿಸುವ ಬದಲು ಹಿಂಸಿಸುವ ಕೆಲಸಕ್ಕೆ ಮುಂದಾದುದು ಕಂಡುಬರುತ್ತದೆ. ಹಾಗೆಯೇ ಇವರೂ ಸಹ ಅಧಿಕಾರಶಾಹಿಯನ್ನು ಒಪ್ಪಿಕೊಂಡು ಮಾನವೀಯ ಮೌಲ್ಯಗಳನ್ನು ಗಾಳಿಗೆ ತೂರಿದ್ದಾರೆ. ಇಂದಿಗೂ ಸಹ ಪೊಲೀಸ್ ಇಲಾಖೆಯವರೇ ಬಡ ಕೂಲಿಕಾರರನ್ನು ಹಿಂಸಿಸುತ್ತಿದ್ದಾರೆ. ಅಂದರೆ ಲಾಠಿ ಚಾರ್ಜ್ ಮಾಡಿದಂತಹ ಸಂದರ್ಭದಲ್ಲಿ ಹಲವಾರು ಜನ ಪೊಲೀಸರಿಗೂ ಪೆಟ್ಟಾಗಿದೆ, ಗಾಯಗಳಾಗಿವೆ. ಮತ್ತು ಇವರ ಮೇಲೆಯೇ ಕೂಲಿಕಾರರು ಕೇಸ್ ಮಾಡಲು ಮುಂದಾಗಿದ್ದಾರೆ. ಇದು ಅವರ ಕೋಪಕ್ಕೆ ಕಾರಣವಾಗಿ, ದ್ವೇಷವಾಗಿ ಪರಿಣಮಿಸಿದೆ. ಈ ದ್ವೇಷದಿಂದಲೇ ಜನರನ್ನು ಹಿಂಸಿಸುತ್ತಿದ್ದಾರೆ ಎಂಬುದು ನಿಂಗನಗೌಡರ ಹೇಳಿಕೆಯಿಂದ ವ್ಯಕ್ತವಾಗುತ್ತದೆ. ಪೊಲೀಸ್ ಇಲಾಖೆಯವರು ಸರಕಾರಿ ಇಲಾಖೆಯ ಅಧಿಕಾರಿಗಳನ್ನು, ಚುನಾಯತ ಪ್ರತಿನಿಧಿಗಳನ್ನು ರಕ್ಷಿಸಲು ಪ್ರಯತ್ನಿಸುತ್ತಾರೆಯೇ ಹೊರತು ಸಾಮಾನ್ಯ ಜನರು ಇವರ ದೃಷ್ಟಿಯಲ್ಲಿ ಇಲ್ಲವಾಗಿರುತ್ತಾರೆ. ಇದು ಕೊಪ್ಪಳದಲ್ಲಿ ನಡೆದಂತಹ ಘಟನೆಯಿಂದ ವೇದ್ಯವಾಗುತ್ತದೆ.

## ೬.೩. ಘಟನೆಯ ನಂತರದ ಬೆಳವಣಿಗೆಗಳು

ಕೊಪ್ಪಳದಲ್ಲಿ ಬಡಕೂಲಿಕಾರರ ಮೇಲೆ ನಡೆದ ಲಾಠಿಚಾರ್ಜ್ ಪ್ರಕರಣದ ನಂತರ ಹಲವಾರು ಬೆಳವಣಿಗೆಗಳು ಸಂಭವಿಸಿದವು. ಈ ಘಟನೆ ರಾಜ್ಯದ ತುಂಬೆಲ್ಲಾ ಹರಡಿಕೊಂಡು ಹಲವಾರು ಪ್ರಗತಿಪರ ಸಂಘಟನೆಗಳಲ್ಲಿ ಮತ್ತು ರೈತ ಸಂಘಟನೆಯವರಲ್ಲಿ ಆಕ್ರೋಶದ ಕಿಡಿ ಹಚ್ಚಿತ್ತು. ಹಾಗೆಯೇ ಸರಕಾರದಿಂದ ಸಮಿತಿಯು ರಚನೆಯಾಗಿ ಒಂದು ವರದಿಯೂ ಬಂದಿತು. ಆದರೆ ಈ ವರದಿಯು ಕೂಲಿಕಾರ್ಮಿಕರ ಪರವಾಗಿರಲಿಲ್ಲ. ಬದಲಾಗಿ ಸರಕಾರದ ಮತ್ತು ಅಧಿಕಾರಿ ವರ್ಗದವರನ್ನು ರಕ್ಷಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸಿತು. ಈ ಎಲ್ಲಾ ಅಂಶಗಳನ್ನು ಕೆಳಗಿನಂತೆ ಸಂಪೂರ್ಣವಾಗಿ ವಿವರಿಸಲಾಗಿದೆ.

### ೬.೩.೧. ರೈತಪರ ಸಂಘಟನೆಗಳ ಪಾತ್ರ

ಈ ಪ್ರಕರಣದಲ್ಲಿ ಬಂಧಿತರಾದ ಒಂಬತ್ತು ಜನ ರೈತರು ಷರತ್ತುಬದ್ಧ ಜಾಮೀನಿನ ಮೇಲೆ ಬಳ್ಳಾರಿಯ ಜೈಲಿನಿಂದ ಬಿಡುಗಡೆಗೊಂಡ ನಂತರ ಲಾಠಿಚಾರ್ಜ್ ಪ್ರಕರಣವನ್ನು ವಿರೋಧಿಸಿ ಕೊಪ್ಪಳ ನಗರದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ–ಹಸಿರು ಸೇನೆ ಹಾಗೂ ವಿವಿಧ ಪ್ರಗತಿಪರ ಸಂಘಟನೆಗಳ ಸಂಯುಕ್ತ ಆಶ್ರಯದಲ್ಲಿ ಬಾರಕೋಲು ಚಳವಳಿಯನ್ನು ಹಮ್ಮಿಕೊಳ್ಳಲಾಯಿತು. ಬಾರಕೋಲು ಚಳವಳಿಯ ನೇತೃತ್ವವನ್ನು ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷರಾದ ಕೋಡಿಹಳ್ಳಿ ಚಂದ್ರಶೇಖರ್ ಅವರು ವಹಿಸಿದ್ದರು. ರಾಜ್ಯದ ನಾನಾ ಭಾಗಗಳಿಂದ ಸುಮಾರು ಮೂರು ಸಾವಿರಕ್ಕೂ ಅಧಿಕ ರೈತರು ಆಗಮಿಸಿದ್ದು ವಿಶೇಷವಾಗಿತ್ತು. ಅಲ್ಲದೆ ಮಹಿಳೆಯರು ಮತ್ತು ವೃದ್ಧರೂ ಸಹ ಈ 'ಬಾರಕೋಲು ಚಳವಳಿ'ಯಲ್ಲಿ ಪಾಲ್ಗೊಂಡಿದ್ದರು. ಹೆಗಲಮೇಲೆ ಹಸಿರು ಟವೆಲ್ ಜೊತೆಗೆ ಬಾರಕೋಲು, ತಲೆ ಮೇಲೆ ಬುತ್ತಿಗಂಟನ್ನು ಹೊತ್ತು ಮುನ್ನಡೆದಿದ್ದರು. ಇದು ಪೊಲೀಸರ, ಅಧಿಕಾರಿಗಳ ಮತ್ತು ಸರಕಾರದ ವಿರುದ್ಧದ ಆಕ್ರೋಶವಾಗಿತ್ತು.

'ಬರಾಕೋಲು ಚಳವಳಿಯ' ಬಹಿರಂಗ ಸಭೆಯಲ್ಲಿ ಕೋಡಿಹಳ್ಳಿ ಚಂದ್ರಶೇಖರ್ ಅವರು "ರೈತರ ಮೇಲಿನ ಇಂತಹ ದೌರ್ಜನ್ಯಗಳು ಮುಂದುವರೆದಲ್ಲಿ ನಾವು ಕೈಕಟ್ಟಿ ಕುಳಿತುಕೊಳ್ಳದೆ ಬಾರಕೋಲು ಬಳಕೆ ಮಾಡಬೇಕಾಗುತ್ತದೆ ಹುಷಾರ್ ಎಂದು ಗುಡುಗಿದರು. ಹಾಗೆಯೇ ಮಾನವೀಯತೆಯನ್ನು ಬದಿಗಿಟ್ಟು ಹದ್ದುಮೀರಿ ವರ್ತಿಸುವ ಅಧಿಕಾರಿಗಳು ಇನ್ನು ಮುಂದೆ ಎಚ್ಚರ ವಹಿಸಬೇಕೆಂದು ತಾಕೀತು ಮಾಡಿದರು. ಪೋಲೀಸರು ಲಾಠಿ ಪ್ರಹಾರ ಮಾಡುವ ಅವಶ್ಯಕತೆ ಇತ್ತೇ? ರೈತರು ಕೇಳಿದ್ದು ತಾವು ಮಾಡಿದ ಕೆಲಸಕ್ಕೆ ಕೂಲಿ. ಅದನ್ನು ಬಿಟ್ಟು ಬೂಟುಗಾಲಿನ ಒದೆಕೊಟ್ಟಿದ್ದನ್ನು ನೋಡಿದರೆ ನಿಮ್ಮಲ್ಲಿ ರಾಕ್ಷಸಿ ಪ್ರವೃತ್ತಿ ಎದ್ದು ಕಾಣುತ್ತದೆ ಎಂದು ಮೂದಲಿಸಿದರು. ಮೊದಲು ಮನುಷ್ಯರಂತೆ ವರ್ತಿಸುವುದನ್ನು ಕಲಿತುಕೊಳ್ಳಬೇಕಾಗುತ್ತದೆ. ರೈತರು ಕೂಲಿಗೆ ಒತ್ತಾಯಿಸಿ ಕಳೆದ ಎಂಟ್ಹತ್ತು ತಿಂಗಳಿಂದ ಹೋರಾಟ ಮಾಡುತ್ತಿದ್ದರೂ ಯಾವೊಬ್ಬ ಅಧಿಕಾರಿಯೂ ಸ್ಪಂದಿಸಿಲ್ಲ. ಅಲ್ಲದೇ ನಾಲ್ಕು ದಿನಗಳಿಂದ ಸತ್ಯಾಗ್ರಹ ನಡೆಸುತ್ತಿದ್ದಾಗ್ಯೂ

ಎ.ಸಿ.ಆಗಲಿ, ತಹಶೀಲ್ದಾರ್ ಆಗಲಿ ಸೌಜನ್ಯಕ್ಕಾದರೂ ಭೇಟಿ ನೀಡಿ ರೈತರ ಅಳಲು ಕೇಳಬೇಕಾಗಿತ್ತು. ಆದರೆ ಅವರು ನಿರ್ಲಕ್ಷ್ಯ ತೋರಿದ್ದಾರೆ. ಹಾಗಾಗಿ ಅವರ ವಿರುದ್ಧವೂ ಕ್ರಮ ತೆಗೆದುಕೊಳ್ಳುವಂತೆ ಸರಕಾರಕ್ಕೆ ಒತ್ತಾಯಿಸಲಾಗುವುದು. ಹಾವೇರಿ, ಚಾಮರಾಜನಗರ, ಮೈಸೂರು ಮತ್ತು ಕೊಪ್ಪಳದಂತ ಜಿಲ್ಲೆಗಳಲ್ಲಿ ರೈತರ ಮೇಲೆ ಪೊಲೀಸ್ ದೌರ್ಜನ್ಯ ನಡೆಯುತ್ತ ಸಾಗಿದೆ. ಸರಕಾರ ಅನ್ನದಾತನ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದ ಮಾತ್ರಕ್ಕೆ ಇವರು ರೈತರ ಸಮಸ್ಯೆಗಳನ್ನು ಬಗೆಹರಿಸಲಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸುವ ಮೂಲಕ ಕೊಪ್ಪಳದಲ್ಲಿ ಪೊಲೀಸರಿಗೆ ರೈತರ ಮೇಲೆ ಲಾಠಿ ಪ್ರಹಾರ ನಡೆಸಲಿಕ್ಕೆ ನಿಮಗ್ಯಾರು ಆದೇಶ ನೀಡಿದ್ದು? ಎಂದು ಗುಡುಗಿದರು. ತಾಲೂಕಿನ ಐದು ಪಂಚಾಯ್ತಿಗಳಲ್ಲಿ ಕೆಲಸ ಮಾಡಿದ ಕೂಲಿ ಕಾರ್ಮಿಕರು ಕೂಲಿ ಕೇಳಿದ್ದು ತಪ್ಪಾ? ಎಂದು ಪ್ರಶ್ನಿಸಿದರು. ಜಿಲ್ಲೆಯಲ್ಲಿ ಜಾರಿಗೆ ಬಂದಿರುವ ಉದ್ಯೋಗ ಖಾತ್ರಿ ಯೋಜನೆಯ ತನಿಖೆ ನಡೆಸಬೇಕು. ತಪ್ಪಿತಸ್ಥರಿಗೆ ಕೂಡಲೇ ಶಿಕ್ಷೆ ನೀಡಬೇಕು ಮತ್ತು ರೈತರ ಮೇಲೆ ಲಾಠಿ ಪ್ರಹಾರಕ್ಕೆ ಕಾರಣರಾದವರ ಮೇಲೆ ಪ್ರಕರಣ ದಾಖಲಿಸಿ ಬಳ್ಳಾರಿಯ ಸೆಂಟ್ರಲ್ ಜೈಲಿಗೆ ಅಟ್ಟಬೇಕೆಂದು" ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿದರು.

ಹಾಗೆಯೇ ರಾಜ್ಯ ರೈತ ಸಂಘದ ಕಾರ್ಯದರ್ಶಿಯಾದ ಸಿದ್ದಿವೀರಪ್ಪ ಮಾತನಾಡಿ "ರೈತರ ಪರವಾದ ಸರಕಾರ ಎಂದು ಹೇಳುತ್ತಿರುವ ಪ್ರಸ್ತುತ ಸರಕಾರ, ರೈತರ ಮೇಲೆ ದೌರ್ಜನ್ಯವೆಸಗುತ್ತ ದಮನಕಾರಿ ನೀತಿಯನ್ನು ಅನುಸರಿಸುತ್ತಿದೆ ಎಂದು ಆರೋಪಿಸಿದರು. ರೈತರ ಹಿತ ಕಾಯುವಂತ ಕಾರ್ಯಕ್ರಮಗಳನ್ನು ಜಾರಿಗೆ ತರಬೇಕು ಅಂದಾಗ ಮಾತ್ರ ರೈತ ಪರವಾದ ಸರಕಾರವಾಗಲಿಕ್ಕೆ ಸಾಧ್ಯವಾಗುತ್ತದೆ. ಆದರೆ ಇದ್ಯಾವುದನ್ನು ಮಾಡದ ಸರಕಾರ ರೈತರನ್ನು ಬಗ್ಗುಬಡಿಯುವಂತ ಕೆಲಸ ಮಾಡುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸುತ್ತಾರೆ. ರೈತರ ಚಳುವಳಿಯನ್ನು ಹತ್ತಿಕ್ಕಲು ಸರಕಾರಕ್ಕೆ ಸಾಧ್ಯವಿಲ್ಲ. ನಾವು ಹಸಿರು ಸೇನೆಯನ್ನು ಮಾಡಿದ್ದೇವೆ. ಇಂತಹ ಸಂದರ್ಭಗಳು ಮತ್ತೆ ಪುನರಾವರ್ತನೆಯಾದರೆ ಹಸಿರು ಸೇನೆಯವರ ಕೈಯಲ್ಲಿ ಲಾಠಿ ಕೊಡಬೇಕಾಗುತ್ತದೆ" ಎಂದು ಹೇಳಿದರು.

ದಾವಣಗೆರೆಯ ರೈತ ಸಂಘದ ಸದಸ್ಯೆಯಾದ ಕೆ.ಮಂಜುಳಾ ಎನ್ನುವವರು ಮಾತನಾಡಿ "ಜನರ ರಕ್ಷಣೆ ಮಾಡುವ ಪೊಲೀಸರು ಮೊದಲು ಮಾನವೀಯ ಗುಣಗಳನ್ನು ಬೆಳೆಸಿಕೊಳ್ಳಿ. ನಿಮ್ಮ ಈ ದಬ್ಬಾಳಿಕೆ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಅಣಕಿಸುವಂತಿದೆ ಮತ್ತು ನೊಂದವರಿಗೆ ನೆರವು ಎಂದು ಪೊಲೀಸ್ ವಾಹನಗಳ ಮೇಲೆ ಬರೆದಿದ್ದನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ನೊಂದವರಿಗೆ ನೋವು, ಉಳ್ಳವರಿಗೆ ನೆರವು ಎನ್ನುವ ತತ್ವವನ್ನು ಪೊಲೀಸರು ಪಾಲಿಸುತ್ತಿದ್ದಾರೆ" ಎಂದು ವ್ಯಂಗ್ಯದ ಮಾತುಗಳನ್ನಾಡಿದರು.

ಅದೇ ರೀತಿಯಾಗಿ ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯ ಸಹ ಕಾರ್ಯದರ್ಶಿಯಾದ ಬಾಗಲಕೋಟೆಯ ರಮೇಶ ಗಡದನ್ನವರು ಆಕ್ರೋಶಭರಿತರಾಗಿ ಅಧಿಕಾರಿಗಳನ್ನು ಹಿಗ್ಗಾಮುಗ್ಗಾ ತರಾಟೆಗೆ ತೆಗೆದುಕೊಂಡರು. ಒಂದು ಹಂತದಲ್ಲಿ ಗ್ರಾಮೀಣ ಭಾಷೆಯಲ್ಲಿ ತಮ್ಮದೇ ಆದ

ಶೈಲಿಯಿಂದ ಅಧಿಕಾರಿಗಳ, ಜನಪ್ರತಿನಿಧಿಗಳ ಮತ್ತು ಸರಕಾರದ ಮೇಲೆ ಬೈಗುಳಗಳ ಸುರಿಮಳೆಗೈದರು. ಹಾಗೆಯೇ ಸಂಘದ ರಾಜ್ಯ ಮಹಾಪ್ರಧಾನ ಕಾರ್ಯದರ್ಶಿ ಬಸವರಾಜಪ್ಪ, ಉಪಾಧ್ಯಕ್ಷ ದೇಸಾಯಿ, ರಾಜ್ಯರೈತ ಸಂಘದ ಸದಸ್ಯರಾದ ಮಂಜುನಾಥಗೌಡ ಭಾಗವಹಿಸಿದ್ದರು. ಡಿ.ಎಸ್.ಎಸ್.ರಾಜ್ಯಾಧ್ಯಕ್ಷ ಮೋಹನ್ ಮಾತನಾಡಿ "ಮುಖ್ಯಮಂತ್ರಿಗಳೇ ಹಸಿರು ಶಾಲು ಹೊದ್ದುಕೊಂಡರೆ ರೈತಪರ ಎನ್ನಲಾಗದು. ರೈತ ಚಳವಳಿಯನ್ನು ಹತ್ತಿಕ್ಕುವಂತಹ ಕೆಲಸ ಮಾಡಿದರೆ ಪರಿಸ್ಥಿತಿ ನೆಟ್ಟಗಿರುವುದಿಲ್ಲ. ರೈತ ಚಳವಳಿ ಎಂದೂ ಸಾಯುವಂತಹದ್ದಲ್ಲ" ಎಂದು ಎಚ್ಚರಿಕೆ ರವಾನಿಸಿದರು.

ಕೊಪ್ಪಳದಲ್ಲಿ ನಡೆದ ಬಾರಕೋಲು ಚಳವಳಿಯಲ್ಲಿ ಪಾಲ್ಗೊಂಡಿದ್ದ ಹಿರೇಸಿಂದೋಗಿಯ ಕನಕಪ್ಪ ಹೂಗಾರ ಎಂಬ ಬಾಲಕ ರೈತ ಸಮೂಹದ ಆಕರ್ಷಣಿಯ ಕೇಂದ್ರ ಬಿಂದುವಾಗಿದ್ದ. ಈತನಿಗೆ ಕೇವಲ ೧೫ ವರ್ಷ ವಯಸ್ಸು. ಸಭೆಯಲ್ಲಿ ದೌರ್ಜನ್ಯಕ್ಕೊಳಗಾದವರು ಮಾತನಾಡಿ, ತಾವು ಅನುಭವಿಸಿದ ಯಾತನೆಯನ್ನು ಸಭೆಯ ಮುಂದಿಟ್ಟ ನಂತರ ಈ ಬಾಲಕ ಹಾಡಿದ್ದು ಕ್ರಾಂತಿ ಗೀತೆ. ಸರಕಾರದ ವಿರುದ್ಧ ಒಂದೊಂದು ಸಾಲು ಹಾಡುತ್ತಿದ್ದಂತೆಯೇ ಸಭಿಕರಿಂದ ಕೇಕೇ, ಸಿಳ್ಳೆ, ಚಪ್ಪಾಳೆ ಮುಗಿಲು ಮುಟ್ಟುತ್ತಿದ್ದವು.

ಒಟ್ಟಾರೆಯಾಗಿ ಈ ಸಭೆಯ ಮೂಲಕ ತೆಗೆದುಕೊಂಡ ನಿರ್ಣಯಗಳೆಂದರೆ,

೧. ಘಟನೆಗೆ ಕಾರಣರಾದ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು.

೨. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ವಿಫಲವಾಗಿದ್ದು, ಇದರಲ್ಲಿನ ಭ್ರಷ್ಟಾಚಾರವನ್ನು ಲೋಕಾಯುಕ್ತ ತನಿಖೆಗೆ ವಹಿಸಬೇಕು.

೩. ದೌರ್ಜನ್ಯವೆಸಗಿರುವ ಪೊಲೀಸರ ವಿರುದ್ಧ ಕೂಲಿಕಾರ್ಮಿಕರು ದೂರು ನೀಡಿದ್ದು, ಸಂಬಂಧಪಟ್ಟವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಬೇಕು.

೪. ಉದ್ಯೋಗ ಖಾತರಿ ಯೋಜನೆಯಲ್ಲಿ ಕೆಲಸ ಮಾಡಿದ ಕಾರ್ಮಿಕರಿಗೆ ತಕ್ಷಣ ಹಣ ಕೊಡಬೇಕು. ಮತ್ತು ಅವರ ಮೇಲೆ ದಾಖಲಿಸಿರುವ ಕೇಸುಗಳನ್ನು ವಾಪಸ್ಸು ಪಡೆಯಬೇಕೆಂಬುದು ಸೇರಿದಂತೆ ಹಲವಾರು ನಿರ್ಣಯಗಳನ್ನು ಸಭೆ ಅಂಗೀಕರಿಸಿತು.

ಉದ್ಯೋಗ ಖಾತರಿ ಯೋಜನೆಯಲ್ಲಿ ದುಡಿದಂತ ಕೂಲಿ ಕೇಳಿದ ಕಾರ್ಮಿಕರ ಮೇಲೆ ಪೊಲೀಸರು ಲಾಠಿ ಪ್ರಹಾರ ಮಾಡಿರುವುದನ್ನು ವಿರೋಧಿಸಿ ರಾಜ್ಯಾದ್ಯಂತ ರೈತ ಸಂಘಟನೆಯವರು ಹೋರಾಟ ನಡೆಸಿದ್ದರಿಂದ ರೈತರು ನೀಡಿದ ದೂರಿನನ್ವಯ ೩೫ಜನ ಪೊಲೀಸರ ಮೇಲೆ ದೂರು ದಾಖಲಿಸಿಕೊಳ್ಳಲಾಗಿತ್ತು. ಆದರೆ ಕೊನೆ ಗಳಿಗೆಯಲ್ಲಿ ಪೊಲೀಸರ ಮೇಲಿನ ದೂರನ್ನು ಸುಳ್ಳು ಎಂದು ಹೇಳಿ, ಸುಮಾರು ೬೭ ಜನ ರೈತ ಕೂಲಿಕಾರರ ಮೇಲೆ ದೂರು ದಾಖಲಿಸಲಾಗಿದೆ.

ಪ್ರಸ್ತುತ ರೈತ ಸಂಘಟನೆಯು ಒಂದು ರಾಜಕೀಯ ಪಕ್ಷವಾಗಿ ರೂಪುಗೊಳ್ಳುತ್ತಿದೆ. ಆ ಕಾರಣಕ್ಕಾಗಿ ತಮ್ಮ ಸಂಘಟನೆಗೆ ಸಾಧ್ಯವಾದಷ್ಟು ಮಟ್ಟಿಗೆ ಹೆಚ್ಚು ಹೆಚ್ಚು ಸದಸ್ಯರನ್ನು ಸೇರಿಸಿಕೊಳ್ಳುವುದು ಮತ್ತು ಅದರಿಂದ ತಮ್ಮ ಸಂಘಟನೆಯನ್ನು ಬಲಪಡಿಸಿಕೊಳ್ಳುವ ಕಾರ್ಯದಲ್ಲಿ ತೊಡಗಿಕೊಳ್ಳುವುದು ಅದರ ಮುಖ್ಯ ಉದ್ದೇಶ. ಆ ನಿಟ್ಟಿನಲ್ಲಿಯೇ ಬೂದಗುಂಪ ಮತ್ತು ಸುತ್ತಮುತ್ತಲಿನ ಗ್ರಾಮ ಪಂಚಾಯತಿಗಳಲ್ಲಿನ ಬಡ ಕೂಲಿಕಾರ ಜನರನ್ನು ತಮ್ಮ ಸಂಘಟನೆಯಲ್ಲಿ ಸೇರಿ ಕೊಂಡಿರುವುದು ಅದರ ಒಂದು ಬಾಗವೆಂದೇ ಹೇಳಬಹುದು. ಮುಖ್ಯವಾಗಿ ಉದ್ಯೋಗ ಖಾತರಿ ಯೋಜನೆಯಲ್ಲಿ ಕೆಲಸವನ್ನು ಕೊಡಿಸುವುದಾಗಿ ಹೇಳಿ ಸಂಘಟನೆಯ ಸದಸ್ಯರನ್ನಾಗಿ ಮಾಡಿಕೊಳ್ಳಲಾಗಿದೆ. ಹಾಗಾಗಿ ಇಲ್ಲಿ ಮುಖ್ಯವಾಗಿ ಗಮನಿಸಬೇಕಾಗಿರುವುದೇನೆಂದರೆ ಉದ್ಯೋಗ ಖಾತರಿ ಯೋಜನೆಯಲ್ಲಿ ಕೆಲಸವನ್ನು ಮಾಡಿರುವವರು ನಿಜವಾದ ಬಡ ಕೂಲಿಕಾರರು. ಆದರೆ ಇವರು ರೈತ ಸಂಘಟನೆಗೆ ಸೇರಿದ್ದರಿಂದ ಅವರೆಲ್ಲರೂ ಆ ಸಂಘಟನೆಯ ಸದಸ್ಯರಾದರು. ಹಾಗಾಗಿ ಇಡೀ ಧರಣಿಯು ಕೂಲಿಕಾರರ ಹಕ್ಕೊತ್ತಾಯಕ್ಕಾಗಿ ನಡೆದ ಧರಣಿಯಾಗಿರದೆ. ಅದು ರೈತ ಸಂಘಟನೆಯ ಹೋರಾಟವಾಗಿ ಮಾರ್ಪಟ್ಟಿತು. ಆ ಕಾರಣಕ್ಕಾಗಿಯೇ ಬಾರಕೋಲು ಚಳುವಳಿಯಲ್ಲಿ ಭಾಗವಹಿಸಿದ ರೈತ ಸಂಘಟನೆಯ ರಾಜ್ಯಾಧ್ಯಕ್ಷರಾಗಲೀ ಅಥವಾ ಉಳಿದ ರೈತ ಮುಖಂಡರಾಗಲೀ ರೈತ ಸಂಘಟನೆಯ ಅಜೆಂಡಾಗಳಿಗೆ ತಕ್ಕಂತೆ ಮಾತನಾಡಿರುವುದನ್ನು ಕಾಣಬಹುದಾಗಿದೆ. ಅಂದರೆ ಅವರ ಒಟ್ಟು ಮಾತುಗಳನ್ನು ಗಮನಿಸಿದರೆ ಇವರು ಎಲ್ಲಿಯೂ ಉದ್ಯೋಗ ಖಾತರಿ ಯೋಜನೆಯ ಬಡ ಕೂಲಿಕಾರರು ಎಂದು ಹೇಳಿಲ್ಲ. ಬದಲಾಗಿ ರೈತ ಕೂಲಿಕಾರರು ಎಂದು ಪದೇ ಪದೇ ಅಭಿವ್ಯಕ್ತಿಗೊಳಿಸಿರುವುದನ್ನು ಕಾಣಬಹುದು. ಹಾಗಾಗಿ ಇದು ರೈತ ಸಂಘಟನೆಯ ಹೋರಾಟವಾಯಿತೇ ಹೊರತು ಕೂಲಿಕಾರರ ಸಂಘಟನೆಯಾಗಿಲ್ಲ.

ಇನ್ನು ಬಾರಕೋಲು ಚಳವಳಿಯಲ್ಲಿ ಭಾಗವಹಿದ ಮಹಿಳೆಯರನ್ನು ಭೇಟಿಯಾಗಿ ಮಾತನಾಡಿಸಿದಾಗ ಅವರೆಲ್ಲರೂ ಬಡ ಕೂಲಿಕಾರರು ಎಂಬುದು ತಿಳಿದು ಬಂದಿತು. ಇವರು ರೈತ ಸಂಘಟನೆಯನ್ನು ಸೇರಿದ ಬಳಿಕ ಇವರು ಜೈವಿಕವಾಗಿ ಮಹಿಳೆಯರಾಗಿದ್ದರೂ ಸಹ ಅವರ ಆಲೋಚನಾ ನೆಲೆ ಮಾತ್ರ ರೈತ ಸಂಘಟನೆಯ ಅಜೆಂಡಾಗಳನ್ನು ಪುಷ್ಟೀಕರಿಸುವ ಹಾಗೆ ರೂಪುಗೊಂಡಿದ್ದವು. ಹಾಗಾಗಿ ಅವರು ರೈತ ಹೋರಾಟದ ಭಾಗವಾಗಿರುವ ಬಾರಕೋಲು ಚಳವಳಿಯನ್ನು ಒಪ್ಪಿಕೊಂಡಿದ್ದರು. ಅವರಿಗೆ ಅರಿವಿಲ್ಲದಂತೆಯೇ ಪುರುಷಶಾಹಿ ಪ್ರತೀಕವಾದ ಬಾರಕೋಲನ್ನು ತಮ್ಮ ಹೆಗಲ ಮೇಲೆ ಹಾಕಿಕೊಂಡು ಆ ಮೌಲ್ಯಗಳನ್ನು ಪುಷ್ಟೀಕರಿಸುವ ನಿಟ್ಟಿನಲ್ಲಿ ಪ್ರತಿನಿಧಿಸಿದ್ದರು. ಒಟ್ಟಾರೆಯಾಗಿ ಈ ಬಾರಕೋಲು ಚಳವಳಿ ರೈತ ಸಂಘಟನೆಯ ರಾಜಕೀಯ ಹಿತಾಸಕ್ತಿಗಾಗಿ ಬಳಕೆಯಾಗಲ್ಪಟ್ಟಿತು. ಇಲ್ಲಿ ಇನ್ನೊಂದು ಪ್ರಶ್ನೆ ಎದುರಾಗುತ್ತದೆ. ಬಾರಕೋಲು ಚಳವಳಿಯು ಸರಕಾರದ ವಿರುದ್ಧವೇ ಅಥವಾ ಕೂಲಿಕಾರರ ವಿರುದ್ಧವೇ? ಎಂಬುದು. ಏಕೆಂದರೆ ಬಾರಕೋಲು ಚಳವಳಿಯಲ್ಲಿ ಪಾಲ್ಗೊಂಡವರೆಲ್ಲಾ ರೈತ ಕೂಲಿ ಕಾರ್ಮಿಕರು. ಈ ಹೋರಾಟದಲ್ಲಿ ಬಡ ಕೂಲಿಕಾರು ಬಾಗಿಯಾಗಿದ್ದರೂ ಸಹ ಅವರೆಲ್ಲರೂ

ರೈತ ಸಂಘದ ಸದಸ್ಯರಾಗಿದ್ದರು. ಆದ್ದರಿಂದ ಇವರೂ ಸಹ ರೈತ ಸಂಘದ ಕೂಲಿಕಾರರೆಂದೇ ಗುರುತಿಸಿಕೊಂಡರು. ರೈತ ಸಂಘಟನೆಯ ಈ ಹೋರಾಟ ಇನ್ನುಳಿದ ಬಡ ಕೂಲಿಕಾರರ ಮೇಲೆ ಪರಿಣಾಮ ಬೀರಿತು. ನಿಜ ಬಡ ಕೂಲಿಕಾರರು ಇಂದಿಗೂ ಸಹ ಈ ಉದ್ಯೋಗ ಖಾತರಿ ಯೋಜನೆಯಲ್ಲಿ ಕೆಲಸ ಕೇಳಿ ಅರ್ಜಿಯನ್ನು ಸಲ್ಲಿಸಲಾರದಂತಹ ಸ್ಥಿತಿ ನಿರ್ಮಾಣವಾಗಿದೆ. ಹಾಗಾಗಿ ಈ ಬಾರಕೋಲು ಚಳವಳಿ ಕೂಲಿಕಾರರ ವಿರುದ್ಧವೇ ನಡೆದಿದೆ ಎಂದು ಭಾಸವಾಗುತ್ತದೆ.

**೬.೩.೨. ಲಾಠಿಚಾರ್ಜ್ ಕುರಿತ ಸರಕಾರದ ವರದಿ**

ಕೊಪ್ಪಳದಲ್ಲಿ ಲಾಠಿಚಾರ್ಜ್ ಪ್ರಕರಣದ ನಂತರ ನಡೆದ ಬಾರಕೋಲು ಚಳವಳಿಯಲ್ಲಿ ತೆಗೆದುಕೊಂಡ ತೀರ್ಮಾನಗಳನ್ನು ಸರಕಾರಕ್ಕೆ ರವಾನಿಸಿದ್ದರು. ಪ್ರಗತಿಪರ ಸಂಘಟನೆಗಳ ಹೋರಾಟಕ್ಕೆ ಮಣಿದಂತಹ ರಾಜ್ಯ ಸರ್ಕಾರ ಕೊಪ್ಪಳದಲ್ಲಿ ನಡೆದ ಲಾಠಿ ಚಾರ್ಜ್ ಪ್ರಕರಣವನ್ನು ಸಮಗ್ರವಾಗಿ ತನಿಖೆ ಮಾಡಿ ಸರಕಾರಕ್ಕೆ ವರದಿ ಸಲ್ಲಿಸಲು ಐ.ಎ.ಎಸ್. ಅಧಿಕಾರಿಯಾದ ರಜನೀಶ್ ಗೋಯಲ್‌ರವರನ್ನು ತನಿಖಾಧಿಕಾರಿಯನ್ನಾಗಿ ನೇಮಕ ಮಾಡಲಾಯಿತು. ಆದರೆ ಇವರು ನಿಷ್ಪಕ್ಷಪಾತದಿಂದ ತನಿಖೆಯನ್ನು ನಡೆಸದೇ ಕೂಲಿ ಕಾರ್ಮಿಕರ ವಿರುದ್ಧ ವರದಿಯನ್ನು ನೀಡಿದರು. ಬೂದಗುಂಪ ಗ್ರಾಮ ಪಂಚಾಯತಿಯ ರೈತ ಮುಖಂಡರಾದ ಹನುಮಂತಪ್ಪ ಹೊಳೆಯಾಚಿಯವರು ಹೇಳುವಂತೆ "ರಜನೀಶ್ ಗೋಯಲ್ ಅವರು ಪ್ರಕರಣವನ್ನು ಕೂಲಂಕಷವಾಗಿ ಅಧ್ಯಯನ ಮಾಡಲು ಧರಣಿನಿರತ ಕೂಲಿ ಕಾರ್ಮಿಕರ ಐದು ಪಂಚಾಯ್ತಿಗಳ ವ್ಯಾಪ್ತಿಯಲ್ಲಿ ಬರುವಂತ ಪ್ರತಿಯೊಂದು ಗ್ರಾಮಕ್ಕೆ ಭೇಟಿಕೊಡಲಿಲ್ಲ. ಅಲ್ಲಿನ ಕೂಲಿ ಕಾರ್ಮಿಕರನ್ನು, ಸ್ಥಳೀಯರನ್ನು, ಚುನಾಯಿತ ಪ್ರತಿನಿಧಿಗಳನ್ನು ಮತ್ತು ಸ್ಥಳೀಯ ಮಟ್ಟದ ಅಧಿಕಾರಿಗಳನ್ನು ಸಂದರ್ಶನ ಮಾಡಲಿಲ್ಲ. ಬದಲಾಗಿ ಅವರು ಕೊಪ್ಪಳದ ಜಿಲ್ಲಾ ಪಂಚಾಯತಿಯಲ್ಲಿ ಕುಳಿತುಕೊಂಡು ಪ್ರಕರಣಕ್ಕೆ ಸಂಬಂಧಪಟ್ಟಂತ ಅಧಿಕಾರಿಗಳನ್ನು, ಚುನಾಯಿತ ಪ್ರತಿನಿಧಿಗಳನ್ನು ಮತ್ತು ಪೊಲೀಸ್ ಇಲಾಖೆಯವರನ್ನು ಮಾತ್ರ ಕರೆಸಿಕೊಂಡು ಅವರು ಹೇಳಿದಂತ ಮಾಹಿತಿಯನ್ನು ಯಥಾವತ್ತಾಗಿ ದಾಖಲಿಸಿಕೊಂಡಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲನೆಗಾಗಿ ತರಿಸಿಕೊಂಡಂತಹ ಸಂದರ್ಭದಲ್ಲಿ ಯಾವೊಬ್ಬ ನಿಜಕೂಲಿ ಕಾರ್ಮಿಕನ ಹೆಸರು ಹಾಜರಾತಿಯ ಯಾದಿಯಲ್ಲಿ ಇರುವುದಿಲ್ಲ. ಬದಲಾಗಿ ಉದ್ಯೋಗ ಖಾತರಿ ಯೋಜನೆಯಲ್ಲಿ ಕೆಲಸ ಮಾಡದೆ ಇರುವಂತಹ ಶ್ರೀಮಂತ ಕುಟುಂಬದವರ ಹೆಸರುಗಳು ಇದ್ದವು. ಅವರ ಹೆಸರಲ್ಲಿಯೇ ಕೂಲಿಯು ಪಾವತಿಯಾಗಿರುವಂತಹ ದಾಖಲೆಗಳು ಇದ್ದವು. ಇದರ ಹಿಂದೆ ಆಯಕಟ್ಟಿನ ಜಾಗದಲ್ಲಿ ಇರುವಂತ ಪಂಚಾಯತ್ ಅಧಿಕಾರಿಗಳು ಮತ್ತು ಚುನಾಯಿತ ಪ್ರತಿನಿಧಿಗಳ ಕೈವಾಡವಿತ್ತು. ಹೀಗೆ ಅಧಿಕಾರಿಗಳು ಒಪ್ಪಿಸಿದಂತಹ ದಾಖಲೆಗಳನ್ನು ಅಧಿಕಾರಿಗಳು ಮತ್ತು ಚುನಾಯಿತ ಪ್ರತಿನಿಧಿಗಳು ಪ್ರಕರಣ ಕುರಿತು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ಸ್ವೀಕರಿಸಿದ್ದಾರೆ. ಆದರೆ ಉದ್ಯೋಗ ಖಾತರಿ ಯೋಜನೆಯಲ್ಲಿ ದುಡಿದಂತ

ಕೂಲಿ ಕಾರ್ಮಿಕರು ದುಡಿದಂತ ಕೂಲಿಯ ಹಣವನ್ನು ಸರಕಾರ ಪಾವತಿಸಬೇಕೆಂದು ಧರಣಿ ಮಾಡಿದಾಗ ಪೊಲೀಸರ ಲಾಠಿಯ ಏಟನ್ನು ತಿಂದಂತಹ ಒಬ್ಬ ಕಾರ್ಮಿಕನನ್ನಾಗಲೀ, ಸ್ಥಳೀಯ ವ್ಯಕ್ತಿಗಳನ್ನಾಗಲಿ ಸಂದರ್ಶಿಸದಿರುವುದು ಸಂಶಯಾಸ್ಪದವೆನಿಸುತ್ತದೆ". ಎಂದು ಹೇಳಿದರು.

ಈ ಪ್ರಕರಣದ ಸತ್ಯಾಸತ್ಯತೆಯನ್ನು ಕಂಡುಹಿಡಿಯಲು ರಚಿಸಿದ ಸಮಿತಿಯ ತನಿಖಾಧಿಕಾರಿಯಾದ ರಜನೀಶ್ ಗೋಯಲ್ ಅವರು "ಧರಣಿಯನ್ನು ಮಾಡಿದಂತಹ ಯಾವೊಬ್ಬ ಮಹಿಳೆಯಾಗಲಿ ಯಾವೊಬ್ಬ ಪುರುಷನಾಗಲಿ ನಿಜವಾದ ಕೂಲಿ ಕಾರ್ಮಿಕರು ಅಲ್ಲ. ಬದಲಾಗಿ ಇವರು ಉದ್ಯೋಗ ಖಾತ್ರಿ ಯೋಜನೆಯಲ್ಲಿ ಯಾವುದೇ ಕೆಲಸವನ್ನು ಮಾಡದೇ ಅಧಿಕಾರಿಗಳನ್ನು ಮತ್ತು ಸಂಬಂಧಪಟ್ಟ ಚುನಾಯಿತ ಪ್ರತಿನಿಧಿಗಳನ್ನು ಎದುರಿಸಿ, ಪುಕ್ಕಟ್ಟೆಯಾಗಿ ಯೋಜನೆಯ ಹಣವನ್ನು ಕೂಲಿಯ ರೂಪದಲ್ಲಿ ನೀಡಬೇಕೆಂದು ಬ್ಲಾಕ್‌ಮೇಲ್ ಮಾಡುವಂತ ಗುಂಡಾಗಳೆಂದು" ಸರಕಾರಕ್ಕೆ ವರದಿಯನ್ನು ನೀಡುತ್ತಾರೆ. ಆದರೆ ನೈಜ ಸ್ಥಿತಿ ಇದಾಗಿರಲಿಲ್ಲ. ಇವರು ನಿಷ್ಪಕ್ಷಪಾತವಾಗಿ ಸಮೀಕ್ಷೆಯನ್ನು ಮಾಡಬಹುದಿತ್ತು. ಆದರೆ ಈ ಕೆಲಸ ಮಾಡದಿರುವುದು ಕೆಲವು ಅನುಮಾನಗಳಿಗೆ ಕಾರಣವಾಯಿತು. ಕೇವಲ ಅಧಿಕಾರಿಗಳು, ಚುನಾಯಿತ ಪ್ರತಿನಿಧಿಗಳು ನೀಡಿದ ಮಾಹಿತಿಯನ್ನು ಮತ್ತು ಇವರುಗಳು ಸೃಷ್ಟಿಮಾಡಿದ ಖೊಟ್ಟಿ ದಾಖಲೆಗಳನ್ನು ಆಧರಿಸಿ ಸರಕಾರಕ್ಕೆ ಒಂದು ವರದಿಯನ್ನು ನೀಡಿರುವುದು ಕೂಲಿಕಾರರಿಗೆ ಎಸಗಿದ ಅನ್ಯಾಯವೆಂದೇ ಹೇಳಬಹುದು. ರಜನೀಶ್ ಗೋಯಲ್ ಅವರು ನೀಡಿದಂತಹ ವರದಿಯನ್ನು ಆಧರಿಸಿ ಸರಕಾರ ಇವತ್ತಿಗೂ ಕೂಲಿಕಾರರ ಮೇಲೆ ಆದಂತಹ ಕೇಸನ್ನು ಸರಕಾರ ಹಿಂದಕ್ಕೆ ತೆಗೆದುಕೊಳ್ಳದಿರುವುದು ಮತ್ತು ದುಡಿದಂತ ಕೂಲಿಯನ್ನು ಪಾವತಿಸದಿರುವುದು ಅಮಾನವೀಯ ನಡೆ ಎಂದೇ ಎನಿಸುತ್ತದೆ. ಮುಖ್ಯವಾಗಿ ಉದ್ಯೋಗ ಖಾತರಿ ಯೋಜನೆಯಲ್ಲಿ ಕೂಲಿ ಕೆಲಸಕ್ಕೆ ಸೇರಿದವರು ನಿಜ ಕೂಲಿಕಾರರೇ ಹೊರತು ಅವರು ಬ್ಲಾಕ್ ಮೇಲ್ ಮಾಡುವಂತಹ ಗೂಂಡಾಗಳಲ್ಲ. ಏಕೆಂದರೆ ಯೋಜನೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡವರು ಮಹಿಳೆಯರೇ ಹೊರತು ಪುರುಷರಲ್ಲ. ಅದರಲ್ಲಿಯೂ ವೃದ್ಧ ಮಹಿಳೆಯರು ಇದ್ದಾರೆ. ಸಮಾಜದಲ್ಲಿನ ಪುರುಷ ಮೌಲ್ಯಗಳು ಮಹಿಳೆಯರ ಸ್ವಾತಂತ್ರ್ಯವನ್ನು ಕಸಿದುಕೊಂಡಿರುವಾಗ ಅವರು ಪುರುಷರ ಸಮನಾಗಿ ಮಾತನಾಡುವುದನ್ನೂ ಸಹಿಸದ ಪುರುಷಶಾಹಿ ವ್ಯವಸ್ಥೆ ಗೂಂಡಾಗಿರಿಯನ್ನು ಸಹಿಸುತ್ತದೆಯೇ? ಹಾಗೆಯೇ ಇವರು ಈ ಹಿಂದೆ ಯಾವುದೇ ಗುಂಡಾಗಿರಿ ಕೆಲಸಗಳನ್ನು ಮಾಡಿದಂತಹ ದಾಖಲೆಗಳು ಇಲ್ಲ. ಅಂತಹ ಸಂದರ್ಭದಲ್ಲಿ ಇವರನ್ನು ಗೂಂಡಾಗಳೆಂದು ಕರೆದಿರುವುದು ಎಷ್ಟರ ಮಟ್ಟಿಗೆ ಸತ್ಯ? ಹೀಗೆ ಹಲವಾರು ಪ್ರಶ್ನೆಗಳು ಕಾಡುತ್ತವೆ. ಮತ್ತು ರಜನೀಶ್ ಗೋಯಲ್ ಒಬ್ಬ ಸರಕಾರದ ಪ್ರತಿನಿಧಿ ಹಾಗಾಗಿ ಸರಕಾರದ ವಿರುದ್ಧವಾಗಿ ಅವರು ವರಧಿಯನ್ನು ನೀಡುವುದಾಗುವುದಿಲ್ಲ. ಇವರು ಸರಕಾರದ ಆಡಳಿತ ವೈಖರಿಯನ್ನು ಸದಾ ಒಪ್ಪಿಸುವ ಮತ್ತು ಅದನ್ನು ಸ್ಥಿರೀಕರಿಸುವ ನಿಟ್ಟಿನಲ್ಲಿಯೇ ಪ್ರಯತ್ನಿಸುತ್ತಿರುತ್ತಾರೆ ಎಂಬುದಕ್ಕೆ ಇದೊಂದು ಉತ್ತಮ ಉದಾಹರಣೆಯಾಗಿದೆ.

## ೬.೪. ಸರಕಾರದ ದ್ವಂದ್ವ ನೀತಿ

ಕೊಪ್ಪಳದಲ್ಲಿ ಉದ್ಯೋಗಖಾತ್ರಿ ಯೋಜನೆಯಲ್ಲಿ ದುಡಿದ ಕೂಲಿಯನ್ನು ಪಡೆಯುವ ಸಲುವಾಗಿ ಕೂಲಿ ಕಾರ್ಮಿಕರ ಮೇಲೆ ಪೊಲೀಸರಿಂದ ಲಾಠಿಚಾರ್ಜ್ ನಡೆದ ಸಂದರ್ಭದಲ್ಲಿ ಕರ್ನಾಟಕದಲ್ಲಿ ರೈತರು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದರು. ಅಂದರೆ ಹಾವೇರಿಯಲ್ಲಿ ರೈತರ ಮೇಲೆ ನಡೆದ ಗೋಲಿಬಾರ್ ಪ್ರಕರಣ, ಚಾಮರಾಜ ನಗರದಲ್ಲಿ ರೈತರ ಮೇಲೆ ನಡೆದ ಲಾಠಿಚಾರ್ಜ್ ಪ್ರಕರಣ ಹೀಗೆ ಹಲವಾರು ಪ್ರಕರಣಗಳು ನಡೆದವು. ಇವುಗಳಲ್ಲಿ ಮುಖ್ಯವಾಗಿ ಹಾವೇರಿ ಮತ್ತು ಕೊಪ್ಪಳಗಳಲ್ಲಿ ನಡೆದ ಘಟನೆಗಳು ತೀವ್ರ ಸ್ವರೂಪವನ್ನು ಪಡೆದಿದ್ದವು. ಹಾಗಾಗಿ ಈ ಎರಡೂ ಪ್ರಕರಣಗಳನ್ನು ಗುರುತಿಸಿಕೊಳ್ಳುವುದು ಮತ್ತು ವಿವರಿಸುವುದು ಮುಖ್ಯವೆನಿಸುತ್ತದೆ.

ರಾಜ್ಯದಲ್ಲಿ ರಸಗೊಬ್ಬರದ ಅಭಾವ ಉಂಟಾಗಿ ರೈತರು ಕಂಗಾಲಾಗಿದ್ದ ಸಂದರ್ಭದಲ್ಲಿ ಹಾವೇರಿಯಲ್ಲಿ ರೈತರು ರಸಗೊಬ್ಬರ ಪಡೆಯಲು ಸಹಕಾರಿ ಸಂಘಗಳ ಮುಂದೆ ಎಂಟ್ಹತ್ತು ದಿನಗಳ ಕಾಲ ಸರತಿ ಸಾಲಿನಲ್ಲಿ ನಿಂತರು. ಆದರೆ ರಸಗೊಬ್ಬರ ಸಿಗದೆ ಹೋಯಿತು. ಇದರಿಂದ ರೊಚ್ಚಿಗೆದ್ದಂತಹ ಹಾವೇರಿ ಜಿಲ್ಲೆಯ ರೈತರು ಸಮರ್ಪಕವಾಗಿ ರಸಗೊಬ್ಬರವನ್ನು ವಿತರಣೆ ಮಾಡಬೇಕೆಂದು ಅಂದಿನ ಸರಕಾರದ ವಿರುದ್ಧ ಹೋರಾಟಕ್ಕೆ ಇಳಿದರು. ಈ ಸಂದರ್ಭದಲ್ಲಿ ಸರಕಾರವಾಗಲೀ ಅಥವಾ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಾಗಲಿ ರೈತರ ಸಮಸ್ಯೆಯನ್ನು ಬಗೆಹರಿಸುವಂತಹ ಕ್ರಮ ಕೈಗೊಳ್ಳಲಿಲ್ಲ. ಬದಲಿಗೆ ಹೋರಾಟ ನಿರತ ರೈತರನ್ನು ಚದುರಿಸಲು ಅವರ ಮೇಲೆ ಲಾಠಿ ಚಾರ್ಜ್ ಮಾಡುವಂತೆ ಸರಕಾರ ಪೊಲೀಸರಿಗೆ ಆದೇಶವನ್ನು ರವಾನಿಸಿತು. ಸರಕಾರದ ಆದೇಶದ ಅನ್ವಯ ಪೊಲೀಸರು ರೈತರ ಮೇಲೆ ಲಾಠಿ ಚಾರ್ಜ್ ಮಾಡಿದರು. ಏಕಾಏಕಿ ಲಾಠಿಚಾರ್ಜ್ ಮಾಡಿದ ಪೊಲೀಸರ ವರ್ತನೆಯನ್ನು ಸಹಿಸದ ರೈತರು, ಪೊಲೀಸರ ಮೇಲೆ ಕಲ್ಲು ತೂರಾಟ ಮಾಡಿದರು. ಇದರಿಂದಾಗಿ ಪರಿಸ್ಥಿತಿ ವಿಕೋಪಕ್ಕೆ ಹೋದಾಗ ರಕ್ಷಣಾ ಇಲಾಖೆಯವರು ರೈತರ ಮೇಲೆ ಪ್ರತಿದಾಳಿ ಎಂಬಂತೆ ಗೋಲಿಬಾರ್ ಮಾಡುತ್ತಾರೆ. ಈ ಗೋಲಿಬಾರ್ ಪ್ರಕರಣದಲ್ಲಿ ಒಬ್ಬ ರೈತ ಮೃತನಾಗುತ್ತಾನೆ. ಹಾಗೆಯೇ ಬಹಳಷ್ಟು ರೈತರಿಗೆ ಗಾಯಗಳಾಗುತ್ತವೆ. ಮತ್ತು ಸರಕಾರ ಧರಣಿ ನಿರತ ರೈತ ಮುಖಂಡರ ಮೇಲೆ ಗುಂಡಾಕಾಯಿದೆ ಅಡಿಯಲ್ಲಿ ದೂರು ದಾಖಲಿಸುತ್ತದೆ. ಅದೇ ರಿತಿಯಲ್ಲಿ ಕೊಪ್ಪಳದಲ್ಲಿಯೂ ಸಹ ಸಾಮಾನ್ಯ ಕೂಲಿಕಾರ್ಮಿಕರ ಮೇಲೆ ಕೇಸನ್ನು ಧಾಖಲಿಸಲಾಗಿತ್ತು. ಈ ಎರಡೂ ಪ್ರಕರಣಗಳನ್ನು ದೃಶ್ಯ ಮತ್ತು ಪತ್ರಿಕಾ ಮಾಧ್ಯಮಗಳಲ್ಲಿ ಕಣ್ಣಿಗೆ ಕಟ್ಟುವಹಾಗೆ ಚಿತ್ರಿಸಲಾಗಿತ್ತು.

ಇದುವರೆಗೆ ಕರ್ನಾಟಕದಲ್ಲಿ ರೈತರ ಮೇಲೆ ದಾಖಲಾಗಿರುವಂತ ಕೇಸ್‌ಗಳನ್ನು ಆಧಾರವಾಗಿಟ್ಟುಕೊಂಡು, ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಮುಖಂಡರು ರೈತರ ಮೇಲಿನ ಕೇಸ್ ವಾಪಸಿಗೆ ಕ್ರಮ ತೆಗೆದುಕೊಳ್ಳಬೇಕೆಂದು ೨೬

ಸೆಪ್ಟೆಂಬರ್ ೨೦೦೯ರಂದು ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಮುಖ್ಯಮಂತ್ರಿಗಳ ಜೊತೆ ಮುಕ್ತ ಸಂವಾದ ಕಾರ್ಯಕ್ರಮವನ್ನು ಏರ್ಪಡಿಸುತ್ತಾರೆ. ಸುಮಾರು ಒಂದುವರೆ ಗಂಟೆ ಕಾಲ ರೈತ ಮುಖಂಡರ ಮಾತುಗಳನ್ನು ಶಾಂತಚಿತ್ತರಾಗಿ ಆಲಿಸಿದ ಮುಖ್ಯಮಂತ್ರಿಗಳು ಇದುವರೆಗೆ ರೈತರ ಮೇಲೆ ದಾಖಲಾಗಿರುವಂತ ಎಲ್ಲಾ ಕೇಸ್‌ಗಳನ್ನು ಸರಕಾರ ಹಿಂದಕ್ಕೆ ತೆಗೆದುಕೊಳ್ಳುತ್ತದೆ ಮತ್ತು ನಿಮ್ಮ ಎಲ್ಲಾ ಬೇಡಿಕೆಗಳನ್ನು ಈಡೇರಿಸುತ್ತೇವೆ ಎಂದು ಭರವಸೆಯನ್ನು ನೀಡುತ್ತಾರೆ. ಆದರೆ ಈ ಭರವಸೆಗಳು ಕಾರ್ಯಾನುಷ್ಠಾನಕ್ಕೆ ಬರದೆ ಹಾಗೆಯೇ ಉಳಿದವು. ಅಂದರೆ ಸರಕಾರ ರೈತ ಕೂಲಿ ಕಾರ್ಮಿಕರ ಮೇಲೆ ಆಗಿರುವಂತ ಕೇಸನ್ನು ಈವತ್ತಿನ ವರೆಗೆ ಹಿಂದಕ್ಕೆ ತೆಗೆದುಕೊಂಡಿರುವುದಿಲ್ಲ.

ಕೊಪ್ಪಳದ ಪ್ರಕರಣಕ್ಕೆ ಸಂಬಂಧಿದಂತೆ ರೈತ ಸಂಘದ ರಾಜ್ಯಾಧ್ಯಕ್ಷರ ನೇತೃತ್ವದಲ್ಲಿ ಸುಮಾರು ಮೂವತ್ತೈದರಿಂದ ನಲವತ್ತು ಜನ ಮಹಿಳಾ ಮತ್ತು ಪುರುಷ ಕಾರ್ಮಿಕರ ನಿಯೋಗ ಅಂದಿನ ಸರಕಾರವನ್ನು ಭೇಟಿಯಾಗಿ ಕೂಲಿಕಾರ್ಮಿಕರ ಕಣ್ಣೀರಿನ ಕಥೆಯನ್ನು ಹೇಳುವುದರ ಮೂಲಕ ಅಮಾಯಕ ಕೂಲಿಕಾರರ ಮೇಲೆ ಆಗಿರುವಂತಹ ಕೇಸನ್ನು ಸರಕಾರ ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ಹತ್ತು ಹಲವು ಭಾರಿ ಮನವಿ ಮಾಡಿಕೊಂಡರು. ಆದರೆ ಸರಕಾರ ಕೇಸನ್ನು ಹಿಂದಕ್ಕೆ ತೆಗೆದುಕೊಳ್ಳುತ್ತೇವೆಂದು ಆಶ್ವಾಸನೆ ಕೊಟ್ಟದೆಯೇ ಹೊರೆತು ಯಾವೊಬ್ಬ ಕೂಲಿ ಕಾರ್ಮಿಕರನ್ನು ಕೇಸಿನಿಂದ ಮುಕ್ತಿಗೊಳಿಸುವಂತಹ ಕೆಲಸ ಮಾಡಲಿಲ್ಲ.

ಆದರೆ ಇದೇ ಸಂದರ್ಭದಲ್ಲಿ ಕೊಪ್ಪಳದಲ್ಲಿ ಆರ್.ಎಸ್.ಎಸ್. ಸಂಘಟನೆಯ ಕಾರ್ಯಕರ್ತರ ಮೇಲೆ ಆದಂತಹ ಕೇಸನ್ನು ಹಾಗೆಯೇ ಗಂಗಾವತಿಯಲ್ಲಿ ಗಣೇಶ ಚತುರ್ಥಿಯ ಸಂದರ್ಭದಲ್ಲಿ ಹಿಂದೂ ಮತ್ತು ಮುಸ್ಲಿಂ ಸಂಘಟನೆಗಳ ಮಧ್ಯೆ ಗಲಾಟೆ ಆದಾಗ ಹಿಂದೂ ಸಂಘಟನೆಗಳ ಮೇಲೆ ಆದಂತಹ ಕೇಸನ್ನು ಕ್ಷಣಾರ್ಧದಲ್ಲಿ ಹಿಂದಕ್ಕೆ ತೆಗೆದುಕೊಳ್ಳಲಾಗಿತ್ತು. ಇಲ್ಲಿ ನಾವು ಗಮನಿಸಬೇಕಾಗಿರುವುದು ಏನೆಂದರೆ ನಮ್ಮ ಆಡಳಿತಾರೂಢ ಸರಕಾರಗಳಿಗೆ ಯಾವುದು ಮುಖ್ಯವೆನಿಸುತ್ತದೆ ಮತ್ತು ಯಾವುದು ಅಮುಖ್ಯವೆನಿಸುತ್ತದೆ ಎಂಬುದು. ಏಕೆಂದರೆ ಬಡತನದ ಬೇಗೆಯಲ್ಲಿ ಬೇಯುತ್ತಿರುವ ಕೂಲಿಕಾರರ, ರೈತರ ಕುರಿತಾದ ಸರಕಾರದ ಧೋರಣೆಗಳು ಅಥವಾ ತೆಗೆದುಕೊಂಡ ತೀರ್ಮಾನಗಳು ಸರಕಾರದ ಏಕ ಚಕ್ರಾಧಿಪತ್ಯಕ್ಕೆ ಹಿಡಿದ ಕನ್ನಡಿಯಂತಿದೆ. ಹಾಗೆಯೇ ಇಂದು ಜಾರಿಯಲ್ಲಿರುವ ಸರಕಾರಕ್ಕೂ ಕೂಡ ರೈತರ ಮೇಲಿನ ಕೇಸ್‌ಗಳನ್ನು ಹಿಂದಕ್ಕೆ ತೆಗೆದುಕೊಳ್ಳಲು ಮನವಿಯನ್ನು ಮಾಡಲಾಗಿದೆ. ಆದರೆ ಇಲ್ಲಿಯವರೆಗೂ ಇದಕ್ಕೆ ಸಂಬಂಧಿಸಿದಂತೆ ಯಾವುದೇ ಕ್ರಮಗಳನ್ನು ತೆಗೆದುಕೊಂಡಿಲ್ಲ. ಹೀಗೆ ಕೊಪ್ಪಳದಲ್ಲಿ ನಡೆದ ಲಾಠಿಚಾರ್ಜ್ ಪ್ರಕರಣದ ಕೇಸ್‌ಗಳಲ್ಲಿ ಬಂಧಿಯಾಗಿದ್ದ ಹಲವಾರು ಕೂಲಿಕಾರ್ಮಿಕರು ಇಂದಿಗೂ ನ್ಯಾಯಕ್ಕಾಗಿ ನ್ಯಾಯಾಲಯಗಳಿಗೆ ತಿರುಗಾಡುತ್ತಿದ್ದಾರೆ.

**೬.೫. ಕರಾಳದಿನ ಆಚರಣೆ**

ಆರಂಭದಲ್ಲಿ ರೈತರ ಮೇಲಿನ ಪ್ರಕರಣ ವಾಪಸ್ ಪಡೆಯುವುದಾಗಿ ಭರವಸೆ ನೀಡಿದ

ಸರಕಾರ ನಂತರದ ದಿನಗಳಲ್ಲಿ ಆದರ ಬಗ್ಗೆ ಚಕಾರ ಎತ್ತದೆ ಪ್ರಕರಣವನ್ನು ವಾಪಸ್ ಪಡೆಯಲು ಮೀನಮೇಷವನ್ನು ಎಣಿಸಿದ ಕಾರಣಕ್ಕಾಗಿ, ರೈತರ ಮೇಲಿನ ಲಾಠಿ ಚಾರ್ಜ್ ಪ್ರಕರಣವನ್ನು ಖಂಡಿಸಿ ರೈತ ಸಂಘಟನೆಯವರು ಇಲ್ಲಿನ ಎಪಿಎಂಸಿ ರೈತಭವನದಲ್ಲಿ ಲಾಠಿ ಚಾರ್ಜ್ ನಡೆದ ದಿನದಂದು ಅಂದರೆ ೨೫.೩.೨೦೧೨ರಂದು ಕರಾಳ ದಿನವನ್ನಾಗಿ ಆಚರಿಸುತ್ತಾರೆ.

ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷರಾದ ಕೆ.ಎಸ್.ಪುಟ್ಟಣ್ಣಯ್ಯನವರು ದಿನಾಂಕ ೨೨.೭.೨೦೧೧ರಂದು ಕೊಪ್ಪಳ ಜಿಲ್ಲೆಯ ಯಲಬುರ್ಗಾ ಪಟ್ಟಣಕ್ಕೆ ಆಗಮಿಸಿದ್ದರು. ಆ ಸಂದರ್ಭದಲ್ಲಿ ಪತ್ರಿಕಾ ಮಾದ್ಯಮದವರೊಂದಿಗೆ ಮಾತನಾಡುತ್ತಾ " ಕೊಪ್ಪಳ ತಾಲೂಕಿನ ರೈತ ಕೂಲಿ ಕಾರ್ಮಿಕರು ಉದ್ಯೋಗ ಖಾತರಿ ಯೋಜನೆಯಲ್ಲಿ ದುಡಿದಂತ ಕೂಲಿಯನ್ನು ಪಾವತಿಸಬೇಕೆಂದು ತಾಲೂಕ ಪಂಚಾಯ್ತಿಯ ಮುಂದೆ ಧರಣಿ ಕುಳಿತಂತ ಸಂದರ್ಭದಲ್ಲಿ, ಧರಣಿ ನಿರತ ಕೂಲಿ ಕಾರ್ಮಿಕರ ಮೇಲೆ ಕೇಸನ್ನು ದಾಖಲಿಸಲಾಗಿದೆ. ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದಲೂ ರೈತ ವಿರೋಧಿ ನೀತಿ ಅನುಸರಿಸುವ ಮೂಲಕ ರೈತರನ್ನು ಶೋಷಿಸುತ್ತಿದೆ ಮತ್ತು ರಾಜ್ಯದಲ್ಲಿ ಪ್ರತಿನಿತ್ಯ ರೈತರ ಮೇಲೆ ಒಂದಿಲ್ಲೊಂದು ಕೇಸ್ ದಾಖಲಿಸುತ್ತಾ ಬಂದಿದೆ. ಹಾಗೆಯೇ ಸಾರ್ವಜನಿಕರ ಹಿತಕಾಯಬೇಕಾದ ಅಧಿಕಾರಿಗಳು ಸರ್ವಾಧಿಕಾರಿಗಳಂತೆ ವರ್ತಿಸುತ್ತಿದ್ದಾರೆ. ಇವರ ವಿರುದ್ಧ ಸರ್ಕಾರ ಕಠಿಣ ಕ್ರಮ ಕೈಗೊಳ್ಳಬೇಕು. ಉದ್ಯೋಗ ಖಾತರಿ ಯೋಜನೆಯಲ್ಲಿ ದುಡಿದಂತ ಬಡ ಕೂಲಿಕಾರ್ಮಿಕರ ಕೂಲಿಯನ್ನು ಪಾವತಿಸಬೇಕು. ಜೊತೆಗೆ ಅವರ ಮೇಲೆ ದಾಖಲಾದಂತಹ ಕೇಸನ್ನು ಸರ್ಕಾರ ಹಿಂತೆಗೆದುಕೊಳ್ಳಬೇಕು. ಇಲ್ಲದಿದ್ದರೆ ರೈತ ಸಂಘ ಉಗ್ರ ಹೋರಾಟಕ್ಕೆ ಇಳಿಯಬೇಕಾಗುತ್ತದೆ" ಎಂದು ಸರ್ಕಾರಕ್ಕೆ ಎಚ್ಚರಿಕೆಯನ್ನು ನೀಡುತ್ತಾರೆ.

ರೈತರ ಮೇಲೆ ಪೊಲೀಸ್ ದೌರ್ಜನ್ಯ ಘಟನೆಯಿಂದ ಇಡೀ ರಾಜ್ಯವೇ ಕೊಪ್ಪಳದ ಮೇಲೆ ವಕ್ರದೃಷ್ಟಿ ಬೀರಿದ್ದು, ಕೊಪ್ಪಳದಂತಹ ಶಾಂತಿಯ ನಗರವನ್ನು ಅಕ್ಷರಶಃ ರಣರಂಗವನ್ನಾಗಿಸಿದ ೨೫ ಮಾರ್ಚ್ ೨೦೧೧ ನಿಜಕ್ಕೂ ಕರಾಳ ದಿನವೇ ಸರಿ. ರಾಜ್ಯದಲ್ಲಿ ರೈತರ ಮೇಲೆ ಸರಕಾರದಿಂದ ನಡೆಯುತ್ತಿರುವ ದಮನಕಾರಿ ಪ್ರವೃತ್ತಿ ಇನ್ನೂ ಕಡಿಮೆಯಾಗುವ ಲಕ್ಷಣಗಳು ಕಂಡುಬರುತ್ತಿಲ್ಲ. ಕೇಂದ್ರದ ಮಹತ್ವಾಕಾಂಕ್ಷಿ ಯೋಜನೆಗಳಲ್ಲೊಂದಾದ ಉದ್ಯೋಗ ಖಾತರಿ ಯೋಜನೆಯಡಿ ದುಡಿದವರ ವೇತನ ವಿತರಣೆ ಹಿಂದೇಟಿಗೆ ಕಾರಣವೇನು? ಮಾರ್ಚ್ ೨೨ ರಿಂದ ೨೫ನೇ ತಾರೀಕಿನ ತನಕ ಕೊಪ್ಪಳದ ತಾಲೂಕು ಪಂಚಾಯ್ತಿ ಕಛೇರಿ ಮುಂದೆ ನಡೆದ ಶಾಂತಿಯುತ ಧರಣಿ ಸತ್ಯಾಗ್ರಹ ಮಾಡುವ ಮೂಲಕ ಸರಕಾರದ ಗಮನ ಸೆಳೆದಿದ್ದರೂ ಕೂಲಿ ಪಾವತಿಸಲು ಮೀನಮೇಷ ಮಾಡಲು ಕಾರಣವಾದರೂ ಏನು? ತಾಲೂಕು ಪಂಚಾಯ್ತಿ ಅಧಿಕಾರಿಗಳ ವಿಳಂಬ ಧೋರಣೆಯಿಂದ ಪೊಲೀಸರು ಕೃಷಿ ಕಾರ್ಮಿಕರ ಮೇಲೆ ಸಂಘರ್ಷ ನಡೆಸುವುದಕ್ಕೆ ಕಾಣದ ಕೈ ಯಾವುದು? ೨೦೦೯-೧೦ರಲ್ಲಿ

ದುಡಿದ ಕೂಲಿಯ ಹಣವನ್ನು ಅಧಿಕಾರಿಗಳು ಪಾವತಿಸಲು ಸುತಾರಾಂ ತಯಾರಿಲ್ಲವೆಂದರೆ ಇದರಲ್ಲೇನೋ ಅನುಮಾನದ ಒಳಸುಳಿ ಇರುವುದು ಸ್ಪಷ್ಟವಾಗುತ್ತದೆ.

ಮಾರ್ಚ್ ೨೫ನೇ ತಾರೀಖು ಕೊಪ್ಪಳ ತಾಲೂಕಿನ ರೈತರಿಗೆ ಅಕ್ಷರಶಃ ಕರಾಳ ದಿನವಾಗಿತ್ತು. ಯಾವುದೇ ತಪ್ಪು ಮಾಡದೆ, ಯಾವುದೇ ಎಚ್ಚರಿಕೆ ನೀಡದೆ ಏಕಾಏಕಿ ಸಾಮಾನ್ಯ ರೈತರ ಮೇಲೆ ಹಾಗೂ ಮಹಿಳೆಯರ ಮೇಲೆ ನಡೆದ ಅಮಾನವೀಯ ಕೃತ್ಯ ನಿಜಕ್ಕೂ ಘೋರ. ಇಂಥ ಯಾವುದೇ ಘಟನೆಗಳನ್ನು ನೋಡದ ಮುಗ್ದರ ಮೇಲೆ ಖಾಕಿ ಖದರ್‌ನ ಕೈಚಳಕಕ್ಕೆ ಪ್ರಜ್ಞಾವಂತರು ಕಕ್ಕಾಬಿಕ್ಕಿಯಾಗಿದ್ದಾರೆ. ಸುಸಂಸ್ಕೃತರು, ಉತ್ತಮ ವಾಗ್ಮಿಯೆಂದು ಹೆಸರು ಪಡೆದಿದ್ದ ಕೊಪ್ಪಳದ ಎಸ್.ಪಿ. ಆಗಿದ್ದಂತಹ ಈಶ್ವರಚಂದ್ರ ವಿದ್ಯಾಸಾಗರ ಅವರ ಕಾರ್ಯವೈಖರಿಯನ್ನು ಜನ ಪ್ರಶ್ನಿಸುವಂತಾಗಿದ್ದು ಆಶ್ಚರ್ಯಕರ. ಕೊಪ್ಪಳ ತಾಲೂಕು ಪಂಚಾಯ್ತಿ ಮುಂದೆ ಧರಣಿ ನಡೆಸುತ್ತಿದ್ದವರ ಪೈಕಿ ರೈತರು ಮತ್ತು ಪದಾಧಿಕಾರಿಗಳು ಸೇರಿ ೪೦೦ ರಿಂದ ೪೫೦ ಜನಕ್ಕಿಂತ ಹೆಚ್ಚಿರಲಿಲ್ಲ. ಆದರೆ ಇವರು ನಡೆಸುವ ಹೋರಾಟ ಒಂದು ವೇಳೆ ಉಗ್ರವಾಗುವ ಲಕ್ಷಣಗಳ ಕುರಿತು ಮಾಹಿತಿಗಳಿದ್ದರೆ ಪ್ರತಿಭಟನಾಕಾರರ ಮನವೊಲಿಸಬಹುದಿತ್ತು. ಆದರೆ ಅದನ್ನು ಬಿಟ್ಟು ಮನಬಂದಂತೆ ಅಮಾನುಷವಾಗಿ ಥಳಿಸಿದ ಕೃತ್ಯ ಮಾತ್ರ ಖಂಡಿಸುವಂತದ್ದು.

ದೇಶದ ಅಸಂಖ್ಯಾತ ಅಸಂಘಟಿತ ಕೃಷಿಕೂಲಿ ಕಾರ್ಮಿಕರು, ಮಹಿಳೆಯರು ಒಪ್ಪೊತ್ತಿನ ತುತ್ತಿಗಾಗಿ ದೂರದ ಸಮುದ್ರ ತೀರದ ಪ್ರದೇಶದಲ್ಲಿ ಮತ್ತು ಬೃಹತ್ ನಗರಗಳಿಗೆ ಅಪಾಯಕಾರಿ ಪ್ರದೇಶದಲ್ಲಿ ಕಟ್ಟಡ ನಿರ್ಮಾಣ ಮತ್ತಿತರ ಹತ್ತಾರು ಉದ್ಯೋಗಗಳನ್ನು ಅರಸಿ ಸಾವು ನೋವನ್ನು ಲೆಕ್ಕಿಸದೆ ದುಡಿಯುತ್ತಿದ್ದವರ ಬದುಕು ಹಸನಾಗಲಿ ಎಂಬ ಸದುದ್ದೇಶ ಇಲ್ಲಿ ತಿರುವು ಮುರುವು ಆಗಿದೆ. ಅಂದರೆ ಧನದಾಹಿಗಳ ಕಪಿಮುಷ್ಟಿಯಲ್ಲಿ ಉದ್ಯೋಗ ಖಾತರಿ ಯೋಜನೆ ಇದೆ. ಈ ಯೋಜನೆಯು ಜಾಬ್‌ಕಾರ್ಡ್‌ಗಳು ಕಾಳಸಂತೆಯಲ್ಲಿ ರಾರಾಜಿಸುತ್ತಿರುವುದನ್ನು ನೋಡಿದರೆ, ಮಹತ್ವಾಕಾಂಕ್ಷಿ ಯೋಜನೆಗೆ ಬಿದ್ದ ಬಲವಾದ ಪೆಟ್ಟು, ರಾಜಕೀಯ ಪುಡಾರಿಗಳು, ಗುತ್ತಿಗೆದಾರರು, ಭ್ರಷ್ಟ ಅಧಿಕಾರಿಗಳು ಸೇರಿಕೊಂಡು ಹಣದೋಚುತ್ತಿದ್ದಾರೆ. ಇವರ ವಿರುದ್ಧ ನಡೆದ ರೈತ ಹೋರಾಟದ ಪರಿಣಾಮವೇ ಕೊಪ್ಪಳದ ಕೂಲಿಕಾರರ ಮೇಲಿನ ಲಾಟಿಚಾರ್ಜ್ ಪ್ರಕರಣ ಸಾಕ್ಷಿಯಾಗುತ್ತದೆ. ಆ ದಿನವನ್ನು ಕೊಪ್ಪಳದಲ್ಲಿ ರೈತ ಸಂಘಟನೆಯವರು ಕರಾಳ ದಿನವನ್ನಾಗಿ ಆಚರಿಸಿದರು.

ಇಲ್ಲಿ ಮುಖ್ಯವಾಗಿ ಗಮನಿಸಬೇಕಾದುದು ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷರು ಸಹ ತಮ್ಮ ಮಾತಿನಲ್ಲಿ ರೈತ ಕೂಲಿಕಾರರು ಎಂದು ಹೇಳಿದರೇ ಹೊರತು ಎಲ್ಲಿಯೂ ಸಹ ಬಡ ಕೂಲಿಕಾರರು ಎಂದು ಮಾತನಾಡಲಿಲ್ಲ. ಇವರ ಮಾತುಗಳೂ ಸಹ ರಾಜಕೀಯ ಪ್ರೇರಿತವಾಗಿದ್ದವು. ಹಾಗಾಗಿ ಈ ಹೋರಾಟ ರೈತ ಹೋರಾಟವಾಗಿ ಮಾರ್ಪಟ್ಟಿತೇ ಹೊರತು ಕೂಲಿಕಾರರ ಹೋರಾಟವಾಗಿಯಲ್ಲ ಎಂಬುದು ಗಮನಾರ್ಹ ಸಂಗತಿ.

## ೬.೬. ಪ್ರಕರಣದ ಮೌಖಿಕ ನಿರೂಪಣೆಗಳು

ಲಾಠಿಚಾರ್ಜ್ ಪ್ರಕರಣಕ್ಕೆ ಸಂಬಂಧಿಸಿದಂತೆ ಐದು ಗ್ರಾಮ ಪಂಚಾಯತಿಗಳಲ್ಲಿ ಕ್ಷೇತ್ರಕಾರ್ಯವನ್ನು ಕೈಗೊಳ್ಳಲಾಯಿತು. ಈ ಸಂದರ್ಭದಲ್ಲಿ ಸಂಘಟನೆಯ ಸದಸ್ಯರನ್ನು ಮತ್ತು ಮಹಿಳಾ ಮತ್ತು ಪುರುಷ ಕೂಲಿಕಾರರನ್ನು ಸಂದರ್ಶಿಸಿ ಮಾಹಿತಿಯನ್ನು ಸಂಗ್ರಹಿಸಲಾಯಿತು. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಇಂತಹ ಹಲವು ಬಗೆಯ ಪ್ರಕರಣಗಳು ಕಂಡುಬಂದಿವೆ. ಇದರಲ್ಲಿ ನರೇಗಾ ಯೋಜನೆಯ ಅನುಷ್ಠಾನದ ಅವ್ಯವಸ್ಥೆಯನ್ನು ಬಿಂಬಿಸುವ ಮತ್ತು ಸರಕಾರದ ದಬ್ಬಾಳಿಕೆಯನ್ನು ತೋರಿಸುವ ಮಾದರಿಯನ್ನು ಲಾಠಿಚಾರ್ಜ್ ಪ್ರಕರಣ ಬಿಂಬಿಸುತ್ತಿದೆ. ಈ ಪ್ರಕರಣವನ್ನು ಕುರಿತ ಈ ಭಾಗದ ರೈತ ಕೂಲಿ ಕಾರ್ಮಿಕರ ನಿರೂಪಣೆಗಳು ಇದರ ಮತ್ತೊಂದು ಮಗ್ಗುಲನ್ನು ತೆರೆಯುತ್ತವೆ.

ಇರಕಲ್‌ಗಡದ ಅನ್ನಪೂರ್ಣಮ್ಮ ಎಂಬುವವರನ್ನು ಮಾತನಾಡಿಸಿದಾಗ, ಅವರು ಘಟನೆಯ ಬಗ್ಗೆ ಮತ್ತು ತಮಗಾದ ನೋವಿನ ಬಗ್ಗೆ ಹೀಗೆ ಹೇಳಿದರು. "ಯೋಜನೆದಾಗ ಒಂದ್ವರೆ ತಿಂಗಳ ಕೆಲ್ಸಾ ಮಾಡೀವಿ. ದುಡಿದ ಕೂಲಿ ಕೇಳಾಕ ಹೋದ್ರ ಪಂಚಾಯ್ತಿ ಅಧ್ಯಕ್ಷರಾಗಲಿ, ಸದಸ್ಯರಾಗಲಿ ಮತ್ಯಾ ಸೆಕ್ರೆಟರಿ ಆಗಲಿ ಯಾರು ಗಮನಕ್ಕ ತಗಲಿಲ್ಲ. ಮತ್ಯಾ ಯಾರು ಮೈಮ್ಯಾಲೆ ಹಾಕ್ಕ್ಯಾಲಿಲ್ಲ. ಎಲ್ಲಾರು ಜಾರಿಕೆಂಡು ಜಾರಿಕೆಂಡು ಹೋಗಾಕತ್ತಿದ್ರು. ಜಾಸ್ತಿ ಬಿಗುವು ಮಾಡಿ ಕೇಳಿದಾಗ ಸರಕಾರದಿಂದ ರೊಕ್ಕ ಬಂದಿಲ್ಲ. ರೊಕ್ಕ ಬಂದಮ್ಯಾಲೆ ತಗಳ್ರಿ ಅಂತ ಸಾಗಾಕ್ಯಂತ ಬಂದ್ರು. ಒಂದಲ್ಲ ಎರಡು ದಿನ ಅಲ್ಲ. ಆರು ತಿಂಗಳ ಇದನ್ನೇ ಸಾಗಕಿದ್ರು. ಅದಾದ್ಮೇಲೆ ದುಡಿಲಾರದವರ ಹೆಸರಮ್ಯಾಗ ಹಾಜರಿ ಹಾಕಿ ರೊಕ್ಕ ತಿಂದಾರಂತ ಗೊತ್ತಾತು. ಅವಾಗ ನಾವು ಎಲ್ಲಾರು ಕೂಲಿ ಕೆಲ್ಸ ಮಾಡಿದವರು. ಮತ್ಯಾ ರೈತ ಸಂಘದವರು ಸೇರಿ ಇರಕಲ್‌ಗಡ ಪಂಚಾಯ್ತಿ ಮುಂದ ಮೂರ್‍ನಾಲ್ಕು ದಿನ ಟ್ರೈಕ್ ಮಾಡಿದ್ವಿ, ಮೂರ್‍ನಾಲ್ಕೂ ದಿನ ಟ್ರೈಕ್ ಮಾಡಿದ ಮ್ಯಾಲೆ ನಮಗ ದುಡದಂತ ಕೂಲಿ ಕೊಡ್ತೀವಿ ಅಂತ ಆಗಲಿ, ದುಡಿಯಾಕ ಕೆಲ್ಸ ಕೊಡ್ತೀವಂತಾಗಲಿ ಯಾರು ಹೇಳಲಿಲ್ಲ. ಮತ್ತೆ ನಮ್ಮನ್ನ ಯಾರು ಮಾತಾಡ್ಸಲಿಲ್ಲ. ಹಿಂಗಾದ್ರೆ ಇದು ಬಗಿಹರಿದಿಲ್ಲಂತ ನಮ್ ಇರಕಲ್‌ಗಡದವರು, ಇಂದರಗಿಯವರು, ಮೆತ್ತಗಲ್‌ವರು, ಹಾಸಗಲ್‌ವರು ಮತ್ಯಾ ಬೂದಗುಂಪದವರು ಸೇರಿ ಕೊಪ್ಪಳ ತಾಲೂಕ ಆಫೀಸಿನ ಮುಂದ ಮೂರು ದಿನ ಟ್ರೈಕ್ ಮಾಡಿದ್ವಿ, ಕೊಪ್ಪಳದಾಗ ಸತೆ ಯಾ ಆಫೀಸರ್ ಬಂದು ನಮಗ ಮಾತಾಡ್ಸಲಿಲ್ಲ. ಯಾಕ ಟ್ರೈಕ್ ಮಾಡ್ತೀರಿ ಅಂತ ಒಂದು ಮಾತು ಕೇಳಲಿಲ್ಲ. ಅವಾಗ ನಮ್ ಸಂಘದವರು ಮತ್ತೆ ಕೂಲಿಕಾರರು ಸೇರಿ ತಾಲೂಕ ಆಫೀಸಿಗೆ ಬೀಗ ಹಾಕಾಕ ಹೋಗಿದ್ದೆ ತಡ ಪೊಲೀಸ್ರು ಎಲ್ಲಿದ್ರೋ, ಎಲ್ಲಿಲ್ಲೋ ಬಂದು ಬಂದಿದ್ದೇನು ನಮಗೆ ದನಕ್ಕ ಬಡದಂಗ ಎಳೆದಾಡಿ ಮನಸ್ಸಿಗೆ ಬಂದಾಗ ಹೊಡ್ಯಾಕತ್ತಿದ್ರು. ಪೆಂಡಾಲಿಗೆ ಹಾಕಿದ್ದ ಕಟಿಗಿ ತಗಂಡು ನಮ್ ಕೂಲಿಕಾರರಿಗೆ ಮತ್ಯಾ ರೈತ ಸಂಘದವರಿಗೆ ಸಿಕ್ಕಸಿಕ್ಕಂಗ ಹೊಡದ್ರು. ಪೊಲೀಸರು ವಡ್ಯಾದು ನೋಡಿ ನಾನು ಓಡಿ ಹೋಗಾನಂತ ಓಡುಕತ್ತಿದ್ದೆ ಆಗ

ಸೀರೆ ಸೆರಗು ಹಿಡಿದು, ಎಳೆದು ನನಗ ಕಟಿಗಿ ತಗಂಡು ವಡುದ್ರು, ಆ ಮ್ಯಾಲೆ ತುರುಬು ಹಿಡಿದು ಜಾಡ್ಸಿ ನೂಕಿಬುಟ್ರು, ಆಗ ನಾನು ತಾಲೂಕ ಆಫೀಸಿನ ಪಾಂಟಣಗಿಗೆ ಹೋಗಿ ಬಿದ್ದೆ. ಬಿದ್ದಾಗ ನನಗ ಮೂರ್ಚೆ ಹೋಗಿಬುಡಿತು. ಮುಂದ ಏನಾಯಿತೋ ಗೊತ್ತಿಲ್ಲ. ಆವಾಗ ನಮ್ ಸಂಘದವರು ಸರಕಾರ ದವಾಖಾನಿ ಅಂಬ್ಯುಲೆನ್ಸ್‌ಗೆ ಪೋನು ಮಾಡಿ, ನನ್ನ ದವಾಖಾನಿಗೆ ಅಡ್ಮಿಂಟ್ ಮಾಡಿದ್ರಂತ. ಪೊಲೀಸರು ದಬ್ಬಿದಾಗ ಪಾಂಟಣಿಗಿ ಪೊಟ್ಟೆಗೆ ಬಡಿದು ಬಾರೀ ಪೆಟ್ಟು ಆಗಿ ಗರ್ಭಕೋಶಕ್ಕ ಹೊಡ್ತಾ ಬಿದ್ದಾದ. ಅಂಗಾಗಿ ಅಪರೇಶನ್ ಮಾಡ್ಬೇಕು. ಐವತ್ತರಿಂದ ಅರವತ್ತು ಸಾವಿರ ರೂಪಾಯಿ ಖರ್ಚು ಬರ್ತಾದ ಅಂತ ಹೇಳಿದ್ರು, ಅವಾಗ ನಾನು ಏನು ಮಾಡ್ಬೇಕು ಮೊದಲೇ ನಾವು ಬಡುವುರು. ಅಡಿವ್ಯಾಗ ಎಕರೆ ಹೊಲ ಇಲ್ಲ. ಊರಾಗ ಅಂಗೈ ಅಗಲ ಮನೆ ಇಲ್ಲ. ಒಂದು ಹತ್ತು ವರ್ಷದ ಹಿಂದ ಸರಕಾರದ ಕಡೆಯಿಂದ ಒಂದು ಜನತಾ ಮನೆ ಆಗಿತ್ತು. ಅದ್ಬುಟ್ರೆ ನನಗ ಸರಕಾರದಿಂದ ಏನು ಆಗಿಲ್ಲ. ಮನ್ಯಾಗ ಸಣ್ಣ-ಸಣ್ಣ ಮಕ್ಳು ಐದಾವ. ಜೀವ್ನ ನಡಿಸೋದೆ ಕಷ್ಟ ಆಗ್ಯಾದ ಅಂತದ್ರಾಗ ಐವತ್ತು ಅರವತ್ತು ಸಾವುರ ಕೊಟ್ಟು ಆಪರೇಶನ್ ಮಾಡ್ಸಿಗೆಂಬಾದು ನಮ್ಮಿಂದ ಆಗ್ತಾದೇನು? ಹಂಗಾಗಿ ಏನಾರ ಆಗಲಿ ಅಂತೇಳಿ ಹತ್ತುದಿನ ದವಾಖಾನ್ಯಾಗ ಇದ್ದು, ಆಮ್ಯಾಲೆ ಆ ದೇವರು ಇಟ್ಟಂಗ ಆಗ್ತಾದ 'ಬದುಕಿದ್ರೆ ಆ ದೇವರು ಪಾಲು ಸತ್ರೆ ಮಣ್ಣು ಪಾಲು' ಅಂತ ದೇವರ ಮ್ಯಾಲೆ ಬಾರ ಹಾಕಿ ಮನಿಗ್ಯಾ ಡಿಶ್ಚಾರ್ಜ್ ಮಾಡಿಕೆಂಡು ಬಂದ್ಬುಟ್ಟೆ. ಮನಿಗೆ ಬಂದು ಹತ್ತು ದಿನಕ್ಕ ಹೊಟ್ಟೆ ಬಾಹು ಬಂದು ಉಬ್ಬಿಕೆಂತು. ಕಂಡಂಗ ನೋವು ಆಗಕತ್ತಿತು. ಏನು ಮಾಡಾಕ ದಾರಿ ಇಲ್ಲದಂಗ ಆಯಿತು. ನಮ್ ತವರು ಮನಿಯವ್ರು ಬಂದು ದವಾಖಾನಿಗೆ ಅಡ್ಮಿಂಟ್ ಮಾಡಿ ತೋರಿಸಿದ್ರು, ಆವಾಗ ಡಾಕ್ಟ್ರು ಗರ್ಭಕೋಶಕ್ಕ ಪೆಟ್ಟಾಗಿದ್ರಿಂದ ಆಪರೇಶನ್ ಮಾಡಿ ಗರ್ಭಕೋಶ ತೆಗೆದುಹಾಕಿದ್ರು, ನೋಡ್ರಿ ಸಾರ್ ನಮ್ ಕತೆ ಹಿಂಗಾದ. ಯೋಜನದಾಗ ದುಡದಂತ ಕೂಲಿ ಕೇಳಾಕ ಹೋದ್ರ ನಮಗ ಈ ಗತಿ ಮಾಡ್ಯಾರ. ಹಿಂಗ ಮಾಡಿದ್ರೆ ನಮ್ಮಂತ ಬಡವರು ಎಲ್ಲಿಗೆ ಹೋಗ್ಬೇಕು ನಮ್ಮಂತ ಬಡಜನ ಯಂಗ ಬದುಕ್ಬೇಕು. ದುಡದಂತ ಕೂಲಿ ಕೊಡ್ಲಿಲ್ಲ. ಮತ್ತೆ ನಮ್ಮ್ಯಾಲೇ ಕೇಸ್ ಮಾಡ್ಯಾರ. ದುಡದಂತ ಕೂಲಿ ಕೇಳಾಕ ಹೋಗಿ ಬಡಿಸಿಗೆಂಡಿದ್ದು ಒಂದಾ, ಐವತ್ತರಿಂದ ಅರವತ್ತು ಸಾವುರ ದವಾಖಾನಿಗೆ ಇಟ್ಟಿದ್ದು ಒಂದಾ. ಮತ್ತೆ ನಮ್ಮ್ಯಾಲೆ ಕೇಸ್ ಮಾಡಿದ್ದು ಒಂದಾ ಇದು ಯಂಗ ಐತಿ ನೀವೆ ನೋಡ್ರಿ, ಇದು ಏನಿದ್ರೆ ಒಂಟಿ ಹೆಣ್ಮಕ್ಕಳು ಬಡವುರು ಬದ್ಕಂತ ಕಾಲನೇ ಅಲ್ಲ ನೋಡ್ರಿ, ಮಾಡಿಕೆಂಡು ತಿಂದ್ರೆ ಮಂದಿ ಕಾಟ, ಬೇಡಿಕೆಂಡು ತಿಂದ್ರೆ ನಾಯಿ ಕಾಟಂತ ಹಂಗ ಆಗೈತಿ ನಮ್ ಬಾಳೇವು". ಎಂದು ತಮ್ಮ ನೋವನ್ನು ತೋಡಿಕೊಂಡಳು. ಯೋಜನೆ ರೂಪಿತವಾಗಿರುವುದು ಬಡಜನರ ಅಭಿವೃದ್ಧಿಗಾಗಿ. ಆದರೆ ಈ ಯೋಜನೆ ಕಾರ್ಯಾನುಷ್ಠಾನಕ್ಕೆ ಬರುವ ಹೊತ್ತಿಗೆ ಅದು ಉಳ್ಳವರ ಪಾಲಾಗಿರುತ್ತದೆ. ಇದನ್ನು ಪ್ರಶ್ನಿಸಿದ ಜನರನ್ನು ಹಿಂಸೆಗೆ ದೂಡಲಾಗುತ್ತದೆ. ಇದು ಸಮಾಜದಲ್ಲಿನ ನೈಜ ಸ್ಥಿತಿ. ಇಲ್ಲಿ ಅನ್ನಪೂರ್ಣಮ್ಮ ದುಡಿದ ಕೂಲಿ ಕೇಳಲು ಹೋಗಿ ತನ್ನ ಜೀವನ ಪೂರ್ತಿ ನ್ಯಾಯಾಲಯಕ್ಕೆ

ಓಡಾಡುವಂತಾಗಿದ್ದು ಮತ್ತು ತನ್ನ ಗರ್ಭಕೋಶವನ್ನೇ ತೆಗೆಸಿಕೊಂಡದ್ದು ಇವು ಸಮಾಜದಲ್ಲಿನ ಮಾನವೀಯ ಮೌಲ್ಯಗಳಿಗೆ ಹಿಡಿದ ಕನ್ನಡಿಯಂತಿದೆ.

ಕೊಪ್ಪಳ ತಾಲೂಕಿನ ಬೂದಗುಂಪ ಗ್ರಾಮಕ್ಕೆ ಹೋಗಿ ಗಂಗವ್ವ ಎನ್ನುವವರನ್ನು ಭೇಟಿಯಾಗಿ ಮಾತನಾಡಿಸಿದಾಗ ಇವರು ಹೇಳುವ ಮಾತಿನಲ್ಲಿ ಈ ಘಟನೆಯ ಸೂಕ್ಷ್ಮವನ್ನು ಅರ್ಥಮಾಡಿಕೊಳ್ಳಬಹುದು: "ನಮ್ಮೂರಾಗ ಎರುಡ್ವರೆ ಮೂರು ವರ್ಸದ ಹಿಂದೆ ಕೆಲಸ ನಡದಿತ್ತು. ಅದುಬ್ಟ್ರೆ ಇಲ್ಲಿತನ ಯಾವ ಕೆಲ್ಸ ನಡಿದಿಲ್ಲ. ನಮ್ಮೂರಾಗ ಅರವತ್ತು ಮಂದಿ ಹೆಣ್ಮಕ್ಕಳು ರೈತ ಸಂಘದಾಗ ಇದ್ದೀವಿ. ನಾವೆಲ್ಲಾರು ಸೇರಿ ನಮ್ಮ ಸಂಘದ ಕಡೆಯಿಂದ ಜನಕ್ಕ ಕೂಲಿ ಕೆಲ್ಸ ಕೊಡ್ಬೇಕು. ಇಲ್ಲಂದ್ರೆ ಜೀವ್ನ ಮಾಡೋದು ಬಾಳಾ ತ್ರಾಸ್ ಆಗ್ತಾದ. ಈ ಬ್ಯಾಸಿಗಿ ಟೈಮ್‌ದಾಗ ದುಡಿಯಾಕ ಕೂಲಿ ಕೆಲಸ ಇರಾಂಗಿಲ್ಲ. ಹಂಗಾಗಿ ಊರಾಗಿನ ಜನ ಬೆಂಗಳೂರು, ಮೈಸೂರು ಅಂತ ದೂರದ ಊರಿಗೆ ದುಡಿಯಾಕ ಹೋಗಾಕತ್ತ್ಯಾರ ಇಲ್ಲೇ ಪಂಚಾಯ್ತಿ ಕಡೆಯಿಂದ ಕೂಲಿ ಕೆಲ್ಸ ಕೊಡ್ಬೇಕು ಅಂತೇಳಿ ಐದ್ನೂರು ಮಂದಿ ಹೆಸರು ತಗಂಡು ಪಂಚಾಯ್ತಿಗೆ ಅರ್ಜಿ ಕೊಟ್ಟಿದ್ವಿ, ಅರ್ಜಿ ಕೊಟ್ಟು ಆರು ತಿಂಗಳ ಆದ್ರೂ ದುಡಿಯಾಕ ಪಂಚಾಯ್ತಿಯವರು ಕೆಲಸಾನೇ ಕೊಡ್ಲಿಲ್ಲ. ಹಿಂಗಾದ್ರೆ ಇದು ಬಗಿಹರಿದಿಲ್ಲ ಅಂದ್ಕಂಡು ರೈತ ಸಂಘದಾಗ ಇರೋ ಎಲ್ಲಾ ಹೆಣ್ಣು ಮಕ್ಕಳು, ಗಣಮಕ್ಕಳು ಸೇರಿ ಗ್ರಾಮ ಪಂಚಾಯ್ತಿಗೆ ಹೋಗಿ ದುಡಿಯಾಕ ಕೆಲಸ ಕೊಡಬೇಕು ಅಂತ ಎಲ್ಲಾರು ಪಟ್ಟುಹಿಡಿದ್ವಿ, ಆಮ್ಯಾಲೆ ಕೊಪ್ಪಳದಿಂದ ಸೆಕ್ರೆಟರಿ ಮ್ಯಾಲೆ ಇರತಾನಲ್ಲ ಆ ಆಫೀಸರ್ ಬಂದು ನಿಮ್ಗ ಕೆಲಸ ಇನ್ನ ಹದಿನೈದು ದಿನದಾಗ ಕೊಡ್ತೀವಿ ಅಂತ ಹೇಳಿ ಹೋದ್ರು. ಆಮ್ಯಾಲ ನಮ್ಗ ಕೆಲ್ಸ ಕೊಟ್ರು. ಮೂನ್ನೂರಾ ಐವತ್ತರಿಂದ ನಾಲ್ಕೂನೂರು ಜನ ಬುಡದಂಗ ನಲವತ್ತರಿಂದ ನಲವತ್ತೈದು ದಿನ ದುಡದೀವಿ". ಎಂದು ಹೇಳಿದರು. ನೀವು ಈ ಯೋಜನೆಯಲ್ಲಿ ಯಾವ ಯಾವ ಕೆಲಸವನ್ನು ಮಾಡಿದ್ದೀರಿ? ಎಂದು ಕೇಳಿದಾಗ,

"ನೋಡ್ರಿ ಸಾರ್ ಅದು ಹೇಳಬಾರದು ಸುಡುಗಾಡ್ಯಾಗ ಮುಳ್ಳು ಕಡದೀವಿ, ಕಲ್ಲು ಆರಿಸೀವಿ, ಸತ್ತವರ ಡೋಬಿ ಆರಿಸಿ ಕೂಡಾಕಿ ಸುಟ್ಟೀವಿ. ಹಗಿ ಹಚ್ಚೀವಿ. ಸಣ್ಣ-ಸಣ್ಣ ಕೆರೆ ತೋಡೀವಿ. ಟ್ರಂಚ್ ಕಡದೀವಿ. ಇಷ್ಟೆಲ್ಲ ಕೆಲ್ಸ ಮಾಡೀವಿ. ಆದ್ರ ನನ್ನಾಟಗಳ್ರು ದುಡದಂತ ಕೂಲಿನೇ ಒಂದು ಪೈಸೆ ಕೊಡ್ಲಿಲ್ಲ. ಬದಲಿಗಿ  ನಮ್‌ಕೂಲಿ ರೊಕ್ಕ ಪಂಚಾಯ್ತಿಯವರು ಅಧ್ಯಕ್ಷರು, ನಂಬರ್‌ಗಳು, ಸೆಕ್ರೆಟರಿ ಮತ್ತೆ ನೀರಂಗಟಿಯವನು ಎಲ್ಲಾರು ಸೇರಿ ದುಡಿಯಾಕ ಬರಲಾರದವರ ಮ್ಯಾಗ ಹಾಜರಿ ಹಾಕಿ ನಮ್ ರೊಕ್ಕಾನ ಎತ್ತಿಗೆಂಡು ತಿಂದಾರಂತ ಗೊತ್ತಾಯಿತು. ಆವಾಗ ನಮ್ ಸಂಘದವರು ಮತ್ತೆ ಕೂಲಿಕಾರರು ಆಮ್ಯಾಲೆ ಹಾಸಗಲ್ ಪಂಚಾಯ್ತಿ, ಇಂದರಿಗಿ ಪಂಚಾಯ್ತಿ, ಇರಕಲ್‌ಗಡ ಪಂಚಾಯ್ತಿಯವರು ಮತ್ತೆ ಮೆತ್ತಗಲ್ ಅವರು ಈ ಎಲ್ಲಾ ಊರು ಕೂಲಿಕಾರರು ಮತ್ತೆ ಸಂಘದವರು ಎಲ್ಲಾರು ಸೇರಿ ದುಡದಂತ ಕೂಲಿ ನಮಗ ಕೊಡಾಕಬೇಕಂತೇಳಿ ಪಂಚಾಯ್ತಿ ಮುಂದ ಮೂರು ದಿನ ಹೋರಾಟ

ಮಾಡಿದ್ವಿ, ಪಂಚಾಯ್ತಿಗೆ ಬೀಗ ಹಾಕಿದ್ವಿ, ಆದ್ರೆ ನಮ್ಗ ನ್ಯಾಯನೇ ಸಿಗ್ಲಿಲ್ಲ. ಹಿಂಗಾದ್ರೆ ಇವರು ಮಾತು ಕೇಳಾದಿಲ್ಲಂದು ಬೂದಗುಂಪ, ಇರಕಲ್‌ಗಡ, ಇಂದರಗಿ, ಮೆತ್ತಗಲ್ ಮತ್ತೆ ಹಾಸಗಲ್ ಪಂಚಾಯ್ತಿಯವರು ಸೇರಿ ಐದು ನೂರು ಮಂದಿ ಕೊಪ್ಪಳ ತಾಲೂಕ ಪಂಚಾಯ್ತಿ ಮುಂದ ಮೂರು ದಿನ ಹಗಲು ರಾತ್ರಿ ಧರಣಿ ಮಾಡಿದ್ವಿ, ಆದ್ರೆ ಯಾ ಆಫೀಸರ್ ಬಂದು ನಮ್ಮನ್ನು ಮಾತಾಡ್ಸಲಿಲ್ಲ. ಆವಾಗ ನಮ್ ಕೂಲಿಕಾರರು, ರೈತ ಸಂಘದವರಿಗೆ ಮೂರುದಿನಮಾನ ಹಗಲು ರಾತ್ರಿ ಕುಂತ್ರೂನು ಯಾರು ನಮ್ಮನ್ನು ಕೇಳಾವಲ್ರಂತ ಸಿಟ್ಟಿಗೆ ಬಂದು ತಾಲೂಕು ಆಫೀಸಿಗೆ ಬೀಗ ಹಾಕಕ ಹೋದ್ರು, ಬೀಗ ಹಾಕಕ ಹೋಗಿದ್ದೆ ತಡ ಪೊಲೀಸ್ರು ಎಲ್ಲಿದ್ರೋ ಎಲ್ಲಿಲ್ಲೋ  ಬಂದು ಬಂದಿದ್ದೆ ತಡ ಬಡಿಗಿ ತಗಂಡು ಹೋಡ್ಯಾಡ್ಸಿ ಹೊಡುದ್ರು, ಹೆಣ್ಣು ಮಕ್ಕಳು ಅನ್ಲಿಲ್ಲ, ವಯಸ್ಸಾದ ಮುದುಕ್ರು ಅನಲಿಲ್ಲ. ಸಣ್ಣ-ಸಣ್ಣ ಮಕ್ಕಳು ತಾಯಿದವರು ಅನಲಿಲ್ಲ. ಎಲ್ಲಾರ್ನ ಸಿಕ್ಕಿ ಸಿಕ್ಕಂಗ ಹೊಡುದ್ರು, ಹೆಂಗಸರ್ನ ಸತೇ ಮೈಮೇಲಿನ ಬಟ್ಟೆ ಹಿಡಿದು, ಸೀರೆ ಸೆರಗು ಹಿಡಿದು, ಕೂದಲು ಹಿಡಿದು ಎಳದಾಡಿ ಓಡಾಡ್ಸಿ ಹೊಡೆದ್ರು, ಇದರಾಗ ಬಾಳಾ ಮಂದಿಗೆ ಕೈ ಕಾಲು ಮುರದಾವ. ನಮ್ಮಂತ ವಯಸ್ಸಾದಂತ ಮುದಕರ್ನ ಸತೆ ಬುಡಲಿಲ್ಲ. ನನಗೆ ಮೈ ಕೈಗೆಲ್ಲ ಏಟು ಬಿದ್ದು ಹದಿನೈದು ದಿನ ದವಾಖಾನ್ಯಾಗ ಆಡ್ಮಿಂಟ್ ಆಗಿದ್ದೆ. ಈ ಗಲಾಟ್ಯಾಗ ನನ್ನ ಕೊಳ್ಳಾಗಿನ ಬೋರಮಳ ಸರ ಮತ್ತ್ಯಾ ಕಿವ್ಯಾಗಿನ ಬುಗುಡೆ ಕಡ್ಡಿ ಕಳದು ಹೋದವು. ಪೊಲೀಸರಿಂದ ಬಡ್ತಾ ತಿಂದೆವು ಇವತ್ತಿಗೂ ಕೈಕಾಲು ಬ್ಯಾನೆ ಆಗ್ಯಾವ. ಇದರಾಗ ಹೆಂಗ್ಸರು, ಗಂಡ್ಸರು ಸೇರಿ ಒಟ್ಟಾ ಅರವತ್ತೇಳು ಮಂದಿಮ್ಯಾಲೆ ಕೇಸ್ ಮಾಡ್ಯಾರ. ಇದು ಯಂಗಾದ ನೀವೇ ನೋಡ್ರಿ ಸಾರ್. ನಾವು ದುಡದಂತ ಕೂಲಿ ರೊಕ್ಕ ಕೇಳಾಕ ಹೋದ್ರ ನಮ್ಮನ್ನ ಬಡ್ದು ಮತ್ತೆ ನಮ್ ಮ್ಯಾಲೆ ಕೇಸ್ ಮಾಡ್ಯಾರ. ಇಲ್ಲಿಗೆ ಮೂರು ವರ್ಸ ಆಯಿತು. ಇವತ್ತಿನತನ ಕೇಸ್ ಬಗೆಹರೆವಲ್ದ್. ನಮ್ ಮ್ಯಾಲೆ ಕೇಸ್ ಆಗಿ ಕೋರ್ಟಿಗೆ ತಿರುಗಾಡದು ನಮ್ ಬದುಕು ನಾಯಿ ಬದುಕಿಗಿಂತ ಕಡೆ ಆಗ್ಯಾದ ಸಾರ್. ಯಾಕಂದ್ರ ದುಡಿಯಾಕ ಹೋದವ್ರು ಎಲ್ಲಾರು ಬಡವರು ಇದ್ದೀವಿ. ಈ ಕಾಲದಾಗ ದುಡಕಂಡು ತಿನ್ನವರು ಬದ್ಕಾದೆ ಕಷ್ಟ ಐತೆ. ಅಂತದ್ರಾಗ ತಿಂಗಳ ತಿಂಗಳ ಕೋರ್ಟಿಗೆ ಅಡ್ಯಾಡದು ಅಂದ್ರೆ ಸುಮ್ನೆ ಆಗ್ತಾದೇನು? ಏನಿಲ್ಲಂದ್ರೆ ಒಂದ್ಸಲ ಕೋರ್ಟಿಗೆ ಹೋದ್ರ ಇನ್ನೂರು ರೂಪಾಯಿಬೇಕು. ನಾವು ದಿನ ಐವತ್ತು ಅರವತ್ತು ರೂಪಾಯಿ ಕೂಲಿ ದುಡಿದ್ರೆ ಮನೆ ಬಾಳೇವುಗೆ ಸಾಲದಿಲ್ಲ. ಇಂತದ್ರಾಗ ಕೋರ್ಟಿಗೆ ತಿರುಗಾಡ ಖರ್ಚು ಮತ್ತೆ ವಕೀಲ ಫೀಜ್ ಕೊಡ್ಬೇಕು. ಇಷ್ಟೆಲ್ಲ ಕಷ್ಟ ಅದ. ನಮ್ಗ ದುಡದಂತ ಕೂಲಿ ರೊಕ್ಕ ಬ್ಯಾಡ ಪಂಚಾಯ್ತಿ ಕೆಲ್ಸ ಬ್ಯಾಡ, ಕೇಸಿನಿಂದ ಹೊರಗ ಬಂದ್ರ ಸಾಕು. ನಾವು ಯಂಗಾನಾಗ್ಲಿ ನಮ್ ತಿಪ್ಪ ಇದ್ದಂಗ ಬೆಂಗಳೂರು, ಪೂನಾ, ಗೋವಾ ಹೋಗಿ ದುಡಕಂಡು ತಿಂತೀವಿ" ಎಂದು ಕಣ್ಣೀರಿಡುತ್ತಾ ತನ್ನ ನೋವನ್ನು ಹೇಳಿಕೊಂಡಳು.

ಗಂಗವ್ವನ ಮಾತಿನಲ್ಲಿ ಈ ಘಟನೆಯ ಹಿನ್ನೆಲೆ ಮತ್ತು ಅದು ನಡೆದ ಬಗೆಯನ್ನು ವಿವರಿಸಿದ್ದಾರೆ. ಇಲ್ಲಿ ಮೊದಲು ಕೆಲಸದ ಅಗತ್ಯವನ್ನು ಗ್ರಾಮ ಪಂಚಾಯ್ತಿಯ ಗಮನಕ್ಕೆ ತಂದವರು ಹೆಣ್ಣುಮಕ್ಕಳು. ಇದರಲ್ಲಿ ಉದ್ಯೋಗ ಖಾತರಿ ಯೋಜನೆಯು ಮುಖ್ಯವಾಗಿ ಹೆಣ್ಣುಮಕ್ಕಳಿಗೆ ಹೆಚ್ಚು ಅಗತ್ಯವಿದೆ ಎನ್ನುವುದನ್ನು ಈ ಮಾತಿನಿಂದ ಗುರುತಿಸಬಹುದು. ಈ ಮೇಲಿನ ಪ್ರತಿಭಟನೆಯಲ್ಲಿ ಗಂಗವ್ವ ತನ್ನ ಆಸ್ತಿಯಂತಿದ್ದ ಮೈಮೇಲಿನ ಒಡವೆಗಳನ್ನೆಲ್ಲಾ ಕಳೆದುಕೊಂಡಿದ್ದಾಳೆ. ಈ ಒಡವೆಗಳನ್ನು ಸಂಪಾದಿಸಲು ಗಂಗವ್ವ ಹಲವಾರು ವರ್ಷಗಳೇ ಕಾಯಬೇಕಾಗಿತ್ತೇನೋ? ಏಕೆಂದರೆ ಕಿತ್ತು ತಿನ್ನುವ ಬಡತನದಲ್ಲಿಯೇ ಕೂಲಿನಾಲಿ ಮಾಡಿ ಕೂಡಿಟ್ಟ ಹಣದಲ್ಲಿ ಒಡವೆಗಳನ್ನು ಮಾಡಿಸಿಕೊಂಡಿದ್ದಳು. ಆದರೆ ಕೂಲಿ ಪಡೆಯಲೆಂದು ಮಾಡಿದ ಧರಣಿಯು ಅವುಗಳನ್ನು ಕಿತ್ತುಕೊಂಡಿತ್ತು. ಇದರಿಂದ ತುಂಬಾ ಬೇಸರಗೊಂಡಿದ್ದಳು. ಹಾಗೂ ಪೊಲೀಸರ ಲಾಟಿಗಳಿಂದ ಒಡೆತಗಳು, ತಮ್ಮ ಮೇಲಿನ ಕೇಸ್‌ಗಾಗಿ ಕೋರ್ಟಿಗೆ ಒಡಾಡುವ ಖರ್ಚನ್ನು ಭರಿಸುವುದು ಇವುಗಳಿಂದ ಗಂಗಮ್ಮನ ಮನಸ್ಸು ತುಂಬಾ ಘಾಸಿಗೊಂಡಿತ್ತು. ಕುಟುಂಬದ ಎಲ್ಲಾ ಆಗು-ಹೋಗುಗಳಿಗೆ ಗಂಗವ್ವನೇ ಆಧಾರವಾಗಿದ್ದರಿಂದ ಜೀನವದ ಭಾರವೂ ಅವಳ ಮೇಲಿತ್ತು. ಹಾಗಾಗಿ ಅವಳು ತುಂಬಾ ನೊಂದುಕೊಂಡಿದ್ದಳು. ಪ್ರತಿಭಟನೆಯ ಸಂದರ್ಭದಲ್ಲಿ ಪೊಲೀಸರಿಂದ ಲಾಟಿ ಏಟು ತಿಂದಂತಹ ಗಂಗವ್ವ ಇಂದಿಗೂ ಆ ನೋವುಗಳನ್ನು ಭರಿಸುತ್ತಲೇ ಇದ್ದಾಳೆ. ಪ್ರಸ್ತುತ ಕೋರ್ಟಿಗೆ ಓಡಾಡಲು ಹಣಕ್ಕೂ ಸಹ ಸಾಲ ಮಾಡಿ ಕೊಂಡಿದ್ದಾರೆ. ಇವರು ಎಷ್ಟರ ಮಟ್ಟಿಗೆ ನೊಂದಿದ್ದಾರೆ ಎಂದರೆ "ನಮ್ಗ ದುಡದಂತ ಕೂಲಿ ರೊಕ್ಕ ಬ್ಯಾಡ ಪಂಚಾಯ್ತಿ ಕೆಲ್ಸ ಬ್ಯಾಡ, ಕೇಸಿನಿಂದ ಹೊರಗ ಬಂದ್ರ ಸಾಕು" ಎಂಬ ಮಾತು ಅವರ ಪರಿಸ್ಥಿತಿಗೆ ಸಾಕ್ಷಿಯಾಗಿದೆ.

ಪ್ರತಿಭಟನೆಯಲ್ಲಿ ಅಲ್ಪಸಂಖ್ಯಾತ ಮಹಿಳೆಯರೂ ಕೂಡ ಭಾಗವಹಿಸಿದ್ದರು. ಸಮಾಜದಲ್ಲಿ ಇವರ ಕಷ್ಟ ಹೇಳತೀರದು. ಇದಕ್ಕೆ ಒಂದು ಪ್ರಕರಣವನ್ನು ಇಲ್ಲಿ ವಿವರಿಸಲಾಗಿದೆ. ಬೂದಗುಂಪ ಗ್ರಾಮದ ೫೫ ವರ್ಷದ ಮುಸ್ಲಿಂ ಸಮುದಾಯದ ಅನಕ್ಷರಸ್ಥ ಮಹಿಳೆ ತಾಹಿರಾ ಬೇಗಂ ಮಾತುಗಳು ಈ ಸಮಸ್ಯೆಯ ಮತ್ತೊಂದು ಮುಖವನ್ನು ಕಾಣಿಸುತ್ತದೆ. ಬೂದಗುಂಪ ಗ್ರಾಮಕ್ಕೆ ಹೋಗಿ ತಾಹಿರಾಬೇಗಂ ಎನ್ನುವವರನ್ನು ಭೇಟಿಯಾಗಿ ಉದ್ಯೋಗ ಖಾತ್ರಿ ಯೋಜನೆಯ ಬಗ್ಗೆ ಕೇಳಿದಾಗ "ನೋಡ್ರಿ ಸಾಬ್ರೆ ಈ ಹಾಳಾದ ಉದ್ಯೋಗ ಖಾತ್ರಿ ಕೆಲ್ಸಕ್ಕೆ ಹೋಗಿ ಕೋರ್ಟಿಗೆ ತಿರುಗ್ಯಾಡದು ಬಂದಾದ. ಮತ್ತೆ ನಮ್ ಊರಾಗ ನಮ್ಮನ್ನ ಜಾತಿಯಿಂದ ಬ್ಯಾರೆ ಇಟ್ಟಾರ" ಎಂದು ನಿಟ್ಟುಸಿರು ಬಿಟ್ಟರು.

ಯಾಕೆ ನಿಮ್ಮನ್ನ ಜಾತಿಯಿಂದ ಬೇರೆ ಇಟ್ಟಿದ್ದಾರೆ? ಎಂದು ಕೇಳಿದಾಗ,

"ಸಾಬ್ರೆ ನಾವು ತುಂಬಾ ಬಡವುರು ಐದೀವಿ. ಹಂಗಾಗಿ ದುಡಿಬೇಕು ತಿನ್ನಬೇಕು ಇಲ್ಲಂದ್ರೆ ಒಂದು ದಿನ ಮನ್ಯಾಗ ಕುಂತ್ರ ಜೀವ್ನ ನಡ್ಯಾದಿಲ್ಲ. ಹಂಗಾಗಿ ಊರಾಗಿನ ತಿಳಿದವರು ಹೇಳಿದ್ರು ಸರಕಾರ ಬಡಜನಕ್ಕಾಗಿ ಉದ್ಯೋಗ ಖಾತ್ರಿ ಯೋಜನೆಯಾಗ ಪಂಚಾಯ್ತಿ

ಕಡೆಯಿಂದ ಒಂದು ವರ್ಷದಾಗ ನೂರು ದಿನ ಕೆಲ್ಸ ಕೊಡ್ಬೇಕು ಅಂತೇಳಿ ಮಾಡ್ಯಾದ. ಆದ್ರ ಕೂಲಿ ಕೆಲಸ ಬಂದು ಒಂದು ವರ್ಷ ಆಯಿತು. ಇಲ್ಲಿತನ ನಮ್ಮೂರಾಗ ದುಡ್ಕಂಡು ತಿನ್ನವರಿಗೆ ಕೆಲಸಾನೇ ಕೊಟ್ಟಿಲ್ಲ. ಬ್ಯಾರೆ ಊರಾಗ ಬ್ಯಾಸಿಗಿ ಟೈಂದಾಗ ಕೆಲಸ ಕೊಟ್ಟಾರ. ಹಿಂಗಾದ್ರೆ ಪಂಚಾಯ್ತಿಯವರು ಮಾತುಕೇಳಾದಿಲ್ಲ. ಕೂಲಿ ಮಾಡಂತ ಹೆಣ್ಮಕ್ಕಳು ಎಲ್ಲಾರು ಸೇರಿ ರೈತ ಸಂಘ ಸೇರ್ರಿ ನಾವು ನಿಮ್ಮಿಂದ ಇರ್ತಿವಿ. ಎಲ್ಲಾರು ಸೇರಿ ಕೆಲಸ ಕೊಡ್ಬೇಕು ಅಂತೇಳಿ ಹೋರಾಟ ಮಾಡಾನು ಅಂತ ಹೇಳಿದ್ರು. ಅದಕ್ಕ ನಾನು ರೈತ ಸಂಘಕ್ಕೆ ಸೇರಿದೆ. ಆಮ್ಯಾಲೆ ನಮ್ ಸಂಘದ ಕಡೆಯಿಂದ ಮಹಿಳೆಯರೆಲ್ಲ ಸೇರಿ, ಕುಡ್ಯಾ ನೀರಿನ ಸಲುವಾಗಿ ಟ್ರೈಕ್ ಮಾಡಿದ್ವಿ, ಆಮ್ಯಾಲೆ ಊರು ಒಳಗಿನ ರೋಡ್ ಕೆಟ್ಟಾದ ಅವುನ್ನ ಸರಿ ಮಾಡಬೇಕು ಅಂತೇಳಿ ಟ್ರೈಕ್ ಮಾಡಿದ್ವಿ, ಆಮ್ಯಾಲೆ ಪಂಚಾಯ್ತಿಯವರು ಕುಡ್ಯಾನೀರಿನ ಯವಸ್ಥೆ ಮಾಡಿದ್ರು, ಊರಾಗಿನ ರೋಡ್ ಮಾಡಿದ್ರು, ಇದೆಲ್ಲ ಆದ್ಮೇಲೆ ದುಡಿಯಾಕ ಕೆಲಸ ಕೊಡ್ಬೇಕು ಅಂತೇಳಿ ನಮ್ಮ ಸಂಘದ ಕಡೆಯಿಂದ ಅರ್ಜಿ ಕೊಟ್ಟು ಕೆಲಸ ತಗಂಡ್ವಿ. ನಾನು ಸಂಘಕ್ಕ ಯಾವಾಗ ಸೇರಿದ್ನೋ ಆವಾಗಿಂದ ಎಗಲ ಮ್ಯಾಲೆ ಹಸಿರು ಟವಲ್ ಹಾಕ್ಕೆಂಡು ಟ್ರೈಕ್ (ಸ್ಟ್ರೈಕ್, ಪ್ರತಿಭಟನೆ) ಮಾಡಾಕ ಹೋಗ್ತಿದ್ದೆ. ಮತ್ತೆ ಬೆಂಗಳೂರಾಗ ಮೀಟಿಂಗ್ ಏನಾರ ಇದ್ರೆ ಹೋಗ್ತಿದ್ದೆ. ಎಲ್ಲ್ಯಾದರೂ ಹೋರಾಟ ಇದ್ರೆ, ಯಾವದಾದ್ರೆ ಪಂಚಾಯ್ತಿಯಾಗ ಕೂಲಿಕಾರರಿಗೆ ಕೂಲಿ ಹಣ ಕೊಟ್ಟಿಲ್ಲ ಅಂದ್ರೆ ಟ್ರೈಕ್ ಮಾಡತ್ತಿದ್ವಿ, ಮತ್ತೆ ನಮ್ಮೂರಾಗ ನಾಲ್ಕುಜನ ಉದ್ಯೋಗ ಖಾತ್ರಿ ಕೆಲಸಕ್ಕೆ ಹೋದಂಗ ನಾನು ನನ್ನ ಸೊಸಿ ಇಬ್ರು ಕೆಲಸಕ್ಕೆ ಹೋಗ್ತಿದ್ವಿ, ಆದ್ರೆ ಇದ್ಯಾವದು ನಮ್ಮ ಜಾತಿಯವರಿಗೆ ಸೇರಿಕಿ ಇರಲಿಲ್ಲ. ಯಾಕಂದ್ರ ನಮ್ ಜಾತಿಯಾಗ ಮನೆಯಿಂದ ಹೊರಗಡೆ ಬಂದ್ರೆ ಎಲ್ಲಾ ಹೆಣ್ಣು ಮಕ್ಕಳು ಬುರ್ಕಾ ಹಾಕೆಂಡು ಹೊರಗಡೆ ಹೋಗ್ತಾರ. ಮತ್ತೆ ನಮ್ ಜಾತಿಯಾಗ ಯಾರು ಟ್ರೈಕ್ ಮಾಡಾಕ ಆಗಲಿ, ಹೋರಾಟ ಮಾಡಾಕ ಆಗಲಿ, ಚಳವಳಿ ಮಾಡಾಕ ಆಗಲಿ, ಯಾರು ಹೋಗಾದಿಲ್ಲ. ಆದ್ರೆ ನಾನು ಸಂಘದಾಗ ಐದೀನಿ ನಾಲ್ಕು ಜನಕ್ಕ ಒಳ್ಳೆದಾಗ್ತಾದ ಅಂದ್ರೆ ನಾನ್ಯಾಕ ಟ್ರೈಕ್ ಮಾಡಾಕ ಹೋಗ್ಬಾರದು. ನಾನು ತಪ್ಪೇನು ಮಾಡಿಲ್ಲ. ಅಂತ ತಿಳ್ಕಂಡು ಯಾರು ಏನೇ ಆಂದ್ರೂನ್ ನಾನು ಇಂತವುಕೆಲ್ಲ ಹೋಗ್ತಿದ್ದೆ. ಆಮ್ಯಾಲೆ ಏನಾಯಿತಂದ್ರೆ ಇಡೀ ನಮ್ ಜಾತಿಯವರೆಲ್ಲ ಬಂದು ನೀನು ಉದ್ಯೋಗ ಖಾತ್ರಿ ಕೆಲಸಕ್ಕೆ ಹೋಗಬಾರದು, ನೀನು ಸಂಘದಾಗ ಇರಬಾರದು, ಹಸಿರು ಟವಲ್ ಹಾಕಬಾರದು, ನೀನು ಇನ್ನು ಮುಂದ ಎಲ್ಲಿಗಾದ್ರೆ ಹೋದ್ರೆ ಬುರ್ಕಾ ಹಾಕ್ಕೆಂಡು ಅಡ್ಯಾಡಬೇಕು ಅಂತ ಬೆದರಕಿ ಹಾಕಿದ್ರು, ನಮ್ ಧರ್ಮದ ಗುರುಗಳು ಬಂದು ನಿನ್ನ ನಮ್ ಧರ್ಮದಾಗಿನಿಂದ ಹೊರಾಗ ಇಡ್ತಿವಿ ಅಂತ ಹೆದರಿಸಿದ್ರು, ಆದ್ರೆ ನಾನು ಇದು ಯಾವದು ಲೆಕ್ಕಕ್ಕೆ ತಗಾಲಿಲ್ಲ. ಯಾಕಂದ್ರೆ ಎಲ್ಲಾರ ಮನಿ ಪರಿಸ್ಥಿತಿ ಒಂದ್ರೀತಿ ಇದ್ರೆ ನಮ್ ಮನೆ ಪರಿಸ್ಥಿತಿ ಬ್ಯಾರೆ ಐತಿ. ಯಾಕಂದ್ರೆ ನನ್ ಗಂಡ ಇರಾತನ ನಾನು ಹೊರಗಡೆ ಕೂಲಿ ಕೆಲಸಕ್ಕೆ ಹೋಗಿದಿಲ್ಲ. ನನ್ ಗಂಡ ಸತ್ತಮ್ಯಾಲೆ ಮಕ್ಕಳು ಸಲುಹುಬೇಕಾದ್ರೆ, ಸಂಸಾರ ನಿಬಾಯಿಸಬೇಕಾದ್ರೆ ನಾನು ಕೂಲಿ ಕೆಲಸಕ್ಕೆ ಹೋಗ್ಬೇಕಾತು. ನನಗ ಇಬ್ರು ಗಣ ಮಕ್ಕಳು,

ಹಿರಿಮಗನಿಗಿ ಮದಿವಿ ಮಾಡಿದ್ದೆ. ಆದ್ರ ಮದಿವಿ ಮಾಡಿ ಬಹಳ ವರ್ಷಕ್ಕ ಅವನಿಗೆ ಜಡ್ಡು ಬಂದು ತೀರಿಕೆಂಡ. ಆಮ್ಯಾಲ ನನ್ನ ಸಣ್ಣ ಮಗನೂ ಆತ್ಮಹತ್ಯ ಮಾಡಿಕೆಂಡು ತೀರಿಕೆಂಡ. ಈಗ ಇರೋದು ಇಬ್ರೆ, ನಾನು ಮತ್ತ ನನ್ನ ಸೊಸಿ ಮಾತ್ರ. ಇವತ್ತು ಇಬ್ಬರು ದುಡದು ನಮ್ಮ ಕುಟುಂಬ ಸಲಹುತೀವಿ. ನಮ್ ಕಷ್ಟ ಹಿಂಗಿರಬೇಕಾದ್ರೆ ಈ ಹಾಳಾದ ಉದ್ಯೋಗ ಖಾತ್ರಿ ಯೋಜನದಾಗ ನನ್ ಸೊಸೆ, ನಾನು ಒಬ್ಬೊಬ್ರು ನಲವತ್ತೈದು ದಿನ ದುಡದೀವಿ. ಆದ್ರೆ ಪಂಚಾಯ್ತಿಯವರು ದುಡದಂತ ಕೂಲಿನೇ ಕೊಡ್ಲಿಲ್ಲ. ಆಮ್ಯಾಲೆ ನಾವು ದುಡದ ಕೂಲಿ ಕೇಳಿದ್ದಕ್ಕ ನಮ್ಮ ಮ್ಯಾಲ ಲಾಟಿಚಾರ್ಜ್ ಮಾಡಿ ಕೇಸ್ ಮಾಡ್ಯಾರ. ಈಗ ಕೋರ್ಟಿಗೆ ಅಡ್ಯಾಡಕತ್ತೀವಿ. ಈಗ ನಮ್ ಧರ್ಮದ ಗುರುಗಳು ಏನಂತಾರ ಅಂದ್ರೆ, ನಾವು ಹೇಳಿದ ಮಾತು ಕೇಳಲಿಲ್ಲ. ನಮ್ ಜಾತಿಗೆ ಅವಮಾನ ಮಾಡಿದ್ಲು. ಕುರಾನ್‌ಗೆ ವಿರುದ್ಧವಾಗಿ ನಡಕಂಡ್ಲು. ಮತ್ತೆ ಬುರ್ಕಾ ಬುಟ್ಟು ಹಸಿರು ಟವಲ್ ಹಾಕ್ಕೆಂಡ್ ನಮ್ ಧರ್ಮಕ್ಕ ದ್ರೋಹ ಮಾಡಿದ್ಲು. ಹೋರಾಟ, ಸ್ಟ್ರೈಕ್ ಮತ್ತೆ ಚಳುವಳಿ ಅಂತ ಮಾಡಾಕ ಹೋಗಿ ನಮ್ ಮುಸ್ಲಿಂ ಜಾತಿಗೆ ಅವಮಾನ ಮಾಡಿದ್ಲು ಹಂಗಾಗಿ ಇವತ್ತು ಆ ಅಲ್ಲಾನೇ ಬಂದು ನಿನಗ ತಕ್ಕಶಿಕ್ಷೆ ಕೊಟ್ಟಾನ. ನಿನಗ ಹಿಂಗ ಆಗಬೇಕಾಗಿತ್ತು ಹಂಗಾಗಿ ಆ ಅಲ್ಲಾ ಈ ರೂಪದಲ್ಲಿ ಬಂದು ಶಿಕ್ಷೆ ಕೊಟ್ಟಾನ ಅಂತೇಳಿ ನಮ್ ಧರ್ಮದ ಗುರುಗಳು ಮತ್ತೆ ಹಿಡೀ ನಮ್ ಜಾತಿ ಜನ ಮಾತಾಡಿಕೆಂತಾರ. ಹಂಗಾಗಿ ಇವತ್ತು ನಮ್ ಮನೆ ಒಂದನ್ನ ಜಾತಿಯಿಂದ ಬ್ಯಾರೆ ಇಟ್ಟಾರ. ಮತ್ತೆ ಒಬ್ಬೊಬ್ರು ಒಂದೊಂದು ಮಾತು ಆಡ್ತಾರ. ಸಣ್ಣ ವಯಸ್ಸಿಗೆ ಗಂಡ ಸತ್ರು ಬುದ್ದಿ ಬರಲಿಲ್ಲ ಅಂತ ಆಡಿಕೆಳ್ತಾರ. ಅಂಗೆ ಒಬ್ಬ ಮೊಮ್ಮಗಳು ಮದ್ವಿ ವಯಸ್ಸಿಗೆ ಬಂದಾಳ. ಆಕಿಗೆ ಮದ್ವಿ ಮಾಡಬೇಕಂದ್ರೆ ಯಾರು ನಮ್ ಮನ್ಯಾಗ ಬೀಗಸ್ತಾನ ಮಾಡಾಕ ಮುಂದ ಬರಲಿಲ್ಲ. ಬೀಗಸ್ತನ ಮಾಡಾಕ ಬಂದವರನ್ನೆಲ್ಲ ಅವರು ಮನ್ಯಾಗ ಬೀಗಸ್ತಾನ ಮಾಡಬ್ಯಾಡ್ರಿ, ಅವರ ಮನೆತನ ಚಲೋ ಇಲ್ಲ. ಅವರನ್ನ ನಮ್ ಜಾತಿಯಿಂದ ಹೊರಗಿಟ್ಟೀವಿ ಅಂತೇಳಿ ಹುಡಿಗಿನ್ನ ನೋಡಾಕ ಬಂದವರಿಗೆಲ್ಲ ಹೇಳಿ ಕಳಸ್ತಿದ್ರು. ಹಂಗಾಗಿ ನನ್ ಮೊಮ್ಮಗಳಿಗೆ ವರ ಬರಾದಿಲ್ಲಂತೇಳಿ ನಮ್ ಸಂಬಂಧಿಕರಾಗ ಮದ್ವಿ ಫಿಕ್ಸ್ ಮಾಡೀವಿ. ಈ ಹಾಳಾದ ಉದ್ಯೋಗ ಖಾತ್ರಿ ಯೋಜನೆ ಸೇರಿ, ಮತ್ತೆ ಈ ರೈತ ಸಂಘ ಅಂತೇಳಿ ಸೇರಿ ಇವತ್ತು ನಮ್ ಜಾತಿಯವರೆಲ್ಲ ನಮ್ಮನ್ನ ದೂರ ಇಟ್ಟಾರ. ನೋಡ್ರಿ ನಮಗ ಈ ಬ್ಯಾಸಿಗಿ ಟೈಂದಾಗ ಜೀವ್ನ ನಡಸಾದ ಬಾಳ ಕಷ್ಟ ಆಗ್ಯಾದ. ಯಾಕಂದ್ರ ನಾವು ಬರೀ ಮನ್ಯಾಗ ಹೆಣ್ಮಕ್ಕಳು ಇದ್ದವರು. ಮನ್ಯಾಗ ಗಣಮಕ್ಳು ಇದ್ದವರು ಆದ್ರೆ ಬ್ಯಾಸಿಗಿ ಟೈಮ್‌ದಾಗ ದುಡಿಯಾಕ ಬೆಂಗಳೂರು, ಪೂನಾ, ಗೋವಾಕ್ಕ ದುಡಿಯಾಕ ಹೋಗ್ತಾರ. ಆದ್ರೆ ನಾವು ಬರೀ ಹೆಣ್ಣುಮಕ್ಕಳು ಇದ್ದವರು ಹೋಗಾಕ ಆಗ್ತಾದೇನು? ಗಂಡ ಸತ್ತ ಒಂಟಿ ಹೆಣ್ಣು ಮಕ್ಕಳನ್ನ ಈ ದುನಿಯಾ ಬಾಳಾ ಕೆಟ್ಟದಾಗಿ ನೋಡ್ತಾದ. ಅಂತದ್ರಾಗ ದೂರದ ಊರಿಗೆ ದುಡಿಯಾಕ ಹೋದ್ರೆ ಈ ಜನ ಸುಮ್ನೆ ಬಿಡ್ತಾದೇನು? ಹಂಗಾಗಿ ನಾವು ಇದ್ದು ಊರಾಗ ದುಡಕಂಡು ತಿನ್ನಾನು ಅಂದ್ರೆ ಪರಿಸ್ಥಿತಿ ಹಿಂಗಾದ ನೋಡ್ರಿ, ನಮಗ ಅಡಿವ್ಯಾಗ ಹೊಲ ಇಲ್ಲ ಊರಾಗ ಮನೆ

ಇಲ್ಲ ದುಡಿಬೇಕು ತಿನ್ಬೇಕು. ಅಂತದ್ರಾಗ ಪ್ರತೀ ತಿಂಗಳು ಕೋರ್ಟಿಗೆ ಅಡ್ಯಾಡಕತ್ತೀವಿ. ಕೋರ್ಟಿಗೆ ಅಡ್ಯಾಡದು ಸುಮ್ನೆ ಆಗ್ತಾದ? ಒಂದ್ಸಲ ಕೋರ್ಟಿಗೆ ಹೋದ್ರ ಎರಡ್ನೂರು ರೂಪಾಯಿ ಖರ್ಚು ಬರ್ತಾದ. ನಾವು ದಿನ ಐವತ್ತು-ಅರವತ್ತು ರೂಪಾಯಿ ದುಡಿತೀವಿ ಇದರಾಗ ಸಂಸಾರ ನಡುಸಾದೆ ಕಷ್ಟ ಐತಿ. ಇಂತದ್ರಾಗ ತಿಂಗಳಾ-ತಿಂಗಳಾ ಕೋರ್ಟಿಗೆ ಹೋಗಾಕ ಎರಡ್ನೂರು ರೂಪಾಯಿ ಎಲ್ಲಿಂದ ತರಬೇಕು. ಹಂಗಾಗಿ ಸಾಲಮಾಡಿ ಕೋರ್ಟಿಗೆ ತಿರುಗ್ಯಾಡಂಗ ಆಗ್ಯಾದ ನಮ್ ಬಾಳೇವು." ಎಂದು ಕಣ್ಣೀರಿಟ್ಟಳು.

ತಾಹಿರಾಬೇಗಂ ಅವರ ಮಾತುಗಳು ಹಲವು ಸಂಗತಿಗಳನ್ನು ಹೊರ ಹಾಕುತ್ತವೆ. ಹೈದರಾಬಾದ್ ಕರ್ನಾಟಕವು ಹಿಂದೂಮುಸ್ಲಿಂ ಸಮುದಾಯದವರು ಸಾಮರಸ್ಯದಿಂದ ಬಾಳುವ ಪ್ರದೇಶವಾಗಿದೆ. ಆದರೆ ಈ ಎರಡೂ ಧರ್ಮದ ಹೆಣ್ಣು ಮಕ್ಕಳಿಗೆ ಪ್ರತ್ಯೇಕ ಸಮಸ್ಯೆಗಳಿವೆ. ಏಕೆಂದರೆ ತಾಹಿರಾ ಬೇಗಂ ಜತೆಗೆ ರೈತ ಸಂಘಟನೆಯನ್ನು ಸೇರಿದ ಮತ್ತು ಪ್ರತಿಭಟನೆಯಲ್ಲಿ ಪಾಲ್ಗೊಂಡವರಲ್ಲಿ ಹಿಂದೂ ಧರ್ಮಕ್ಕೆ ಸೇರಿದ ಮಹಿಳೆಯರೂ ಇದ್ದರು. ಆದರೆ ಇವರುಗಳು ಅನುಭವಿಸಿದ ಕಷ್ಟಗಳು ಭಿನ್ನವಾಗಿವೆ. ತಾಹಿರಾ ಬೇಗಂ ಅವರು ಅನುಭವಿಸುತ್ತಿರುವುದು ಒಂದು ತಾನು ಜಾತಿಯಿಂದ ಮುಸ್ಲೀಂ ಎನ್ನುವ ಕಾರಣಕ್ಕಾಗಿ. ಇನ್ನೊಂದು ತಾನು ಹೆಣ್ಣು ಎನ್ನುವ ಕಾರಣಕ್ಕಾಗಿ. ಇಲ್ಲಿಯೂ ಧಾರ್ಮಿಕ ಪುರುಷರ ದಬ್ಬಾಳಿಕೆಯು ತಾಹಿರಾ ಬೇಗಂ ಮೇಲೆ ಆಗಿರುವುದನ್ನು ನೋಡಬಹುದು. ಮುಖ್ಯವಾಗಿ ಇಸ್ಲಾಂ ಧರ್ಮದಲ್ಲಿ ಮಹಿಳೆಯರು ಸಾರ್ವಜನಿಕವಾಗಿ ಕಾಣಿಸಿಕೊಳ್ಳುವುದೇ ಅಪರೂಪ. ಅಂತಹದ್ದರಲ್ಲಿ ತಾಹಿರಾ ಬೇಗಂ ಸಾರ್ವಜನಿಕವಾಗಿ ಕಾಣಿಸಿಕೊಂಡರು. ಹಾಗೆಯೇ ಯಾರ ಒಪ್ಪಿಗೆಯನ್ನೂ ಕೇಳದೆ (ಧಾರ್ಮಿಕ ಮುಖಂಡರು) ರೈತ ಸಂಘಟನೆಯನ್ನು ಸೇರಿದುದು, ಬರುಖಾದ ಜಾಗದಲ್ಲಿ ಹಸಿರು ಟವೆಲ್ಲನ್ನು ಹಾಕಿಕೊಂಡಿದುದು ಇವು ಧಾರ್ಮಿಕ ಮುಖಂಡರನ್ನು ನಿದ್ರೆಗೆಡಿಸಿದ್ದವು. ಹೀಗೆ ಮಾಡುವುದು ಧರ್ಮದ ವಿರುದ್ಧ ನಡೆಯಾಗಿದೆ ಎಂಬುದು ಅವರ ವಾದವಾಗಿತ್ತು. ಈ ಎಲ್ಲಾವುಗಳನ್ನು ಸಹಿಸದ ಕೆಲವು ಮುಖಂಡರು ತಾಹಿರಾ ಬೇಗಂಳಿಗೆ, ಇವುಗಳೆಲ್ಲವುಗಳನ್ನು ಬಿಡುವಂತೆ ಒಂದು ಸಾರಿ ಎಚ್ಚರಿಕೆಯನ್ನೂ ಕೊಟ್ಟಿದ್ದರು. ಆದರೆ ಇದಾವುದನ್ನೂ ಕೇಳದೆ ಧಿಕ್ಕರಿಸಿದ್ದಳು. ಆ ಕಾರಣಕ್ಕಾಗಿ ತಾಹಿರಾ ಬೇಗಂಳನ್ನು ತಮ್ಮ ಧರ್ಮದಿಂದ, ಜಾತಿಯಿಂದ ಹೊರ ಹಾಕಿದ್ದರು. ಆದರೆ ಈ ಎಲ್ಲಾ ಚಟುವಟಿಕೆಗಳಲ್ಲಿ ಭಾಗವಹಿಸುವುದು ಅವಳಿಗೆ ಅನಿವಾರ್ಯವಾಗಿತ್ತು. ಏಕೆಂದರೆ ಕಿತ್ತು ತಿನ್ನುವ ಬಡತನದಿಂದ ಜೀವನ ನಡೆಸುವುದೇ ಕಷ್ಟಕರವಾಗಿದ್ದಾಗ, ಅದನ್ನು ನಿಭಾಯಿಸುವುದು ಇನ್ನೂ ಕಷ್ಟಕರವಾಗಿತ್ತು. ಅಂತಹ ಸಂದರ್ಭದಲ್ಲಿ ನರೇಗಾ ಯೋಜನೆ ಒಂದು ಆಶಾ ಭಾವನೆಯನ್ನು ತಂದಿತ್ತು. ಆ ಕಾರಣಕ್ಕಾಗಿ ಸಾರ್ವಜನಿಕ ವಲಯದಲ್ಲಿ ಕಾಣಿಸಿಕೊಂಡಿದ್ದಳು. ಆದರೆ ಇದೂ ಕೂಡ ತಮ್ಮ ಜೀವನಕ್ಕೆ ಮುಳುವಾಯಿತು. ರೈತ ಸಂಘಟನೆಗೆ ಮತ್ತು ಉದ್ಯೋಗ ಖಾತರಿ ಯೋಜನೆಗೆ ಸೇರಿಕೊಂಡಿದ್ದಕ್ಕಾಗಿ ತಾನು ನ್ಯಾಯಾಲಯಕ್ಕೆ ತಿರುಗಾಡಬೇಕಾದ ಪರಿಸ್ಥಿತಿ ಒದಗಿ ಬಂತು ಮತ್ತು ಹೀಗೆ ಮಾಡಿದ

ಕಾರಣಕ್ಕಾಗಿಯೇ ಅಲ್ಲಾನೆ ನಿನಗೆ ಸರಿಯಾದ ಶಿಕ್ಷೆ ಕೊಟ್ಟಿದ್ದಾನೆ ಎಂಬಂತಹ ಮೂದಲಿಕೆಯ ಮಾತುಗಳು ತಮ್ಮ ಧರ್ಮದವರಿಂದ ಎದುರಿಸಬೇಕಾಯಿತು. ಆ ಕಾರಣಕ್ಕಾಗಿಯೇ ತನ್ನ ಮೊಮ್ಮಗಳ ಮದುವೆಗಾಗಿ ಹಲವಾರು ಕಷ್ಟಗಳನ್ನು ಅನುಭವಿಸಬೇಕಾಯಿತು ಎಂಬಂತಹವುಗಳು ತಾಹಿರಾ ಬೇಗಂಳಿಗೆ ತುಂಬಾ ನೋವಿನ ಸಂಗತಿಯಾಗಿ ಕಾಡತೊಡಗಿವೆ. ಇನ್ನು ಸರಕಾರಿ ಯೋಜನೆಗಳಲ್ಲಿ ಕೆಲಸ ಮಾಡುವುದಕ್ಕಿಂತ ಬೇರೆ ಊರುಗಳಿಗೆ ವಲಸೆ ಹೋಗಿ ತಮ್ಮ ಸ್ವಂತ ಇಚ್ಛೆಯಿಂದ ದುಡಿಯುವುದೇ ಉತ್ತಮ ಎಂಬುದು ಮತ್ತು "ಈ ಹಾಳಾದ ಉದ್ಯೋಗ ಖಾತ್ರಿ ಕೆಲ್ಸಕ್ಕೆ ಹೋಗಿ ಕೋರ್ಟಿಗೆ ತಿರುಗ್ಯಾಡದು ಬಂದಾದ" ಎಂಬ ಧ್ವನಿ ಪದೇ ಪದೇ ತಾಹಿರಾ ಬೇಗಂ ಮಾತಿನಲ್ಲಿ ವ್ಯಕ್ತವಾಗಿರುವುದು ಉದ್ಯೋಗ ಖಾತರಿ ಯೋಜನೆಗೆ ಹಿಡಿದ ಕನ್ನಡಿಯಂತಿದೆ. ಪ್ರಾಚೀನ ಕಾಲದಿಂದಲೂ ಪ್ರಮುಖ ಧರ್ಮಗಳಲ್ಲಿ ಮಹಿಳೆ ಪುರುಷನಿಗೆ ಅಧೀನವಾಗಿರುವುದನ್ನೇ ಆದರ್ಶ ಎಂದು ಕರೆಯಲಾಗಿದೆ. ಹಾಗಾಗಿ ಜೀವನದ ಪ್ರತೀ ಹಂತದಲ್ಲಿ ಕೂಡ ಮಹಿಳೆ ಪುರುಷನ ಅಧೀನದಲ್ಲಿಯೇ ಇರಬೇಕು ಎಂಬುದು ಧಾರ್ಮಿಕ ಮೌಲ್ಯ, ಇದನ್ನು ಮಹಿಳೆಯಾದವಳು ಪಾಲಿಸಲೇಬೇಕು ಎಂಬಂತಹ ಮೌಲ್ಯಗಳನ್ನು ಬಿತ್ತುತ್ತಲೇ ಬರಲಾಗಿದೆ. ಒಂದುವೇಳೆ ಪುರುಷನಿಗೆ ಸಮಾನವಾಗಿ ನಡೆದುಕೊಂಡಳು ಎಂದರೆ ಮಹಿಳೆಗೆ ನಾನಾರೀತಿಯ ಕಷ್ಟಗಳು ಶುರುವಾಗುತ್ತವೆ. ಧರ್ಮ ಜನರ ಜೀವನದ ಪ್ರತೀ ಹಂತದಲ್ಲೂ ತನ್ನ ಆಲೋಚನಾ ನೆಲೆಗಳನ್ನು ವಿಸ್ತರಿಸಿಕೊಂಡಿದೆ. ಹಾಗಾಗಿ ಧರ್ಮದ ಕಬಂಧ ಬಾಹುಗಳಿಂದ ಬಿಡಿಸಿಕೊಳ್ಳುವುದು ಅಷ್ಟು ಸುಲಭದ ಮಾತಲ್ಲ. ಒಂದುವೇಳೆ ಬಿಡಿಸಿಕೊಂಡರೂ ತಮ್ಮ ಧರ್ಮದಿಂದಲೇ ಬಹಿಷ್ಕಾರಕ್ಕೆ ಒಳಗಾಗಬೇಕಾಗುತ್ತದೆ. ಇದಕ್ಕೆ ಉತ್ತಮ ಉದಾಹರಣೆ ತಾಹಿರಾ ಬೇಗಂಳದ್ದು.

ಕೊಪ್ಪಳ ತಾಲೂಕಿನಲ್ಲಿ ರೈತ ಸಂಘವು ತುಂಬಾ ಕ್ರಿಯಾಶೀಲವಾಗಿತ್ತು. ಬೂದಗುಂಪಾ ಗ್ರಾಮ ಪಂಚಾಯತಿ ಮತ್ತು ಸುತ್ತಮುತ್ತಲಿನ ಗ್ರಾಮ ಪಂಚಾಯತಿಗಳಲ್ಲಿಯೂ ಕೂಡ ರೈತ ಸಂಘವು ಹಲವಾರು ಸಮಾಜಾಭಿವೃದ್ಧಿ ಕಾರ್ಯಗಳಲ್ಲಿ ತೊಡಗಿತ್ತು. ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿ ಯಾವುದೇ ಕಾರ್ಯಗಳಾಗಿದ್ದರೂ ರೈತ ಸಂಘದವರ ನೇತೃತ್ವದಲ್ಲಿಯೇ ನಡೆಯುತ್ತಿದ್ದವು. ಒಂದು ವೇಳೆ ಕೆಲಸಗಳು ನಡೆಯದೇ ಹೋದರೆ ಅಥವಾ ನಿಧಾನಗತಿಯಲ್ಲಿ ಸಾಗುತ್ತಿದ್ದರೆ ರೈತ ಸಂಘಟನೆಯವರು ಎಚ್ಚರಿಸುತ್ತಿದ್ದರು. ಹಾಗಾಗಿ ಚುನಾಯಿತ ಪ್ರತಿನಿಧಿಗಳಿಗೆ ಮತ್ತು ಅಧಿಕಾರಿಗಳಿಗೆ ರೈತ ಸಂಘಟನೆಯವರು ಬೆಂಬಿಡದೆ ಕಾಡುವವರಾಗಿದ್ದರು. ಹಾಗಾಗಿ ಈ ಸಂಘಟನೆಯವರನ್ನು ಹೇಗಾದರೂ ಮಾಡಿ ಚದುರಿಸಬೇಕು ಎಂಬ ಆಲೋಚನೆಯಲ್ಲಿಯೇ ತೊಡಗಿದ್ದರು. ಸಮಯಕ್ಕಾಗಿ ಕಾಯತೊಡಗಿದ್ದರು. ಆ ಸಮಯ ಉದ್ಯೋಗ ಖಾತ್ರಿ ಯೋಜನೆಯ ರೂಪದಲ್ಲಿ ಬಂದೇ ಬಿಟ್ಟಿತ್ತು. ಈ ಸಂದರ್ಭದಲ್ಲಿ ಧರಣಿ ನಿರತ ರೈತ ಸಂಘಟನೆಯವರನ್ನು ಮಾತ್ರವಲ್ಲದೇ ಧರಣಿಯಲ್ಲಿ ಭಾಗವಹಿಸದೇ ಇರುವವರನ್ನು ಸಹ ಕೇಸ್‌ನಲ್ಲಿ ದಾಖಲಿಸಲಾಯಿತು. ಇದಕ್ಕೆ ಉದಾಹರಣೆ ಎಂಬಂತೆ ಬೂದಗುಂಪ ಗ್ರಾಮದ

ಕುರುಬ ಸಮುದಾಯದ ೬೫ ವರ್ಷದ ನಿಂಗಮ್ಮ ಚೌಡಕಿಯವರು ಗೋಚರಿಸುತ್ತಾರೆ. ಇವರು ರೈತ ಸಂಘದ ಸದಸ್ಯೆಯಾಗಿದ್ದರೂ ಸಹ ಕೂಲಿಕಾರರ ಪ್ರತಿಭಟನೆಯಲ್ಲಿ ಭಾಗಿಯಾಗಿರಲಿಲ್ಲ. ಆದರೂ ಇವರ ಹೆಸರನ್ನು ಎಫ್.ಐ.ಆರ್.ನಲ್ಲಿ ಧಾಖಲಿಸಲಾಗಿತ್ತು. ಇವರು ಈ ವ್ಯವಸ್ಥೆಯ ಬಗ್ಗೆ ಎಷ್ಟು ನೊಂದಿದ್ದರು ಎಂದರೆ ಅವರ ಮಾತಿನಿಂದಲೇ ವ್ಯಕ್ತವಾಗುತ್ತದೆ.

"ನಮ್ಮಂತ ಬಡವರು ದುಡದಂತ ಕೂಲಿ ರೊಕ್ಕ ತಿಂದಾರಂದ್ರೆ ಅವರು ಹಾಳಾಗಿ ಹೋಗ್ತಾರ. ಇಷ್ಟೆಲ್ಲಾ ಆದ್ಮೇಲೆ ನನ್ ಕರ್ಮ ಯಂಗಾದ ನೋಡ ಯಪ್ಪಾ. ನಮ್ ಕೂಲಿ ರೊಕ್ಕ ತಿಂದವರು ಪಾಪದಾಗ ಹೋಗ್ತಾರ ಅಂತೇಳಿ ಸುಮ್ನೆ ಆಗಿ, ನಾನು ನನ್ ಮಗಳ ಊರಾದ ನಾಗೇಶನಹಳ್ಳಿಗೆ ಮಾತಾಡ್ಲಾಕ ಹೋಗಿದ್ದ್ಯಾ ಆ ಟೈಂದಾಗ ಕೂಲಿಕಾರ್ರು, ರೈತಸಂಘದವರು ಸೇರಿಕಂಡು ದುಡದಂತ ಕೂಲಿರೊಕ್ಕ ಕೊಡಾಕಬೇಕು ಅಂತೇಳಿ ತಾಲೂಕ ಆಫೀಸಿನ ಮುಂದ ಟ್ರೈಕ್ ಮಾಡ್ಯಾರ. ಆ ಟೈಮ್‌ನ್ಯಾಗ ಪೊಲೀಸರು ಬಂದು ಬಂದಿದ್ದೇನು ಸಿಕ್ಕ ಸಿಕ್ಕಂಗ ಹೊಡ್ದು. ಅವರ ಮೇಲೇನೆ ಕೇಸ್ ಮಾಡಿ ಜೈಲಿಗೆ ಹಾಕಿಸ್ಯಾರ. ಇದು ಯಾವುದೂನು ನನ್ಗ ಗೊತ್ತಿಲ್ಲ. ನಾನು ಊರಿಂದ ಬಂದ್ಮೇಲೆ ಹಿಂಗೆಲ್ಲ ಆತು ಅಂತೇಳಿ ಊರಾಗಿನ ಮಂದಿ ಹೇಳಿದ್ರು, ಆದ್ರೆ ಅದ್ರಾಗ ನಾನು ಹಣ್ಣೇವು ಇಲ್ಲ. ಪುಣ್ಣೆವು ಇಲ್ಲ. ಆ ಟೈಂದಾಗ ನಾನು ಮಗಳ ಊರಲ್ಲಿ ಇದ್ದೆ. ಹಂಗಾಗಿ ನಾನು ಟ್ರೈಕ್ ಮಾಡಾಕ ಹೋಗಿಲ್ಲ. ಆದ್ರೆ ನಾನು ಟ್ರೈಕಿಗೆ ಹೋಗಿ ಪೊಲೀಸರ್ನ ಹೊಡದೀನಿ ಅಂತ ಹೆಸ್ರು ಬರಿಸಿ ನನ್ ಮ್ಯಾಲೆ ಕೇಸ್ ಮಾಡ್ಯಾರ". ಎಂದರು.

ನೀವು ಟ್ರೈಕ್ ಮಾಡೋದಕ್ಕೆ ಹೋಗಿಲ್ಲದಿದ್ರು ಯಾಕೆ ನಿಮ್ಮ ಮೇಲೆ ಎಫ್‌ಐಆರ್ ಮಾಡಿ ಕೇಸ್ ದಾಖಲಿಸಿದರು? ಎಂದು ಕೇಳಿದಾಗ,

"ಸಾರ್ ನನ್ ಹೆಸ್ರು ಯಾಕ ಬರಿಸ್ಯಾರಂದ್ರೆ ನಾನು ರೈತ ಸಂಘದಾಗ ಇದ್ದೀನಿ. ನಾವು ಹಿಂದೆಲ್ಲ ಬ್ಯಾರೆ ಬ್ಯಾರೆ ಸಮಸ್ಯ ಸಲುವಾಗಿ ಜಗ್ಗಿಸಲ ಟ್ರೈಕ್ ಮಾಡೀವಿ. ಎಲ್ಲದರಾಗ ನಾವು ಗೆದ್ದೀವಿ. ಹಂಗಾಗಿ ಇವರ್ನ ಹಿಂಗ ಬುಟ್ರ ತಮ್ಗ ಮಾತು ಕೆಳಾದಿಲ್ಲಂತ ತಿಳಿದು ರೈತ ಸಂಘದಾಗ ಎಷ್ಟು ಜನ ಐದೀವಿ ವಸ್ಬು ಜನ್ರ ಹೆಸ್ರು ಬರಿಸ್ಯಾರ. ಇದರ ಹಿಂದ ಪಂಚಾಯ್ತಿಯವರ ಮಸಲತ್ತು ಐತಿ. ಯಾಕಂದ್ರೆ ಅವರಿಗೆ ನಮ್ ಸಂಘದವರನ್ನ ಮಣ್ಣು ಮುಕ್ಕಸಬೇಕಂತ ಅವರ ಉದ್ದೇಶ. ದುಡದ ಕೂಲಿ ಕೊಡ್ಲಿಲ್ಲ. ಮಾಡ್ಲಾರದ ತಪ್ಪಿಗೆ ಕೋರ್ಟಿಗೆ ಅಡ್ಡ್ಯಾಡಂಗ ಹಾಗ್ಯಾದ. ಹಿಂಗ ಅಡ್ಡಾಡಿದ್ರು ನಮ್ ಮ್ಯಾಲೆ ನೋಟೀಸ್ ಬರೋದು. ಪೋಲಿಸ್ನೋರು ಮನಿಗೆ ಬಂದು ನಿಮ್ಮನ್ನ ಅರೆಸ್ಟ್ ಮಾಡ್ತೀವಿ ಅಂತ ಹೇಳೋದು. ಇದರಿಂದ ನಮ್ಗ ಬಾಳ ಜೀವಕ್ಕ ಭಯ ಆಗೋದು. ನೋಡಾಯಪ್ಪಾ ಇಂತರೀತಿ ನಮ್ಮನ್ನ ಮಾಡ್ಯಾರ. ನಮ್ಮಂತ ಮುದೆ ಜಲ್ಮಗಳು ಪೋಲೀಸ್‌ರ್ನ ಹೊಡ್ಯಾಯೋಗ್ಯಾ ಐತ್ಯಾ?. ನಮ್ಗ ಈ ಕೇಸಿನ್ಯಾಗಿಂದ ಯಾವಾಗ ಬಿಡುಗಡಿ ಹೊಂದುತೀವಿ ಅಂತ ಅನಿಸಿಬಿಟ್ಟಾದ. ಯಾಕಂದ್ರ

ಮನ್ಯಾಗ ನಮ್ಮನ್ನ ಬೈತಾರ. ಈ ಮುದೆ ಜೀವಕ್ಕ ಮನ್ಯಾಗ ಕುಂದ್ರಿಸಿ ಕೂಳು ಹಾಕಾದೆ ದೊಡ್ಡದಾಯಿತು. ಅಂತದ್ರಾಗ ತಿಂಗ್ಳಾ-ತಿಂಗ್ಳಾ ಬೊಟ್ಟು ಇಟ್ಟಂಗ ಇನ್ನೂರು-ಇನ್ನೂರು ರೂಪಾಯಿ ಕೊಟ್ಟು ಕೋರ್ಟಿಗೆ ಕಳಸಾದಂದ್ರೆ ಸುಮ್ನೆ ಆಗ್ತಾದೇನು? ಹಂಗಾಗಿ ದರವೊಂದು ದಿನಾನು ಮನ್ಯಾಗ ಬೈಸಿಗೆಂಬಾದು ಆಗ್ಯಾದ. ಅವರು ಬೈಯಾದು ವಾಜಿಮಿ ಆದ. ಎಲ್ಲಾ ನಾವು ಮಾಡಿದ ಕರ್ಮ. ಇದೆಲ್ಲ ನಮ್ ಜಲ್ಮದಾಗ ಆಗಬೇಕಂತ ಆದ. ಹಂಗಾಗಿ ಅನುಭವಿಸಕತ್ತೀವಿ". ಎಂದು ತನ್ನ ಅಳಲನ್ನ ತೋಡಿಕೊಂಡಳು ಆ ತಾಯಿ ನಿಂಗಮ್ಮ.

ಹೀಗೆ ವ್ಯವಸ್ಥೆಯಲ್ಲಿನ ಅಧಿಕಾರ ವರ್ಗ ತನ್ನ ಹಿತವನ್ನು ಕಾಪಾಡಿಕೊಳ್ಳಲು ನಿರಪರಾಧಿಗಳನ್ನೂ ಸಹ ಅಪರಾಧಿಗಳನ್ನಾಗಿಸುತ್ತದೆ. ನಿಂಗಮ್ಮ ದೈಹಿಕವಾಗಿ ಅಷ್ಟೇನೂ ಗಟ್ಟಿಮುಟ್ಟಾದ ಜೀವಿಯಲ್ಲ. ಇವರು ತುಂಬಾ ವೃದ್ಧರು. ಇವರು ರೈತ ಸಂಘದ ಸದಸ್ಯರು ಎಂಬ ಕಾರಣಕ್ಕಾಗಿ ಮತ್ತು ಊರಿನ ಅಭಿವೃದ್ಧಿ ಕೆಲಸಗಳಿಗಾಗಿ ಗ್ರಾಮ ಪಂಚಾಯತಿಯ ವಿರುದ್ಧ ಪ್ರತಿಭಟಿಸಿ ಅದರಲ್ಲಿ ಸಫಲರಾಗಿದ್ದಾರೆ. ಈ ಎಲ್ಲಾ ಕಾರಣಗಳಿಗಾಗಿ, ಪ್ರತಿಭಟನೆಯಲ್ಲಿ ಭಾಗಿಯಾಗದಿದ್ದರೂ ಶಿಕ್ಷೆಯನ್ನು ಅನುಭವಿಸುತ್ತಿದ್ದಾರೆ. ಮತ್ತು ಹೀಗೆ ಶಿಕ್ಷೆಗೆ ಗುರಿ ಮಾಡುವುದರಿಂದ ಇನ್ನು ಮುಂದೆ ಊರಲ್ಲಿನ ಜನರು ಸಂಘಟಿತರಾಗುವುದಕ್ಕೆ ಹೆದರಬೇಕು ಮತ್ತು ಆ ರೈತ ಸಂಘ ವಿನಾಶಮಾಡಬೇಕು ಎಂಬ ಉದ್ದೇಶವನ್ನಿಟ್ಟುಕೊಂಡು ಪ್ರಕರಣದಲ್ಲಿ ಭಾಗಿಯಾಗಿರದ ನಿಂಗಮ್ಮ ಚೌಡಕಿಯವರನ್ನು ಕೇಸ್‌ನಲ್ಲಿ ಸಿಕ್ಕಿಕೊಳ್ಳುವಂತೆ ಮಾಡಲಾಯಿತು. ಇದು ನಮ್ಮ ಕಾನೂನು ವ್ಯವಸ್ಥೆಗೆ ಹಿಡಿದ ಕನ್ನಡಿಯಂತಿದೆ. ಈ ಪ್ರಕರಣ ನಡೆದ ನಂತರ ಸರಕಾರ ನಾಲ್ಕು ಜನ ಮುಖ್ಯಮಂತ್ರಿಗಳನ್ನು ಕಂಡಿದೆ. ಈ ನಾಲ್ಕು ಜನ ಮುಖ್ಯಮಂತ್ರಿಗಳ ಬಳಿ ಪ್ರಕರಣದಲ್ಲಿ ದಾಖಲಾದ ಕೇಸನ್ನು ವಾಪಾಸ್ಸು ಪಡೆಯಲು ಈ ಭಾಗದ ರೈತರು ಬೇಡಿಕೆ ಇಟ್ಟು ಪ್ರಯತ್ನ ನಡೆಸಿದರು ಆದರೂ ಫಲಕಾರಿಯಾಗಲಿಲ್ಲ. ಈ ಪ್ರಕರಣದಲ್ಲಿ ಎಫ್.ಐ.ಆರ್.ನಲ್ಲಿ ದಾಖಲಾದ ಜನರು ಇಂದಿಗೂ ಕಡುಕಷ್ಟದಲ್ಲಿ ಜೀವಿಸುತ್ತಿದ್ದಾರೆ. ಮುಖ್ಯವಾಗಿ ವೃದ್ಧರ ಪಾಡಂತೂ ಹೇಳತೀರದು. ಒಂದು ದಿನದ ಅನ್ನಕ್ಕೂ ಪರಿತಪಿಸುವಂತಹ ವೃದ್ಧಜೀವಗಳು ಇವರು.

ಉದ್ಯೋಗ ಖಾತ್ರಿ ಯೋಜನೆಯಲ್ಲಿ ಕೂಲಿ ಕೆಲಸಕ್ಕೆ ಹೋಗದೇ. ತಮ್ಮ ಜಮೀನಿನಲ್ಲಿ ಒಡ್ಡುಗಳನ್ನು ನಿರ್ಮಿಸುವುದರ ಮೂಲಕ ಈ ಯೋಜನೆಯ ಲಾಭವನ್ನು ಪಡೆಯಬೇಕೆಂದಿದ್ದವರೂ ಸಹ. ಇದರ ಪ್ರತಿಫಲವನ್ನು ಪಡೆಯದೇ ಸಾವಿರಾರು ರೂಪಾಯಿಗಳನ್ನು ಕಳೆದುಕೊಂಡಿದ್ದಾರೆ. ಅಂದರೆ ತಮ್ಮ ತಮ್ಮ ಹೊಲಗಳಲ್ಲಿ ಕೂಲಿಕಾರರನ್ನು ಹಿಡಿದು ಕೆಲಸ ಮಾಡಿಸಿಕೊಂಡು ತಮ್ಮ ಸ್ವಂತ ಹಣದಲ್ಲಿ ಕೂಲಿ ಕೊಟ್ಟು ಆ ಹಣ ಗ್ರಾಮಪಂಚಾಯ್ತಿಯಿಂದ ಸಿಗದೆ ಮೋಸಕ್ಕೆ ಒಳಗಾದ ಪ್ರಕರಣಗಳೂ ಇವೆ. ಬೂದಗುಂಪದ ೪೫ ವರ್ಷದ ಕುರುಬ ಸಮುದಾಯದ ಕರಿಯಮ್ಮನೇ ಇದಕ್ಕೆ ಸಾಕ್ಷಿ.

"ನೋಡ್ರಿ ಸಾರ್ ನನ್ಗ ಈ ಯೋಜನೆ ಬಗ್ಗೆ ಪೂರಾ ಮಾಹಿತಿ ಗೊತ್ತಿಲ್ಲ. ಆದ್ರೆ ಪಂಚಾಯ್ತಿ ಸೆಕ್ರೆಟರಿ, ಮೆಂಬರ್‌ಗಳು ಮತ್ತೆ ಅಧ್ಯಕ್ಷರು ಬಂದು ನಿಮ್ಮ ಹೊಲದಾಗ ಹೊಡ್ಡು ಹಾಕ್ಸುವಂತ ಕೆಲ್ಸ ಈ ಯೋಜನದಾಗ ಇಟ್ಟೀವಿ. ಹಂಗಾಗಿ ನೀವು ನಿಮ್ಮ ಹೊಲದಾಗ ಕೂಲಿ ಜನ್ರನ್ನ ಕರ್ಕೊಂಡು ಹೋಗಿ, ಒಡ್ಡು ಹಾಕಿಸಿ, ಪೋಟೋ ತೆಗಿಸಿಕೊಟ್ರೆ ನಾವು ಪಂಚಾಯ್ತಿ ಕಡೆಯಿಂದ ಐವತ್ತು ಸಾವಿರ ರೂಪಾಯಿ ಕೊಡ್ತೀವಿ ಅಂತ ಹೇಳಿದ್ರು. ಇದನ್ನ ಕೇಳಿ ನನ್ಗ ಬಾಳಾ ಖುಷಿ ಆತು. ಯಾಕಂದ್ರೆ ಸರಕಾರ ಇಷ್ಟೊಂದು ಸವಲತ್ತು ಬಡವರಿಗೆ ಮಡ್ತ್ಯಾದಂದ್ರೆ ನಾನ್ಯಾಕ ಮಾಡಿಕ್ಯಾಬಾರದು ಅಂತ. ಪಂಚಾಯ್ತಿಯವರು ಹೇಳಿದ ಪ್ರಕಾರ ನಾನು ಐವತ್ತು ಮಂದಿ ಕೂಲಿ ಆಳುಗಳನ್ನು ಕರ್ಕೊಂಡು ಹೋಗಿ ಹತ್ತು ದಿನ ಬುಡದಂಗ ಹೊಡ್ಡು ಹಾಕಿಸಿದೆ. ಮತ್ತೆ ಅವರು ಹೇಳಿದ ಪ್ರಕಾರ ಕೆಲ್ಸ ಮಾಡ್ಸಿ ಪೋಟೋ ತೆಗಿಸಿಕೊಟ್ಟೆ. ಕೆಲಸ ಮಾಡ್ಸಿ ಎರಡು ತಿಂಗಳಾದ್ರು ಸರಕಾರದ ಕಡೆಯಿಂದ ನನಗ ರೊಕ್ಕ ಬರಲಿಲ್ಲ. ಅವಾಗ ನಮ್ ಹೊಲದಾಗ ಕೂಲಿ ಕೆಲ್ಸ ಮಾಡಿದವರು ದುಡದ ಕೂಲಿ ಕೊಡ್ರಿ ಅಂತ ನಮ್ ಮನೀಗೆ ಬಂದು ಗಲಾಟೆ ಮಾಡಾಕತ್ತಿದ್ರು. ನಾನು ಸರಕಾರದಿಂದ ಇನ್ನೂ ದುಡ್ಡು ಬಂದಿಲ್ಲ. ಅದು ಬಂದ್ ಮೇಲೆ ನಿಮ್ಗ ಕೊಡತ್ತೀನಿ ಅಂದೆ. ಆದ್ರೆ ಅವರು ಸರಕಾರದಿಂದ ರೊಕ್ಕ ಬಂದ್ಮೇಲೆ ನೀನು ತೊಗ. ಅಲ್ಲಿತನಕ ನಮ್ಮಿಂದ ಕಾಯಕ ಆಗಾದಿಲ್ಲಂತ ನನ್ ಜೊತೆ ಜಗಳ ಮಾಡಿದ್ರು. ಅವಾಗ ನನಗ ಏನು ಮಾಡ್ಬೇಕೋ ಗೊತ್ತಾಗಲಿಲ್ಲ. ಸಾಲಸೂಲ ಮಾಡಿ ಕೂಲಿ ಆಳುಗಳಿಗೆ ಐವತ್ತು ಸಾವುರ ರೂಪಾಯಿ ಕೂಲಿ ತಂದುಕೊಟ್ಟೆ. ನನಗ ಸರಕಾರದಿಂದ ಇವತ್ತಿಲ್ಲ ನಾಳೆ ರೊಕ್ಕ ಬರ್ತಾದ ಅನ್ನ ಗ್ಯಾರಂಟಿ ಇತ್ತು. ಆಮ್ಯಾಲೆ ಪಂಚಾಯ್ತಿಯವರ್ನ ರೊಕ್ಕ ಯಾವಾಗ ಬರ್ತಾದಂತ ಕೇಳಿದ್ರೆ ಒಬ್ರು ಹಚ್ಚಿಗೆಳಲಿಲ್ಲ. ರೊಕ್ಕ ಯಾವಾಗ ಬರ್ತಾದಂತ ಕೆಳಿದಂಗೆಲ್ಲ ಬರೀ ಸುಳ್ಳು ಹೇಳಿಕೆಂತ ಹೊಂಟುಬುಟ್ರು. ಅಧ್ಯಕ್ಷರು, ಸೆಕ್ರೆಟರಿ ಮತ್ತ್ಯಾ ಮೆಂಬರ್‌ಗಳು ಸೇರಿ ನನ್ನ ಹೆಸರಿಲೆ ರೊಕ್ಕ ಎತ್ತಿಗೆಂಡು ತಿಂದಾರಂತ ಗೊತ್ತಾಯಿತು. ಇನ್ನ ಏನು ಮಾಡಾದು ನನ್ಗ್ ಮೋಸ ಮಾಡಿಬುಟ್ರು". ಎಂದರು.

ನಿಮ್ಮ ಹೊಲದಲ್ಲಿ ಹೊಡ್ಡು ಹಾಕಿಸಿದ ದುಡ್ಡು ಪಂಚಾಯ್ತಿಯವರು ಎತ್ತಿಗೆಂಡು ತಿಂದಾರಂತ ನೀವು ಮೇಲಾಧಿಕಾರಿಗಳಿಗೆ ಕಂಪ್ಲೇಂಟ್ ಮಾಡಲಿಲ್ಲವೇ? ಎಂದು ಪ್ರಶ್ನಿಸಿದಾಗ. "ಇಲ್ಲ ಸಾರ್, ನಾವು ದಡ್ಡ ಜನ. ನಮ್ಗ ಏನು ಗೊತ್ತಾಗ್ತಾದ. ಇಷ್ಟೆಲ್ಲ ಆದ್ಮ್ಯಾಲೆ ನಾನು ನಮ್ ಮನ್ಯಾಗ ನಾನು ಇದ್ದೆ. ಆದ್ರೆ ಕೂಲಿಕಾರು, ಮತ್ತೆ ರೈತ ಸಂಘದವರು ನಮ್ ಮನೀಗೆ ಬಂದು ನಾವು ಕೊಪ್ಪಳ ತಾಲೂಕ ಕಛೇರಿ ಮುಂದ ಟ್ರೈಕ್ ಮಾಡ್ತೀವಿ ನೀನು ಬರಾಕಬೇಕು ಅಂತಂದ್ರು. ನೀನು ಟ್ರೈಕ್ ಮಾಡಾಕ ಬಂದ್ರೆ, ನಿನಗ ರೊಕ್ಕ ಬರ್ತಾವ ಅಂತೇಳಿದ್ರು. ನಾನು ಒಲ್ಲೆ ಅಂತಂದ್ರು ನನ್ನ ಬುಡಲಿಲ್ಲ. ಜೋರಾ ಜುಲಿಮಿ ಮಾಡಿ ಟ್ರೈಕ್ ಮಾಡಾಕ ಕರ್ಕಂಡು ಹೊಂಟ್ಬುಟ್ರು. ಈಗ ಕೋರ್ಟಿಗೆ ಅಡ್ಡ್ಯಾಡಕತ್ತಿನಿ. ನನ್ಗ ಬರಬೇಕಾದ ಐವತ್ತು ಸಾವುರ ರೊಕ್ಕ ಬರಲಿಲ್ಲ. ಕೋರ್ಟಿಗೆ ತಿರುಗಾದು ತಪ್ಪಾವಲ್ದ್. ಮೈಮ್ಯಾಲಿನ ಬಂಗಾರ

ಕಳಕಂಡೀನಿ. ಮತ್ಯಾ ಮೈ ಬಾಯಂಗ ಬಡಿಸಿಗೆಂಡು ಮನ್ಯಾಗ ಕುಂತೀನಿ. ಆದ್ರೆ ನಾನು ರೈತ ಸಂಘದಾಗ ಸದಸ್ಯಳಾಗೇನಿ. ಹಿಂಗ ಆಗಿದ್ದಾ ದೊಡ್ಡ ತಪ್ಪು ಆತು ನೋಡ್ರಿ, ಯಾಕಂದ್ರ ರೈತ ಸಂಘದ ಕಡೆಯಿಂದ ಬ್ಯಾರೆ ಬ್ಯಾರೆ ಸಮಸ್ಯೆಗಳ ಸಲುವಾಗಿ ಸ್ಟ್ರೈಕ್ ಮಾಡಿ ಜಯ ಗಳಿಸಿದ್ವಿ, ಇದು ಅವರಿಗೆ ಅರಗಿಸಿಗೆಳ್ಳಾಕ ಆಗಿದಿಲ್ಲ. ಇವರನ್ನ ಹಿಂಗ ಬುಟ್ರೆ ನಮ್ಗ ಮಾತು ಕೇಳಾದಿಲ್ಲ. ಪ್ರತಿಯೊಂದಕ್ಕ ಅಡ್ಡಗಾಲು ಆಗ್ತಾರಂತೇಳಿ ನಮ್ ಮ್ಯಾಲೆ ಕೇಸ್ ಮಾಡ್ಯಾರ. ಹಿಂಗಾಗಿ ನಮ್ಗ ಊರಾಗ ಮರ್ಯಾದಿ ಇಲ್ದಂಗ ಆಗ್ಯಾದ. ನನಗ ಯಾವ ರೊಕ್ಕನು ಬ್ಯಾಡ. ಮೊದಲು ಈ ಕೇಸಿನಿಂದ ಹೊರಗ ಬಂದ್ರ ಸಾಕು ಅನಿಸೇತಿ". ಎಂದು ತನ್ನ ದುಃಖವನ್ನು ತೋಡಿಕೊಂಡಳು.

ಕರಿಯಮ್ಮನ ಸಮಸ್ಯೆಯೂ ಕೂಡ ಉಳಿದ ಮಹಿಳೆಯರಂತೆ ಇದೆ. ಆದರೆ ಇವರು ತಮ್ಮ ಹೊಲದಲ್ಲಿ ಕೃಷಿಹೊಂಡವನ್ನು ತೋಡಿಸಿಕೊಂಡು ಮೋಸಹೋಗಿದ್ದಾರೆ. ಇವರೂ ಸಹ ಪ್ರತಿಭಟನೆಯಲ್ಲಿ ಪೊಲೀಸರಿಂದ ಲಾಟಿ ಏಟನ್ನು ತಿಂದಿದ್ದಾರೆ. ಹಾಗೆಯೇ ತಮ್ಮ ಮೈ ಮೇಲಿನ ಒಡವೆಗಳನ್ನೂ ಸಹ ಕಳೆದುಕೊಂಡಿದ್ದಾರೆ. ಇವರಿಗೂ ಕೂಡ ತಮ್ಮ ಮೇಲಿನ ಕೇಸಿನಿಂದ ಹೊರ ಬಂದರೆ ಸಾಕು ಎನ್ನುವಂತದ್ದಾಗಿದೆ.

ಒಟ್ಟಾರೆಯಾಗಿ ಕೊಪ್ಪಳದಲ್ಲಿ ನಡೆದ ಲಾಠಿಚಾರ್ಜ್ ಪ್ರಕರಣದ ನಂತರ ಮಹಿಳೆಯರು, ಪುರುಷರು, ವಯೋವೃದ್ಧರು ಹೀಗೆ ಹಲವು ಜನರು ಹಲವಾರು ಕಷ್ಟಗಳನ್ನು ಅನುಭವಿಸುತ್ತಲೇ ಇದ್ದಾರೆ. ಹೀಗೆ ಮಹಿಳಾ ಕೂಲಿಕಾರರ ಕಥೆ ಒಂದೆಡೆಯಾದರೆ ಪುರುಷ ಕೂಲಿಕಾರರೂ ಸಹ ಈ ಘಟನೆಯಿಂದ ಯಾತನೆಯನ್ನು ಅನುಭವಿಸುತ್ತಿದ್ದು ಅವರನ್ನೂ ಕೂಡ ಭೇಟಿ ಮಾಡಿ ಮಾಹಿತಿಯನ್ನು ಸಂಗ್ರಹಿಸಲಾಯಿತು.

ಕೊಪ್ಪಳ ತಾಲೂಕಿನ ವ್ಯಾಪ್ತಿಗೆ ಸೇರಲ್ಪಟ್ಟ ಇಂದರಗಿ ಗ್ರಾಮದ ಇಂದ್ರೇಶ್ ಎನ್ನುವವರನ್ನು ಬೇಟಿಯಾಗಿ ಉದ್ಯೋಗ ಖಾತ್ರಿ ಯೋಜನೆಯ ಬಗ್ಗೆ ಮಾಹಿತಿಯನ್ನು ಕೇಳಿದಾಗ ಅವರು ತುಂಬಾ ಗಾಬರಿಗೊಂಡಿದ್ದರು. ಮತ್ತು ಇವರು ನನ್ನನ್ನು ಒಂದು ಕ್ಷಣ ಅನುಮಾನದಿಂದ ನೋಡಿದರು. ಇದಕ್ಕೆ ಕಾರಣ ಇಲ್ಲದಿಲ್ಲ. ಇವರ ಮೇಲೆ ಲಾಟಿಚಾರ್ಜ್ ಪ್ರಕರಣದಲ್ಲಿನ ಕೇಸ್ ಇದ್ದುದರಿಂದ, ಯಾವುದಾದರೂ ಡಿಪಾರ್ಟ್‌ಮೆಂಟನಿಂದ ಮಾಹಿತಿಯನ್ನು ಸಂಗ್ರಹಿಲು ಬಂದಿದ್ದಾರೆ ಎಂಬ ಅನುಮಾನ ಅವರಲ್ಲಿ ಕಾಡುತ್ತಿತ್ತು. ಆದರೆ ನನ್ನ ಪರಿಚಯವನ್ನು ಮಾಡಿಕೊಳ್ಳುವುದರ ಜೊತೆಗೆ ನನ್ನ ಸಂಶೋದನೆಯ ಕುರಿತಾಗಿ ಹೇಳಿದಾಗ, ಹೌದೆನ್ರಿ, ಎಂದು ಹೇಳಿ ತನ್ನ ಮಾತನ್ನು ಮುಂದುವರೆಸಿದರು. "ಈ ಉದ್ಯೋಗ ಖಾತ್ರಿ ಯೋಜನೆಯಲ್ಲಿ ದುಡದಂತ ಕೂಲಿ ಕೇಳಿದ ಸಲುವಾಗಿ ನಮ್ಮನ್ನ ದನಕ್ಕ ಬಡದಂಗ ಬಡುದು ಮತ್ತೆ ನಮ್ಮ್ಯಾಲೆ ಕೇಸ್ ಮಾಡ್ಯಾರ. ಈಗ ಕೇಸ್ ಕೋರ್ಟಲ್ಲಿ ನಡ್ಯಾಕತ್ಯಾದ. ನಾವು ಈಗಾಗಲೆ ಮಾಡ್ಲರದ ತಪ್ಪಿಗೆ ಶಿಕ್ಷೆ ಅನುಭವಿಸಕತ್ತೀವಿ. ಆ ದಿನ ಲಾಠಿಚಾರ್ಜ್‌ನಲ್ಲಿ ಪೋಲೀಸರು ಕಟ್ಟಿಗಿ ತೆಗೆದುಕೊಂಡು ನನ್ ಬೆನ್ನಿಗೆ ಹೊಡೆದಿದ್ದರಿಂದ ಬೆನ್ನಿನ ಮೂಳೆ ಮುರಿದೈತಿ.

ಹಂಗಾಗಿ ಜೀವ್ನ ನಡಿಸಾದ ಬಾಳ ಕಷ್ಟ ಆಗ್ಯಾದ ಸಾರ್. ಯಾಕಂದ್ರ ಮನ್ಯಾಗ ನಾನೊಬ್ಬನೆ ದುಡಿಬೇಕು. ನನಗ ಮದ್ವೆ ಆಗಿ ಹತ್ತು ವರ್ಷ ಆಯಿತು. ನನಗ ಸಣ್ಣ ಸಣ್ಣ ಮಕ್ಳು ಐದಾವ. ನನ್ನ ಹೆಣ್ತಿ ದುಡಿಯಾಕ ಹೋಗಾದಿಲ್ಲ. ಮಕ್ಕಳ್ನ ನೋಡ್ಕಂಡು ಮನ್ಯಾಗ ಇರ್ತಾಳ. ನಾನೊಬ್ಬನೇ ದುಡಿದ್ರೆ ಮನ್ಯಾಗ ಮೂರು ಒಪ್ಪತ್ತು ಊಟ ಮಾಡ್ತೀವಿ. ಇಲ್ಲಂದ್ರೆ ಉಪವಾಸ ಇರಬೇಕಾಗ್ತಾದ. ಇಂತದ್ರಾಗ ಪ್ರತಿ ತಿಂಗಳ ಕೋರ್ಟಿಗೆ ಅಡ್ಯಾಡದಂದ್ರೆ ಖರ್ಚು ಸುಮ್ನೆ ಆಗ್ತಾದೇನು? ಒಂದ್ಸಲ ಕೋರ್ಟಿಗೆ ಹೋದ್ರೆ ಏನಿಲ್ಲಂದ್ರೆ ಇನ್ನೂರು ರೂಪಾಯಿ ಬೇಕಾಗ್ತಾದ. ಮನ್ಯಾಗ ಇಂತ ಪರಿಸ್ಥಿತಿ ಇದ್ದಾಗ ಎಲ್ಲಿಂದ ರೊಕ್ಕ ಜೋಡ್ಸಾಕ ಆಗ್ತಾದ. ಹಂಗಾಗಿ ಪ್ರತಿ ತಿಂಗಳ ಸಾಲ ಮಾಡಿ ಕೋರ್ಟಿಗೆ ಅಡ್ಯಾಡಕತ್ತೀವಿ. ಈ ಬ್ಯಾಸ್ಗಿ ಟೈಮ್‌ನ್ಯಾಗ ನೋಡಿದ್ರೆ ನಮ್ ಊರಾಗ ಕೂಲಿ ಕೆಲ್ಸ ಇರಾದಿಲ್ಲ. ಹಿಂಗಾದ್ರೆ ನಮ್ಮಂತ ಬಡವರು ಜೀವ್ನ ನಡಸಾದು ಯಂಗಂತಾನೆ ತಿಳಿಯಲಾರದಂಗ ಆಗ್ಯಾದ. ಯಡಿಯೂರಪ್ಪ ಮುಖ್ಯಮಂತ್ರಿ ಆಗಿದ್ದಾಗ ನಮ್ಮ ಮ್ಯಾಗಿನ ಕೇಸ್ ಹಿಂದಕ್ಕ ತೆಕ್ಕಳ್ರಿ ಅಂತೇಳಿ ರೈತ ಸಂಘದ ಅಧ್ಯಕ್ಷರಾದ ಕೋಡಿಹಳ್ಳಿ ಚಂದ್ರಶೇಖರ ಅವರ ನೇತೃತ್ವದಾಗ ಎಲ್ಲಾ ಕೂಲಿಕಾರರು ಅವರಿಗೆ ಮನವಿ ಮಾಡಿದ್ವಿ. ಕೇಸ್ ತೆಗಸ್ತೀನಿ ಅಂತ ಹೇಳಿದ್ರು, ಇದುವರೆಗೆ ಕೇಸು ಹಿಂದಕ್ಕ ತೆಕ್ಕಂಡಿಲ್ಲ. ಆವತ್ತಿನಿಂದ ಹಿಡಿದು ಇವತ್ತಿನ ತನಕ ಅಂದ್ರೆ ಸದಾನಂದಗೌಡ, ಜಗದೀಶ ಶೆಟ್ಟರ್ ಮತ್ತು ಸಿದ್ಧರಾಮಯ್ಯನವರಿಗೂ ಸತೆ ಭೇಟಿಯಾಗಿ ಬಂದೀವಿ. ಆದ್ರೆ ಇವತ್ತಿನ ತನಕ ಕೇಸ್ ಹಿಂದಕ್ಕ ತೆಕ್ಕಂಡಿಲ್ಲ. ಹಂಗಾಗಿ ನಮ್ಗ ಈ ಪಂಚಾಯ್ತಿ ಸಹವಾಸ ಬ್ಯಾಡ. ಈ ಉದ್ಯೋಗ ಖಾತ್ರಿ ಸಹವಾಸ ಬ್ಯಾಡ. ಯಾರಾದ್ರು ಪುಣ್ಯಾತ್ಮರು ಬಂದು ನಮ್ಮನ್ನು ಈ ಕೇಸಿನಿಂದ ಬಿಡುಗಡೆಗೊಳಿಸಿದ್ರೆ ನಾವು ಎಲ್ಲಾದ್ರ ದೂರದ ಊರಿಗೆ ಪೂನಾ, ಬಾಂಬೆ ಮತ್ತೆ ಬೆಂಗಳೂರಿಗೆ ಅಂತಲ್ಲಿಗೆ ಹೆಂಡ್ರು ಮಕ್ಕಳನ್ನು ಕರ್ಕಂಡು ಹೋಗಿ ದುಡ್ಕಂಡಾದ್ರೆ ತಿಂತೀವಿ. ಈ ಕೇಸಿನ ಸಲುವಂದ ಪ್ರತಿ ತಿಂಗಳ ಕೋರ್ಟಿಗೆ ಅಡ್ಯಾಡಬೇಕಾಗ್ಯಾದ. ನಾವು ಹೊರ್ಗ ಎಲ್ಲಿನೂ ಹೋಗಿ ದುಡಿಯಾಕ ಹೋಗಲಾರದಂತ ಪರಿಸ್ಥಿತಿ ಬಂದಾದ" ಎಂದು ತಮ್ಮ ಅಳಲನ್ನು ತೋಡಿಕೊಂಡರು.

ಹಾಸಗಲ್ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಬರುವಂತ ಮೆತ್ತಗಲ್ ಗ್ರಾಮದ ಕಾಂತೆಪ್ಪ ಗಾಣಿಗರು ಎನ್ನುವವರನ್ನು ಭೇಟಿ ಮಾಡಲಾಗಿತ್ತು. ಅವರೂ ಸಹ ಲಾಠಿಚಾರ್ಜ್‌ಗೆ ಒಳಗಾಗಿ ಜೈಲಿಗೆ ಸೇರಿದವರಲ್ಲಿ ಒಬ್ಬರಾಗಿದ್ದಾರೆ. ಅವರನ್ನು ಈ ಉದ್ಯೋಗ ಖಾತ್ರಿ ಯೋಜನೆಯ ಬಗ್ಗೆ ಕೇಳಿದಾಗ "ಸಾರ್ ಈ ವ್ಯವಸ್ಥೆ ಬಾಳಾ ಕೆಟ್ಟದಾಗಿ ಐತಿ. ಯಾಕಂದ್ರೆ ದುಡ್ಕಂಡು ತಿನ್ನಂತ ಜನಗಳನ್ನ ಬದುಕಾಕೇ ಬುಡಲಾರದಂತಹ ಪರಿಸ್ಥಿತಿ ಆದ. ಯಾಕಂದ್ರ ನಾವು ದುಡದಂತ ಕೂಲಿ ಕೊಡ್ರಿ ಅಂತೇಳಿ ಧರಣಿ ಮಾಡಿದ್ವಿ, ಹೆಣ್ಣು ಮಕ್ಕಳನ್ನು, ಸಣ್ಣ-ಸಣ್ಣ ಕೂಸುಗಳ ತಾಯಿದವರ್ನ ಹಿಂಗ ಹೊಡುದ್ರು ಅಂದ್ರೆ ಅದನ್ನ ಹೇಳಬಾರದು. ನಮ್ಗ ಗಂಡಸರಿಗೆ ಹೊಡದ್ರಲ್ಲ ನನಗೆ ಬೇಜಾರಿಲ್ಲ. ಆದ್ರೆ ನಮ್ ತಾಯಿ ವಯಸ್ಸಿನ ಹೆಣ್ಣು

ಮಕ್ಕಳನ್ನ ಸೀರೆ ಸೆರಗು ಹಿಡಿದು ಎಳೆದಾಡಿ ಹೊಡಿತಾರೇನ್ರಿ? ನೀವೇ ಹೇಳ್ರಿ, ಈತರ ಹೊಡಿಬೇಕಂತ ಯಾವ ಕಾನೂನುನ್ಯಾಗ ಐತ್ರಿ, ಪೊಲೀಸರು ಜನರಿಗೆ ರಕ್ಷಣೆ ಕೊಡ್ತೀವಿ ಅಂತ ದೊಡ್ಡದಾಗಿ ಭಾಷಣ ಮಾಡ್ತಾರ. ಆದ್ರ ನಮ್ಮಂತ ಹಳ್ಳಿ ಅಮಾಯಕರನ್ನ ಹೊಡೆದು ಕೇಸ್ ಮಾಡಿ ಜೈಲಿಗೆ ಹಾಕಿದ್ರು, ಹಿಂಗಾದ್ರೆ ಕಾನೂನಿಗೆ ಬೆಲೆ ಎಲ್ಲಿ ಐತ್ರಿ, ನಾನು ಮೂರ್ವರೆ ವರ್ಷದಿಂದ ಒಂದ್ಸಲನು ತಪ್ಪದಂಗ ಕೋರ್ಟಿಗೆ ಹಾಜರಾಗಿನಿ. ಆದ್ರೆ ಮೊನ್ನೆ ಒಂದ್ಸಲ ಮಾತ್ರ ನನ್ ಮದ್ವಿ ಇದ್ದಿದ್ದರಿಂದ ಕೋರ್ಟಿಗೆ ಹಾಜರಿ ಆಗಾಕ ಆಗ್ಲಿಲ್ಲ. ಯಾಕಂದ್ರೆ ನನ್ ಮದ್ವಿ ದಿನಾನೇ ಕೋರ್ಟಿಗೆ ಹಾಜರಿ ಆಗಬೇಕಂತೇಳಿ ನೋಟೀಸ್ ಬಂದಿತ್ತು. ಹಂಗಾಗಿ ಕೋರ್ಟಿಗೆ ಹೋಗಾಕ ಆಗ್ಲಿಲ್ಲ. ಆದ್ರೆ ಒಂದು ಸಲಾನು ನೀನು ಕೋರ್ಟಿಗೆ ಹಾಜರಿ ಆಗಿಲ್ಲ ಅಂತೇಳಿ ಪೋಲೀಸರು ನನ್ ಮದ್ವಿ ಆದ ಮಾರನೇ ದಿನ ವಾರೆಂಟ್ ಆರ್ಡರ್ ತಗಂಡು ನನ್ ಆರೆಸ್ಟ್ ಮಾಡಾಕ ಬಂದ್ರು, ನೀನು ಮೊದ್ಲು ಪೋಲೀಸ್ ಸ್ಟೇಷನ್‌ಗೆ ನಡಿ ಎಸ್.ಐ. ಸಾಹೆಬ್ರು ಕರಕಂಡು ಬಾ ಅಂತ ಹೆಳ್ಯಾರ. ನೀನು ಮೊದ್ಲು ಜೀಪ್ ಹತ್ತು ಅಂತೇಳಿ ಕುಂತಗಂಡು ಬುಟ್ರು, ಆಮ್ಯಾಲೆ ನಮ್ ಊರಾಗಿನ ಜನಗಳೆಲ್ಲ ಸೇರಿ ಆ ಹುಡುಗಂದು ನಿನ್ನೆನೆ ಮದ್ವಿ ಆಗ್ಯಾದ ನೀವು ಹೋಗ್ರಿ ನಾವು ಎಸ್.ಐ.ಗೆ. ಮಾತಾಡಿ ಇವತ್ತು ಎಷ್ಟೊತ್ತಿದ್ರು ಸ್ಟೇಷನ್‌ಗೆ ಕರ್ಕಂಡು ಬರ್ತಿವಿ ಅಂತ ಹೇಳಿ ಕಳಿಸಿದ್ರು, ಆಮ್ಯಾಲೆ ನನ್ನ ಜೊತಿಗೆ ಇನ್ನು ಆರು ಮಂದಿದು ಸತೆ ವಾರಂಟು ಆಗಿತ್ತು. ಆಮ್ಯಾಲೆ ಏಳು ಜನ ಒಬ್ಬೊಬ್ರು ಎಂಟತ್ತು ಸಾವಿರ ಖರ್ಚು ಮಾಡಿ ವಾರೆಂಟು ಪೀಸ್ ಕಟ್ಟಿ ಬೇಲು ಮಾಡ್ಸಿಗೆಂಡೀವಿ. ಹಾಗೆಯೇ ನನ್ಗೆ ಇಷ್ಟೆಲ್ಲ ತ್ರಾಸ್ ಆಗಬೇಕಂದ್ರು ಕೂಡ ನಾನು ರೈತ ಸಂಘದಲ್ಲಿ ಇರೋದ್ರಿಂದಾಗಿ" ಎಂದು ತಮ್ಮ ಅಸಹಾಯಕತೆಯನ್ನು ತೋಡಿಕೊಂಡರು.

ಈ ಇಬ್ಬರೂ ವ್ಯಕ್ತಿಗಳು ಲಾಠಿ ಚಾರ್ಜ್ ಪ್ರಕರಣದಲ್ಲಿ ಭಾಗಿಯಾದವರು. ಹಾಗೆಯೇ ಈ ಪ್ರಕರಣದಿಂದ ಹೊರಗುಳಿದಿರುವಂತಹ ಜನರನ್ನು ಮಾತನಾಡಿಸಿ ಉದ್ಯೋಗ ಖಾತ್ರಿ ಯೋಜನೆಯ ಬಗ್ಗೆ ಮಾಹಿತಿಯನ್ನು ಪಡೆಯುವ ಉದ್ದೇಶದಿಂದ ಹಿರೇಬಗನಾಳ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವಂತ ಹಿರೇಕಾಸನಕಂಡಿ ಗ್ರಾಮಕ್ಕೆ ಹೋಗಿ ಬಸವರಾಜ್ ಪೂಜಾರಿ ಎನ್ನುವವರನ್ನು ಭೇಟಿಯಾಗಿ ಉದ್ಯೋಗ ಖಾತ್ರಿ ಯೋಜನೆಯ ಬಗ್ಗೆ ಕೇಳಿದಾಗ "ನೋಡ್ರಿ ಸಾರ್ ಖರೇ ಹೇಳಬೇಕಂದ್ರೆ ನಾನಾಗ್ಲಿ ಮತ್ತೆ ನಮ್ ಮನೇಲಿ ಆಗ್ಲಿ ಯಾರು ಉದ್ಯೋಗ ಖಾತ್ರಿ ಯೋಜನೆ ಕೆಲಸಕ್ಕೆ ಹೋಗಿಲ್ಲ. ಈ ಯೋಜನೆ ಬಗ್ಗೆ ಹೇಳಬೇಕಂದ್ರೆ ಬಾಳಾ ಚಲೋ ಯೋಜನೆ ಐತಿ. ಆದ್ರೆ ನಮ್ ಪಂಚಾಯ್ತಿ ವ್ಯಾಪ್ತಿಯಲ್ಲಿ ಆಗಲಿ ಮತ್ತೆ ನಮ್ ಪಂಚಾಯ್ತಿ ಸುತ್ತ ಮುತ್ತ ಇರುವಂತ ಬೂದುಗುಂಪ, ಇಂದರಗಿ, ಇರಕಲ್‌ಗಡಾ ಮತ್ತೆ ಹಾಸಗಲ್ ಪಂಚಾಯ್ತಿಗಳಲ್ಲಿ ಎಲ್ಲೂ ಕೂಡ ಕೂಲಿಕಾರ್ಮಿಕರಿಗೆ ದುಡದಂತ ಕೂಲಿನೇ ಸಿಕ್ಕಿಲ್ಲ. ಜನರಿಗೆ ಸರಿಯಾಗಿ ದುಡಿಯಾಕ ಕೆಲಸಾನು ಇವತ್ತಿನವರೆಗೆ ಕೊಟ್ಟಿಲ್ಲ" ಎಂದರು.

ಯಾಕೆ ಈ ಒಂದು ಯೋಜನೆ ಕೂಲಿಕಾರರಿಗೆ ದಕ್ಕುತ್ತಿಲ್ಲ? ಎಂದು ಪ್ರಶ್ನಿಸಿದಾಗ, "ದುಡಿದ ಕೂಲಿ ಕೇಳಿ ಧರಣಿ ಮಾಡಿದ ಕೂಲಿಕಾರ್ಮಿಕರ ಮೇಲೆ ಪೊಲೀಸರು ಲಾಠಿ ಚಾರ್ಜ್ ಮಾಡಿ, ಅವರ ಮೇಲೆ ಕೇಸ್ ದಾಖಲಿಸಿದ್ರೆ ಕೂಲಿ ಕೆಲ್ಸ ಕೇಳಾಕ ಯಾರು ಮುಂದೆ ಬರ್ತಾರ? ನೀವೇ ಹೇಳ್ರಿ, ಹಂಗಾಗಿ ಇವತ್ತು ಕೂಲಿ ಕಾರ್ಮಿಕರು ನಮ್ ಭಾಗದಲ್ಲಿ ಭಯದ ವಾತಾವರಣದಾಗ ಬದುಕುವಂತಹ ಸ್ಥಿತಿ ನಿರ್ಮಾಣ ಆಗ್ಯಾದ. ಇವತ್ತಿನವರೆಗೂ ಕೂಲಿಕಾರರಿಗೆ ನ್ಯಾಯ ಸಿಕ್ಕಿಲ್ಲ. ದುಡದಂತ ಕೂಲಿ ಹಣ ಬರ್ಲಿಲ್ಲ. ಈ ಕಡೆ ಕೋರ್ಟಿಗೆ ಅಡ್ಯಾಡದು ತಪ್ಪಿಲ್ಲ. ಆದ್ದರಿಂದ ಇವತ್ತು ಕೂಲಿಕಾರರು ಬೀದಿ ಪಾಲಾಗಿದ್ದಾರೆ. ಇದರ ಬಗ್ಗೆ ಸರಕಾರ ಗಮನ ಹರಿಸದೆ ಇರುವಂತಹದ್ದು ದುರಾದೃಷ್ಟಕರವಾದಂತ ಸಂಗತಿಯಾಗಿದೆ. ಹಿಂದೆ ನಿಜಾಮನ ಕಾಲಕ್ಕೂ ಕೂಡ ಇಷ್ಟೊಂದು ಇರ್ಲಿಲ್ಲ. ಆದ್ರೆ ಇವತ್ತು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇಂತಹ ದೌರ್ಜನ್ಯದ ಆಡಳಿತ ನೋಡಕತ್ತೀವಿ". ಎಂದು ತಮ್ಮ ಅನಿಸಿಕೆಯನ್ನು ಹೇಳಿದರು.

ಈ ಲಾಠಿಚಾರ್ಜ್ ಪ್ರಕರಣದ ಬಗ್ಗೆ ನೀವು ಏನನ್ನು ಹೇಳತ್ತೀರಿ? ಎಂದಾಗ "ನೋಡ್ರಿ ಈ ಲಾಠಿ ಚಾರ್ಜ್ ಪ್ರಕರಣದ ಬಗ್ಗೆ ಹೇಳಬೇಕಂದ್ರೆ ಇದೊಂದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಾಗರೀಕ ಸಮಾಜ ತಲೆತಗ್ಗಿಸುವಂತ ಘಟನೆಯಾಗಿದೆ. ಆದ್ದರಿಂದ ನ್ಯಾಯಾಂಗ ವ್ಯವಸ್ಥೆಯ ಮೇಲೆ ನಂಬಿಕೆ ಇಲ್ಲದಂತ ಪರಿಸ್ಥಿತಿ ನಿರ್ಮಾಣ ಆಗ್ಯಾದ. ಜನ ಸಾಮಾನ್ಯರ ಹಿತ ಕಾಪಾಡಬೇಕಾದಂತ ನಮ್ಮನ್ನಾಳುವ ಸರ್ಕಾರಗಳು ಮತ್ತು ಅಧಿಕಾರಿಗಳು ದುಡಿದು ತಿನ್ನುವಂತ ಕೂಲಿಕಾರರ ಮೇಲೆ ಸವಾರಿ ಮಾಡುತ್ತಿರುವುದನ್ನು ನೋಡಿದ್ರೆ ನಾವು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಬದುಕುತ್ತಿಲ್ಲವೆಂದು ಅನಿಸುತ್ತಿದೆ. ಆದ್ದರಿಂದ ಈ ಲಾಠಿ ಚಾರ್ಜ್ ಪ್ರಕರಣದಲ್ಲಿ ಅನ್ಯಾಯಕ್ಕೊಳಗಾಗಿರುವಂತ ಕೂಲಿ ಕಾರ್ಮಿಕರಿಗೆ ನಿಜವಾಗಿ ನ್ಯಾಯ ಸಿಗಬೇಕು ಇವರ ಮೇಲೆ ದಾಖಲಾಗಿರುವಂತ ಕೇಸನ್ನು ಸರ್ಕಾರ ಹಿಂದಕ್ಕೆ ತೆಗೆದುಕೊಳ್ಳಬೇಕು. ಮಹಿಳೆಯರು, ಮಕ್ಕಳು, ವೃದ್ಧರು ಎನ್ನದೇ ರೈತ ಕೂಲಿ ಕಾರ್ಮಿಕರನ್ನು ಮನಸೋ ಇಚ್ಛೆ ಹೊಡೆದಂತಹ ರಕ್ಷಣ ಅಧಿಕಾರಿಗಳು ಮತ್ತು ಲಾಠಿ ಚಾರ್ಜ್ ಪ್ರಕರಣಕ್ಕೆ ಕಾರಣೀಭೂತರಾದಂತಹ ಚುನಾಯಿತ ಪ್ರತಿನಿಧಿಗಳು ಹಾಗೂ ಅಧಿಕಾರಿಗಳಿಗೆ ಕಾನೂನು ರೀತ್ಯ ಕಠಿಣ ಶಿಕ್ಷೆ ವಿಧಿಸಬೇಕು. ಅಂದಾಗ ಮಾತ್ರ ಪ್ರಜಾಪ್ರಭುತ್ವ ವ್ಯವಸ್ಥೆಗೆ ನಿಜವಾದ ಕಾಯಕಲ್ಪ ಬರೋದಕ್ಕೆ ಸಾಧ್ಯವಾಗುತ್ತದೆ" ಎಂದರು.

ಒಟ್ಟಾರೆಯಾಗಿ ಈ ಲಾಠಿ ಚಾರ್ಜ್ ಪ್ರಕರಣವನ್ನು ಗಮನಿಸಿದಾಗ ಜನಸಾಮಾನ್ಯರಿಗೆ ಈ ಸಮಾಜದಲ್ಲಿ ಬದುಕುವಂತ ಹಕ್ಕು ಇಲ್ಲವೇನೋ ಎನ್ನುವಂತೆ ಭಾಸವಾಗುತ್ತದೆ. ಏಕೆಂದರೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ದುಡಿದಂತಹ ಕೂಲಿಯನ್ನು ಕೇಳುವಂತಹದ್ದು ಪ್ರತಿಯೊಬ್ಬ ಮಹಿಳೆ ಮತ್ತು ಪುರುಷರ ಹಕ್ಕಾಗಿದ್ದರೂ ಕೂಡ ಚುನಾಯಿತ ಪ್ರತಿನಿಧಿಗಳು ಮತ್ತು ಅಧಿಕಾರಿಶಾಹಿ ವರ್ಗ ಈ ದೇಶದ ಕಾಯಿದೆ, ಕಾನೂನನ್ನು ಉಲ್ಲಂಘಿಸಿ ನಿರಂಕುಶ ಪ್ರಭುಗಳಂತೆ ವರ್ತಿಸಿರುವಂತಹದ್ದು ಕಂಡುಬರುತ್ತದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಂಘ-

ಸಂಸ್ಥೆಗಳನ್ನು ಕಟ್ಟಿಕೊಂಡು ಸಂಘಟಿತರಾಗಿರುವಂತಹದ್ದು, ಉದ್ಯೋಗ ಕೇಳುವಂತಹದ್ದು ಮತ್ತು ಸಮಾಜದಲ್ಲಿ ನಡೆಯುವಂತಹ ಅನ್ಯಾಯ ಅಕ್ರಮಗಳ ವಿರುದ್ಧ ಪ್ರತಿಭಟಿಸುವಂತಹದ್ದು ಪ್ರತಿಯೊಬ್ಬ ಪ್ರಜೆಯ ಹಕ್ಕಾಗಿದ್ದರೂ ಕೂಡ ಕೊಪ್ಪಳ ತಾಲೂಕಿನ ಬೂದುಗುಂಪ, ಇಂದರಗಿ, ಇರಕಲ್‌ಗಡಾ, ಹಾಸಗಲ್ ಮತ್ತು ಹಿರೇಬಗನಾಳ್ ಪಂಚಾಯ್ತಿ ಕೂಲಿಕಾರ್ಮಿಕರ ಪಾಲಿಗೆ ಅಪವಾದವೆಂಬತಾಗಿದೆ. ಏಕೆಂದರೆ ಈ ಭಾಗದ ಕೂಲಿಕಾರರು ಯಶಸ್ವಿಯಾದಾಗ ಇದನ್ನು ಸಹಿಸದ ಚುನಾಯಿತ ಪ್ರತಿನಿಧಿಗಳು ಮತ್ತು ಅಧಿಕಾರಿಗಳು ಕೂಲಿಕಾರರ ಸಂಘಟನೆಯನ್ನು ಹೊಡೆಯಲು ಯತ್ನಿಸಿ ವಿಫಲರಾಗಿದ್ದನ್ನು ಕಾಣಬಹುದಾಗಿದೆ. ಸದಾ ಸಂಘಟನೆಯವರ ಮೇಲೆ ಕತ್ತಿ ಮಸೆಯುವಂತ ಚುನಾಯಿತ ಪ್ರತಿನಿಧಿಗಳು ಮಾರ್ಚ್ ೨೫, ೨೦೧೧ರಲ್ಲಿ ಉದ್ಯೋಗ ಖಾತ್ರಿ ಯೋಜನೆಯಲ್ಲಿ ದುಡಿದ ಕೂಲಿ ಪಾವತಿಗಾಗಿ ನಡೆದಂತಹ ಧರಣಿಯನ್ನು ಮುಖ್ಯ ಭೂಮಿಕೆಯನ್ನಾಗಿ ಮಾಡಿಕೊಂಡು ಧರಣಿ ನಿರತ ಕೂಲಿಕಾರ್ಮಿಕರಾದ ಮಹಿಳೆಯರು, ಮಕ್ಕಳು, ವೃದ್ಧರು ರೈತ ಕೂಲಿಕಾರರು ಎನ್ನದೇ ಮನಬಂದಂತೆ ಹೊಡೆಯಲು ರಕ್ಷಣಾ ಇಲಾಖೆಯವರನ್ನು ಪ್ರೇರೇಪಿಸುತ್ತಾರೆ ಮತ್ತು ಕೂಲಿಕಾರ್ಮಿಕರ ಮೇಲೆ ಪೊಲೀಸರು ಕೇಸನ್ನು ದಾಖಲಿಸುತ್ತಾರೆ. ಇಲ್ಲಿ ಸ್ತ್ರೀ ಪುರುಷರೆಲ್ಲರೂ ಹಲವಾರು ಬಗೆಯ ನೋವುಗಳನ್ನು ಅನುಭವಿಸಿದ್ದಾರೆ. ಹಾಗೆಯೇ ಇವರೆಲ್ಲರ ಬಾಯಲ್ಲೂ ಸಾಮಾನ್ಯವಾಗಿ ಬಂದ ಮಾತುಗಳೆಂದರೆ ರೈತ ಸಂಘಟನೆಯನ್ನು ಸೇರಿದ್ದು ತಪ್ಪು ಎಂಬ ಭಾವನೆ ಅವರನ್ನು ಕಾಡತೊಡಗಿದೆ. ಹಾಗೆಯೇ ಈ ಉದ್ಯೋಗ ಖಾತರಿ ಯೋಜನೆಯೂ ಬೇಡ, ಅದರಲ್ಲಿ ಕೆಲಸ ಮಾಡುವುದೂ ಬೇಡ. ಕೇಸ್‌ನಿಂದ ಆದಷ್ಟು ಬೇಗ ಹೊರ ಬಂದರೆ ಸಾಕು ಎಂಬ ಹತಾಶೆಯ ಮಾತುಗಳು ಮತ್ತು ಕೂಲಿ ಕೆಲಸಕ್ಕಾಗಿ ಬೇರೆ ಊರುಗಳಿಗೆ ವಲಸೆ ಹೋಗಲೂ ಅವರು ಸಿದ್ಧರಿರುವುದು ನಾಗರೀಕ ಸಮಾಜ ತಲೆ ತಗ್ಗಿಸುವಂತದ್ದೆಂದು ಹೇಳಬಹುದು.

### ೬.೭. ಪ್ರಕರಣದ ವರ್ತಮಾನದ ಪರಿಣಾಮ

ಕೊಪ್ಪಳದಲ್ಲಿ ಕೂಲಿಕಾರರ ಮೇಲೆ ಲಾಠಿಚಾರ್ಜ್ ಪ್ರಕರಣ ಸಂಭವಿಸಿ ಹಲವು ವರ್ಷಗಳು ಗತಿಸುತ್ತಾ ಬಂದರೂ ಕೂಲಿ ಕಾರ್ಮಿಕರು ಇವತ್ತಿಗೂ ಭಯದ ವಾತಾವರಣದಲ್ಲಿ ಬದುಕುವಂತಹ ಸ್ಥಿತಿ ನಿರ್ಮಾಣವಾಗಿದೆ. ಏಕೆಂದರೆ ಯಾವುದೇ ತಪ್ಪು ಮಾಡದ ಅಮಾಯಕ ಕೂಲಿಕಾರ್ಮಿರು ದುಡಿದ ಕೂಲಿ ಕೇಳಿದ ಸಲುವಾಗಿ ಇವತ್ತಿಗೂ ಕೋರ್ಟಿಗೆ ಅಡ್ಡಾಡುವಂತಾಗಿದೆ. ಈ ಲಾಠಿಚಾರ್ಜ್ ಪ್ರಕರಣದಿಂದಾಗಿ ಎಷ್ಟೋ ಕೂಲಿ ಕಾರ್ಮಿಕ ಕುಟುಂಬಗಳು ಬೀದಿಪಾಲಾಗಿವೆ. ಏಕೆಂದರೆ ಈ ಪ್ರಕರಣದಲ್ಲಿ ಕೇಸ್ ದಾಖಲಾಗಿರುವಂತ ಪ್ರತಿಯೊಂದು ಕುಟುಂಬವು ಒಂದೊತ್ತಿನ ಊಟಕ್ಕಾಗಿ ಪ್ರತಿದಿನವು ದುಡಿದು ಬದುಕುವ ಕುಟುಂಬಗಳಾಗಿವೆ. ಒಂದು ದಿನ ದುಡಿಯಲಿಲ್ಲವೆಂದರೆ ಆ ದಿನದ ಊಟಕ್ಕಾಗಿ ಪರಿತಪಿಸುವಂತಹ ಎಷ್ಟೋ ಕುಟುಂಬಗಳಿವೆ. ಒಂದು ಸಲ ಕೋರ್ಟಿಗೆ ಹೋಗಬೇಕಾದರೆ ೨೫೦ ರಿಂದ ೩೦೦ ರೂಪಾಯಿಗಳು ಖರ್ಚಾಗುತ್ತವೆ. ಪರಿಸ್ಥಿತಿ ಹೀಗಿರಬೇಕಾದರೆ ಸತತವಾಗಿ ನಾಲ್ಕು ವರ್ಷಗಳಿಂದ ಪ್ರತಿ ತಿಂಗಳು

ತಪ್ಪದೆ ಕೋರ್ಟಿಗೆ ಹಾಜರಾಗಬೇಕೆಂದರೆ ಸಾಮಾನ್ಯ ಮಾತಲ್ಲ. ಹೀಗಾಗಿ ಪ್ರತಿಸಲವು ಸಾಲ–ಸೋಲ ಮಾಡಿ ಕೋರ್ಟಿಗೆ ಅಲೆಯುತ್ತಿರುವುದು ಒಂದು ಸಮಸ್ಯೆಯಾದರೆ, ಮತ್ತೊಂದು ಸಮಸ್ಯೆಯೆಂದರೆ ಈ ಭಾಗದಲ್ಲಿ ಬೇಸಿಗೆ ಸಮಯದಲ್ಲಿ ಕೂಲಿ ಕಾರ್ಮಿಕರಿಗೆ ದುಡಿಯಲು ಕೆಲಸವೇ ಇರುವುದಿಲ್ಲ.

ಪರಿಸ್ಥಿತಿ ಇಷ್ಟೊಂದು ಜಟಿಲವಾಗಿದ್ದರೂ ಮಾಡದ ತಪ್ಪಿಗೆ ಲಾಠಿಚಾರ್ಜ್ ಪ್ರಕರಣದಲ್ಲಿ ಕೋರ್ಟಿಗೆ ಅಲೆಯುತ್ತಿರುವಂತ ಕೂಲಿ ಕಾರ್ಮಿಕರ ಪಾಲಿಗೆ ದೂರದ ಪ್ರದೇಶಗಳಿಗೆ ಗುಳೆ ಹೋಗಿ ದುಡಿದು ಬದುಕುವಂತ ಹಕ್ಕು ಇಲ್ಲದಂತಾಗಿದೆ. ಏಕೆಂದರೆ ಒಂದು ಸಲ ಕೋರ್ಟಿಗೆ ಹಾಜರಿ ಆಗೋದು ತಪ್ಪಿದ್ದೆಯಾದರೆ ಪೊಲೀಸ್ ಇಲಾಖೆಯವರು ವಾರೆಂಟ್ ಆರ್ಡರ್ ನೀಡಿ ಕೂಲಿಕಾರರನ್ನು ಬಂಧಿಸುವಂತ ಘಟನೆಗಳು ಸಂಭವಿಸುತ್ತಲೇ ಇವೆ. ಹಾಗಾಗಿ ಈ ಕಡೆ ಕೋರ್ಟಿಗೆ ಹೋಗೋದು ತಪ್ಪಿಸುವ ಆಗಿಲ್ಲ. ಮತ್ತೊಂದು ಕಡೆ ಹರಿದು ತಿನ್ನುವ ಬಡತನವಿದ್ದರೂ ದೂರದ ಪ್ರದೇಶಗಳಿಗೆ ಹೋಗಿ ದುಡಿದು ಬದುಕುವ ಹಕ್ಕು ಇಲ್ಲದಂತಾಗಿದೆ. ಏಕೆಂದರೆ ಕೋರ್ಟಿಗೆ ಗೈರು ಹಾಜರಿಯಾದರೆ ಬಂಧಿಸುತ್ತಾರೆ ಎನ್ನುವಂತ ಭಯ ಮತ್ತೊಂದು ಕಡೆಯಾಗಿದೆ. ಇದೆಲ್ಲವನ್ನು ಮೀರಿ ಬೇಸಿಗೆ ಟೈಮ್‌ನಲ್ಲಿ ದುಡಿಯಲು ಪಂಚಾಯ್ತಿ ಕಡೆಯಿಂದ ಕೂಲಿ ಕೆಲಸವನ್ನು ಕೇಳೋಣವೆಂದರೆ ಮತ್ತೆಲ್ಲಿ ಇನ್ನೊಂದು ಪ್ರಕರಣವನ್ನು ಕೂಲಿಕಾರರ ಮೇಲೆ ದಾಖಲಿಸುತ್ತಾರೋ ಎನ್ನುವಂತಹ ಆತಂಕ ಈ ಭಾಗದ ಪ್ರತಿಯೊಬ್ಬ ಕೂಲಿಕಾರರಲ್ಲಿ ಮನೆಮಾಡಿಬಟ್ಟಿದೆ. ಒಟ್ಟಾರೆಯಾಗಿ ರಾಜ್ಯದಲ್ಲಿ ಇರುವಂತಹ ಸರಕಾರ ಯಾವುದೇ ಕ್ರಮ ತೆಗೆದುಕೊಳ್ಳಲು ಮುಂದೆ ಬರುತ್ತಿಲ್ಲ. ಕೂಲಿಕಾರರು ನ್ಯಾಯಾಲಯಕ್ಕೆ ಓಡಾಡುವುದೂ ತಪ್ಪುತ್ತಿಲ್ಲ.

ರೈತ ಸಂಘಟನೆ ಯಾವಾಗಲೂ ಆಡಳಿತ ನಡೆಸುವ ಸರಕಾರದೊಂದಿಗೆ ಮುಖಾಮುಖಿಯಾಗುತ್ತಿರುತ್ತದೆ. ಆ ನಿಟ್ಟಿನಲ್ಲಿಯೇ ತನ್ನ ರಾಜಕೀಯ ಹಿತಾಸಕ್ತಿಯನ್ನು ಈಡೇರಿಸಿಕೊಳ್ಳುತ್ತಿರುತ್ತದೆ. ಕೊಪ್ಪಳದ ಈ ಲಾಠಿಚಾರ್ಜ್ ಪ್ರಕರಣ ಜಮೀನ್ದಾರಿ ಪದ್ಧತಿಯ ಸ್ಥಿರೀಕರಣಕ್ಕೆ ಕಾರಣವಾಗಿದೆ ಎಂದರೆ ತಪ್ಪಾಗಲಾರದು. ಏಕೆಂದರೆ ಈ ಕೇಸಿನಲ್ಲಿ ಸಿಲುಕಿಕೊಂಡವರು ಬಹಳಷ್ಟು ಜನರು ಬಡ ಕೂಲಿ ಕಾರ್ಮಿಕರೆ ಆಗಿದ್ದಾರೆ. ಇವರ ಮೇಲೆ ಎಫ್.ಐ.ಆರ್. ದಾಖಲಾಗಿರುವುದರಿಂದ ಇವರಾರೂ ಬೇರೆ ಊರುಗಳಿಗೆ ಹೋಗಿ ಕೆಲಸ ಮಾಡಲಾಗುತ್ತಿಲ್ಲ ಮತ್ತು ಉದ್ಯೋಗ ಖಾತರಿ ಯೋಜನೆಯಲ್ಲಿ ಕೆಲಸವನ್ನೂ ಸಹ ಕೇಳಲು ಆಗುತ್ತಿಲ್ಲ. ಹಾಗೆಯೇ ಸುಮ್ಮನೆ ಕುಳಿತುಕೊಂಡರೆ ಜೀವನ ನಡೆಸುವುದು ಕಷ್ಟವಾಗುತ್ತದೆ. ಆ ಕಾರಣಕ್ಕಾಗಿ ಅವರು ಸ್ಥಳೀಯ ಜಮೀನುದಾರರ ಹೊಲಗಳನ್ನೇ ಆಶ್ರಯಿಸಬೇಕಾದ ಸ್ಥಿತಿಗೆ ಬಂದಿದ್ದಾರೆ. ಇದರಿಂದ ಜಮೀನುದಾರರು ನಿಗದಿಪಡಿಸಿದ ಕೂಲಿಗೆ ಕೆಲಸ ಮಾಡಬೇಕಾದ ಅನಿವಾರ್ಯತೆಯನ್ನು ಎದುರಿಸುತ್ತಿದ್ದಾರೆ. ಹಾಗೆಯೇ ಈ ಸ್ಥಿತಿ ಕೂಲಿಯಲ್ಲಿನ ತಾರತಮ್ಯಕ್ಕೂ ಎಡೆ ಮಾಡಿಕೊಟ್ಟಿದೆ. ಹೀಗಾಗಿ ಸರಕಾರದ ವರದಿಯು ಸ್ಥಳೀಯ ಜಮೀನ್ದಾರರ ಪಾಲಿಗೆ ವರದಾನವಾಗಿದೆ. ಹಾಗಾಗಿ ಮಹಿಳೆಯರು ಎರಡೂ ಕಡೆ ಹಿಂಸೆಗೆ ಒಳಗಾಗಿರುವುದನ್ನು

ಗಮನಿಸಬಹುದು. ಅಂದರೆ ವೇತನ ತಾರತಮ್ಯದ ಕಾರಣಕ್ಕಾಗಿ ಜಮೀನ್ದಾರರಿಂದ ಮತ್ತು ಕುಟುಂಬದಲ್ಲಿನ ಪಿತೃ ಪ್ರಧಾನ ಮೌಲ್ಯಗಳಿಂದ ಮಹಿಳೆಯರು ಹಿಂಸೆಯನ್ನು ಅನುಭವಿಸುತ್ತಲೇ ಇದ್ದಾರೆ. ಒಟ್ಟಾರೆಯಾಗಿ ಇಡೀ ಪ್ರಕರಣದಲ್ಲಿ ಮಹಿಳೆಯರ ಧ್ವನಿ ಮೇಲೇಳದಂತೆ ಮಾಡಲಾಗಿದೆ ಮತ್ತು ಆ ಮೂಲಕ ಹಿಂಸೆಯ ಪ್ರಮಾಣವನ್ನು ಅಧಿಕಗೊಳಿಸಿರುವುದು ಕಂಡುಬರುತ್ತದೆ.

ಸರಕಾರ ಹಲವಾರು ಗ್ರಾಮೀಣಾಭಿವೃದ್ಧಿ ಯೋಜನೆಗಳನ್ನು ರೂಪಿಸುತ್ತಲೇ ಬಂದಿದೆ. ಆದರೆ ಇವುಗಳು ಅನುಷ್ಠಾನದಲ್ಲಿ ಹಲವಾರು ತೊಂದರೆಗಳನ್ನು ಎದುರಿಸುತ್ತಿದೆ. ಉದ್ಯೋಗ ಖಾತರಿ ಯೋಜನೆಯ ಸ್ಥಿತಿಯೂ ಸಹ ಹಾಗೆಯೇ ಆಗಿದೆ. ಇಂದು ಈ ಯೋಜನೆಯನ್ನು ತಮ್ಮ ಅಭಿವೃದ್ಧಿಗೆಂದು ಬಂದಂತಹ ಯೋಜನೆ ಎಂದು ಈ ಭಾಗದ ಜನರು ಯಾರೂ ಹೇಳದೇ ಇರುವಂತಹ ಸ್ಥಿತಿ ಬಂದೊದಗಿದೆ. ಪರಿಸ್ಥಿತಿ ಹೀಗಿರುವಾಗ ಯೋಜನೆಯು ಸಾಫಲ್ಯಗೊಳ್ಳುವುದು ಹೇಗೆ? ಗ್ರಾಮೀಣ ಬಡ ಜನರ ಬದುಕು ಹಸನಾಗುವುದು ಯಾವಾಗ? ಎಂಬ ಪ್ರಶ್ನೆಗಳು ಕಾಡುತ್ತಲೇ ಇರುತ್ತವೆ.

# ಅಧ್ಯಾಯ: ಏಳು

## ಉದ್ಯೋಗ ಖಾತ್ರಿ ಯೋಜನೆ: ಲಿಂಗಸಂಬಂಧಿ ಆಯಾಮ

೭.೧. ಉದ್ಯೋಗ ಖಾತರಿ ಯೋಜನೆ : ಬಜೆಟ್, ಜಾಬ್‌ಕಾರ್ಡ್ ಇತ್ಯಾದಿ

೭.೨. ಯೋಜನೆಯ ರೂಪಿಸುವ ಹಂತ

ಅ) ಗ್ರಾಮ ಸಭೆಗಳಲ್ಲಿನ ಲಿಂಗ ಅಸಮಾನತೆಯ ನೆಲೆಗಳು

೭.೩. ಯೋಜನೆಯ ಅನುಷ್ಠಾನದ ಹಂತ

ಅ) ಉದ್ಯೋಗ ಖಾರ್ಡ್‌ಗಳನ್ನು ಮಾಡಿಸುವಲ್ಲಿನ ಲಿಂಗ ಅಸಮಾನತೆಯ ನೆಲೆಗಳು

ಆ) ಕೆಲಸದ ಸ್ವರೂಪ ಮತ್ತು ಲಿಂಗ ಸಂಬಂಧಿ ಆಯಾಮಗಳು

ಇ) ಕಾಮಗಾರಿ ಸ್ಥಳಗಳಲ್ಲಿನ ಲಿಂಗೀಯ ನೆಲೆಗಳು

೭.೪. ಯೋಜನೆಯ ಕಾಮಗಾರಿಗಳ ಮುಕ್ತಾಯದ ಹಂತ : ಲಿಂಗ ಅಸಮಾನತೆ

## ಅಧ್ಯಾಯ–ಏಳು

# ಉದ್ಯೋಗ ಖಾತ್ರಿ ಯೋಜನೆ: ಲಿಂಗ ಸಂಬಂಧಿ ಆಯಾಮ

ಗ್ರಾಮೀಣ ಭಾಗದ ಜನರ ಅಭಿವೃದ್ಧಿಗಾಗಿ ಹಲವು ಸಮಾಜಶಾಸ್ತ್ರಜ್ಞರು, ರಾಜಕೀಯ ಚಿಂತಕರು ತಮ್ಮ ಚಿಂತನೆಗಳ ಮೂಲಕ ಜನರನ್ನು ಪ್ರಭಾವಿಸಿರುವುದು ಕಂಡುಬರುತ್ತದೆ. ಇಲ್ಲಿ ಮುಖ್ಯವಾಗಿ ಇಬ್ಬರು ಮಹಾನೀಯರ ಚಿಂತನೆಗಳು ಭಾರತದ ಜನರ ಅಭಿವೃದ್ಧಿಗೆ ಅಳವಡಿಸಿಕೊಳ್ಳಬೇಕಾದುದು ಮುಖ್ಯ ಸಂಗತಿಯಾಗಿದೆ. ಅಂದರೆ ಒಂದುಕಡೆ ದೇಶೀಯ ಸಂಪನ್ಮೂಲಗಳನ್ನು ಮತ್ತು ಪರಿಕರಗಳನ್ನು ಬಳಸಿಕೊಳ್ಳುವುದು ಆ ಮೂಲಕ ದೇಶಿಯತೆಯನ್ನು ಕಾಪಾಡಿಕೊಳ್ಳುತ್ತಾ ಜನರ ಜೀವನಮಟ್ಟವನ್ನು ಸುಧಾರಿಸುವ ಬಗೆಗಿನ ಗಾಂಧೀಜಿಯವರ ಚಿಂತನೆ. ಹಳ್ಳಿಗಳ ನಾಶದಿಂದ ಮಾತ್ರ ಜಾತೀಯತೆಯನ್ನು ನಾಶಮಾಡಬಹುದು ಎಂದು ಹೇಳಿದ ಅಂಬೇಡ್ಕರರ ಚಿಂತನೆಗಳು ಈ ಸಂದರ್ಬದಲ್ಲಿ ಮುಖ್ಯವಾಗುತ್ತವೆ. ಏಕೆಂದರೆ ಈ ಎರಡೂ ಚಿಂತನೆಗಳ ಮೂಲಕ ದೇಶದಲ್ಲಿ ಜಾರಿಯಾಗುವ ಅಭಿವೃದ್ಧಿ ಯೋಜನೆಗಳು ಜನರ ಆರ್ಥಿಕ ಅಭಿವೃದ್ಧಿಯಲ್ಲಿ ಯಾವ ಬಗೆಯ ಪಾತ್ರವನ್ನು ವಹಿಸುತ್ತಿವೆ ಎಂಬುದನ್ನು ಮತ್ತು ಈ ಯೋಜನೆಗಳು ವಿಫಲವಾದರೆ ಇದಕ್ಕೆ ಕಾರಣಗಳೇನು ಎಂಬುದನ್ನು ತಿಳಿಯಬೇಕಾಗಿರುವುದು ಜರೂರಿದೆ. ಹಾಗೆಯೇ ಈ ಸಂದರ್ಬದಲ್ಲಿ ಮಹಿಳೆಯರ ಪಾತ್ರ ಏನು ಅವರು ಯಾವ ಸಂದರ್ಭದಲ್ಲಿ ಅಸಮಾನತೆಗೆ ಒಳಗಾಗುತ್ತಿದ್ದಾರೆ ಎಂಬುದನ್ನು ಮತ್ತು ಆ ಮೂಲಕ ಪಿತೃಪ್ರಧಾನ ವ್ಯವಸ್ಥೆ ತನ್ನ ಪಾರಮ್ಯವನ್ನು ಹೇಗೆ ಮೆರೆದಿದೆ ಎಂಬುದನ್ನು ತಿಳಿಯಬೇಕಾದ ಅನಿವಾರ್ಯತೆ ಇದೆ. ಈ ಹಿನ್ನಲೆಯಲ್ಲಿ ಗಾಂಧಿ ಮತ್ತು ಅಂಬೇಡ್ಕರ್‌ರವರ ಚಿಂತನೆಗಳನ್ನು ಅಳವಡಿಸಿಕೊಂಡು ಉದ್ಯೋಗ ಖಾತರಿ ಯೋಜನೆಯನ್ನು ವಿಮರ್ಶಿಸುವುದು ಮುಖ್ಯವಾಗುತ್ತದೆ. ಕ್ಷೇತ್ರಕಾರ್ಯದಲ್ಲಿ ಕಂಡುಬಂದಂತಹ ಮಾಹಿತಿಯನ್ನು

ಆಧರಿಸಿ ಈ ಅಧ್ಯಾಯವನ್ನು ರೂಪಿಸಿವುದು ಇಲ್ಲಿ ಮುಖ್ಯಾವಾದ ಸಂಗತಿಯಾಗಿದೆ. ಮುಖ್ಯವಾಗಿ ಭಾರತಕ್ಕೆ ಸ್ವಾತಂತ್ರ್ಯ ಬಂದಾಗಿನಿಂದ ಗ್ರಾಮೀಣ ಭಾಗದ ಜನರ ಜೀವನ ಮಟ್ಟವನ್ನು ಸುಧಾರಿಸುವ ಸಲುವಾಗಿ ಹಲವಾರು ಅಭಿವೃದ್ಧಿ ಯೋಜನೆಗಳನ್ನು ರೂಪಿಸುತ್ತಲೆ ಬರಲಾಗಿದೆ. ಮುಖ್ಯವಾಗಿ ಪಂಚವಾರ್ಷಿಕ ಯೋಜನೆಗಳು ದೇಶದ ಅಭಿವೃದ್ಧಿಯ ದೃಷ್ಟಿಯಿಂದ ಪ್ರಮುಖವಾದ ಪಾತ್ರವನ್ನು ವಹಿಸಿವೆ. ಭಾರತವು ಹಳ್ಳಿಗಳ ದೇಶವಾಗಿರುವುದರಿಂದ ಇಲ್ಲಿನ ಜನರು ಕೆಲಸವಿಲ್ಲದೇ ನಿರುದ್ಯೋಗಿಗಳಾಗಿದ್ದಾರೆ. ತಮ್ಮ ಉಪ ಜೀವನವನ್ನು ಮುಂದುವರೆಸಲೂ ತುಂಬಾ ಕಷ್ಟಗಳನ್ನು ಅನುಭವಿಸುತ್ತಿದ್ದಾರೆ. ಇಂತಹ ಸಂಧರ್ಭದಲ್ಲಿ ಈ ಜನರು ಕೆಲಸವನ್ನರಸಿ ಬೇರೆ ಬೇರೆ ಪ್ರದೇಶಗಳಿಗೆ ವಲಸೆ ಹೋಗುತ್ತಿರುವುದು ಸಹಜವಾಗಿದೆ. ವಲಸೆ ಹೋದಂತಹ ಸ್ಥಳಗಳಲ್ಲಿಯೂ ಇವರು ಸುರಕ್ಷಿತರಲ್ಲ. ಅಲ್ಲಿಯೂ ಕೂಡ ಹಲವಾರು ಕಷ್ಟಗಳನ್ನು ಅನುಭವಿಸುತ್ತಿರುತ್ತಾರೆ. ಆದರೂ ತಮಗೆ ಒದಗಬಹುದಾದ ಎಲ್ಲಾ ಕಷ್ಟಗಳನ್ನು ಎದುರಿಸುತ್ತಲೇ ಜೀವನವನ್ನು ಸಾಗಿಸುತ್ತಿದ್ದಾರೆ. ಹೈದರಾಬಾದ್ ಕರ್ನಾಟಕದಲ್ಲಿ ಈ ವಲಸೆಯ ಪ್ರಮಾಣ ಅಧಿಕವಾಗಿದೆ. ವಲಸೆಯನ್ನು ತಪ್ಪಿಸುವ ಸಲುವಾಗಿ ಮತ್ತು ಗ್ರಾಮೀಣ ಜನರ ಆರ್ಥಿಕ ಸ್ಥಿತಿಗತಿಗಳು ಸುಧಾರಿಸುವ ನಿಟ್ಟಿನಲ್ಲಿ ಹಲವಾರು ಯೋಜನೆಗಳು ಕಾಲಕಾಲಕ್ಕೆ ಜಾರಿಯಾಗುತ್ತಲೇ ಇವೆ. ಆದರೆ ಈ ಯೋಜನೆಗಳಾವುವೂ ಸಂಪೂರ್ಣವಾಗಿ ಯಶಸ್ವಿಯನ್ನು ಪಡೆಯದೆ ಅರ್ಧದಲ್ಲಿಯೇ ನಿಂತು ವಿಫಲತೆಯನ್ನು ಅನುಭವಿಸುತ್ತಿವೆ. ಆ ಕಾರಣಕ್ಕಾಗಿ ಗ್ರಾಮೀಣ ಜನರ ಅಭಿವೃದ್ಧಿಯ ಕುರಿತಂತೆ ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಹಲವು ಚರ್ಚೆಗಳೂ ನಡೆಯುತ್ತಿವೆ. ಗ್ರಾಮೀಣ ಅಭಿವೃದ್ಧಿ ಎಂದರೆ ಕೇವಲ ಭೌಗೋಳಿಕ ವಿಸ್ತೀರ್ಣವನ್ನು ಹೆಚ್ಚಿಸುವುದಲ್ಲ. ಗ್ರಾಮೀಣ ಪ್ರದೇಶದಲ್ಲಿ ವಾಸಿಸುವ ಜನರ ಸಾಮಾಜಿಕ, ರಾಜಕೀಯ, ಆರ್ಥಿಕ ಮತ್ತು ಸಾಂಸ್ಕೃತಿಕ ಜೀವನವನ್ನು ವೃಧ್ಧಿಸುವುದಾಗಿದೆ ಮತ್ತು ಲಿಂಗ ಸಮಾನತೆಯ ನೆಲೆಗಳನ್ನು ಸ್ಥಾಪಿಸುವುದಾಗಿದೆ. ಈ ನಿಟ್ಟಿನಲ್ಲಿ ಗ್ರಾಮೀಣ ಅಭಿವೃದ್ಧಿಯನ್ನು ಕುರಿತಂತೆ ಹಲವಾರು ವ್ಯಾಖ್ಯಾನಗಳು ಇರುವುದನ್ನು ಕಾಣಬಹುದಾಗಿದೆ.

**ಜಾಗತಿಕ ಬ್ಯಾಂಕ್ (World Bank):** ಗ್ರಾಮೀಣ ಅಭಿವೃದ್ಧಿ ಎಂದರೆ "ಗ್ರಾಮೀಣಾ ಬಡಜನರ ಅಥವಾ ಗ್ರಾಮೀಣ ವಿಶೇಷ ಜನರ ಸಮೂಹ ಜೀವನದ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೊಳಿಸುವ ಸಲುವಾಗಿ ವಿನ್ಯಾಸಗೊಂಡ ವಿಧಾನ. ಇದು ಯಾರು ಬಡವರಾಗಿದ್ದು, ಗ್ರಾಮೀಣ ಪ್ರದೇಶದಲ್ಲಿ ಬದುಕಲಿಕ್ಕೆ ಇಚ್ಛಿಸುತ್ತಾರೋ ಅಂಥವರ ಅಭಿವೃದ್ಧಿಗಾಗಿ ಸೌಕರ್ಯಗಳನ್ನು ವಿಸ್ತರಿಸುತ್ತದೆ"ಎಂದು ವ್ಯಾಖ್ಯಾನಿಸಿದೆ. ಈ ವ್ಯಾಖ್ಯೆಯಲ್ಲಿ ಬರುವ ವಿಶೇಷ ಜನರ ಸಮೂಹ ಮತ್ತು ಬಡವರು ಎನ್ನುವ ಪದ ಚಿಕ್ಕ ಮತ್ತು ಅತಿ ಚಿಕ್ಕ ರೈತರು, ಕೃಷಿ ಹಿಡುವಳಿದಾರರು, ಕೃಷಿ ಕಾರ್ಮಿಕರು, ಕುಶಲಕರ್ಮಿಗಳನ್ನು ಒಳಗೊಂಡಿರುತ್ತದೆ. ಇಂಥವರ ಆರ್ಥಿಕ ಅಭಿವೃದ್ಧಿಗಾಗಿ ಹಮ್ಮಿಕೊಂಡ ಯೋಜನಾ ಪದ್ಧತಿಯೇ ಗ್ರಾಮೀಣ ಅಭಿವೃದ್ಧಿ ಎಂದು ಹೇಳುತ್ತದೆ.

**ಗ್ರಾಮೀಣ ಅಭಿವೃದ್ಧಿ ಇಲಾಖೆ (Department of Rural Development) :** "ಗ್ರಾಮೀಣ ಅಭಿವೃದ್ಧಿಯು ಒಂದು ವಿಧಾನವಾಗಿದ್ದು, ಗ್ರಾಮೀಣ ಬಡ ಜನರ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗಾಗಿ ಹೋರಾಡುವ ಉದ್ದೇಶ ಹೊಂದಿದೆ"[17] ಎಂದು ಅಭಿಪ್ರಾಯ ಪಡುತ್ತದೆ.

ಈ ವ್ಯಾಖ್ಯಾನಗಳನ್ನು ಗಮನಿಸಿದರೆ ಗ್ರಾಮೀಣ ಬಡಜನರ ಅಭಿವೃದ್ಧಿಯೇ ಮುಖ್ಯವಾಗಿ ಗೋಚರಿಸುತ್ತದೆ. ಹಾಗಾಗಿ ಕಾಲಕಾಲಕ್ಕೆ ಬಂದಂತಹ ಸರಕಾರಗಳು ಗ್ರಾಮೀಣ ಬಡಜನರ ಅಭಿವೃದ್ಧಿಗಾಗಿ ಹಲವಾರು ಯೋಜನೆಗಳನ್ನು ರೂಪಿಸಿವೆ ಹಾಗೂ ರೂಪಿಸುತ್ತಲೇ ಇವೆ. ಆದರೆ ಈ ಎಲ್ಲಾ ಯೋಜನೆಗಳು ಗ್ರಾಮೀಣ ಬಡ ಜನರ ಜೀವನ ಮಟ್ಟವನ್ನು ಸುಧಾರಿಸಿವೆಯೇ? ಎಂದು ಪ್ರಶ್ನಿಸಿಕೊಂಡರೆ ಅದಕ್ಕೆ ಸಮರ್ಥವಾದ ಉತ್ತರ ದೊರೆಯುವುದು ಕಷ್ಟಸಾಧ್ಯ ಏಕೆಂದರೆ ಈ ಯೋಜನೆಗಳನ್ನು ರೂಪಿಸುವ ಹಂತದಲ್ಲಾಗಲೀ ಅಥವಾ ಅನುಷ್ಠಾನದ ಹಂತದಲ್ಲಾಗಲೀ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಲೇ ಇವೆ. ಯೋಜನೆಗಳು ಸಂಪೂರ್ಣವಾಗಿ ಸಫಲತೆಯನ್ನು ಕಂಡುಕೊಂಡಿಲ್ಲ. ಆದರೆ ಉದ್ಯೋಗ ಖಾತರಿ ಯೋಜನೆಯ ವಿಷಯ ಈ ಹಿಂದೆ ಇದ್ದಂತಹ ಯೋಜನೆಗಳಿಗಿಂತ ತುಂಬಾ ಭಿನ್ನ. ಏಕೆಂದರೆ ಉದ್ಯೋಗ ಖಾತರಿಯನ್ನು ಒಂದು ಯೋಜನೆಯಾಗಿ ರೂಪಿಸದೇ ಅದನ್ನು ಒಂದು ಕಾಯಿದೆಯಾಗಿ ರೂಪಿಸಲಾಗಿದೆ. ಆ ನಿಟ್ಟಿನಲ್ಲಿ ಗ್ರಾಮೀಣ ಬಡಜನರ ಅಭಿವೃದ್ಧಿಗಾಗಿ ಶ್ರಮಿಸುತ್ತಿದೆ. ಈ ಕಾಯಿದೆಯ ಅಡಿಯಲ್ಲಿ ದೇಶದ ಪ್ರತಿಯೊಂದು ರಾಜ್ಯವೂ ತನ್ನದೇ ಆದ ಉದ್ಯೋಗ ಖಾತರಿ ಯೋಜನೆಯನ್ನು ರೂಪಿಸುವ ಅಧಿಕಾರವನ್ನು ಹೊಂದಿರುತ್ತದೆ. ಕರ್ನಾಟಕವೂ ಸಹ ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ಉದ್ಯೋಗ ಖಾತರಿ ಯೋಜನೆಯನ್ನು ರೂಪಿಸಿ ಜಾರಿಗೊಳಿಸಿದೆ. ಈ ಯೋಜನೆ ಜಾರಿಗೊಂಡು ಹಲವು ವರ್ಷಗಳೇ ಕಳೆದರೂ ಇಲ್ಲಿನ ಗ್ರಾಮೀಣ ಬಡಜನರ ಸ್ಥಿತಿಗತಿಗಳಲ್ಲೇನೂ ಬದಲಾವಣೆಗಳು ನಡೆದಿಲ್ಲ ಎಂಬುದನ್ನು ಅಧ್ಯಯನ ವ್ಯಾಪ್ತಿಯಲ್ಲಿನ ಕ್ಷೇತ್ರಕಾರ್ಯ ಅಧ್ಯಯನದಿಂದ ಕಂಡುಕೊಳ್ಳಲಾಗಿದೆ. ಉದ್ಯೋಗ ಖಾತರಿ ಯೋಜನೆಗಾಗಿ ಕೇಂದ್ರ ಮತ್ತು ರಾಜ್ಯ ಸರಕಾರಗಳು ಪ್ರತೀ ವರ್ಷವೂ ಕೂಡ ಹಣವನ್ನು ಮೀಸಲಿಟ್ಟಿರುತ್ತದೆ. ಅಧ್ಯಯನ ಕ್ಷೇತ್ರದ ಮೂರು ಜಿಲ್ಲೆಗಳಲ್ಲಿ ೨೦೦೯-೧೦ನೇ ಸಾಲಿನಿಂದ ೨೦೧೪-೧೫ನೇ ಸಾಲಿನವರೆಗೆ ಉದ್ಯೋಗ ಖಾತರಿ ಯೋಜನೆಗಾಗಿ ಕೇಂದ್ರ ಮತ್ತು ರಾಜ್ಯ ಸರಕಾರಗಳು ರಾಜ್ಯಕ್ಕೆ ಮೀಸಲಿಟ್ಟ ಅನುದಾನದ ಕುರಿತಂತೆ ಮಾಹಿತಿಯನ್ನು ನೀಡುವುದು ಮತ್ತು ಹೈದರಾಬಾದ್ ಕರ್ನಾಟಕ ಪ್ರದೇಶದ ಜಿಲ್ಲೆಗಳಾದ ರಾಯಚೂರು, ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಗಳಿಗೆ ರಾಜ್ಯ ಸರಕಾರವು ಎಷ್ಟು ಪ್ರಮಾಣದ ಹಣವನ್ನು ಮೀಸಲಿಟ್ಟಿದೆ ಹಾಗೂ ಈ ಹಣವನ್ನು ಗ್ರಾಮ ಪಂಚಾಯತಿಗಳು ಯಾವ ಉದ್ದೇಶಕ್ಕಾಗಿ ಬಳಕೆಮಾಡಿಕೊಂಡಿವೆ ಎಂಬುದನ್ನು ವಿವರಿಸುವುದು ಮುಖ್ಯವಾಗಿರುತ್ತದೆ. ಹಾಗೆಯೇ ಅಧ್ಯಯನ ಕ್ಷೇತ್ರದ ವ್ಯಾಪ್ತಿ

ಪ್ರದೇಶವಾದ ಮೂರು ಜಿಲ್ಲೆಗಳಲ್ಲಿನ ಎಲ್ಲಾ ತಾಲೂಕುಗಳಲ್ಲಿ ಹಾಗೂ ಪ್ರತೀ ತಾಲೂಕಿನಲ್ಲಿನ ಐದು ಗ್ರಾಮ ಪಂಚಾಯತಿಗಳನ್ನು ಆಯ್ಕೆ ಮಾಡಿಕೊಂಡು ಆ ಗ್ರಾಮ ಪಂಚಾಯತಿಗಳಲ್ಲಿ ಉದ್ಯೋಗ ಖಾತರಿ ಯೋಜನೆಯ ಸಂಪೂರ್ಣ ಚಿತ್ರಣವನ್ನು ಕಟ್ಟಿಕೊಡುವುದು ಇಲ್ಲಿನ ಮುಖ್ಯ ಉದ್ದೇಶವಾಗಿದೆ.

## ೭.೧. ಉದ್ಯೋಗ ಖಾತರಿ ಯೋಜನೆ : ಬಜೆಟ್, ಜಾಬ್‌ಕಾರ್ಡ್ ಇತ್ಯಾದಿ

ಕರ್ನಾಟಕದಲ್ಲಿ ಒಟ್ಟು ೩೦ ಜಿಲ್ಲೆಗಳಿದ್ದು, ೧೭೬ ತಾಲೂಕುಗಳಿವೆ ಹಾಗೂ ೫೬೩೧ ಗ್ರಾಮ ಪಂಚಾಯತಿಗಳು ಮತ್ತು ೩೦೮೯೦ ಗ್ರಾಮಗಳಿವೆ. ಈ ಎಲ್ಲಾ ಜಿಲ್ಲೆಗಳಿಗೆ ಉದ್ಯೋಗ ಖಾತರಿ ಯೋಜನೆಗಾಗಿ ಪ್ರತೀ ವರ್ಷವೂ ಕೂಡ ರಾಜ್ಯ ಸರಕಾರವು ಇಂತಿಷ್ಟು ಹಣವನ್ನು ಮೀಸಲಿಟ್ಟಿರುತ್ತದೆ. ಹಾಗೆಯೇ ಕೇಂದ್ರ ಸರಕಾರಗಳೂ ಸಹ ಪ್ರತೀ ವರ್ಷದ ಬಜೆಟ್‌ನಲ್ಲಿ ಪ್ರತೀ ರಾಜ್ಯಕ್ಕೂ ಹಣವನ್ನು ಮೀಸಲಿಡುತ್ತದೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯವು ಉದ್ಯೋಗ ಖಾತರಿ ಯೋಜನೆ ಜಾರಿಯಾದಾಗಿನಿಂದ ಹಿಡಿದು ಇಲ್ಲಿಯವರೆಗೆ ಬಹಳಷ್ಟು ಹಣವನ್ನು ಉದ್ಯೋಗ ಖಾತರಿ ಯೋಜನೆಗಾಗಿ ವ್ಯಯಿಸಿದೆ. ಹಾಗಾಗಿ ಈ ಉಪಶೀರ್ಷಿಕೆಯಡಿಯಲ್ಲಿ ಕಂಡುಬರುವ ಎಲ್ಲಾ ಅಂಶಗಳು ಅಂಕಿಸಂಖ್ಯೆಗಳನ್ನೇ ಅವಲಂಬಿಸಿರುವುದರಿಂದ ಇಲ್ಲಿ ಮುಖ್ಯವಾಗಿ ಪರಿಮಾಣಾತ್ಮಕ ಸಂಶೋಧನಾ ವಿಧಾನದ ಮೂಲಕ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಅಂದರೆ ಉದ್ಯೋಗ ಖಾತರಿ ಯೋಜನೆಗಾಗಿ ಮೀಸಲಿಟ್ಟ ಹಣದ ಪ್ರಮಾಣ, ಈ ಹಣವನ್ನು ವ್ಯಯಿಸಿದ ಬಗೆ ಹಾಗೂ ಈ ಯೋಜನೆಯಲ್ಲಿ ಜನರ ಪಾಲ್ಗೊಳ್ಳುವಿಕೆ ಅಂದರೆ ಜಾಬ್‌ಕಾರ್ಡ್‌ಗಳ ಸಂಖ್ಯೆ ಮತ್ತು ಯಾವ ಜಾತಿ ಸಮುದಾಯಗಳು ಈ ಯೋಜನೆಯ ಫಲಾನುಭವಿಗಳಾಗಿದ್ದಾರೆ ಹೀಗೆ ಇತ್ಯಾದಿ ಅಂಶಗಳನ್ನು ಸರಕಾರಿ ದಾಖಲೆಗಳಲ್ಲಿ ನೀಡಿರುವಂತಹ ಅಂಕಿಅಂಶಗಳನ್ನು ಆಧರಿಸಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಹಾಗಾಗಿ ಇಲ್ಲಿ ಪರಿಮಾಣಾತ್ಮಕ ಸಂಶೋಧನಾ ವಿಧಾನವನ್ನು ಮುಖ್ಯವಾಗಿಸಿಕೊಳ್ಳಲಾಗಿದೆ. ಈ ಕಾರಣಕ್ಕಾಗಿ ಅಧ್ಯಯನದ ಅನುಕೂಲಕ್ಕಾಗಿ ೨೦೦೯-೧೦ನೇ ಸಾಲಿನಿಂದ ೨೦೧೩-೧೪ನೇ ಸಾಲಿನ ವರೆಗೆ ಕರ್ನಾಟಕವು ಈ ಯೋಜನೆಗಾಗಿ ವ್ಯಯಿಸಿದ ಹಣದ ಕುರಿತಂತೆ ಈ ಕೆಳಗಿನಂತೆ ವಿವರಿಸಲಾಗಿದೆ.

| ಕ್ರಸಂ. | ವರ್ಷ | ಆರಂಬಿಕ ಮೊತ್ತ | ಕೇಂದ್ರದ ಅನುದಾನ | ರಾಜ್ಯದ ಅನುದಾನ | ಇತರೆ | ಒಟ್ಟು ಮೊತ್ತ | ಖರ್ಚಾದ ಒಟ್ಟುಮೊತ್ತ |
|---|---|---|---|---|---|---|---|
| ೦೧. | ೨೦೦೯-೧೦ | ೩೫೩.೪೨ | ೨೪೦೭.೦೮ | ೨೫೩.೭೧ | ೨೪.೬೮ | ೩೦೩೮.೮೯ | ೨೨೧೬.೯೩ |
| ೦೨ | ೨೦೧೦-೧೧ | ೮೨೧.೮೭ | ೧೯೪೧.೫೫ | ೧೪೩.೫೩ | ೪೯.೪೬ | ೨೯೫೬.೪೧ | ೧೮೬೦.೪೭ |
| ೦೩ | ೨೦೧೧-೧೨ | ೧೦೯೫.೯೩ | ೬೬೨.೮೭ | ೧೫೯.೦೬ | ೩೭.೮೧ | ೧೯೫೫.೬೮ | ೧೬೪೦.೯೯ |
| ೦೪ | ೨೦೧೨-೧೩ | ೩೧೪.೬೮ | ೧೨೩೧.೯೪ | ೨೦೫.೯೯ | ೩೬.೧೫ | ೧೭೮೮.೭೬ | ೧೪೫೭.೦೩ |
| ೦೫ | ೨೦೧೩-೧೪ | ೩೨೦.೪೩ | ೧೫೯೬.೦೭ | ೨೬೫.೦೩ | ೧೧.೩೬ | ೨೧೯೨.೮೯ | ೨೦೯೫.೨೨ |

ಉದ್ಯೋಗ ಖಾತರಿ ಯೋಜನೆಗೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯದ ಹಣಕಾಸಿನ ಮಾಹಿತಿ (ಕೋಟಿಗಳಲ್ಲಿ) ಮೂಲ : Commissionerate of Rural Development Rural Development &Panchayath Raj Department Government of Karnataka, June 2014

ಕರ್ನಾಟಕ ರಾಜ್ಯಕ್ಕೆ ೨೦೦೯-೧೦ರಲ್ಲಿ ಕೇಂದ್ರ ಸರಕಾರವು ೨೪೦೭.೦೮ ಕೋಟಿಗಳಷ್ಟು ಅನುದಾನವನ್ನು ನೀಡಿದೆ. ಹಾಗೆಯೇ ರಾಜ್ಯ ಸರಕಾರವೂ ಕೂಡ ೨೫೩.೭೧ ಕೋಟಿ ಹಣವನ್ನು ಉದ್ಯೋಗ ಖಾತರಿಗೆ ಮೀಸಲಿಟ್ಟಿದೆ. ಒಟ್ಟಾರೆ ಈ ವರ್ಷದಲ್ಲಿ ೩೦೩೮.೮೯ ಕೋಟಿಗಳಷ್ಟು ಹಣವನ್ನು ಹೊಂದಿದ್ದು ಈ ಮೊತ್ತದ ಹಣದಲ್ಲಿ ೨೨೧೬.೯೩ ಕೋಟಿ ಹಣವನ್ನು ವೆಚ್ಚ ಮಾಡಿದೆ. ಅಂದರೆ ಒಟ್ಟು ಮೊತ್ತದ ಶೇ. ೭೨.೯೫ ರಷ್ಟು ಹಣವನ್ನು ವೆಚ್ಚ ಮಾಡಿದೆ. ಹಾಗೆಯೇ ೨೦೧೦-೧೧ರಲ್ಲಿ ಕೇಂದ್ರ ಸರಕಾರವು ೧೯೪೧.೫೫ ಕೋಟಿಗಳಷ್ಟು ಹಣವನ್ನು ಮತ್ತು ರಾಜ್ಯ ಸರಕಾರವು ೧೪೩.೫೩ ಕೋಟಿ ಹಣವನ್ನು ಒಟ್ಟಾರೆಯಾಗಿ ೨೯೫೬.೪೧ ಕೋಟಿ ಹಣವನ್ನು ಯೋಜನೆಗಾಗಿ ಮೀಸಲಿಟ್ಟಿದೆ. ಹಣದ ಒಟ್ಟು ಮೊತ್ತದಲ್ಲಿ ೧೮೬೦.೪೭ ಕೋಟಿ ಹಣವನ್ನು ವೆಚ್ಚ ಮಾಡಲಾಗಿದೆ. ಅಂದರೆ ಒಟ್ಟು ಮೊತ್ತದ ಶೇ.೬೨.೯೩ರಷ್ಟು ಹಣವನ್ನು ವೆಚ್ಚ ಮಾಡಲಾಗಿದೆ, ೨೦೧೧-೧೨ನೇ ಸಾಲಿನಲ್ಲಿ ಕೇಂದ್ರ ಸರಕಾರವು ೬೬೨.೮೭ ಕೋಟಿ ಹಣವನ್ನು ಮತ್ತು ರಾಜ್ಯ ಸರಕಾರವು ೧೫೯.೦೬ ಕೋಟಿ ಹಣವನ್ನು ಈ ಸಾಲಿನಲ್ಲಿ ಒಟ್ಟು ೧೯೫೫.೬೮ ಕೋಟಿ ಹಣವನ್ನು ಮೀಸಲಿಟ್ಟಿದೆ. ಮೀಸಲಿಟ್ಟ ಒಟ್ಟು ಹಣದಲ್ಲಿ ೧೬೪೦.೯೯ ಕೋಟಿ ಹಣವನ್ನು ವೆಚ್ಚ ಮಾಡಲಾಗಿದೆ. ಅಂದರೆ ಶೇ.೮೩.೯೦ರ ಪ್ರಮಾಣದಲ್ಲಿ ವೆಚ್ಚ ಮಾಡಲಾಗಿದೆ. ೨೦೧೨-೧೩ರಲ್ಲಿ ಕೇಂದ್ರ ಮತ್ತು ರಾಜ್ಯ ಸರಕಾರಗಳು ಕ್ರಮವಾಗಿ ೧೨೩೧.೯೪ ಮತ್ತು ೨೦೫.೯೯ ಕೋಟಿ ಒಟ್ಟು ೧೭೮೮.೭೬ ಕೋಟಿ ಹಣವನ್ನು ಮೀಸಲಿಟ್ಟಿವೆ. ಒಟ್ಟು ಈ ಹಣದಲ್ಲಿ ೧೪೫೭.೦೩ಕೋಟಿ ಹಣವನ್ನು ವೆಚ್ಚ ಮಾಡಲಾಗಿದೆ. ಅಂದರೆ ಶೇ.೮೧.೪೫ರ ಪ್ರಮಾಣದಲ್ಲಿ ವೆಚ್ಚ ಮಾಡಲಾಗಿದೆ ಮತ್ತು ೨೦೧೩-೧೪ನೇ ಸಾಲಿನಲ್ಲಿ ಕೇಂದ್ರ ಮತ್ತು ರಾಜ್ಯ ಸರಕಾರವು ಕ್ರಮವಾಗಿ ೧೫೯೬.೦೭ ಮತ್ತು ೨೬೫.೯೯ ಕೋಟಿ ಹಣವನ್ನು ಈ ಸಾಲಿನಲ್ಲಿ ಒಟ್ಟು ೨೯೫.೮೯ ಕೋಟಿ ಹಣವನ್ನು ಮೀಸಲಿಟ್ಟಿವೆ. ಒಟ್ಟು ಹಣದಲ್ಲಿ ೨೯೫.೨೨ ಕೋಟಿಗಳಷ್ಟು ಹಣವನ್ನು ಅಂದರೆ ಶೇ.೯೫.೫೪ರ ಪ್ರಮಾಣದಲ್ಲಿ ಹಣವನ್ನು ವೆಚ್ಚ ಮಾಡಿರುವುದು ಕಂಡುಬರುತ್ತದೆ. ರಾಜ್ಯದಲ್ಲಿ ೨೦೦೯-೧೦ನೇ ಸಾಲಿನಿಂದ ಹಿಡಿದು ೨೦೧೩-೧೪ನೇ ಸಾಲಿನವರೆಗೆ ಉದ್ಯೋಗ ಖಾತರಿ ಯೋಜನೆಗೆ ಮಾಡಿದ ವೆಚ್ಚದ ಶೇಕಡಾ ಪ್ರಮಾಣವನ್ನು ಗಮನಿಸಿದರೆ ಏರಿಕೆ ಇಳಿಕೆಯಾಗಿರುವುದು ಕಂಡುಬರುತ್ತದೆ. ೨೦೧೩-೧೪ನೇ ಸಾಲಿನಲ್ಲಿ ಅತ್ಯಧಿಕ ಪ್ರಮಾಣದಲ್ಲಿ ವೆಚ್ಚ ಮಾಡಿರುವುದು ಕಂಡುಬರುತ್ತದೆ. ಆದರೆ ಇದು ದಾಖಲೆಗಳಲ್ಲಿ ಮಾತ್ರ, ಏಕೆಂದರೆ ವಾಸ್ತವದಲ್ಲಿ ಈ ಪ್ರಮಾಣದಲ್ಲಿನ ವೆಚ್ಚಕ್ಕೆ

ಸರಿದೂಗಿಸುವಷ್ಟು ಕೆಲಸಗಳು ನಡೆದಿಲ್ಲವೆಂದೇ ಹೇಳಬಹುದು. ಏಕೆಂದರೆ ಪ್ರತಿ ದಿನದ ಪತ್ರಿಕೆಗಳಲ್ಲಿನ ವರದಿಗಳನ್ನು ಗಮನಿಸಿದರೆ ಇದು ಧೃಡಪಡುತ್ತದೆ.

ಉದ್ಯೋಗ ಖಾತ್ರಿ ಯೋಜನೆಯ ಸಾದಕ-ಬಾದಕಗಳನ್ನು ಕರ್ನಾಟಕದ ಸಂದರ್ಭದಲ್ಲಿಟ್ಟು ನೋಡಿದಾಗ ಈ ಯೋಜನೆ ಸ್ವಲ್ಪ ಮಟ್ಟಿಗೆ ಯಶಸ್ವಿಯಾಗಿದೆಯೆಂದು ಕಂಡುಬಂದರೂ ಸೂಕ್ಷ್ಮವಾಗಿ ಅವಲೋಕಿಸಿದರೆ ಈ ಯೋಜನೆ ತನ್ನ ಗುರಿ ಉದ್ದೇಶಗಳನ್ನು ಸಾಧಿಸುವಲ್ಲಿ ವಿಫಲವಾಗಿದೆ ಎಂದು ಹೇಳಬಹುದು. ಮುಖ್ಯವಾಗಿ ಹೈದ್ರಾಬಾದ್-ಕರ್ನಾಟಕ ವ್ಯಾಪ್ತಿಯ ಮೂರು ಜಿಲ್ಲೆಗಳು ಅಧ್ಯಯನದ ವ್ಯಾಪ್ತಿಯಾಗಿರುವುದರಿಂದ ಈ ಜಿಲ್ಲೆಗಳಲ್ಲಿ ಉದ್ಯೋಗ ಖಾತರಿ ಯೋಜನೆಯ ಸಾಧಕ-ಬಾಧಕಗಳನ್ನು ಮತ್ತು ಸಮಸ್ಯೆ ಸವಾಲುಗಳನ್ನು ಕುರಿತು ಚರ್ಚಿಸುವುದು ಅಗತ್ಯವಾಗಿದೆ. ಹಾಗಾಗಿ ಈ ಮೂರೂ ಜಿಲ್ಲೆಗಳಲ್ಲಿ ಕ್ಷೇತ್ರಕಾರ್ಯವನ್ನು ಕೈಗೊಂಡು ಸಂಗ್ರಹಿಸಿದ ಮಾಹಿತಿಯ ಹಿನ್ನೆಲೆಯಲ್ಲಿ ವಿಷಯವನ್ನು ವಿಸ್ತರಿಸಲಾಗುವುದು. ಏಕೆಂದರೆ ಈ ಜಿಲ್ಲೆಗಳಲ್ಲಿ ಪ್ರಸ್ತುತ ಉದ್ಯೋಗ ಖಾತರಿ ಯೋಜನೆಯ ಸಂಪೂರ್ಣ ಚಿತ್ರಣವನ್ನು ಕಟ್ಟಿಕೊಡುವುದು ಇಲ್ಲಿನ ಮುಖ್ಯ ಉದ್ದೇಶವಾಗಿದೆ.

ಕರ್ನಾಟಕ ರಾಜ್ಯದಲ್ಲಿ ಪ್ರಸ್ತುತ ೨೦೧೪-೧೫ನೇ ಸಾಲಿನಲ್ಲಿ ಉದ್ಯೋಗ ಖಾತರಿ ಯೋಜನೆಯಲ್ಲಿ ಕೆಲಸವನ್ನು ಪಡೆಯಲು ೫೮೬೯೭೮ರಷ್ಟು ಕುಟುಂಬಗಳು ಅರ್ಜಿ ಸಲ್ಲಿಸಿದ್ದು, ೫೮೦೦೨೩೦ರಷ್ಟು ಜನರಿಗೆ ಉದ್ಯೋಗ ಕಾರ್ಡುಗಳು ದೊರೆತಿವೆ. ಹೀಗೆ ಉದ್ಯೋಗ ಕಾರ್ಡುಗಳು ದೊರೆತವರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಕ್ರಮವಾಗಿ ೯೬೧೮೬೧ ಮತ್ತು ೪೬೫೫೨೬ರಷ್ಟಿದ್ದಾರೆ. ಇನ್ನುಳಿದಂತೆ ಇತರೆ ಜಾತಿ/ಸಮುದಾಯಗಳವರ ಸಂಖ್ಯೆ ೪೩೭೨೮೪೩ರಷ್ಟಿದೆ. ಇದು ಇಡೀ ರಾಜ್ಯಕ್ಕೆ ಸಂಬಂಧಿಸಿದ್ದಾದರೆ ಇನ್ನೂ ಅಧ್ಯಯನ ವ್ಯಾಪ್ತಿಗೆ ಸಂಬಂಧಿಸಿದ ರಾಯಚೂರು, ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿನ ವಿವರವನ್ನು ಈ ಕೆಳಗಿನಂತೆ ನೀಡಲಾಗಿದೆ.

| ಕ್ರ.ಸಂ. | ಜಿಲ್ಲೆ | ೨೦೧೧ರ ಜನಗಣತಿಯಂತೆ ಗ್ರಾ.ಭಾಗದ ಒಟ್ಟು ಜನಸಂಖ್ಯೆ | ಜಾಬ್‌ಕಾರ್ಡಗೆ ಅರ್ಜಿ ಸಲ್ಲಿಸಿದ ಕುಟುಂಬಗಳು | ಒಟ್ಟು ಜಾಬ್ ಕಾರ್ಡ್ | ಒಟ್ಟು ಜಾಬ್‌ಕಾರ್ಡ್‌ಗಳು ಪರಿಶಿಷ್ಟ ಜಾತಿ | ಒಟ್ಟುಜಾಬ್ ಕಾರ್ಡ್‌ಗಳು ಪರಿಶಿಷ್ಟ ಪಂಗಡ | ಒಟ್ಟು ಜಾಬ್ ಕಾರ್ಡುಗಳು ಇತರೆ |
|---|---|---|---|---|---|---|---|
| ೧. | ರಾಯಚೂರು | ೧೪೩೮೪೬೪ | ೨೬೯೪೩೯ | ೨೬೭೯೪೮ | ೫೦೦೧೫ | ೫೩೩೧೯ | ೧೬೪೬೧೪ |
| ೨. | ಕೊಪ್ಪಳ | ೧೧೫೬೨೧೬ | ೨೩೦೩೬೯ | ೨೨೬೪೫೨ | ೩೩೨೬೭ | ೨೩೬೩೯ | ೧೬೯೫೪೬ |
| ೩. | ಬಳ್ಳಾರಿ | ೧೫೩೨೩೫೬ | ೨೧೪೧೮೮ | ೨೧೩೧೯೫ | ೪೪೧೪೯ | ೪೫೬೩೮ | ೧೨೩೪೦೮ |

೨೦೧೪-೧೫ನೇ ಸಾಲಿನ ಜಾಬ್ ಕಾರ್ಡುಗಳ ಸಂಖ್ಯೆ

ಮಾಹಿತಿ: MGNREGA.GOV.IN. ಅಂತರ್ಜಾಲ ತಾಣ

ಈ ಮೂರೂ ಜಿಲ್ಲೆಗಳಲ್ಲಿನ ಒಟ್ಟು ಜಾಬ್‌ಕಾರ್ಡುಗಳಿಗಾಗಿ ಅರ್ಜಿಸಲ್ಲಿಸಿದವರನ್ನು ಗಮನಿಸಿದರೆ ತುಂಬಾ ನಿರಾಶಾದಾಯಕವಾಗುತ್ತದೆ. ರಾಯಚೂರು ಜಿಲ್ಲೆಯಲ್ಲಿ ಶೇ.೧೮.೭೩ರಷ್ಟು, ಕೊಪ್ಪಳ ಜಿಲ್ಲೆಯಲ್ಲಿ ಶೇ.೧೯.೯೨ರಷ್ಟು ಮತ್ತು ಬಳ್ಳಾರಿ ಜಿಲ್ಲೆಯಲ್ಲಿ ಶೇ.೧೩.೯೭ರಷ್ಟು ಪ್ರಮಾಣದಲ್ಲಿ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಕೆಲಸಕ್ಕಾಗಿ ಅರ್ಜಿಸಲ್ಲಿಸಿದ ಕುಟುಂಬಗಳಾಗಿವೆ. ಅದರಲ್ಲೂ ಮುಖ್ಯವಾಗಿ ಮೂರೂ ಜಿಲ್ಲೆಗಳಿಗೆ ಹೋಲಿಸಿದರೆ ಬಳ್ಳಾರಿ ಜಿಲ್ಲೆಯಲ್ಲಿ ಅತ್ಯಂತ ಕಡಿಮೆ ಪ್ರಮಾಣದಲ್ಲಿ ಇರುವುದನ್ನು ಕಾಣಬಹುದಾಗಿದೆ. ಅಂದರೆ ಈ ಜಿಲ್ಲೆಯಲ್ಲಿ ಈ ಯೋಜನೆಗೆ ನೀರಸ ಪ್ರತಿಕ್ರಿಯೆ ಇದೆ. ಏಕೆಂದರೆ ಈ ಜಿಲ್ಲೆಯಲ್ಲಿ ಕೈಗಾರಿಕೆಗಳ ಸಂಖ್ಯೆ ಅಧಿಕವಾಗಿರುವುದರಿಂದ ಉದ್ಯೋಗದ ಅವಕಾಶಗಳೂ ಸಹ ಅಧಿಕವಾಗಿರುವುದು ಕಾರಣವಾಗಿದೆ. ಆದರೆ ಕೈಗಾರಿಕೆಗಳು ಜಿಲ್ಲೆಯ ತುಂಬಾ ವಿಸ್ತರಿಸಿಕೊಂಡಿಲ್ಲ. ಇವು ಕೆಲವು ತಾಲೂಕುಗಳಿಗೆ ಮಾತ್ರ ಸೀಮಿತವಾಗಿವೆ. ಕೆಲವು ಜಿಲ್ಲೆಗಳಲ್ಲಿ ಇಂದಿಗೂ ಕೆಲಸವನ್ನರಸಿ ವಲಸೆ ಹೋಗುವಂತಹ ಸ್ಥಿತಿ ಕಂಡುಬರುತ್ತದೆ. ಆದರೂ ಸಹ ಈ ಭಾಗದ ಜನರಲ್ಲಿ ಈ ಯೋಜನೆಯ ಕುರಿತಾದ ಅರಿವು ಇಲ್ಲದಿರುವುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡುಬಂದಿದೆ. ಹಾಗಾಗಿ ಬಳ್ಳಾರಿ ಜಿಲ್ಲೆಯಲ್ಲಿ ಈ ಯೋಜನೆಯಲ್ಲಿ ಪಾಲ್ಗೊಂಡಿರುವ ಕುಟುಂಬಗಳ ಸಂಖ್ಯೆ ಕಡಿಮೆ ಇರುವುದು ಕಂಡುಬರುತ್ತದೆ. ಹಾಗೆಯೇ ಈ ಮೂರು ಜಿಲ್ಲೆಗಳಲ್ಲಿ ಪರಿಶಿಷ್ಟ ಜಾತಿಯವರ ಕುಟುಂಬಗಳಿಗಿಂತ ಪರಿಶಿಷ್ಟ ಪಂಗಡದವರ ಕುಟುಂಬಗಳು ಈ ಯೋಜನೆಗಾಗಿ ಹೆಚ್ಚು ಜಾಬ್ ಕಾರ್ಡ್‌ಗಳನ್ನು ಹೊಂದಿರುವುದು ತಿಳಿದುಬರುತ್ತದೆ. ಏಕೆಂದರೆ ಈ ಜಿಲ್ಲೆಗಳಲ್ಲಿ ಪರಿಶಿಷ್ಟ ಪಂಗಡದವರ ಕುಟುಂಬಗಳ ಸಂಖ್ಯೆ ಅಧಿಕವಾಗಿವೆ. ಈ ಜಾತಿ ಸಮುದಾಯಗಳಲ್ಲದೆ ಇತರೆ ಜಾತಿ ಸಮುದಾಯದವರೂ ಸಹ ಈ ಯೋಜನೆಯ ಫಲಾನುಭವಿಗಳಾಗಿರುವುದು ದಾಖಲೆಗಳಿಂದ ತಿಳಿದುಬರುತ್ತದೆ.

ಇನ್ನು ಈ ಜಿಲ್ಲೆಗಳಿಗೆ ಒಳಪಡುವ ಪ್ರತಿಯೊಂದು ತಾಲೂಕಿನಲ್ಲಿನ ಜಾಬ್‌ಕಾರ್ಡುಗಳ ಸ್ಥಿತಿಗತಿಯನ್ನು ನೋಡಬೇಕಾದುದು ಅವಶ್ಯವಾಗಿದೆ. ಹಾಗಾಗಿ ಈ ಮೂರೂ ಜಿಲ್ಲೆಗಳಲ್ಲಿನ ಒಟ್ಟು ೧೬ ತಾಲೂಕುಗಳಲ್ಲಿನ ವಿವರವನ್ನು ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

| ಕ್ರ.ಸಂ | ಜಿಲ್ಲೆ | ತಾಲೂಕು | ಜಾ.ಕಾ.ಅರ್ಜಿ | ಒಟ್ಟು ಜಾ.ಕಾ. | ಪ.ಜಾ. | ಪ.ಪಂ | ಇತರೆ |
|---|---|---|---|---|---|---|---|
| ೦೧ | ರಾಯಚೂರು | ದೇವದುರ್ಗ | ೪೯೫೦೨ | ೪೯೨೯೮ | ೮೭೯೯ | ೧೬೨೩೫ | ೨೪೨೬೪ |
| | | ಲಿಂಗಸಗೂರು | ೫೬೫೮೩ | ೫೫೯೫೨ | ೯೨೬೫ | ೬೨೨೮ | ೪೦೪೫೯ |
| | | ಮಾನ್ವಿ | ೬೪೬೫೨ | ೬೪೩೮೩ | ೧೧೭೧೬ | ೧೨೮೯೨ | ೩೯೭೭೫ |
| | | ರಾಯಚೂರು | ೪೦೪೨೧ | ೪೦೩೨೫ | ೮೮೧೫ | ೮೭೮೬ | ೨೨೭೨೪ |
| | | ಸಿಂಧನೂರು | ೫೮೨೮೧ | ೫೭೯೯೦ | ೧೧೪೨೦ | ೯೧೭೮ | ೩೭೩೯೨ |

| | | | | | | | |
|---|---|---|---|---|---|---|---|
| ೨. | ಕೊಪ್ಪಳ | ಗಂಗಾವತಿ | ೬೬೪೮೫ | ೬೫೩೫೪ | ೧೧೦೨೯ | ೯೭೧೬ | ೪೪೬೭೯ |
| | | ಕೊಪ್ಪಳ | ೫೦೭೯೦ | ೪೮೮೬೨ | ೭೪೯೯ | ೩೧೩೬ | ೩೮೨೨೭ |
| | | ಕುಷ್ಟಗಿ | ೪೯೪೪೨ | ೪೯೨೩೨ | ೫೬೦೪ | ೫೮೯೬ | ೩೭೭೩೨ |
| | | ಯಲಬುರ್ಗಾ | ೬೩೬೫೨ | ೬೩೦೦೪ | ೯೧೩೫ | ೪೮೯೧ | ೪೮೯೭೮ |
| ೩. | ಬಳ್ಳಾರಿ | ಬಳ್ಳಾರಿ | ೫೨೬೯೫ | ೫೨೫೨೮ | ೯೬೨೭ | ೧೧೪೩೫ | ೩೧೪೬೬ |
| | | ಹಡಗಲಿ | ೨೭೦೦೧ | ೨೬೯೭೯ | ೭೨೨೬ | ೧೯೩೪ | ೧೭೮೧೯ |
| | | ಹಗರಿಬೊಮ್ಮನಹಳ್ಳಿ | ೨೧೮೧೦ | ೨೧೭೩೭ | ೩೯೨೧ | ೨೫೯೩ | ೧೫೨೨೩ |
| | | ಹೊಸಪೇಟೆ | ೨೪೩೯೨ | ೨೩೯೮೩ | ೬೭೫೬ | ೫೩೩೧ | ೧೧೮೯೬ |
| | | ಕೂಡ್ಲಿಗಿ | ೪೦೬೩೦ | ೪೦೫೨೨ | ೭೨೮೬ | ೧೨೨೫೦ | ೨೦೯೮೬ |
| | | ಸಂಡೂರು | ೨೨೦೮೭ | ೨೨೦೧೫ | ೩೩೭೭ | ೬೯೭೫ | ೧೧೬೬೩ |
| | | ಸಿರಗುಪ್ಪ | ೨೫೫೭೩ | ೨೫೪೩೧ | ೫೯೫೬ | ೨೧೧೦ | ೧೪೩೫೫ |

ಮೂಲ: MGNREGA.GOV.IN. ಅಂತರ್ಜಾಲ ತಾಣ. ೨೦೧೪-೧೫ನೇ ಸಾಲಿನ ಜಾಬ್ ಕಾರ್ಡುಗಳ ಸಂಖ್ಯೆ

ಹೀಗೆ ರಾಯಚೂರು ಜಿಲ್ಲೆಯ ಐದು ತಾಲೂಕುಗಳಲ್ಲಿ ದೇವದುರ್ಗ ಮತ್ತು ಮಾನ್ವಿ ತಾಲೂಕುಗಳನ್ನು ಹೊರತುಪಡಿಸಿದರೆ ಉಳಿದ ಮೂರೂ ತಾಲೂಕುಗಳಲ್ಲಿ ಪರಿಶಿಷ್ಟ ಪಂಗಡದವರಿಗಿಂತ ಪರಿಶಿಷ್ಟ ಜಾತಿ ಸಮುದಾಯದವರೇ ಅಧಿಕವಾಗಿ ಈ ಯೋಜನೆಯ ಫಲಾನುಭವಿಗಳಾಗಿರುವುದು ಕಂಡುಬರುತ್ತದೆ. ಕೊಪ್ಪಳ ಜಿಲ್ಲೆಯ ನಾಲ್ಕು ತಾಲೂಕುಗಳಲ್ಲಿ ಕುಷ್ಟಗಿ ತಾಲೂಕಿನಲ್ಲಿ ಮಾತ್ರ ಮತ್ತು ಬಳ್ಳಾರಿ ಜಿಲ್ಲೆಯ ಏಳು ತಾಲೂಕುಗಳಲ್ಲಿನ ಬಳ್ಳಾರಿ ಮತ್ತು ಕೂಡ್ಲಿಗಿ ತಾಲೂಕುಗಳಲ್ಲಿನ ಪರಿಶಿಷ್ಟ ಪಂಗಡದವರು ಪರಿಶಿಷ್ಟ ಜಾತಿಯವರಿಗಿಂತ ಹೆಚ್ಚಾಗಿ ಪಾಲ್ಗೊಂಡಿರುವುದು ಕಂಡುಬರುತ್ತದೆ. ಉಳಿದಂತೆ ಮೂರೂ ಜಿಲ್ಲೆಯ ಒಟ್ಟು ೧೬ ತಾಲೂಕುಗಳಲ್ಲಿ ಇತರೆ ಜಾತಿ ಸಮುದಾಯದ ಜನರು ಅಧಿಕವಾಗಿ ಈ ಯೋಜನೆಯ ಫಲಾನುಭವಿಗಳಾಗಿರುವುದು ಕಂಡುಬರುತ್ತದೆ. ಆದರೂ ಸಹ ಗ್ರಾಮೀಣ ಭಾಗದ ಜನಸಂಖ್ಯೆಗೆ ಹೋಲಿಸಿದರೆ ಉದ್ಯೋಗ ಖಾತರಿ ಯೋಜನೆಯಲ್ಲಿ ಜಾಬ್‌ಕಾರ್ಡ್‌ಗಳಿಗಾಗಿ ಸಲ್ಲಿಸಿದ ಅರ್ಜಿಗಳ ಸಂಖ್ಯೆ ಮತ್ತು ಉದ್ಯೋಗ ಕಾರ್ಡುಗಳನ್ನು ಹೊಂದಿರುವವರ ಸಂಖ್ಯೆ ತುಂಬಾ ಕಡಿಮೆ ಪ್ರಮಾಣದಲ್ಲಿದೆ.

ಅಧ್ಯಯನ ವ್ಯಾಪ್ತಿಯಲ್ಲಿನ ಮೂರು ಜಿಲ್ಲೆಗಳ ಪ್ರತಿಯೊಂದು ತಾಲೂಕಿನಲ್ಲಿನ ಐದು ಗ್ರಾಮ ಪಂಚಾಯ್ತಿಗಳನ್ನು ಕ್ಷೇತ್ರಕಾರ್ಯಕ್ಕೆ ಒಳಪಡಿಸಿದ್ದು. ಈ ಗ್ರಾಮಪಂಚಾಯ್ತಿಗಳಲ್ಲಿನ ಉದ್ಯೋಗ ಕಾರ್ಡುಗಳ ಕುರಿತಾದ ಮಾಹಿತಿಯನ್ನು ಈ ಕೆಳಗಿನಂತೆ ನೀಡಲಾಗಿದೆ. ಈ ಮಾಹಿತಿಯನ್ನು ಪ್ರತಿಯೊಂದು ಜಿಲ್ಲೆಯನ್ನು ಪ್ರತ್ಯೇಕವಾಗಿ ಗುರುತಿಸಿಕೊಂಡು ಆ ಜಿಲ್ಲೆಯಲ್ಲಿನ ಒಟ್ಟು ತಾಲೂಕುಗಳು ಮತ್ತು ಆ ತಾಲೂಕುಗಳಲ್ಲಿನ ಐದು ಗ್ರಾಮ ಪಂಚಾಯಿತಿಗಳ

ವಿವರವನ್ನು ಮುಂದಿನ ಭಾಗದಲ್ಲಿ ನೀಡಲಾಗಿದೆ. ಇದಕ್ಕೂ ಮೊದಲು ಈ ಜಿಲ್ಲೆಗೆ ಬಂದಂತಹ ಅನುದಾನದ ಪ್ರಮಾಣವನ್ನು ಮತ್ತು ಈ ಅನುದಾನ ಬಳಕೆಯಾದ ಪ್ರಮಾಣದ ವಿವರಗಳನ್ನು ನೀಡಲಾಗಿದೆ.

ರಾಯಚೂರು ಜಿಲ್ಲೆ: ಈ ಜಿಲ್ಲೆಯಲ್ಲಿ ೨೦೧೨-೧೩ನೇ ಸಾಲಿನಿಂದ ಹಿಡಿದು ೨೦೧೪-೧೫ನೇ ಸಾಲಿನವರೆಗೆ ಈ ಯೋಜನೆಯಡಿಯಲ್ಲಿ ನಿರ್ವಹಿಸಿದಂತಹ ಒಟ್ಟು ಮಾನವ ದಿನಗಳ ಪ್ರಮಾಣವನ್ನು ಮತ್ತು ಸಿಕ್ಕಂತಹ ಅನುದಾನವನ್ನು ಈ ಕೆಳಗಿನಂತೆ ನೀಡಲಾಗಿದೆ.

| ಕ್ರ.ಸಂ. | ವಿಷಯ | ವರ್ಷ | | |
|---|---|---|---|---|
| | | ೨೦೧೨-೧೩ | ೨೦೧೩-೧೪ | ೨೦೧೪-೧೫ |
| ೦೧ | ಒಪ್ಪಿಗೆ ಸಿಕ್ಕ ಕಾರ್ಮಿಕ ಬಡ್ಜೆಟ್ (ಲಕ್ಷಗಳಲ್ಲಿ) | ೪೨.೧೩ | ೫೧.೮ | ೫೦.೫೩ |
| ೦೨ | ಕಾರ್ಯಗತಗೊಂಡ ಮಾನವ ದಿನಗಳು(ಲಕ್ಷಗಳಲ್ಲಿ) | ೪೩.೩೩ | ೩೨.೮೨ | ೨೦.೦೧ |
| ೦೩ | ಒಟ್ಟು ಮಾನವ ದಿನಗಳಲ್ಲಿ ಪರಿಶಿಷ್ಟ ಜಾತಿಯ ಮಾನವ ದಿನಗಳು(ಶೇ.) | ೧೮.೬೫ | ೧೮.೯ | ೨೦.೨೫ |
| ೦೪ | ಒಟ್ಟು ಮಾನವ ದಿನಗಳಲ್ಲಿ ಪರಿಶಿಷ್ಟ ಪಂಗಡದ ಮಾನವ ದಿನಗಳು(ಶೇ.) | ೨೦.೨೪ | ೧೮.೯೫ | ೨೧.೧೨ |
| ೦೫ | ಒಟ್ಟು ಮಾನವ ದಿನಗಳಲ್ಲಿ ಮಹಿಳೆಯರ ಮಾನವ ದಿನಗಳು(ಶೇ.) | ೫೧.೨೬ | ೫೦.೫೩ | ೫೧.೩೧ |

ಮೂಲ: MGNREGA.GOV.IN. ಅಂತರ್ಜಾಲ ತಾಣ

ರಾಯಚೂರು ಜಿಲ್ಲೆಗೆ ೨೦೧೨-೧೩ರಲ್ಲಿ ಒಪ್ಪಿಗೆ ಸಿಕ್ಕಂತಹ ಕಾರ್ಮಿಕ ಬಜೆಟ್ ೪೨.೧೩ರಷ್ಟಿದೆ. ಈ ಅವಧಿಯಲ್ಲಿ ಜನರು ಭಾಗವಹಿಸಿ ಕಾರ್ಯಗತಗೊಳಿಸಿದ ಮಾನವ ದಿನಗಳು ೪೩.೩೩ರಷ್ಟಿದೆ. ಹಾಗೆಯೇ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಕ್ರಮವಾಗಿ ಶೇ.೧೮.೬೫ ಮತ್ತು ಶೇ..೨೦.೨೪ರ ಪ್ರಮಾಣದಲ್ಲಿ ಮಾನವ ದಿನಗಳನ್ನು ಪೂರ್ಣಗೊಳಿಸಿದ್ದಾರೆ. ಹಾಗೆಯೇ ಮಹಿಳೆಯರು ಪೂರ್ಣಗೊಳಿಸಿದ ಮಾನವ ದಿನಗಳು ಪ್ರಮಾಣ ಶೇ. ೫೧.೨೬ರ ಪ್ರಮಾಣದಲ್ಲಿದೆ. ೨೦೧೩-೧೪ನೇ ಸಾಲಿನಲ್ಲಿ ಒಪ್ಪಿಗೆ ಸಿಕ್ಕಂತಹ ಕಾರ್ಮಿಕ ಬಜೆಟ್ ೫೧.೮ರಷ್ಟಿದೆ. ಕಾರ್ಯಗತಗೊಂಡ ಮಾನವ ದಿನಗಳು ೩೨.೮೨ರಷ್ಟಿದೆ. ಹಾಗೆಯೇ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡದ ಜನರು ಈ ಅವಧಿಯಲ್ಲಿ ಪೂರ್ಣಗೊಳಿಸಿದ ಮಾನವ ದಿನಗಳು ಕ್ರಮವಾಗಿ ಶೇ.೧೮.೯ ಮತ್ತು ೧೮.೯೫ರ ಪ್ರಮಾಣದಲ್ಲಿದೆ. ಇನ್ನು ಮಹಿಳೆಯರು ಪೂರ್ಣಗೊಳಿಸಿದ ಮಾನವ ದಿನಗಳ ಪ್ರಮಾಣ ಶೇ.೫೦.೫೩ರಷ್ಟಿದೆ. ೨೦೧೪-೧೫ನೇ ಸಾಲಿನಲ್ಲಿ ಒಪ್ಪಿಗೆ ಸಿಕ್ಕಂತಹ ಕಾರ್ಮಿಕ ಬಜೆಟ್

೫೦.೫೩ರಷ್ಟಿದೆ. ಕಾರ್ಯಗತಗೊಂಡ ಮಾನವ ದಿನಗಳೆಂದರೆ ೨೦.೦೧ರಷ್ಟಿದೆ. ಈ ಅವಧಿಯಲ್ಲಿ ಪರಿಶಿಷ್ಟ ಜಾತಿಯವರು ಶೇ.೨೦.೭೫ರಷ್ಟು ಮತ್ತು ಪರಿಶಿಷ್ಟ ಪಂಗಡದವರು ಶೇ.೨೧.೧೨ರಷ್ಟು ಪ್ರಮಾಣದಲ್ಲಿ ಹಾಗೆಯೇ ಮಹಿಳೆಯರು ಪೂರ್ಣಗೊಳಿಸಿದ ಮಾನವ ದಿನಗಳ ಪ್ರಮಾಣ ಶೇ. ೫೧.೩೧ರಷ್ಟಿದೆ. ಈ ಮೂರೂ ವರ್ಷಗಳಲ್ಲಿನ ಮಹಿಳೆಯರು ಈ ಯೋಜನೆಯಲ್ಲಿ ಪೂರ್ಣಗೊಳಿಸಿದ ಮಾನವ ದಿನಗಳ ಶೇಕಡಾವಾರು ಪ್ರಮಾಣವನ್ನು ಗಮನಿಸಿದರೆ ಶೇ.೫೦ಕ್ಕಿಂತ ಕಡಿಮೆ ಇಲ್ಲದಿರುವುದು ಕಂಡುಬರುತ್ತದೆ. ಮುಖ್ಯವಾಗಿ ಈ ಜಿಲ್ಲೆಯಲ್ಲಿ ಈ ಯೋಜನೆಯಲ್ಲಿ ಮಹಿಳೆಯರೇ ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿರುವುದು ಮತ್ತು ಈ ಯೋಜನೆಯ ಲಾಭವನ್ನು ಪಡೆದಿರುವುದು ಕ್ಷೇತ್ರಕಾರ್ಯದ ಅಧ್ಯಯನದಿಂದಲೂ ಕೂಡ ದೃಢಪಟ್ಟಿದೆ.

ಉದ್ಯೋಗ ಖಾತರಿ ಯೋಜನೆಯಲ್ಲಿ ಹಣದ ನಿರ್ವಹಣೆ : ಪ್ರತಿಯೊಂದು ಜಿಲ್ಲೆಯು ಪ್ರತೀ ವರ್ಷವೂ ಉದ್ಯೋಗ ಖಾತರಿ ಕಾಯಿದೆಯಡಿಯಲ್ಲಿ ಹಣದ ಅನುದಾನವನ್ನು ಪಡೆಯುವುದು ಮತ್ತು ಪಡೆದಂತಹ ಅನುದಾನವನ್ನು ಸರಿಯಾದ ರೀತಿಯಲ್ಲಿ ಬಳಕೆ ಮಾಡಬೇಕೆಂಬುದು ಯೋಜನೆಯ ಮುಖ್ಯ ಉದ್ದೇಶ. ಈ ಹಣದ ಬಳಕೆ ಎನ್ನುವುದು ಕೇವಲ ದಾಖಲೆಗಳಲ್ಲಿ ಸರಿಯಾದ ಕ್ರಮದಲ್ಲಿರುವುದು ಕಾಣಲಾಗುತ್ತದೆ. ಆದರೆ ವಾಸ್ತವದಲ್ಲಿ ಬಳಕೆಯಾದ ಹಣದ ಜೊತೆಗೆ ಕಾರ್ಯಕ್ಷೇತ್ರಗಳಲ್ಲಿ ನಡೆಸಿದಂತಹ ಕಾಮಗಾರಿಗಳನ್ನು ಮತ್ತು ಈ ಯೋಜನೆಯ ಕಾಮಗಾರಿಗಳಲ್ಲಿ ಭಾಗವಹಿಸಿದ ಜನರ ಪ್ರಮಾಣವನ್ನು ನೋಡಿದರೆ ತುಂಬಾ ನಿರಾಶಾದಾಯಕವಾಗುತ್ತದೆ. ಈ ಹಿನ್ನೆಲೆಯಲ್ಲಿ ಸರಕಾರಿ ದಾಖಲೆಗಳನ್ನು ಗಮನಿಸಿದರೆ ರಾಯಚೂರು ಜಿಲ್ಲೆಯು ಈ ಯೋಜನೆಯಡಿ ಪಡೆದಂತಹ ಅನುದಾನ ಮತ್ತು ವೆಚ್ಚ ಮಾಡಿದ ವಿವರವನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

| ಕ್ರ.ಸಂ. | ಬಳಕೆಯಾದ ಹಣ | ವರ್ಷ | | |
|---|---|---|---|---|
| | | ೨೦೧೨-೧೩ | ೨೦೧೩-೧೪ | ೨೦೧೪-೧೫ |
| ೦೧ | ಕೂಲಿ (ಲಕ್ಷಗಳಲ್ಲಿ) | ೬,೬೫೨.೬೭ | ೬,೯೮೧.೮ | ೪,೩೪೨.೦೩ |
| ೦೨ | ಸಲಕರಣೆಗಳ ವೆಚ್ಚ (ಲಕ್ಷಗಳಲ್ಲಿ) | ೨,೮೨೨.೫೭ | ೨,೦೪೩ | ೧,೮೫೫.೫೪ |
| ೦೩ | ಆಡಳಿತಾತ್ಮಕ ವೆಚ್ಚ (ಲಕ್ಷಗಳಲ್ಲಿ) | ೪೬೫.೧೩ | ೨೨೧.೯೬ | ೧೧೩.೯೨ |
| ೦೪ | ಒಟ್ಟು ವೆಚ್ಚ (ಲಕ್ಷಗಳಲ್ಲಿ) | ೯,೯೪೦.೩೬ | ೯,೨೪೬.೭೬ | ೬,೩೧೧.೪೯ |

ಮೂಲ: MGNREGA.GOV.IN. ಅಂತರ್ಜಾಲ ತಾಣ.

ರಾಯಚೂರು ಜಿಲ್ಲೆಯಲ್ಲಿ ೨೦೧೨-೧೩ನೇ ಸಾಲಿನಲ್ಲಿ ಉದ್ಯೋಗ ಖಾತರಿ ಯೋಜನೆಗಾಗಿ ಒಟ್ಟು ೯೯೪೦.೩೬ ಲಕ್ಷ ಹಣವನ್ನು ವೆಚ್ಚ ಮಾಡಲಾಗಿದೆ. ಇದರಲ್ಲಿ ಕೂಲಿ, ಸಲಕರಣೆಗಳು ಮತ್ತು ಆಡಳಿತಾತ್ಮಕ ವೆಚ್ಚಗಳು ಮುಖ್ಯವಾಗಿ ಕಂಡುಬರುತ್ತವೆ. ಈ ಕೆಲಸಗಳಿಗಾಗಿ ಮಾಡಿದ

ವೆಚ್ಚಗಳು ಕ್ರಮವಾಗಿ ೬,೬೫೨.೬೭ , ೨,೮೨೨.೫೭, ೪೬೫.೧೩ ಇರುವುದನ್ನು ಕಾಣಬಹುದು. ೨೦೧೩-೧೪ನೇ ಸಾಲಿನಲ್ಲಿ ಈ ಯೋಜನೆಗಾಗಿ ಒಟ್ಟು ೯೨೪೬.೭೬ರಷ್ಟು ಹಣವನ್ನು ವ್ಯಯ ಮಾಡಲಾಗಿದೆ. ಮುಖ್ಯವಾಗಿ ಈ ವೆಚ್ಚದಲ್ಲಿ ಕೂಲಿಗಾಗಿ ೬,೯೮೧.೮ರಷ್ಟು, ಸಲಕರಣೆಗಳಿಗಾಗಿ ೨,೦೪೩ರಷ್ಟು ಮತ್ತು ಆಡಳಿತಾತ್ಮಕ ವೆಚ್ಚವಾಗಿ ೨೨೧.೯೬ರಷ್ಟು ಹಣವನ್ನು ವ್ಯಯ ಮಾಡಲಾಗಿದೆ. ಇನ್ನು ೨೦೧೪-೧೫ನೇ ಸಾಲಿನಲ್ಲಿ ಒಟ್ಟು ೬,೩೧೧.೪೯ರಷ್ಟು ಹಣವನ್ನು ವ್ಯಯಿಸಲಾಗಿದೆ. ಇದರಲ್ಲಿ ಕೂಲಿಗಾಗಿ ೪,೩೪೨.೦೩ರಷ್ಟು, ಸಲಕರಣೆಗಳಿಗಾಗಿ ೧,೮೫೫.೫೪ರಷ್ಟು ಮತ್ತು ಆಡಳಿತಾತ್ಮಕ ವೆಚ್ಚವಾಗಿ ೧೧೩.೯೨ರಷ್ಟು ಹಣವನ್ನು ವೆಚ್ಚ ಮಾಡಲಾಗಿದೆ. ಈ ಮೂರೂ ಅವಧಿಯಲ್ಲಿ ವ್ಯಯ ಮಾಡಿದ ಹಣವನ್ನು ಗಮನಿಸಿದರೆ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಲೇ ಇರುವುದನ್ನು ಕಾಣಬಹುದಾಗಿದೆ.

ರಾಯಚೂರು ಜಿಲ್ಲೆಯು ಒಟ್ಟು ಐದು ತಾಲೂಕುಗಳನ್ನು ಹೊಂದಿದ್ದು, ಈ ಐದು ತಾಲೂಕುಗಳಲ್ಲಿ ಪ್ರತಿಯೊಂದು ತಾಲೂಕಿನಲ್ಲಿನ ಐದು ಗ್ರಾಮ ಪಂಚಾಯತಿಗಳನ್ನು ಕ್ಷೇತ್ರಕಾರ್ಯಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಅವುಗಳ ವಿವರ ಈ ಕೆಳಗಿನಂತಿದೆ.

| ಕ್ರ.ಸಂ. | ತಾಲೂಕು | ಗ್ರಾ.ಪಂ. | ಜಾ.ಕಾ.ಅರ್ಜಿ | ಒಟ್ಟು ಜಾ.ಕಾ. | ಪಜಾ | ಪಪಂ | ಇತರೆ |
|---|---|---|---|---|---|---|---|
| ೦೧. | ದೇವದುರ್ಗ | ಅರಕೇರ | ೧೫೫೬ | ೧೫೫೨ | ೧೧೦ | ೬೦೧ | ೮೪೧ |
| | | ಬಿ.ಗಣೇಕಲ್ | ೧೬೧೬ | ೧೬೧೬ | ೩೮೨ | ೩೭೪ | ೫೦೦ |
| | | ಜಾಗೀರ್‌ಜಾಡಲದಿನ್ನಿ | ೧೪೭೮ | ೧೪೭೫ | ೩೧೭ | ೭೭೪ | ೩೮೪ |
| | | ಜೆರಬಂಡಿ | ೨೦೩೩ | ೨೦೩೨ | ೪೩೩ | ೩೬೨ | ೧೨೩೭ |
| | | ಮುಸ್ತೂರು | ೧೬೪೫ | ೧೬೪೨ | ೩೪೭ | ೬೬೪ | ೬೩೧ |
| ೦೨. | ಲಿಂಗಸಗೂರು | ಗೋರೆಬಾಳ | ೧೭೧೯ | ೧೭೧೭ | ೬೬೫ | ೪೯೮ | ೫೫೪ |
| | | ಗೌಡೂರು | ೧೪೬೦ | ೧೪೫೯ | ೪೯೫ | ೩೪೮ | ೬೧೬ |
| | | ಹಟ್ಟಿ | ೧೩೩೧ | ೧೩೩೧ | ೧೨೧ | ೮೨ | ೧೧೨೮ |
| | | ರೋಡಲಬಂಡ (ಯುಕೆಪಿ) | ೨೧೮೮ | ೧೯೯೬ | ೫೦೯ | ೧೨೮ | ೧೩೫೯ |
| | | ರೋಡಲಬಂಡ (ತವಗ) | ೨೪೧೦ | ೨೪೦೬ | ೨೬೦ | ೨೫೦ | ೧೮೯೬ |
| ೦೩. | ಮಾನ್ವಿ | ಹಿರೇಕೊಟ್ನೆಕಲ್ | ೨೬೦೨ | ೨೬೦೨ | ೬೫೮ | ೨೫೭ | ೧೬೮೭ |
| | | ಮಾಡಗಿರಿ | ೧೨೪೨ | ೧೨೪೨ | ೧೪೨ | ೫೩ | ೧೦೪೭ |
| | | ನವಲಕಲ್ | ೧೦೭೫ | ೧೦೭೫ | ೨೮೭ | ೩೭೪ | ೪೧೪ |

| | | | | | | | |
|---|---|---|---|---|---|---|---|
| | | ಪೋತ್ನಾಳ್ | ೩೫೭೫ | ೩೫೭೫ | ೩೯೩ | ೪೯೧ | ೨೬೯೧ |
| | | ಸಿರವಾರ | ೨೦೮೧ | ೨೦೭೯ | ೫೭೦ | ೩೦೫ | ೧೨೦೪ |
| ೦೪. | ರಾಯಚೂರು | ಗಾಣದಾಳು | ೧೬೨೯ | ೧೬೨೬ | ೨೬೯ | ೬೯೪ | ೬೬೩ |
| | | ಗಿಲ್ಲೆಸೂಗೂರು | ೧೨೧೧ | ೧೨೧೧ | ೪೭೮ | ೨೧೩ | ೫೨೦ |
| | | ಗುಂಜಳ್ಳಿ | ೧೨೩೯ | ೧೨೧೬ | ೩೦೧ | ೪೨೭ | ೪೮೮ |
| | | ಜಂಬಲದಿನ್ನಿ | ೧೪೪೬ | ೧೪೪೬ | ೨೧೯ | ೩೬೩ | ೮೬೪ |
| | | ಯರಗೇರ | ೧೨೯೭ | ೧೨೯೭ | ೨೪೭ | ೫೦೬ | ೫೪೪ |
| ೦೫. | ಸಿಂಧನೂರು | ಬಾದರ್ಲಿ | ೩೦೦೮ | ೨೯೭೨ | ೩೨೭ | ೬೩೬ | ೨೦೦೯ |
| | | ಬಳಗನೂರು | ೧೯೦೯ | ೧೯೦೯ | ೩೭೭ | ೨೩೦ | ೧೩೦೨ |
| | | ಗೌಡನಬಾವಿ | ೧೧೩೩ | ೧೧೩೩ | ೧೮೪ | ೧೩೪ | ೮೧೫ |
| | | ರಾಗಲಪರ್ವಿ | ೧೮೩೯ | ೧೮೨೭ | ೨೧೬ | ೧೧೨೯ | ೪೮೨ |
| | | ರಾಮತ್ನಾಳ | ೨೦೨೩ | ೨೦೨೩ | ೩೪೬ | ೩೭೯ | ೧೨೯೮ |
| | | ಒಟ್ಟು | ೪೪೪೬೩ | ೪೪೪೮೯ | ೮೬೫೧ | ೧೦೨೭೨ | ೨೫೧೭೪ |

ಮೂಲ: MGNREGA.GOV.IN. ಅಂತರ್ಜಾಲ ತಾಣ

**೨೦೧೪-೧೫ನೇ ಸಾಲಿನ ಗ್ರಾಮಪಂಚಾಯ್ತಿಗಳಲ್ಲಿನ ಜಾಬ್ ಕಾರ್ಡುಗಳ ಸಂಖ್ಯೆ**

ರಾಯಚೂರು ಜಿಲ್ಲೆಯ ಐದು ತಾಲೂಕುಗಳ ಪೈಕಿ ಒಟ್ಟು ೨೫ ಗ್ರಾಮಪಂಚಾಯ್ತಿಗಳಲ್ಲಿನ ಜನರು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಜಾಬ್ ಕಾರ್ಡ್‌ಗಳನ್ನು ಹೊಂದಿರುವುದನ್ನು ಗುರುತಿಸಲಾಗಿದೆ. ಕೋಷ್ಟಕದಲ್ಲಿನ ಒಟ್ಟು ಸಂಖ್ಯೆಯನ್ನು ಗಮನಿಸಿದರೆ ಪರಿಶಿಷ್ಟ ಪಂಗಡದ ಜನರು ಪರಿಶಿಷ್ಟ ಜಾತಿಯವರಿಗಿಂತ ಈ ಗ್ರಾಮ ಪಂಚಾಯತಿಗಳಲ್ಲಿ ಹೆಚ್ಚಾಗಿ ಪಾಲ್ಗೊಂಡಿರುವುದು ಕಂಡುಬರುತ್ತದೆ. ಕೆಲವು ಗ್ರಾಮ ಪಂಚಾಯತಿಗಳಲ್ಲಿ ಪರಿಶಿಷ್ಟ ಜಾತಿಯವರ ಸಂಖ್ಯೆ ಪರಿಶಿಷ್ಟ ಪಂಗಡದವರ ಸಂಖ್ಯೆಗಿಂತ ಅಧಿಕವಾಗಿರುವುದು ಕಂಡುಬರುತ್ತದೆ. ಮೇಲಿನ ಕೋಷ್ಟಕದಲ್ಲಿರುವಂತೆ ಲಿಂಗಸೂರು ತಾಲೂಕಿನ ಹಟ್ಟಿ ಮತ್ತು ಮಾನ್ವಿ ತಾಲೂಕಿನ ಮಾಡಗಿರಿ ಗ್ರಾಮ ಪಂಚಾಯತಿಗಳಲ್ಲಿ ಪರಿಶಿಷ್ಟ ಪಂಗಡದ ಜನಸಂಖ್ಯೆ ತುಂಬಾ ಕಡಿಮೆ ಇದೆ. ೨೫ ಗ್ರಾಮ ಪಂಚಾಯತಿಗಳಲ್ಲಿ ಹಲವು ಗ್ರಾಮ ಪಂಚಾಯತಿಗಳಲ್ಲಿ ಪರಿಶಿಷ್ಟ ಜಾತಿಯವರೇ ಅಧಿಕ ಸಂಖ್ಯೆಯಲ್ಲಿರುವುದು ಕಂಡುಬಂದಿದೆ. ಉಳಿದಂತೆ ಪರಿಶಿಷ್ಟ ಪಂಗಡದವರಿದ್ದಾರೆ. ಇನ್ನು ಇತರೆ ಸಮುದಾಯದವರೂ ಸಹ ಅಧಿಕ ಸಂಖ್ಯೆಯಲ್ಲಿ ಈ ಯೋಜನೆಯಲ್ಲಿ ಪಾಲ್ಗೊಂಡಿರುವುದು ಮೇಲಿನ ಸಂಖ್ಯೆಗಳಿಂದ ತಿಳಿದುಬರುತ್ತದೆ. ಒಟ್ಟಾರೆಯಾಗಿ ಈ ೨೫ ಗ್ರಾಮ ಪಂಚಾಯತಿಗಳಲ್ಲಿ ಜಾಬ್‌ಕಾರ್ಡ್‌ಗಾಗಿ ಅರ್ಜಿ ಸಲ್ಲಿಸಿದ ಒಟ್ಟು

ಕುಟುಂಬಗಳೆಂದರೆ ೪೪೪೬೩ರಷ್ಟಿದೆ. ಇದರಲ್ಲಿ ೪೪೪೮೯ರಷ್ಟು ಜನ ಜಾಬ್ ಕಾರ್ಡ್‌ಗಳನ್ನು ಹೊಂದಿದವರಾಗಿದ್ದಾರೆ. ಈ ಜಾಬ್‌ಕಾರ್ಡ್ ಹೊಂದಿದವರಲ್ಲಿ ಪರಿಶಿಷ್ಟ ಜಾತಿಯ ೮೬೫೧ ಮತ್ತು ಪರಿಶಿಷ್ಟ ಪಂಗಡದ ೧೦೨೭೨ ಮತ್ತು ಇತರೆ ಸಮುದಾಯದ ೨೫೧೭೪ರಷ್ಟು ಜನ ಈ ಯೋಜನೆಯಲ್ಲಿ ಜಾಬ್‌ಕಾರ್ಡ್‌ಗಳನ್ನು ಹೊಂದಿದವರಾಗಿದ್ದಾರೆ.

ಕೊಪ್ಪಳ ಜಿಲ್ಲೆ : ಕೊಪ್ಪಳ ಜಿಲ್ಲೆಯು ಈ ಉದ್ಯೋಗ ಖಾತರಿ ಯೋಜನೆಯನ್ನು ಅನುಷ್ಠಾನಕ್ಕೆ ತಂದಿದ್ದು, ೨೦೧೨-೧೩ನೇ ಸಾಲಿನಿಂದ ಹಿಡಿದು ೨೦೧೪-೧೫ನೇ ಸಾಲಿನ ವರೆಗೆ ಈ ಜಿಲ್ಲೆಗೆ ಬಂದಂತಹ ಅನುದಾನ ಮತ್ತು ಈ ಅನುದಾನವನ್ನು ಬಳಕೆಮಾಡಿಕೊಂಡ ವಿವರಗಳನ್ನು ಈ ಕೆಳಗಿನಂತೆ ನೀಡಲಾಗಿದೆ.

| ಕ್ರ.ಸಂ. | ವಿಷಯ | ವರ್ಷ | | |
|---|---|---|---|---|
| | | ೨೦೧೨-೧೩ | ೨೦೧೩-೧೪ | ೨೦೧೪-೧೫ |
| ೦೧ | ಒಪ್ಪಿಗೆ ಸಿಕ್ಕ ಕಾರ್ಮಿಕ ಬಡ್ಜೆಟ್ (ಲಕ್ಷಗಳಲ್ಲಿ) | ೨೬.೮೭ | ೧೨.೩೪ | ೨೪.೫೫ |
| ೦೨ | ಕಾರ್ಯಗತಗೊಂಡ ಮಾನವ ದಿನಗಳು (ಲಕ್ಷಗಳಲ್ಲಿ) | ೧೦.೨೯ | ೨೬.೪೨ | ೧೨.೨೮ |
| ೦೩ | ಒಟ್ಟು ಮಾನವ ದಿನಗಳಲ್ಲಿ ಪರಿಶಿಷ್ಟ ಜಾತಿಯ ಮಾನವ ದಿನಗಳು (ಶೇ.) | ೧೫.೬೨ | ೧೫.೮೩ | ೧೬.೪೪ |
| ೦೪ | ಒಟ್ಟು ಮಾನವ ದಿನಗಳಲ್ಲಿ ಪರಿಶಿಷ್ಟ ಪಂಗಡದ ಮಾನವ ದಿನಗಳು (ಶೇ.) | ೧೧.೪೩ | ೯.೭೪ | ೧೧.೭೩ |
| ೦೫ | ಒಟ್ಟು ಮಾನವ ದಿನಗಳಲ್ಲಿ ಮಹಿಳೆಯರ ಮಾನವ ದಿನಗಳು(ಶೇ.) | ೪೬.೪೮ | ೪೬.೪೮ | ೪೭.೩೨ |

ಮೂಲ: MGNREGA.GOV.IN. ಅಂತರ್ಜಾಲ ತಾಣ

ಕೊಪ್ಪಳ ಜಿಲ್ಲೆಗೆ ೨೦೧೨-೧೩ರಲ್ಲಿ ಒಪ್ಪಿಗೆ ಸಿಕ್ಕಂತಹ ಕಾರ್ಮಿಕ ಬಜೆಟ್ ೨೬.೮೭ರಷ್ಟಿದೆ. ಈ ಅವಧಿಯಲ್ಲಿ ಜನರು ಭಾಗವಹಿಸಿ ಕಾರ್ಯಗತಗೊಳಿಸಿದ ಮಾನವ ದಿನಗಳು ೧೦.೨೯ರಷ್ಟಿದೆ. ಹಾಗೆಯೇ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಕ್ರಮವಾಗಿ ಶೇ. ೧೫.೬೨ ಮತ್ತು ಶೇ. ೧೧.೪೩ರ ಪ್ರಮಾಣದಲ್ಲಿ ಮಾನವ ದಿನಗಳನ್ನು ಪೂರ್ಣಗೊಳಿಸಿದ್ದಾರೆ. ಹಾಗೆಯೇ ಮಹಿಳೆಯರು ಪೂರ್ಣಗೊಳಿಸಿದ ಮಾನವ ದಿನಗಳು ಪ್ರಮಾಣ ಶೇ. ೪೬.೪೮ ರ ಪ್ರಮಾಣದಲ್ಲಿದೆ. ೨೦೧೩-೧೪ನೇ ಸಾಲಿನಲ್ಲಿ ಒಪ್ಪಿಗೆ ಸಿಕ್ಕಂತಹ ಕಾರ್ಮಿಕ ಬಜೆಟ್ ೧೨.೩೪ರಷ್ಟಿದೆ. ಕಾರ್ಯಗತಗೊಂಡ ಮಾನವ ದಿನಗಳು ೨೬.೪೨ರಷ್ಟಿದೆ. ಹಾಗೆಯೇ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡದ ಜನರು ಈ ಅವಧಿಯಲ್ಲಿ ಪೂರ್ಣಗೊಳಿಸಿದ

ಮಾನವ ದಿನಗಳು ಕ್ರಮವಾಗಿ ಶೇ. ೧೫.೮೩ಮತ್ತು ಶೇ. ೯.೭೪ರ ಪ್ರಮಾಣದಲ್ಲಿದೆ. ಇನ್ನು ಮಹಿಳೆಯರು ಪೂರ್ಣಗೊಳಿಸಿದ ಮಾನವ ದಿನಗಳ ಪ್ರಮಾಣ ಶೇ. ೪೬.೪೮ರಷ್ಟಿದೆ. ೨೦೧೪-೧೫ನೇ ಸಾಲಿನಲ್ಲಿ ಒಪ್ಪಿಗೆ ಸಿಕ್ಕಂತಹ ಕಾರ್ಮಿಕ ಬಜೆಟ್ ೨೪.೫೫ರಷ್ಟಿದೆ. ಕಾರ್ಯಗತಗೊಂಡ ಮಾನವ ದಿನಗಳೆಂದರೆ ೧೨.೨೮ರಷ್ಟಿದೆ. ಈ ಅವಧಿಯಲ್ಲಿ ಪರಿಶಿಷ್ಟ ಜಾತಿಯವರು ಶೇ. ೧೬.೪೪ರಷ್ಟು ಮತ್ತು ಪರಿಶಿಷ್ಟ ಪಂಗಡದವರು ಶೇ. . ೧೧.೭೩ ರಷ್ಟು ಪ್ರಮಾಣದಲ್ಲಿ ಹಾಗೆಯೇ ಮಹಿಳೆಯರು ಪೂರ್ಣಗೊಳಿಸಿದ ಮಾನವ ದಿನಗಳ ಪ್ರಮಾಣ ಶೇ. ೪೭.೩೨ರಷ್ಟಿದೆ. ಈ ಮೂರೂ ವರ್ಷಗಳಲ್ಲಿನ ಮಹಿಳೆಯರು ಈ ಯೋಜನೆಯಲ್ಲಿ ಪೂರ್ಣಗೊಳಿಸಿದ ಮಾನವ ದಿನಗಳ ಶೇಕಡಾವಾರು ಪ್ರಮಾಣವನ್ನು ಗಮನಿಸಿದರೆ ಶೇ.೫೦ಕ್ಕಿಂತ ಕಡಿಮೆ ಇರುವುದು ಕಂಡುಬರುತ್ತದೆ. ಮುಖ್ಯವಾಗಿ ಈ ಜಿಲ್ಲೆಯಲ್ಲಿ ಈ ಯೋಜನೆಯ ಕುರಿತಾದ ಅರಿವು ಇಲ್ಲದಿರುವುದು ಕಂಡುಬಂದಿದೆ. ಹಾಗಾಗಿ ಇಲ್ಲಿನ ಜನರು ಈ ಯೋಜನೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಪಾಲ್ಗೊಳ್ಳದಿರುವುದನ್ನು ಕ್ಷೇತ್ರಕಾರ್ಯದ ಮೂಲಕ ಕಂಡುಕೊಳ್ಳಲಾಗಿದೆ.

**ಉದ್ಯೋಗ ಖಾತರಿ ಯೋಜನೆಯಲ್ಲಿ ಹಣದ ನಿರ್ವಹಣೆ**

| ಕ್ರ.ಸಂ. | ಬಳಕೆಯಾದ ಹಣ | ವರ್ಷ | | |
|---|---|---|---|---|
| | | ೨೦೧೨-೧೩ | ೨೦೧೩-೧೪ | ೨೦೧೪-೧೫ |
| ೦೧ | ಕೂಲಿ (ಲಕ್ಷಗಳಲ್ಲಿ) | ೧,೭೦೫.೦೪ | ೪,೪೨೩.೧೮ | ೨,೭೯೯.೮೨ |
| ೦೨ | ಸಲಕರಣೆಗಳ ವೆಚ್ಚ (ಲಕ್ಷಗಳಲ್ಲಿ) | ೧,೭೦೫.೦೪ | ೨,೦೪೮.೮೩ | ೨,೧೮೯.೭೭ |
| ೦೩ | ಆಡಳಿತಾತ್ಮಕ ವೆಚ್ಚ (ಲಕ್ಷಗಳಲ್ಲಿ) | ೧೩೪.೫೪ | ೧೬೫.೬೮ | ೨೦೯.೪೩ |
| ೦೪ | ಒಟ್ಟು ವೆಚ್ಚ (ಲಕ್ಷಗಳಲ್ಲಿ) | ೪,೩೭೪.೭೯ | ೬,೬೩೭.೬೯ | ೫,೧೯೯.೦೩ |

ಮೂಲ: MGNREGA.GOV.IN. ಅಂತರ್ಜಾಲ ತಾಣ

ಕೊಪ್ಪಳ ಜಿಲ್ಲೆಯಲ್ಲಿ ೨೦೧೨-೧೩ನೇ ಸಾಲಿನಲ್ಲಿ ಉದ್ಯೋಗ ಖಾತರಿ ಯೋಜನೆಗಾಗಿ ಒಟ್ಟು ೪,೩೭೪.೭೯ ಲಕ್ಷ ಹಣವನ್ನು ವೆಚ್ಚ ಮಾಡಲಾಗಿದೆ. ಇದರಲ್ಲಿ ಕೂಲಿ, ಸಲಕರಣೆಗಳು ಮತ್ತು ಆಡಳಿತಾತ್ಮಕ ವೆಚ್ಚಗಳು ಮುಖ್ಯವಾಗಿ ಕಂಡುಬರುತ್ತವೆ. ಈ ಕೆಲಸಗಳಿಗಾಗಿ ಮಾಡಿದ ವೆಚ್ಚಗಳು ಕ್ರಮವಾಗಿ ೧,೭೦೫.೦೪, ೧,೭೦೫.೦೪, ೧೩೪.೫೪ ಇರುವುದನ್ನು ಕಾಣಬಹುದು. ೨೦೧೩-೧೪ನೇ ಸಾಲಿನಲ್ಲಿ ಈ ಯೋಜನೆಗಾಗಿ ಒಟ್ಟು ೬,೬೩೭.೬೯ರಷ್ಟು ಹಣವನ್ನು ವ್ಯಯ ಮಾಡಲಾಗಿದೆ. ಮುಖ್ಯವಾಗಿ ಈ ವೆಚ್ಚದಲ್ಲಿ ಕೂಲಿಗಾಗಿ ೪,೪೨೩.೧೮ರಷ್ಟು, ಸಲಕರಣೆಗಳಿಗಾಗಿ ೨,೦೪೮.೮೩ರಷ್ಟು ಮತ್ತು ಆಡಳಿತಾತ್ಮಕ ವೆಚ್ಚವಾಗಿ ೧೬೫.೬೮ರಷ್ಟು ಹಣವನ್ನು ವ್ಯಯ ಮಾಡಲಾಗಿದೆ. ಇನ್ನು ೨೦೧೪-೧೫ನೇ ಸಾಲಿನಲ್ಲಿ ಒಟ್ಟು ೫,೧೯೯.೦೩ರಷ್ಟು ಹಣವನ್ನು ವ್ಯಯಿಸಲಾಗಿದೆ. ಇದರಲ್ಲಿ ಕೂಲಿಗಾಗಿ ೨,೭೯೯.೮೨ರಷ್ಟು, ಸಲಕರಣೆಗಳಿಗಾಗಿ

೨,೧೮೯.೭೭ರಷ್ಟು ಮತ್ತು ಆಡಳಿತಾತ್ಮಕ ವೆಚ್ಚವಾಗಿ ೨೧೯.೪೩ರಷ್ಟು ಹಣವನ್ನು ವೆಚ್ಚ ಮಾಡಲಾಗಿದೆ. ಈ ಮೂರೂ ಅವಧಿಯಲ್ಲಿ ವ್ಯಯ ಮಾಡಿದ ಹಣವನ್ನು ಗಮನಿಸಿದರೆ ವರ್ಷದಿಂದ ವರ್ಷಕ್ಕೆ ಏರಿಕೆ ಮತ್ತು ಇಳಿಕೆ ಕ್ರಮದಲ್ಲಿ ಇರುವುದನ್ನು ಕಾಣಬಹುದಾಗಿದೆ.

ಕೊಪ್ಪಳ ಜಿಲ್ಲೆಯು ಒಟ್ಟು ನಾಲ್ಕು ತಾಲೂಕುಗಳನ್ನು ಹೊಂದಿದ್ದು, ಈ ನಾಲ್ಕು ತಾಲೂಕುಗಳಲ್ಲಿ ಪ್ರತಿಯೊಂದು ತಾಲೂಕಿನಲ್ಲಿನ ಐದು ಗ್ರಾಮ ಪಂಚಾಯತಿಗಳನ್ನು ಕ್ಷೇತ್ರಕಾರ್ಯಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಅವುಗಳ ವಿವರ ಈ ಕೆಳಗಿನಂತಿದೆ.

| ಕ್ರ.ಸಂ. | ತಾಲೂಕು | ಗ್ರಾ.ಪಂ. | ಜಾ.ಕಾ.ಅರ್ಜಿ ಒಟ್ಟು ಕುಟುಂಬ | ಒ.ಜಾ.ಕಾ. | ಒ.ಜಾ.ಕಾ. ಪಜಾ | ಒ.ಜಾ.ಕಾ. ಪಪಂ | ಇತರೆ |
|---|---|---|---|---|---|---|---|
| ೧. | ಗಂಗಾವತಿ | ಆನೆಗುಂದಿ | ೧೬೬೦ | ೧೬೫೯ | ೪೭೦ | ೩೬೫ | ೮೨೪ |
| | | ಚಿಕ್ಕಬೆಣಕಲ್ | ೧೫೯೨ | ೧೩೪೧ | ೨೧೯ | ೩೯೧ | ೭೩೧ |
| | | ಕೇಸರಹಟ್ಟಿ | ೧೬೫೮ | ೧೬೫೫ | ೧೬೪ | ೨೧೧ | ೧೨೮೦ |
| | | ಮಲ್ಲಾಪುರ | ೮೭೨ | ೮೬೭ | ೩೦೨ | ೧೭೬ | ೩೮೯ |
| | | ಸಂಗಾಪುರ | ೧೯೧೪ | ೧೯೧೪ | ೬೯೭ | ೨೦೦ | ೧೦೧೭ |
| ೨. | ಕೊಪ್ಪಳ | ಬೂದಗುಂಪ | ೧೭೫೪ | ೧೪೭೪ | ೧೯೯ | ೯೩ | ೧೧೮೨ |
| | | ಹಾಸಗಲ್ | ೧೩೬೮ | ೧೨೨೬ | ೩೩೦ | ೨೧೭ | ೬೭೯ |
| | | ಹಿರೇಬಗನಾಳ್ | ೧೫೨೧ | ೧೪೯೨ | ೨೦೮ | ೮೨ | ೧೨೦೨ |
| | | ಇಂದರಗಿ | ೧೩೧೮ | ೧೩೧೩ | ೨೩೪ | ೧೮೧ | ೮೯೮ |
| | | ಇರಕಲ್‌ಗಡ | ೧೯೦೩ | ೧೯೦೩ | ೩೧೧ | ೧೧೦ | ೧೪೮೨ |
| ೩. | ಕುಷ್ಟಗಿ | ಬೆನಕನಹಳ್ಳಿ | ೧೫೩೨ | ೧೪೭೫ | ೧೩೧ | ೫೭ | ೧೨೮೭ |
| | | ಹಿರೇಮನ್ನಾಪುರ | ೧೪೭೦ | ೧೪೬೮ | ೧೯೭ | ೧೦೮ | ೧೧೬೩ |
| | | ಕಬ್ಬರಗಿ | ೧೫೨೨ | ೧೫೧೯ | ೧೧೬ | ೨೨೨ | ೧೧೮೧ |
| | | ಕೊರಡಕೆರೆ | ೧೫೨೮ | ೧೫೨೭ | ೧೮೦ | ೨೯೯ | ೧೦೪೮ |
| | | ಸಂಗನಾಳ | ೨೧೩೦ | ೨೧೨೯ | ೨೩೧ | ೫೭೯ | ೧೩೧೯ |
| ೪. | ಯಲಬುರ್ಗಾ | ಬಳೂಟಗಿ | ೧೫೧೭ | ೧೫೧೭ | ೪೦೬ | ೪೭ | ೧೦೬೪ |
| | | ಬಂಡಿ | ೧೬೮೧ | ೧೬೭೯ | ೧೦೭ | ೧೧೭ | ೧೪೫೫ |
| | | ಬೆಣಕಲ್ | ೯೧೪ | ೯೦೪ | ೧೩೬ | ೬೯ | ೬೯೯ |
| | | ಬೇವೂರು | ೧೩೧೬ | ೧೩೧೬ | ೧೨೯ | ೧೦೮ | ೧೦೭೯ |
| | | ಹಿರೇವಂಕಲಕುಂಟ | ೨೬೨೮ | ೨೬೨೫ | ೨೫೫ | ೩೭೪ | ೧೯೯೬ |
| | | ಒಟ್ಟು | ೩೧೫೯೮ | ೩೧೦೦೩ | ೫೦೨೨ | ೪೦೦೬ | ೨೧೯೭೫ |

ಮೂಲ: MGNREGA.GOV.IN. ಅಂತರ್ಜಾಲ ತಾಣ

### ೨೦೧೪-೧೫ನೇ ಸಾಲಿನ ಗ್ರಾಮಪಂಚಾಯ್ತಿಗಳಲ್ಲಿನ ಜಾಬ್ ಕಾರ್ಡುಗಳ ಸಂಖ್ಯೆ

ಕೊಪ್ಪಳ ಜಿಲ್ಲೆಯ ನಾಲ್ಕು ತಾಲೂಕುಗಳ ಪೈಕಿ ಒಟ್ಟು ೨೦ ಗ್ರಾಮಪಂಚಾಯ್ತಿಗಳಲ್ಲಿನ ಜನರು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಜಾಬ್ ಕಾರ್ಡ್‌ಗಳನ್ನು ಹೊಂದಿರುವುದನ್ನು ಗುರುತಿಸಲಾಗಿದೆ. ಪರಿಶಿಷ್ಟ ಪಂಗಡದ ಜನರು ಪರಿಶಿಷ್ಟ ಜಾತಿಯವರಿಗಿಂತ ಈ ಗ್ರಾಮ ಪಂಚಾಯತಿಗಳಲ್ಲಿ ಕಡಿಮೆ ಸಂಖ್ಯೆಯಲ್ಲಿ ಪಾಲ್ಗೊಂಡಿರುವುದು ಕಂಡುಬರುತ್ತದೆ. ಮುಖ್ಯವಾಗಿ ಗಂಗಾವತಿ ತಾಲೂಕಿನ ಚಿಕ್ಕ ಬೆಣಕಲ್, ಕೇಸರಹಟ್ಟಿ, ಕುಷ್ಟಗಿ ತಾಲೂಕಿನ ಕಬ್ಬರಗಿ, ಕೊರಡಕೆರೆ, ಸಂಗನಾಳ ಹಾಗೆಯೇ ಯಲಬುರ್ಗ ತಾಲೂಕಿನ ಹಿರೇವಂಕಲಕುಂಟ ಗ್ರಾಮ ಪಂಚಾಯತಿಗಳಲ್ಲಿ ಪರಿಶಿಷ್ಟ ಪಂಗಡದ ಜನ ಪರಿಶಿಷ್ಟ ಜಾತಿಯವರಿಗಿಂತ ಅಲ್ಪ ಪ್ರಮಾಣದ ಅಧಿಕ ಸಂಖ್ಯೆಯನ್ನು ಹೊಂದಿರುವುದು ಕೋಷ್ಟಕದಿಂದ ತಿಳಿದುಬರುತ್ತದೆ. ಇತರೆ ಜಾತಿ ಜನಾಂಗಗಳೂ ಸಹ ಈ ಯೋಜನೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದಾರೆ. ಒಟ್ಟಾರೆಯಾಗಿ ಈ ೨೦ ಗ್ರಾಮ ಪಂಚಾಯತಿಗಳಲ್ಲಿ ಜಾಬ್‌ಕಾರ್ಡ್‌ಗಾಗಿ ಅರ್ಜಿ ಸಲ್ಲಿಸಿದ ಒಟ್ಟು ಕುಟುಂಬಗಳೆಂದರೆ ೩೧೫೯೮ರಷ್ಟಿದೆ. ಇದರಲ್ಲಿ ೩೧೦೦೩ರಷ್ಟು ಜನ ಜಾಬ್ ಕಾರ್ಡ್‌ಗಳನ್ನು ಹೊಂದಿದವರಾಗಿದ್ದಾರೆ. ಈ ಜಾಬ್‌ಕಾರ್ಡ್ ಹೊಂದಿದವರಲ್ಲಿ ಪರಿಶಿಷ್ಟ ಜಾತಿಯ ೫೦೨೨ ಮತ್ತು ಪರಿಶಿಷ್ಟ ಪಂಗಡದ ೪೦೦೬ ಮತ್ತು ಇತರೆ ಸಮುದಾಯದ ೨೧೯೭೫ರಷ್ಟು ಜನ ಈ ಯೋಜನೆಯಲ್ಲಿ ಜಾಬ್‌ಕಾರ್ಡ್‌ಗಳನ್ನು ಹೊಂದಿದವರಾಗಿದ್ದಾರೆ.

ಬಳ್ಳಾರಿ ಜಿಲ್ಲೆ : ಬಳ್ಳಾರಿ ಜಿಲ್ಲೆಯು ಈ ಉದ್ಯೋಗ ಖಾತರಿ ಯೋಜನೆಯನ್ನು ಅನುಷ್ಠಾನಕ್ಕೆ ತಂದಿದ್ದು ೨೦೧೨-೧೩ನೇ ಸಾಲಿನಿಂದ ಹಿಡಿದು ೨೦೧೪-೧೫ನೇ ಸಾಲಿನ ವರೆಗೆ ಈ ಜಿಲ್ಲೆಗೆ ಬಂದಂತಹ ಅನುದಾನ ಮತ್ತು ಈ ಅನುದಾನವನ್ನು ಬಳಕೆಮಾಡಿಕೊಂಡ ವಿವರಗಳನ್ನು ಈ ಕೆಳಗಿನಂತೆ ನೀಡಲಾಗಿದೆ.

| ಕ್ರ.ಸಂ. | ವಿಷಯ | ವರ್ಷ | | |
|---|---|---|---|---|
| | | ೨೦೧೨-೧೩ | ೨೦೧೩-೧೪ | ೨೦೧೪-೧೫ |
| ೦೧ | ಒಪ್ಪಿಗೆ ಸಿಕ್ಕ ಕಾರ್ಮಿಕ ಬಡ್ಜೆಟ್ (ಲಕ್ಷಗಳಲ್ಲಿ) | ೧೭.೫೩ | ೧೭.೫೫ | ೨೫.೦೯ |
| ೦೨ | ಕಾರ್ಯಗತಗೊಂಡ ಮಾನವ ದಿನಗಳು (ಲಕ್ಷಗಳಲ್ಲಿ) | ೧೪.೧೪ | ೧೫.೮೨ | ೯.೧ |
| ೦೩ | ಒಟ್ಟು ಮಾನವ ದಿನಗಳಲ್ಲಿ ಪರಿಶಿಷ್ಟ ಜಾತಿಯ ಮಾನವ ದಿನಗಳು (ಶೇ.) | ೨೦.೪೫ | ೨೦.೨೨ | ೨೧.೨ |
| ೦೪ | ಒಟ್ಟು ಮಾನವ ದಿನಗಳಲ್ಲಿ ಪರಿಶಿಷ್ಟ ಪಂಗಡದ ಮಾನವ ದಿನಗಳು (ಶೇ.) | ೨೩.೨೬ | ೨೧.೭೩ | ೨೦.೯೨ |
| ೦೫ | ಒಟ್ಟು ಮಾನವ ದಿನಗಳಲ್ಲಿ ಮಹಿಳೆಯರ ಮಾನವ ದಿನಗಳು (ಶೇ) | ೪೮.೧೧ | ೪೮.೩೨ | ೪೮.೭೩ |

ಮೂಲ: MNREGA.GOV.IN. ಅಂತರ್ಜಾಲ ತಾಣ

ಬಳ್ಳಾರಿ ಜಿಲ್ಲೆಗೆ ೨೦೧೨-೧೩ರಲ್ಲಿ ಒಪ್ಪಿಗೆ ಸಿಕ್ಕಂತಹ ಕಾರ್ಮಿಕ ಬಜೆಟ್ ೧೭.೫೩ರಷ್ಟಿದೆ. ಈ ಅವಧಿಯ ಯೋಜನೆಯಲ್ಲಿ ಜನರು ಭಾಗವಹಿಸಿ ಕಾರ್ಯಗತಗೊಳಿಸಿದ ಮಾನವ ದಿನಗಳು ೧೪.೧೪ರಷ್ಟಿದೆ. ಹಾಗೆಯೇ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಕ್ರಮವಾಗಿ ಶೇ.೨೦.೪೫ ಮತ್ತು ಶೇ.೨೩.೨೬ರ ಪ್ರಮಾಣದಲ್ಲಿ ಮಾನವ ದಿನಗಳನ್ನು ಪೂರ್ಣಗೊಳಿಸಿದ್ದಾರೆ. ಹಾಗೆಯೇ ಮಹಿಳೆಯರು ಪೂರ್ಣಗೊಳಿಸಿದ ಮಾನವ ದಿನಗಳು ಪ್ರಮಾಣ ಶೇ. ೪೮.೧೧ರ ಪ್ರಮಾಣದಲ್ಲಿದೆ. ೨೦೧೩-೧೪ನೇ ಸಾಲಿನಲ್ಲಿ ಒಪ್ಪಿಗೆ ಸಿಕ್ಕಂತಹ ಕಾರ್ಮಿಕ ಬಜೆಟ್ ೧೭.೫೫ರಷ್ಟಿದೆ. ಕಾರ್ಯಗತಗೊಂಡ ಮಾನವ ದಿನಗಳು ೧೫.೮೨ರಷ್ಟಿದೆ. ಹಾಗೆಯೇ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡದ ಜನರು ಈ ಅವಧಿಯಲ್ಲಿ ಪೂರ್ಣಗೊಳಿಸಿದ ಮಾನವ ದಿನಗಳು ಕ್ರಮವಾಗಿ ಶೇ. ೨೦.೨೨ ಮತ್ತು ಶೇ. ೨೧.೭೩ರ ಪ್ರಮಾಣದಲ್ಲಿದೆ. ಇನ್ನು ಮಹಿಳೆಯರು ಪೂರ್ಣಗೊಳಿಸಿದ ಮಾನವ ದಿನಗಳ ಪ್ರಮಾಣ ಶೇ. ೪೮.೩೨ರಷ್ಟಿದೆ.

೨೦೧೪-೧೫ನೇ ಸಾಲಿನಲ್ಲಿ ಒಪ್ಪಿಗೆ ಸಿಕ್ಕಂತಹ ಕಾರ್ಮಿಕ ಬಜೆಟ್ ೨೫.೦೯ರಷ್ಟಿದೆ. ಕಾರ್ಯಗತಗೊಂಡ ಮಾನವ ದಿನಗಳೆಂದರೆ ೯.೧ರಷ್ಟಿದೆ. ಈ ಅವಧಿಯಲ್ಲಿ ಪರಿಶಿಷ್ಟ ಜಾತಿಯವರು ಶೇ. ೨೧.೨ರಷ್ಟು ಮತ್ತು ಪರಿಶಿಷ್ಟ ಪಂಗಡದವರು ಶೇ. ೨೦.೯೨ರಷ್ಟು ಪ್ರಮಾಣದಲ್ಲಿ ಹಾಗೆಯೇ ಮಹಿಳೆಯರು ಪೂರ್ಣಗೊಳಿಸಿದ ಮಾನವ ದಿನಗಳ ಪ್ರಮಾಣ ಶೇ. ೪೮.೭೩ರಷ್ಟಿದೆ. ಈ ಮೂರೂ ವರ್ಷಗಳಲ್ಲಿನ ಮಹಿಳೆಯರು ಈ ಯೋಜನೆಯಲ್ಲಿ ಪೂರ್ಣಗೊಳಿಸಿದ ಮಾನವ ದಿನಗಳ ಶೇಕಡವಾರು ಪ್ರಮಾಣವನ್ನು ಗಮನಿಸಿದರೆ ಶೇ.೫೦ಕ್ಕಿಂತ ಕಡಿಮೆ ಇರುವುದು ಕಂಡುಬರುತ್ತದೆ.

**ಉದ್ಯೋಗ ಖಾತರಿ ಯೋಜನೆಯಲ್ಲಿ ಹಣದ ನಿರ್ವಹಣೆ**

| ಕ್ರ.ಸಂ. | ಬಳಕೆಯಾದ ಹಣ | ವರ್ಷ | | |
|---|---|---|---|---|
| | | ೨೦೧೨-೧೩ | ೨೦೧೩-೧೪ | ೨೦೧೪-೧೫ |
| ೦೧. | ಕೂಲಿ (ಲಕ್ಷಗಳಲ್ಲಿ) | ೨,೦೦೮.೯೪ | ೩,೦೦೯.೮೯ | ೧,೮೫೮.೬೯ |
| ೦೨ | ಸಲಕರಣೆಗಳ ವೆಚ್ಚ (ಲಕ್ಷಗಳಲ್ಲಿ) | ೮೩೪.೯೮ | ೮೬೫.೭೧ | ೭೮೧.೮೩ |
| ೦೩ | ಆಡಳಿತಾತ್ಮಕ ವೆಚ್ಚ (ಲಕ್ಷಗಳಲ್ಲಿ) | ೨೪೬.೧೮ | ೨೭೦.೦೭ | ೧೬೮.೫೧ |
| ೦೪ | ಒಟ್ಟು ವೆಚ್ಚ (ಲಕ್ಷಗಳಲ್ಲಿ) | ೩,೦೯೦.೦೯ | ೪,೧೪೫.೬೮ | ೨,೮೦೯.೦೩ |

ಮೂಲ: MNREGA.GOV.IN. ಅಂತರ್ಜಾಲ ತಾಣ

ಬಳ್ಳಾರಿ ಜಿಲ್ಲೆಯಲ್ಲಿ ೨೦೧೨-೧೩ನೇ ಸಾಲಿನಲ್ಲಿ ಉದ್ಯೋಗ ಖಾತರಿ ಯೋಜನೆಗಾಗಿ ಒಟ್ಟು ೩,೦೯೦.೦೯ ಲಕ್ಷ ಹಣವನ್ನು ವೆಚ್ಚ ಮಾಡಲಾಗಿದೆ. ಇದರಲ್ಲಿ ಕೂಲಿ, ಸಲಕರಣೆಗಳು ಮತ್ತು ಆಡಳಿತಾತ್ಮಕ ವೆಚ್ಚಗಳು ಮುಖ್ಯವಾಗಿ ಕಂಡುಬರುತ್ತವೆ. ಈ ಕೆಲಸಗಳಿಗಾಗಿ ಮಾಡಿದ

ವೆಚ್ಚಗಳು ಕ್ರಮವಾಗಿ ೨,೦೦೮.೯೪, ೮೩೪.೯೮, ೨೪೬.೧೮ ಇರುವುದನ್ನು ಕಾಣಬಹುದು. ೨೦೧೩-೧೪ನೇ ಸಾಲಿನಲ್ಲಿ ಈ ಯೋಜನೆಗಾಗಿ ಒಟ್ಟು ೪,೧೪೫.೬೮ ರಷ್ಟು ಹಣವನ್ನು ವ್ಯಯ ಮಾಡಲಾಗಿದೆ. ಮುಖ್ಯವಾಗಿ ಈ ವೆಚ್ಚದಲ್ಲಿ ಕೂಲಿಗಾಗಿ ೩,೦೦೯.೮೯ರಷ್ಟು, ಸಲಕರಣೆಗಳಿಗಾಗಿ ೮೬೫.೭೧ರಷ್ಟು ಮತ್ತು ಆಡಳಿತಾತ್ಮಕ ವೆಚ್ಚವಾಗಿ ೨೭೦.೦೭ರಷ್ಟು ಹಣವನ್ನು ವ್ಯಯ ಮಾಡಲಾಗಿದೆ. ಇನ್ನು ೨೦೧೪-೧೫ನೇ ಸಾಲಿನಲ್ಲಿ ಒಟ್ಟು ೨,೮೦೯.೦೩ರಷ್ಟು ಹಣವನ್ನು ವ್ಯಯಿಸಲಾಗಿದೆ. ಇದರಲ್ಲಿ ಕೂಲಿಗಾಗಿ ೧,೮೫೮.೬೯ರಷ್ಟು, ಸಲಕರಣೆಗಳಿಗಾಗಿ ೭೮೧.೮೩ರಷ್ಟು ಮತ್ತು ಆಡಳಿತಾತ್ಮಕ ವೆಚ್ಚವಾಗಿ ೧೬೮.೫೧ರಷ್ಟು ಹಣವನ್ನು ವೆಚ್ಚ ಮಾಡಲಾಗಿದೆ. ಈ ಮೂರೂ ಅವಧಿಯಲ್ಲಿ ವ್ಯಯ ಮಾಡಿದ ಹಣವನ್ನು ಗಮನಿಸಿದರೆ ವರ್ಷದಿಂದ ವರ್ಷಕ್ಕೆ ಏರಿಕೆ ಮತ್ತು ಇಳಿಕೆ ಕ್ರಮದಲ್ಲಿ ಇರುವುದನ್ನು ಕಾಣಬಹುದಾಗಿದೆ.

ಬಳ್ಳಾರಿ ಜಿಲ್ಲೆಯು ಒಟ್ಟು ಏಳು ತಾಲೂಕುಗಳನ್ನು ಹೊಂದಿದ್ದು, ಈ ಏಳು ತಾಲೂಕುಗಳಲ್ಲಿ ಪ್ರತಿಯೊಂದು ತಾಲೂಕಿನಲ್ಲಿನ ಐದು ಗ್ರಾಮ ಪಂಚಾಯತಿಗಳನ್ನು ಕ್ಷೇತ್ರಕಾರ್ಯಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಅವುಗಳ ವಿವರ ಈ ಕೆಳಗಿನಂತಿದೆ.

| ಕ್ರ.ಸಂ. | ತಾಲೂಕು | ಗ್ರಾ.ಪಂ. | ಜಾ.ಕಾ.ಅರ್ಜಿ ಒಟ್ಟು ಕುಟುಂಬ | ಒ.ಜಾ.ಕಾ. | ಒ.ಜಾ.ಕಾ. ಪಜಾ | ಒ.ಜಾ.ಕಾ. ಪಪಂ | ಇತರೆ |
|---|---|---|---|---|---|---|---|
| ೦೧ | ಬಳ್ಳಾರಿ | ಎಂ.ಗೋನಾಳ್ | ೭೮೯ | ೭೮೫ | ೧೫೦ | ೧೫೨ | ೪೮೩ |
| | | ಮೋಕಾ | ೧೬೧೧ | ೧೬೧೧ | ೧೬೦ | ೭೩೨ | ೭೧೯ |
| | | ಸಂಗನಕಲ್ | ೧೪೩೪ | ೧೪೩೪ | ೫೩೦ | ೬೫ | ೮೩೯ |
| | | ಸಿರಿವಾರ | ೯೫೯ | ೯೫೯ | ೨೧೬ | ೧೫೩ | ೫೯೦ |
| | | ಯರಗುಡಿ | ೧೧೬೪ | ೧೧೬೦ | ೧೨೩ | ೫೮೫ | ೪೫೨ |
| ೦೨. | ಹಡಗಲಿ | ಹಿರೇಮಲ್ಲನಕೆರೆ | ೧೦೫೫ | ೧೦೫೪ | ೭೫೦ | ೭೦ | ೨೩೪ |
| | | ಹೊಳಗುಂದಿ | ೧೨೪೫ | ೧೨೪೫ | ೨೭೩ | ೭ | ೯೬೫ |
| | | ಪಶ್ಚಿಮಕಾಲ್ವಿ | ೧೨೦೩ | ೧೨೦೩ | ೭೬೪ | ೩೮ | ೪೦೧ |
| | | ಸೋಗಿ | ೧೬೭೮ | ೧೬೭೭ | ೪೮೯ | ೭೭ | ೧೧೫೧ |
| | | ಸೋವೇನಹಳ್ಳಿ | ೮೩೩ | ೮೩೩ | ೪೧೩ | ೬೨ | ೩೫೮ |
| ೦೩. | ಹಗರಿಬೊಮ್ಮನಹಳ್ಳಿ | | | | | | |
| | | ಅಲಬೂರು | ೧೦೬೪ | ೧೦೫೬ | ೯೩ | ೫೯ | ೯೦೪ |
| | | ಚಿಂತ್ರಪಳ್ಳಿ | ೧೨೫೯ | ೧೨೫೯ | ೧೫೧ | ೧೮೫ | ೯೨೩ |
| | | ಹಂಪಸಾಗರ | ೧೦೬೯ | ೧೦೬೯ | ೨೨೩ | ೧೧೭ | ೭೨೯ |
| | | ಕಡ್ಲಬಾಳ | ೧೦೧೦ | ೧೦೧೦ | ೯೯ | ೧೫೬ | ೭೫೫ |

| | | | | | | | |
|---|---|---|---|---|---|---|---|
| | | ಕೋಗಳಿ | ೧೨೯೮ | ೧೨೯೫ | ೫೫೦ | ೧೪೯ | ೫೯೬ |
| ೦೪. | ಹೊಸಪೇಟೆ | ದಣಾಪುರ | ೧೪೮೫ | ೧೪೭೦ | ೨೮೨ | ೨೬೮ | ೯೨೦ |
| | | ಬೈಲುವದ್ದಿಗೇರಿ | ೧೪೩೭ | ೧೪೩೨ | ೨೦೨ | ೨೫೩ | ೯೭೭ |
| | | ಗಾದಿಗನೂರು | ೭೪೦ | ೭೨೩ | ೧೨೭ | ೧೪೨ | ೪೫೪ |
| | | ಹಂಪಿ | ೫೮೦ | ೫೭೮ | ೧೨೧ | ೨೧೯ | ೨೩೮ |
| | | ಪಾಪಿನಾಯಕನಹಳ್ಳಿ | ೧೪೫೩ | ೧೨೮೯ | ೩೭೪ | ೩೨೫ | ೫೯೦ |
| ೦೫. | ಕೂಡ್ಲಿಗಿ | ಬಣವಿಕಲ್ಲು | ೧೫೦೩ | ೧೫೦೩ | ೨೨೩ | ೪೦೭ | ೮೭೩ |
| | | ಬೆಳಗಟ್ಟ | ೧೨೭೧ | ೧೨೭೧ | ೨೦೩ | ೭೫೯ | ೩೦೯ |
| | | ಚೌಡಾಪುರ | ೧೩೫೪ | ೧೩೫೨ | ೧೪೭ | ೪೬೨ | ೭೪೩ |
| | | ಪೂಜಾರಹಳ್ಳಿ | ೧೩೩೭ | ೧೩೩೦ | ೨೮೩ | ೬೨೩ | ೪೨೪ |
| | | ಸೂಲದಹಳ್ಳಿ | ೧೧೬೦ | ೧೧೬೦ | ೧೦೦ | ೭೧೬ | ೩೪೪ |
| ೦೬. | ಸಂಡೂರು | ಬುಜಂಗನಗರ | ೫೭೪ | ೫೭೪ | ೧೯೦ | ೫೧ | ೩೩೩ |
| | | ಕೃಷ್ಣನಗರ | ೬೮೬ | ೬೮೬ | ೧೦೦ | ೨೫ | ೫೬೧ |
| | | ನರಸಿಂಗಪುರ | ೬೧೧ | ೬೧೧ | ೯೩ | ೨೫೭ | ೨೬೧ |
| | | ತಾರಾನಗರ | ೮೭೯ | ೮೭೯ | ೧೧೦ | ೧೯೬ | ೫೭೩ |
| | | ತೋರಣಗಲ್ | ೩೭೩ | ೩೭೩ | ೫೫ | ೨೩ | ೨೯೫ |
| ೦೭. | ಸಿರಗುಪ್ಪ | ಬಾಗೇವಾಡಿ | ೧೦೫೯ | ೧೦೫೭ | ೩೨೮ | ೧೩೫ | ೫೯೪ |
| | | ಹಚ್ಚೋಳಿ | ೭೬೦ | ೭೩೪ | ೨೧೬ | ೧೧೩ | ೪೦೫ |
| | | ಕುಡುದುರಾಳ್ | ೪೮೮ | ೪೮೮ | ೧೬೬ | ೮೬ | ೨೩೬ |
| | | ರಾರಾವಿ | ೫೨೫ | ೫೧೩ | ೬೮ | ೯೩ | ೩೫೨ |
| | | ಸಿರಿಗೇರಿ | ೧೩೨೨ | ೧೩೨೨ | ೨೭೬ | ೩೯೭ | ೬೪೯ |
| | | ಒಟ್ಟು | ೩೭೨೬೮ | ೩೬೯೯೩ | ೮೬೦೮ | ೮೧೫೭ | ೨೦೧೯೪ |

ಮೂಲ: MNREGA.GOV.IN. ಅಂತರ್ಜಾಲ ತಾಣ

**೨೦೧೪-೧೫ನೇ ಸಾಲಿನ ಗ್ರಾಮಪಂಚಾಯ್ತಿಗಳಲ್ಲಿನ ಜಾಬ್ ಕಾರ್ಡುಗಳ ಸಂಖ್ಯೆ**

ಬಳ್ಳಾರಿ ಜಿಲ್ಲೆಯ ಏಳು ತಾಲೂಕುಗಳ ಪೈಕಿ ಒಟ್ಟು ೩೫ ಗ್ರಾಮಪಂಚಾಯ್ತಿಗಳಲ್ಲಿನ ಜನರು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಜಾಬ್‌ಕಾರ್ಡ್‌ಗಳನ್ನು ಹೊಂದಿರುವುದನ್ನು ಗುರುತಿಸಲಾಗಿದೆ. ಒಟ್ಟಾರೆಯಾಗಿ ಈ ೩೫ ಗ್ರಾಮ ಪಂಚಾಯತಿಗಳಲ್ಲಿ

ಜಾಬ್‌ಕಾರ್ಡ್‌ಗಾಗಿ ಅರ್ಜಿ ಸಲ್ಲಿಸಿದ ಒಟ್ಟು ಕುಟುಂಬಗಳೆಂದರೆ ೩೭೨೬೮ ರಷ್ಟಿದೆ. ಇದರಲ್ಲಿ ೩೬೯೩ ರಷ್ಟು ಜನ  ಜಾಬ್ ಕಾರ್ಡ್‌ಗಳನ್ನು ಹೊಂದಿದವರಾಗಿದ್ದಾರೆ. ಈ ಜಾಬ್‌ಕಾರ್ಡ್ ಹೊಂದಿದವರಲ್ಲಿ ಪರಿಶಿಷ್ಟ ಜಾತಿಯ ೮೬೦೮ ಮತ್ತು ಪರಿಶಿಷ್ಟ ಪಂಗಡದ ೮೧೫೭ ಮತ್ತು ಇತರೆ ಸಮುದಾಯದ ೨೦೧೯ಳರಷ್ಟು ಜನ ಈ ಯೋಜನೆಯಲ್ಲಿ ಜಾಬ್‌ಕಾರ್ಡ್‌ಗಳನ್ನು ಹೊಂದಿದವರಾಗಿದ್ದಾರೆ. ಪ್ರತೀ ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿನ ಜಾಬ್ ಕಾರ್ಡ್‌ಗಳಿಗಾಗಿ ಅರ್ಜಿ ಸಲ್ಲಿಸಿರುವ ಮತ್ತು ಜಾಬ್ ಕಾರ್ಡ್ ಹೊಂದಿರುವವರ ಸಂಖ್ಯೆಯನ್ನು ಗಮನಿಸಿದರೆ ತುಂಬಾ ಕಡಿಮೆ ಪ್ರಮಾಣದಲ್ಲಿ ಉದ್ಯೋಗ ಖಾತರಿ ಯೋಜನೆಯಲ್ಲಿ ಭಾಗವಹಿಸಿರುವುದನ್ನು ಸೂಚಿಸುತ್ತದೆ. ಮುಖ್ಯವಾಗಿ ಪ್ರತೀ ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿ ಹಲವು ಹಳ್ಳಿಗಳು ಒಳಪಡುತ್ತವೆ. ಪ್ರತಿಯೊಂದು ಹಳ್ಳಿಯಲ್ಲೂ ಕೂಡ ಅಂದಾಜು ೫೦೦ಕ್ಕಿಂತ ಅಧಿಕ ಜನರು ವಾಸವಾಗಿರುತ್ತಾರೆ. ಇದನ್ನು ದೃಷ್ಟಿಯಲ್ಲಿಟ್ಟುಕೊಂಡು ನೋಡುವುದಾದರೆ ಈ ಮೇಲಿನ ಸಂಖ್ಯೆಯ ಜನರು ತುಂಬಾ ಕಡಿಮೆ ಪ್ರಮಾಣದಲ್ಲಿರುವುದು ಕಂಡುಬರುತ್ತದೆ. ಮುಖ್ಯವಾಗಿ ಉದ್ಯೋಗ ಖಾತರಿ ಯೋಜನೆಯು ಗ್ರಾಮದ ಪ್ರತಿಯೊಬ್ಬರಿಗೂ ಉದ್ಯೋಗವನ್ನು ಕಲ್ಪಿಸುವಂತಹದ್ದಾಗಿದೆ. ಆದರೆ ಮೇಲಿನ ಎಲ್ಲಾ ಜಿಲ್ಲೆಗಳ ಅಂಕಿ ಅಂಶಗಳನ್ನು ಗಮನಿಸಿದರೆ ಈ ಯೋಜನೆಯು ಸರಿಯಾಗಿ ಅನುಷ್ಠಾನಕ್ಕೆ ಬಂದಿಲ್ಲ ಎಂಬುದನ್ನು ಸೂಚಿಸುತ್ತದೆ.  ಒಟ್ಟಾರೆಯಾಗಿ ರಾಜ್ಯ, ಜಿಲ್ಲೆ, ತಾಲೂಕು ಮತ್ತು ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಜಾಬ್‌ಕಾರ್ಡ್‌ಗಳಿಗಾಗಿ ಅರ್ಜಿ ಸಲ್ಲಿಸಿದ ಒಟ್ಟು ಕುಟುಂಬಗಳು ಮತ್ತು ಜಾಬ್‌ಕಾರ್ಡ್ ಪಡೆದವರ ಒಟ್ಟು ಸಂಖ್ಯೆ ಹಾಗೆಯೇ ಜಾಬ್‌ಕಾರ್ಡ್ ಪಡೆದವರಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಸಮುದಾಯದ ಜನರ ಒಟ್ಟು ಸಂಖ್ಯೆಯನ್ನು ಹಾಗೆಯೇ ಪ್ರತೀ ಜಿಲ್ಲೆಗೆ ಬಂದಂತಹ ಅನುದಾನ ಮತ್ತು ಈ ಅನುದಾನದ ಬಳಕೆಯ ಕುರಿತು ಸಂಪೂರ್ಣವಾದ ಮಾಹಿತಿಯನ್ನು ಮೇಲಿನ ಕೋಷ್ಟಕಗಳ ಮೂಲಕ ಸ್ಪಷ್ಟಪಡಿಸಿಕೊಳ್ಳಬಹುದಾಗಿದೆ.

ರಾಯಚೂರು, ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಗಳು ಹಿಂದುಳಿದ ಜಿಲ್ಲೆಗಳಾಗಿದ್ದರಿಂದ ಈ ಜಿಲ್ಲೆಗಳಲ್ಲಿ ಜಾರಿಯಾಗುವಂತಹ ಯಾವುದೇ ಯೋಜನೆಗಳಾಗಲೀ ಅವುಗಳು ಜನರಿಗೆ ನೇರವಾಗಿ ತಲುಪಬೇಕು. ಆದರೆ ಇದು ಹಾಗಾಗುತ್ತಿಲ್ಲ. ಮುಖ್ಯವಾಗಿ ಉದ್ಯೋಗ ಖಾತರಿ ಯೋಜನೆಗಾಗಿ ಹಲವು ಕೋಟಿಗಳಷ್ಟು ಹಣವನ್ನು ಮೀಸಲಾಗಿಡಲಾಗಿರುತ್ತದೆ. ಈ ಹಣದ ಬಳಕೆ ಮಾತ್ರ ತುಂಬಾ ನಿಧಾನಗತಿಯಲ್ಲಿರುವುದು ಕೋಷ್ಟಕಗಳಿಂದ ತಿಳಿಯುತ್ತದೆ. ಹಾಗೆಯೇ ಈ ಜಿಲ್ಲೆಗಳಲ್ಲಿ ಜನರು ಈ ಯೋಜನೆಯಲ್ಲಿ ಪಾಲ್ಗೊಳ್ಳುವಿಕೆ ತುಂಬಾ ನೀರಸವಾಗಿರುವುದು ಕಂಡುಬರುತ್ತದೆ. ಮುಖ್ಯವಾಗಿ ಮಹಿಳೆಯರ ಪಾಲ್ಗೊಳ್ಳುವಿಕೆ ರಾಯಚೂರು ಜಿಲ್ಲೆಯನ್ನು ಹೊರತುಪಡಿಸಿದರೆ ಇನ್ನುಳಿದ ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಶೇ. ೫೦ಕ್ಕಿಂತ ಕಡಿಮೆ

ಇರುವುದು ಕಂಡುಬಂದಿದೆ. ಈ ಭಾಗದಲ್ಲಿನ ಜನರಿಗೆ ಈ ಯೋಜನೆಯ ಸಂಪೂರ್ಣವಾದ ಅರಿವು ಇಲ್ಲದಾಗಿದೆ. ಯೋಜನೆಯ ಅರಿವು ಇಲ್ಲದಿರುವುದಕ್ಕೆ ಹಲವು ಕಾರಣಗಳಿವೆ. ಅವುಗಳನ್ನು ಮುಂದಿನ ಹಂತದಲ್ಲಿ ವಿವರಿಸಲಾಗಿದೆ. ಹಾಗೆಯೇ ಉದ್ಯೋಗ ಖಾತರಿ ಯೋಜನೆಯನ್ನು ರಾಜ್ಯದ ಪ್ರತೀ ಜಿಲ್ಲೆಗಳಲ್ಲಿಯೂ ಜಾರಿಯಲ್ಲಿರುವುದಕ್ಕೆ ಮತ್ತು ಈ ಯೋಜನೆಯಲ್ಲಿ ಭಾಗವಹಿಸಿದ ಜನರ ಮತ್ತು ವೆಚ್ಚ ಮಾಡಿದ ಹಣದ ಕುರಿತಾಗಿ ಹಲವಾರು ದಾಖಲೆಗಳಿವೆ. ಆದರೆ ಈ ದಾಖಲೆಗಳು ಕೇವಲ ದಾಖಲೆ ಪುಸ್ತಕಕ್ಕೆ ಮಾತ್ರ ಸೀಮಿತವಾಗಿವೆ. ಏಕೆಂದರೆ ವಾಸ್ತವದಲ್ಲಿ ಈ ಬಗೆಯ ಕೆಲಸ ಕಾರ್ಯಗಳು ನಡೆದಿಲ್ಲ. ಇದನ್ನು ಕ್ಷೇತ್ರ ಕಾರ್ಯದ ಮೂಲಕ ಕಂಡುಕೊಳ್ಳಲಾಗಿದೆ. ಈ ಎಲ್ಲಾ ಮಾಹಿತಿಯನ್ನು ಮುಂದಿಟ್ಟುಕೊಂಡು ಮುಂದಿನ ಹಂತದಲ್ಲಿ ಯೋಜನೆಯ ಕುರಿತಂತೆ ಕ್ಷೇತ್ರಕಾರ್ಯದ ಮೂಲಕ ಕಂಡುಕೊಂಡ ಮಾಹಿತಿಯ ಆಧಾರದ ಮೇಲೆ ಲಿಂಗ ಸಂಬಂಧಿ ನೆಲೆಯಲ್ಲಿ ವಿವರಿಸಲು ಪ್ರಯತ್ನಿಸಲಾಗಿದೆ. ಮುಖ್ಯವಾಗಿ ಈ ಭಾಗದಲ್ಲಿ ಹಿಂದೆ ಹೇಳಿದಂತೆ ಪರಿಮಾಣಾತ್ಮಕ ಸಂಶೋಧನಾ ವಿಧಾನವನ್ನು ಅಳವಡಿಸಿಕೊಳ್ಳುವುದರ ಮೂಲಕ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಮುಂದಿನ ಹಂತದಲ್ಲಿ ಗುಣಾತ್ಮಕ ಮತ್ತು ಲೈಂಗಿಕತಾವಾದಿಯಲ್ಲದ ಸಂಶೋಧನಾ ವಿಧಾನವನ್ನು ಅಳವಡಿಕೊಳ್ಳುವುದರ ಮೂಲಕ ಈ ಯೋಜನೆಯು ಸಫಲವಾಗಿದೆಯೇ ಅಥವಾ ವಿಫಲವಾಗಿದೆಯೇ? ಒಂದುವೇಳೆ ಯೋಜನೆಯು ತನ್ನ ಉದ್ದೇಶಗಳನ್ನು ಈಡೇರಿಸಿಕೊಳ್ಳುವಲ್ಲಿ ವಿಫಲತೆಯನ್ನು ಅನುಭವಿಸಿದ್ದರೆ ಅದಕ್ಕೆ ಕಾರಣಗಳೇನು? ಮಹಿಳೆಯರ ಮತ್ತು ಪುರುಷರ ಪಾಲ್ಗೊಳ್ಳುವಿಕೆ ಯಾವ ಪ್ರಮಾಣದಲ್ಲಿದೆ? ಯೋಜನೆಯ ರೂಪಿಸುವ ಮತ್ತು ಅನುಷ್ಠಾನಕ್ಕೆ ತರುವ ಹಂತದಲ್ಲಿ ಲಿಂಗ ಅಸಮಾನತೆಯ ಅಂಶಗಳೇನಾದರೂ ಗೋಚರಿಸುತ್ತವೆಯೇ? ಮತ್ತು ಈ ಕಾರಣಗಳಿಗಾಗಿ ಮಹಿಳೆಯರು ಹಿಂಸೆ ಅನುಭವಿಸುತ್ತಿದ್ದಾರೆಯೇ? ಎಂಬಂತಹ ಅಂಶಗಳನ್ನು ವಿಶ್ಲೇಷಣೆಗೆ ಒಳಪಡಿಸಲಾಗುವುದು. ಹೀಗೆ ಈ ಎಲ್ಲಾ ವಾಸ್ತವ ಅಂಶಗಳನ್ನು ಅರಿಯಬೇಕಾದರೆ ಕ್ಷೇತ್ರಕಾರ್ಯ ಅಧ್ಯಯನದ ಮೂಲಕವೇ ಸಾಧ್ಯವಾಗುತ್ತದೆ. ಅಧ್ಯಯನ ಕ್ಷೇತ್ರದ ವ್ಯಾಪ್ತಿಯಲ್ಲಿ ಉದ್ಯೋಗ ಖಾತರಿ ಯೋಜನೆಯು, ರೂಪಿತಗೊಳ್ಳುವ ಹಂತದಿಂದ ಹಿಡಿದು ಅನುಷ್ಠಾನದ ಮತ್ತು ಕಾಮಗಾರಿಗಳ ಮುಕ್ತಾಯದ ಹಂತದವರೆಗೂ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದೆ. ಆ ಸಮಸ್ಯೆಗಳಲ್ಲಿ ಲಿಂಗ ಅಸಮಾನತೆಯ ಅಂಶಗಳು ಹೆಚ್ಚಾಗಿ ಗೋಚರಿಸುತ್ತಿವೆ. ಇಲ್ಲಿ ಇನ್ನೊಂದು ಮುಖ್ಯ ಅಂಶವೆಂದರೆ ಈ ಲಿಂಗ ಅಸಮಾನತೆಯ ಪರಿಣಾಮ ನೇರವಾಗಿ ಮಹಿಳೆಯರ ಮೇಲೆಯೇ ಹೆಚ್ಚಾಗಿ ಆಗುತ್ತಿದೆ. ಆ ಕಾರಣಕ್ಕಾಗಿ ಮಹಿಳೆಯರು ಕುಟುಂಬದಲ್ಲಿ ಮತ್ತು ಕುಟುಂಬದಾಚೆಗೆ ಹಲವಾರು ಸಮಸ್ಯೆಗಳಿಗೆ ಒಳಗಾಗಿದ್ದಾರೆ. ಯೋಜನೆಯನ್ನು ರೂಪಿಸುವ ಹಂತದಲ್ಲಿ, ಗ್ರಾಮ ಸಭೆಗಳಲ್ಲಿ ಭಾಗವಹಿಸುವ ಮತ್ತು ಈ ಸಭೆಗಳಲ್ಲಿ ತಮ್ಮ ನಿರ್ಣಯಗಳನ್ನು ಹೇಳುವಲ್ಲಿ ಮಹಿಳೆಯರ ಪಾತ್ರ ತುಂಬಾ ಗೌಣವಾಗಿದೆ. ಹಾಗೆಯೇ ಯೋಜನೆಯ ಕಾಮಗಾರಿ

ಸ್ಥಳಗಳಲ್ಲಿ ಲಿಂಗ ಅಸಮಾನತೆಯ ಅಂಶಗಳು ಮಹಿಳೆಯರನ್ನು ಪುರುಷನ ಅಧೀನಗೊಳಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿವೆ. ಮಹಿಳೆ ಜಾತಿಯ ಕಾರಣಕ್ಕಾಗಿ, ಮಹಿಳೆ ಎಂಬ ಕಾರಣಕ್ಕಾಗಿ ಅಸಮಾನತೆಯ ಪರಿಣಾಮಗಳಿಗೆ ಬಲಿಯಾಗುತ್ತಿದ್ದಾಳೆ. ಹಾಗಾಗಿ ಈ ಅಧ್ಯಾಯವು ಪ್ರಸ್ತುತ ಸಂಶೋಧನೆಯ ಮುಖ್ಯ ಘಟಕವಾಗಿದೆ. ಮುಖ್ಯವಾಗಿ ಲಿಂಗ ಸಂಬಂಧಿ ಆಯಾಮಗಳ ವಿವಿಧ ಬಗೆಯ ಭಿನ್ನತೆಗಳನ್ನು ಸಂದರ್ಶನದ ಮಾತುಗಳ ಮೂಲಕ ಕಟ್ಟಿಕೊಡಲು ಪ್ರಯತ್ನಿಸಲಾಗಿದೆ. ಈ ಮಾತುಗಳಲ್ಲಿ ಲಿಂಗ ಸಂಬಂಧಿ ಅಸಮಾನತೆಯ ಸೂಕ್ಷ್ಮಗಳು ಎಳೆ ಎಳೆಯಾಗಿ ಬಿಚ್ಚಿಕೊಳ್ಳುತ್ತಾ ಹೋಗುತ್ತವೆ. ಹಾಗಾಗಿ ಈ ಅಧ್ಯಾಯದಲ್ಲಿ ಸಂದರ್ಶನದ ಮಾತುಗಳೆ ಮುಖ್ಯ ಭಿತ್ತಿಯಾಗಿದೆ. ನಾವು ಒಟ್ಟಾರೆ ನೋಡುವಾಗ ಈ ಯೋಜನೆ ಸ್ವರೂಪಕ್ಕೂ ಸಂದರ್ಶನದ ಮಾತುಗಳಲ್ಲಿ ಕಾಣುವ ಯೋಜನೆಯ ಸ್ವರೂಪಕ್ಕೂ ತುಂಬಾ ಅಂತರವಿರುವುದು ಕಂಡುಬರುತ್ತದೆ. ಹೈದರಾಬಾದ್ ಕರ್ನಾಟಕದ ಮೂರು ಜಿಲ್ಲೆಗಳನ್ನು ನೋಡಿದಾಗಲೂ ಆಯಾ ಗ್ರಾಮದ ರಚನೆಯ ನೆಲೆಯಲ್ಲಿ ಸಮಸ್ಯೆಯ ಸ್ವರೂಪಗಳು ಬದಲಾಗಿರುವುದು ಕಾಣುತ್ತದೆ. ಅಂತೆಯೇ ಮಹಿಳೆಯರ ನಿರೂಪಣೆಗಳು ಕೇವಲ ಆಡಳಿತಾತ್ಮಕ ಟೀಕೆಗಳಂತೆ ಇರದೆ ಒಟ್ಟಾರೆ ಈ ಭಾಗದ ಸಾಮಾಜಿಕ ಜೀವನ ಮತ್ತು ಗ್ರಾಮ ಜೀವನದ ವಾಸ್ತವ ಸಂಗತಿಗಳ ಬಗ್ಗೆ ಗಮನಸೆಳೆಯುವಂತೆಯೂ ಇವೆ. ಈ ಅಧ್ಯಾಯದಲ್ಲಿ ಉಪ ಶೀರ್ಷಿಕೆಗಳ ಅಡಿಯಲ್ಲಿ ಆಯಾ ವಿಷಯಗಳ ಬಗೆಗಿನ ಮಾತುಗಳನ್ನು ದಾಖಲಿಸುತ್ತಾ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಲಿಂಗ ಅಸಮಾನತೆಯ ಅಂಶಗಳು ಪ್ರತೀ ಹಂತದಲ್ಲಿಯೂ ಕಂಡುಬರುತ್ತಿವೆ. ಆ ಕಾರಣಕ್ಕಾಗಿ ಮುಖ್ಯವಾಗಿ ಈ ಲಿಂಗ ಅಸಮಾನತೆಯ ಅಂಶಗಳನ್ನು ಗುರುತಿಸುವ ಸಲುವಾಗಿ ಕೆಲವು ಭಾಗಗಳನ್ನಾಗಿ ಮಾಡಿಕೊಂಡು ವಿಶ್ಲೇಷಣೆಗೆ ಒಳಪಡಿಸಲಾಗಿದೆ.

೧. ಯೋಜನೆಯ ರೂಪಿಸುವ ಹಂತ

೨. ಯೋಜನೆಯ ಅನುಷ್ಠಾನದ ಹಂತ

೩. ಯೋಜನೆಯ ಕಾಮಗಾರಿಗಳ ಮುಕ್ತಾಯದ ಹಂತ

**೧.೨. ಯೋಜನೆಯ ರೂಪಿಸುವ ಹಂತ**

ಉದ್ಯೋಗ ಖಾತರಿ ಯೋಜನೆಯನ್ನು ಪ್ರತೀ ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿ ರೂಪಿಸಲಾಗುತ್ತದೆ. ಕಾಮಗಾರಿಗಳನ್ನು ಗುರುತಿಸುವ ಮತ್ತು ರೂಪುರೇಷೆಯನ್ನು ಸಿದ್ಧಪಡಸುವ ಹಂತದಲ್ಲಿ ಗ್ರಾಮಗಳಲ್ಲಿನ ಜನರ, ಗ್ರಾಮ ಪಂಚಾಯತಿ ಚುನಾಯಿತ ಸದಸ್ಯರ ಮತ್ತು ಗ್ರಾಮ ಪಂಚಾಯತಿಯ ಅಧಿಕಾರಿ ವರ್ಗದವರ ಪಾತ್ರ ಬಹಳ ಮುಖ್ಯವಾಗಿರುತ್ತದೆ. ಇದರಲ್ಲಿ ಗ್ರಾಮದ ಜನರ ಪಾತ್ರ ಬಹಳ ಪ್ರಮುಖವಾಗಿರುತ್ತದೆ. ಗ್ರಾಮ ಸಭೆಗಳನ್ನು ಮಾಡುವುದರ ಮೂಲಕ ಕಾಮಗಾರಿಗಳನ್ನು ಗುರುತಿಸಿಕೊಳ್ಳುವುದು ಯೋಜನೆಯ ಮುಖ್ಯ ಉದ್ದೇಶ. ಗ್ರಾಮ

ಸಭೆಗಳನ್ನು ಕಡ್ಡಾಯವಾಗಿ ಮಾಡಬೇಕೆಂದು ಉದ್ಯೋಗ ಖಾತರಿ ಕಾಯಿದೆಯೇ ಸೂಚಿಸುತ್ತದೆ. ಈ ಯೋಜನೆ ಜನ ಯೋಜನೆಯೆಂದೆ ಎಂದೇ ಕರೆಯಲ್ಪಟ್ಟಿದೆ. ಅಂದರೆ ಜನರಿಗಾಗಿ ಜನರೇ ಸಿದ್ಧಪಡಿಸಿ ಕಾರ್ಯರೂಪಕ್ಕೆ ತರುವ ಯೋಜನೆಯೇ ಜನ ಯೋಜನೆಯಾಗಿದೆ. ಹೀಗೆ ಜನರೇ ಯೋಜನೆಯ ರೂಪಿಸುವಿಕೆಯಲ್ಲಿ ನೇರವಾಗಿ ಪಾಲ್ಗೊಳ್ಳಲು ಅವಕಾಶ ಮಾಡಿಕೊಟ್ಟಿರುವುದಕ್ಕೆ ಕಾರಣವೂ ಇದೆ. ಏನೆಂದರೆ ಈ ಹಿಂದಿನ ಯೋಜನೆಗಳೆಲ್ಲಾ ರೂಪಿತವಾಗಿರುವುದು ಗ್ರಾಮದಿಂದ ಆಚೆ ದೂರದ ಪ್ರದೇಶಗಳಲ್ಲಿ ಅಂದರೆ ಯೋಜನೆಯನ್ನು ರೂಪಿಸುವವರು ಗ್ರಾಮಗಳಲ್ಲಿನ ಸಮಸ್ಯೆಗಳ ಬಗ್ಗೆಯಾಗಲೀ ಅಥವಾ ಬೇಕುಬೇಡುಗಳ ಬಗ್ಗೆಯಾಗಲೀ ಗಮನಹರಿಸುತ್ತಿರಲಿಲ್ಲ. ಆ ಕಾರಣಕ್ಕಾಗಿ ಇವರಿಗೆ ಗ್ರಾಮಗಳ ಸಮಸ್ಯೆಗಳ ಬಗ್ಗೆ ಸಂಪೂರ್ಣವಾದ ಅರಿವು ಇಲ್ಲದಾಗಿತ್ತು. ಹಾಗಾಗಿ ಯೋಜನೆಗಳು ಸಂಪೂರ್ಣವಾಗಿ ಫಲಕಾರಿಯಾಗುತ್ತಿರಲಿಲ್ಲ. ಮತ್ತು ಪ್ರದೇಶದಿಂಧ ಪ್ರದೇಶಕ್ಕೆ ಜನರ ಅಗತ್ಯಗಳು, ಸಮಸ್ಯೆಗಳು ಬೇರೆ ಬೇರೆಯಾಗಿರುತ್ತವೆ ಆದ್ದರಿಂದ ಒಂದೇ ರೀತಿಯ ಯೋಜನೆಯನ್ನು ರೂಪಿಸಿ ಅದನ್ನು ಎಲ್ಲಾ ಗ್ರಾಮಗಳಿಗೆ ವಿಸ್ತರಿಸುವಂತೆ ಮಾಡುವುದರಿಂದಾಗಿ ಗ್ರಾಮದ ಅಭಿವೃದ್ಧಿ ಸಾಧ್ಯವಾಗಿಲ್ಲ. ಈ ಕಾರಣಗಳಿಗಾಗಿ ಉದ್ಯೋಗ ಖಾತರಿ ಕಾಯಿದೆಯಲ್ಲಿ ಇದಕ್ಕೆ ಅವಕಾಶ ಮಾಡಿಕೊಡದೆ ಯೋಜನೆಯ ರೂಪಿಸುವಿಕೆಯಲ್ಲಿ ಗ್ರಾಮದ ಜನರು ನೇರವಾಗಿ ಪಾಲ್ಗೊಳ್ಳುವ ಮತ್ತು ಯೋಜನೆಯನ್ನು ರೂಪಿಸುವ ಅವಕಾಶವನ್ನು ಮಾಡಿಕೊಟ್ಟಿದೆ. ಆದರೆ ವಾಸ್ತವದಲ್ಲಿ ಈ ಯೋಜನೆಯ ಕಾಮಗಾರಿಗಳನ್ನು ರೂಪಿಸುವ ಹಂತದಲ್ಲಿ ಲಿಂಗ ಅಸಮಾನತೆಯ ಅಂಶಗಳು ಗೋಚರಿಸುತ್ತಿವೆ. ಸ್ತ್ರೀಯರನ್ನು ಕಡೆಗಾಣಿಸುವಂತಹ, ಅವರು ಪಾಲ್ಗೊಳ್ಳದ ಹಾಗೆ ನೋಡಿಕೊಳ್ಳುವ ಕೆಲಸ ಈ ಗ್ರಾಮ ಸಭೆಗಳಲ್ಲಿ ನಡೆಯುತ್ತದೆ. ಹಲವು ವೇಳೆ ಗ್ರಾಮಸಭೆಗಳನ್ನು ಮಾಡದೆ ಕಾಮಗಾರಿಗಳನ್ನು ರೂಪಿಸಲಾಗುತ್ತಿದೆ. ಇವುಗಳು ಯೋಜನೆಯ ಅನುಷ್ಠಾನದ ತೊಡಕುಗಳಾಗಿಯೂ ಮಾರ್ಪಟ್ಟಿವೆ. ಇದಕ್ಕೆ ಗ್ರಾಮಗಳಲ್ಲಿನ ಪಿತೃಪ್ರಧಾನ ವ್ಯವಸ್ಥೆಯೇ ಮೂಲ ಕಾರಣವಾಗಿದೆ. ಹಾಗಾಗಿ ಗ್ರಾಮ ಸಭೆಗಳನ್ನೇ ಕೇಂದ್ರವಾಗಿಟ್ಟುಕೊಂಡು ಈ ಲಿಂಗ ಅಸಮಾನತೆಯ ಅಂಶಗಳನ್ನು ಗುರುತಿಸುವ ಕಾರ್ಯ ಮಾಡಲಾಗಿದೆ.

**ಅ) ಗ್ರಾಮ ಸಭೆಗಳಲ್ಲಿನ ಲಿಂಗ ಅಸಮಾನತೆಯ ನೆಲೆಗಳು**

ಉದ್ಯೋಗ ಖಾತರಿ ಯೋನೆಯು ಒಂದು ಜನ ಯೋಜನೆಯಾಗಿದೆ. ಇದನ್ನು ಜಾರಿಗೆ ತರಬೇಕಾದರೆ ಪ್ರತಿಯೊಂದು ಗ್ರಾಮದ ಜನರು ಈ ಗ್ರಾಮ ಸಭೆಗಳಲ್ಲಿ ಭಾಗವಹಿಸುವುದರ ಮೂಲಕ ತಮ್ಮ ಊರಿನ ಕೊರತೆಗಳ ಬಗ್ಗೆ ಮತ್ತು ಊರಲ್ಲಿ ಯಾವ ಕಾಮಗಾರಿಗಳು ನಡೆಯಬೇಕು ಎಂಬುದರ ಬಗ್ಗೆ ಸಮಗ್ರವಾಗಿ ಚರ್ಚಿಸಬೇಕಾಗುತ್ತದೆ. ಸಭೆಯಲ್ಲಿ ಮಹಿಳೆಯರೂ ಸಹ ಪುರುಷರಷ್ಟೇ ಸಮನಾಗಿ ಭಾಗವಹಿಸುವದರ ಮೂಲಕ ಚರ್ಚೆಯಲ್ಲಿ ಪಾಲ್ಗೊಳ್ಳುವ ಅವಕಾಶವನ್ನು ಪಡೆದುಕೊಂಡಿದ್ದಾರೆ. ವಾಸ್ತವದಲ್ಲಿ ಗ್ರಾಮಸಭೆಗಳಲ್ಲಿ ಮಹಿಳೆಯರ

ಪಾಲ್ಗೊಳ್ಳುವಿಕೆಯ ಪ್ರಮಾಣ ತುಂಬಾ ಕಡಿಮೆ ಇರುವುದು ಕಂಡುಬಂದಿದೆ. ಪಾಲ್ಗೊಳ್ಳುವಿಕೆ ಇಲ್ಲವೆಂದೇ ಹೇಳಬಹುದು. ಇದಕ್ಕೆ ಕಾರಣ ಇಲ್ಲದಿಲ್ಲ. ಮುಖ್ಯವಾಗಿ ಪುರುಷಶಾಹಿ ಮೌಲ್ಯಗಳು ಮಹಿಳೆಯರ ಪಾಲ್ಗೊಳ್ಳುವಿಕೆಯನ್ನು ನಿರ್ಭಂಧಿಸುತ್ತಿವೆ. ಹಾಗೆಯೇ ಜಾತಿ ಶ್ರೇಣೀಕರಣದ ನೆಲೆಗಳೂ ಸಹ ದಲಿತ ಮಹಿಳೆಯರ ಪಾಲ್ಗೊಳ್ಳುವಿಕೆಯ ಹಕ್ಕನ್ನು ಕಿತ್ತುಕೊಂಡಿರುವುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡುಬಂದಿದೆ. ಮುಖ್ಯವಾಗಿ ಈ ಜಾತಿ ಶ್ರೇಣೀಕರಣದ ನೆಲೆಗಳು ಉದ್ಯೋಗ ಖಾತರಿ ಯೋಜನೆಯ ರೂಪಿಸುವಿಕೆಯ ಹಂತದಿಂದ ಹಿಡಿದು ಕಾಮಗಾರಿಗಳು ಮುಕ್ತಾಯದ ಹಂತದವರೆಗೂ ದಲಿತ ಮಹಿಳೆಯರನ್ನು ಶೋಷಿಸುತ್ತಲೇ ಇವೆ. ಇದರ ನೇರ ಪರಿಣಾಮ ಮಾತ್ರ ಮಹಿಳೆಯರ ಮೇಲಾಗುತ್ತಿದೆ. ಜಾತಿಯ ಕಾರಣವಾಗಿ ಮತ್ತು ಮಹಿಳೆ ಎಂಬ ಕಾರಣಕ್ಕಾಗಿ ತಮ್ಮ ಉಪ ಜೀವನವನ್ನೂ ಸಹ ನಡೆಸಲು ತುಂಬಾ ಕಷ್ಟಗಳನ್ನು ಅನುಭವಿಸುತ್ತಿದ್ದಾರೆ.

ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡುಬಂದಂತಹ ಅಂಶಗಳನ್ನು ಗಮನಿಸಿದರೆ ಗ್ರಾಮ ಪಂಚಾಯತಿಗಳಲ್ಲಿನ ಗ್ರಾಮ ಸಭೆಗಳಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಸಂಪೂರ್ಣವಾಗಿ ಇಲ್ಲವಾಗಿರುವುದು ಕಂಡುಬರುತ್ತದೆ. ಈ ಪಾಲ್ಗೊಳ್ಳುವಿಕೆಯಿಂದ ವಂಚಿತರಾಗಲು ಕಾರಣವೂ ಇದೆ. ಇವುಗಳನ್ನು ಕೆಲವು ಪ್ರಕರಣಗಳ ಮೂಲಕ ನೋಡಬಹುದಾಗಿದೆ. ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕಿನ ಮಾಡಗಿರಿ ಗ್ರಾಮದ ಸಾಬಮ್ಮ, ಇವರು ಗ್ರಾಮ ಪಂಚಾಯತಿಯ ಉಪಾಧ್ಯಕ್ಷರಾಗಿದ್ದಾರೆ. ಇವರು ಹೀಗೆ ಹೇಳುತ್ತಾರೆ. "ಸಾರ್ ನಮ್ಮ ಊರಾಗ ಗ್ರಾಮ ಸಭೆ ನಡಿಲಾರದಂಗ ಪಂಚಾಯ್ತಿಯವರು ಮಾಡ್ತಾರ. ಅದನ್ನ ಮೀರಿ ಏನಾದ್ರೆ ಗ್ರಾಮಸಭೆ ಮಾಡಿದ್ರೆ ನಮ್ಮೂರಾಗ ಯಾವ ಹೆಣ್ಮಕ್ಕಳು ಬರಾದಿಲ್ಲ. ಯಾಕಂದ್ರೆ ಗಂಡ್ಸರು ಮನ್ಯಾಗ ಹೆಣ್ಮಕ್ಕಳನ್ನ ಕಳ್ಸಾದಿಲ್ಲ. ನಮ್ಮಂತವರು ಹೋಗಿ ಗ್ರಾಮ ಸಭೆಗೆ ಬರ್ರೀ ಅಂತ ಕರದ್ರೆ ಅವರ ಮನ್ಯಾಗಿನ ಗಂಡ್ಸೂರು ಮತ್ತೆ ನಮ್ಗೆ ಬೈದು ಕಳಸ್ತಾರ. ಅದಕ್ಕ ಬುದ್ದಿ ಇಲ್ಲ. ನಿಮ್ಗೆ ಬುದ್ದಿ ಇಲ್ಲೇನು? ಬುದ್ದಿ ಇಲ್ಲದ ಹೆಂಗಸು ಗ್ರಾಮ ಸಭೆಗೆ ಕರಿಯಾಕ ಬಂದಾಳಂತೇಳಿ ನೀವು ಕುಡಾ ಹೋಗ್ತೀವಿ ಅಂತ ಕುಣಿತೀರೇನು? ಯಾವ ಗ್ರಾಮ ಸಭೆಗೂ ಹೋಗ್ಬೇಡಿ ಅಂತಂದು ಅವರ ಮನ್ಯಾಗಿನ ಗಂಡ್ಸೂರು ಜಬರಸ್ತಾರ. ನಾನು ಮೆಂಬರ್ ಆಗಿದ್ರೂ ಮೀಟಿಂಗ್‌ಗೆ ಬರ್ರಿ ಅಂತ ಮನಿ ಮನಿಗೆ ಹೋಗಿ ಕರಿತೀನಿ. ಆದ್ರ ಜನ ನಮ್ಮನ್ನೇ ಬೈತಾರ, ತಲಿ ಕೆಟ್ಟೋರು ಅಂತಾರ, ಬುದ್ಧಿ ಇಲ್ಲದೋರು ಅಂತಾರ. ಹಿಂಗ ಬೈದು ಕಳಸ್ತಾರ. ಹಂಗಾಗಿ ನಮ್ಮಂತ ನಿಯತ್ತಿನಿಂದ ಇರವ್ರರಿಗೆ ಕಾಲನೇ ಇಲ್ಲ" ಎಂದು ಹೇಳುತ್ತಾಳೆ.

ಇದು ಕುಟುಂಬದಲ್ಲಿನ ಪುರುಷಶಾಹಿ ಚಿಂತನೆಗೆ ಹಿಡಿದ ಕನ್ನಡಿಯಂತಿದೆ. ಮುಖ್ಯವಾಗಿ ಬುದ್ದಿ ಇಲ್ಲದ ಹೆಣ್ಣುಮಕ್ಕಳು ಮಾತ್ರ ಗ್ರಾಮ ಸಭೆಗಳಿಗೆ ಹೋಗ್ತಾರೆ ಎನ್ನುವ ಮನೋಭಾವ ಪುರುಷರಲ್ಲಿದೆ. ಇವರ ಪ್ರಕಾರ ಬುದ್ದಿ ಇಲ್ಲದವರು ಎಂದರೆ ಅವರು ಕುಟುಂಬದ ಮತ್ತು

ಸಮಾಜದ ಕಟ್ಟುಪಾಡುಗಳನ್ನು ಮೀರಿದವರು ಎಂದೇ ಭಾವಿಸಿಕೊಂಡಿರುತ್ತಾರೆ. ಹಾಗಾಗಿ ಕುಟುಂಬದಿಂದ ಆಚೆ ಬಂದು ಮಾತನಾಡುವ ಮಹಿಳೆಯರನ್ನು ಬುದ್ಧಿ ಇಲ್ಲದವರು ಎಂದು ಕರೆಯಲ್ಪಟ್ಟಿದ್ದಾರೆ. ಇದು ಪುರುಷಶಾಹಿ ವ್ಯವಸ್ಥೆಯ ಮೂಲ ಆಲೋಚನೆಯಾಗಿದೆ. ಬುದ್ಧಿ ಇಲ್ಲದವಳು ಎಂದು ಕರೆಯುವುದರ ಮೂಲಕ ಅವಳ ಭೌದ್ಧಿಕತೆಯನ್ನು ಪ್ರಶ್ನಿಸುವಂತಹ ಕೆಲಸಕ್ಕೆ ಕೈ ಹಾಕುತ್ತಾರೆ. ಆ ಮೂಲಕ ಮಹಿಳೆಯರನ್ನು ಕಡೆಗಣಿಸುತ್ತಾರೆ. ಅದರ ಜೊತೆಗೆ ಮಹಿಳೆಯರು ಗ್ರಾಮ ಪಂಚಾಯತಿ ಸಭೆಗಳಿಗೆ ಹಾಜರಾದರೆ ಸಮಾಜದಲ್ಲಿ ಮತ್ತು ಕುಟುಂಬದಲ್ಲಿ ತಮ್ಮ ಗೌರವ ಎಲ್ಲಿ ಕಡಿಮೆಯಾಗುತ್ತದೆಯೋ ಎಂಬ ಭಯ ಪುರುಷನಲ್ಲಿ ಕಾಡತೊಡಗಿರುತ್ತದೆ. ಜೊತೆಗೆ ವ್ಯವಸ್ಥೆಯಲ್ಲಿ ಮಹಿಳೆಯನ್ನು ಎರಡನೇ ದರ್ಜೆಯವಳಾಗಿಯೇ ಬಿಂಬಿಸಲಾಗಿದೆ. ಪುರುಷ ತನ್ನ ಅನುಕೂಲಕ್ಕೆ ತಕ್ಕಂತೆ ಮಹಿಳೆಯನ್ನು ಬಿಂಬಿಸುತ್ತಿರುತ್ತಾನೆ. ಏಕೆಂದರೆ ಯಾವಾಗಲೂ ಅವಳು ಪುರುಷನ ಅಡಿಯಲ್ಲಿಯೇ ಜೀವಿಸಬೇಕು ಎಂಬ ನಿಯಮಗಳು ಬಲಿಷ್ಠವಾಗಿ ಬೇರೂರಿಬಿಟ್ಟಿವೆ. ಆ ಕಾರಣಕ್ಕಾಗಿ ಮಹಿಳೆಯರನ್ನು ಕುಟುಂಬದಲ್ಲಿಯೇ ಕಟ್ಟಿ ಹಾಕುವಂತಹ ಕಾರ್ಯ ನಡೆಯುತ್ತಿದೆ.

ಗ್ರಾಮಗಳಲ್ಲಿನ ಪುರುಷರನ್ನು ಭೇಟಿಯಾದಾಗ ಅವರೂ ಸಹ ಮಹಿಳೆಯರು ಗ್ರಾಮ ಸಭೆಗಳಲ್ಲಿ ಭಾಗವಹಿಸಬಾರದು ಎಂದೇ ಹೇಳಿದ್ದನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡುಬಂದಿದೆ. ಪುರುಷರು ಒಂದು ವೇಳೆ ಮಹಿಳೆಯರನ್ನು ಗ್ರಾಮ ಸಭೆಗಳಿಗೆ ಭಾಗವಹಿಸಲು ಕಳುಹಿಸಿದರೆ ಅಂತಹ ಸಂದರ್ಭದಲ್ಲಿ ವ್ಯವಸ್ಥೆ ತಮ್ಮನ್ನು ನೋಡುವ ಬಗೆ ಹೇಗಿರುತ್ತದೆ ಎಂಬುದನ್ನು ಹೀಗೆ ಹೇಳುತ್ತಾರೆ. ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕಿನ ಮಾಡಗಿರಿ ಗ್ರಾಮದ ರುಕ್ಕಪ್ಪ ಎಂಬುವವರು ಹೇಳುವಂತೆ "ಸಾರ್ ಇಲ್ಲಿತನ ನಮ್ ಮನೆ ಹೆಣ್ಮಕ್ಕಳ್ನ ಗ್ರಾಮ ಸಭೆಗೆ ಆಗಲಿ, ಯಾವುದೇ ಸಭೆ ಸಮಾರಂಭಗಳಿಗೆ ಕಳಿಸಿಲ್ಲ. ನಾವು ಇರಾತನಕ ಅವರದೇನು ಕೆಲ್ಸ. ನಾವಿಲ್ಲಂದ್ರೆ ಆ ಮಾತು ಬ್ಯಾರೆ. ಹಂಗಾಗಿ ನಾವು ನಮ್ ಮನೆ ಹೆಣ್ಣು ಮಕ್ಕಳನ್ನು ಮನೆ ಬುಟ್ಟು ಹೊರಾಗ ಕಳಸಾದಿಲ್ಲ. ನಾನಂತ ಅಲ್ಲ ಇಡೀ ಊರಾಗ ಯಾರ ಮನೆ ಹೆಣ್ಣು ಮಕ್ಕಳು ಗ್ರಾಮ ಸಭೆಗೆ ನಮ್ಮಲ್ಲಿ ಬರಾದಿಲ್ಲ. ನಾವೇನಾದ್ರೆ ಗ್ರಾಮ ಸಭೆ ಮತ್ತೆ ಸಭೆ ಸಮಾರಂಭಗಳಿಗೆ ಅಂತೇಳಿ ಹೆಣ್ಮಕ್ಳನ್ನ ಕಳಿಸಿದ್ರೆ ಜನ ನಮ್ಮನ್ನ ಸಂಶಯದಿಂದ ನೋಡ್ತಾರ. ಯಾಕಂದ್ರೆ ನಮ್ ತಾತ ಮುತ್ತಾತನವರ ಕಾಲದಿಂದ ಇಲ್ಲಿತನ ನಮ್ ಹಳ್ಳಿಯಾಗ ಯಾರಾದ್ರೆ ಮನೆ ಬುಟ್ಟು ಹೊರಗಡೆ ಕಳಿಸ್ಯಾರೇನು? ಇಲ್ಲ. ಹಂಗಾಗಿ ನಾವೇನಾದ್ರೆ ಹೋಗ್ಲಿ ಬುಡು ಅಂತ ಕಳಿಸಿದ್ರೆ ಇವನಲ್ಲಿ ಹೆಂಗಸಿನ್ನ ಹದ್ದುಬಸ್ತಿನಲ್ಲಿ ಇಟಗಂಬ ಯೋಗಿತೆ ಇಲ್ಲ ನೋಡು ಅಂತ ಜನ ಆಡಿಕೆಂತಾರ. ಮತ್ತೆ ಇವನು ಯಾ ಸೀಮೆ ಗಂಡ್ಸಲೇ ಅಂತಾರ". ಎಂದು ಹೇಳಿದರು.

ಮಹಿಳೆಯರ ಮೇಲೆ ಹಕ್ಕನ್ನು ಚಲಾಯಿಸುವ ಸ್ವಾತಂತ್ರ್ಯ ಕೇವಲ ಪುರುಷರದ್ದೇ ಎಂಬ ಆಲೋಚನೆ ಇಂದು ನಿನ್ನೆಯದಲ್ಲ. ಈ ಆಲೋಚನೆ ಹಲವು ವರ್ಷಗಳಿಂದಲೂ ಒಂದು ಘೋಷಿತ/ಅಘೋಷಿತ ನಿಯುಮವಾಗಿ ರೂಪಿತಗೊಂಡು ಅದು ವ್ಯವಸ್ಥೆಯಲ್ಲಿ ಬಲಿಷ್ಠಗೊಂಡುಬಿಟ್ಟಿದೆ. ಆ ಕಾರಣಕ್ಕಾಗಿ ರುಕ್ಕಪ್ಪ ತನ್ನ ಮಾತುಗಳಲ್ಲಿ ಅದನ್ನು ವ್ಯಕ್ತಪಡಿಸುತ್ತಿದ್ದಾನೆ. ಅಂದರೆ ಗ್ರಾಮದಲ್ಲಿನ ಪಿತೃ ಪ್ರಧಾನತೆಯು ಮಹಿಳೆಯರ ಮೇಲೆ ತನ್ನ ಅಧಿಕಾರವನ್ನು ಚಲಾಯಿಸುತ್ತಲೇ ಇರುತ್ತದೆ. ಇದರ ನೇರ ಪರಿಣಾಮ ಮಹಿಳೆಯರ ಮೇಲೆಯೇ ಆಗುತ್ತಿರುತ್ತದೆ. ಒಂದು ವೇಳೆ ಪುರುಷರೇನಾದರೂ ಮಹಿಳೆಯರನ್ನು ಗ್ರಾಮ ಸಭೆಗಳಿಗೆ ಬಾಗವಹಿಸಲು ಕಳುಹಿಸಿದ್ದೇ ಆದರೆ ಆ ಸಂದರ್ಭದಲ್ಲಿಯೂ ಸಹ ಗ್ರಾಮದ ಪಿತೃ ಪ್ರಧಾನ ವ್ಯವಸ್ಥೆಯು ಪುರುಷರ ಪುರುಷತ್ವವನ್ನೇ ಪ್ರಶ್ನಿಸುವಂತಹ ಕೆಲಸಕ್ಕೆ ಮುಂದಾಗುತ್ತದೆ. ಹಾಗೆ ಹೇಳುವ ಮೂಲಕ ಮಹಿಳೆಯರನ್ನು ಹದ್ದುಬಸ್ತಿನಲ್ಲಿಟ್ಟುಕೊಳ್ಳುವಂತೆ, ತಮ್ಮ ಒಡೆತನದಲ್ಲಿಯೇ ಇಟ್ಟುಕೊಳ್ಳುವಂತೆ ಸೂಚ್ಯವಾಗಿ ತಿಳಿಸುತ್ತಿರುತ್ತದೆ. ಪುರುಷರನ್ನು ಹೀಯಾಳಿಸುವದರ ಹಿಂದಿನ ಉದ್ದೇಶ ಇದೇ ಆಗಿರುತ್ತದೆ. ಹಾಗಾಗಿ ಇದನ್ನು ಎದುರಿಸಿ ಬದುಕುವುದು ಸಾಧ್ಯವಿಲ್ಲವೇನೋ ಎನ್ನುವಂತೆ ಪುರುಷರು ನಡೆದುಕೊಳ್ಳುತ್ತಾರೆ. ಇಲ್ಲಿನ ಪ್ರಕರಣಕ್ಕೆ ಸಂಬಂಧಿಸಿದಂತೆ ಇನ್ನೊಂದು ವಿಷಯವೇನೆಂದರೆ ರುಕ್ಕಪ್ಪ, ಜಾತಿಯಿಂದ ಎಸ್.ಸಿ. ಸಮುದಾಯಕ್ಕೆ ಸೇರಿದವರು. ಇವರು ಗ್ರಾಮದಲ್ಲಿ ಜಾತಿಯ ಕಾರಣಕ್ಕೆ ಹಲವಾರು ಹಂತದಲ್ಲಿ ಸಮಸ್ಯೆಗಳನ್ನು ಎದುರಿಸುತ್ತಿರುತ್ತಾರೆ. ಈ ಜಾತಿಯ ಪುರುಷರೂ ಸಹ ಅದೇ ಗ್ರಾಮದ ಉನ್ನತ ಜಾತಿಯವರ ಮುಂದೆ ನಿಂತು ಮಾತನಾಡುವುದೂ ಕಷ್ಟಕರವಾಗಿರುತ್ತದೆ. ಅಂತಹ ಸಂದರ್ಭದಲ್ಲಿ ಮಹಿಳೆಯರೇನಾದರೂ ಗ್ರಾಮ ಸಭೆಗಳಲ್ಲಿ ಭಾಗವಹಿಸುವುದಾಗಲೀ ಅಥವಾ ಉನ್ನತ ಜಾತಿಯವರ ಎದುರಿಗೆ ನಿಂತು ಮಾತನಾಡುವುದನ್ನಾಗಲೀ ಆ ಊರಿನ ಇತರ ಜಾತಿಯವರು ಸಹಿಸುವುದಿಲ್ಲ. ಆ ಕಾರಣಕ್ಕಾಗಿ ಗ್ರಾಮದ ಪಿತೃ ಪ್ರಧಾನ ಮೌಲ್ಯಗಳು ಪುರುಷನನ್ನು ತೆಗಳುವುದರ ಮೂಲಕ ಮಹಿಳೆಯನ್ನು ಈ ಗ್ರಾಮ ಸಭೆಗಳಿಂದ ದೂರವಿರುವಂತೆ ಮಾಡುತ್ತವೆ. ಹಾಗಾಗಿ ಗ್ರಾಮ ಸಭೆಗಳಲ್ಲಿ ಮಹಿಳೆಯರ ಭಾಗವಹಿಸುವಿಕೆಯ ಪ್ರಮಾಣ ತುಂಬಾ ಕಡಿಮೆ ಇರುವುದನ್ನು ಮತ್ತು ಕೆಲವು ಸಂದರ್ಭಗಳಲ್ಲಿ ಭಾಗವಹಿಸುವಿಕೆಯೇ ಇಲ್ಲವಾಗಿರುತ್ತದೆ. ಆದರೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಹೀಗೆ ಮಾಡುವುದು ಸರಿಯಲ್ಲ. ಸಂವಿಧಾನ ಬದ್ಧವಾಗಿ ಸ್ತ್ರೀ ಪುರುಷರಿಬ್ಬರಿಗೂ ವ್ಯವಸ್ಥೆಯಲ್ಲಿ ಸಮಾನ ಅವಕಾಶ ಮತ್ತು ಸಮಾನ ಹಕ್ಕುಬಾಧ್ಯತೆಗಳಿರುತ್ತವೆ. ಇದನ್ನು ಪುರುಷಶಾಹಿ ಚಿಂತನೆಗಳು ಬುಡಮೇಲು ಮಾಡುತ್ತವೆ. ಕೆಲವು ಗ್ರಾಮ ಸಭೆಗಳಲ್ಲಿ ಮಹಿಳೆಯರು ಭಾಗವಹಿಸಿದ್ದರೂ ಆ ಸಭೆಯಲ್ಲಿ ಅವರಿಗೆ ಮಾತನಾಡುವ ಹಕ್ಕನ್ನು ಕೊಟ್ಟಿಲ್ಲ. ಹಾಗೆಯೇ ಗ್ರಾಮದ ಸ್ತ್ರೀಶಕ್ತಿ ಸಂಘಟನೆಯವರು ಬಾಗವಹಿಸಿ ಚರ್ಚೆಯಲ್ಲಿ ಪಾಲ್ಗೊಂಡು ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದರೂ ಸಹ ಆ ಅಭಿಪ್ರಾಯಕ್ಕೆ ಯಾವುದೇ ಮಾನ್ಯತೆ ದೊರೆಯದಂತೆ ಮಾಡಲಾಗಿದೆ.

ದಲಿತ ಮಹಿಳೆಯರ ಸ್ಥಿತಿ ಇತರ ಮಹಿಳೆಯರ ಪರಿಸ್ಥಿತಿಗಿಂತ ತುಂಬಾ ಭಿನ್ನಾವಾಗಿವೆ. ರಾಯಚೂರು ಜಿಲ್ಲೆಯ ಗಾಣದಾಳು ಗ್ರಾಮದ ಪ್ರೇಮಮ್ಮ ಎಂಬುವವರ ಮಾತಿನಿಂದ ದಲಿತ ಮಹಿಳೆಯರ ಸ್ಥಿತಿ ಹೇಗಿದೆ ಎಂಬುದನ್ನು ಕಂಡುಕೊಳ್ಳಬಹುದಾಗಿದೆ. ಪ್ರೇಮಮ್ಮ ಹೇಳುವ ಹಾಗೆ "ಸಾರ್ ಒಂದು ದಿನ ನಮ್ಮೂರಾಗಿನ ಗುಡಿಯಾಗ ಪಂಚಾಯತಿಯವರು ಮೀಟಿಂಗ್ ಸೇರತಾರ ಎಲ್ಲಾರು ಬರ್ರಿ ಅಂತೇಳಿ ಡಂಗೂರ ಸಾರಿಸಿದ್ರು, ಅದಕ್ಕಂತನೇ ನಾವು ಕೂಡ ಆ ಮೀಟಿಂಗಿಗೆ ಹೋಗಬೇಕಂತ ರೆಡಿ ಆಗಿದ್ವಿ, ಆದ್ರ ಮೀಟಿಂಗ್ ಇರೋದು ಊರೊಳಗ, ನಮಗಂತೂ ಈ ಊರಾಗ ಬಿಟ್ಕಳಂಗೇ ಇಲ್ಲ. ನಾವು ಎಸ್ಸಿ ಮಂದಿ ಐದೀವಿ. ಅಂತದ್ರಾಗ ಗುಡ್ಯಾಗ ಹೋಗಿ ಮೀಟಿಂಗ್ ಕೂಡಾದು ಅಂದ್ರ? ಅದೆಲ್ಲಾ ಆಗಂಗಿಲ್ಲ ಅಂತೇಳಿ ಮೀಟಿಂಗ್‌ಗೆ ಹೋಗಲಿಲ್ಲ. ನಾವೇನಾರ ಊರಾಗಿನ ಗುಡಿಗಿ ಹೋಗಿವಿ ಅಂತ ಗೊತ್ತಾದ್ರ, ಇಲ್ಲಿ ಜನ ನಮ್ಮನ್ನ ಸುಮ್ಕ ಬಿಡಂಗಿಲ್ಲ. ಊರ ಬಿಟ್ಟು ಕಳಸ್ತಾರ ಅಷ್ಟೇ? ಎಂದಳು. ಇನ್ನ ಗಣಮಕ್ಳು ಹೋಗಿ ಬರ್ತಾರ ಎಂದು ಹೇಳಿದರು. ಮೀಟಿಂಗ್ ಆದ ಮ್ಯಾಲ ಊರಾಗಿನ ಮೆಂಬರ್ ಬಂದು ಗ್ರಾಮ ಪಂಚಾಯ್ತಾಗ ನಿಮಗ ಕೆಲ್ಸ ಕೊಡ್ತಾರ ಅಂತಂದ್ರು ಅಷ್ಟೇ. ಆಮ್ಯಾಲ ಒಂದು ವಾರ ಆದ ಮ್ಯಾಲ ಕೆಲ್ಸ ಕೊಟ್ರು, ಆದ್ರ ಆ ಮೀಟಿಂಗ್‌ನಾಗ ಏನ್ ಮಾತಾಡಿದ್ರು ಅಂತಾನೆ ಗೊತ್ತಾಗಲಿಲ್ಲ. ಆಮ್ಯಾಲ ನಮ್ಮ್ ಕೇರ್ಯಾಗಿನ ಗಣಮಕ್ಳ ಕಡಿಯಿಂದ ತಿಳ್ಕಂಡ್ವಿ, ನಮ್ ಕೇರ್ಯಾಗ ಸಹಿತ ಬಾಳ ಕೆಲ್ಸ ಐದಾವ. ಆದ್ರ ಅದನ್ನ ಯಾರೂ ಹೇಳಿಲ್ಲ. ನಮ್ಗ ಏನಾರ ಮೀಟಿಂಗ್ ಕುಂದ್ರಾಕ ಬಿಟ್ಟಿದ್ರ ನಮ್ಮ್ ಕೇರ್ಯಾಗಿನ ಸಮಸ್ಯಾನ ಹೇಳ್ತಿದ್ವಿ, ಆದ್ರ ನಮ್ಗ ಆ ಅವಕಾಶ ಸಿಗಲಿಲ್ಲ". ಎಂದು ಹೇಳಿದಳು.

ಇಲ್ಲಿ ಮುಖ್ಯವಾಗಿ ಪ್ರೇಮಮ್ಮ ಒಬ್ಬ ಎಸ್.ಸಿ. ಸಮುದಾಯಕ್ಕೆ ಸೇರಿದ ಮಹಿಳೆಯಾಗಿದ್ದಾಳೆ. ಇವರು ಊರೊಳಗಿನ ಯಾವುದೇ ಕಾರ್ಯಕ್ರಮಗಳು ಜರುಗಿದರೂ ಅವುಗಳಲ್ಲಿ ಪಾಲ್ಗೊಳ್ಳುವ ಅವಕಾಶವನ್ನು ಕಳೆದುಕೊಂಡಿದ್ದಾರೆ. ಗ್ರಾಮೀಣ ಭಾಗದಲ್ಲಿ ಇಂದಿಗೂ ಜಾತೀಯ ಬೇರುಗಳು ತುಂಬಾ ಬಲಿಷ್ಠವಾಗಿವೆ. ಪ್ರೇಮಮ್ಮ ಜಾತಿಯ ಕಾರಣಕ್ಕಾಗಿ ಗ್ರಾಮ ಸಭೆಯಲ್ಲಿ ಪಾಲ್ಗೊಳ್ಳುವ ಅವಕಾಶವನ್ನು ಕಳೆದುಕೊಂಡಳು. ಗ್ರಾಮ ಸಭೆಗಳಲ್ಲಿ ಭಾಗವಹಿಸಬೇಕೆಂಬ ಇಂಗಿತ ಪ್ರೇಮಮ್ಮಳಲ್ಲಿ ಇದೆ. ಆದರೆ ಆ ಅವಕಾಶ ಜಾತಿಯ ಕಾರಣಕ್ಕೆ ಮತ್ತು ಮಹಿಳೆ ಎಂಬ ಕಾರಣಕ್ಕೆ ಇಲ್ಲವಾಗಿತು. ಮುಖ್ಯವಾಗಿ ಗಾಣದಾಳು ಗ್ರಾಮದಲ್ಲಿ ಪ್ರಭಲ ಜಾತಿಗಳು ಕೆಳ ಜಾತಿಗಳನ್ನು ತುಂಬಾ ಹೀನಾಯ ಸ್ಥಿತಿಯಲ್ಲಿ ಕಾಣುತ್ತಿರುವುದು ಇಂದಿಗೂ ಕಂಡುಬರುತ್ತಿದೆ. ಈ ಊರಿನ ಪ್ರೇಮಮ್ಮ ಹೇಳುವ ಮಾತಿನಲ್ಲಿ ಗಾಣದಾಳು ಗ್ರಾಮದ ಆಂತರಿಕ ಜಾತಿಯ ಸ್ವರೂಪವೊಂದು ಕಾಣುತ್ತದೆ. ಅಂತೆಯೇ ಇಲ್ಲಿ ಜಾತಿಯೆ ಅಸ್ಪೃಶ್ಯವಾದಾಗ ಇನ್ನು ಈ ಜಾತಿಗೆ ಸೇರಿದ ಪ್ರೇಮಮ್ಮ ಅವರಂತವರನ್ನು ನೋಡುವ ಕ್ರಮವಂತೂ ಇನ್ನೂ ಶೋಚನೀಯವಾಗಿರುತ್ತದೆ.

ಕೆಲವು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಸ್ತ್ರೀಶಕ್ತಿ ಸಂಘಗಳು ಭಾಗವಹಿಸಿ ತಮ್ಮ ಹಕ್ಕನ್ನು ಚಲಾಯಿಸಿರುವಂತಹ ಪ್ರಕರಣಗಳೂ ಕಂಡುಬಂದಿವೆ. ರಾಯಚೂರು ಜಿಲ್ಲೆಯ

ಮಾನ್ವಿ ತಾಲೂಕಿನ ಪೋತ್ನಾಳು ಗ್ರಾಮ ಪಂಚಾಯತಿಯಲ್ಲಿ ಜಾಗೃತಿ ಮಹಿಳಾ ಸಂಘಟನೆಯವರು ತಮ್ಮ ಹಕ್ಕುಗಳನ್ನು ಚಲಾಯಿಸುವಲ್ಲಿ ಮತ್ತು ಯೋಜನೆಯ ಲಾಭವನ್ನು ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ. ಈ ಗ್ರಾಮ ಪಂಚಾಯತಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿಯಾಗಿರುವ ಮಲ್ಲಯ್ಯನವರು ಹೇಳುವಂತೆ "ನಮ್ಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಹೆಚ್ಚು ಜನ ಮಹಿಳೆಯರು ಗ್ರಾಮ ಸಭೆಗಳಲ್ಲಿ ಭಾಗವಹಿಸುತ್ತಾರೆ. ಯಾಕಂದ್ರೆ ನಮ್ಮಲ್ಲಿ ಮಹಿಳಾ ಜಾಗೃತಿ ಸಂಘ ಅಂತೇಳಿ ಇದೆ. ಈ ಸಂಘದಲ್ಲಿರುವಂತ ಮಹಿಳೆಯರು ತುಂಬಾ ಸ್ಟ್ರಾಂಗ್‌ಗಾಗಿ ಇದ್ದಾರೆ. ಹಾಗೆಯೇ ಗ್ರಾಮ ಪಂಚಾಯ್ತಿಯಲ್ಲಿ ನಡೆಯುವ ಪ್ರತಿಯೊಂದು ಕೆಲಸ ಕಾರ್ಯಗಳ ಕುರಿತು ಪ್ರಶ್ನೆ ಮಾಡುತ್ತಾರೆ. ಇವರು ಹೆಚ್ಚಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಮಹಿಳೆಯರಾಗಿದ್ದಾರೆ. ಯಾಕಂದ್ರೆ ಇವತ್ತು ಕೂಲಿ ಮಾಡಿ ಜೀವನ ಸಾಗಿಸುವಂತವರು ಇವರೇ ಆಗಿದ್ರಿಂದ ಇವರು ಜಾಸ್ತಿ ಪಾಲ್ಗೊಳ್ಳುತ್ತಾರೆ. ಆದರೆ ಉನ್ನತ ವರ್ಗದವರು ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿರುವುದರಿಂದ ಅವರಿಗೆ ಈ ಯೋಜನೆಯ ಅವಶ್ಯಕತೆ ಅಷ್ಟಾಗಿ ಇರುವುದಿಲ್ಲ. ಮುಖ್ಯವಾಗಿ ಹೇಳಬೇಕಂದ್ರೆ ಎಲ್ಲಿ ಮಹಿಳೆಯರು ಸಂಘಟಿತರಾಗಿದ್ದಾರೋ ಆ ಪಂಚಾಯ್ತಿ ವ್ಯಾಪ್ತಿಯಲ್ಲಿ ಈ ಯೋಜನೆ ಸಕ್ಸಸ್‌ಫುಲ್ ಆಗಿ ನಡೆಯೋದಕ್ಕೆ ಸಾಧ್ಯ ಆಗಿದೆ. ಮಹಿಳೆಯರು ಎಲ್ಲಿ ಸಂಘಟಿತರಾಗಿಲ್ವೋ ಅಲ್ಲಿ ಈ ಯೋಜನೆ ಸಕ್ಸಸ್ ಆಗಿಲ್ಲ.

ಮಹಿಳೆಯರು ಸಂಘಟಿತರಾದಾಗ ಮಾತ್ರ ತಮ್ಮ ಹಕ್ಕುಗಳನ್ನು ಚಲಾಯಿಸಲು ಸಾಧ್ಯ ಮತ್ತು ಯೋಜನೆಯ ಲಾಭವನ್ನು ಪಡೆಯಲು ಸಾಧ್ಯ ಎಂಬುದನ್ನು ಜಾಗೃತ ಮಹಿಳಾ ಸಂಘಟನೆಯವರು ಸಾಬೀತುಪಡಿಸಿದ್ದಾರೆ. ಹಾಗೆಯೇ ಉನ್ನತ ವರ್ಗದವರು ಗ್ರಾಮ ಸಭೆಗಳಲ್ಲಿ ಭಾಗವಹಿಸುವುದಿಲ್ಲ ಎಂಬುದನ್ನೂ ಮತ್ತು ಈಗಾಗಲೇ ಅವರು ಆರ್ಥಿಕವಾಗಿ ಸುಸ್ಥಿತಿಯಲ್ಲಿರುತ್ತಾರೆ ಎಂಬುದನ್ನು ಹೇಳಲಾಗಿದೆ. ಆದರೆ ಉನ್ನತ ಜಾತಿಯ ಕೆಲವು ಕುಟುಂಬಗಳು ಮಾತ್ರ ಉತ್ತಮ ಸ್ಥಿತಿಯಲ್ಲಿರುತ್ತವೆ ಮಿಕ್ಕಂತೆ ಬಹಳಷ್ಟು ಕುಟುಂಬಗಳು ಆರ್ಥಿಕವಾಗಿ ತುಂಬಾ ಕೆಳ ಹಂತದಲ್ಲಿರುತ್ತವೆ. ಇಂತಹ ಸಂದರ್ಭದಲ್ಲಿ ಮೇಲಿನ ಹೇಳಿಕೆಯನ್ನು ಎಲ್ಲರಿಗೂ ಅನ್ವಯಿಸಲಾಗದು. ಕೆಳಹಂತದ ಆರ್ಥಿಕತೆಯನ್ನು ಹೊಂದಿದ್ದರೂ ಸಹ ಅವರು ಈ ಯೋಜನೆಯ ಸಭೆಗಳಲ್ಲಿ ಭಾಗವಹಿಸುತ್ತಿಲ್ಲ ಎಂದರೆ ಅದಕ್ಕೆ ಬೇರೆಯೇ ಕಾರಣ ಇದೆ. ಅಂದರೆ ಮೇಲ್ಜಾತಿಗಳಲ್ಲಿ ಮಹಿಳೆಯರಿಗೆ ಹೆಚ್ಚಿನ ರೀತಿಯ ಕಟ್ಟುಪಾಡುಗಳಿರುತ್ತವೆ. ಇವರಿಗೆ ಯಾವುದೇ ರೀತಿಯ ಸ್ವಾತಂತ್ರ್ಯ ಇಲ್ಲವಾಗಿದೆ. ಹಾಗಾಗಿ ಇವರು ಏನೇ ಮಾಡಿದರೂ ಸಹ ಕುಟುಂಬದ ಯಜಮಾನನಾದ ಪುರುಷರನ್ನೇ ಅವಲಂಬಿಸಿರುತ್ತಾರೆ. ಹಾಗಾಗಿ ಗ್ರಾಮ ಸಭೆಗಳಲ್ಲಿ ಪಾಲ್ಗೊಳ್ಳುವುದರಿಂದ ಇವರಿಗೆ ನಿರ್ಭಂಧಿಸಲಾಗಿರುತ್ತದೆ. ಆದರೆ ಕೆಳ ಹಂತದ ಜಾತಿಗಳೆಂದು ಗುರುತಿಸಲ್ಪಟ್ಟಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಲ್ಲಿ ಈ ಬಗೆಯ ನಿರ್ಭಂಧಗಳು ಇರುವುದಿಲ್ಲ. ಇಲ್ಲಿನ ಮಹಿಳೆಯರು ಸ್ವಲ್ಪ ಮಟ್ಟಿಗಿನ ಸ್ವಾತಂತ್ರ್ಯವನ್ನು

ಪಡೆದುಕೊಂಡಿರುತ್ತಾರೆ. ಹಾಗಾಗಿ ಸರಕಾರದ ಯಾವುದೇ ಯೋಜನೆಯು ಜಾರಿಗೆ ಬಂದರೂ ಅದರ ಮೊದಲ ಫಲಾನುಭವಿಗಳು ಕೆಳ ಜಾತಿಯವರೇ ಆಗಿರುತ್ತಾರೆ. ಅದು ಮಹಿಳೆಯರು ಸಂಘಟಿತರಾದರೆ ಮಾತ್ರ

ಗ್ರಾಮ ಸಭೆಗಳನ್ನು ಮಾಡದೆಯೇ ಚುನಾಯಿತ ಸದಸ್ಯರು, ಅಧಿಕಾರಿಗಳು ಸೇರಿಕೊಂಡು ಗ್ರಾಮ ಪಂಚಾಯತಿಗಳಲ್ಲಿಯೇ ಸಭೆಗಳನ್ನು ಮಾಡಿಕೊಂಡು ಯೋಜನೆಯನ್ನು ರೂಪಿಸುವಂತಹ ಕೆಲಸಗಳೂ ಸಹ ಬಹಳಷ್ಟು ಕಡೆ ನಡೆದಿವೆ. ಇದು ಯೋಜನೆಯ ಉದ್ದೇಶಕ್ಕೆ ವಿರುದ್ಧವಾದ ಸಂಗತಿಯಾಗಿದೆ. ಇಂತಹ ಗುಪ್ತ ಸಭೆಗಳಲ್ಲಿಯೂ ಸಹ ಚುನಾಯಿತ ಮಹಿಳಾ ಸದಸ್ಯರ ಪಾತ್ರ ತುಂಬಾ ಗೌಣವಾಗಿರುತ್ತದೆ. ಗ್ರಾಮ ಸಭೆಯಲ್ಲಿ ಚುನಾಯಿತ ಮಹಿಳಾ ಸದಸ್ಯೆಯರು ಪಾಲ್ಗೊಂಡರೂ ಅವರ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳಲಾಗಿರುತ್ತದೆ. ಅವರ ಯಾವ ಮಾತಿಗೂ ಬೆಲೆ ಕೊಡಲಾರದಂತಹ ಕೆಲಸ ನಡೆಯುತ್ತದೆ. ಕೆಲವು ಸಂದರ್ಭದಲ್ಲಿ ಚುನಾಯಿತ ಸದಸ್ಯೆಯರು ಸಭೆಗಳಲ್ಲಿ ಭಾಗವಹಿಸುವುದನ್ನು ತಡೆದು ಅವರ ಬದಲಾಗಿ ಅವರ ಗಂಡ ಅಥವಾ ಅಣ್ಣ ತಮ್ಮಂದಿರು ಭಾಗವಹಿಸಿರುತ್ತಾರೆ. ಹೀಗೆ ಭಾಗವಹಿಸುವುದಕ್ಕೆ ಗ್ರಾಮದ ಆಂತರಿಕ ವ್ಯವಸ್ಥೆ ಅವಕಾಶ ಮಾಡಿಕೊಡುತ್ತದೆ. ಹಾಗೆಯೇ ಗ್ರಾಮ ಪಂಚಾಯತಿಗಳಲ್ಲಿ ಗ್ರಾಮ ಸಭೆಗಳನ್ನು ಮಾಡಿದ್ದರೂ ಸಹ ಆ ಸಭೆಗಳಿಗೆ ಅಲ್ಲಿನ ಸ್ತ್ರೀಶಕ್ತಿ ಸಂಘಟನೆಯವರು ಭಾಗವಹಿಸಲು ಮುಂದಾಗಿರುವಂತಹ ಮತ್ತು ಅದರಿಂದ ಆ ಮಹಿಳೆಯರು ಕೌಟುಂಬಿಕ ಹಿಂಸೆಗೆ ಒಳಗಾಗಿರುವಂತಹ ಘಟನೆಗಳೂ ನಡೆದಿರುವುದನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಗುರುತಿಸಲಾಗಿದೆ. ಹೀಗೆ ಮಾಡುವುದರ ಮೂಲಕ ಮಹಿಳೆಯರ ಸಂಪೂರ್ಣ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳಲಾಗಿರುತ್ತದೆ.

ರಾಯಚೂರು ಜಿಲ್ಲೆಯ ಜಂಬಲದಿನ್ನಿ ಗ್ರಾಮ ಪಂಚಾಯತಿಯ ಮಚ್ಚಲದಿನ್ನಿ ಗ್ರಾಮದ ಇಂಜಮ್ಮ ಹೇಳುವಂತೆ "ಸಾರ್ ನಮ್ಮೂರಾಗ ಇಲ್ಲಿತನ ಒಂದು ಗ್ರಾಮ ಸಭಾ ನಡದಿಲ್ಲ. ಪಿ.ಡಿ.ಓ. ಅವರು, ಅಧ್ಯಕ್ಷರು, ಮೆಂಬರ್‌ಗಳು ಎಲ್ಲಾರು ಸೇರಿ ಅಲ್ಲೇ ಪಂಚಾಯ್ತಿಯಾಗ ಕುಂತ್ಗಂಡು ಗ್ರಾಮ ಸಭೆ ಮಾಡೀವಿ ಅಂತ ಬರಕಂಡು ತಮ್ಗ ಬೇಕಿದ್ದವರು ಕಡೆ ಸಹಿ ಮಾಡ್ಸಿಗೆಂತಾರ. ನಾನು ಸ್ವ-ಸಹಾಯ ಸಂಘದಾಗ ಐದೀನಿ. ಹಂಗಾಗಿ ಇಷ್ಟೆಲ್ಲ ಮಾಹಿತಿ ಗೊತ್ತಾಗ್ತಾದ. ನಾವು ಸಂಘದ ಮೀಟಿಂಗ್ ಮಾಡಿದಾಗ ಎಲ್ಲಾ ಹೆಣ್ಣು ಮಕ್ಕಳು ಸೇರಿ ಇಂತ ಸಮಸ್ಯೆಗಳ ಬಗ್ಗೆ ಮಾತಾಡ್ತೀವಿ. ಆದ್ರೆ ಎಲ್ಲಾ ಹೆಂಗಸರು ಒಟ್ಟಾಗಿ ಹೋಗಿ ಪಂಚಾಯ್ತಿಯಾಗ ದುಡಿಯಾಕ ಕೆಲ್ಸ ಕೇಳಾನು ಅಂದ್ರೆ ಯಾರು ಬರಾದಿಲ್ಲ. ಯಾಕಂದ್ರ ಪಂಚಾಯ್ತಿ ಮೆಂಬರ್‌ಗಳು ನಮ್ ಮನ್ಯಾಗಿನ ಗಣಮಕ್ಕಳಿಗೆ ಹೇಳಿ ನಮ್ಮನ್ನ ಬಡ್ಸತಾರ. ಏನು ನಿಮ್ಯಾಗಿನ ಹೆಣ್ಮಕ್ಕಳನ್ನು ಪಂಚಾಯ್ತಿಗೆ ತಿರುಗಾಡಕ ಬಿಟ್ಟೀರೇನು? ಪಂಚಾಯ್ತಿಗೆ ಬಂದು ಕೆಲ್ಸ ಕೊಡ್ರಿ ಅಂತ ಕೇಳ್ತಾರ. ಹದ್ದುಬಸ್ತಿನಲ್ಲಿ ಹಿಟಗಂಬಾದು ಕಲೀರಿ ಅಂತ ನಮ್

ಗಣಮಕ್ಕಳನ್ನ ಹೆದ್ರಸ್ತಾರ. ಆವರು ಮಾತು ಕೇಳಿ ನಮ್ ಗಣಮಕ್ಳು ನಮ್ಗ ಬಡೀತಾರ. ಏನಾದ್ರೆ ಜಾಸ್ತಿ ಮಾತಾಡಿದ್ರೆ ಊರಾಗಿನ ಜನ ಎಲ್ಲಾರು ಸತ್ತುಹೋಗ್ಯಾರೇನು? ನೀವೊಂದೆ ದುಡಿಯಾಕ ಕೆಲ್ಸ ಕೇಳವರು ಇದ್ದೀರೇನು? ನಿಮಗ್ಯಾಕ ಬೇಕು ಮೂರು ಇಕಾತಿ. ಸುಮ್ನೆ ಮನ್ಯಾಗ ಬಿದ್ದಿರ್ರೀ ಅಂತ ಜಬರಸ್ತಾರ" ಎಂದು ಹೇಳಿದರು.

ಇನ್ನು ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕಿನ ಮಾಡಗಿರಿ ಗ್ರಾಮದ ಸಾಬಮ್ಮ ಗ್ರಾಮ ಪಂಚಾಯತಿಯ ಉಪಾಧ್ಯಕ್ಷರಾಗಿದ್ದಾರೆ. ಇವರು ಹೇಳುವ ಹಾಗೆ " ಸಾರ್ ನಮ್ಮೂರಾಗ ಗ್ರಾಮ ಸಭೆ ಸರಿಗಿ ನಡ್ಯಾದಿಲ್ಲ. ನಮ್ಮಂತವರು ಗ್ರಾಮ ಸಭೆ ಮಾಡ್ಬೇಕು ಅಂತ ಹೇಳ್ತೀವಿ. ಆದ್ರೆ ಬಾಳಷ್ಟು ಮೆಂಬರ್‌ಗಳು, ಅಧ್ಯಕ್ಷರು ಮತ್ತೆ ಸೆಕ್ರೆಟರಿ ಇವರೆಲ್ಲ ಗ್ರಾಮ ಸಭೆ ಮಾಡಾದು ಬ್ಯಾಡಂತ ಹೇಳ್ತಾರ. ಯಾಕಂದ್ರ ಗ್ರಾಮ ಸಭೆ ಮಾಡಿದ್ರೆ ಜನರಿಗೆ ಕೆಲಸಗಳ ಬಗ್ಗೆ ಮಾಹಿತಿ ಗೊತ್ತಾಗ್ತಾದ. ಮಾಹಿತಿ ಗೊತ್ತಾದ್ರೆ ಜನ ಜಗಳ ಮಾಡ್ತಾರಂತ. ಗ್ರಾಮ ಸಭೆ ಮಾಡೀವಿ ಅನ್ನಂಗ ಊರಾಗ ಬೇಕಿದ್ದವರ ಹತ್ರ ಸಹಿ ಮಾಡ್ಸಿಗೆಂತಾರ. ನಾನು ಒಬ್ಬಾಕೆ ಗ್ರಾಮ ಸಭೆ ಮಾಡ್ರಿ ಅಂತಂದ್ರೆ ನನ್ ಮಾತು ಯಾರು ಕೇಳ್ತಾರ" ಎಂದರು.

ಇನ್ನು ಗ್ರಾಮ ಪಂಚಾಯತಿಗೆ ಚುನಾವಣೆಯಲ್ಲಿ ಆರಿಸಿ ಬಂದಂತಹ ಸದಸ್ಯೆಯರೂ ಸಹ ಈ ಗ್ರಾಮ ಸಭೆಗಳಲ್ಲಿ ಭಾಗವಹಿಸದೇ ಇರುವುದನ್ನೂ ಸಾಬಮ್ಮ ಹೀಗೆ ಹೇಳುತ್ತಾಳೆ. "ಸಾರ್ ನಾನು ಗ್ರಾಮ ಸಭೆಗಳಿಗೆ ಹೋಗ್ತೀನಿ. ಪ್ರತಿಯೊಂದು ಮಾಹಿತಿ ಕೇಳ್ತೀನಿ. ಮಾಹಿತಿ ಹೇಳಲಿಲ್ಲ ಅಂದ್ರೆ, ಜಗಳ ಮಾಡ್ತೀನಿ. ಹಂಗಾಗಿ ನನ್ನ ಕಂಡ್ರೆ ಬಾಳಾಮಂದಿ ಮೆಂಬಾರಿಗೆ ಅಧ್ಯಕ್ಷರಿಗೆ ಮತ್ತೆ ಸೆಕ್ರೆಟರಿಗೆ ಆಗಾದಿಲ್ಲ. ಬ್ಯಾರೆ ಮೆಂಬರ್ ಆದ ಹೆಣ್ಣು ಮಕ್ಕಳು ಏನು ಐದಾರಲ್ಲ ಅವರ್‍ಯಾರು ಗ್ರಾಮ ಸಭೆಗೆ ಆಗಲಿ ಮತ್ತೆ ಮೀಟಿಂಗ್‌ಗೆ ಆಗಲಿ ಬರಾದಿಲ್ಲ. ಎಲ್ಲಾದ್ಕ ಅವರ ಗಂಡಂದಿರು ಬರ್ತಾರ. ಇಲ್ಲಿತನ ಒಂದು ಮೀಟಿಂಗ್ ಹಾಜರಿ ಹಾಗಿಲ್ಲ. ಮತ್ತೆ ಡಿಗ್ರಿ ಸಾಲಿ ಕಲಿತಂತ ಹೆಣ್ಣುಮಕ್ಕಳು ಮೆಂಬರ್ ಆಗ್ಯಾರ. ಆದ್ರೂನ್ ಅವರ್‍ಯಾರು ಬರಾದಿಲ್ಲ. ಆದ್ರೆ ಅವರೆಲ್ಲ ಹಾಜರಿ ಆಗ್ಯಾರ ಅನ್ನಂಗ ಮನಿಗಿ ಹೋಗಿ ನೋಟೀಸಿನ ಮ್ಯಾಲೆ ಸೈ ಮಾಡ್ಸಿಗೆಂಡು ಬರ್ತಾರ. ಮತ್ತೆ ಅವರು ಒಂದು ದಿನಾನು ಮೀಟಿಂಗ್‌ನ್ಯಾಗ ಆಗಲಿ, ಗ್ರಾಮ ಸಭೆಯಾಗ ಆಗ್ಲಿ ಮಾತಾಡಿಲ್ಲ. ಎಲ್ಲದ್ರಾಗ ಅವರ ಗಂಡನವರೇ ಮಾತಾಡ್ತಾರ. ನನಗ ನಿನ್ನ ಗಂಡನ ಕಳಸಂತ ಬೈತಾರ. ಪ್ರತಿಯೊಂದು ಕೆಲ್ಸದಾಗ ಮೋಸ ಮಾಡಾಕ ನೋಡ್ತಾರ. ನನ್‌ಮ್ಯಾಲೆ ದೌರ್ಜನ್ಯ ಮಾಡಾಕ ಬರ್ತಾರ" ಎಂದು ಹೇಳಿದಳು.

ಈ ಮೂರೂ ಪ್ರಕರಣಗಳಲ್ಲಿ ಸಮಾಜದಲ್ಲಿನ ಪುರುಷಶಾಹಿ ಚಿಂತನೆಗಳು ಮಹಿಳೆಯರನ್ನು ಹೇಗೆ ಶೋಷಿಸುತ್ತಿವೆ ಎಂಬುದನ್ನು ಕಾಣಬಹುದಾಗಿದೆ. ಪುಚ್ಚಲದಿನ್ನಿ ಗ್ರಾಮದ ಇಂಜಮ್ಮನವರು ಸ್ತ್ರೀಶಕ್ತಿ ಸಂಘದಲ್ಲಿ ಇರುವುದರಿಂದಾಗಿ ಇವರು ಗ್ರಾಮ ಸಭೆಗಳಲ್ಲಿ ಮತ್ತು ಗ್ರಾಮ

ಪಂಚಾಯತಿಯಲ್ಲಿ ಏನೇನು ನಡೆಯುತ್ತದೆ ಎಂಬುದನ್ನು ತಿಳಿದುಕೊಳ್ಳುವ ಮತ್ತು ಅವುಗಳಲ್ಲಿ ಭಾಗವಹಿಸುವ ಹಂಬಲವನ್ನು ಹೊಂದಿದವಳಾಗಿದ್ದಾಳೆ. ಆದರೆ ತಮ್ಮ ಮನೆಯ ಪುರುಷರು ಇದಕ್ಕೆ ಅವಕಾಶ ಮಾಡಿಕೊಡುತ್ತಿಲ್ಲ. ಒಂದು ವೇಳೆ ಇವರೇನಾದರೂ ಗ್ರಾಮ ಸಭೆಗಳಲ್ಲಿ ಭಾಗವಹಿಸಿದ್ದೇ ಆದರೆ ಗ್ರಾಮದಲ್ಲಿನ ಪಂಚಾಯತಿ ಸದಸ್ಯರು ತಮ್ಮ ಕುಟುಂಬದ ಪುರುಷರಿಗೆ ಕಂಪ್ಲೇಂಟ್ ಹೇಳುತ್ತಾರೆ. ಅವರೂ ಸಹ ಪುರುಷರೇ ಆಗಿದ್ದರಿಂದ ತಮ್ಮ ಮನೆಯ ಮಹಿಳೆಯರನ್ನು ಹಿಂಸಿಸಲು ಪ್ರಾರಂಭಿಸುತ್ತಾರೆ. ಹೀಗೆ ಗ್ರಾಮದ ಅಧಿಕಾರಿ ವರ್ಗದವರು ಮಹಿಳೆಯರನ್ನು ಕೌಟುಂಬಿಕ ಹಿಂಸೆಗೆ ದೂಡುವುದನ್ನು ಕಾಣಬಹುದಾಗಿದೆ.

ಸಾಬಮ್ಮ ಗ್ರಾಮ ಪಂಚಾಯತಿಯ ಉಪಾಧ್ಯಕ್ಷರಾಗಿದ್ದರೂ ಅವರ ಮಾತಿಗೆ ಯಾವುದೇ ಬೆಲೆ ಕೊಡದ ವ್ಯವಸ್ಥೆಯನ್ನು ಅವರ ಮಾತಿನಿಂದ ವ್ಯಕ್ತವಾಗುತ್ತದೆ. ಅಂದರೆ ಗ್ರಾಮ ಸಭೆಗಳನ್ನು ಗ್ರಾಮಗಳಲ್ಲಿಯೇ ಮಾಡಬೇಕು ಎಂದು ಹೇಳಿದರೂ ಅವರ ಮಾತುಗಳನ್ನು ಲೆಕ್ಕಿಸದೇ ಇರುವುದನ್ನು ಕಾಣಬಹುದಾಗಿದೆ. ಹೀಗೆ ಮಾಡುವುದರ ಮೂಲಕ ಪುರುಷಶಾಹಿ ವ್ಯವಸ್ಥೆ ಅಕ್ರಮವಾಗಿ ಹಣ ಗಳಿಕೆಗೆ ಮುಂದಾಗಿರುವುದು ಕಂಡುಬರುತ್ತದೆ. ಹಾಗೆಯೇ ಗ್ರಾಮ ಸಭೆಗಳು ಗ್ರಾಮ ಪಂಚಾಯತಿಯಲ್ಲಿಯೇ ನಡೆದರೂ ಅವುಗಳಿಗೆ ಪಂಚಾಯತಿಯ ಸದಸ್ಯೆಯರಾರೂ ಭಾಗವಹಿಸುವುದಿಲ್ಲ ಬದಲಾಗಿ ಅವರ ಗಂಡಂದಿರು ಭಾಗವಹಿಸುತ್ತಾರೆ ಎಂಬ ಕಟು ಸತ್ಯವನ್ನು ಬಿಚ್ಚಿಡುತ್ತಾರೆ. ಹಾಗೆಯೇ ಅವರಿಗೂ ಸಹ ತನ್ನ ಗಂಡನನ್ನೇ ಸಭೆಗೆ ಹಾಜರಾಗುವಂತೆ ಒತ್ತಾಯಿಸುವುದನ್ನೂ ಮತ್ತು ಅದಕ್ಕೆ ವಿರೋಧಿಸಿದ ಕಾರಣಕ್ಕೆ ಗ್ರಾಮ ಪಂಚಾಯತಿಯ ಇತರೆ ಸದಸ್ಯರು ಮತ್ತು ಅಧಿಕಾರಿ ವರ್ಗದವರ ವಿರೋಧವನ್ನು ಎದುರಿಸುತ್ತಿರುವುದನ್ನು ಕಾಣಲಾಗಿದೆ. ಅಂದರೆ ಗ್ರಾಮ ಪಂಚಾಯತಿಯಲ್ಲಿ ಅನೇಕ ರೀತಿಯಲ್ಲಿ ಅವ್ಯವಹಾರಗಳು ನಡೆಯುತ್ತವೆ ಎಂಬುದನ್ನು ಸಾಬಮ್ಮ ಸೂಚ್ಯವಾಗಿ ತಿಳಿಸುತ್ತಾರೆ. ಇವರು ಯಾವುದೇ ಶಿಕ್ಷಣವನ್ನು ಪಡೆದಿಲ್ಲ ಆದರೂ ಗ್ರಾಮ ಪಂಚಾಯತಿಯ ಎಲ್ಲಾ ಕೆಲಸ ಕಾರ್ಯಗಳಲ್ಲಿ ಭಾಗವಹಿಸುತ್ತಾರೆ. ಆದರೆ ಶಿಕ್ಷಣವನ್ನು ಪಡೆದಿರುವಂತಹ ಅನೇಕ ಮಹಿಳಾ ಸದಸ್ಯೆಯರು ಇದಕ್ಕೆ ತದ್ವಿರುದ್ಧರಾಗಿದ್ದಾರೆ. ಇವರಿಗೆ ಯಾವುದೇ ಸ್ವಾತಂತ್ರ್ಯವಿಲ್ಲ ಎಂಬಂತೆ ವರ್ತಿಸುತ್ತಾರೆ. ಆದರೆ ಇದು ಅವರ ತಪ್ಪಲ್ಲ. ಬದಲಾಗಿ ಪುರುಷಶಾಹಿ ಆಲೋಚನೆಗಳು ಅವರು ಈ ರೀತಿ ಇರುವಂತೆ ಮಾಡಿವೆ. ಹೀಗೆ ಗ್ರಾಮ ಪಂಚಾಯತಿಗಳಲ್ಲಿ ಮಹಿಳಾ ಸದಸ್ಯೆಯರು ಇದ್ದರೂ ಇವರಿಗೆ ಅಧಿಕಾರ ಇಲ್ಲವಾಗಿದೆ. ಇವರು ಹೆಸರಿಗೆ ಮಾತ್ರ ಸದಸ್ಯೆಯರು ಇವರ ಅಧಿಕಾರವನ್ನೆಲ್ಲಾ ಪುರುಷರು ಕಿತ್ತುಕೊಂಡಿದ್ದಾರೆ. ಹಾಗಾಗಿ ಇವರು ಗ್ರಾಮ ಸಭೆಗಳಲ್ಲಿ ಪಾಲ್ಗೊಳ್ಳದೇ ಇರುವಂತಹ ಸ್ಥಿತಿ ಕಂಡುಬರುತ್ತದೆ. ಒಂದು ವೇಳೆ ಪಾಲ್ಗೊಂಡರೂ ಪುರುಷನ ಅನುಮತಿಯನ್ನು ಪಡೆದು ಅವನು ಹೇಳಿದಂತೆಯೇ ಮಾತನಾಡಬೇಕಾದ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾಳೆ. ಹೀಗೆ ಒಟ್ಟಾರೆಯಾಗಿ ಗ್ರಾಮ ಸಭೆಗಳಲ್ಲಿ ಸ್ತ್ರೀಯರನ್ನು ಕಡೆಗಣಿಸಲಾಗಿದೆ.

ಆ ಮೂಲಕ ಲಿಂಗ ಅಸಮಾನತೆಯ ಅಂಶಗಳು ಬಲಿಷ್ಠಗೊಳ್ಳುವುದಕ್ಕೆ ಕಾರಣವಾಗಿದೆ. ಹೀಗೆ ಮಾಡುವುದರ ಮೂಲಕ ಉದ್ಯೋಗ ಖಾತರಿ ಯೋಜನೆಯ ಮೂಲ ಉದ್ದೇಶಕ್ಕೆ ಧಕ್ಕೆ ತರುವಂತಹ ಕೆಲಸ ನಡೆಯುತ್ತಿದೆ. ಒಟ್ಟಾರೆಯಾಗಿ ಗ್ರಾಮದ ಪಿತೃಪ್ರಧಾನ ವ್ಯವಸ್ಥೆ ಮಹಿಳೆಯರನ್ನು ಗ್ರಾಮ ಸಭೆಗಳಲ್ಲಿ ಭಾಗವಹಿಸದಂತೆ ನೋಡಿಕೊಳ್ಳುತ್ತಿದೆ. ಹೀಗೆ ಉದ್ಯೋಗ ಖಾತರಿ ಯೋಜನೆಯನ್ನು ರೂಪಿಸುವ ಹಂತದಲ್ಲಿಯೇ ಹಲವಾರು ಲಿಂಗ ಅಸಮಾನತೆಯ ಅಂಶಗಳು ಗೋಚರಿಸುವುದನ್ನು ಕ್ಷೇತ್ರಕಾರ್ಯ ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

ಗ್ರಾಮ ಪಂಚಾಯತಿಗಳಲ್ಲಿ ಯೋಜನೆಯನ್ನು ಪ್ರಾಮಾಣಿಕವಾಗಿ ಜಾರಿಗೆ ತರಬೇಕು ಎಂಬಂತಹ ಮನಸ್ಸುಳ್ಳ ಅಧಿಕಾರಿ ವರ್ಗದವರು ಗ್ರಾಮ ಪಂಚಾಯತಿಗಳಲ್ಲಿ ನಡೆಯುತ್ತಿರುವಂತಹ ಅವ್ಯವಹಾರಗಳನ್ನು ಮತ್ತು ಲಿಂಗ ಅಸಮಾನತೆಯ ನೆಲೆಗಳನ್ನು ತೊಡೆದು ಹಾಕುವಂತಹ ಕಾರ್ಯಕ್ಕೆ ಮುಂದಾಗಬಹುದಾಗಿದೆ. ಈ ಬಗೆಯ ಪ್ರಾಮಾಣಿಕ ಪ್ರಯತ್ನ ಎಲ್ಲಾ ಅಧಿಕಾರಿ ವರ್ಗಕ್ಕೂ ಇದೆಯಾದರೂ ಸ್ಥಳೀಯ ಮಟ್ಟದ ರಾಜಕಾರಣಗಳಿಗೆ ಒಳಗಾಗಿರುವುದನ್ನು ಕಾಣಬಹುದಾಗಿದೆ. ಈ ಸ್ಥಳೀಯ ರಾಜಕಾರಣದಿಂದ ಉದ್ಯೋಗ ಖಾತರಿ ಯೋಜನೆಯಲ್ಲಿ ಅನೇಕ ಅವ್ಯವಹಾರಗಳು ನಡೆಯುತ್ತಿರುವುದು ಕಂಡುಬರುತ್ತದೆ. ಆದರೆ ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನ ಪಾಪಿನಾಯಕನಹಳ್ಳಿ ಗ್ರಾಮ ಪಂಚಾಯತಿಯ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಯಾದಂತಹ ಮಂಜುಳಾ ರಾಣಿಯವರು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿನ ಎಲ್ಲಾ ಜನರಿಗೆ ಈ ಉದ್ಯೋಗ ಖಾತರಿ ಯೋಜನೆಯ ಅರಿವನ್ನು ಮೂಡಿಸುವಲ್ಲಿ ಯಶಸ್ವಿಯಾಗಿದ್ದಾರೆ. ಆ ಕಾರಣಕ್ಕಾಗಿ ಈ ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿನ ಎಲ್ಲಾ ಮಹಿಳೆಯರೂ ಗ್ರಾಮ ಸಭೆಗಳಲ್ಲಿ ಭಾಗವಹಿಸುವ ಮತ್ತು ಸಮಸ್ಯೆಗಳ ಬಗ್ಗೆ ಚರ್ಚಿಸುವಂತಾಗಿದೆ. ಅವರೇ ಹೇಳುವ ಹಾಗೆ " ನಾನು ಈ ಪಂಚಾಯ್ತಿಗೆ ಹೊಸದಾಗಿ ಬಂದಂತಹ ಸಂದರ್ಭದಲ್ಲಿ ಯಾವ ಮಹಿಳೆಯು ಕೂಡ ಗ್ರಾಮ ಸಭೆಗಳಿಗೆ ಆಗಲಿ, ವಾರ್ಡ್‌ಸಭೆಗಳಿಗೆ ಆಗಲಿ ಮತ್ತು ಪಂಚಾಯ್ತಿಗೆ ಬಂದು ದುಡಿಯಾಕ ಕೂಲಿ ಕೆಲ್ಸ ಬೇಕಂತೇಳಿ ಯಾರು ಪಂಚಾಯ್ತಿಗೆ ಬರ್ತಿರಲಿಲ್ಲ. ಆದ್ದರಿಂದ ನಾನು ಖುದ್ದಾಗಿ ಪಾಪಿನಾಯಕನಹಳ್ಳಿಯ ಪ್ರತಿಯೊಂದು ಓಣಿಗೆ ಹೋಗಿ ಮಹಿಳೆಯರ ಸಭೆ ಮಾಡಿ ಅವರಿಗೆ ಈ ಯೋಜನೆಯ ಬಗ್ಗೆ ಸಂಪೂರ್ಣ ಮಾಹಿತಿಯನ್ನು ನೀಡಿ, ಅದರ ಜೊತೆಗೆ ಗ್ರಾಮ ಸಭೆಗೆ ಬಂದು ನಿಮ್ಮ ಸಮಸ್ಯೆಗಳ ಬಗ್ಗೆ ಹೇಳಬೇಕು ಮತ್ತು ಪಂಚಾಯ್ತಿಯಿಂದ ಸಿಗಬೇಕಾದ ಸೌಲಭ್ಯಗಳ ಬಗ್ಗೆ ಕೇಳಬೇಕು. ಮತ್ತೆ ನಿಮಗೆ ದುಡಿಯಲು ಕೆಲಸ ಇಲ್ಲಂದ್ರೆ ಕೆಲಸ ಕೇಳಿ ಅರ್ಜಿ ಸಲ್ಲಿಸಬೇಕು ಎಂದು ತಿಳಿಸಿದೆ. ಹಾಗಾಗಿ ಇವತ್ತು ಏನಾಗ್ಯಾದಂದ್ರ ಪ್ರತಿಯೊಂದು ಗ್ರಾಮ ಸಭೆಗೆ ವಾರ್ಡ್‌ಸಭೆಗೆ ಶೇ.೫೦ರಷ್ಟು ಮಹಿಳೆಯರು ಬರ್ತಾರಂತ ಹೇಳಬಹುದು. ಮತ್ತೆ ಇವತ್ತು ಪಂಚಾಯ್ತಿಗೆ ಬಂದು ಕೆಲ್ಸಕ್ಕ ಅರ್ಜಿಸಲ್ಲಿಸುವಷ್ಟು ಮಹಿಳೆಯರು ಮುಂದುವರೆದಿದ್ದಾರೆ. ಮತ್ತೆ ಕೆಲ್ಸ ಕೇಳಿದ ಟೈಮಿಗೆ

ಕೊಡಾಕ ಆಗ್ಲಿಲ್ಲಂದ್ರೆ ಪ್ರತಿಭಟಿಸುವಂತಹ ಮಟ್ಟಕ್ಕೆ ಇದ್ದಾರ ಅಂದ್ರೆ ತಪ್ಪಾಗಲಾರದು". ಹೀಗೆ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿನ ಮಹಿಳೆಯರು ಗ್ರಾಮ ಸಭೆಗಳಿಗೆ ಮಾತ್ರವಲ್ಲದೆ ಇನ್ನುಳಿದ ಎಲ್ಲಾ ಕೆಲಸಗಳ ಸ್ವರೂಪಗಳಲ್ಲಿಯೂ ಸಕ್ರಿಯವಾಗಿ ಭಾಗವಹಿಸುವುದನ್ನು ಹೇಳುತ್ತಾರೆ. ಈ ಹಿಂದೆ ಇದ್ದಂತಹ ಗ್ರಾಮ ಪಂಚಾಯತಿ ಅಧಿಕಾರಿಯ ಅಧಿಕಾರಾವಧಿಯಲ್ಲಿ ಮಹಿಳೆಯರು ಗ್ರಾಮ ಸಭೆಗಳಿಗೂ ಸಹ ಹಾಜರಾಗದಿರುವುದನ್ನು ಮತ್ತು ಆ ಅವಕಾಶ ಒದಗಿಸಿಕೊಟ್ಟಿರದೇ ಇರುವುದನ್ನು ಮಂಜುಳಾ ರಾಣಿಯವರು ಸೂಚ್ಯವಾಗಿ ತಿಳಿಸುತ್ತಾರೆ.

ಹೀಗೆ ಈ ಬಗೆಯ ತಾರತಮ್ಯಗಳು ಗ್ರಾಮೀಣ ಭಾಗಗಳಲ್ಲಿ ಇರುವುದನ್ನು ಕಾಣಬಹುದಾಗಿದೆ. ಗಾಂಧೀಜಿಯವರು ಈ ಗ್ರಾಮ ಸಭೆಗಳಲ್ಲಿ ಸ್ತ್ರೀ ಪುರುಷರಿಬ್ಬರೂ ಸಮಾನವಾಗಿ ಭಾಗವಹಿಸಬೇಕು ಎಂದು ಹೇಳುತ್ತಾರೆ. ಅಂದರೆ "ಹಳ್ಳಿಯ ಎಲ್ಲಾ ಹೆಂಗಸರು ಮತ್ತು ಗಂಡಸರು ಕೂಡಿ ನಿರ್ಮಿತವಾದ ಗ್ರಾಮ ಸಭೆಯೇ ಹಳ್ಳಿಯ ಸ್ವಾಭಾವಿಕ ಸಂಘಟನೆಯಾಗಿದೆ. ಅದಕ್ಕಾಗಿ ಯಾವುದೇ ವಿಧದ ಚುನಾವಣೆಯ ಪ್ರಶ್ನೆಯೇ ಇರಲಾರದು. ಹಳ್ಳಿಗಳಲ್ಲಿ ಜನ್ಮವೆತ್ತಿದ ಅಥವಾ ಅಲ್ಲಿ ನೆಲೆಸಿಕೊಂಡಿರುವ ಎಲ್ಲಾ ಹೆಂಗಸರು ಮತ್ತು ಗಂಡಸರು ಆ ಗ್ರಾಮಸಭೆಯ ಜನ್ಮದಾತ ಸದಸ್ಯರಾಗಿರುತ್ತಾರೆ. ಗ್ರಾಮ ಸಭೆಯು ಹಳ್ಳಿಯ ಎಲ್ಲಕ್ಕಿಂತ ಉನ್ನತ ಸಂಸ್ಥೆಯಾಗಿದೆ ಮತ್ತು ಅದು ಹಳ್ಳಿಯ ಎಲ್ಲಾ ವ್ಯವಸ್ಥೆಗಳಿಗೆ ಹೊಣೆಗಾರ ಆಗಿದೆ. ಸಾಮಾನ್ಯತಃ ಗ್ರಾಮ ಸಭೆಗೆ ಗಂಡಸರೇ ಬರುತ್ತಾರೆ. ಅದೂ ಕೂಡ ಕುಟುಂಬದ ಯಜಮಾನ ಒಬ್ಬ ವ್ಯಕ್ತಿ. ಸಾಮಾನ್ಯವಾಗಿ ಈ ಪರಿಪಾಠಕ್ಕೆ ಅಡ್ಡಿಯೇನೂ ಇರಲಾರದು. ಗ್ರಾಮದ ಪ್ರತೀ ಕುಟುಂಬದಿಂದ ಒಬ್ಬ ವ್ಯಕ್ತಿ ಗ್ರಾಮಸಭೆಯಲ್ಲಿ ಭಾಗವಹಿಸಿದರೂ ಸರಿಯೇ–ಆದರೆ ಹೆಂಗಸರೂ ಗ್ರಾಮ ಸಭೆಗಳಲ್ಲಿ ಭಾಗವಹಿಸಲಿ, ಪ್ರತಿಯೊಂದು ಕುಟುಂಬದಿಂದ ಗ್ರಾಮ

ಸಭೆಯಲ್ಲಿ ಒಬ್ಬ ಗಂಡಸಿನ ಹೊರತು ಒಬ್ಬಳು ಹೆಂಗಸೂ ಹಾಜರಿದ್ದರೆ ಕುಟುಂಬದ ಗಂಡಸು ಮತ್ತು ಹೆಂಗಸು ಇಬ್ಬರಿಗೂ ಗ್ರಾಮದ ಸಮಸ್ಯೆಗಳ ತಿಳುವಳಿಕೆ ಇದ್ದಂತಾಗುತ್ತದೆ. ಆ ಸಮಸ್ಯೆಗಳನ್ನು ಎದುರಿಸಲು ಎಲ್ಲರ ಹಾರ್ದಿಕ ಸಹಯೋಗ ಸಿಕ್ಕಂತಾಗುತ್ತದೆ"[3]. ಎಂದು ಹೇಳಿದ್ದಾರೆ. ಗ್ರಾಮ ಸಭೆಗಳಲ್ಲಿ ಈ ಬಗೆಯ ಸಾಮರಸ್ಯ ಕೂಡಿದ್ದಾಗ ಮಾತ್ರ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಕೊಳ್ಳಬಹುದು. ಮುಖ್ಯವಾಗಿ ಸ್ತ್ರೀ ಪುರುಷರು ಕೇಲವ ಗ್ರಾಮಸಭೆಗಳಲ್ಲಿ ಭಾಗವಹಿಸುವುದಷ್ಟೇ ಅಲ್ಲದೇ ಆ ಸಭೆಗಳಲ್ಲಿ ತಮ್ಮ ನಿರ್ಣಯಗಳನ್ನೂ ಸಹ ವ್ಯಕ್ತಪಡಿಸುವಂತಾಗಬೇಕು ಎಂದು ಹೇಳುತ್ತಾರೆ. ಆದರೆ ವಾಸ್ತವದಲ್ಲಿ ಈ ಬಗೆಯ ವಾತಾವರಣ ಕಾಣಸಿಗುತ್ತಿಲ್ಲ. ಮನುಷ್ಯನ ಸ್ವಾರ್ಥತೆಯ ಕಾರಣವಾಗಿ ಗ್ರಾಮ ಸಭೆಗಳು ಕೇವಲ ಹೆಸರಿಗೆ ಮಾತ್ರ ಎನ್ನುವಂತದ್ದಾಗಿವೆ. ಮೇಲಿನ ಎಲ್ಲಾ ಪ್ರಕರಣಗಳಲ್ಲಿಯೂ ಈ ಬಗೆಯ ಸ್ವಾರ್ಥ ಮನೋಭಾವ ಮತ್ತು ಶೋಷಣೆಯ ಪ್ರವೃತ್ತಿ ಇರುವುದು ಕಂಡುಬರುತ್ತಿದೆ. ಹಾಗಾಗಿ ಗ್ರಾಮ ಸಭೆಗಳಲ್ಲಿ ಮಹಿಳೆಯರಿಗೆ ಯಾವುದೇ ಅವಕಾಶಗಳು ದೊರೆಯದಂತೆ ಮಾಡಲಾಗುತ್ತಿದೆ. ಇದು ಬದಲಾಗಬೇಕಾಗಿದೆ.

ಪಂಚಾಯತ್‌ರಾಜ್ ವ್ಯವಸ್ಥೆ ಮತ್ತು ಗ್ರಾಮಸ್ವರಾಜ್ಯ ಇವುಗಳ ಬಗ್ಗೆ ಗಾಂಧೀಜಿಯವರು ಸ್ಪಷ್ಟ ನಿಲುವನ್ನು ಹೊಂದಿದ್ದರು. ಸರಕಾರಗಳು ಜಾರಿಗೆ ತಂದಿರುವಂತಹ ಪಂಚಾಯತ್ ರಾಜ್ ವ್ಯವಸ್ಥೆ ಮತ್ತು ಗಾಂಧೀಜಿಯವರ ಗ್ರಾಮ ಸ್ವರಾಜ್ಯಗಳ ನಡುವೆ ತುಂಬಾ ವ್ಯತ್ಯಾಸವಿದೆ. "ಗ್ರಾಮ ಸ್ವರಾಜ್ಯ ವ್ಯವಸ್ಥೆಯಲ್ಲಿ ಗ್ರಾಮ ಸಭೆಯು ಎಲ್ಲಕ್ಕಿಂತ ಸರ್ವೋನ್ನತ ಘಟಕ. ಗ್ರಾಮದ ಎಲ್ಲಾ ಗಂಡಸರು ಮತ್ತು ಹೆಂಗಸರನ್ನು ಒಳಗೊಂಡ ಗ್ರಾಮ ಸಭೆಯು ಗ್ರಾಮದ ಸರ್ವೋಚ್ಚ ನಿರ್ಣಾಯಕ ಸಂಸ್ಥೆಯಾಗಿದೆ. ಪಂಚಾಯತ್ ರಾಜ್ಯದಲ್ಲಿ ಈ ವ್ಯವಸ್ಥೆ ಇಲ್ಲ. ಅದರಲ್ಲಿ ಗ್ರಾಮ ಸಭೆಯ ಮಾತನ್ನು ಹೇಳಲಾಗಿದೆ; ಹೊರತು ಗ್ರಾಮ ಸಭೆಗೆ ಯಾವ ಅಧಿಕಾರವನ್ನೂ ಕೊಟ್ಟಿಲ್ಲ. ಅದರಲ್ಲಿ ಗ್ರಾಮ ಪಂಚಾಯತಿ ಮುಖ್ಯವಾದದ್ದು. ನಿಜ ಹೇಳಬೇಕಾದರೆ, ಗ್ರಾಮ ಪಂಚಾಯತ್ ಎಂಬ ಹೆಸರೇ ಭ್ರಮೆಯನ್ನು ಉಂಟು ಮಾಡುತ್ತದೆ. ಏಕೆಂದರೆ ಅದು ಯಾವುದೇ ಒಂದು ಗ್ರಾಮದ ಪಂಚಾಯತಿ ಆಗಿರದೇ ನಾಲ್ಕಾರು ಗ್ರಾಮಗಳನ್ನು ಕೂಡಿಸಿ ಐದು ವರ್ಷಗಳಲ್ಲಿ ಒಂದಾವರ್ತಿ ಆ ಗ್ರಾಮಗಳ ನಿವಾಸಿಗಳಿಂದ ಆರಿಸಲ್ಪಟ್ಟ ಜನರ ಸಂಸ್ಥೆಯಾಗಿದೆ. ಇದು ಒಂದು ವಿಧದಿಂದ ವಿಧಾನಸಭೆ ಅಥವಾ ಜಿಲ್ಲಾ ಪರಿಷತ್ತಿನಂತೆ ಪ್ರಾತಿನಿಧಿಕ ಸಂಸ್ಥೆಯಾಗಿದೆ. ಗ್ರಾಮ ಪಂಚಾಯತಿಗಳಿಗೆ ಕೇವಲ ಕೆಲವು ಸೀಮಿತ ಹಾಗೂ ಮಹತ್ವಹೀನ ಅಧಿಕಾರಗಳನ್ನು ಕೊಡಲಾಗಿದೆ"[3]. ಹೀಗೆ ಗ್ರಾಮ ಸ್ವಾರಾಜ್ಯದ ಕಲ್ಪನೆ ಮತ್ತು ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಗ್ರಾಮ ಪಂಚಾಯತಿಗಳ ಮಹತ್ವ ಹೇಗಿರುತ್ತದೆ ಎಂಬುದರ ಬಗ್ಗೆ ನಿರ್ಧಿಷ್ಟವಾದಂತಹ ಕಲ್ಪನೆ ಗಾಂಧೀಜಿಯವರಲ್ಲಿ ಇದ್ದುದನ್ನು ಕಾಣಬಹುದಾಗಿದೆ. ಆದರೆ ಪ್ರಸ್ತುತ ಜಾರಿಯಲ್ಲಿರುವ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಗ್ರಾಮ ಸಭೆಗಳಿಗೆ ಮಹತ್ವವಿದೆಯಾದರೂ ಆ ಸಭೆಗಳಲ್ಲಿ ಪಾಲ್ಗೊಳ್ಳುವಿಕೆಯಲ್ಲಿ ಇರುವಂತಹ ತಾರತಮ್ಯದಿಂದಾಗಿ ಮಹಿಳೆಯರು ದೂರವಿರುವಂತೆ ಮಾಡಿದುದನ್ನು ಕಾಣಬಹುದಾಗಿದೆ. ಇವುಗಳಿಗೆ ಮೇಲೆ ತಿಳಿಸಿದಂತಹ ಪ್ರಕರಣಗಳು ಸಾಕ್ಷೀಭೂತವಾಗಿವೆ.

**೭.೩. ಯೋಜನೆಯ ಅನುಷ್ಠಾನದ ಹಂತ**

ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನದ ಸಂದರ್ಭದಲ್ಲಿಯೂ ಲಿಂಗ ಅಸಮಾನತೆಯ ಅಂಶಗಳು ಹೆಚ್ಚಾಗಿ ಕಂಡುಬರುತ್ತಿವೆ. ಮುಖ್ಯವಾಗಿ ಉದ್ಯೋಗ ಚೀಟಿಗಳನ್ನು ರೂಪಿಸುವ ಹಂತದಿಂದ ಹಿಡಿದು ಕಾಮಗಾರಿ ಸ್ಥಳಗಳಲ್ಲಿನ ಕೆಲಸ ನಿರ್ವಹಿಸುವ ಹಂತದವರೆಗೆ ಮಹಿಳೆಯರು ಹಲವಾರು ಸಮಸ್ಯೆಗಳಿಗೆ ಒಳಗಾಗಿದ್ದಾರೆ. ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನದ ಸಂದರ್ಭದಲ್ಲಿ ಗಂಡು ಹೆಣ್ಣಿನ ಲಿಂಗ ಸೂಕ್ಷ್ಮದ ಕಾರಣಕ್ಕೆ ಯೋಜನೆಯ ಕೆಲಸದ ಸ್ವರೂಪದಲ್ಲಿ ಕೆಲವು ಮಾನವೀಯ ಅಂಶಗಳಿವೆ. ಆದರೆ ಅನುಷ್ಠಾನದ ಸಂದರ್ಭದಲ್ಲಿ ಈ ಅಂಶಗಳು ಗೌಣವಾಗುವುದು ಅಥವಾ ಈ ಅಂಶಗಳನ್ನು ಪರಿಗಣಿಸದೆ ಇರುವುದು ವ್ಯಾಪಕವಾಗಿ ಕಂಡುಬರುತ್ತದೆ. ಈ ನಿಟ್ಟಿನಲ್ಲಿ ಯೋಜನೆಯ ಅನುಷ್ಠಾನದ ಸಂದರ್ಭದಲ್ಲಿನ ಲಿಂಗ ಅಸಮಾನತೆಯ ನೆಲೆಗಳನ್ನು ಗುರುತಿಸುವ ಕಾರಣಕ್ಕಾಗಿ ಮೂರು ಹಂತಗಳಲ್ಲಿ ವಿವರಿಸಲಾಗಿದೆ.

ಅ) ಉದ್ಯೋಗ ಕಾರ್ಡ್‌ಗಳನ್ನು ಮಾಡಿಸುವಲ್ಲಿನ ಲಿಂಗ ಅಸಮಾನತೆಯ ನೆಲೆಗಳು

ಉದ್ಯೋಗ ಚೀಟಿಗಳನ್ನು ಮಾಡಿಸುವಾಗ ಯೋಜನೆಯಲ್ಲಿ ತಿಳಿಸಿರುವಂತೆ ಫಾರಂ ನಂಬರ್ ೩ರ ಅಡಿಯಲ್ಲಿ ಅರ್ಜಿಯನ್ನು ತುಂಬುವುದರ ಮೂಲಕ ಕೆಲಸಕ್ಕೆ ನೋಂದಾಯಿಸಿಕೊಳ್ಳಬೇಕಾಗುತ್ತದೆ. ಆದರೆ ಗ್ರಾಮೀಣ ಭಾಗದ ಜನರು ಶಿಕ್ಷಣದಿಂದ ವಂಚಿತರಾಗಿರುವ ಕಾರಣಕ್ಕೆ ಅವರಿಗೆ ಇದರ ಕುರಿತಂತೆ ಸಂಪೂರ್ಣವಾದ ಜ್ಞಾನ ಇಲ್ಲದಾಗಿರುತ್ತದೆ. ಇಂತಹ ಸಂದರ್ಭದಲ್ಲಿ ಮಹಿಳೆಯರು ಪುರುಷರನ್ನು ಅವಲಂಬಿಸಿರುತ್ತಾರೆ. ಈ ವೇಳೆಯಲ್ಲಿ ಗ್ರಾಮೀಣ ಭಾಗಗಳಲ್ಲಿ ಪುರುಷರು ಒಂದು ಅರ್ಜಿಯನ್ನು ತುಂಬಿಕೊಡುವುದಕ್ಕಾಗಿ ಇಂತಿಷ್ಟು ಹಣವೆಂದು ತೆಗೆದುಕೊಳ್ಳುವ ಉದಾಹರಣೆಗಳು ಕಂಡುಬರುತ್ತವೆ. ಕೆಲವು ಸಂದರ್ಭಗಳಲ್ಲಿ ಗ್ರಾಮ ಪಂಚಾಯತಿ ಸದಸ್ಯರೇ ಈ ಅರ್ಜಿ ನಮೂನೆಗಳನ್ನು ಜನರ ಬಳಿಗೆ ತಂದು ತಾವೇ ಅರ್ಜಿಯನ್ನು ಭರ್ತಿ ಮಾಡಿಕೊಂಡು ತೆಗೆದುಕೊಂಡು ಹೋಗುವಂತಹ ಉದಾಹರಣೆಗಳೂ ಕಾಣಸಿಗುತ್ತವೆ. ಇವರು ಉದ್ಯೋಗಕ್ಕಾಗಿ ಅರ್ಜಿಯನ್ನು ಭರ್ತಿ ಮಾಡಲು ಹಣವನ್ನೇನೂ ತೆಗೆದುಕೊಳ್ಳುವುದಿಲ್ಲ. ಬದಲಾಗಿ ಉದ್ಯೋಗ ಕಾರ್ಡ್‌ಗಳನ್ನೇ ತಮ್ಮಲ್ಲಿ ಇಟ್ಟುಕೊಂಡಿರುತ್ತಾರೆ. ಆದರೆ ಪಾರದರ್ಶಕತೆ ಮತ್ತು ಜವಾಬ್ದಾರಿಯನ್ನು ನಿರ್ವಹಿಸಿಕೊಂಡು ಹೋಗಲು ಉದ್ಯೋಗ ಚೀಟಿಯು ಯಾರ ಹೆಸರಲ್ಲಿ ನೀಡಲಾಗಿರುತ್ತದೆಯೋ ಅದು ಅವರ ಬಳಿಯೇ ಸುರಕ್ಷಿತವಾಗಿರುವಂತೆ ನೋಡಿಕೊಳ್ಳಬೇಕು. ಯಾವುದೇ ಕಾರಣಕ್ಕೂ ಗ್ರಾಮ ಪಂಚಾಯತಿ ಸದಸ್ಯರ ಹತ್ತಿರವಾಗಲೀ ಅಥವಾ ಎಮ್.ಜಿ.ಎನ್.ಆರ್.ಇ.ಜಿ.ಎ. ಅನುಷ್ಠಾನ ಸಿಬ್ಬಂಧಿಗಳ ಬಳಿಯಲ್ಲಿ ಉದ್ಯೋಗ ಚೀಟಿಯನ್ನು ಬಿಡುವಂತಿಲ್ಲ. ಇದನ್ನು ಕಾಯ್ದೆಯ ಪ್ರಕರಣ ೨೫ರ ಅನ್ವಯ ಶಿಕ್ಷಾರ್ಹ ಅಪರಾಧವಾಗಿರುತ್ತದೆ. ಆದರೆ ಇವುಗಳೆಲ್ಲವನ್ನು ಲೆಕ್ಕಿಸದೇ ಗ್ರಾಮದಲ್ಲಿನ ಗ್ರಾಮ ಪಂಚಾಯತಿ ಸದಸ್ಯರು ಉದ್ಯೋಗ ಚೀಟಿಗಳನ್ನು ಮಾಡಿಸಿ ತಮ್ಮ ಬಳಿಯೇ ಇಟ್ಟುಕೊಂಡಿರುತ್ತಾರೆ. ಹಾಗೂ ಇವರು ಉದ್ಯೋಗ ಚೀಟಿಗಳನ್ನು ಹೆಚ್ಚಾಗಿ ಮಹಿಳೆಯರ ಹೆಸರಲ್ಲಿಯೇ ಮಾಡಿಸುವುದು ಕಂಡುಬರುತ್ತದೆ. ಇದಕ್ಕೆ ಕಾರಣವೂ ಇದೆ. ಉದ್ಯೋಗ ಚೀಟಿಗಳನ್ನು ಮಾಡಿಸಿದ ನಂತರ ಮಹಿಳೆಯರಿಗೆ ಕೆಲಸ ಕೊಡಿಸುವುದಿಲ್ಲ. ಬದಲಾಗಿ ಅವರ ಹೆಸರಿನಲ್ಲಿ ಯಂತ್ರಗಳನ್ನು ಬಳಸಿ ಕೆಲಸಗಳನ್ನು ನಿರ್ವಹಿಸುತ್ತಾರೆ. ಇದನ್ನು ಪ್ರಶ್ನಿಸುವ ಗೋಜಿಗೆ ಮಹಿಳೆಯರು ಬರುವುದಿಲ್ಲ ಎಂಬ ಕಾರಣಕ್ಕಾಗಿ ಮಹಿಳೆಯರ ಹೆಸರಿನಲ್ಲಿ ಕಾರ್ಡುಗಳನ್ನು ಮಾಡಿಸುವುದನ್ನು ಕಾಣಲಾಗಿದೆ. ಹೀಗೆ ಮಾಡುವುದರ ಹಿಂದೆ ಗ್ರಾಮ ಪಂಚಾಯತಿ ಸದಸ್ಯರು, ಅಧ್ಯಕ್ಷರು ಇವರುಗಳು ಈ ಉದ್ಯೋಗ ಖಾತರಿ ಯೋಜನೆಯಲ್ಲಿ ಹಣವನ್ನು ಲಪಟಾಯಿಸುವ ತಂತ್ರ ಅಡಗಿರುತ್ತದೆ. ಜೊತೆಗೆ ಗ್ರಾಮ ಪಂಚಾಯತಿಯಲ್ಲಿ ಕೆಲಸ ಮಾಡುವಂತಹ ಅಧಿಕಾರಿಗಳೇನೂ ಇದಕ್ಕೆ ಹೊರತಾಗಿಲ್ಲ. ಇವರೂ ಸಹ ಗ್ರಾಮೀಣ ಪ್ರದೇಶದ ಮಹಿಳೆಯರನ್ನು ಹಿಂಸಿಸುವುದರಲ್ಲಿ ಹಿಂದೆ ಬಿದ್ದಿಲ್ಲ. ಇದಕ್ಕೆ ಸಂಬಂಧಿಸಿದಂತೆ ಹಲವಾರು ಪ್ರಕರಣಗಳು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡುಬಂದಿವೆ.

ಕೊಪ್ಪಳ ಜಿಲ್ಲೆ ಯಲಬುರ್ಗ ತಾಲೂಕು ಬಂಡಿ ಗ್ರಾಮ ಪಂಚಾಯ್ತಿಯ ತುಮ್ಮರಗುದ್ದಿ ಗ್ರಾಮದ ಬಸಮ್ಮ ವಿಧವೆಯಾಗಿದ್ದು, ಇವರು ಹೇಳುವಂತೆ " ಉದ್ಯೋಗ ಖಾತ್ರಿ ಯೋಜನಿ ಬಂದಾಗ ಪಂಚಾಯ್ತಿಯವರು ಏನು ಮಾಡ್ಲಿಕತ್ತಿದ್ರು ಅಂದ್ರೆ, ಬರೀ ತಮ್ಗ ಬೇಕಿದ್ದವರ ಹೆಸರಮ್ಯಾಗಷ್ಟೇ ಕೂಲಿಕಾರರ ಕಾರ್ಡ್ ಮಾಡ್ಸಿ ಕೊಡ್ಲಿಕತ್ತಿದ್ರು, ಆಮ್ಯಾಲೆ ಹಿಂಗೆಲ್ಲ ಮಾಡ್ಲಿಕತ್ತ್ಯಾರ ಅಂತ ಗೊತ್ತಾದ ಮ್ಯಾಲೆ ನಾನು ನಮ್ ಅಕ್ಕ ಪಂಚಾಯ್ತಿಗೆ ಹೋಗಿ ನಮ್ಗ ಕೂಲಿಕಾರರ ಕಾರ್ಡ್ ಮಾಡಿ ಕೊಡ್ರಿ ಅಂತ ಕೇಳಿದ್ವಿ, ಆದ್ರೆ ಯಾರು ಹಚ್ಚಿಗೆಳ್ಳಲಿಲ್ಲ. ಕೊನಿಗೆ ಬಿಲ್ ಕಲೆಕ್ಟರನಿಗೆ ನಾನು, ನಮ್ಮಕ್ಕ ಇಬ್ರು ಸೇರಿ ಸಾವಿರ ರೂಪಾಯಿ ಲಂಚ ಕೊಟ್ಟೇವಿ. ಸಾವಿರ ರೂಪಾಯಿ ಲಂಚ ತಗಂಡು ಮ್ಯಾಲೆ ನಮ್ಗ ಕಾರ್ಡ್ ಮಾಡಿಕೊಟ್ಟಾರ. ಇಲ್ಲಿಗೆ ಕಾರ್ಡ್ ಮಾಡ್ಸಿ ಮೂರು ವರ್ಷ ಆಯಿತು. ಆದ್ರೆ ಏನು ಮಾಡ್ಬೇಕು ಅದನ್ನ ತಗಂಡು. ಬರೀ ಕಾರ್ಡ್ ತಗಂಡ್ರೆ ಅದರಿಂದ ತಿನ್ನಾಕ ಬರ್ತಾದ, ಉಣ್ಣಾಕ ಬರ್ತಾದ ನೀವೆ ಹೇಳ್ರಿ?" ಎಂದು ಹೇಳಿದರು.

ಈ ಪ್ರಕರಣದಲ್ಲಿ ಗ್ರಾಮ ಪಂಚಾಯತಿ ಅಧಿಕಾರಿಗಳು ಅವ್ಯವಹಾರಕ್ಕೆ ತೊಡಗಿಕೊಂಡಿರುವುದು ಮತ್ತು ಮಹಿಳೆಯಿಂದ ಹೆಚ್ಚಿನ ಹಣವನ್ನು ಪಡೆದುಕೊಂಡಿರುವುದು ಕಂಡುಬರುತ್ತದೆ. ಇಲ್ಲಿ ಉದ್ಯೋಗದ ಅಗತ್ಯತೆ ಎಷ್ಟಿದೆ ಎಂಬುದನ್ನು ಅರಿಯಬೇಕಾಗಿದೆ. ಅಂದರೆ ಗ್ರಾಮೀಣ ಪ್ರದೇಶದಲ್ಲಿನ ಮಹಿಳೆಯಾಗಿದ್ದರಿಂದ ತಾವು ಇರುವ ಸ್ಥಳದಲ್ಲಿಯೇ ಕೆಲಸ ದೊರೆಯುತ್ತದೆ ಎಂಬ ಕಾರಣಕ್ಕಾಗಿ ಎಷ್ಟೇ ಕಷ್ಟವಾದರೂ ಉದ್ಯೋಗ ಚೀಟಿಯನ್ನು ಮಾಡಿಸಿಕೊಳ್ಳಲು ಮುಂದಾಗಿದ್ದಾಳೆ. ಆದರೆ ಈ ಉದ್ಯೋಗ ಚೀಟಿಯನ್ನು ಯಾವುದೇ ಹಣ ಕರ್ಚು ಮಾಡದೇ ಮಾಡಿಸಿಕೊಳ್ಳಬಹುದಾಗಿತ್ತು. ಆದರೆ ಅದರ ಅರಿವು ಇಲ್ಲದಾಗಿದೆ. ಜೊತೆಗೆ ಗ್ರಾಮ ಪಂಚಾಯತಿಯಲ್ಲಿನ ಪುರುಷರು ಈ ಉದ್ಯೋಗ ಚೀಟಿಯನ್ನು ಮಾಡಿಸಿಕೊಡುವುದಕ್ಕೆ ಹಲವಾರು ಬಗೆಯ ಕಿರುಕುಳವನ್ನು ನೀಡಿದ್ದಾರೆ, ಸತಾಯಿಸಿದ್ದಾರೆ. ಇದಕ್ಕೆ ರೋಸಿಹೋದ ಬಸಮ್ಮ ಹಣವನ್ನು ಕೊಟ್ಟು ಆ ಕಾರ್ಡನ್ನು ಮಾಡಿಸಿದ್ದಾಳೆ. ಇಲ್ಲಿ ಗಮನಿಸಬೇಕಿರುವುದೇನೆಂದರೆ ಗ್ರಾಮ ಪಂಚಾಯತಿಯಲ್ಲಿ ಕೆಲಸ ನಿರ್ವಹಿಸುವಂತಹ ಸರಕಾರಿ ಅಧಿಕಾರಿಗಳೇ ಭ್ರಷ್ಟಾಚಾರಕ್ಕೆ ಇಳಿದರೆ ಇನ್ನು ಗ್ರಾಮ ಪಂಚಾಯತಿಯ ಸದಸ್ಯರು ಸುಮ್ಮನಿರಲು ಸಾಧ್ಯವಿಲ್ಲ. ಇವರೂ ಸಹ ಜನರನ್ನು ಪೀಡಿಸುತ್ತಾರೆ. ಇವುಗಳ ನೇರ ಪರಿಣಾಮ ಮಾತ್ರ ಮಹಿಳೆಯರ ಮೇಲಾಗುತ್ತಿದೆ. ಅಂದರೆ ಬಸಮ್ಮ ಉದ್ಯೋಗ ಚೀಟಿಯನ್ನು ಮಾಡಿಸಲು ಒಂದು ಸಾವಿರ ರೂಪಾಯಿಯನ್ನು ಸೆಕ್ರೆಟರಿಗೆ ಕೊಟ್ಟಿದ್ದಾಳೆ. ಈ ಒಂದು ಸಾವಿರ ರೂಪಾಯಿ ತರಲು ತುಂಬಾನೇ ಕಷ್ಟಪಟ್ಟಿರುತ್ತಾಳೆ. ಏಕೆಂದರೆ ಇವರು ಗಂಡನನ್ನು ಕಳೆದುಕೊಂಡು ವಿಧವೆಯಾಗಿದ್ದಾರೆ. ಸಾಂಪ್ರದಾಯಿಕ ಚಿಂತನೆಯಂತೆ ಕುಟುಂಬದ ಎಲ್ಲಾ ಆಗುಹೋಗುಗಳನ್ನು ನಿಭಾಯಿಸುವಂತಹ ಕೆಲಸ ಪುರುಷನದ್ದು ಎಂಬುದು. ಅಂದರೆ ಪುರುಷನೇ ಕುಟುಂಬದ ಮುಖ್ಯಸ್ಥನಾಗಿರುತ್ತಾನೆ. ಬಸಮ್ಮನ

ಕುಟುಂಬದಲ್ಲಿಯೂ ಸಹ ತನ್ನ ಗಂಡನೇ ಎಲ್ಲಾ ಅಧಿಕಾರಗಳನ್ನು ಚಲಾಯಿಸುತ್ತಿರುತ್ತಾನೆ. ಆಕಸ್ಮಿಕವಾಗಿ ಗಂಡನ ಮರಣದ ನಂತರ ಇಡೀ ಕುಟುಂಬದ ಜವಾಬ್ದಾರಿ ಬಸಮ್ಮನ ಮೇಲೆ ಬಿದ್ದಿದೆ. ಇದನ್ನು ನಿಭಾಯಿಲು ನಿತ್ಯ ಜೀವನದಲ್ಲಿ ಹೋರಾಡುತ್ತಿರುವ ಸಂದರ್ಭದಲ್ಲಿ ಈ ರೀತಿಯ ಸಮಸ್ಯೆಗಳು ಮತ್ತೆ ಬಸಮ್ಮಳನ್ನು ಕಷ್ಟಕ್ಕೀಡುಮಾಡಿದಂತಾಗುತ್ತದೆ.

ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕಿನ ಪೋತ್ನಾಳ್ ಗ್ರಾಮ ಪಂಚಾಯತಿಯ ಅಭಿವೃದ್ಧಿ ಅಧಿಕಾರಿಯಾದ ಮಲ್ಲಯ್ಯ ಎಂಬುವವರು ಹೀಗೆ ಹೇಳುತ್ತಾರೆ. "ನೋಡ್ರಿ ಮೊದಲೆಲ್ಲ ಮಹಿಳೆಯರ ಹೆಸರಲ್ಲಿ ಕಡಿಮೆ ಜಾಬ್‌ಕಾರ್ಡ್ ಇದ್ದವು. ಆದರೆ ಈಗ ಸರಕಾರ ಮತ್ತು ಸಂಘಸಂಸ್ಥೆಗಳು ಮಹಿಳೆಯರ ಹೆಸರಿನಲ್ಲೆ ಜಾಬ್‌ಕಾರ್ಡ್ ಮಾಡ್ಬೇಕಂತೇಳಿ ಹೇಳ್ತಿರೋದ್ರಿಂದ ಈಗ ಜಾಬ್‌ಕಾರ್ಡ್‌ಗಳು ಮಹಿಳೆಯರ ಹೆಸರಿನಲ್ಲಿ ಮಾಡುತ್ತಿದ್ದೇವೆ. ಹಂಗಾಗಿ ಒಟ್ಟು ಜಾಬ್‌ಕಾರ್ಡ್‌ಗಳಲ್ಲಿ ಶೇ.೫೦ರಷ್ಟು ಮಹಿಳೆಯರ ಹೆಸರಿನಲ್ಲಿರುತ್ತವೆ. ಆದರೆ ಜನರು ಮಹಿಳೆಯರ ಹೆಸರಲ್ಲಿ ಜಾಬ್‌ಕಾರ್ಡ್ ಮಾಡ್ಸೋದಕ್ಕೆ ಯಾರು ಮುಂದೆ ಬರುತ್ತಿಲ್ಲ. ಯಾಕಂದ್ರೆ ಮಹಿಳೆಯರ ಹೆಸರಿನಲ್ಲಿ ಜಾಬ್‌ಕಾರ್ಡ್ ಇದ್ರೆ ಬ್ಯಾಂಕಿಗೆ ಅವರೇ ಹೋಗಿ ದುಡ್ಡಂತ ಕೂಲಿ ಬಿಡಿಸಿಕೊಂಡು ಬರಬೇಕಾಗ್ತದ. ಇದು ಬಾಳಷ್ಟು ಪುರುಷರಿಗೆ ಇಷ್ಟ ಇಲ್ಲ. ಹಂಗಾಗಿ ಬಾಳಷ್ಟು ಮಂದಿ ಪುರುಷರು ನಮ್ ಜೊತೆ ಜಗಳ ಮಾಡ್ತಾರ. ನಾವು ಇಲ್ಲಿಕ್ಕಾಗಿ ನಮ್ ಹೆಣ್ಮಕ್ಕಳ ಹೆಸರಲ್ಲಿ ಜಾಬ್‌ಕಾರ್ಡ್ ಮಾಡ್ತೀರೇನು? ನೀವು ಯಂಗ ಮಾಡ್ತೀರೋ ನಾವು ನೋಡ್ತೀವಿ. ಹೆಣ್ಮಕ್ಕಳಿಗೆ ಬ್ಯಾಂಕು ವ್ಯವಹಾರ ಗೊತ್ತಾಗ್ತಾದೇನು ಅಂತೇಳಿ ನಮ್ ಜೊತೆ ಜಗಳ ಮಾಡಿ ನೀವು ನಮ್ ಹೆಸರಲ್ಲೇ ಕೊಡ್ಬೇಕು ಅಂತೇಳಿ ಎದ್ರಿಸಿ ಬೆದ್ರಿಸಿ ಮಾಡ್ಸಿಗೆಂತಾರ. ಹಂಗಾಗಿ ನಾವು ಸ್ಥಳೀಯರಿಗೆ ಒಗ್ಗಿಕೊಂಡು ಕೆಲಸ ಮಾಡಿದ್ರೆ ಸ್ವಲ್ಪ ದಿನ ಇರ್ತಿವಿ, ಇಲ್ಲ ಅಂದ್ರೆ ಕೆಲಸ ಮಾಡಾಕ ಆಗಾದಿಲ್ಲ" ಎಂದರು.

ಮಲ್ಲಯ್ಯ ಅವರು ಒಬ್ಬ ಸರಕಾರಿ ಅಧಿಕಾರಿಯಾಗಿದ್ದಾರೆ. ಸ್ಥಳೀಯ ಜನರು ಮಹಿಳೆಯರ ಹೆಸರಲ್ಲಿ ಜಾಬ್ ಕಾರ್ಡ್ ಮಾಡಿಸುವುದನ್ನು ಒಪ್ಪುತ್ತಿಲ್ಲ. ಬದಲಾಗಿ ಮಹಿಳೆಯರ ಬೌದ್ಧಿಕತೆಯನ್ನು ಸೀಮಿತ ಪರಿಧಿಗೆ ತಳ್ಳುವಂತಹ ಕೆಲಸ ಮಾಡಲಾಗುತ್ತಿದೆ. ಅಂದರೆ ಮಹಿಳೆಯರನ್ನು ಮನೆಯ ಹೊರಗಡೆ ಬಿಟ್ಟರೆ ಅವರೂ ಸಹ ಪ್ರಾಪಂಚಿಕ ಜ್ಞಾನವನ್ನು ಹೊಂದುತ್ತಾರೆ. ಆದರೆ ಇವರು ಹಾಗೆ ಮಾಡದೆ ಮಹಿಳೆಯರನ್ನು ಮನೆಯಲ್ಲಿಯೇ ಇರುವಂತೆ ಮಾಡುವುದು ಮತ್ತು ತನ್ನ ಅಡಿಯಾಳಾಗಿ ಜೀವಿಸಬೇಕೆಂದು ಬಯಸುತ್ತಾನೆ. ಸ್ಥಳೀಯವಾಗಿ ರೂಪುಗೊಂಡಿರುವಂತಹ ಪಿತೃಪ್ರಧಾನ ವ್ಯವಸ್ಥೆಯು ಮಹಿಳೆಯರನ್ನು ನಿಯಂತ್ರಣದಲ್ಲಿಟ್ಟುಕೊಂಡಿರುತ್ತದೆ. ಹಾಗಾಗಿ ಈ ಆಲೋಚನೆಯ ಫಲವಾಗಿ ಮಹಿಳೆಯರ ಹೆಸರಲ್ಲಿ ಜಾಬ್‌ಕಾರ್ಡ್‌ಗಳನ್ನು ಮಾಡಿಸಬಾರದೆಂದು ಮಲ್ಲಯ್ಯ ಅವರನ್ನು ಹೆದರಿಸುತ್ತದೆ. ಆದರೆ ಈ ಬೆದರಿಕೆಗಳ ನಡುವೆಯೇ ಶೇ.೫೦ರಷ್ಟು ಜಾಬ್ ಕಾರ್ಡ್‌ಗಳು ಮಹಿಳೆಯರ ಹೆಸರಲ್ಲಿರುವುದನ್ನು ಕಾಣಲಾಗಿದೆ. ಇದಕ್ಕೆ ಕಾನೂನು ಮತ್ತು ಸಂಘಸಂಸ್ಥೆಗಳ ಪರಿಶ್ರಮವೇ ಕಾರಣವಾಗಿದೆ.

ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕಿನ ಮಾಡಗಿರಿ ಗ್ರಾಮದ ರುಕ್ಕಪ್ಪ ಅವರು ಜಾಬ್‌ಕಾರ್ಡ್ ಯಾರ ಹೆಸರಲ್ಲಿರಬೇಕು ಎಂಬುದರ ಬಗ್ಗೆ ಹೇಳಿದ ಮಾತುಗಳು ಪಿತೃ ಪ್ರಧಾನ ವ್ಯವಸ್ಥೆಯ ಆಲೋಚನಾ ನೆಲೆಗಳನ್ನು ಬಿಚ್ಚಿಡುತ್ತವೆ. "ಸಾರ್ ಹೆಣ್ಮಕ್ಳಿಗೆ ಮನ್ಯಾಗ ಅಡಿಗಿ ಮಾಡಿ ಮಕ್ಕಳ್ನ ಮರಿಗಳ್ನ ನೋಡಿಕೆಂಡು ದುಡಿಯಾಕ ಹೋದ್ರೆ ಸಾಕು. ಅದ್ಬುಟ್ಟು ಈ ಕೆಲ್ಸ ಅವರಿಂದ ಎಲ್ಲಿ ಮಾಡಾಕ ಆಗ್ತಾದ. ಹೆಂಗ್ಸರಿಗೆ ಹೊರಗಡೆ ಜ್ಞಾನ ಇರಾದಿಲ್ಲ. ಹೆಂಗ್ಸರ್ನ ಬ್ಯಾಂಕಿಗೆ ಕಳಿಸಿದ್ರೆ ಜನ ಏನಂತಾರ. ಹಂಗಾಗಿ ಹೆಣ್ಮಕ್ಕಳ ಹೆಸರಮ್ಯಾಗ ಮಾಡ್ಸಿಲ್ಲ. ನೋಡ್ರಿ ಸಾರ್ ಜಾಬ್‌ಕಾರ್ಡ್ ಹೆಣ್ಮಕ್ಕಳ ಹೆಸರಲ್ಲಿ ಇದ್ದರೇನು? ಪರಮಾತ್ಮನ ಹೆಸರಲ್ಲಿ ಇದ್ದರೇನು? ದುಡದಂತ ರೊಕ್ಕ ಯಾರ ಕೈಯಾಗ ಸೇರಬೇಕೋ ಅದು ಅವರ ಕೈಯಾಗ ಸೇರೆ ಸೇರ್ತಾದ. ಅದನ್ನಂತ ಯಾರಿಂದ ತಪ್ಸಾಕ ಆಗಾದಿಲ್ಲ" ಎಂದು ಹೇಳಿದರು.

ಅದೇ ರೀತಿಯಲ್ಲಿ ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಬೆಳಗಟ್ಟ ಗ್ರಾಮದ ಬಸವರಾಜು ಹೇಳುವಂತೆ, "ನಾನು ಹೊರಗಡೆ ಕೂಲಿ ಕೆಲ್ಸಕ್ಕ ಹೋಗ್ತೀನಿ. ಜಾಸ್ತಿ ಅಂದ್ರೆ ಈ ಯೋಜನೆಯಾಗ ನಮ್ ಹೆಣ್ಮಕ್ಕಳು ಕೆಲಸ ಮಾಡ್ಯಾರ. ನಿಮ್ಮ ಕುಟುಂಬದಲ್ಲಿ ಉದ್ಯೋಗ ಕಾರ್ಡ್ ಯಾರ ಹೆಸರಿನಲ್ಲಿದೆ ಎಂದಾಗ ಸಾರ್ ಉದ್ಯೋಗ ಕಾರ್ಡ್ ನನ್ನ ಹೆಸರಿನ್ಯಾಗ ಐತ್ರಿ. ಯಾಕೆ ನೀವು ನಿಮ್ಮ ಹೆಂಡ್ತಿ ಹೆಸರಿನಲ್ಲಿ ಉದ್ಯೋಗ ಕಾರ್ಡ್ ಮಾಡಿಸಿಲ್ಲ. ಅವರೇ ಈ ಯೋಜನೆಯಲ್ಲಿ ಜಾಸ್ತಿ ದುಡಿಯುವವರು ಆಗಿರುವುದರಿಂದ ಅವರ ಹೆಸರಿನಲ್ಲಿಯೇ ಮಾಡಿಸಬೇಕಾಗಿತ್ತಲ್ಲ ಎಂದು ಹೇಳಿದಾಗ ನೋಡ್ರಿ ಸಾರ್ ಮನೇಲಿ ಗಣಮಕ್ಳು ನಾವು ಇರಬೇಕಾದ್ರೆ ಹೆಣ್ಮಕ್ಳ ಹೆಸರಮ್ಯಾಗ ಅದೆಂಗ ಮಾಡ್ಸಾಕ ಆಗ್ತಾದ. ಮನ್ಯಾಗ ಯಜಮಾನ ಅಂತ ನಾನಿರಬೇಕಾದ್ರೆ ಮಾರಿಮ್ಯಾಲೆ ಮೀಸೆ ಯಾಕ ಇಟ್ಟಿದ್ದಿ ಲೇ ಅಂತ ಆಡಿಕೆಂತಾರ. ಆಮ್ಯಾಲೆ ಹೆಣ್ಣಮಕ್ಳ ಹೆಸರಿನ್ಯಾಗ ಜಾಬ್‌ಕಾರ್ಡ್ ಮಾಡ್ಸಾದ್ರಿಂದ ದುಡದಂತ ಕೂಲಿ ಎತ್ತಿಗೆಂಡು ಬರಾಕ ಬ್ಯಾಂಕಿಗೆ ಕಳಸಬೇಕಾಗ್ತಾದ. ಹೆಣ್ಣು ಮಕ್ಳ್ನ ಹಿಂಗೆಲ್ಲ ಬ್ಯಾಂಕಿಗೆ, ಹೊರಗಡೆ ಅಡ್ಡ್ಯಾಡಸಿದ್ರೆ ಸಮಾಜದಾಗ ನಮ್ ಮರ್ಯಾದಿ ಏನು ಉಳಿತಾದ. ಇನ್ನಾವೊಂದು ಪಂಚಾಯ್ತಿಯವರು ಏನು ಮಾಡ್ತಾರಂದ್ರೆ ಉದ್ಯೋಗ ಕಾರ್ಡ್ ಬುಕ್ಕ ಇಸ್ಕೊಂಡು ಹೋಗ್ತಾರ. ಆಮ್ಯಾಲೆ ನಿಮ್ ಕೂಲಿಕಾರ ಬುಕ್ಕಿನ್ಯಾಗ ದುಡ್ಡು ಹಾಕ್ಸೀವಿ. ನೀವು ಬ್ಯಾಂಕಿಗೆ ಬಂದು ದುಡ್ಡು ಎತ್ತಿಕೊಡ್ರಿ ನಿಮಗ ಇನ್ನೂರು ರೂಪಾಯಿ ಕೊಡ್ತೀವಿ ಅಂತೇಳಿ ಕರ್‍ಕೊಂಡು ಹೋಗ್ತಾರ. ಹಿಂಗಾದಾಗ ಹೆಣ್ಮಕ್ಕಳ ಹೆಸರಲ್ಲಿ ಉದ್ಯೋಗ ಕಾರ್ಡ್ ಮಾಡಿಸಿದ್ರೆ, ಪಂಚಾಯ್ತಿ ಮೆಂಬರ್ ಜೊತೆ ಮತ್ತೆ ಕಂಡ ಕಂಡವರ ಜೊತೆ ಹೆಣ್ಮಕ್ಕಳನ್ನ ಕಳಸಬೇಕಾಗ್ತಾದ. ಹಂಗಾಗಿ ಹೆಣ್ಣುಮಕ್ಳು ಮನೇಲಿ ಮಕ್ಳು, ಮರಿಗಳನ್ನು ನೋಡಿಕೊಂಡು, ಅಡಿಗೆ ಮಾಡಿಕೆಂಡು, ಕೆಲಸ ಇದ್ರೆ ಕೂಲಿ ನಾಲಿ ಮಾಡಿಕೆಂಡು ಮನ್ಯಾಗ ಇರಬೇಕು. ಹೆಂಗ್ಸರು ಮನ್ಯಾಗ ಇದ್ರೇನೆ ಗಣಮಗನಿಗೆ ಮರ್ಯಾದಿ ಇರ್ತಾದ ಇಲ್ಲಂದ್ರೆ ಹೆಣ್ಮಕ್ಳು ದಾರಿ ತಪ್ತಾರ" ಎಂದು ತಿಳಿಸಿದರು.

ಈ ಎರಡೂ ಪ್ರಕರಣಗಳನ್ನು ಗಮನಿಸಿದರೆ, ಅವಿಭಕ್ತ ಕುಟುಂಬ ವ್ಯವಸ್ಥೆಯಲ್ಲಾಗಲೀ ಅಥವಾ ವಿಭಕ್ತ ಕುಟುಂಬದಲ್ಲಾಗಲೀ ಮಹಿಳೆಯರ ಕರ್ತವ್ಯ ಅಡುಗೆ ಮಾಡುವುದು, ಮಕ್ಕಳನ್ನು ಹೆರುವುದು, ಪಾಲನೆ- ಪೋಷಣೆ ಮಾಡುವುದು, ಇತರೆ ಎಲ್ಲಾ ಗೃಹ ಕೃತ್ಯಗಳನ್ನು ಮಾಡುವುದಾಗಿದೆ. ಹಾಗೆಯೇ ಕೆಲಸಕ್ಕಾಗಿ ಮನೆಯಿಂದ ಹೊರಹೋಗಿ ದುಡಿಯಬೇಕಾಗುತ್ತದೆ. ಹಾಗಾಗಿ ಮಹಿಳೆಯರು ಕುಟುಂಬದಲ್ಲಿ ಮತ್ತು ಕೆಲಸದ ಸ್ಥಳಗಳಲ್ಲಿ ಎರಡರಲ್ಲಿಯೂ ಹಿಂಸೆಯನ್ನು ಅನುಭವಿಸುತ್ತಿದ್ದಾರೆ. ಅಂದರೆ ಮನೆಗೆಲಸ ಮತ್ತು ಉದ್ಯೋಗ ಸ್ಥಳಗಳಲ್ಲಿ ಒತ್ತಡಗಳಿಗೆ ಒಳಗಾಗುತ್ತಿದ್ದಾರೆ. ಆದರೆ ಇದಾವುದೂ ಪುರುಷ ವ್ಯವಸ್ಥೆಗೆ ಬೇಕಿಲ್ಲ. ಅಂದರೆ ಮನೆಗೆಲಸ ಮತ್ತು ಮಕ್ಕಳ ಕೆಲಸವನ್ನು ನೋಡಿಕೊಳ್ಳುವ ಜಾವಾಬ್ದಾರಿಯನ್ನು ಹಿಂದಿನಿಂದಲೂ ಮಹಿಳೆಗೇ ಸೀಮಿತ ಎಂದು ನಿಯಮಗಳನ್ನು ರೂಪಿಸಲಾಗಿದೆ. ಆ ಕಾರಣಕ್ಕಾಗಿ ಸಮಾಜದಲ್ಲಿ ಪಿತೃಪ್ರಧಾನ ಮೌಲ್ಯಗಳು ಬಲಿಷ್ಠಗೊಂಡಿವೆ. ಆದ್ದರಿಂದ ರುಕ್ಕಪ್ಪ ಮಹಿಳೆಯರನ್ನು ಸ್ವಾತಂತ್ರ್ಯ, ಅಧಿಕಾರ ಇಲ್ಲದವರು ಎಂಬುದಾಗಿ ಬಿಂಬಿಸುತ್ತಾನೆ. ಒಂದುವೇಳೆ ಇವನೇ ಮಹಿಳೆಯನ್ನು ನಿರ್ಭಂಧಿಸದಿದ್ದರೇ ವ್ಯವಸ್ಥೆಯೇ ನಿರ್ಭಂಧಿಸುತ್ತದೆ. ಜೊತೆಗೆ ಈ ಮಾತಿನಲ್ಲಿ ಇನ್ನೊಂದು ಕಟು ಸತ್ಯ ಹೊರಬರುತ್ತದೆ. ಅದೆಂದರೆ ಜಾಬ್ ಕಾರ್ಡ್ ಯಾರ ಹೆಸರಲ್ಲಾದರೂ ಆಗಲೀ ಕೊನೆಗೆ ತನ್ನ ಹತ್ತಿರವೇ ಬರಬೇಕು ಎಂದು ಹೇಳುತ್ತಾನೆ. ಅಂದರೆ ಅಷ್ಟೊಂದು ನಿಖರವಾಗಿ ಮತ್ತು ಅಧಿಕಾರದ ಮಾತಿನಲ್ಲಿ ಹೇಳುತ್ತಾನೆ ಅಂದರೆ ಜಾಬ್ ಕಾರ್ಡ್ ಮಹಿಳೆಯರ ಹೆಸರಲ್ಲಿ ಇದ್ದರೂ ಒಂದೇ ಇಲ್ಲದಿದ್ದರೂ ಒಂದೇ. ಅದನ್ನು ನಿರ್ವಹಿಸುವ ಅಧಿಕಾರ ತನ್ನದೇ ಎಂಬುದನ್ನು ಸೂಚ್ಯವಾಗಿ ಹೇಳುತ್ತಿದ್ದಾನೆ. ಇದರಿಂದ ಮಹಿಳೆಯರ ಇಡೀ ಅಸ್ತಿತ್ವವನ್ನೇ ಕಿತ್ತುಕೊಳ್ಳಲು ಮುಂದಾಗುತ್ತಾನೆ.

ರಾಯಚೂರು ಜಿಲ್ಲೆ ಲಿಂಗಸೂರು ತಾಲೂಕಿನ ರೋಡಲಬಂಡ(ತವಗ) ಗ್ರಾಮ ಪಂಚಾಯ್ತಿಯ ಯಲಗಟ್ಟಾ ಗ್ರಾಮದ ಕುರುಬ ಸಮುದಾಯದ ರಂಗಮ್ಮ ಹೇಳುವ ವಿವರಗಳು ಮಹಿಳೆಯರ ಜಾಬ್ ಕಾರ್ಡ ಸಮಸ್ಯೆಯ ಸ್ವರೂಪವನ್ನು ಅರಿಯಬಹುದಾಗಿದೆ.

"ಈ ಯೋಜನೆಯಿಂದ ನಮ್ ಮನೀಗಿ ಏನು ಉಪಯೋಗ ಆಗಿಲ್ಲ. ನೋಡ್ರಿ ಸಾರ್ ಯೋಜನೆಯಾಗ ದುಡ್ಯಾಕಿ ನಾನು. ಆದ್ರೆ ಪಂಚಾಯ್ತಿಯವರು ನನ್ ಗಂಡನ ಹೆಸರಿನ್ಯಾಗ ಕೂಲಿಕಾರ್‍ರ ಕಾರ್ಡ್ ಮತ್ತೆ ಬ್ಯಾಂಕ್ ಬುಕ್ ಮಾಡಿಸ್ಯಾರ. ನನ್ ಗಂಡ ಒಂದು ದಿನ ದುಡಿಯಾಕ ಹೋದ್ರೆ ಎಂಟು ದಿನ ಮನ್ಯಾಗ ಇರ್ತಾನ. ಮತ್ತೆ ದುಡದದ್ದೆಲ್ಲ ರೊಕ್ಕ ತಗೊಂಡು ದುಕಾನಕ್ಕ ಹೋಗಿ ಕುಡಿತಾನ. ಮನ್ಯಾ ಸಂಸಾರಕ್ಕ ಏನೇ ಬೇಕಾದ್ರು ಸಣ್ಣದು- ದೊಡ್ಡದು ನಡಸಾಕಿ ನಾನೇ. ಅಂದ್ರೆ ಮನೀಗೆ ಬೇಕಾದಂತ ಕಾರ ಉಪ್ಪಿನಿಂದ ಹಿಡಿದು ದರವೊಂದು ನಾನೇ ತರಬೇಕು. ಇಲ್ಲಂದ್ರೆ ಮಕ್ಳು, ಮರಿಗಳು ಉಪವಾಸ ಇರಬೇಕಾಗ್ತಾದ. ಹಂಗಾಗಿ ಒಂದು ದಿನ ಮನ್ಯಾಗ ಕುಂತ್ರೆ ನಡ್ಯಾದಿಲ್ಲಂತ ಹೇಳಿ ಸೀಜನ್ಯಾಗ ಕೂಲಿ ಕೆಲಸ

ಗುತ್ತಿಗಿ ಹಿಡಿದು ಮಾಡ್ತೀವಿ. ಆದ್ರೆ ಪಂಚಾಯ್ತಿಯವರು ಏನು ಮಾಡ್ಯಾರಂದ್ರೆ ನನ್ ಗಂಡ ಒಂದು ದಿನ ನೆಟ್ಟಗ ದುಡಿಯಾಕ ಬರಾದಿಲ್ಲ. ಆದ್ರೂನ್ ಆತನ ಹೆಸರಿನ್ಯಾಗ ರೊಕ್ಕ ಬರಂಗ ಮಾಡ್ಯಾರ. ಪ್ರತಿಸಲ ರೊಕ್ಕ ಬಂದಂಗೆಲ್ಲ ಬ್ಯಾಂಕಿನಿಂದ ರೊಕ್ಕ ಬಿಡಿಸಿಗೆಂಡು ಕುಡ್ದು, ತಿಂದು ದುಡದಂತ ರೊಕ್ಕ ಹಾಳು ಮಾಡ್ತಾನ. ನನ್ ಗಂಡಗ ಬುದ್ಧಿಮಾತು ಹೇಳಾಕ ಹೋದ್ರೆ ಮತ್ತೆ ನನಗ ಹೊಡಿತಾನ. ಪಂಚಾಯ್ತಿಯವರಿಗಿ ಸ್ವಲ್ಪಾದ್ರು ಬುದ್ಧಿ ಗಿದ್ದಿ ಏನಾದ್ರೆ ಐತೇನ್ರಿ? ಯಾಕಂದ್ರ ದುಡ್ಯಾಂತಾಕಿ ನಾನು. ನನ್ನ ಹೆಸರಮ್ಯಾಗ ಕೂಲಿಕಾರ್ರ ಕಾರ್ಡ್ ಮತ್ತೆ ಬ್ಯಾಂಕ್ ಬುಕ್ ಮಾಡ್ಬೇಕು. ಅದನ್ನ ಬುಟ್ಟು ನನ್ನ ಗಂಡನ್ನ ಹೆಸರಿನ್ಯಾಗ ಮಾಡಿದ್ರೆ ಇದು ತಪ್ಪು ಆಗಿದಿಲ್ಲೇನು? ಬಾಳಷ್ಟು ಮಂದಿ ಹೆಣ್ಮಕ್ಕಳದು ಹಿಂಗಾ ಮಾಡ್ಯಾರ. ಇವತ್ತು ಪ್ರತಿಯೊಂದು ಮನ್ಯಾಗ ಹೆಣ್ಮಕ್ಕಳೇ ಮನೆ ಸಂಸಾರ ನಿಬಾಯಿಸ್ತಾರ. ಕೆಲವು ಮನ್ಯಾಗ ಒಬ್ಬನು ಕುಡುಕ ಇರ್ತಾನ. ಒಬ್ಬನು ಇಸ್ಪೀಟ್ ಆಡುತ್ತಿರುರ್ತಾನ. ಹಿಂಗ ನಾನ ರೀತಿ ಗಣಮಕ್ಳು ಇರ್ತಾರ. ಕೆಲವು ಗಣಮಕ್ಳು ಚಲೋತ್ನ್ಯಾಗಿ ಇದ್ದವರು ಐದಾರ. ಇಲ್ಲಂತ ನಾನು ಹೇಳಂಗಿಲ್ಲ. ಹಂಗಾಗಿ ಪಂಚಾಯ್ತಿಯವರು ಮನೆ-ಮನೆಗೆ ಬಂದು ಯಾರ ಹೆಸರಿನ್ಯಾಗ ಕೂಲಿಕಾರ್ರ ಕಾರ್ಡ್ ಮಾಡ್ಬೇಕು, ಯಾರ ಹೆಸರಿನ್ಯಾಗ ದುಡದಂತ ರೊಕ್ಕ ಹಾಕಬೇಕು ಅಂತೇಳಿ ತಿಳಕಂಡು ಮಾಡಬೇಕು. ಚಲೋತ್ನ್ಯಾಗಿ ಸಂಸಾರ ನಡಸಂತ ಗಣಮಕ್ಳು ಹೆಸರಿನ್ಯಾಗ ರೊಕ್ಕ ಹಾಕಿಸಿದ್ರೆ ನಡೀತಾದ.

ಆದ್ರೆ ಕುಡಕ ಗಂಡ್ಸರು ಮತ್ತೆ ಬ್ಯಾರೆ-ಬ್ಯಾರೆ ಚಟಗಾರ ಗಂಡ್ಸರು ಇದ್ದಂತವರ ಹೆಸರಿನ್ಯಾಗ ರೊಕ್ಕ ಹಾಕ್ಸಿದ್ರೆ ನಮ್ಮಂತವರ ಪರಿಸ್ಥಿತಿ ಏನಾಗ್ತಾದ. ನನಗ ಮೂರು ಜನ ಮಕ್ಕಳು ಐದಾರ. ಅವರನ್ನ ಸಲುವುಬೇಕಂದ್ರೆ, ಅವರನ್ನ ಸಾಲಿಗಿ ಕಳಸಬೇಕಂದ್ರೆ ಸುಮ್ನೆ ಆಗ್ತಾದೇನು? ಅವರಿಗೆ ಪೆನ್ನು, ಪುಸ್ತಕ ಎಲ್ಲಾ ಕೊಡ್ಸಬೇಕು. ಮತ್ತೆ ಈಕಡೆ ಸಂಸಾರ ನಡಿಸಿಗೆಂಡು ಹೋಗ್ಬೇಕು. ಇಷ್ಟೆಲ್ಲ ಕಷ್ಟ ಎದಿಮಟ್ಟ ಇದ್ರೂನ್ ಅಂಗೆ ನುಂಗಿಕೆಂಡು ಹೋಗ್ತೀನಿ. ಹಂಗಾಗಿ ನೋಡ್ರಿ ಸಾರ್ ನೀವು ತಿಳಿದವರು ಐದೀರಿ, ನಾನು ಪಂಚಾಯ್ತಿಯವರಿಗೆ ನನ್ ಹೆಸರಮ್ಯಾಗ ಕೂಲಿಕಾರ್ರ ಕಾರ್ಡ್ ಮಾಡ್ಸಿ ಕೊಡ್ರಿ ಅಂತೇಳಿ ಸಾಕಾಗಿ ಹೋಗ್ಯಾದ. ಅವರು ಇದುವರೆಗೆ ಮಾಡಿಲ್ಲ" ಎಂದು ಹೇಳಿದರು.

ಮಹಿಳೆಯರು ಕೇವಲ ಕೆಲಸಗಾರರಾಗಿ ದುಡಿಯಬೇಕು. ಆದರೆ ಆ ಕೆಲಸದಿಂದ ಬಂದಂತಹ ಲಾಭವನ್ನು ಮಾತ್ರ ಅನುಭವಿಸಲು ಅವರಿಗೆ ಅವಕಾಶವೇ ಇಲ್ಲದಾಗಿದೆ. ಏಕೆಂದರೆ ಜಾಬ್ ಕಾರ್ಡ್ ಮಹಿಳೆಯರ ಹೆಸರಲ್ಲಿದ್ದರೂ ಸಹ ಬ್ಯಾಂಕ್ ಖಾತೆ ಮಾತ್ರ ಪುರುಷನ ಹೆಸರಲ್ಲಿ ಇರುವುದರಿಂದ ಮಹಿಳೆಯರು ಎಷ್ಟೇ ದುಡಿದರೂ ಸಹ ಅದರ ಲಾಭ ಮಾತ್ರ ಅವರಿಗೆ ದಕ್ಕುತ್ತಿಲ್ಲ. ಇಲ್ಲಿ ಆ ಲಾಭವನ್ನು ಪುರುಷನೇ ಅನುಭವಿಸುತ್ತಿದ್ದಾನೆ. ದುಡಿಮೆಯ ಮೇಲೆ ಹಕ್ಕನ್ನು ಚಲಾಯಿಸುವುದು ಪುರುಷ ಪ್ರಧಾನ ವ್ಯವಸ್ಥೆಯ ಪ್ರಮುಖ ಉದ್ದೇಶವಾಗಿರುವುದರಿಂದ

ಇಲ್ಲಿಯೂ ಸಹ ಮಹಿಳೆಯರ ದುಡಿಮೆಯ ಮೇಲೆ ಹಕ್ಕನ್ನು ಚಾಲಾಯಿಸಲಾಗಿದೆ. ಮುಖ್ಯವಾಗಿ ಗ್ರಾಮೀಣ ಭಾಗದ ಕುಟುಂಬಗಳಲ್ಲಿ ಮನೆಯ ಎಲ್ಲಾ ಜವಾಬ್ದಾರಿಯೂ ಮಹಿಳೆಯರ ಮೇಲೆಯೇ ಇರುತ್ತದೆ. ಇಂತಹ ಸಂದರ್ಭದಲ್ಲಿ ಮಹಿಳೆ ಕುಟುಂಬದ ಆಚೆ ಕೆಲಸವನ್ನು ಮಾಡಲೇ ಬೇಕಾದ ಅನಿವಾರ್ಯತೆಗೆ ಒಳಗಾಗಿದ್ದಾಳೆ. ಕೆಲಸದಿಂದ ಬಂದಂತಹ ಆದಾಯದಿಂದ ಕುಟುಂಬವನ್ನು ನಡೆಸುವಂತಹ ಅನಿವಾರ್ಯತೆಯೂ ಇರುತ್ತದೆ. ಇಲ್ಲದಿದ್ದರೆ ಕುಟುಂಬದ ಯಜಮಾನನಂತೆ ಇರುವ ತನ್ನ ಗಂಡನಿಂದ ಹಿಂಸೆಗೆ ಒಳಗಾಗಬೇಕಾಗುತ್ತದೆ. ಹಾಗಾಗಿ ಕೂಲಿ ಕೆಲಸವನ್ನು ಮಾಡಿದ ಮೇಲೆ ಅದರಿಂದ ಆದಾಯವನ್ನು ನಿರೀಕ್ಷಿಸುವುದು ಸಹಜವೇ ಆಗಿರುತ್ತದೆ. ಆದರೆ ರಂಗಮ್ಮನ ವಿಚಾರದಲ್ಲಿ ತನ್ನ ಗಂಡ ತನ್ನ ದುಡಿಮೆಯ ಮೇಲೆ ಹಕ್ಕನ್ನು ಚಲಾಯಿಸಿರುವುದಕ್ಕೆ ತುಂಬಾ ಬೇಸರ ವ್ಯಕ್ತಪಡಿಸುತ್ತಾಳೆ. ಹಾಗೆಯೇ ಜಾಬ್ ಕಾರ್ಡ್ ಮತ್ತು ಬ್ಯಾಂಕಿನ ಅಕೌಂಟ್‌ನ್ನು ತನ್ನ ಹೆಸರಲ್ಲಿಯೇ ಇರಬೇಕೆಂದು ಬಯಸುತ್ತಾಳೆ. ಒಟ್ಟಾರೆಯಾಗಿ ಮಹಿಳೆಯರ ದುಡಿಮೆಯ ಮೇಲೆ ಪುರುಷರು ಅಧಿಕಾರವನ್ನು ಚಲಾಯಿಸುವ ಹಕ್ಕನ್ನು ಪಡೆದಿರುವುದು ಮಹಿಳೆಯರ ಜೀವನಕ್ಕೆ ಮುಳುವಾಗಿರುವುದನ್ನು ರಂಗಮ್ಮನ ಪ್ರಕರಣದಿಂದ ವೇದ್ಯವಾಗುತ್ತದೆ.

ಇನ್ನು ಜಾಬ್ ಕಾರ್ಡ್‌ಗಳ ಸ್ಥಿತಿಗತಿಗಳ ಬಗ್ಗೆ ಹೇಳುವುದಾದರೆ ಗ್ರಾಮೀಣ ಭಾಗದಲ್ಲಿ ಸಾಮಾನ್ಯ ಜನರ ಹತ್ತಿರ ಈ ಜಾಬ್ ಕಾರ್ಡ್‌ಗಳು ಇರುವುದಿಲ್ಲ. ಬದಲಾಗಿ ಗ್ರಾಮ ಪಂಚಾಯತಿ ಸದಸ್ಯರು ಅಥವಾ ಅಧ್ಯಕ್ಷರ ಮನೆಗಳಲ್ಲಿ ಇರುವಂತಹ ಅನೇಕ ಉದಾಹರಣೆಗಳು ಕಾಣಸಿಗುತ್ತವೆ. ಇವುಗಳನ್ನು ತಡೆಯೋದು ಯಾರಿಂದಲೂ ಸಾಧ್ಯವಿಲ್ಲವೇನೋ ಎಂಬಂತೆ ಗ್ರಾಮೀಣ ಭಾಗಗಳಲ್ಲಿ ಪರಿಸ್ಥಿತಿ ಇದೆ. ಗ್ರಾಮ ಪಂಚಾಯತಿಗೆ ಅಭಿವೃದ್ಧಿ ಅಧಿಕಾರಿಯಾಗಿ ಬಂದಂತಹ ಅನೇಕ ಅಧಿಕಾರಿಗಳೂ ಸಹ ಇದನ್ನು ತಡೆಯಲು ಪ್ರಯತ್ನಿಸಿದರೂ ಯಶಸ್ವಿಯಾಗದೇ ಇರುವುದನ್ನು ಕಾಣಬಹುದಾಗಿದೆ. ಆದರೆ ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನ ಪಾಪಿನಾಯಕನಹಳ್ಳಿ ಗ್ರಾಮ ಪಂಚಾಯತಿಗೆ ಅಭಿವೃದ್ಧಿ ಅಧಿಕಾರಿಯಾಗಿ ಬಂದಂತಹ ಮಂಜುಳಾ ರಾಣಿಯವರು ಈ ಬಗೆಯ ಅವ್ಯವಹಾರವನ್ನು ತಡೆಗಟ್ಟುವಲ್ಲಿ ಮತ್ತು ಜನರಿಗೆ ಜಾಬ್ ಕಾರ್ಡ್‌ಗಳನ್ನು ಕೊಡಿಸುವಲ್ಲಿ ಯಶಸ್ವಿಯಾಗಿದ್ದಾರೆ. ಆ ಮೂಲಕ ಸ್ವಲ್ಪಮಟ್ಟಿಗಾದರೂ ಗ್ರಾಮ ಪಂಚಾಯತಿಗಳಲ್ಲಿ ನಡೆಯುವಂತಹ ಅವ್ಯವಹಾರಗಳನ್ನು ತಡೆಯುವಲ್ಲಿ ಯಶಸ್ವಿಯಾಗಿದ್ದಾರೆ. ಇವರು ಹೇಳುವಂತೆ "ನಾನು ಈ ಪಂಚಾಯ್ತಿಗೆ ಅಭಿವೃದ್ಧಿ ಅಧಿಕಾರಿಯಾಗಿ ಬರೋದಕ್ಕೆ ಮುಂಚೆ ಈ ಪಂಚಾಯ್ತಿಯಲ್ಲಿ ಬಾಳಷ್ಟು ಅವ್ಯವಹಾರಗಳು ನಡಿತಿದ್ವು ಎಂದು ಜನ್ರೆ ಹೇಳುತ್ತಾರೆ. ಆಮೇಲೆ ನಮ್ ಪಂಚಾಯ್ತಿ ಮೈನಿಂಗ್ ಏರಿಯಾ ಆಗಿದ್ರಿಂದ ಮೊದ್ಲೆಲ್ಲ ಪಂಚಾಯ್ತಿ ಕೆಲ್ಸಕ್ಕೆ ಯಾರು ಬರ್ತಿರಲಿಲ್ಲಂತ. ಯಾಕಂದ್ರೆ ಮೈನಿಂಗ್ ಕೆಲ್ಸಕ್ಕ ಹೋದ್ರ ಒಬ್ಬೊಬ್ರು ಒಂದೊಂದು ದಿನಕ್ಕ ಸಾವಿರ ರೂಪಾಯಿ ದುಡಿತಿದ್ರಂತ. ಒಬ್ಬ ಹೆಣ್ಣು ಮಗಳು

ಕೂಡ ಕನಿಷ್ಟ ಒಂದು ದಿನಕ್ಕ ಐದಾರು ನೂರು ರೂಪಾಯಿ ದುಡಿತ್ತಿದ್ರಂತ. ಆದ್ದರಿಂದ ಈ ಪಂಚಾಯ್ತಿ ಕೂಲಿ ಕೆಲ್ಸಕ್ಕ ಯಾರು ಬರ್ತಿದ್ದಿಲ್ಲಂತ. ಹಾಗಾಗಿ ಈ ಪಂಚಾಯ್ತಿ ಸದಸ್ಯರು ಪ್ರತಿಯೊಂದು ಕೆಲ್ಸಾನು ಕೂಡ ಯಂತ್ರಗಳಿಂದ ಮಾಡ್ಸತ್ತಿದ್ರಂತ. ಮತ್ತೆ ಕೆಲವೊಂದು ಕೆಲ್ಸಾನ ಮಾಡ್ಸದೇನೆ ಜನರಿಂದ ಕೆಲಸ ಮಾಡಿಸೀವಿ ಅಂತೇಳಿ ಸುಳ್ಳು ದಾಖಲೆಗಳನ್ನ ಸೃಷ್ಟಿಮಾಡಿ ಬೋಗಸ್‌ಬಿಲ್ ಎತ್ತಿಗೆಂತಿದ್ರಂತ. ಆದ್ರ ನಾನು ಬಂದಾಗಿನಿಂದ ಈ ರೀತಿಯ ಅವ್ಯವಹಾರಕ್ಕೆ ಆಸ್ಪದಕೊಡದೇ ಇರೋದ್ರಿಂದ ಪಂಚಾಯ್ತಿ ಸದಸ್ಯರು ನನ್ ಮೇಲೆ ವಿನಾಕಾರಣ ಜಗಳ ಮಾಡ್ತಾರ. ಯಾಕಂದ್ರ ನಾನು ಈ ಪಂಚಾಯ್ತಿಗೆ ಅಪಾಯಿಂಟಾಗಿ ಬಂದ ತಕ್ಷಣ ಮೊದಲನೆಯದಾಗಿ ಜಾಬ್‌ಕಾರ್ಡ್‌ಗಳ ಪರಿಶೀಲನೆ ಮಾಡಿದೆ. ಜಾಬ್‌ಕಾರ್ಡ್ ಪರಿಶೀಲನೆ ಮಾಡಿದಾಗ ಸತ್ತವರ ಹೆಸರಲ್ಲಿ ಜಾಬ್‌ಕಾರ್ಡ್ ಇರುವಂತಹದ್ದು ಮತ್ತು ಸತ್ತವರ ಹೆಸರಮ್ಯಾಲೆ ಬ್ಯಾಂಕಿನಲ್ಲಿ ಹಣ ಎತ್ತಿಕೊಂಡಿರುವಂತಹದ್ದು, ಮದುವೆಯಾಗಿ ಗಂಡನ ಮನೆಗೆ ಹೋದವರ ಹೆಸರಿನಲ್ಲಿ ಜಾಬ್‌ಕಾರ್ಡ್ ಇರುವಂತಹದ್ದು ದೊಡ್ಡ ದೊಡ್ಡ ಶ್ರೀಮಂತರು ಕೋಟು ಹಾಕ್ಕೆಂಡು ಫೋಟೊ ಇಳಿದು ಜಾಬ್‌ಕಾರ್ಡ್ ಮಾಡಿಸಿರುವಂತಹದ್ದು ವಿದ್ಯಾರ್ಥಿಗಳ ಹೆಸರಲ್ಲಿ ಜಾಬ್‌ಕಾರ್ಡ್ ಇರುವಂತಹದ್ದು. ಮತ್ತೆ ಬೇವೂರಿಗೆ ದುಡಿಯಾಕ ಹೋದಂತವರ ಹೆಸರಲ್ಲಿ ಜಾಬ್‌ಕಾರ್ಡ್‌ಗಳು ಇದ್ದವು. ಮತ್ತೆ ಇವರೆಲ್ಲರು ಈ ಯೋಜನೆಯಲ್ಲಿ ಕೂಲಿಕಾರ್ಮಿಕರಾಗಿ ದುಡಿದಿರುವುದಕ್ಕೆ ಹಾಜರಿ ಪುಸ್ತಕದಲ್ಲಿ ಇವರ ಹೆಸರು ಮತ್ತು ಸಹಿ ಇರುವಂತಹದ್ದು ಕಂಡುಬಂದಿತು. ಹಾಗೆಯೇ ಇಡೀ ಪಾಪಿನಾಯಕನಹಳ್ಳಿ ಗ್ರಾಮ ಪಂಚಾಯ್ತಿಯ ಕೂಲಿಕಾರ್ಮಿಕರ ಜಾಬ್‌ಕಾರ್ಡ್‌ಗಳು ಯಾವೊಬ್ಬ ಕೂಲಿಕಾರ್ಮಿಕನ ಹತ್ತಿರ ಇರಲಿಲ್ಲ. ಬದಲಾಗಿ ಎಲ್ಲಾ ಜಾಬ್‌ಕಾರ್ಡ್‌ಗಳು ಗ್ರಾಮ ಪಂಚಾಯ್ತಿ ಅಧ್ಯಕ್ಷರ ಮತ್ತು ಸದಸ್ಯರ ಮನೆಯಲ್ಲಿದ್ದವು. ಆದ್ದರಿಂದ ನಾನೇ ಖುದ್ದಾಗಿ ನಮ್ ಗ್ರಾಮ ಪಂಚಾಯ್ತಿ ಸಿಬ್ಬಂದಿಯೊಂದಿಗೆ ಜಾಬ್‌ಕಾರ್ಡ್ ಮಾಡಿಕೊಟ್ಟಿದ್ದೇನೆ. ಹಂಗಾಗಿ ಇವತ್ತು ನಮ್ ಪಂಚಾಯ್ತಿಯಲ್ಲಿ ನಿಜವಾದ ಕೂಲಿ ಕಾರ್ಮಿಕರ ಹೆಸರಲ್ಲಿ ಮಾತ್ರ ಜಾಬ್‌ಕಾರ್ಡ್‌ಗಳು ಇವೆ. ಹಾಗೆಯೇ ಜಾಬ್‌ಕಾರ್ಡ್‌ಗಳನ್ನು ಯಾವ ಮದ್ಯವರ್ತಿಗಳಿಗೂ ಕೊಡಬಾರದು ಎಂದು ತಿಳಿಹೇಳಿದ್ದೇವೆ ಮತ್ತೆ ನಮ್ ಪಂಚಾಯ್ತಿ ವ್ಯಾಪ್ತಿಯಲ್ಲಿ ಒಟ್ಟು ಒಂದು ಸಾವಿರ ಬೋಗಸ್ ಜಾಬ್‌ಕಾರ್ಡ್‌ಗಳನ್ನು ತೆಗೆದು ಹಾಕಿದ್ದೇನೆ" ಎಂದರು. ಹೀಗೆ ಮಂಜುಳಾರಾಣಿಯವರಯ ಒಬ್ಬ ಮಹಿಳೆಯಾಗಿ ಉದ್ಯೋಗ ಖಾತರಿ ಯೋಜನೆಯಲ್ಲಿ ನಡೆಯುತ್ತಿದ್ದಂತಹ ಅನೇಕ ಅವ್ಯವಹಾರಗಳಿಗೆ ಕಡಿವಾಣ ಹಾಕಿರುವುದನ್ನು ತಿಳಿಯಬಹುದಾಗಿದೆ. ಜೊತೆಗೆ ಇವರು ಜನರ ಪ್ರೀತಿಗೆ ಪಾತ್ರರಾಗಿದ್ದಾರೆ.

**ಆ) ಕೆಲಸದ ಸ್ವರೂಪ ಮತ್ತು ಲಿಂಗ ಸಂಬಂಧಿ ಆಯಾಮಗಳು**

ಉದ್ಯೋಗ ಖಾತರಿ ಯೋಜನೆಯಲ್ಲಿ ನಿರ್ವಹಿಸುವಂತಹ ಕೆಲಸಗಳ ಸ್ವರೂಪದಲ್ಲಿಯೂ ಲಿಂಗ ಅಸಮಾನತೆಯ ಅಂಶಗಳು ಕಂಡುಬರುತ್ತಿವೆ. ಕೆಲಸಗಳನ್ನು ನಿರ್ವಹಣೆಯ ಸಂದರ್ಭದಲ್ಲಿ,

ಕೆಲಸಗಳನ್ನು ಹಂಚಿಕೆ ಮಾಡುವ ಸಂದರ್ಭಗಳಲ್ಲಿ, ಕೆಲಸದ ಸ್ಥಳಗಳಲ್ಲಿನ ಸೌಲಭ್ಯಗಳ ಕಾರಣವಾಗಿ ಮಹಿಳೆಯರು ಹಲವಾರು ಬಗೆಯ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಇವುಗಳ ಜೊತೆ ಜೊತೆಗೆ ಜಾತಿ ಕಾರಣಕ್ಕಾಗಿ, ಶಿಕ್ಷಣದ ಕೊರತೆಯ ಕಾರಣಕ್ಕಾಗಿಯೂ ಅಸಮಾತೆಗೆ ಒಳಗಾಗಿದ್ದಾರೆ. ಈ ಅಸಮಾನತೆಯ ಅಂಶಗಳು ಭಿನ್ನ ಭಿನ್ನ ಸ್ವರೂಪದಲ್ಲಿ ಗೋಚರಿಸುತ್ತವೆ. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡುಕೊಂಡಂತೆ ಪ್ರಕರಣಗಳು ಈ ಎಲ್ಲಾ ಅಂಶಗಳಿಗೆ ಸಾಕ್ಷೀಭೂತಗಳಾಗಿವೆ.

ಕೆಲಸದ ಸ್ಥಳಗಳಲ್ಲಿ ಕೆಲಸದ ಉಸ್ತುವಾರಿಯನ್ನು ನೋಡಿಕೊಳ್ಳುವುದಕ್ಕಾಗಿ ಪ್ರತೀ ೫೦ ಮಂದಿ ಕೆಲಸಗಾರರಿಗೆ ಒಬ್ಬರಂತೆ ಕಾಯಕ ಬಂಧುವನ್ನು ನೇಮಿಸಬೇಕಾಗುತ್ತದೆ. ಈ ಕೆಲಸಕ್ಕೆ ಇಲ್ಲಿ ಸ್ತ್ರೀ ಪುರುಷರಿಬ್ಬರನ್ನೂ ನೇಮಿಸಬಹುದಾಗಿದೆ. ಆದರೆ ಕೆಲವು ಮಾನದಂಡಗಳನ್ನು ರೂಪಿಸಲಾಗಿದೆ. ಅವುಗಳೆಂದರೆ ವಿದ್ಯಾವಂತರಾಗಿರಬೇಕು, ಉದ್ಯೋಗ ಖಾತರಿ ಯೋಜನೆಯಲ್ಲಿ ಸ್ವಲ್ಪ ಸಮಯದವರೆಗೆ ಕೆಲಸವನ್ನು ನಿರ್ವಹಿಸಿರಬೇಕು. ಮುಖ್ಯವಾಗಿ ಕಾಯಕ ಬಂಧುವಿನ ಸ್ಥಾನಕ್ಕೆ ಮಹಿಳೆಯರಿಗೆ ಮತ್ತು ವಿಭಿನ್ನ ಸಾಮರ್ಥ್ಯದಾರರಿಗೆ ಮೊದಲ ಆದ್ಯತೆ ನೀಡಬೇಕು ಎಂದು ಕಾಯಿದೆ ಹೇಳುತ್ತದೆ. ಆದರೆ ಹೆಚ್ಚಿನ ಗ್ರಾಮ ಪಂಚಾಯತಿಗಳಲ್ಲಿ ಈ ಕಾಯಕ ಬಂಧುವಿನ ಕೆಲಸಕ್ಕೆ ಪುರುಷರನ್ನೇ ಹೆಚ್ಚಾಗಿ ನೇಮಿಸಿಕೊಂಡಿರುತ್ತಾರೆ. ಇದರಿಂದ ಮಹಿಳೆಯರನ್ನು ವಂಚಿತರನ್ನಾಗಿ ಮಾಡಲಾಗಿದೆ. ಇದಕ್ಕೆ ಕಾರಣಗಳನ್ನೂ ಕೊಡಲಾಗುತ್ತದೆ. ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕಿನ ಪೋತ್ನಾಳ್ ಗ್ರಾಮ ಪಂಚಾಯತಿಯ ಅಭಿವೃದ್ಧಿ ಅಧಿಕಾರಿಯಾಗಿದ್ದ ಮಲ್ಲಯ್ಯರವರು ಹೇಳುವ ಹಾಗೆ, "ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಕಾಯಕ ಬಂಧು ಕೆಲಸಕ್ಕೆ ಮಹಿಳೆಯರನ್ನು ಮೇಸ್ತ್ರಿಯನ್ನಾಗಿ ನೇಮಕ ಮಾಡಿಲ್ಲ. ಯಾಕಂದ್ರೆ ಮೇಸ್ತ್ರಿ ಆದಂತವರು ಕೂಲಿಕಾರರ ಹಾಜರಿ ಹಾಕಿಕೊಳ್ಳಬೇಕು. ಕೆಲಸ ನಡಿಯುವಂತ ಸ್ಥಳದಲ್ಲಿ ಇದ್ದು ಕಾರ್ಮಿಕರಿಗೆ ಸರಿಯಾಗಿ ಕೆಲಸ ಮಾಡುವಂತೆ ಅವರಿಗೆ ತಿಳಿಸಬೇಕು. ಮತ್ತೆ ಕೂಲಿಕಾರರ ಹೆಸರನ್ನು ಪಂಚಾಯ್ತಿಗೆ ಹೋಗಿ ಫೀಲ್ಡ್ ಮಾಡಿಸಬೇಕು. ಕೂಲಿಕಾರರ ಹಾಜರಿಯನ್ನು ಅಭಿವೃದ್ಧಿ ಅಧಿಕಾರಿಗಳಿಗೆ ತಲುಪಿಸಬೇಕು. ಇಷ್ಟೆಲ್ಲ ಕೆಲಸ ಮಹಿಳೆಯರಿಂದ ಮಾಡೋದಕ್ಕೆ ಆಗದಿಲ್ಲ ಹಂಗಾಗಿ ಪುರುಷರನ್ನು ಮೇಸ್ತ್ರಿಯಾಗಿ ನೇಮಕ ಮಾಡಿದ್ದೀವಿ, ಕಾಯಿದೆಗೆ ಅನುಸಾರವಾಗಿ ಎಲ್ಲಾನು ಮಾಡಾಕ ಆಗಾದಿಲ್ಲ. ನಾವು ಸ್ಥಳೀಯವಾಗಿ ಹಲವಾರು ಒತ್ತಡಗಳಿಗೆ ಒಳಗಾಗಬೇಕಾಗುತ್ತದೆ. ಸ್ಥಳೀಯ ಜನ ಪ್ರತಿನಿಧಿಗಳ, ಗ್ರಾಮದ ಮುಖ್ಯಸ್ಥರ ಒತ್ತಡಗಳಿಗೆ ಮಣಿದು ಯೋಜನೆಯ ಅನುಕೂಲಕ್ಕೆ ತಕ್ಕಂತೆ ಮಾಡ್ಬೇಕಾಗುತ್ತೆ" ಎಂದು ತಿಳಿಸಿದರು.

ಕಾಯಕ ಬಂಧು ಕೆಲಸಕ್ಕೆ ಸಮರ್ಥವಾದ ಮಹಿಳೆಯರು ಅಲ್ಲಿ ದೊರೆಯುತ್ತಿದ್ದರು. ಹಾಗಾಗಿ ಇವರನ್ನೇ ನೇಮಕ ಮಾಡಬಹುದಾಗಿತ್ತು. ಆದರೆ ಅಭಿವೃದ್ಧಿ ಅಧಿಕಾರಿಗಳು

ಸ್ಥಳೀಯ ಒತ್ತಡಗಳಿಗೆ ಮಣಿದಿದ್ದರಿಂದ ಈ ಕೆಲಸಕ್ಕೆ ಪುರುಷರನ್ನೇ ನೇಮಕಮಾಡಬೇಕಾದ ಅನಿವಾರ್ಯತೆಯನ್ನು ಎದುರಿಸಬೇಕಾಯಿತು. ಹಾಗಾಗಿ ಮಹಿಳೆಯರನ್ನು ಈ ಕೆಲಸದಿಂದ ದೂರವಿಡುವಂತಹ ಕಾರ್ಯ ಸ್ಥಳೀಯ ಪುರುಷಶಾಹಿಯಾದ್ದಾಗಿದೆ. ಇದನ್ನು ಪ್ರಶ್ನಿಸುವಂತಹ ಕೆಲಸ ಯಾರಿಂದಲೂ ಆಗಲಿಲ್ಲ. ಏಕೆಂದರೆ ಯೋಜನೆಯ ಅರಿವು ಜನರಲ್ಲಿ ಇಲ್ಲ.

ಇದು ಕಾಯಕ ಬಂಧುವಿನ ಕೆಲಸಕ್ಕೆ ಸಂಬಂಧಿಸಿದಂತೆ ಆದರೆ ಇನ್ನು ಕೆಲಸದ ಸ್ಥಳಗಳಲ್ಲಿ ಮಹಿಳೆಯರಿಗೆ ಕಠಿಣವಾದ ಕೆಲಸಗಳನ್ನು ಹೇಳುವುದರ ಮೂಲಕ ಹಿಂಸೆಗೆ ಒಳಪಡಿಸುತ್ತಿದ್ದಾರೆ. ಅಂದರೆ ಕಾಮಗಾರಿ ಸ್ಥಳಗಳಲ್ಲಿ ಸ್ತ್ರೀಪುರುಷರಿಬ್ಬರೂ ಕೂಲಿಕಾರರೇ ಆಗಿರುತ್ತಾರೆ. ಇಂತಹ ಸಂದರ್ಭದಲ್ಲಿ ಕೆಲಸದ ವರ್ಗೀಕರಣವು ನಡೆಯುತ್ತದೆ. ಈ ವರ್ಗೀಕರಣ ಮಹಿಳೆಯರ ಪಾಲಿಗೆ ಬಹಳ ನೋವಿನ ಸಂಗತಿಯಾಗಿದೆ. ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಜಾಗೀರ್ ಜಾಡಲದಿನ್ನಿ ಗ್ರಾಮದ ತಿಮ್ಮವ್ವ ಹೇಳುವಂತೆ "ಊರಾಗ ಇದ್ದಂತವರೆಲ್ಲ ಜನ ಸೇರ್ಕೆಂಡು ಪಂಚಾಯ್ತಿಗೆ ಕೂಲಿ ಕೆಲ್ಸ ಕೊಡ್ರಿ ಅಂತೇಳಿ ಅರ್ಜಿಕೊಟ್ವಿ. ಆಮ್ಯಾಲೆ ಪಂಚಾಯ್ತಿಯೋರು ಖಾತ್ರಿ ಕೆಲ್ಸಕಂದು ಕರ್ಕೊಂಡು ಹೋಗಿ ಅಲ್ಲಿ ಗಂಡ್ಸರು ಮಾಡೋ ಕೆಲ್ಸಾನ ನಮ್ಗ ಮಾಡಾಕ ಹೇಳ್ತಾರ. ಗಂಡ್ಸರು ಮಾಡಂತ ಕೆಲ್ಸ ಎಲ್ಲಾ ಹೆಣ್ಮಕ್ಕಳಿಂದ ಮಾಡಾಕ ಆಗಾದಿಲ್ಲ. ಗಾವಾಗಿದ್ದಂತ ಹೆಣ್ಮಕ್ಕಳು ಯಾವ ಕೆಲ್ಸ ಕೊಟ್ರೂನ್ ಮಾಡ್ತಾರ. ಆದ್ರೆ ಎಲ್ಲಾ ಹೆಣ್ಮಕ್ಕಳಿಂದ ಗಂಡ್ಸರು ಮಾಡೋಕೆಲ್ಸ ಮಾಡಾಕ ಆಗಾದಿಲ್ಲ. ಹಂಗಾಗಿ ನಮ್ಗ ಗಂಡ್ಸರು ಮಾಡಕೆಲ್ಸ ನಮ್ಮಿಂದ ಆಗಾಂಗಿಲ್ಲ. ನೀವು ನಮ್ಗ ಬ್ಯಾರೆ ಕೆಲ್ಸ ಕೊಡ್ರಿ ಅಂತ ಹೇಳಿದ್ವಿ, ಗಂಡ್ಸರಷ್ಟೇ ಕೂಲಿ ತಗಂತೀರಿ ಯಾಕ ಮಾಡಂಗಿಲ್ಲ ಅಂತ ಜಬರ್‌ದಸ್ತ್ ಮಾಡ್ತಾರ. ನಾವೇನಾದ್ರು ಕಡಾಕಂಡಿತಾ ಕೆಲ್ಸ ಮಾಡಾಕ ಆಗಾಂಗಿಲ್ಲ ಅಂದ್ರೆ ನಾಳೆಯಿಂದ ಕೆಲ್ಸಕ್ಕ ಬರಬ್ಯಾಡ್ರಿ ಅಂತ ಹೇಳ್ತಾರ. ನಾವು ಎಷ್ಟೊಂದು ಕಷ್ಟ ಪಟ್ಟು ಕೆಲ್ಸ ಮಾಡಿದ್ರು ಕೂಲಿ ಕಡಿಮಿ ಆಕಿ ಕೊಡ್ತಾರ" ಎಂದು ಹೇಳಿದಳು.

ವ್ಯವಸ್ಥೆಯಲ್ಲಿ ದುಡಿಮೆಗೆ ಸಂಬಂಧಿಸಿದಂತೆ ಸ್ತ್ರೀ ಪುರುಷರಿಬ್ಬರಿಗೂ ಹಲವು ಬಗೆಯ ಕೆಲಸಗಳನ್ನು ವರ್ಗೀಕರಣ ಮಾಡಲಾಗಿದೆ. ಪುರುಷರು ಇಂತಹದ್ದೇ ಕೆಲಸವನ್ನು ಮಾಡಬೇಕು ಮತ್ತು ಸ್ತ್ರೀಯರೂ ಕೂಡ ಇಂತಹದ್ದೇ ಕೆಲಸವನ್ನು ಮಾಡಬೇಕು ಎಂದು ವ್ಯವಸ್ಥೆ ಈಗಾಗಲೇ ರೂಪಿಸಿಬಿಟ್ಟಿದೆ. ಹಾಗಾಗಿ ತಿಮ್ಮವ್ವನ ಮಾತುಗಳಲ್ಲಿ ಈ ಕೆಲಸದ ವರ್ಗೀಕರಣಕ್ಕೆ ಸಂಬಂಧಿಸಿದಂತೆ ಮಾತುಗಳು ಹೊರಡುತ್ತವೆ. ಅಂದರೆ ಪುರುಷರು ಮಾಡುವಂತಹ ಕೆಲಸಗಳನ್ನು ಸ್ತ್ರೀಯರಿಗೆ ಕೊಡುತ್ತಿರುವ ಕಾರಣಕ್ಕಾಗಿ ಇಲ್ಲಿ ತಿಮ್ಮವ್ವ ನೋವನ್ನು ಅನುಭವಿಸುತ್ತಿದ್ದಾಳೆ. ಹಾಗೆಂದು ಈ ಮಾತಿನ ಅರ್ಥ ಮಹಿಳೆಯರು ಅಸಮರ್ಥರು ಎಂದಲ್ಲ. ಬದಲಾಗಿ ಪಿತೃ ಪ್ರಧಾನ ವ್ಯವಸ್ಥೆ ತಿಮ್ಮವ್ವನ ಮಾತುಗಳಲ್ಲಿ ಆಡಿಸುತ್ತಿದೆ. ಈ ಮಾತುಗಳು ಪಿತೃಪ್ರಧಾನ ವ್ಯವಸ್ಥೆಯ ಒಂದು ಭಾಗವಾಗಿ ಗೋಚರಿಸುತ್ತವೆ. ವ್ಯವಸ್ಥೆಯಲ್ಲಿ ಸ್ತ್ರೀಯರು ಮಾಡುವಂತಹ ಎಷ್ಟೋ ಕೆಲಸಗಳನ್ನು

ಪುರುಷರು ಮಾಡಲು ಆಗುವುದಿಲ್ಲ. ಹಾಗೆಂದು ಅವರು ಸ್ತ್ರೀಯರಿಗಿಂತ ಅಸಮರ್ಥರು ಎಂದು ಹೇಳಲಾಗುವುದಿಲ್ಲ. ಇಲ್ಲಿ ಸಾಮರ್ಥ್ಯದ ವಿಷಯ ಮುಖ್ಯವಾಗುತ್ತದೆ ಎಂದುಕೊಂಡರೆ ತಪ್ಪಾಗುತ್ತದೆ. ಏಕೆಂದರೆ ಸ್ತ್ರೀಯರಾಗಲೀ ಪುರುಷರಾಗಲೀ ತಾವು ಯಾವ ಯಾವ ಕೆಲಸಗಳನ್ನು ರೂಢಿಸಿಕೊಂಡು ಬಂದಿರುತ್ತಾರೋ ಆ ಕೆಲಸಗಳನ್ನು ಸುಲಭವಾಗಿ ಮಾಡಬಲ್ಲರು. ಆದರೆ ತಮ್ಮ ಜೀವನದಲ್ಲಿ ರೂಢಿಸಿಕೊಳ್ಳದೇ ಇರುವಂತಹ ಕೆಲಸಗಳನ್ನು ಯಾರೂ ಮಾಡುವುದಿಲ್ಲ. ಒಂದು ವೇಳೆ ಮಾಡಲು ಮುಂದಾದರೆ ಅದು ಅವರಿಗೆ ಕಷ್ಟವೆನಿಸುತ್ತದೆ. ಹಾಗೆಯೇ ಕೂಲಿಯು ಸ್ತ್ರೀಪುರುಷರಿಗೆ ಸಮಾನವಾಗಿದೆ ಹಾಗಾಗಿ ಹೇಳಿದ ಕೆಲಸಗಳನ್ನು ಮಾಡಬೇಕು ಎಂಬಂತಹ ಒತ್ತಡಗಳನ್ನು ಅಧಿಕಾರಿಗಳು ಹೇರುತ್ತಿದ್ದಾರೆ. ಈ ಎಲ್ಲಾ ಅಂಶಗಳು ತಿಮ್ಮವ್ವನ ಮಾತಿನಲ್ಲಿರುವುದು ಕಂಡುಬರುತ್ತದೆ. ಆದರೆ ಈ ವಿಷಯವನ್ನೇ ಇಟ್ಟುಕೊಂಡು ಉದ್ಯೋಗ ಖಾತರಿ ಯೋಜನೆಯ ಅಧಿಕಾರಿಗಳು ತಿಮ್ಮವ್ವನನ್ನು ಹಿಂಸಿಸುತ್ತಿದ್ದಾರೆ. ಇದರಿಂದ ತಿಮ್ಮವ್ವ ಬಹಳ ಸಮಸ್ಯೆಗಳಿಗೆ ಒಳಗಾಗಿರುವುದನ್ನು ಕಾಣಬಹುದಾಗಿದೆ.

ಜಾತಿಯ ಕಾರಣಕ್ಕೆ ದಲಿತ ಮಹಿಳೆಯರಿಗೆ ಮತ್ತು ಉನ್ನತ ವರ್ಗದವರೆಂದು ಗುರುತಿಸಲ್ಪಟ್ಟಂತಹ ಮಹಿಳೆಯರಿಗೆ ಕೆಲಸಗಳ ವರ್ಗೀಕರಣದ ಸಂದರ್ಭದಲ್ಲಿ ಅಸಮಾನತೆಯನ್ನು ಅನುಸರಿಸುತ್ತಿದ್ದಾರೆ. ಇಲ್ಲಿ ಮುಖ್ಯವಾಗಿ ದಲಿತ ಮಹಿಳೆಯರಿಗೆ ಗುರುತಿಸುವಂತಹ ಕೆಲಸಗಳ ಸ್ವರೂಪವೇ ಬೇರೆಯಾಗಿರುತ್ತದೆ. ಅಂದರೆ ಅವರ ಜಾತಿಯು ವಂಶಪಾರಂಪರ್ಯವಾಗಿ ಯಾವ ಕೆಲಸಗಳನ್ನು ಮಾಡಿಕೊಂಡು ಬರಬೇಕೆಂದು ನಿಯಮವನ್ನು ರೂಪಿಸಲಾಗಿದೆಯೋ ಆ ಪ್ರಕಾರವಾಗಿ ಉದ್ಯೋಗ ಖಾತರಿ ಯೋಜನೆಯ ಕೆಲಸಗಳಲ್ಲಿಯೂ ವರ್ಗೀಕರಣ ಮಾಡಿರುವುದನ್ನು ಕಾಣಬಹುದಾಗಿದೆ. ಅಂದರೆ ಚರಂಡಿ ಸ್ವಚ್ಛಗೊಳಿಸುವುದು, ಊರ ಹೊರಗಿನ ಕೆಲಸಗಳನ್ನು ಮಾಡುವಂತೆ ಹೇಳುವುದು ಈ ರೀತಿಯಲ್ಲಿ ಮಾಡಲಾಗುತ್ತಿದೆ. ಹೀಗೆ ಹೇಳುವ ಮೂಲಕ ಜಾತಿ ಪದ್ಧತಿಯು ವ್ಯವಸ್ಥೆಯಲ್ಲಿ ಗಟ್ಟಿಗೊಳ್ಳುವಂತೆ ಮಾಡಲಾಗುತ್ತಿದೆ. ಈ ಅಸಮಾನತೆಗೆ ದಲಿತ ಮಹಿಳೆಯರೇ ಹೆಚ್ಚಾಗಿ ಸಮಸ್ಯೆಗಳಿಗೆ ಸಿಲುಕಿಕೊಂಡಿರುವುದನ್ನು ಕಾಣಲಾಗುತ್ತದೆ. ಹಾಗೆಯೇ ಉನ್ನತ ಜಾತಿಯೆಂದು ಕರೆಯಲ್ಪಡುವ ಜಾತಿಯ ಮಹಿಳೆಯರಿಗೆ ಊರ ಒಳಗಿನ ಕೆಲಸಗಳನ್ನು ಕೊಟ್ಟಿರುವಂತಹ ಉದಾಹರಣೆಗಳು ಕಾಣಸಿಗುತ್ತವೆ.

ರಾಯಚೂರು ಜಿಲ್ಲೆಯ ಲಿಂಗಸೂರು ತಾಲೂಕಿನ ಗೌಡೂರು ಗ್ರಾಮದ ಶರಣಮ್ಮನವರು ಕೆಲಸದ ಸ್ಥಳಗಳಲ್ಲಿನ ತಾರತಮ್ಯವನ್ನು ಸ್ಪಷ್ಟವಾಗಿ ಬಿಚ್ಚಿಡುತ್ತಾರೆ. "ಸಾರ್ ಈ ಯೋಜನೆ ಬಾಳಾ ಚಂದ ಐತ್ರಿ, ಈ ಯೋಜನೆಯಾಗ ನಾನು, ನನ್ ಮಗ ಮತ್ತೆ ನನ್ ಮಗಳು ಮೂರು ಜನ ಕೆಲ್ಸ ಮಾಡೀವಿ. ಆದ್ರೆ ಪಂಚಾಯ್ತಿಯವರು ಮತ್ತೆ ಊರಾಗಿನ ದೊಡ್ಡ-ದೊಡ್ಡ ಜಾತಿಯವರು ಬಾಳಾ ಮೋಸ ಮಾಡ್ತಾರ. ಮತ್ತೆ ಜಾತಿ ಬೇದ ಬಾಳಾ ಮಾಡ್ತಾರ. ಸರಕಾರದ ಕೆಲ್ಸ ಅಂದ್ರೆ ಎಲ್ಲಾರಿಗೆ ಒಂದೇ ರೀತಿ ಸಮನಾಗಿ ಕೆಲ್ಸ ಕೊಡ್ಬೇಕು ಅಂತೇಳಿ

ಇರ್ತಾದ. ಆದ್ರೆ ನಮ್ಮೂರಾಗ ಏನು ಮಾಡ್ತಾರಂದ್ರೆ ಪಂಚಾಯ್ತಿ ಅಧ್ಯಕ್ಷರು, ಸದಸ್ಯರು ಸೇರಿ ಹರಿಜನರನ್ನು, ಹೊಲೇರ್ನ ಒಂದು ಗುಂಪು ಮಾಡ್ತಾರ. ಉಳಿದಂತ ಎಲ್ಲಾ ಜಾತಿಯವರ್ನ ಸೇರಿಸಿ ಒಂದು ಗುಂಪು ಮಾಡ್ತಾರ. ಆಮ್ಯಾಲೆ ನಮ್ಗ ಈ ಯೋಜನೆಯಾಗ ಎಂತ ಕೆಲ್ಸ ಕೊಡ್ತಾರಂದ್ರೆ, ಚರಂಡಿಕ್ಲೀನ್ ಮಾಡಂತ ಕೆಲ್ಸ, ಊರು ಸುತ್ತ ಸಂಡಾಸು ಕುಂದ್ರಂತ ಜಾಗದಾಗ ಸ್ವಚ್ಚ ಮಾಡಂತ ಕೆಲ್ಸ, ಸುಡುಗಾಡ್ಯಾಗ ಸ್ವಚ್ಚ ಮಾಡಂತ ಕೆಲ್ಸ ಹೊಲೆ ಮಾದಿಗರಿಗೆ ಹೇಳ್ತಾರ. ಆದ್ರೆ ಅದೇ ದೊಡ್ಡ-ದೊಡ್ಡ ಜಾತಿಯವರು ಏನು ಐದಾರಲ್ಲ ಅವರಿಗೆ ಕೃಷಿಹೊಂಡ ತೋಡಂತ ಕೆಲ್ಸ, ಚೆಕ್‌ಡ್ಯಾಂ ಕೆಲ್ಸ, ಹೊಡ್ಡಾಕ ಕೆಲ್ಸ, ರೋಡ್ ಮಾಡಂತ ಕೆಲ್ಸ ಹೇಳ್ತಾರ. ನಾವ್ಯಾಕ ಈ ಕೆಲ್ಸ ಮಾಡ್ಬೇಕು, ನಾವೇನು ಕಮ್ಮಿಯೇನು ನೀವು ಕೆಲ್ಸ ಕೊಡಾದಾದ್ರೆ ಎಲ್ಲಾರಿಗೆ ಒಂದೇ ಕೆಲ್ಸ ಕೊಡ್ರಿ, ಹರಿಜನ್ರು, ಹೊಲೇರು ಅಂದ್ರ ಅಷ್ಟೊಂದು ಕೀಳೇನು ಅಂತ ಕೇಳಿದ್ರೆ ನೀವು ಕೆಲ್ಸ ಮಾಡದಾದ್ರೆ ಮಾಡ್ರಿ ಇಲ್ಲಂದ್ರೆ ಬಿಟ್ಟು ಹೋಗ್ರಿ ಅಂತ ನಮ್ಮ್ಯಾಲೆ ದೌರ್ಜನ್ಯ ಮಾಡ್ತಾರ" ಎಂದು ಹೇಳಿದರು.

ಜಾತಿಯ ಬೇರುಗಳು ವ್ಯವಸ್ಥೆಯಲ್ಲಿ ಎಷ್ಟು ಬಲಿಷ್ಠವಾಗಿರುತ್ತವೆ ಅಂದರೆ ಉನ್ನತ ಜಾತಿಯ ಮಹಿಳೆಯರೇ ತಾವು ಉನ್ನತ ಜಾತಿಯವರು ಎಂಬ ಕಾರಣಕ್ಕೆ ಉದ್ಯೋಗ ಖಾತರಿ ಯೋಜನೆಯ ಕೆಲಸಗಳನ್ನೇ ತ್ಯಜಿಸಿರುವಂತಹ ಪ್ರಕರಣ ಕಂಡುಬರುತ್ತದೆ. ಬಳ್ಳಾರಿ ಜಿಲ್ಲೆಯ ಹೂವಿನ ಹಡಗಲಿ ತಾಲೂಕಿನ ಹಿರೇಮಲ್ಲನಕೇರಿ ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿ ಬರುವಂತಹ ಬಸರಳ್ಳಿ ಗ್ರಾಮದ ಶಿವಗಂಗಮ್ಮ ಲಿಂಗಾಯತ ಜಾತಿಗೆ ಸೇರಿದವರಾಗಿದ್ದಾರೆ. ಇವರು ಹೇಳುವಂತೆ. "ಗ್ರಾಮ ಪಂಚಾಯತಿಯಾಗ ಕೆಲಸಕ್ಕ ಸೇರಿಕೆಂಡ ಮ್ಯಾಲ ಪಂಚಾಯ್ತಿಯವರು ಏನು ಮಾಡಿದ್ರಂದ್ರೆ ಕೆಲ್ಸ ಕೊಡ್ತೀವಿ ಅಂತ ಕರ್ದು ಗಟಾರ ಕ್ಲೀನ್ ಮಾಡಂತ ಕೆಲ್ಸ, ಊರು ಸುತ್ತ ಸಂಡಾಸು ಮಾಡಂತ ಜಾಗದಾಗ ಕ್ಲೀನ್ ಮಾಡಂತ ಕೆಲ್ಸ ಮತ್ತೆ ಸುಡುಗಾಡು ಸ್ವಚ್ಚ ಮಾಡಂತ ಕೆಲ್ಸ ಹೇಳಿದ್ರು, ಇಂತ ಕೆಲ್ಸ ಯಾರಾದ್ರೆ ನಮ್ಮಂತ ಲಿಂಗಾಯಿತ್ರು, ಐನೋರು ಮತ್ತೆ ದೊಡ್ಡ-ದೊಡ್ಡ ಜಾತಿಯವರು ಮಾಡಂತ ಕೆಲ್ಸ ಏನ್ರಿ ಅದು. ನಮ್ಮಂತ ದೊಡ್ಡ ಜಾತಿಯವರು ಅಂತ ಕೆಲ್ಸ ಮಾಡಿದ್ದು ನೀವು ಎಲ್ಲಾದ್ರು ನೋಡಿರೇನು? ಯಾರು ಮಾಡಂತ ಕೆಲ್ಸ ಅವರು ಮಾಡಿದ್ರೇನೆ ಚಂದ ಇರ್ತಾದ. ಯಾಕಂದ್ರ ನಮ್ ಹಿರೇರು ಸುಮ್ನೆ ಮಾಡ್ಯಾರೇನು? ದೊಡ್ಡವರು ಸಣ್ಣವರು ಮೇಲ್ಜಾತಿ, ಸಣ್ಣಜಾತಿ ಅಂತ. ಹಂಗಾಗಿ ನಾವು ಈ ಕೆಲ್ಸ ಮಾಡಾದಿಲ್ಲ. ನಮ್ಗ ಬ್ಯಾರೆ ಕೆಲ್ಸ ಕೊಟ್ರೆ ಮಾಡ್ತೀವಿ. ಇಲ್ಲಂದ್ರೆ ನಾವು ಕೆಲ್ಸ ಮಾಡಾದಿಲ್ಲಂತ ಹೇಳಿದ್ವಿ ಆಮ್ಯಾಲೆ ಪಂಚಾಯ್ತಿ ಅಧ್ಯಕ್ಷರು, ಮೆಂಬರ್ ಮತ್ತೆ ಪಿ.ಡಿ.ಓ. ಎಲ್ಲಾರು ಬಂದು ನಿಮ್ಗೆ ನಾವು ಯಾವ ಕೆಲ್ಸ ಮಾಡಾಕ ಕೊಡ್ತೀವೋ ಆ ಕೆಲ್ಸ ಮಾಡದಾದ್ರೆ ಮಾಡ್ರಿ ಇಲ್ಲಂದ್ರೆ ನೀವು ಕೆಲ್ಸಕ್ಕ ಬರಬ್ಯಾಡ್ರಿ ಅಂತೇಳಿದ್ರು, ಹಂಗಾಗಿ ದೊಡ್ಡ-ದೊಡ್ಡ ಜಾತಿ ಮಂದಿ ಆವತ್ತಿನಿಂದ ಇವತ್ತಿನ ತನಕ ಪಂಚಾಯ್ತಿಗೆ ಕಾಲಿಟ್ಟಿಲ್ಲ. ಮತ್ತೆ ನಾವು ಇವತ್ತಿನ ತನಕ ಆದ್ರೂನ್ ದುಡಿಯಾಕ ಕೆಲ್ಸ ಕೊಡ್ರಿ ಅಂತ ಕೇಳಿಲ್ಲ" ಎಂದರು.

ಮೇಲಿನ ಎರಡೂ ಪ್ರಕರಣಗಳನ್ನು ಗಮನಿಸಿದರೆ ಇವುಗಳು ಒಂದಕ್ಕೊಂದು ಭಿನ್ನವಾಗಿರುವುದನ್ನು ಕಾಣಬಹುದಾಗಿದೆ. ರಾಯಚೂರಿನ ಗೌಡೂರು ಗ್ರಾಮದಲ್ಲಿ ಉದ್ಯೋಗ ಖಾತರಿ ಯೋಜನೆಯ ಕಾಮಗಾರಿ ಸ್ಥಳಗಳಲ್ಲಿ ಶರಣಮ್ಮನವರಂತಹ ದಲಿತ ಸಮುದಾಯದವರನ್ನು ಮತ್ತು ಮೇಲ್ಜಾತಿಯ ಮಹಿಳೆಯರನ್ನು ಬೇರ್ಪಡಿಸಿ ಎರಡು ಗುಂಪುಗಳನ್ನಾಗಿ ಮಾಡಿ ಆ ಗುಂಪುಗಳಿಗೆ ಕೆಲಸಗಳನ್ನು ವರ್ಗೀಕರಿಸುವಂತಹ ಕಾರ್ಯ ನಡೆಯುತ್ತಿದೆ. ಮುಖ್ಯವಾಗಿ ಸಂವಿದಾನ ಬದ್ಧವಾಗಿ ಎಲ್ಲಾ ಮಾನವರು ಸಮಾನರೇ. ಆ ಕಾರಣಕ್ಕಾಗಿ ಉದ್ಯೋಗ ಖಾತರಿ ಕಾಯಿದೆಯಲ್ಲಿ ಈ ಬಗೆಯ ತಾರತಮ್ಯಗಳಿಗೆ ಅವಕಾಶವಿಲ್ಲ. ಆದರೆ ಇವುಗಳನ್ನು ಗಾಳಿಗೆ ತೂರಿದ ಸ್ಥಳೀಯ ಮಟ್ಟದ ಪಿತೃಪ್ರಧಾನ ವ್ಯವಸ್ಥೆ ಈ ಬಗೆಯ ತಾರತಮ್ಯಗಳಿಗೆ ಕಾರಣವಾಗಿದೆ. ಹೀಗೆ ಮಾಡುವುದರ ಮೂಲಕ ಜಾತಿ ವ್ಯವಸ್ಥೆ ಬಲಿಷ್ಠಗೊಳ್ಳುವಂತಾಗುತ್ತದೆ. ಇಲ್ಲಿ ಮುಖ್ಯವಾಗಿ ಮಹಿಳೆಯರು ಕೆಲಸದ ಸ್ಥಳಗಳಲ್ಲಿ ಜಾತಿಯ ಕಾರಣಕ್ಕಾಗಿ ಹಲವು ಬಗೆಯ ನೋವುಗಳಿಗೆ ಒಳಗಾಗಿದ್ದಾರೆ. ಈ ಬಗೆಯ ತಾರತಮ್ಯವನ್ನು ಪ್ರಶ್ನಿಸಿದರೆ ಕೆಲಸವನ್ನು ಕಳೆದುಕೊಳ್ಳಬೇಕಾದ ಪರಿಸ್ಥಿತಿಯನ್ನು ಎದುರಿಸಬೇಕಾಗುತ್ತದೆ. ಹಾಗಾಗಿ ಗ್ರಾಮ ಪಂಚಾಯತಿಯವರು ಕೊಟ್ಟಂತಹ ಕೆಲಸಗಳನ್ನು ಮಾಡಿಕೊಂಡು ಹೋಗುತ್ತಿದ್ದಾರೆ. ಆದರೆ ಈ ಬಗೆಯ ಮುಜುಗರವಾಗಲೀ ಅಥವಾ ಸಮಸ್ಯೆಗಳಾಗಲೀ ಅಥವಾ ನೋವುಗಳಾಗಲೀ ಬೇರೆ ಜಾತಿಗಳವರಿಗಿಲ್ಲ. ಏಕೆಂದರೆ ಅವರಿಗೆ ಅವರು ಇಚ್ಛಿಸುವಂತಹ ಕೆಲಸ ಅವರಿಗೆ ದೊರೆಯುತ್ತಿದೆಯಾದ್ದರಿಂದ. ಹೀಗೆ ಇದು ರಾಯಚೂರಿನ ಗೌಡೂರು ಗ್ರಾಮದಲ್ಲಿನ ಅಸಮಾನತೆಯ ಅಂಶಗಳಾದರೆ. ಇನ್ನು ಬಳ್ಳಾರಿ ಜಿಲ್ಲೆಯ ಹೂವಿನಹಡಗಲಿ ತಾಲೂಕಿನ ಬಸರಳ್ಳಿಯ ಶಿವಗಂಗಮ್ಮನದು ಬೇರೆಯದೇ ಸಮಸ್ಯೆಯಾಗಿದೆ. ಇವರು ಉನ್ನತ ಜಾತಿಗೆ ಸೇರಿರುವ ಕಾರಣಕ್ಕಾಗಿ ಉದ್ಯೋಗ ಖಾತರಿ ಯೋಜನೆಯ ಫಲಾನುಭವಿ ಪಟ್ಟಿಯಿಂದ ಹೊರಗುಳಿದಿದ್ದಾರೆ. ಕುಟುಂಬದಲ್ಲಿನ ಸಾಮಾಜೀಕರಣದ ಪ್ರಕ್ರಿಯೆಯ ಕಾರಣವಾಗಿ ಈ ಜಾತಿ ನೆಲೆಗಳು ಅಥವಾ ಜಾತಿ ಜಾತಿಗಳ ನಡುವಿನ ಅಂತರ ಹೆಚ್ಚುತ್ತಾ ಸಾಗುತ್ತದೆ. ಸಮಾಜದಲ್ಲಿನ ಜಾತಿ ಶ್ರೇಣೀಕರಣದಿಂದಾಗಿ ಪ್ರತಿಯೊಂದು ಜಾತಿಗೂ ಅಂತಸ್ತಿನ, ಗೌರವದ ಪ್ರಶ್ನೆ ಮುಖ್ಯವಾಗಿ ಕಾಡತೊಡಗುತ್ತದೆ. ಹಾಗೆಯೇ ಸಮಾಜವೂ ಅದನ್ನು ಬಯಸುತ್ತದೆ. ಅಂದರೆ ಪ್ರತಿಯೊಂದು ಜಾತಿಯೂ ತನ್ನದೇ ಆದಂತಹ ಕಸಬುಗಳನ್ನು ಮಾಡುತ್ತಿರುತ್ತದೆ. ಆ ಕಸಬುಗಳನ್ನು ಹೊರತುಪಡಿಸಿ ಬೇರೆ ಕೆಲಸಗಳನ್ನು ಮಾಡಲು ಮುಂದಾಗಬಾರದು. ಒಂದುವೇಳೆ ಆ ಬಗೆಯಲ್ಲಿ ತಮ್ಮ ಜಾತಿಗೆ ವಿರುದ್ಧವಾದ ಕೆಲಸಗಳನ್ನು ಮಾಡಿದ್ದೇ ಆದರೆ ಅವರು ಜಾತಿಯಿಂದ ಮತ್ತು ಸಮಾಜದಿಂದ ದೂಷಿಸಲ್ಪಡುತ್ತಾರೆ. ಆ ಕಾರಣಕ್ಕಾಗಿ ಶಿವಗಂಗಮ್ಮ ತನ್ನ ಜಾತಿಯ ಕಟ್ಟುಪಾಡುಗಳನ್ನು ಬಿಟ್ಟು ಹೊರಬರಲು ಪ್ರಯತ್ನಿಸದೆ ಇರುವುದನ್ನು ಕಾಣಬಹುದಾಗಿದೆ. ಇವರು ಪ್ರತಿದಿನ ದುಡಿಯಬೇಕು, ಅದರಿಂದ ಬಂದಂತಹ ಆದಾಯದಿಂದ

ಜೀವನ ನಡೆಸಬೇಕು. ದಿನಗೂಲಿಯನ್ನೇ ನಂಬಿಕೊಂಡಿರುವ ಇವರು ಉದ್ಯೋಗ ಖಾತರಿ ಯೋಜನೆಯಲ್ಲಿನ ಕೆಲಸಗಳನ್ನು ಬಿಡಲು ಕಾರಣ ಜಾತಿ. ಜಾತಿಯ ಕಾರಣಕ್ಕಾಗಿ ಉದ್ಯೋಗ ಖಾತರಿ ಯೋಜನೆಯ ಕಾಮಗಾರಿ ಸ್ಥಳಗಳಲ್ಲಿ ಮಹಿಳೆಯರು ಭಿನ್ನ ಭಿನ್ನವಾದ ಸಮಸ್ಯೆಗಳಿಗೆ ಗುರಿಯಾಗಿದ್ದಾರೆ.

**ಇ) ಕಾಮಗಾರಿ ಸ್ಥಳಗಳಲ್ಲಿನ ಲಿಂಗೀಯ ನೆಲೆಗಳು**

ಕೆಲಸದ ಸ್ಥಳಗಳಲ್ಲಿ ಮಹಿಳೆಯರು ನಾನಾ ಕಾರಣಗಳಿಗಾಗಿ ಅಸಮಾನತೆಯನ್ನು ಅನುಭವಿಸುತ್ತಿದ್ದಾರೆ. ಮುಖ್ಯವಾಗಿ ಮಹಿಳಾ ಕೂಲಿಕಾರರಿಗೆ ಅವರದ್ದೇ ಆದ ಪ್ರತ್ಯೇಕ ಜೈವಿಕ ಸಮಸ್ಯೆಗಳಿರುತ್ತವೆ. ಕೆಲಸ ನಡೆಯುವ ಸ್ಥಳಗಳಲ್ಲಿ ಈ ಸಮಸ್ಯೆಗಳನ್ನು ಗಮನಹರಿಸಬೇಕಾಗುತ್ತದೆ. ಹೆಣ್ಣುಮಕ್ಕಳು ಕೆಲಸ ಮಾಡುವಲ್ಲಿ ಪ್ರತ್ಯೇಕ ಶೌಚಾಲಯದ ನಿರ್ಮಾಣ ಮಾಡಿರಬೇಕು, ಚಿಕ್ಕ ಮಕ್ಕಳಿದ್ದರೆ ಆ ಮಕ್ಕಳನ್ನು ನೋಡಿಕೊಳ್ಳುವ ಆಯಗಳನ್ನು ನೇಮಿಸಬೇಕು, ಯೋಜನೆಯಲ್ಲಿ ಗರ್ಭಿಣಿ ಮತ್ತು ವಯಸ್ಸಾದ ಹೆಣ್ಣುಮಕ್ಕಳ ಶಕ್ತಿ ಸಾಮರ್ಥ್ಯಕ್ಕೆ ಅನುಗುಣವಾಗಿ ಕೆಲಸವನ್ನು ನೀಡಬೇಕು. ಕೆಲಸದ ಸಂದರ್ಭದಲ್ಲಿ ಅವಗಡಗಳು ಸಂಭವಿಸಿದಲ್ಲಿ ಪ್ರಾಥಮಿಕ ಚಿಕಿತ್ಸೆಯನ್ನು ಕೊಡಿಸುವ ವ್ಯವಸ್ಥೆ ಮಾಡಬೇಕು. ಕೆಲಸದ ಸ್ಥಳ ಐದು ಕಿಲೋಮೀಟರ್‌ಗಿಂತ ದೂರವಿದ್ದರೆ ಅಂತಹ ಸ್ಥಳಗಳಿಗೆ ಕೊಂಡೊಯ್ಯಲು ಪ್ರತ್ಯೇಕವಾದ ವಾಹನದ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಅಂತೆಯೇ ಅನಾರೋಗ್ಯಕ್ಕೆ ತುತ್ತಾದಲ್ಲಿ ಸರಕಾರವೇ ಚಿಕಿತ್ಸೆ ಕೊಡಿಸಬೇಕು. ಇಂತಹ ಮಾನವೀಯ ಅಂಶಗಳು ಈ ಯೋಜನೆಯಲ್ಲಿವೆ. ಇವುಗಳ ಜೊತೆಗೆ ಕೆಲವು ಕೊರತೆಗಳೂ ಇವೆ. ಈ ಕೊರತೆಗಳ ಕಾರಣವಾಗಿ ಮಹಿಳೆಯರು ಹಲವಾರು ಸಮಸ್ಯೆಗಳಿಗೆ ಗುರಿಯಾಗಿದ್ದಾರೆ. ಯೋಜನೆಯ ಕಾಮಗಾರಿಗಳಲ್ಲಿ ಕೆಲಸ ಮಾಡಲು ಇರುವಂತಹ ಸಲಕರಣೆಗಳೂ ಕೂಡ ಮಹಿಳೆಯರಿಗೆ ಕಷ್ಟವಾಗಿರುತ್ತವೆ. ಅಂದರೆ ಈಗಿರುವಂತಹ ಕೆಲಸದ ಪರಿಕರಗಳು ಪುರುಷರು ಬಳಸುತ್ತಿದ್ದಂತಹ ಸಲಕರಣೆಗಳಾಗಿವೆ. ಅವುಗಳನ್ನು ಯಥಾವತ್ತಾಗಿ ಮಹಿಳೆಯರಿಗೂ ಕೊಟ್ಟರೆ ಅವುಗಳನ್ನು ಬಳಸಿ ಕೆಲಸ ನಿರ್ವಹಿಸಲು ಕಷ್ಟಕರವಾಗಿರುತ್ತದೆ. ಈ ಪರಿಕರಗಳನ್ನು ಮಹಿಳೆಯರು ನಿರಂತರವಾಗಿ ಬಳಸದೇ ಇರುವುದು, ಅವರಿಗೆ ಆ ಪರಿಕರಗಳಿಂದ ಕೆಲಸ ಮಾಡುವುದು ತುಂಬಾ ಕಷ್ಟಕರವಾಗಿರುತ್ತದೆ. ಒಂದು ವೇಳೆ ಪುರುಷರು ಬಳಸುವಂತಹ ಪರಿಕರಗಳನ್ನು ಮಹಿಳೆಯರು ಬಳಸುತ್ತಿದ್ದದ್ದೇ ಆದರೆ ಈ ಸಮಸ್ಯೆ ಎದುರಾಗುತ್ತಿರಲಿಲ್ಲ. ಹಾಗಾಗಿ ಇದೂ ಕೂಡ ಮಹಿಳೆಯರನ್ನು ಶೋಷಿಸುವ ಅಂಶವಾಗಿದೆ. ಆದರೆ ಈ ಯಾವ ನಿಯಮಗಳನ್ನೂ ಕೂಡ ಗ್ರಾಮ ಪಂಚಾಯತಿಗಳು ಯೋಜನೆಯ ಅನುಷ್ಠಾನದ ಸಂದರ್ಭದಲ್ಲಿ ಪಾಲಿಸಿದಂತೆ ಕಾಣುವುದಿಲ್ಲ. ಈ ಎಲ್ಲಾ ಅಸಮಾನತೆಯ ಅಂಶಗಳು ಎಲ್ಲಾ ಮಹಿಳೆಯರಿಗೆ ಒಂದೇ ತೆರನಾಗಿಲ್ಲ. ದಲಿತ ಮಹಿಳೆಯರಿಗೆ ಸಂಬಂಧಿಸಿದಂತೆ ಈ ಅಸಮಾನ ಅಂಶಗಳು ಇನ್ನೂ ಕ್ರೂರವಾಗಿರುತ್ತವೆ. ಇವುಗಳನ್ನು ಕ್ಷೇತ್ರಕಾರ್ಯದಲ್ಲಿ ಕಂಡುಕೊಂಡಂತಹ ಪ್ರಕರಣಗಳ ಮೂಲಕ ವಿವರಿಸಲಾಗಿದೆ.

ರಾಯಚೂರು ತಾಲೂಕಿನ ಗಾಣದಾಳು ಗ್ರಾಮದ ಹರಿಜನ(ಪ.ಜಾ) ಪ್ರೇಮಮ್ಮ ಹೇಳುವ ಮಾತುಗಳಲ್ಲಿ ಇಂತಹ ಸಂಗತಿಗಳು ಸೂಕ್ಷ್ಮ ಕಾಣಿಸುತ್ತವೆ. "ಬ್ಯಾಸಿಗಿ ಟೈಂದಾಗ ಕೆಲಸ ಇರಲಿಲ್ಲ. ಆವಾಗ ನಮ್ಮ ಸಂಘದ ಹೆಣ್ಮಕ್ಳು ಎಲ್ಲಾರು ಸೇರಿ ಪಂಚಾಯ್ತಿಗೆ ಹೋಗಿ ಕೆಲ್ಸಬೇಕಂತೇಳಿ ಅರ್ಜಿ ಕೊಟ್ವಿ, ಆಗ ಪಂಚಾಯ್ತಿಯವರು ಕೆಲ್ಸ ಕೊಟ್ರು, ನಾನು ಮತ್ಯಾ ನನ್ ಗಂಡ ಇಬ್ರು ಕೆಲ್ಸಕ್ಕೆ ಹೋಗಿದ್ವಿ, ನಾನು ಆ ಟೈಂದಾಗ ಐದು ತಿಂಗಳ ಬಸುರಿ ಇದ್ದೆ. ಕೆಲಸ ಮಾಡುವಾಗ ನನ್ಗ ಹೊಟ್ಟೆ ಬ್ಯಾನೆ ಕಾಣಿಸಿಗೆಂತು. ಆ ಟೈಂದಾಗ ನಮಗ ಪಂಚಾಯ್ತಿ ಸೆಕ್ರೆಟರಿ ಆಗಲಿ, ಪಿ.ಡಿ.ಓ.ಸಾಹೇಬ್ರು ಆಗಲಿ, ಪಂಚಾಯ್ತಿ ಮೆಂಬರಾಗಲಿ, ಅಧ್ಯಕ್ಷರಾಗಲಿ ಯಾರು ನನ್ಗ ಸಹಾಯ ಮಾಡಲಿಲ್ಲ. ಆದ್ರೆ ಕೂಲಿ ಕೆಲ್ಸಕ್ಕೆ ಬಂದಂತ ನಮ್ ಸಂಘದ ಹೆಣ್ಮಕ್ಕಳು, ನಮ್ ಕೇರಿ ಗಣಮಕ್ಕಳು ಎಲ್ಲಾರು ಸೇರಿ ಅಂಬ್ಯುಲೆನ್ಸಿಗೆ ಫೋನ್ ಮಾಡಿ ನನ್ನ ಸರಕಾರದ ದವಾಖಾನಿಗೆ ಅಡ್ಮಿಂಟ್ ಮಾಡಿದ್ರು, ದವಾಖಾನ್ಯಾಗ ಆಡ್ಮಿಂಟ್ ಮಾಡಿದ ಮ್ಯಾಲೆ ಮತ್ತೇ ಪಂಚಾಯ್ತಿ ಮೆಂಬರಾಗಲಿ, ಸೆಕ್ರೆಟರಿ ಆಗಲಿ, ಪಿ.ಡಿ.ಓ.ಆಗಲಿ, ಯಾರು ಬಂದು ನನ್ನ ಯಂಗಿದೆಮ್ಮ ಅಂತ ಮಾತಾಡ್ಸಾಕ ಬರಲಿಲ್ಲ. ಅದೇ ರೊಕ್ಕ ಇದ್ದವರು ಆಗಿದ್ರೆ ಪ್ರೈವೇಟ್ ದವಾಖಾನ್ಯಾಗ ಆಡ್ಮಿಂಟ್ ಆಗಿ ತೋರ್ಸಿಗೆಂತಿದ್ರು, ಆದ್ರೆ ನಾವು ಬಡವರು ಹಂಗಾಗಿ ಸರಕಾರದ ದವಾಖಾನ್ಯಾಗ ಅಡ್ಮಿಂಟ್ ಆಗಿದ್ದೆ. ಸರಕಾರದ ದವಾಖಾನ್ಯಾಗ ಡಾಕ್ಟರ್ ಟೈಮ್ ಸರ್ಗಿ ಬಂದು ನೋಡಂಗಿಲ್ಲ. ಆದ್ರೆ ಆ ದೇವರು ದೊಡ್ಡವನು ಯಂಗಾನ ಬದುಕಿ ಬಂದೆ. ಆವಾಗ ಡಾಕ್ಟರ್ 'ನೀನು ಬಾಣಿತ್ತನ ಆಗವರೆಗೆ ವಜಾನ ಕೆಲ್ಸ ಮಾಡಬಾರದು ಅಂತ ಹೇಳಿದ್ರು, ಬಡವರಾಗಿ ಹುಟ್ಟೀವಿ. ಕುಂತ್ರೆ ಯಂಗ ಜೀವ್ನ ನಡೀತಾದಂತ ಅಂಗೆ ಸಣ್ಣ-ಪುಟ್ಟ ಗೌಡ್ರ ಹೊಲದ ಕೂಲಿ ಕೆಲ್ಸಕ್ಕ ಹೋಗ್ತಿದ್ದೆ. ಆದ್ರೆ ಹೆರಿಗೆ ಆಗುವಾಗ ಯಾವ ಪ್ರಾಬ್ಲಮ್ ಆಗಲಿಲ್ಲ. ಕೆಲಸದ ಸ್ಥಳದಾಗ ನಮ್ಮಂತ ಬಸುರಿ ಹೆಣ್ಣು ಮಕ್ಕಳಿಗೆ ಸರಕಾರ ಬೇರೆ ಬೇರೆ ಸವಲತ್ತು ಕೊಡ್ತಾದಂತ ತಿಳಿದವರು ಹೇಳಿದ್ರು. ಆದ್ರೆ ನಮ್ಗ ಅವು ಯಾವ ಸವಲತ್ತು ಸಿಗ್ಲಿಲ್ಲ. ಸಾರ್ ನಾವೇನಾದ್ರೆ ಕೆಲಸ ಮಾಡ ಜಾಗದಾಗ ಸವಲತ್ತುಗಳ ಬಗ್ಗೆ ಕೇಳಿದ್ರೆ ಅವೆಲ್ಲ ನಿಮ್ಗ ಯಾಕ್ಬೇಕು ಅಂತೇಳಿ ಜಬರಸ್ತಾರ. ಏನಾದ್ರೆ ಜಾಸ್ತಿ ಮಾತಾಡಿದ್ರೆ ಕೆಲಸ ಮಾಡದಾದ್ರೆ ಮಾಡ್ರಿ ಇಲ್ಲದಿದ್ರೆ ಬಿಟ್ಟು ಹೋಗ್ರಿ, ನಿಮ್ಗ ಕೆಲಸ ಕೊಟ್ಟಿರೋದೆ ಹೆಚ್ಚಿದ್ದು ಅಂತದ್ರಾಗ ನಿಮ್ಗೆ ಯಾವ ಸವಲತ್ತು ಸೌಲಭ್ಯ ಕೊಡಾಕ ಆಗದಿಲ್ಲಂತ ಖಡಾಖಂಡಿತಾ ಹೇಳ್ತಾರ. ಗರ್ಭಿಣಿ ಇರೋ ನಮ್ಮಂತ ಬಡ ಹೆಣ್ಣು ಮಕ್ಕಳಿಗೆ ಹಿಂಗಾದ್ರೆ ಜೀವ್ನ ಸಾಗಸದಾದ್ರೆ ಹ್ಯಾಂಗ? ಹಂಗಾಗಿ ಈ ಕೆಲ್ಸನೇ ಬ್ಯಾಡ ಈ ಕೂಲಿನೇ ಬ್ಯಾಡ. ಎಲ್ಲಾದ್ರು ದೂರದ ಊರಿಗೆ ಹೋಗಿ ದುಡಕಂಡು ಬಂದು ಜೀವ್ನ ಸಾಗಿಸೋದು ಮೇಲು ಅಂತ ಅನ್ಸತೈತಿ" ಎಂದು ತನ್ನ ಅಸಹಾಯಕತೆಯನ್ನು ತೋಡಿಕೊಂಡಳು.

ಇನ್ನೊಂದು ಪ್ರಕರಣದಲ್ಲಿ ನರಸಮ್ಮ ಇವರ ಕುಟುಂಬವು ಉದ್ಯೋಗ ಖಾತರಿ ಯೋಜನೆಯಲ್ಲಿ ನೋಂದಾಯಿಸಲ್ಪಟ್ಟಿದ್ದು, ಜಾಬ್‌ಕಾರ್ಡ್‌ನ್ನು ಹೊಂದಿದ್ದಾರೆ. ಈ ಯೋಜನೆಯಲ್ಲಿ

ಕೂಲಿಕಾರ್ಮಿಕಳಾಗಿ ನರಸಮ್ಮನವರು ಕೆಲಸ ಮಾಡಿದ್ದಾರೆ. ಅವರು ಹೇಳುವ ಹಾಗೆ " ಮೊದ್ಲಿಗಿ ಈ ಪಂಚಾಯ್ತಿ ಕೂಲಿ ಕೆಲ್ಸ ಏನು ಆ ಟೈಮ್‌ದಾಗ ಬಂತಲ್ಲ ಆವಾಗ ತಿಳಿದವರು ಹೇಳಿದ್ರು, ಇನ್‌ಮ್ಯಾಲೆ ಯಾರು ದುಡಿಯಾಕ ಅಂತೇಳಿ ಬೆಂಗಳೂರು, ಪೂನ, ಗೋವಾ, ಮತ್ತ್ಯಾ ಮಹಾರಾಷ್ಟ್ರಕ್ಕ ಹೋಗಬಾರದಂತ ಸರಕಾರ ಕಾನೂನು ಮಾಡ್ಯಾದಂತ. ಅಂಗೆ ಅವರವರ ಊರಾಗ ದುಡಿಯಾಕ ಕೆಲ್ಸ ಕೊಡ್ಬೇಕು ಅಂತ ಸರಕಾರ ಕಾನೂನು ಮಾಡ್ಯಾದಂತ ಹೇಳಿದ್ರು, ಅಂಗೆ ಪಂಚಾಯ್ತಿ ಕೆಲ್ಸಕ್ಕೆ ಸಣ್ಣ ಸಣ್ಣ ಮಕ್ಳು ತಾಯಿಯವರು ದುಡಿಯಾಕ ಹೋದ್ರ ಅವರ ಮಕ್ಕಳನ್ನೆ ನೋಡಿಕೊಳ್ಳಂತ ವ್ಯವಸ್ಥೆ ಮಾಡ್ಬೇಕು ಅಂತ ಹೇಳಿದ್ರು, ಇದನ್ನ ಕೇಳಿ ನಮ್ಗ ಬಾಳಾ ಖುಷಿ ಆಗಿತ್ರಿ, ಯಾಕಂದ್ರ ನನ್ಗ ಸಣ್ಣ-ಸಣ್ಣ ಮಕ್ಕಳು ಐದಾವ. ನಮ್ ಮನೇಲಿ ಮಕ್ಕಳನ್ನ ನೋಡಿಕಳ್ಳಾಕ ಯಾರು ಇಲ್ಲ. ಹೊರಗಡೆ ಕೂಲಿ ಕೆಲಸಕ್ಕೆ ಹೋದ್ರೆ ಮಕ್ಕಳನ್ನ ಕರ್ಕಂಡು ಹೋಗಾಕ ಆಗಾದಿಲ್ಲ. ಪಂಚಾಯ್ತಿ ಕೂಲಿ ಕೆಲ್ಸದಾಗ ಮಕ್ಕಳನ್ನ ನೋಡಿಕೆಳ್ಳಂತ ವ್ಯವಸ್ಥೆ ಐತೆ ಅಂದ್ರೆ ಚಲೋ ಆಯಿತು ಅಂತೇಳಿ ವ್ಹಾದ್‌ವರ್ಷ ಉದ್ಯೋಗ ಖಾತ್ರಿ ಕೆಲ್ಸಕ್ಕೆ ಮಕ್ಳನ್ನ ಕರ್ಕಂಡು ಹೋಗಿದ್ದ್ಯಾ ಆದ್ರೆ ಯೋಜನೆದಾಗಿನ ದಗದ ಮಾಡೋ ಜಾಗದಾಗ ಯಾವೊಂದು ವ್ಯವಸ್ಥಾನೆ ಮಾಡ್ಲಿಲ್ಲ. ಕುಡಿಯೋ ನೀರಿನ ವ್ಯವಸ್ಥೆ ಆಗಲಿ, ನೆಳ್ಳಿನ ವ್ಯವಸ್ಥೆ ಆಗಲಿ, ಮಕ್ಕಳನ್ನ ನೋಡಿಕೊಳ್ಳ ವ್ಯವಸ್ಥೆ ಆಗಲಿ, ಮತ್ತೆ ಕೆಲಸ ಮಾಡಂತ ಟೈಮ್‌ದಾಗ ಏನಾದ್ರೆ ಆದ್ರೆ ಡಾಕ್ಟ್ರು ಬಂದು ನೋಡ್ತಾರ ಅಂತ ಹೇಳಿದ್ರು, ಅಲ್ಲಿ ನೋಡಿದ್ರೆ ಏನು ಇರ್ಲಿಲ್ಲ. ಮನೇಲಿ ಯಾರು ನೋಡಿಕೆಳ್ಳಾಕ ಇಲ್ಲಂತೇಳಿ ದಗದ ನಡ್ಯಂತ ಜಾಗಕ್ಕ ಕರ್ಕೊಂಡು ಹೋದ್ರೆ ಅಲ್ಲಿ ನಮ್ಮನ್ನ ಯಾರು ಮೂಸಿ ನೋಡಾಂಗಿಲ್ಲ. ಮತ್ತೆ ನಮ್ಗೆ ಬೈದ್ರು, ಸಣ್ಣ-ಸಣ್ಣ ಮಕ್ಕಳನ್ನ ನೋಡಿಕೆಳ್ಳಾಕ ಇದೇನು ಅಂಗನವಾಡಿ ಅಂತ ತಿಳಿದಿರೇನು? ಸರಕಾರ ಏನೇನೋ ಮಾಡ್ತಾದಂತ ಅದನ್ನೆಲ್ಲ ಮಾಡಿಕೆಂಡು ಕುಂದ್ರಾಕ ಆಗಂಗಿಲ್ಲ. ದಗದಕ್ಕೆ ಬರಾದಾದ್ರೆ ಬರ್ರಿ ನಾವು ಬ್ಯಾಡ ಅನ್ನಂಗಿಲ್ಲ. ಆದ್ರೆ ಮಕ್ಕಳನ್ನ ಮರಿಗಳ್ನ ಕರ್ಕಂಡು ಬರಾದಾದ್ರೆ ನೀವು ಬರಬ್ಯಾಡ್ರಿ ಅಂತ ಬೈತಾರ. ಅಂಗೆ ಕೆಲ್ಸ ಮಾಡುವಾಗ ಏನಾದ್ರೆ ಸಣ್ಣಪುಟ್ಟ ಗಾಯಗಳಾದ್ರೆ ನಮ್ಮನ್ನ ಯಾರು ಕೇಳಾದಿಲ್ಲ. ನಾವು ದುಡದಂತ ಕೂಲಿಯಲ್ಲೇ ತೋರಿಸಿಗೆಂಡೀವಿ" ಎಂದು ಹೇಳಿದರು.

ನರೇಗ ಯೋಜನೆಯಲ್ಲಿ ಮಹಿಳೆ ಹೇಗೆ ಲಿಂಗದ ನೆಲೆಯಲ್ಲಿ ಅವಗಣನೆಗೆ ಒಳಗಾಗಿದ್ದಾಳೆ ಎನ್ನುವುದು ನರಸಮ್ಮನ ಮೇಲಿನ ಮಾತುಗಳಿಂದ ಅರಿವಾಗುತ್ತದೆ. ಇಲ್ಲಿ ಮಕ್ಕಳನ್ನು ಒಳಗೊಂಡ ಮಹಿಳೆಯರನ್ನು ಕೂಲಿಯಿಂದ ಹೊರಗಿಡುವ ಅಥವಾ ನೀವು ಕೆಲಸ ಮಾಡಲು ಅರ್ಹರಲ್ಲ ಎನ್ನುವ ಪುರುಷರ ದಬ್ಬಾಳಿಕೆಯ ರೂಪಗಳು ಇಲ್ಲಿ ಕಾಣಸಿಗುತ್ತವೆ. ಅದರಲ್ಲೂ ದಲಿತ ಮಹಿಳೆಯರ ಮಕ್ಕಳನ್ನು ನೋಡಿಕೊಳ್ಳುವ ವ್ಯವಸ್ಥೆಯಂತೂ ಕನಸಿನ ಮಾತೆ ಸರಿ. ಇದು ಜಾತಿ ವ್ಯವಸ್ಥೆಯ ಮೇಲು ಕೀಳಿನ ಮಧ್ಯೆಯೂ ಮಹಿಳೆಯು ಭಿನ್ನವಾದ ಸಮಸ್ಯೆಗಳನ್ನು ಎದುರಿಸುತ್ತಾಳೆ ಮನಗಾಣಿಸುತ್ತದೆ.

ಇನ್ನು ಕೆಲಸಗಳನ್ನು ಅನುಷ್ಠಾನಕ್ಕೆ ತರುವ ಸಂದರ್ಭದಲ್ಲಿಯೂ ಋತುಮಾನಗಳಿಗನುಗುಣವಾಗಿ ಜಾರಿಗೆ ತರಲಾಗುತ್ತಿದೆ. ಈ ಸಂದರ್ಭದಲ್ಲಿ ಸ್ಥಳೀಯ ಗ್ರಾಮ ಪಂಚಾಯತಿಯ ಸದಸ್ಯರು ಮತ್ತು ಅಧಿಕಾರಿ ವರ್ಗದವರು ತುಂಬಾ ನಾಜೂಕಾಗಿ ಪರಿಸ್ಥಿತಿಯನ್ನು ನಿಭಾಯಿಸುತ್ತಾರೆ. ಅಂದರೆ ಸ್ಥಳೀಯ ಪಿತೃಪ್ರಧಾನ ವ್ಯವಸ್ಥೆ ತನ್ನ ಸ್ವಾರ್ಥಕ್ಕಾಗಿ ಈ ಯೋಜನೆಯನ್ನು ಬಳಸಿಕೊಳ್ಳುತ್ತಿದೆ. ಮುಖ್ಯವಾಗಿ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಬೇಸಿಗೆ ತುಂಬಾ ಇರುತ್ತದೆ ಮತ್ತು ಬೇಸಿಗೆ ಕಾಲದಲ್ಲಿಯಂತೂ ಇಲ್ಲಿನ ಜನರ ಪರಿಸ್ಥಿತಿ ಇಂತಹ ಕಾಲದಲ್ಲಿ ಗ್ರಾಮೀಣ ಭಾಗದ ಜನರಿಗೆ ಯಾವುದೇ ಕೆಲಸಗಳನ್ನು ಕೊಡಲು ಗ್ರಾಮ ಪಂಚಾಯತಿಗಳು ಮುಂದಾಗುವುದಿಲ್ಲ. ಹಾಗಾಗಿ ಇಲ್ಲಿನ ಜನರು ಕೆಲಸವನ್ನರಸಿ ಬೇರೆ ಬೇರೆ ಊರುಗಳಿಗೆ ವಲಸೆ ಹೋಗುತ್ತಾರೆ. ಆದರೆ ಮಳೆಗಾಲದ ಸಂದರ್ಭದಲ್ಲಿ ತಮ್ಮ ತಮ್ಮ ಊರುಗಳಲ್ಲಿಯೇ ಸಾಕಷ್ಟು ಕೆಲಸಗಳು ಇರುತ್ತವೆ. ಗ್ರಾಮದ ಜನರು ಊರಿನ ಹೊಲ ಗದ್ದೆಗಳಲ್ಲಿನ ಕೆಲಸಗಳಲ್ಲಿ ತಮ್ಮನ್ನು ತಾವು ಸಂಪೂರ್ಣವಾಗಿ ತೊಡಗಿಸಿಕೊಂಡಿರುತ್ತಾರೆ. ಇಂತಹ ಸಮಯದಲ್ಲಿ ಉದ್ಯೋಗ ಖಾತರಿ ಯೋಜನೆಯನ್ನು ಜಾರಿಗೆ ತರಲು ಮುಂದಾಗುತ್ತಾರೆ. ಇವರಿಗೆ ತಮ್ಮ ಗ್ರಾಮದ ನೈಜ ಸ್ಥಿತಿ ಗೊತ್ತಿರುತ್ತದೆ. ಹಾಗಾಗಿ ಗ್ರಾಮಗಳಲ್ಲಿನ ಕೆಲಸಗಳ ಸೀಜನ್ ಇದ್ದಾಗಲೇ ಉದ್ಯೋಗ ಖಾತರಿ ಯೋಜನೆಯನ್ನು ಜಾರಿಗೆ ತರುತ್ತದೆ. ಆದರೆ ಜನರು ಬೇರೆ ಬೇರೆ ಕೆಲಸಗಳಲ್ಲಿ ನಿರತರಾಗಿರುತ್ತಾರಾದ್ದರಿಂದ ಉದ್ಯೋಗ ಖಾತರಿ ಯೋಜನೆಗೆ ತೆರಳುವುದಿಲ್ಲ. ಇದೇ ಸಮಯಕ್ಕಾಗಿ ಕಾದು ಕುಳಿತಂತಹ ಗ್ರಾಮ ಪಂಚಾಯತಿಯ ಸದಸ್ಯರು ಮತ್ತು ಅಧಿಕಾರಿ ವರ್ಗದವರು ಯಂತ್ರಗಳನ್ನು ಬಳಸುವುದರ ಮೂಲಕ ತ್ವರಿತ ಗತಿಯಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸುತ್ತಾರೆ. ಇದಕ್ಕೆ ಸಾಕ್ಷಿಯೆಂಬಂತೆ ಹಲವು ಪ್ರಕರಣಗಳು ದೊರೆತಿವೆ. ರಾಯಚೂರು ತಾಲೂಕಿನ ಪುಚ್ಚಲದಿನ್ನಿಯ ಇಂಜಮ್ಮ ಹೀಗೆ ಹೇಳುತ್ತಾರೆ:

"ಹೊಲ ಕೆಲಸದ ಸೀಜನ್ ಇರೋವಾಗ ಊರಾಗ ಕೂಲಿ ಸಿಗ್ತಿತ್ತು, ಹೆಂಗೋ ಜೀವ್ನ ಮಾಡಿದ್ವಿ. ಈಗ ಬ್ಯಾಸಿಗಿ ಈ ಟೈಂದಾಗ ನಮ್ಗ ಊರಾಗ ದುಡಿಯಾಕ ಕೂಲಿ ಇರಾಂಗಿಲ್ಲ. ಆದ್ರೆ ಮೆಂಬರ್‌ಗಳು ಏನು ಮಾಡ್ತಾರಂದ್ರೆ ಸೀಜನ್ ಇದ್ದಂತ ಟೈಮ್‌ದಾಗ ಕೂಲಿಗೆ ಕರೀತಾರ. ಅಂತ ಟೈಂದಾಗ ಜನ ಯಾರು ಪಂಚಾಯ್ತಿ ಕೂಲಿ ಕೆಲ್ಸಕ್ಕ ಹೋಗಾದಿಲ್ಲ. ಯಾಕಂದ್ರೆ ಜನ್ರಿಗೆ ತಮ್ಮ ತಮ್ಮ ಹೊಲದಾಗಿನ ಕೆಲ್ಸ ಇರ್ತಾವ. ಮತ್ತ್ಯಾ ಸೀಜನ್‌ದಾಗ ದೊಡ್ಡ ದೊಡ್ಡ ರೈತರು ಹೊಲದಾಗಿನ ಕೆಲ್ಸ ಗುತ್ತಿಗೆ ತಗಂಡು ಮಾಡ್ತಾರ. ಅಂದ್ರೆ ಮೈಮ್ಯಾಲೆ ತಗಂಡು ದಗದ ಮಾಡ್ತಾರ. ಹಂಗಾಗಿ ಸೀಜನ್‌ನ್ಯಾಗ ಜನ ಏನಿಲ್ಲಂದ್ರೆ ಕನಿಷ್ಟ ಎರುಡ್ನೂರಿಂದ ಮುನ್ನೂರು ದುಡೀತಾರ. ಇಂತ ಟೈಂದಾಗ ಪಂಚಾಯ್ತಿ ಕೆಲ್ಸಕ್ಕ ಬರ್ರೀ ಅಂದ್ರೆ ಜನ ಹೆಂಗ ಬರ್ತಾರ. ಅವಾಗ ಪಂಚಾಯ್ತಿಯವರು ಏನು ಮಾಡ್ತಾರಂದ್ರೆ ಜೆಸಿಬಿ ಇಟ್ಟು ಕೆಲ್ಸ ಮಾಡ್ಸತಾರ. ಯಾಕ ಜೆಸಿಬಿ ಇಟ್ಟು ಕೆಲ್ಸ ಮಾಡ್ತೀರಿ ಅಂತ ಕೇಳಿದ್ರೆ, ಜನ

ಯಾರು ಕೂಲಿ ಕೆಲ್ಸಕ್ಕ ಬರಾಂಗಿಲ್ಲ. ಹಂಗಾಗಿ ಜೆಸಿಬಿಯಿಂದ ಮಾಡಕತ್ತೀವಿ ಅಂತ ಹೇಳ್ತಾರ. ನೋಡ್ರಿ ಇವಾಗ ಬ್ಯಾಸಿಗಿ ಐತಿ. ಈ ಟೈಂದಾಗ ಜನಕ್ಕ ದುಡಿಯಾಕ ಕೂಲಿ ಇರಾಂಗಿಲ್ಲ. ಇಂತ ಟೈಂದಾಗ ಕೂಲಿ ಕೆಲ್ಸ ಕೊಟ್ರೆ ಬಾಳಾ ಚಲೋ ಇರ್ತಾದ. ಆದ್ರೆ ಪಂಚಾಯ್ತಿಯವರು ರೊಕ್ಕ ಇಲ್ಲ ಪಂಚಾಯ್ತಿಯಾಗ ಹಂಗಾಗಿ ಕೆಲ್ಸ ಮಾಡ್ಸಾಕ ಆಗಾದಿಲ್ಲ ಅಂತ ಹೇಳ್ತಾರ. ಹಿಂಗಾದ್ರೆ ನಮ್ಮಂತ ಬಡಜನ ಬದುಕಾದಾದ್ರೆ ಹೆಂಗಾ? ನಾವು ತುಂಬಾ ಬಡವರು ಐದೀವಿ. ನನಗ ಐದು ಮಕ್ಕಳು ಐದಾವ. ಅವು ಸಾಲಿಗೆ ಹೋಗ್ತಾವ. ಬ್ಯಾಸಿಗಿ ಟೈಂದಾಗ ಕೂಲಿ ಇಲ್ಲಂದ್ರೆ ಮಕ್ಕಳನ್ನ ಸಲುವಾದು ಹೆಂಗಂತ ಚಿಂತೆ ಆಗ್ಯಾದ. ನನ್ ಗಂಡ ಇಲ್ಲಿ ದುಡಿಯಾಕ ಕೆಲ್ಸ ಇಲ್ಲದ ಸಲುವಾಗಿ ಬೆಂಗಳೂರಿಗೆ ದುಡಿಯಾಕ ಹೋಗ್ಯಾನ. ಒಬ್ರು ಬೆಂಗಳೂರಿಗೆ ಹೋಗಿ ದುಡಿದ್ರೆ ಜೀವ್ನ ನಡೀತಾದೇನು? ಆತ ಆರಾಮಾಗಿ ಬೆಂಗಳೂರಾಗ ಐದಾನ. ಆದ್ರೆ ನನ ಪರಿಸ್ಥಿತಿ ಏನಾಗಬೇಕು. ಐದು ಮಕ್ಕಳನ್ನ ಕಟ್ಟಿಗೆಂಡು ನಾನ್ಯಾಂಗ ಜೀವ್ನ ಮಾಡ್ಬೇಕು. ಸುಮ್ನೆ ಕುಂತ್ರೆ ಜೀವ್ನ ನಡಿಯಾದಿಲ್ಲಂತ ಈ ಬ್ಯಾಸಿಗಿ ಟೈಂದಾಗ ದೂರದ ನೀರಾವರಿ ಇದ್ದಂತ ಊರಿಗೆ ದಗದಕ್ಕ ಆಟೋದಾಗ ಹೋಗ್ತೀನಿ. ಅಲ್ಲಿ ಅವರು ಎಷ್ಟು ಕೂಲಿ ಕೊಟ್ರು ತಗಂಡು ಬರ್ತಿವಿ. ಯಾಕಂದ್ರ ನಿರ್ವಿಲ್ಲ. ಕೂಲಿ ಜಾಸ್ತಿ ಕೊಡ್ರಿ ಅಂದ್ರೆ ನಾಳೆಯಿಂದ ಕೂಲಿಗೆ ಬರಬ್ಯಾಡ್ರಿ ಅಂತ ಗದರಸ್ತಾರ" ಎಂದು ಹೇಳಿದಳು.

ಇಲ್ಲಿನ ಇಂಜಮ್ಮನ ಮಾತುಗಳು ಹಲವು ಸಂಗತಿಗಳನ್ನು ಹೊರ ಹಾಕುತ್ತವೆ. ಮುಖ್ಯವಾಗಿ ಬೇಸಿಗೆ ಮತ್ತು ಮಳೆಗಾಲದ ಕಾಲಮಾನವನ್ನು ಹೇಗೆ ನರೇಗಾ ಯೋಜನೆಯನ್ನು ದುರುಪಯೋಗ ಪಡಿಸಿಕೊಳ್ಳಲು ಬಳಸಿಕೊಳ್ಳುತ್ತಾರೆ ಎನ್ನುವುದು ಕಾಣುತ್ತದೆ. ಹೈದ್ರಾಬಾದ್ ಕರ್ನಾಟಕದ ವಲಸೆಯು ಮುಖ್ಯವಾಗಿ ಮಹಿಳೆಯರನ್ನು ಹೇಗೆ ಸಂಕಷ್ಟಕ್ಕೆ ಸಿಲುಕಿಸುತ್ತದೆ ಎನ್ನುವುದನ್ನು ಇಂಜಮ್ಮ ನೋವಿನಿಂದ ಹೇಳುತ್ತಾರೆ. ಸಾಮಾನ್ಯವಾಗಿ ಗಂಡಸರು ಹೆಂಡತಿ ಮಕ್ಕಳನ್ನು ಬಿಟ್ಟು ವಲಸೆ ಹೋಗುತ್ತಾರೆ. ಆಗ ಮಕ್ಕಳನ್ನು ನೋಡಿಕೊಳ್ಳುವ ಮತ್ತು ಸಲಹುವ ಹೊರೆ ಮಹಿಳೆಯರ ಮೇಲೆ ಬೀಳುತ್ತದೆ. ಇಂತಹ ಸಂದರ್ಭದಲ್ಲಿ ಉದ್ಯೋಗ ಖಾತರಿ ಯೋಜನೆಯಲ್ಲಿ ಕೆಲಸ ದೊರೆತರೆ ಕುಟುಂಬದ ಯಾವೊಬ್ಬ ಸದಸ್ಯರೂ ವಲಸೆ ಹೋಗಲು ಇಚ್ಛಿಸುವುದಿಲ್ಲ. ಒಂದು ವೇಳೆ ಪುರುಷರೇನಾದರೂ ಕೆಲಸವನ್ನರಸಿ ವಲಸೆ ಹೋದರೆ ಗ್ರಾಮದಲ್ಲಿಯೇ ಉಳಿಯುವಂತಹ ಇಂಜಮ್ಮನಂತವರಿಗೆ ಕೆಲಸ ದೊರೆತರೆ ನಿಜಕ್ಕೂ ಒಳ್ಳೆಯ ಸಹಾಯವಾಗುತ್ತದೆ. ಆದರೆ ಇಂತಹ ಸೂಕ್ಷ್ಮತೆಯು ಈ ಯೋಜನೆಯ ಅನುಷ್ಠಾನದಲ್ಲಿ ಇರುವುದಿಲ್ಲ ಎನ್ನುವುದು ಇಂಜಮ್ಮನ ಮಾತಲ್ಲಿ ಕಾಣುತ್ತದೆ. ಜೊತೆಗೆ ಈ ಹಿಂದೆಯೇ ಹೇಳಿದಂತೆ ಗ್ರಾಮ ಪಂಚಾಯತಿಗಳಲ್ಲಿ ಅವ್ಯವಹಾರದ ಪ್ರಮಾಣ ಹೆಚ್ಚಾಗಿರುವುದನ್ನು ಕಾಣಲಾಗುತ್ತದೆ. ಈ ಅವ್ಯವಹಾರಗಳಿಗೆ ಕಾಲಮಾನಗಳನ್ನೂ ಸಹ ಬಳಸಿಕೊಳ್ಳುವಲ್ಲಿ ಪಿತೃಪ್ರಧಾನ ವ್ಯವಸ್ಥೆ ಹಿಂದೆ ಬಿದ್ದಿಲ್ಲ.

ಗ್ರಾಮೀಣ ಪ್ರದೇಶಗಳಲ್ಲಿ ಈ ಯೋಜನೆಯ ಕುರಿತಂತೆ ಇರುವಂತಹ ವಿಧವೆಯರ ಅನುಭವಗಳು ಬೇರೆಯೇ ಆಗಿರುತ್ತವೆ. ಇಲ್ಲಿ ಕೇವಲ ಮಹಿಳೆ ಎಂದು ನಿರ್ಲಕ್ಷಿಸುವ ಕ್ರಮಕ್ಕಿಂತ ಗಂಡನಿಲ್ಲದ ವಿಧವೆ ಮಹಿಳೆಯರನ್ನು ಇನ್ನೂ ನಿಕೃಷ್ಟವಾಗಿ ನೋಡುವ ಕ್ರಮವೂ ಇದೆ. ಇಲ್ಲಿ ಉದ್ಯೋಗ ಕೇಳಲು ಹೋದ ವಿಧವೆ ಹೆಣ್ಣುಮಕ್ಕಳಿಗೆ ಕೂಲಿ ಕೊಡುವ ಅಥವಾ ದುಡಿದ ಕೆಲಸಕ್ಕೆ ಕೂಲಿ ಹಣವನ್ನು ಕೊಡದಿರುವ ಪ್ರಕರಣಗಳೂ ಇವೆ. ಹಾಗೆಯೇ ಬೇಸಿಗೆಯಲ್ಲಿ ಕೆಲಸವಿಲ್ಲದಿದ್ದಾಗ ಅವರು ಅನುಭವಿಸುವ ನೋವುಗಳಿಗೆ ಈ ಉದ್ಯೋಗ ಖಾತರಿ ಯೋಜನೆಯು ಸ್ವಲ್ಪ ಮಟ್ಟಿಗಿನ ಪರಿಹಾರವನ್ನು ಒದಗಿಸಿಕೊಡಬಹುದಾಗಿತ್ತು. ಆದರೆ ಬೇಸಿಗೆ ಕಾಲದಲ್ಲಿ ಇವರು ಅನುಭವಿಸುವ ಕಷ್ಟಗಳನ್ನು ಅವರ ಮಾತಿನಲ್ಲಿಯೇ ಆಲಿಸಬೇಕಾಗುತ್ತದೆ. ಕೊಪ್ಪಳ ಜಿಲ್ಲೆ ಯಲಬುರ್ಗ ತಾಲೂಕು ಬಂಡಿ ಗ್ರಾಮ ಪಂಚಾಯ್ತಿಯ ತುಮ್ಮರಗುದ್ದಿ ಗ್ರಾಮದ ಕುರುಬ ಸಮುದಾಯದ ಬಸಮ್ಮ ಹೇಳುವ ಅನುಭವ ಇದರ ಸೂಕ್ಷ್ಮತೆಯನ್ನು ಬಿಚ್ಚಿಡುತ್ತದೆ.

"ಸಾರ್ ನಮ್ ಊರಾಗ ಈ ಬ್ಯಾಸಿಗಿ ಟೈಮ್‌ದಾಗ ಕೂಲಿನೇ ಇರಾದಿಲ್ಲ. ಯಾಕಂದ್ರೆ ಇಲ್ಲಿ ನೀರಾವರಿ ಇಲ್ಲ. ಈ ಉದ್ಯೋಗ ಖಾತ್ರಿ ಯೋಜನದಾಗ ಕೆಲಸ ಕೊಡ್ತಾರೇನೋ ಅಂತ ನೋಡಿದ್ರ ಅದೂ ಕೊಡಂಗಿಲ್ಲ. ಕೆಲ್ಸ ಕೊಡ್ರಿ ಅಂತ ಪಂಚಾತಿಗೆ ಹೋಗಿ ಏನಾದ್ರ ಕೇಳಿದ್ರ ಯಾವಾಗ ಬೇಕಂದ್ರ ಆವಾಗ ಕೆಲ್ಸ ಕೊಡಾಕಾಗಲ್ಲ. ಅದಕ್ಕ ನಿಯಮಗಳಿದಾವು. ಅಂತ ಹೇಳ್ತಾರ. ಹಂಗಾಗಿ ನಮ್ ಊರಾಗ ದುಡ್ಕಂಡು ತಿನ್ನಾ ಜನಯೆಲ್ಲ ಈ ಬ್ಯಾಸಿಗ್ಯಾಗ ದುಡಿಯಾಕ ಬೆಂಗಳೂರು, ಪೂನಾ ಮತ್ತೆ ಗೋವಾ ಅಂತೇಳಿ ಹೋಗ್ತಾರ. ಆದ್ರೆ ನಮ್ಮಂತ ಒಂಟಿ ಹೆಣ್ಣು ಮಕ್ಕಳು ದೂರದ ಊರಿಗೆ ದುಡಿಯಾಕ ಹೋಗಾಕ ಆಗ್ತಾದೇನು? ಇದ್ದ ಊರಾಗ ನಮ್ಗ ನೆಮ್ಮದಿಯಿಂದ ಬದುಕಾಕ ಜನ ಬುಡವಲ್ರು, ರಾತ್ರಿ ಟೈಮ್‌ನ್ಯಾಗ ಯಾರ್‍ಯಾರೋ ಕುಡ್ದು ಬಂದು ಕದ ತಟ್ಟತಾರ. ಈ ಸುದ್ದಿ ಏನಾದ್ರೆ ಊರಾಗ ಜನಕ್ಕ ಹೇಳಿದ್ರೆ ಮತ್ತೆ ನಮ್ ಮ್ಯಾಲೆ ಹಲವಾರು ಕಥೆ ಕಟ್ತಾರ. ಹಂಗಾಗಿ ರಾತ್ರಿ ಆಯಿತಂದ್ರೆ ಜೀವದಾಗ ಜೀವ ಇರಾದಿಲ್ಲ. ಒಂಟಿ ಹೆಣ್ಮಕ್ಳಂದ್ರೆ ಏನು ಮಾಡಿದ್ರು ಮಾಫಿ ಅಂತ ತಿಳಿದಾರ. ಮತ್ತೆ ಒಂಟಿ ಹೆಣ್ಮಕ್ಕಳು ಅಂದ್ರೆ ಅಷ್ಟೊಂದು ತಾಚಾರ ಅಂತ ತಿಳಕಂಡಾರ. ನಮ್ಗ ಇದ್ದಂತ ಊರಾಗಾದ್ರೆ ಏನಾದ್ರ ಹೆಚ್ಚು-ಕಮ್ಮಿ ಆದ್ರೆ ಯಾರನ್ನಾಗಲಿ ಸಹಾಯಕ್ಕೆ ಬರ್ತಾರ. ನಮ್ಮಂತ ಒಂಟಿ ಹೆಣ್ಣು ಮಕ್ಕಳು ದೂರದ ಊರಿಗೆ ದುಡಿಯಾಕ ಹೋದ್ರೆ ನಮ್ಮಂತವರ್ನ ಈ ಸಮಾಜದಾಗ ಬದಕಲಿಕ್ಕೆ ಬಿಡ್ತಾರೇನು? ಪರಸ್ಥಳದಾಗ ಯಾರು ಯಂಗೀರ್ತಾರೋ ಯಾರಿಗೊತ್ತು. ನಮ್ಮಂತವರ್ನ ಕೆಟ್ಟ ದೃಷ್ಟಿಯಿಂದ ನೋಡಂತವರೇ ಬಾಳಾ ಜನ ಇರ್ತಾರ. ಪಂಚಾತಿಯಾಗ ಕೆಲ್ಸ ಕೊಟ್ರ ಹಿಂಗ ಹೆದರಿಕೆಂಡು ಜೀವ್ನ ನಡಿಸೋದು ತಪ್ತದ. ಹಂಗ ಬಾಳಷ್ಟು ಮಂದಿ ಬ್ಯಾರೆ ಊರಿಗಿ ಹೋಗಾದೂ ತಪ್ತದ. ಆದ್ರ ಊರಾಗ ಹೊಲದ ಕೆಲ್ಸ ಜೋರಾಗಿದ್ದಾಗ ಪಂಚಾತಿ

ಕೆಲಸ್ಕ ಬರ್ರಿ ಅಂತ ಕರಿತಾರ. ಅಂತ ಟೈಮದಾಗ ಯಾರ್ ಹೋಗ್ತಾರ. ಕೆಲ್ಸ ಇಲ್ದಿದ್ದಾಗ ಅಂದ್ರ ಬ್ಯಾಸಿಗ್ಯಾಗ ಕೆಲ್ಸ ಕೊಡ್ರಿ ಅಂದ್ರ ಕೊಡಂಗಿಲ್ಲ. ಇದು ಯಾವ ನ್ಯಾಯ ಹೇಳ್ರಿ, ನಮ್ಮಂತ ಹೆಣ್ಮಕ್ಕಳು ಎಲ್ಲಿಗೆ ಹೋಗ್ಬೇಕು, ಜೀವ್ನ ಹೆಂಗ್ ಸಾಗಿಸಬೇಕು?" ಎಂದು ಹೇಳಿದಳು. ಹೀಗೆ ಬಸಮ್ಮ ಗಂಡನನ್ನು ಕಳೆದುಕೊಂಡ ವಿಧವೆಯಾಗಿದ್ದಾಳೆ. ಇವರು ಕೆಲಸವನ್ನರಸಿ ದೂರದ ಬೆಂಗಳೂರು, ಪೂನಾ ಎಂದು ವಲಸೆ ಹೋಗಲು ಸಾಧ್ಯವಾಗುತ್ತಿಲ್ಲ. ಇದಕ್ಕೆ ಕಾರಣವನ್ನೂ ಸಹ ಅವರೇ ಕೊಡುತ್ತಿದ್ದಾರೆ. ಸಮಾಜದಲ್ಲಿನ ಪುರುಷಶಾಹಿ ವ್ಯವಸ್ಥೆಯ ಕಾರಣವಾಗಿ ಅವರು ತಮ್ಮ ಬದುಕನ್ನು ಸ್ವತಂತ್ರವಾಗಿ ನಡೆಸಲಾಗುತ್ತಿಲ್ಲ. ಕೆಟ್ಟ ಪುರುಷರಿಂದ ತುಂಬಾ ಭಯಭೀತರಾಗಿದ್ದಾರೆ. ಅಂತವರೇನಾದರೂ ತನ್ನ ಜೀವಕ್ಕೆ ಅಪಾಯ ಒಡ್ಡಿದರೆ ಎಂಬ ಭಯ ಅವರನ್ನು ಕಾಡತೊಡಗಿದೆ. ಒಂಟಿ ಮಹಿಳೆಯರು ಎಲ್ಲಿಯೂ ಸುರಕ್ಷಿತರಲ್ಲ ಎಂಬುದನ್ನು ಅವರು ಹೇಳುತ್ತಾರೆ. ಹಾಗಾಗಿ ಉದ್ಯೋಗ ಖಾತರಿ ಯೋಜನೆಯು ಬೇಸಿಗೆ ಕಾಲದಲ್ಲಿಯೂ ಸರಿಯಾಗಿ ಜಾರಿಯಾದರೆ ಬಸಮ್ಮನಂತವರಿಗೆ ಜೀವನ ನಡೆಸಲು ತುಂಬಾ ಸಹಕಾರಿಯಾಗುತ್ತದೆ. ಆದರೆ ಸ್ಥಳೀಯ ಪಿತೃಪ್ರಧಾನ ವ್ಯವಸ್ಥೆಯ ಕಾರಣವಾಗಿ ಇವರು ಜೀವನ ನಡೆಸುವುದೇ ತುಂಬಾ ಕಷ್ಟಕರವಾಗಿದೆ.

ಗ್ರಾಮೀಣ ಭಾಗಗಳಲ್ಲಿ ಜಾತಿಯ ಸಂಕೋಲೆಗಳಿಗೆ ಸಿಲುಕಿ ಹಲವಾರು ಕೆಳ ಸಮುದಾಯಗಳು ಇಂದಿಗೂ ಅಸ್ಪೃಶ್ಯ ನೆಲೆಯಿಂದಲೇ ಗುರುತಿಸಿಕೊಳ್ಳುತ್ತಿವೆ. ವ್ಯವಸ್ಥೆಯೂ ಸಹ ಈಗಾಗಲೇ ಗುರುತಿಸಿಕೊಂಡು, ಪಾಲಿಸಿಕೊಂಡು ಬಂದಿರುವಂತಹ ಜಾತಿ ಶ್ರೇಣೀಕರಣವನ್ನು ಜೀವಂತವಾಗಿ ಇರುವಂತೆ ಮಾಡಲು ಹಲವಾರು ಬಗೆಯಲ್ಲಿ ಪ್ರಯತ್ನಿಸುತ್ತಿರುತ್ತದೆ. ಈ ಪ್ರಕಾರದ ವ್ಯವಸ್ಥೆ ಎಲ್ಲಾ ಸಂದರ್ಭಗಳಲ್ಲೂ ಗೋಚರಿಸುತ್ತಿರುತ್ತದೆ. ಹಾಗೆಯೇ ಉದ್ಯೋಗ ಖಾತರಿ ಯೋಜನೆಯ ಕಾಮಗಾರಿಗಳಲ್ಲೂ ಸಹ ಇದರ ಪ್ರಭಾವ ಹೆಚ್ಚಾಗಿರುವುದನ್ನು ಕಾಣಲಾಗಿದೆ. ಸಮಾಜದ ಕೆಳ ಹಂತದ ಜಾತಿಗಳನ್ನು ಇಂದಿಗೂ ಅಸ್ಪೃಶ್ಯರಂತೆಯೇ ಕಾಣಲಾಗುತ್ತಿದೆ. ಸಮಾಜದ ಇತರ ಜಾತಿಯ ಜನರೊಂದಿಗೆ ಬೆರೆಯಲು ಬಿಡುವುದಿಲ್ಲ. ರಾಯಚೂರು ಜಿಲ್ಲೆಯ ಗೌಡೂರು ಗ್ರಾಮದ ಶರಣಮ್ಮ ಜಾತಿಯಿಂದ ತಳ ಸಮುದಾಯದವರು. ಇವರು ಉದ್ಯೋಗ ಖಾತರಿ ಯೋಜನೆಯ ಕಾಮಗಾರಿ ಸ್ಥಳಗಳಲ್ಲಿ ನಡೆಯುವಂತಹ ಜಾತಿಯ ಅಸ್ಪೃಶ್ಯತೆಯನ್ನು ಕುರಿತು ಹೇಳುವ ಹಾಗೆ "ಉದ್ಯೋಗ ಖಾತರಿ ಯೋಜನೆದಾಗ, ಕೆಲ್ಸ ಮಾಡಂತ ಜಾಗದಾಗ ನೀರಿನ ವ್ಯವಸ್ಥೆ ಏನು ಮಾಡ್ಬೇಕಂತ ಐತಲ್ಲ. ಅಲ್ಲಿ ಸತೆ ನಮ್ಗ ಕುಡ್ಯಾನೀರಿನ ಡ್ರಮ್ ಬ್ಯಾರೆ ಇಟ್ಟಿರ್ತಾರ. ಬ್ಯಾರೆ ಮಂದಿಗೆ ಬ್ಯಾರೆ ನೀರಿನ ವ್ಯವಸ್ಥ ಮಾಡಿರತಾರ. ನಾವೇನಾರ ಅವರತಾಗಿನ ನೀರ ಕೇಳಿದ್ರ, ನಿಮ್ಗ ಬ್ಯಾರೆ ನೀರು ಐತಿ ಅದನ್ನಾ ಕುಡಿರಿ ಅಂತ ನಮ್ಮನ್ನ ಬೈದುಬುಡ್ತಾರ" ಎಂದು ನೋವಿನಿಂದ ಹೇಳಿಕೊಳ್ಳುತ್ತಾರೆ. ಹೀಗೆ ಮಾಡುವುದು ತಪ್ಪು. ಕಾಯಿದೆ ಇದನ್ನು ವಿರೋಧಿಸುತ್ತದೆ. ಕೆಲಸದ ಸ್ಥಳದಲ್ಲಾಗಲೀ ಅಥವಾ ಇನ್ನಾವುದೇ

ಸ್ಥಳಗಳಲ್ಲಾಗಲೀ ಜಾತಿಯ ಕಾರಣವಾಗಿ ಯಾರೂ ಯಾರನ್ನೂ ದೂಷಿಸುವಂತಿಲ್ಲ, ಹಾಗೆಯೇ ಸರಕಾರದ ಸೌಲಭ್ಯಗಳ ವಿಷಯದಲ್ಲಿಯೂ ಜಾತಿ ತಾರತಮ್ಯ ಕೂಡದು. ಆದರೆ ಬಹಳಷ್ಟು ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿ ಈ ಬಗೆಯ ತಾರತಮ್ಯಗಳು ಅಧಿಕವಾಗಿರುತ್ತವೆ. ಇದರ ನೇರ ಪರಿಣಾಮ ಮಾತ್ರ ಮಹಿಳೆಯರ ಮೇಲಾಗುತ್ತಿರುತ್ತದೆ.

ಕೆಲವು ಗ್ರಾಮ ಪಂಚಾಯತಿಗಳಲ್ಲಿನ ಉದ್ಯೋಗ ಖಾತರಿ ಯೋಜನೆಯನ್ನು ಗುತ್ತಿಗೆ ಆಧಾರದಲ್ಲಿ ತೆಗೆದುಕೊಂಡು ಕೇವಲ ಪುರುಷರಷ್ಟೇ ಕೆಲಸದಲ್ಲಿ ತೊಡಗಿಕೊಳ್ಳುವುದು ಕಂಡುಬಂದಿದೆ. ಗುತ್ತಿಗೆ ಕೆಲಸಗಳಲ್ಲಿ ಮಹಿಳೆಯರನ್ನು ಸಂಪೂರ್ಣವಾಗಿ ಕಡೆಗಾಣಿಸಲಾಗಿರುತ್ತದೆ. ಇದಕ್ಕೆ ಸಂಬಂಧಿಸಿದಂತೆ ಹಲವಾರು ಪ್ರಕರಣಗಳು ಕಂಡುಬಂದಿವೆ. ರಾಯಚೂರು ಜಿಲ್ಲೆ ದೇವದುರ್ಗ ತಾಲೂಕು ಜಾಗೀರ ಜಾಡಲದಿನ್ನಿ ಗ್ರಾಮಪಂಚಾಯತಿ ವ್ಯಾಪ್ತಿಯ ಜಾಡಲದಿನ್ನಿ ಗ್ರಾಮದ ತಾಯಪ್ಪ ಎನ್ನುವವರು ಹೇಳುವ ವಿವರಣೆಯಲ್ಲಿ ಉದ್ಯೋಗ ಖಾತ್ರಿ ಯೋಜನೆಯ ಗುತ್ತಿಗೆ ಕೆಲಸದ ಸ್ವರೂಪವನ್ನು ಗುರುತಿಸಬಹುದಾಗಿದೆ.

"ನಮ್ ಊರಾಗ ಬಾಳಾ ವರ್ಸದಿಂದ ಗುತ್ತಿಗಿ ಆಧಾರದ ಮ್ಯಾಲೆ ಮೈಮ್ಯಾಲೆ ಕೆಲ್ಸ ಕೊಟ್ಟು ಬುಡ್ತಾರ. ಅಂದ್ರೆ ಮೇಜರ್‌ಮೆಂಟ್ ಲೆಕ್ಕದಾಗ ಇಷ್ಟು ಅಳತಿ ಕೆಲ್ಸ ಮಾಡಿದ್ರೆ ಇಷ್ಟು ಆಳು ಕೂಲಿ ಕೊಡ್ತೀವಿ ಅಂತೇಳಿ ಮೈಮ್ಯಾಲೆ ಒಪ್ಪಿಸಿಬಿಡ್ತಾರ. ಹಂಗಾಗಿ ನಾವೇನು ಮಾಡ್ತಿವಂದ್ರೆ ಬೆಳಗ ಮುಂಜಾನೆ ಐದು ಗಂಟೆಗೆ ಕೆಲ್ಸಕ್ಕ ಹೋಗ್ತೀವಿ. ಹನ್ನೊಂದು ಇಲ್ಲ ಹನ್ನೆರಡು ಗಂಟೆಗೆ ಮನಿಗೆ ಬರ್ತಿವಿ. ಮತ್ತೆ ಸಂಜಿಮುಂದ ನಾಲ್ಕು ಗಂಟೆಗೆ ಹೋಗಿ ಸಂಜೆಮಾಡಿ ಆರುವರೆಗೆ ಮನಿಗೆ ಬರ್ತಿವಿ. ಯಾಕಂದ್ರ ಈ ಪಂಚಾಯ್ತಿ ಕೆಲ್ಸದಾಗ ಹೆಚ್ಚಾಗಿ ಮಣ್ಣಿನ ಕೆಲ್ಸ ಇರ್ತಾದ. ಕೆರೆ ತೋಡಾದು, ಹೊಡ್ಡು ಹಾಕಾದು, ಕೃಷಿಹೊಂಡ ತೋಡಾದು, ಚೆಕ್‌ಡ್ಯಾಂ ಮಾಡಾದ ಇರ್ತಾವ. ಹಂಗಾಗಿ ನಾವು ಮಣ್ಣಿನ ಕೆಲ್ಸ ಮಾಡಾದು ವಜಾನ ಕೆಲ್ಸ ಆಗಿರದ್ರಿಂದ ಬೆಳಗಮುಂಜಾನೆ ಹೋಗಿ ಮತ್ತೆ ಬಿಸಲು ಬಲಿಯಾದ್ರಾಗ ಮನಿಗೆ ಬರ್ತಿವಿ. ಮತ್ತೆ ಸಂಜೆ ಮಾಡಿ ಬಿಸಲು ತಗ್ಗಿದ ಮ್ಯಾಲೆ ಕೆಲ್ಸಕ್ಕ ಹೋಗಿ ಹೊತ್ತು ಮುಣುಗಿ ಮನೀಗೆ ಬರ್ತಿವಿ. ಹಂಗಾಗಿ ಈ ಉದ್ಯೋಗ ಖಾತ್ರಿ ಕೆಲ್ಸದಾಗ ನಾವು ಕನಿಷ್ಟ ಎರಡಾಳ್ ಕೂಲಿ ಇಲ್ಲ ಮೂರಾಳ್ ಕೂಲಿ ದುಡಿತೀವಿ. ಅಂದ್ರೆ ಒಬ್ಬೊಬ್ಬ ಮನುಷ್ಯ ಒಂದಿನಕ್ಕ ಏನಿಲ್ಲಂದ್ರೆ ೪೦೦ ರಿಂದ ೪೫೦ ರೂಪಾಯಿವರೆಗೆ ಕೂಲಿ ದುಡಿತೀವಿ. ಹಿಂಗ ಮೈಮ್ಯಾಲೆ ಗುತ್ತಿಗೆ ಕೊಡಾದ್ರಿಂದ ಪಂಚಾಯ್ತಿ ಸೆಕ್ರೆಟರಿಗೆ ಮತ್ತೆ ಮೆಂಬರ್‌ಗಳಿಗೆ ಬಾರೀ ಲಾಭ ಐತೆ. ಪಂಚಾಯ್ತಿಯವರು ಏನು ಮಾಡ್ತಾರಂದ್ರೆ ೧೦ಲಕ್ಷ ರೂಪಾಯಿ ಕೆರೆ ಹೂಳೆತ್ತದಂತೇಳಿ ಕೆಲ್ಸ ಇಟ್ಟಿದ್ರು, ಆದ್ರೆ ನಮ್ಗ ಬರೀ ೫ ಲಕ್ಷ ರೂಪಾಯಿಗೆ ಗುತ್ತಿಗೆ ಕೊಟ್ಟಿದ್ರು, ಅವರು ಕೊಟ್ಟಂತಹ ಅಳತೆ ಪ್ರಕಾರ ತೋಡಿ ಕೆಲ್ಸ ಮುಗಿಸಿ ಕೊಟ್ಟೀವಿ. ಹಿಂಗ ಮೈಮ್ಯಾಲೆ ಗುತ್ತಿಗೆ ಕೊಡಾದ್ರಿಂದ ಪಂಚಾಯ್ತಿಯವರಿಗೆ ಅರ್ದಕರ್ದ ರೊಕ್ಕ ಉಳಿತಾವ. ನಾವು ಬಡವರಾಗಿ

ಹುಟ್ಟಿರದ್ರಿಂದ ನಮ್ಗ ಒಂದು ಆಸೆ ಇರ್ತಾದ. ಕೆಲ್ಸ ಮೈಮ್ಯಾಲೆ ತಗಂಡು ದುಡಿದ್ರೆ ಒಂದು ನಾಲ್ಕು ರೊಕ್ಕ ಸಂಪಾದನೆ ಮಾಡ್ಬಹುದು ಅನ್ನಂತ ಆಸೆಯಿಂದ ಮೈಮುರಿಯಂಗ ಕೂಳು, ನೀರು ಇಲ್ದಂಗ ದುಡ್ದುದುಡ್ದು ಸಾಯಿತೀವಿ. ಆದ್ರ ನಮ್ಗ ಎಷ್ಟೆ ಕಷ್ಟ ಬಂದ್ರು ಮನಿ ಹೆಣ್ಮಕ್ಕಳ್ನ ಗ್ರಾಮ ಪಂಚಾತಿ ಕೆಲ್ಸಕ್ಕ ಕಳಸಂಗಿಲ್ಲ. ಈ ಕೂಲಿ ಕೆಲ್ಸ ಬಂದು ಇಷ್ಟು ವರ್ಸ ಆತು. ಇಲ್ಲಿತನ ಇಡೀ ಊರಾಗ ಯಾವ ಮನೆ ಹೆಣ್ಮಗಳು ಪಂಚಾಯ್ತಿ ಕೂಲಿ ಕೆಲ್ಸಕ್ಕ ಬಂದಿಲ್ಲ. ನಾವೇ ನಮ್ ಮನ್ಯಾಗ ಪಂಚಾಯ್ತಿ ಕೆಲ್ಸಕ್ಕ ಬರಾದು ಬ್ಯಾಡಂತ ಹೇಳ್ತೀವಿ. ಹೆಣ್ಮಕ್ಕಳು ನಮ್ ಜತೆ ಕೆಲ್ಸಕ್ಕ ಬಂದ್ರೆ ಮನ್ಯಾಗ ಅಡಿಗೆ ಯಾರು ಮಾಡ್ಬೇಕು. ಮನ್ಯಾಗ ಹುಡುಗ್ರುನಾ ಯಾರು ಸಂಬಾಳ್ಸಬೇಕು? ಮತ್ತೆ ಮಕ್ಕಳಿಗೆ ಸ್ನಾನಂತ ಮಾಡ್ಸಬೇಕು. ಸಾಲಿಗೆ ರೆಡಿ ಮಾಡಿ ಕಳ್ಸಬೇಕು. ಮತ್ತೆ ಒಂದು ಮನ್ಯಾಗ ಗಣಮಗ ಹೆಣ್ಮಗಳು ಪಂಚಾಯ್ತಿ ಕೆಲ್ಸಕ್ಕ ಹೋದ್ರೆ ಜೀವ್ನ ನಡ್ಯಾದಿಲ್ಲ. ಯಾಕಂದ್ರ ಪಂಚಾಯ್ತಿ ಕೆಲ್ಸದಾಗ ದುಡದಂತ ಕೂಲಿ ಕೈಗೆ ಮುಟ್ಟತಾನ ಗ್ಯಾರಂಟಿ ಇಲ್ಲ. ಮತ್ತೆ ಪಂಚಾಯ್ತಿ ಕೆಲ್ಸ ಮಣ್ಣಿನ ಕೆಲ್ಸ ಇರಾದ್ರಿಂದ ವಜಾನ ಕೆಲ್ಸ ಆಗ್ತಾದ. ಎಲ್ಲಾ ಹೆಣ್ಮಕ್ಕಳಿಂದ ಮಣ್ಣಿನ ಕೆಲ್ಸ ಮಾಡಾಕ ಆಗಾದಿಲ್ಲ. ಹಂಗಾಗಿ ಹೆಣ್ಮಕ್ಕಳನ್ನ ಹೊರಗಡೆ ಕೂಲಿ ಕೆಲ್ಸಕ್ಕ ಕಳಸ್ತೀವಿ. ಮತ್ತೆ ಹೆಣ್ಮಕ್ಕಳನ್ನ ಹೊರಗಡೆ ಕೂಲಿಗೆ ಕಳಸಾದ್ರಿಂದ ಕೂಲಿ ಕರೆಕ್ಟಾಗಿ ಕೈಸೇರ್ತಾದ. ಸಂಸಾರ ನಡಸಾಕ ಕೂಡ ಸಾದ್ಯ ಆಗ್ತಾದ" ಎಂದು ಹೇಳಿದರು.

ಇಲ್ಲಿ ತಾಯಪ್ಪ ಹೇಳುವ ವಿವರಣೆಗಳು ಉದ್ಯೋಗ ಖಾತ್ರಿ ಯೋಜನೆಯನ್ನು ಹೇಗೆ ದುರುಪಯೋಗ ಮಾಡಿಕೊಳ್ಳುತ್ತಾರೆ ಎನ್ನುವ ಸೂಕ್ಷ್ಮಗಳು ಅರಿವಾಗುತ್ತವೆ. ಗುತ್ತಿಗೆ ಕೆಲಸ ಕೊಡುವುದು ಹೇಗೆ ಮಹಿಳೆಯರನ್ನು ಹೊರಗಿಡುವ ಆಂತರಿಕ ಸ್ವರೂಪವನ್ನು ಹೊಂದಿದೆ ಎನ್ನುವುದು ಕೂಡ ಅರ್ಥವಾಗುತ್ತದೆ. ಉದ್ಯೋಗ ಖಾತ್ರಿ ಯೋಜನೆಯ ದುರುಪಯೋಗದಲ್ಲಿ ತಾಯಪ್ಪ ಹೇಳುವ ಗುತ್ತಿಗೆ ಕೆಲಸ ಕೊಡುವಿಕೆಯೂ ಒಂದಾಗಿದೆ. ಗುತ್ತಿಗೆ ಆಯಾ ಊರಿನ ಜನರ ಹೊಂದಾಣಿಕೆಯಿಂದ ನಡೆದಿರುತ್ತದೆ. ಹೀಗೆ ಗುತ್ತಿಗೆ ಹಿಡಿದ ಕಾರಣ ಕೇವಲ ಗಂಡಸರು ಹೆಚ್ಚು ಅವಧಿ ನಿರಂತರ ಕೆಲಸ ಮಾಡಿ ಆಯಾ ಕೆಲಸವನ್ನು ಮುಗಿಸಿಕೊಡುತ್ತಾರೆ. ಗುತ್ತಿಗೆ ಕೆಲಸವನ್ನು ಗಂಡಸರು ಬೆಳಗಿನ ೩-೪ ಗಂಟೆಗೆ ಹೋಗುವುದಿದೆ ಅಥವಾ ಬೆಳದಿಂಗಳ ದಿನಮಾನಗಳಲ್ಲಿ ರಾತ್ರಿಯೂ ಕೆಲಸ ಮಾಡುತ್ತಾರೆ. ಇಂತಹ ಗುತ್ತಿಗೆ ಕೂಲಿಯಲ್ಲಿ ಒಟ್ಟಾರೆ ಮಹಿಳೆಯರ ಭಾಗವಹಿಸುವಿಕೆ ಶೂನ್ಯವಾಗಿದೆ. ಕಾರಣ ರಾತ್ರಿ ಹೊತ್ತು ಕೆಲಸ ಮಾಡುವುದು ಒಂದು ಕಾರಣವಾದರೆ, ಗಂಡಸರು ಬೇಗ ಕೆಲಸ ಮುಗಿಸುವುದರಿಂದಾಗಿ ಕೂಲಿಯ ಹಣವೂ ನಿಗದಿಪಡಿಸಿದ್ದಕ್ಕಿಂತ ಹೆಚ್ಚು ಹಂಚಿಕೆಯಾಗುವ ಸಾಧ್ಯತೆ ಇದೆ. ಹೀಗಾಗಿ ಗಂಡಸರು ಅವರ ಮನೆಯ ಮಹಿಳೆಯರನ್ನು ಈ ಗುತ್ತಿಗೆ ಕೆಲಸಕ್ಕೆ ಕರೆದುಕೊಳ್ಳುವುದಿಲ್ಲ. ಹೀಗಿದ್ದೂ ಮಹಿಳೆಯರು ಈ ಕೆಲಸದಲ್ಲಿ ಭಾಗವಹಿಸಿದಂತೆ ದಾಖಲೆಗಳನ್ನು ಸೃಷ್ಟಿ ಮಾಡುತ್ತಾರೆ.

ಹೀಗೆ ಗುತ್ತಿಗೆ ಆಧಾರದ ದುಡಿಮೆ ಕಾನೂನು ಬಾಹಿರ ಹೇಗೋ, ಅದು ಗಂಡಸರನ್ನು ಮಾತ್ರ ಒಳಗೊಳ್ಳುವ ಪುರುಷ ಪ್ರಧಾನ ವ್ಯವಸ್ಥೆಯನ್ನು ಪೋಷಿಸುವ ಜಮೀನ್ದಾರಿ ವ್ಯವಸ್ಥೆಯ ಪಳೆಯುಳಿಕೆಯಂತಿದೆ.

ಅದೇ ರೀತಿಯಲ್ಲಿ ಗ್ರಾಮ ಪಂಚಾಯತಿಗಳಲ್ಲಿ ಕೆಲವು ಧಕ್ಷ ಅಧಿಕಾರಿಗಳ ಕಾರಣವಾಗಿ ಸ್ವಲ್ಪಮಟ್ಟಿಗಾದರೂ ಅವ್ಯವಹಾರಗಳನ್ನು ತಡೆಯಲಾಗಿದೆ. ಜೊತೆಗೆ ಈ ಅವ್ಯವಹಾರಗಳನ್ನು ತಡೆಯುವ ಸಲುವಾಗಿ ಅನೇಕ ಬಗೆಯ ಕಿರುಕುಳಗಳನ್ನು ಅನುಭವಿಸಿರುವಂತಹ ಅಧಿಕಾರಿಗಳೂ ಇದ್ದಾರೆ. ಅಂತಹ ಅಧಿಕಾರಿಗಳಲ್ಲಿ ಮಂಜುಳಾ ರಾಣಿಯವರು ಒಬ್ಬರು. ಇವರು ಬಳ್ಳಾರಿ ಜಿಲ್ಲೆಯ ಪಾಪಿನಾಯಕನಹಳ್ಳಿ ಗ್ರಾಮ ಪಂಚಾಯತಿಗೆ ಅಭಿವೃದ್ಧಿ ಅಧಿಕಾರಿಯಾಗಿ ಬಂದಾಗಿನಿಂದ ಅಲ್ಲಿನ ಅವ್ಯವಹಾರಗಳನ್ನು ತಡೆಯಲು ಹಲವಾರು ಕ್ರಮಗಳನ್ನು ಕೈಗೊಂಡಿದ್ದಾರೆ. ಆ ಕಾರಣಕ್ಕಾಗಿ ಸ್ಥಳೀಯ ಜನ ಪ್ರತಿನಿಧಿಗಳಿಂದ ಕಿರುಕುಳಗಳನ್ನೂ ಅನುಭವಿಸಿದ್ದಾರೆ. ಇವರು ಹೇಳುವಂತೆ "ಈ ಉದ್ಯೋಗ ಖಾತ್ರಿ ಯೋಜನೆಯ ಕೆಲಸದಲ್ಲಿ ಯಂತ್ರಗಳ ಬಳಕೆಗೆ ಅವಕಾಶವಿಲ್ಲದಂತೆ ಮಾಡಿದೆ ಮತ್ತು ಈ ಯೋಜನೆಯಲ್ಲಿ ಯಾವುದೇ ಗ್ರಾಮ ಪಂಚಾಯ್ತಿ ಸದಸ್ಯನಿಗೆ ಆಗಲಿ ಮತ್ತೆ ಗುತ್ತಿಗೆದಾರನಿಗೆ ಆಗಲಿ ಯಾವುದೇ ರೀತಿಯ ಪ್ರವೇಶವಿಲ್ಲದಂತೆ ಮಾಡಿದೆ. ಯಾಕಂದ್ರೆ ಮೊದಲೆಲ್ಲ ಪಂಚಾಯ್ತಿ ಮೆಂಬರ್‌ಗಳು ಜನ್ರಿಗೆ ಕೆಲ್ಸ ನೀಡದೇ ಯಂತ್ರಗಳಿಂದ ಇಲ್ಲ ಯಾವುದೇ ಕೆಲ್ಸ ಮಾಡಿಸದೇ ಜನರಿಂದಲೇ ಕೆಲ್ಸ ಮಾಡಿಸಿದ್ದೇವೆ ಎನ್ನುವಂತೆ ಖೊಟ್ಟಿ ದಾಖಲೆಗಳನ್ನು ಸೃಷ್ಟಿಸಿ ಕೂಲಿಕಾರರ ಹಣವನ್ನು ಕೊಳ್ಳೆಹೊಡೆಯುತ್ತಿದ್ದರು. ಹಂಗಾಗಿ ನಾನು ಇದ್ಯಾವುದಕ್ಕೂ ಆಸ್ಪದ ಕೊಡದೇ ಇರುವುದರಿಂದ ಮತ್ತು ಕಾಯಿದೆಗೆ ಅನುಗುಣವಾಗಿ ಪಾರದರ್ಶಕವಾಗಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳುವುದರಿಂದ ನಾನು ಶೇ.೮೦ರಷ್ಟು ಸದಸ್ಯರಿಗೆ ಬೇಡವಾದ ಅಭಿವೃದ್ಧಿ ಅಧಿಕಾರಿಯಾಗಿದ್ದೇನೆ. ಹಾಗಾಗಿ ಪಂಚಾಯ್ತಿ ಸದಸ್ಯರು ದಿನ ನಿತ್ಯ ನನ್ನ ಮೇಲೆ ಮೇಲಾಧಿಕಾರಿಗಳಿಗೆ ಮೇಲಿಂದ ಮೇಲೆ ಕಂಪ್ಲೆಂಟ್ ಕೊಡುವಂತಹದ್ದು ಆಗಿರಬಹುದು, ಮತ್ತೆ ಎಂ.ಎಲ್.ಎ. ಮತ್ತು ಎಂ.ಪಿ.ಗಳ ಮೂಲಕ ನಮ್ಮ ಇಲಾಖೆಯ ಮೇಲಾಧಿಕಾರಿಗಳಿಗೆ ಫೋನ್ ಮಾಡ್ಸಿ ಪಾಪಿನಾಯಕನಹಳ್ಳಿ ಗ್ರಾಮ ಪಂಚಾಯ್ತಿ ಪಿ.ಡಿ.ಓ. ಅವರ ಮೇಲೆ ಆ್ಯಕ್ಷನ್ ತಗಳ್ರಿ ಅಂತ ಧಮಕಿ ಹಾಕಿಸುವಂತಹ ಕೆಲಸಗಳು ನಡೆಯುತ್ತಿವೆ. ಇವತ್ತು ಇದಕ್ಕೂ ಮೀರಿ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ನಮ್ಮ ಪಂಚಾಯತ್ ರಾಜ್ ಗ್ರಾಮೀಣ ಅಭಿವೃದ್ಧಿ ಸಚಿವರಿಗೆ ನನ್ನನ್ನು ಸಸ್ಪೆಂಡ್ ಮಾಡ್ಬೇಕು ಎಂದು ಕಂಪ್ಲೆಂಟ್ ಕೂಡ ಕೊಟ್ಟಿದ್ದಾರೆ. ಹಾಗೆಯೇ ಪಂಚಾಯ್ತಿ ಸದಸ್ಯರು ಊರಿನಲ್ಲಿರುವಂತ ತಮ್ಮ ಪಾಲೋವರ್ಸ್‌ಗಳನ್ನು ನನ್ ಮೇಲೆ ಎತ್ತಿಕಟ್ಟಿ ನನ್ನ ವಿರುದ್ಧ ಮಾನವ ಹಕ್ಕುಗಳ ಆಯೋಗಕ್ಕೂ ಕೂಡ ಕಂಪ್ಲೆಂಟ್ ಕೊಟ್ಟಿದ್ದಾರೆ. ಮತ್ತೆ ಇಷ್ಟಕ್ಕೂ ಸಾಲದೆಂಬಂತೆ ಮೊನ್ನೆ ನಡೆದಂತಹ ಗ್ರಾಮ ಸಭೆಯಲ್ಲಿ ಎಲ್ಲಾ ಸದಸ್ಯರು ಒಗ್ಗೂಡಿ ನನ್ನನ್ನು ವರ್ಗಾವಣೆ ಮಾಡ್ಬೇಕೆಂದು

ಸಭೆಯಲ್ಲಿ ಒಕ್ಕೋರಲಿನ ನಿರ್ಣಯವನ್ನು ಕೂಡ ಮಾಡಿದ್ದಾರೆ. ಹಾಗಾಗಿ ನಮ್ಮಂತ ನಿಯತ್ತಿನಿಂದ ಕೆಲಸ ಮಾಡುವಂತ ಅಧಿಕಾರಿಗಳಿಗೆ ಯಾರು ಸಪೋರ್ಟ್ ಮಾಡೋದಿಲ್ಲ. ಹಾಗಾಗಿ ಈ ನೌಕರಿನೇ ಬ್ಯಾಡಂತ ಅನಿಸಿ ಬಿಟ್ಟದ. ಇಲ್ಲಿನ ಕೆಲವು ಜನರು ನನ್ನ ಕೆಲಸಕ್ಕೆ ಸಪೋರ್ಟ್ ಮಾಡ್ತಾರ. ಇಲ್ಲಂತ ಅಲ್ಲ. ಆದ್ರೆ ನಮ್ ಮೇಲಿರುವಂತಹ ಹಿರಿಯ ಅಧಿಕಾರಿಗಳ ಹತ್ತಿರ ಹೋಗಿ ನಮ್ ಪಂಚಾಯ್ತಿಯಲ್ಲಿ ಅಭಿವೃದ್ಧಿ ಅಧಿಕಾರಿಗಳಾಗಿ ಅವರೇ ಮುಂದುವರಿಯಬೇಕು ಎಂದು ಹೇಳುವಂತ ಮಟ್ಟಕ್ಕೆ ಇರೋದಿಲ್ಲ. ಯಾಕಂದ್ರೆ ನಮ್ ಪರವಾಗಿ ಇರುವಂತವರು ಕೂಲಿಕಾರ್ಮಿಕರು. ಇವರು ಒಂದು ಹೊತ್ತಿನ ಊಟಕ್ಕಾಗಿ ಪರದಾಡುವಂತವರು ಇಂತವರು ನಮ್ ಪರವಾಗಿ ನಿಂತು ಹೋರಾಟ ಮಾಡಾಕ ಆಗ್ತಾದೇನು? ಇಲ್ಲ. ಯಾಕಂದ್ರೆ ಒಂದು ದಿನ ಮನೇಲಿ ಕುಂತ್ರೆ ಉಪವಾಸ ಇರಬೇಕಾಗ್ತಾದ. ಇಂತದ್ರಾಗ ನಾವು ಅವರಿಗೆ ನನ್‌ಗೆ ಸಪೋರ್ಟ್ ಮಾಡ್ಲಿಲ್ಲ ಅನ್ನೋದು ಕೂಡ ತಪ್ಪು ಅಂತ ಅನಸ್ತಾದ. ಮತ್ತೆ ಒಂದೊಂದ್ಸಲ ಏನಾಗ್ತಾದಂದ್ರೆ ಇಂತಹ ಅಮಾಯಕ ಜನಗಳನ್ನು ಕೂಡ ಯಾವುದಾದರೊಂದು ಆಮಿಷ ಹೊಡ್ಡಿ ತಮ್ಮತ್ತ ಸೆಳೆದುಕೊಳ್ಳುವಂತಹ ಕೆಲಸ ಕೂಡ ಮಾಡುತ್ತಾರೆ. ಆಮೇಲೆ ಪಂಚಾಯ್ತಿಗೆ ಚುನಾಯಿತರಾಗಿ ಆಯ್ಕೆ ಆಗಿರುವಂತವರು ಇಡೀ ಊರನ್ನೇ ತಮ್ಮ ಅಧೀನದಲ್ಲಿಟ್ಟುಕೊಂಡಿರುತ್ತಾರೆ. ಮತ್ತೆ ಸದಸ್ಯರನ್ನು ಯಾರು ಎದುರು ಹಾಕಿಕೊಂಡು ಬದುಕಲಿಕ್ಕೆ ಆಗಲಾರಂದತಹ ವಾತಾವರಣವನ್ನು ನಿರ್ಮಿಸುತ್ತಾರೆ. ಆದ್ದರಿಂದ ಜನಸಾಮಾನ್ಯರು ಕೂಡ ಏನ್ಮಾಡ್ತಾರಂದ್ರೆ ತಮ್ಮ ಕಣ್ಣೆದುರಿಗೆ ಅನ್ಯಾಯವಾಗುತ್ತಿದ್ರು ಕೂಡ ಕಣ್ಣಿದ್ದು ಕುರುಡರಂತೆ ವರ್ತಿಸುವುದನ್ನು ನೋಡುತ್ತೇವೆ". ಹೀಗೆ ಮಂಜುಳಾ ರಾಣಿಯವರು ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ದಕ್ಷವಾಗಿ ಕಾರ್ಯನಿರ್ವಹಿಸಿದ್ದರಿಂದಾಗಿ ಅವರು ಸ್ಥಳೀಯ ಹಾಗೂ ಗ್ರಾಮ ಪಂಚಾಯತಿ ವ್ಯಾಪ್ತಿಯ ಸದಸ್ಯರಿಂದ ಕಿರುಕುಳಕ್ಕೆ ಒಳಗಾಗಿರುವುದನ್ನು ಕಾಣಬಹುದಾಗಿದೆ. ಮಂಜುಳಾ ರಾಣಿಯವರು ಒಬ್ಬ ಮಹಿಳೆಯಾಗಿದ್ದರಿಂದ ಇವರ ವಿರುದ್ಧವಾಗಿ ಹಲವಾರು ಪಿತೂರಿಗಳನ್ನು ಮಾಡುವುದರ ಮೂಲಕ ಅವರನ್ನು ವರ್ಗಾವಣೆ ಮಾಡಲು ಯತ್ನಿಸುವಂತಹದ್ದನ್ನು ನೋಡಬಹುದಾಗಿದೆ. ಅಧಿಕಾರಿಯು ಒಬ್ಬ ಮಹಿಳೆಯಾಗಿದ್ದರಿಂದಲೇ ಇಷ್ಟೆಲ್ಲಾ ಸಮಸ್ಯೆಗಳಿಗೆ ಕಾರಣವಾಗಿರುವುದು. ಏಕೆಂದರೆ ಮಹಿಳೆಯರ ಅಡಿಯಲ್ಲಿ ಕೆಲಸ ನಿರ್ವಹಿಸಬೇಕು ಎಂಬುದನ್ನೇ ಸಹಿಸದ ಪಿತೃ ಪ್ರಧಾನ ಸಮಾಜ ಇನ್ನು ಅವರ ಅಧಿಕಾರವನ್ನು ಸಹಿಸುವುದಿಲ್ಲ. ಆ ಕಾರಣಕ್ಕಾಗಿ ಮಂಜುಳಾರಾಣಿಯವರಿಗೆ ಇನ್ನಿಲ್ಲದ ಕಿರುಕುಳಗಳನ್ನು ನೀಡಿರುವುದನ್ನು ಕಾಣಬಹುದಾಗಿದೆ.

ಮಂಜುಳಾ ರಾಣಿಯವರೇ ಈ ಊರಿನ ಮಹಿಳೆಯರಿಂದ ಹಲವಾರು ರೀತಿಯಲ್ಲಿ ಪ್ರಶಂಸೆಗೆ ಪಾತ್ರರಾಗಿರುವುದನ್ನೂ ಸಹ ಕಾಣಬಹುದಾಗಿದೆ. ಒಬ್ಬ ಮಹಿಳಾ ಅಧಿಕಾರಿಯಾಗಿರುವುದರಿಂದ ಮಹಿಳೆಯರ ಎಲ್ಲಾ ಸಮಸ್ಯೆಗಳನ್ನು ಅರ್ಥಮಾಡಿಕೊಂಡು ಅವುಗಳಿಗೆ

ಸ್ಪಂದಿಸಿದ್ದಾರೆ. ಹಾಗೆಯೇ ಗ್ರಾಮಗಳಲ್ಲಿನ ಮಹಿಳೆಯರೂ ಸಹ ಇವರ ಹತ್ತಿರ ಮುಕ್ತವಾಗಿ ತಮ್ಮ ಸಮಸ್ಯೆಗಳನ್ನು ಚರ್ಚಿಸುತ್ತಾರೆ. ಮುಖ್ಯವಾಗಿ ಪಾಪಿನಾಯಕನಹಳ್ಳಿ ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿನ ಮಹಿಳೆಯರು ಹೇಳುವಂತೆ "ಮೇಡಂ ಅವರು ಬಂದಾಗಿನಿಂದ ನಮ್ಮ ಬಾಳೇವು ಚಂದ ಆಗ್ಯಾದ. ಯಾಕಂದ್ರೆ ಮೊದ್ಲೆಲ್ಲ ಮೈನಿಂಗ್ ಚಲೋತ್ಯಾಗಿ ನಡೀತಿದ್ವು ಹಂಗಾಗಿ ನಮ್ ಸಂಸಾರ ಚಲೋತ್ಯಾಗಿ ಇತ್ತು. ಆದರೆ ಇವತ್ತು ನಮ್ ಪರಿಸ್ಥಿತಿ ಬಾಳ ಗಂಭೀರ ಐತಿ. ಈ ಬ್ಯಾಸ್ಗಿ ಟೈಂದಾಗ ಹೊರಗಡೆ ದುಡಿಯಾಕ ಕೂಲಿ ಸಿಗಾದಿಲ್ಲ. ಇವ್ರು ನಮ್ ಪಂಚಾಯ್ತಿಗೆ ಬಂದಿರೋದ್ರಿಂದ ಒಂದ್ಮೂರು ಒಪ್ಪತ್ತು ಊಟ ಮಾಡ್ತೀವಿ. ಇಲ್ಲಂದ್ರೆ ನಮ್ ಜೀವನ ಆ ದೇವರೇ ಬಲ್ಲ. ಯಾಕಂದ್ರ ಇಲ್ಲಿವರೆಗೆ ಯಾವ ಪಂಚಾಯ್ತಿ ಸೆಕ್ರೆಟರಿ ನಮ್ಗ ಕೂಲಿ ಕೆಲಸಕ್ಕೆ ಬರ್ರಿ ಅಂತ ಯಾರು ಇವತ್ತಿನವರೆಗೆ ಕರದಿಲ್ಲ. ಇವ್ರು ಮಾತ್ರ ನಮ್ಗ ಕರದು ಕೆಲ್ಸ ಕೊಟ್ಟಾರ. ಇವ್ರನ್ನ ದೇವ್ರು ಚೆನ್ನಾಗಿ ಇಟ್ಟಿರ್ಲಿ " ಎಂದು ಹೇಳಿದರು. ಹಾಗೆಯೇ ಮಂಜುಳಾ ರಾಣಿಯವರು ಹೇಳುವ ಹಾಗೆ "ನಾನು ಒಂದು ಹೆಣ್ಣು ಆಗಿರೋದ್ರಿಂದ ಅವರ ಪ್ರತಿಯೊಂದು ಸಮಸ್ಯೆಗಳನ್ನು ನನ್ನ ಹತ್ತಿರ ಹೇಳಿಕೊಳ್ಳುತ್ತಾರೆ. ಹಾಗೆನೇ ನಾನೂ ಕೂಡ ಅವರ ಸಮಸ್ಯೆಗಳಿಗೆ ಸ್ಪಂದಿಸುತ್ತ ಬಂದಿದ್ದೀನಿ" ಎಂದರು. ಒಂದು ಕಡೆ ಪುರುಷರಿಂದ ಕಿರುಕುಳಗಳನ್ನು ಅನುಭವಿಸುವಂತಹದ್ದು ಮತ್ತು ಇನ್ನೊಂದು ಕಡೆ ಮಹಿಳೆಯರಿಂದ ಪ್ರಶಂಸೆಗೆ ಪಾತ್ರರಾಗಿರುವಂತಹದ್ದು ಎರಡೂ ಕಂಡುಬರುತ್ತದೆ. ಒಟ್ಟಾರೆಯಾಗಿ ಮಹಿಳೆ ಎಂಬ ಕಾರಣಕ್ಕಾಗಿ ಹೆಚ್ಚಿನ ಕಿರುಕುಳಗಳನ್ನು ಅನುಭವಿಸಿರುವುದು ಕಂಡುಬರುತ್ತದೆ.

ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕಿನ ಮಾಡಗಿರಿ ಗ್ರಾಮದ ರುಕ್ಕಪ್ಪನ ಮಾತುಗಳು ತಾಯಪ್ಪನ ಮಾತುಗಳಿಗಿಂತ ತುಂಬಾ ಭಿನ್ನವಾಗಿವೆ. ಏಕೆಂದರೆ, ರುಕ್ಕಪ್ಪ ಹೇಳುವ ಹಾಗೆ "ಈ ಉದ್ಯೋಗ ಖಾತ್ರಿ ಯೋಜನೆಯ ಕೆಲಸಕ್ಕೆ ಹೆಣ್ಮಕ್ಕಳೇ ಹೆಚ್ಚಾಗಿ ಕೆಲ್ಸಕ್ಕ ಬರ್ತಾರ. ಪಂಚಾಯ್ತಿ ಕೆಲ್ಸಕ್ಕ ಗಂಡ ಹೆಣ್ತಿ ಇಬ್ರು ಬಂದ್ರೆ ಜೀವ್ನ ನಡ್ಯಾದಿಲ್ಲ. ಯಾಕಂದ್ರ ಕೂಲಿ ಸರಿಯಾಗಿ ಬರಾದಿಲ್ಲ. ಹಂಗಾಗಿ ಗಣಮಕ್ಕಳು ಹೊರಗಡೆ ಕೂಲಿ ಕೆಲ್ಸಕ್ಕೆ ಹೋಗ್ತಾರ. ಇನ್ನು ಕೆಲವು ಮಂದಿ ಬೆಂಗಳೂರು, ಪೂನಕ್ಕ ಹೋಗ್ತಾರ. ಹೆಣ್ಮಕ್ಕಳಿಗೆ ಈ ಯೋಜನೆಯಲ್ಲಿ ಹೊರಗಡೆ ಕೂಲಿಗಿಂತ ಇಲ್ಲಿ ಜಾಸ್ತಿ ಕೂಲಿ ಇರಾದ್ರಿಂದ ಹೆಚ್ಚು ಜನ ಬರ್ತಾರ. ಆದ್ರೆ ಗಣಮಕ್ಕಳಿಗೆ ಈ ಯೋಜನೆಯಲ್ಲಿ ಹೊರಗಡೆ ಕೂಲಿಗಿಂತ ಕಡಿಮಿ ಕೂಲಿ ಇರಾದ್ರಿಂದ ಕಡಿಮಿ ಜನ ಬರ್ತಾರ" ಎಂದು ಹೇಳುತ್ತಾರೆ. ಇವರ ಪ್ರಕಾರ ಒಂದು ಕುಟುಂಬದ ಜನರ ಜೀವನಕ್ಕೆ ಕೇವಲ ಉದ್ಯೋಗ ಖಾತರಿ ಯೋಜನೆಯೊಂದನ್ನೇ ನಂಬಿಕೊಂಡರೆ ಸಾಲದು ಬೇರೆ ಬೇರೆ ಕೆಲಸಗಳಿಗೂ ಹೋಗಬೇಕಾಗುತ್ತದೆ ಎಂದು ಹೇಳುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಪುರುಷರು ಬೇರೆ ಬೇರೆ ಊರುಗಳಿಗೆ ವಲಸೆ ಹೋಗುತ್ತಾರೆ. ಮಹಿಳೆಯರು ಮಾತ್ರ ಉದ್ಯೋಗ ಖಾತರಿ ಯೋಜನೆಯ ಕಾಮಗಾರಿಗಳಲ್ಲಿ ತೊಡಗಿಕೊಳ್ಳುತ್ತಾರೆ. ಇವರು

ವಾಸಿಸುವಂತಹ ಗ್ರಾಮದಲ್ಲಿ ಬೇರೆ ಬೇರೆ ಕೆಲಸಗಳಿಗೆ ಸಿಗುವಂತಹ ಕೂಲಿಗಿಂತ ಉದ್ಯೋಗ ಖಾತರಿ ಯೋಜನೆಯಲ್ಲಿನ ಕೂಲಿ ಹೆಚ್ಚಾಗಿರುತ್ತದೆ. ಗಂಡ ಮತ್ತು ಹೆಂಡತಿ ಇಬ್ಬರೂ ಇದೇ ಕೆಲಸದಲ್ಲಿ ತೊಡಗಿಕೊಂಡರೂ ಅವರು ಜೀವನ ನಡೆಸುವುದೇ ತುಂಬಾ ಕಷ್ಟವಾಗಿಬಿಡುತ್ತದೆ. ಏಕೆಂದರೆ ಉದ್ಯೋಗ ಖಾತರಿ ಯೋಜನೆಯಲ್ಲಿ ದುಡಿದಂತಹ ಕೂಲಿಯ ಹಣವನ್ನು ಕೊಡಲು ವರ್ಷಾನುಗಟ್ಟಲೆ ಕಾಯಬೇಕಾಗುತ್ತದೆ. ಹಾಗಾಗಿ ಈ ಕೆಲಸಗಳಿಗೆ ಮಹಿಳೆಯರನ್ನು ನೇಮಿಸಿ, ಪುರುಷರು ಕೆಲಸಕ್ಕಾಗಿ ವಲಸೆ ಹೋಗುತ್ತಾರೆ. ಇದು ವಾಸ್ತವ ಸಂಗತಿ. ಹೀಗೆ ಪುರುಷರು ವಲಸೆ ಹೋದರೆ ಕುಟುಂಬದ ಜವಾಬ್ದಾರಿಯೆಲ್ಲಾ ಮಹಿಳೆಯೇ ನಿಭಾಯಿಸಬೇಕಾಗುತ್ತದೆ. ಆದರೆ ಹೀಗೆ ನಿಭಾಯಿಸುವುದು ತುಂಬಾ ಕಷ್ಟ. ಕುಟುಂಬದ ಜವಾಬ್ದಾರಿ ಒಂದು ಹೊರೆಯಾಗಿ ಕಾಡತೊಡಗುತ್ತದೆ. ಒಂದುವೇಳೆ ಉದ್ಯೋಗ ಖಾತರಿ ಯೋಜನೆಯಲ್ಲಿನ ಕೂಲಿಯು ಸರಿಯಾದ ಸಮಯಕ್ಕೆ ಸಿಕ್ಕರೆ ಈ ಸಮಸ್ಯೆಗಳು ಇರುವುದಿಲ್ಲ. ಆದರೆ ಇದು ಹೀಗಾಗುತ್ತಿಲ್ಲ. ಆ ಕಾರಣಕ್ಕಾಗಿ ಮಹಿಳೆಯರು ತುಂಬಾ ಅಸಮಾನತೆಗೆ ಒಳಗಾಗಿರುತ್ತಾರೆ.

ಕೆಲಸದ ಸ್ಥಳಗಳಲ್ಲಿನ ಸೌಲಭ್ಯಗಳಿಗೆ ಸಂಬಂಧಿಸಿದಂತೆ ಮಹಿಳೆಯರು ಹಲವಾರು ರೀತಿಯಲ್ಲಿ ಸಮಸ್ಯೆಗಳಿಗೆ ಒಳಗಾಗಿರುವುದನ್ನು ಕಾಣಬಹುದಾಗಿದೆ. ಆ ಸಮಸ್ಯೆಗಳಿಂದ ಮುಕ್ತಿಯನ್ನು ಪಡೆಯಲು ಅಥವಾ ಆ ಸೌಲಭ್ಯಗಳನ್ನು ಪಡೆಯಲು ಹೋರಾಟಗಳನ್ನು ಮಾಡಬೇಕಾದ ಅನಿವಾರ್ಯತೆಗೆ ಒಳಗಾಗಿರುವುದು ಕಂಡುಬರುತ್ತದೆ. ಹಾಗೆಯೇ ಹೋರಾಟದ ಮೂಲಕ ಸೌಲಭ್ಯಗಳನ್ನು ಪಡೆದುಕೊಂಡಿರುವ ಪ್ರಕರಣಗಳು ಕಾಣಸಿಗುತ್ತವೆ. ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕಿನ ಹಿರೇಕೊಟ್ನೆಕಲ್ ಗ್ರಾಮದ ನರಸಮ್ಮ ಹೇಳುವಂತೆ "ಕೆಲಸದ ಸ್ಥಳದಲ್ಲಿ ಪಂಚಾಯ್ತಿಯವರು ಯಾವೊಂದು ಸೌಲಭ್ಯ ನಮ್ಗ ಮಾಡಿರಲಿಲ್ಲ. ಆದ್ರೆ ನಾವು ಹೋರಾಟದ ಮೂಲಕ ಪಡಕಂಡೀವಿ. ಹಂಗಾಗಿ ಇವತ್ತು ಕೆಲಸ ನಡಿವಂತ ಜಾಗದಾಗ ನೀರಿನ ವ್ಯವಸ್ಥೆ ಮಾಡ್ತಾರ. ನೆಳ್ಳಿನ ವ್ಯವಸ್ಥೆ ಮಾಡ್ತಾರ. ಮತ್ತೆ ಸಣ್ಣ-ಸಣ್ಣ ಮಕ್ಳು ಬಂದ್ರೆ ಅವರನ್ನ ನೋಡಿಕೊಳ್ಳಾಕ ಮುದಿಕೆರ್ನ ನೇಮಕ ಮಾಡ್ತಾರ. ಆದ್ರೆ ಹೆಣ್ಣು ಮಕ್ಕಳಿಗೆ ಶೌಚಾಲಯ ವ್ಯವಸ್ಥೆ ಮಾಡಿಲ್ಲ. ಮತ್ತೆ ಕೂಲಿಕಾರರಿಗೆ ಏನಾದ್ರೆ ಆದ್ರೆ ಡಾಕ್ಟರನ್ನ ನೇಮಕ ಮಾಡ್ಸಾಕ ಆಗಿಲ್ಲ. ಇನ್ನ ಮುಂದ ಕೆಲಸದ ಜಾಗದಾಗ ಶೌಚಾಲಯ ಮತ್ತೆ ಡಾಕ್ಟರ್ನ ನೇಮಕ ಮಾಡ್ಬೇಕು ಅಂತೇಳೆ ಪಟ್ಟು ಹಿಡ್ತೀವಿ. ಇದಕ್ಕ ಮಣಿಲಿಲ್ಲ ಅಂದ್ರೆ ಹೋರಾಟ ಮಾಡಿ ಸವಲತ್ತು ಪಡಕಂತೀವಿ" ಎಂದು ಯೋಜನೆಯ ಸಾಧಕ-ಬಾಧಕಗಳನ್ನು ಎಳೆ ಎಳೆಯಾಗಿ ವಿವರಿಸಿದರು. ಇವರ ಮಾತಿನಂತೆ ಯೋಜನೆಯ ನಿಯಮ ಕೆಲಸದ ಸ್ಥಳಗಳಲ್ಲಿ ಕೂಲಿಕಾರರಿಗೆ ಅನೇಕ ಬಗೆಯ ಸೌಲಭ್ಯಗಳನ್ನು ಒದಗಿಸಿಕೊಡಬೇಕು ಎಂದು ಹೇಳುತ್ತದೆ. ಆದರೆ ಇವುಗಳನ್ನು ಯಾರೂ ಪಾಲಿಸುತ್ತಿಲ್ಲ. ಹಾಗಾಗಿ ಮಹಿಳೆಯರು ಹೋರಾಟದ ಮೂಲಕ ಸೌಲಭ್ಯಗಳನ್ನು

ಪಡೆದಿರುವುದನ್ನು ಗಮನಿಸಬಹುದಾಗಿದೆ. ಮುಖ್ಯವಾಗಿ ಮಹಿಳೆಯರಿಗಾಗಿಯೇ ಇರುವಂತಹ ಸೌಲಭ್ಯಗಳಲ್ಲಿ ಕೆಲವನ್ನು ಇನ್ನೂ ಒದಗಿಸಿಕೊಟ್ಟಿಲ್ಲ. ಹಾಗಾಗಿ ಅವುಗಳನ್ನೂ ಸಹ ಹೋರಾಟ ಮಾಡುವುದರ ಮೂಲಕ ಪಡೆಯುತ್ತೇವೆ ಎಂಬ ವಿಶ್ವಾಸ ನರಸಮ್ಮನಲ್ಲಿ ಇರುವುದನ್ನು ಕಾಣಬಹುದಾಗಿದೆ.

### ೭.೪. ಯೋಜನೆಯ ಕಾಮಗಾರಿಗಳ ಮುಕ್ತಾಯದ ಹಂತ

ಉದ್ಯೋಗ ಖಾತರಿ ಯೋಜನೆಯಲ್ಲಿ ಅನುಷ್ಠಾನಗೊಂಡಿರುವ ಕಾಮಗಾರಿಗಳು ಮುಕ್ತಾಯಗೊಂಡ ನಂತರ ಈ ಕಾಮಗಾರಿಗಳಲ್ಲಿ ಭಾಗವಹಿಸಿದ ಕೂಲಿಕಾರರಿಗೆ ದುಡಿದ ಹಣವನ್ನು ಕೊಡಬೇಕು. ಅಂದರೆ ಕೂಲಿಕಾರರು ಮಾಡಿದ ಕೆಲಸದ ಸ್ಥಳವನ್ನು ಗ್ರಾಮ ಪಂಚಾಯತಿ ಅಧಿಕಾರಿಗಳು ಪರಿಶೀಲಿಸಬೇಕು ನಂತರ ದುಡಿದ ಕೂಲಿಹಣವನ್ನು ಕೊಡಬೇಕಾಗುತ್ತದೆ. ಇಂತಹ ಸಂದರ್ಭದಲ್ಲಿ ಗ್ರಾಮ ಪಂಚಾಯತಿಯ ಅಧಿಕಾರಿಗಳು ಹಲವಾರು ಬಗೆಯಲ್ಲಿ ಕಿರುಕುಳಗಳನ್ನು ನೀಡುತ್ತಾರೆ. ಮತ್ತು ಕೇವಲ ಜಾಬ್‌ಕಾರ್ಡ್‌ಗಳನ್ನು ಮಾಡಿಸಿ ಅವರಿಗೆ ಕೆಲಸಗಳನ್ನು ಕೊಡದೇ ಯಂತ್ರಗಳನ್ನು ಬಳಸಿಕೊಂಡು ಕೆಲಸಗಳನ್ನು ಪೂರ್ಣಗೊಳಿಸಿದ ನಂತರ ಜಾಬ್‌ಕಾರ್ಡ್‌ದಾರರಿಂದ ಹಣವನ್ನು ವಸೂಲಿ ಮಾಡುತ್ತಿರುವಂತಹ ಪ್ರಕರಣಗಳು, ಇನ್ನು ತಾವು ದುಡಿದಂತಹ ಕೂಲಿ ಹಣವನ್ನು ಸರಿಯಾದ ಸಮಯಕ್ಕೆ ಕೊಡದೇ ಹೋದಾಗ ಮಹಿಳೆಯರು ಗ್ರಾಮ ಪಂಚಾಯತಿಯ ವಿರುದ್ಧ ದಂಗೆಯೆದ್ದಂತಹ ಸಂದರ್ಭಗಳು ಮತ್ತು ಹಾಗೆ ಮಾಡಿದ ಕಾರಣಕ್ಕಾಗಿ ತಾವು ದುಡಿದ ಕೂಲಿ ಹಣವನ್ನು ಪಡೆದುಕೊಂಡ ಸಂದರ್ಭಗಳೂ ಇವೆ. ಹಾಗೆಯೇ ಧಂಗೆ ಅಥವಾ ಹೋರಾಟ ಇಂತಹ ಸಂದರ್ಭಗಳಲ್ಲಿ ಕೇವಲ ಮಹಿಳೆಯರು ಮಾತ್ರ ಪಾಲ್ಗೊಂಡಿರುವುದು ಪುರುಷರು ಇವುಗಳಿಂದ ದೂರವಿರುವುದನ್ನು ಕಾಣಬಹುದಾಗಿದೆ. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಈ ಬಗೆಯ ಹಲವಾರು ಪ್ರಕರಣಗಳು ಕಾಣಸಿಗುತ್ತವೆ.

ಮಾಡಗಿರಿ ಗ್ರಾಮದ ರುಕ್ಕಪ್ಪ ಹೇಳುವ ಹಾಗೆ "ಗ್ರಾಮ ಪಂಚಾಯತಿಯಾಗ ಕೆಲಸಕ್ಕ ಅರ್ಜಿ ಕೊಟ್ಮೇಲೆ ಕೆಲ್ಸ ಕೊಡ್ರಿ ಅಂತ ಬಾಳ ದಿನಗಳ ಕಾಲ ಗ್ರಾಮ ಪಂಚಾತಿಗೆ ಅಡ್ಡಾಡಿದ್ವಿ, ಅವರ್ರು ಬಾಳಾ ಸತಾಯಿಸಿದ್ರು, ಇದಕ್ಕ ಸಂಬಂಧಪಟ್ಟಂಗ ಇ.ಓ. ಸಾಹೇಬ್ರನ್ನೂ ಭೇಟಿ ಮಾಡಿದ್ವಿ ಆಮ್ಯಾಲ ನಮ್ಗ ಕೃಷಿಹೊಂಡ, ಚೆಕ್‌ಡ್ಯಾಂ ಬೇರೆ ಬೇರೆ ಕೆಲ್ಸ ಕೊಟ್ರು, ಆ ಮ್ಯಾಲೆ ಅಧಿಕಾರಿಗಳು ಏನು ಮಾಡ್ಲಿಕತ್ತಿದ್ರು ಅಂದ್ರೆ, ಜನರು ಕೆಲ್ಸ ಮಾಡಂತ ಜಾಗಕ್ಕ ಜೆ.ಇ. ಮತ್ತೆ ಪಿ.ಡಿ.ಓ. ಬಂದು ಹೆಣ್ಮಕ್ಕಳಿಗೆ ಮತ್ತೆ ಗುಣಮಕ್ಳಿಗೆ ನೀವು ಕೆಲ್ಸ ಕಡಿಮಿ ಮಾಡೀರಿ. ನೀವು ಅಳತೆ ಪ್ರಕಾರ ಮಾಡಿಲ್ಲ. ಹಂಗಾಗಿ ನೀವು ಮಾಡಿದ ಕೆಲ್ಸಕ್ಕ ನಿಮ್ಗ ೩೦ ರೂಪಾಯಿ ಕೂಲಿ ಬರ್ತಾದ. ಐವತ್ತು ರೂಪಾಯಿ ಬರ್ತಾದ ಅಂತೇಳಿ ಜನ್ರನ್ನ ಹೆದ್ರಿಸ್ಲಿಕತ್ತಿದ್ರು, ಹಂಗಾಗಿ ಬಾಳಷ್ಟು ಜನ ಕೆಲ್ಸ ಬುಟ್ಟು ಬುಟ್ಟು ಹೋಗಾಕತ್ತಿದ್ರು, ಕೆಲ್ಸ ಅಳತೆ ಪ್ರಕಾರ ಮಾಡಿದ್ರು ಕೂಡ ಜನರನ್ನ ಕೆಲ್ಸಕ್ಕೆ ಬರಲಾರದಂಗ ಮಾಡದರ ಸಲುವಾಗಿ, ಕಡಿಮಿ

ಕೆಲ್ಸ ಮಾಡೀರಿ ಅಂತೇಳಿ ಕಡಿಮಿ ಕೂಲಿ ಕೊಡ್ಲಿಕತ್ತಿದ್ರು. ಆದ್ರೂನ್ ಬಾಳಷ್ಟು ಮಂದಿ ಬುಡ್ಲಾರದಂಗ ಎರಡು ತಿಂಗ್ಳಾ ದುಡಿದ್ವಿ ಕೆಲ್ಸ ಮುಗ್ದು ಎರಡು ಮೂರು ತಿಂಗಳಾದ್ರೂ ದುಡ್ಡ ಹಣ ಕೊಡ್ಲಿಲ್ಲ. ಏನಾರ ಕೇಳಿದ್ರ ಸರಕಾರದಿಂದ ಇನ್ನೂ ರೊಕ್ಕ ಬಂದಿಲ್ಲ ಬಂದ್ ಮ್ಯಾಲ ಕೊಡ್ತೀವಿ ಅಂತಾರ" ಎಂದರು.

ರುಕ್ಕಪ್ಪ ಹೇಳುವ ಮಾತುಗಳು ಇಡೀ ಗ್ರಾಮ ಪಂಚಾಯತಿಯ ಅಧಿಕಾರಿಗಳು ಜನರನ್ನು ವಂಚಿಸುವ ಬಗೆಯನ್ನು ಬಿಚ್ಚಿಡುತ್ತದೆ. ಅಂದರೆ ಉದ್ಯೋಗ ಖಾತರಿ ಯೋಜನೆಯಲ್ಲಿ ಕೆಲಸಗಳನ್ನು ಸಂಪೂರ್ಣವಾಗಿ ನಿರ್ವಹಿಸಿದ್ದರೂ ಸಹ ಅವರನ್ನು ಈ ಕೆಲಸದಿಂದ ದೂರವಿಡುವಂತೆ ಮಾಡಲು ಗ್ರಾಮ ಪಂಚಾಯತಿಯ ಅಧಿಕಾರಿಗಳು ಹಲವಾರು ಕಾರಣಗಳನ್ನು ನೀಡಿ ಕಿರುಕುಳಗಳನ್ನು ನೀಡುತ್ತಿದ್ದಾರೆ. ಹೀಗೆ ಮಾಡುವುದು ತಪ್ಪು. ಯೋಜನೆಯಲ್ಲಿ ಒಂದು ದಿನದ ಕೂಲಿಯನ್ನು ಪಡೆಯಬೇಕೆಂದರೆ ಇಂತಿಷ್ಟು ಕೆಲಸವನ್ನು ಮಾಡಬೇಕು ಎಂದು ಹೇಳುತ್ತದೆ. ಅದೇ ಪ್ರಕಾರವಾಗಿ ಗ್ರಾಮ ಪಂಚಾಯತಿಗಳಲ್ಲಿಯೂ ಕೂಲಿಕಾರರಿಗೆ ಅಳತೆಯ ಪ್ರಕಾರವಾಗಿ ಕೆಲಸಗಳನ್ನು ವಿಂಗಡಿಸಿರುತ್ತದೆ. ಆದರೆ ಹೀಗೆ ವಿಂಗಡಿಸುವ ಸಂದರ್ಭದಲ್ಲಿ ಕೂಲಿಕಾರರಿಗೆ ಎಷ್ಟು ಅಳತೆಯ ಕೆಲಸಗಳನ್ನು ಮಾಡಿದರೆ ಒಂದು ದಿನದ ಸಂಪೂರ್ಣ ಕೂಲಿ ದೊರೆಯುತ್ತದೆ ಎಂಬುದರ ಅರಿವು ಅವರಲ್ಲಿ ಇರುವುದಿಲ್ಲ. ಹಾಗಾಗಿ ಗ್ರಾಮ ಪಂಚಾಯತಿಯ ಅಧಿಕಾರಿಗಳು ಗುರುತಿಸಿದ ಕೆಲಸಗಳನ್ನು ಮಾಡುತ್ತಾರೆ. ಹಾಗೆ ಗುರುತಿಸುವ ಸಂದರ್ಭದಲ್ಲಿ ಹೆಚ್ಚಿನ ಅಳತೆಯ ಕೆಲಸಗಳನ್ನು ಗುರುತಿಸಿದರೂ ಸಹ ಅವರು ಮಾಡಲು ಸಾಮರ್ಥ್ಯವನ್ನು ಹೊಂದಿರುತ್ತಾರೆ. ಇಂತಹ ಸಂದರ್ಭದಲ್ಲಿ ತಮಗೆ ಬೇಕಾದ ಹಾಗೆ ಕೆಲಸಗಳನ್ನು ಗುರುತಿಸಿ ಜನರನ್ನು ವಂಚಿಸುವಂತಹ ಕಾರ್ಯದಲ್ಲಿ ತೊಡಗಿಕೊಂಡಿದ್ದಾರೆ. ಹೀಗೆ ಮಾಡುವಲ್ಲಿಯೂ ಮಹಿಳೆಯರು ಮಾಡಿದಂತಹ ಕೆಲಸಗಳನ್ನು ಬಹು ಬೇಗನೇ ತಿರಸ್ಕರಿಸುವ ಮತ್ತು ಕೂಲಿಯನ್ನು ಕಡಿತಗೊಳಿಸುವ ಸಂದರ್ಭಗಳು ಹೆಚ್ಚಾಗಿವೆ. ಏಕೆಂದರೆ ಮಹಿಳೆಯರಾರು ಅಧಿಕಾರಿಗಳ ವಿರುದ್ಧ ಧ್ವನಿ ಎತ್ತುವುದಿಲ್ಲ ಎಂಬ ಕಾರಣಕ್ಕಾಗಿ. ಇದರಲ್ಲಿಯೂ ಸಹ ಜಾತಿಯಾಧಾರಿತವಾಗಿ ಭಿನ್ನತೆಯು ಕಂಡುಬರುತ್ತದೆ. ಒಟ್ಟಾರೆಯಾಗಿ ಮಹಿಳೆಯರು ಮತ್ತು ಪುರುಷರನ್ನು ಈ ಉದ್ಯೋಗ ಖಾತರಿ ಯೋಜನೆಯಿಂದ ದೂರವಿಡುವುದರ ಸಲುವಾಗಿ ಪಿತೃಪ್ರಧಾನ ವ್ಯವಸ್ಥೆ ಹಲವು ವಿಧಗಳಲ್ಲಿ ಪ್ರಯತ್ನಿಸುತ್ತಿರುತ್ತದೆ.

ಗ್ರಾಮ ಪಂಚಾಯತಿಯ ಉದ್ಯೋಗ ಖಾತರಿ ಯೋಜನೆಯಲ್ಲಿ ಜಾಬ್‌ಕಾರ್ಡ್‌ಗಳನ್ನು ಹೊಂದಿದ್ದರೂ ಇವರಿಗೆ ಯಾವುದೇ ಕೆಲಸಗಳನ್ನು ಕೊಡದೇ ಇರುವುದು ಮತ್ತು ಇವರ ಹೆಸರಲ್ಲಿ ಯಂತ್ರಗಳನ್ನು ಬಳಸಿಕೊಂಡು ಕೆಲಸಗಳನ್ನು ಮುಕ್ತಾಯಗೊಳಿಸಲಾಗುತ್ತದೆ. ಯಂತ್ರಗಳನ್ನು ಬಳಸಿ ಕೆಲಸ ಮಾಡುವುದು ಯೋಜನೆಯ ಪ್ರಕಾರ ತಪ್ಪು. ಹಾಗೆಯೇ ಅದಕ್ಕೆ ಯಾವುದೇ ರೀತಿಯ ಹಣವನ್ನು ಒದಗಿಸಲಾಗುವುದಿಲ್ಲ. ಹಾಗಾಗಿ ಗ್ರಾಮಗಳಲ್ಲಿ ಯಾರು ಗಟ್ಟಿಯಾಗಿ

ಮಾತನಾಡಲು ಆಗುವುದಿಲ್ಲವೋ ಅಂತಹವರ ಹೆಸರಲ್ಲಿ ಜಾಬ್ ಕಾರ್ಡ್‌ಗಳನ್ನು ಮಾಡಿಸಿರುತ್ತಾರೆ. ಮುಖ್ಯವಾಗಿ ಮಹಿಳೆಯರನ್ನು ಅದರಲ್ಲಿಯೂ ದಲಿತ ಮಹಿಳೆಯರನ್ನು ಹಾಗೆಯೇ ತಮ್ಮ ಸಂಬಂಧಿಕರ ಮಹಿಳೆಯರನ್ನು ಇಂತಹ ಕೆಲಸಗಳಿಗೆ ಹೆಚ್ಚಾಗಿ ಬಳಸಿಕೊಳ್ಳುತ್ತಾರೆ. ಇವರಾರೂ ಪುರುಷರ ವಿರುದ್ಧ ಮಾತನಾಡಲು ಮುಂದೆ ಬರುವುದಿಲ್ಲವಾದ್ದರಿಂದ ಇವರ ಹೆಸರಲ್ಲಿಯೇ ಬ್ಯಾಂಕ್ ಖಾತೆಯನ್ನು ತೆಗೆಸಿರುತ್ತಾರೆ. ಅವರ ಖಾತೆಗೆ ಹಣವನ್ನು ಹಾಕುತ್ತಾರೆ. ಈ ಹಣವನ್ನು ಪಡೆಯಲು ಮಹಿಳೆಯರನ್ನು ಬ್ಯಾಂಕ್‌ಗಳಿಗೆ ಕರೆದುಕೊಂಡು ಹೋಗಿ ಅವರಿಂದಲೇ ಹಣವನ್ನು ಬಿಡಿಸಿಕೊಂಡು ಅವರಿಗೆ ಒಂದು ದಿನದ ಕೂಲಿಯಂತೆ ನೂರು ಅಥವಾ ಇನ್ನೂರು ರೂಪಾಯಿಗಳನ್ನು ನೀಡಿ ಕಳುಹಿಸುತ್ತಾರೆ. ಹೀಗೆ ಹಲವು ಗ್ರಾಮ ಪಂಚಾಯತಿಗಳಲ್ಲಿ ನಡೆದಿವೆ. ಹಾಗೆಯೇ ನಡೆಯುತ್ತಲೇ ಇವೆ. ಇದಕ್ಕೆ ಉತ್ತಮ ಉದಾಹರಣೆಯೆಂಬಂತೆ ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನ ಡಣಾಪುರ ಗ್ರಾಮದಲ್ಲಿನ ಪಕ್ಕೀರಮ್ಮ ನವರ ಪ್ರಕರಣ ಕಂಡುಬರುತ್ತದೆ. ಇವರು ಹೇಳುವ ಹಾಗೆ "ಗ್ರಾಮ ಪಂಚಾಯತಿಯಾಗ ಉದ್ಯೋಗ ಖಾತರಿ ಯೋಜನದಾಗ ಕಲ್ಸ ಸಿಗತೈತಿ ಅಂತ ನಮ್ಮೂರಿನ ಮೆಂಬರ್ ಹೇಳಿದ್ರು, ಅವರೇ ಬಂದು ಒಂದು ಅರ್ಜಿ ತುಂಬಿಸಿಕೆಂಡು ಹೋದ್ರು, ಸ್ವಲ್ಪ ದಿನ ಆದ ಮ್ಯಾಲ ಬ್ಯಾಂಕಿನಾಗ ಒಂದು ಅಕೌಂಟ್ ಮಾಡಿಸಬೇಕು ಅಂತ ಹೇಳಿದ್ರು, ಆದ್ರ ನನ್ನಹತ್ರ ದುಡ್ಡಿರಲಿಲ್ಲ. ಹಂಗಾಗಿ ನಾನು ಮಾಡಿಸಾಕ ಆಗುದಿಲ್ಲ ಅಂತ ಹೇಳಿದೆ. ಆದ್ರ ಮೆಂಬರ್ ನಾನೇ ದುಡ್ಡು ಕೊಡತ್ತೀನಿ ನೀನು ಒಂದು ಪೋಟೋ ತಗೊಂಡು ಬರಬೇಕು ಅಂದ್ರು, ಅದರಂಗ ಅವರೇ ದುಡ್ಡು ಕೊಟ್ಟು ಅಕೌಂಟ್ ಮಾಡಿಸಿದ್ರು, ಎರಡು ಮೂರು ತಿಂಗಳಾತು ಕೆಲ್ಸಾನೇ ಕೊಡಲಿಲ್ಲ. ಮೆಂಬರ್‌ಗ ಕೆಲ್ಸ ಕೇಳಿದ್ರ ಈಗ ಕೆಲ್ಸ ನಡೀಯಕತ್ತೇತಿ ಅದು ನಿಮ್ಮಂತೋರು ಮಾಡುವಂಹದ್ದಲ್ಲ. ಅದನ್ನ ಮಿಷಿನ್ನಿಲೇ ಮಾಡಿಸ್ಬೇಕು. ಅದಾದ್ ಮ್ಯಾಲ ನಿಮ್ಗ ಕೆಲ್ಸ ಸಿಗತೈತಿ ಅಂದರು. ನಾವೂ ಸುಮ್ಮನಾದ್ವಿ, ಅದಾಗಿ ಒಂದು ತಿಂಗಳಿಗೆ ನಮ್ಮೂರಿನ ಮೆಂಬರ್ ನನ್ನ ಕರ್ದು ನೀನು ಬ್ಯಾಂಕಿಗೆ ಬಂದು ದುಡ್ಡು ಬಿಡಿಸಿ ಕೊಡ್ಬೇಕು ಅಂತ ಹೇಳಿದ್ರು, ನಾನು ಯಾವುದು ಅಂತ ಕೇಳಲಿಲ್ಲ. ಅಂಗೆ ಬ್ಯಾಂಕಿಗೆ ಹೋಗಿ ಬಿಡಿಸಿಕೊಟ್ಟೆ. ಅದಕ್ಕ ನನಗ ಇನ್ನೂರು ರೂಪಾಯಿ ಕೊಟ್ರು, ಅದನ್ನ ತಗೊಂಡು ಬಂದೆ. ಆಮ್ಯಾಲ ಗೊತ್ತಾತು. ಪಂಚಾತಿ ಕೆಲ್ಸಾನ ನಾವೇ ಮಾಡ್ಬೇಕು ಮಷಿನ್ನಿಂದ ಮಾಡಿಸಂಗಿಲ್ಲ ಅಂತ. ನಾವು ಕೆಲ್ಸ ಇಲ್ಲ ಅಂತ ಕೆಲ್ಸ ಹುಡಿಕೆಂಡು ಊರೂರು ತಿರಗಕತ್ತೀವಿ. ಆದ್ರ ಇವರು ಇಲ್ಲೆ ಕೆಲ್ಸ ಇದ್ರೂ ನಮಗ ಕೆಲ್ಸ ಕೊಡಲಾರ್ದಂಗ ಮೋಸ ಮಾಡ್ತಾರ. ಇವರಿಗೆ ಮೋಸ ಮಾಡಾದಕ್ಕ ನಾವೇ ಆಗಬೇಕೇನೂ. ಅದೇ ಗಣಮಕ್ಕಳ ಹೆಸರಿಗೆ ಅಕೌಂಟ್ ಮಾಡ್ಸಿ ತಗೋಳಾಕ ಅವರಿಗೆ ಧೈರ್ಯ ಇಲ್ಲ. ಹಂಗಾಗಿ ನಮ್ಮ ಹೆಸರಿಲೆ ಮಾಡ್ಸಿ ದುಡ್ಡು ಎತ್ತಿಗೆಂತಾರ. ಇವರು ಬ್ಯಾರೆ ಯಾವದ್ರಾಗಾದ್ರೂ ದುಡ್ಡು ತಿನ್ನಬಾರ್ದ ಕೂಲಿ ಕೆಲ್ಸದಾಗೆ ತಿನ್ನಬೇಕಾ" ಎಂದು ಹೇಳಿದರು.

ಉದ್ಯೋಗ ಖಾತರಿ ಯೋಜನೆಯಲ್ಲಿ ಹಣದ ದುರುಪಯೋಗಕ್ಕಾಗಿ ಮಹಿಳೆಯರನ್ನೇ ಬಳಸಿಕೊಳ್ಳುತ್ತಿರುವುದನ್ನು ಇವರು ಸೂಚ್ಯವಾಗಿ ತಿಳಿಸಿಕೊಡುತ್ತಾರೆ. ಇವರು ಎತ್ತುವ ಮುಖ್ಯ ಪ್ರಶ್ನೆ ಹೀಗೆ ದುರುಪಯೋಗಪಡಿಸಿಕೊಳ್ಳಲು ಮಹಿಳೆಯರನ್ನೇ ಯಾಕೆ ಬಸಿಕೊಳ್ಳುತ್ತೀರಿ ಎಂಬುದು. ಅಂದರೆ ವ್ಯವಸ್ಥೆಯಲ್ಲಿ ಪುರುಷಶಾಹಿ ಚಿಂತನೆಗಳು ಯಾವಾಗಲೂ ಮಹಿಳೆಯರನ್ನೇ ಬಳಸಿಕೊಳ್ಳಲು ಹಾತೊರೆಯುತ್ತಿರುತ್ತದೆ. ಹಾಗಾಗಿ ಮಹಿಳೆಯರನ್ನೇ ವಂಚಿಸಲು ಮುಂದಾಗುತ್ತದೆ. ಗ್ರಾಮೀಣ ಬಾಗಗಳಲ್ಲಿ ಕೆಲಸಗಳು ದೊರೆಯುವುದೇ ಕಷ್ಟ. ಅಂತಹ ಸಂದರ್ಭದಲ್ಲಿ ಉದ್ಯೋಗ ಖಾತರಿ ಯೋಜನೆಯು ಕೆಲಸ ಕೊಡುತ್ತದೆ ಎಂಬ ಆಶಾ ಭಾವನೆ ಜನರಲ್ಲಿ ಇರುತ್ತದೆ. ಆದರೆ ಗ್ರಾಮ ಪಂಚಾಯತಿ ಸದಸ್ಯರು ಮತ್ತು ಇನ್ನುಳಿದ ಅಧಿಕಾರಿ ವರ್ಗದವರು ಈ ಯೋಜನೆಯನ್ನು ದುರುಪಯೋಗ ಪಡಿಸಿಕೊಳ್ಳಲು ಹಾತೊರೆಯುತ್ತಿದ್ದಾರೆ. ಹಾಗಾಗಿ ಕೆಲಸಗಳನ್ನು ಯಂತ್ರಗಳಿಂದ ಮಾಡಿಸಲು ಮುಂದಾಗುತ್ತಾರೆ. ಹೀಗೆ ಮಾಡುವುದರಿಂದ ಗ್ರಾಮೀಣ ಭಾಗದ ಜನರು ಯಾವುದೇ ರೀತಿಯಲ್ಲಿ ಆರ್ಥಿಕವಾಗಿ ಸುಭದ್ರರಾಗಲು ಸಾಧ್ಯವಿಲ್ಲ.

ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕಿನ ಹಿರೇಕೊಟ್ನೆಕಲ್ ಗ್ರಾಮದ ನರಸಮ್ಮ ಹೇಳುವಂತೆ "ಯೋಜನೆಯಾಗ ದುಡುದು ಆದ ಮೂರು ನಾಕು ತಿಂಗಳಾದ ಮ್ಯಾಲ ಕೂಲಿ ಕೊಡ್ತಾರ. ಹಿಂಗ ಯಾಕ ಕೂಲಿ ಕೊಡಾಕ ಲೇಟ್ ಮಾಡತಾರಂದ್ರೆ, ಜನ್ರಿಗೆ ಕೇಳಿದ ಟೈಮಿಗೆ ಕೆಲ್ಸ ಕೊಟ್ಟು, ಹದಿನೈದು ದಿನದಾಗ ಕೂಲಿ ಕೊಟ್ಟು ಬುಟ್ರೆ ಜನ ಈ ಪಂಚಾಯ್ತಿ ಕೆಲ್ಸಕ್ಕ ಗಂಟು ಬುಳ್ತಾರ. ಇದರಿಂದಾಗಿ ನಮ್ಗೆ ತಲೆನೋವು ಅಂತ ಅನ್ನೋದು ಒಂದಾದ್ರೆ, ಇನ್ನೊಂದು, ಜನ್ರಿಗೆ ಕೆಲ್ಸ ಕೊಟ್ಟು, ಕೆಲ್ಸ ಮಾಡಸಾದ್ರಿಂದ ಪಂಚಾಯ್ತಿ ಅಧಿಕಾರಿಗಳಿಗೆ, ಅಧ್ಯಕ್ಷರಿಗೆ ಮತ್ತೆ ಮೆಂಬಾರಿಗೆ ಯಾವುದೇ ಲಾಭ ಇಲ್ಲ. ಅದೇ 'ಜನ್ರಿಗೆ ಕೆಲ್ಸ ಕೊಡ್ಲಾರದಂಗ ಜೆಸಿಬಿಯಿಂದ ಕೆಲ್ಸ ಮಾಡ್ಸಿದ್ರೆ' ಲಕ್ಷ ಲಕ್ಷ ಲಾಭ ಬರ್ತಾದ ಅನ್ನುವಂತ ಭಾವನೆ ಐತಿ. ಹಂಗಾಗಿ ಪಂಚಾಯ್ತಿ ಅಧಿಕಾರಿಗಳಾಗಲಿ, ಮೆಂಬರಾಗಲಿ ಕಾಳಜಿ ವಹಿಸಿ ಕೆಲಸ ಮಾಡಾಂಗಿಲ್ಲ. ನೀವು ನಿಮ್ಮ ಸಂಘಟನೆವತಿಯಿಂದ ಕೆಲಸಕ್ಕಾಗಿ ಆಗಲಿ, ದುಡದಂತ ಕೂಲಿ ಸಲುವಾಗಿ ಆಗಲಿ ಅಥವಾ ನಿರುದ್ಯೋಗ ಭತ್ಯೆ ಸಲುವಾಗಿ ಏನಾದ್ರು ಹೋರಾಟಗಳನ್ನು ಮಾಡಿದ್ದೀರಾ? ಎಂದು ಪ್ರಶ್ನೆ ಮಾಡಿದಾಗ ಹೌದು ಸಾರ್ ನಾವು ಬಾಳಷ್ಟು ಸಲ ಹೋರಾಟ ಮಾಡೀವಿ. ಒಂದ್ಸಲ ನಮ್ ಪಂಚಾಯ್ತಿಯಾಗ ದುಡದಂತ ಕೂಲಿ ಹದಿನೆಂಟು ಲಕ್ಷ ಕೂಲಿ ಬರಬೇಕಿತ್ತು. ನಾಲ್ಕೈದು ತಿಂಗಳ ದಿನಮಾನ ಆದ್ರೂ ಕೂಲಿ ಕೊಟ್ಟಿರಲಿಲ್ಲ. ಆವಾಗ ನಾವು ತಾಲೂಕ ಪಂಚಾಯ್ತಿ ಮುಂದ ಅನಿರ್ದಿಷ್ಟಾವದಿ ಧರಣಿ ಮಾಡಿ ಕೂಲಿ ಪಡಕಂಡೀವಿ. ಮತ್ತೆ ಒಂದ್ಸಲ ಜಾನೇಕಲ್ ಪಂಚಾಯ್ತಿಯಾಗ ಸುಮಾರು ಇಪ್ಪತ್ತು ಲಕ್ಷದಷ್ಟು ಅವ್ಯವಹಾರ ಮಾಡಿದ್ರು, ಇದನ್ನು ಬಯಲಿಗೆ ಎಳದು ಅಧಿಕಾರಿಗಳಿಗೆ ದಂಡ ಹಾಕ್ಸೀವಿ. ಮತ್ತೆ ಜನ್ರಿಗೆ ಕೂಲಿ ಕೊಡ್ಸಿವಿ. ಇಷ್ಟೇ ಅಲ್ಲ ನಾವು ಹೋರಾಟ ಮಾಡಿ ನಿರುದ್ಯೋಗ ಭತ್ಯ ತಗಂಡೀವಿ

ಮತ್ತೆ ಮಾಡಿದಂತ ಕೂಲಿ ಲೇಟ್ ಮಾಡಿದ ಸಲುವಾಗಿ ಡಿಲೇ ಪೇಮೆಂಟ್‌ಗೆ ಅರ್ಜಿ ಹಾಕಿ, ಹೋರಾಟ ಮಾಡಿ ಡಿಲೇ ಪೇಮೆಂಟ್ ತಗಂಡೀವಿ. ನಾವು ಬಾಳಸಲ ಪಂಚಾಯ್ತಿ ಮುಂದ, ತಾಲೂಕ ಪಂಚಾಯ್ತಿ ಮುಂದ ಮತ್ತೆ ಜಿಲ್ಲಾ ಪಂಚಾಯ್ತಿ ಮುಂದ ಧರಣಿ ಮಾಡೀವಿ. ಹೋರಾಟ ಮಾಡೀವಿ. ಮತ್ತೆ ಬೆಂಗ್ಳೂರಾಗ ರಾಜ್ಯ ಮಟ್ಟದ ಹೋರಾಟ, ರ‍್ಯಾಲಿ ಇದ್ರೆ ಅಲ್ಲಿಗೆ ಹೋಗಿ ಹೋರಾಟ ಮಾಡೀವಿ. ಹಂಗಾಗಿ ಇವತ್ತು ಹಿರೇಕೊಟ್ನೇಕಲ್, ಜಾನೇಕಲ್ ಮತ್ತೆ ಬಾಗಲವಾಡ ಪಂಚಾಯ್ತಿ ಅಂದ್ರೆ ಅಧಿಕಾರಿಗಳು ಹೆದ್ರರ್ತಾರ. ಮತ್ತೆ ಇಡೀ ಜಿಲ್ಲೆಯಲ್ಲಿ ಹೆಚ್ಚು ಕೆಲ್ಸ ಆದಂತ ಪಂಚಾಯ್ತಿಗಳಂದ್ರೆ ಇದೇ ಪಂಚಾಯ್ತಿ ನೋಡ್ರಿ" ಎಂದು ಹೇಳಿದರು.

ನರಸಮ್ಮ ಇಲ್ಲಿ ಒಂದು ಸಂಘಟನೆಯ ಸದಸ್ಯರಾಗಿದ್ದಾರೆ. ಆ ಕಾರಣಕ್ಕಾಗಿ ಉದ್ಯೋಗ ಖಾತರಿ ಯೋಜನೆಯಲ್ಲಿ ದುಡಿದಂತಹ ಕೂಲಿಯನ್ನು ಪಡೆಯಲು ನಾನಾ ರೀತಿಯ ಹೋರಾಟಗಳನ್ನು ಮಾಡಬೇಕಾಯಿತು. ಮುಖ್ಯವಾಗಿ ಸ್ಥಳೀಯ ಪಿತೃ ಪ್ರಧಾನ ವ್ಯವಸ್ಥೆ ಮಹಿಳೆಯರು ದುಡಿದಂತಹ ಕೂಲಿಯನ್ನು ಕೊಡದೆ ತೊಂದರೆ ಕೊಡುತ್ತಿದ್ದರಿಂದ ನರಸಮ್ಮ ತನ್ನ ಸಂಘಟನೆಯ ಮುಖಾಂತರ ಕೂಲಿಯ ಹಣವನ್ನು ಪಡೆದಿದ್ದಾರೆ. ಒಂದುವೇಳೆ ನರಸಮ್ಮ ಸಂಘಟಿತರಾಗಿಲ್ಲದಿದ್ದರೆ ಅವರು ತಾವು ದುಡಿದ ಕೂಲಿಯನ್ನು ಪಡೆಯಲು ಸಾಧ್ಯವಾಗುತ್ತಿರಲಿಲ್ಲ. ಏಕೆಂದರೆ ಮಹಿಳೆಯರು ಒಂಟಿಯಾಗಿ ಹೋರಾಟಕ್ಕಿಳಿದರೆ ಅವರು ನಾನಾ ಬಗೆಯ ಸಮಸ್ಯೆಗಳಿಗೆ ಗುರಿಯಾಗಬೇಕಾಗುತ್ತದೆ. ಆ ಕಾರಣಕ್ಕಾಗಿ ಒಬ್ಬೊಬ್ಬರಾಗಿ ಹೋರಾಟಕ್ಕೆ ಇಳಿಯದೆ ಸಂಘಟಿತ ಪ್ರಯತ್ನಕ್ಕೆ ಮುಂದಾಗುತ್ತಾರೆ. ಮಹಿಳೆಯರು ಸಂಘಟಿತರಾಗಿ ಹೋರಾಟ ಮಾಡಿದಾಗಲೂ ಅವರಿಗೆ ತಕ್ಷಣದಲ್ಲಿ ಪರಿಹಾರ ದೊರೆಯುತ್ತದೆ ಎಂದು ಹೇಳಲಾಗುವುದಿಲ್ಲ. ಹಾಗಾಗಿ ಮಹಿಳೆಯರು ಸಂಘಟಿತರಾಗಿ ಹಲವಾರು ದಿನಗಳ ಕಾಲ ಹೋರಾಟ ಮಾಡಬೇಕಾಗುತ್ತದೆ ನಂತರ ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳಬೇಕಾಗುತ್ತದೆ.

ಕೆಲವು ಸಂದರ್ಭಗಳಲ್ಲಿ ಗ್ರಾಮ ಪಂಚಾಯತಿ ಅಧ್ಯಕ್ಷತೆಯನ್ನು ಮಹಿಳೆಯರು ವಹಿಸಿಕೊಂಡಿದ್ದರೆ ಅಂತಹ ಸಂದರ್ಭದಲ್ಲಿ ಗ್ರಾಮದ ಜನರು ಅವರನ್ನು ನೋಡುವ ಬಗೆಯೇ ಬೇರೆಯಾಗಿರುತ್ತದೆ. ಮುಖ್ಯವಾಗಿ ಗ್ರಾಮ ಪಂಚಾಯತಿ ಸದಸ್ಯರು ಮತ್ತು ಅಧಿಕಾರಿ ವರ್ಗದವರು ಉದ್ಯೋಗ ಖಾತರಿ ಯೋಜನೆಯಲ್ಲಿ ಜನರಿಗೆ ಕೆಲಸಗಳನ್ನು ಕೊಡದೆ ಯಂತ್ರಗಳಿಂದ ಕೆಲಸಗಳನ್ನು ಪೂರ್ಣಗೊಳಿಸಿ ತಮ್ಮಲ್ಲಿಯೇ ಇರುವಂತಹ ಜನರ ಜಾಬ್ ಕಾರ್ಡ್‌ಗಳಿಗೆ ಹಣವನ್ನು ಹಾಕಿಸಿಕೊಂಡು ಅವರಿಂದ ಜನಪ್ರತಿನಿಧಿಗಳು ಹಣ ವಸೂಲಿ ಮಾಡಿಕೊಳ್ಳುತ್ತಿದ್ದರು. ಹಣವನ್ನು ಬಿಡಿಸಿಕೊಟ್ಟ ಮಹಿಳೆಯರಿಗೆ ಐದು ನೂರು ರೂಪಾಯಿಗಳನ್ನು ಕೊಡುತ್ತಿದ್ದರು. ಆದರೂ ಸಹ ಇಷ್ಟಕ್ಕೆ ಸುಮ್ಮನಿರುತ್ತಿದ್ದರು. ಇದಕ್ಕೆ ಬಳ್ಳಾರಿ ಜಿಲ್ಲೆಯ ಸಂಡೂರು ತಾಲೂಕಿನ ನರಸಿಂಗಪುರ ಗ್ರಾಮದ ಎಂ.ನಿರ್ಮಲ ಎಂಬುವವರ ಹೇಳಿಕೆ ಉತ್ತಮ ಉದಾಹರಣೆಯಾಗಿದೆ.

ಇವರು ಗ್ರಾಮ ಪಂಚಾಯತಿಯ ಅಧ್ಯಕ್ಷರಾಗಿದ್ದರು. ಇವರು ಹೇಳುವಂತೆ "ನಾನು ಅಧ್ಯಕ್ಷೆಯಾದಂತ ಟೈಮಿನ್ಯಾಗ ಊರಿನ ಜನ್ರದು ಬಾಳಾ ಕಿರಿಕಿರಿಯಾಗಿತ್ತು. ಮೊದ್ಲು ಅಧ್ಯಕ್ಷರಾದಂತವರು ಊರಾಗಿನ ಎಲ್ಲಾ ಜನ್ರ ಜಾಬ್‌ಕಾರ್ಡ್ ಪಂಚಾಯ್ತಿಯಾಗ ಇಟ್ಟಿದ್ರು, ಜನ ಬೆಳಕರ್ದೆ ಸಾಕು ನಮ್ ಮನೀಗೆ ಬರ್ತಿದ್ರು, ನಮ್ ಅಕೌಂಟ್‌ನ್ಯಾಗ ರೊಕ್ಕ ಬಿದ್ದಾವಂತ ನಮ್ಗ ಅಕೌಂಟ್ ಬುಕ್ಕ ಕೊಡ್ರಂತೇಳಿ ಕೇಳ್ತಿದ್ರು, ಅದೆಂಗ ಕೆಲ್ಸ ಮಾಡ್ಲಾರದ ನಿಮ್ ಅಕೌಂಟ್‌ನ್ಯಾಗ ರೊಕ್ಕ ಬೀಳ್ತಾವ ಅಂದ್ರೆ ಜನ ಕೇಳ್ತಿದ್ದಿಲ್ಲ. ಇಲ್ಲ ನೀವು ಸುಳ್ಳು ಹೇಳ್ತೀರಿ? ಯಾಕಂದ್ರ ನಾವು ಮೊದ್ಲೆಲ್ಲ ಯಾವತ್ತು ಪಂಚಾಯ್ತಿ ಕೆಲ್ಸ ಮಾಡಿಲ್ಲ. ಆದ್ರೂನ್ ನಮ್ ಹೆಸರಮ್ಯಾಗ ರೊಕ್ಕ ಬೀಳ್ತಿದ್ವು, ನಾವೇ ಪಂಚಾಯ್ತಿಯವರಿಗೆ ಎಷ್ಟೋ ಸಲ ರೊಕ್ಕ ಎತ್ತಿಕೊಟ್ಟೇವಿ. ಹಂಗಾಗಿ ಇವಾಗ ನಮ್ ಬುಕ್ಕಿನ್ಯಾಗ ರೊಕ್ಕ ಬಿದ್ದಾವ. ನೀವು ನಮ್ಗ ಗೊತ್ತಾಗಲಾರದಂಗ ಎತ್ತಿಗೆಂಡು ತಿನ್ನಬೇಕಂತ ಮಾಡೀರಿ ಎಂದು ಪ್ರಶ್ನೆ ಮಾಡ್ತಿದ್ರು, ಎಷ್ಟು ತಿಳಿಸಿ ಹೇಳಿದ್ರು ಕೇಳ್ತಿದ್ದಿಲ್ಲ. ಆಮ್ಯಾಲೆ ಸ್ವಂತ ನಾನೇ ಮುಂದ ನಿಂತು ಊರಾಗಿನ ಪ್ರತಿಯೊಂದು ಕುಟುಂಬಕ್ಕೆ ಜಾಬ್‌ಕಾರ್ಡ್ ಮಾಡ್ಸಿ, ಪ್ರತಿಯೊಂದು ಮನೆಗೆ ಹಂಚಬೇಕಂತೇಳಿದೆ. ಅವಾಗ ನಮ್ ಪಂಚಾಯ್ತಿ ಸಿಬ್ಬಂದಿ ಮನಿ ಮನಿಗೆ ಹೋಗಿ ಹಂಚ್ಯಾರ. ಅವಾಗಲಿಂದ ಯಾರು ನಮ್ ಮನೀಗೆ ಬರಾದಿಲ್ಲ. ಯಾಕಂದ್ರ ಜಾಬ್‌ಕಾರ್ಡ್ ಪಂಚಾಯ್ತಿಯಾಗ ಐದಾವಂದ್ರೆ ಇವರು ರೊಕ್ಕ ಎತ್ತಿಗೆಂತಾರಂತ ಜನ್ರಿಗೆ ಲೆಕ್ಕಚಾರ. ಯಾಕಂದ್ರೆ ಮೊದ್ಲು ಇದ್ದಂತ ಅಧ್ಯಕ್ಷರು ಆ ರೀತಿಯಾಗಿ ಮಾಡಿ ಹೋಗಿದ್ರು. ಹಂಗಾಗಿ ಜನ ಅನುಮಾನದಿಂದ ನೋಡ್ತಾರ" ಎಂದು ಹೇಳಿದರು. ಮುಖ್ಯವಾಗಿ ಸಂಡೂರು ತಾಲೂಕು ಗಣಿಗಾರಿಕೆಗೆ ಹೆಸರಾಗಿದ್ದು. ಗಣಿಗಾರಿಕೆಗಳು ನಡೆಯುತ್ತಿದ್ದಂತಹ ಸಂದರ್ಭದಲ್ಲಿ ಜನರಿಗೆ ಈ ಉದ್ಯೋಗ ಖಾತರಿ ಯೋಜನೆಯ ಬಗ್ಗೆ ಯೋಚನೆಯೇ ಇರಲಿಲ್ಲ. ಏಕೆಂದರೆ ಗಣಿಗಾರಿಕೆಯಲ್ಲಿ ಒಬ್ಬ ಮಹಿಳೆ ಒಂದು ದಿನಕ್ಕೆ ೭೦೦ ರಿಂದ ೮೦೦ ರೂಪಾಯಿಗಳವರೆಗೆ ದುಡಿಯುತ್ತಿದ್ದಳು. ಅಂತಹ ಸಂದರ್ಭದಲ್ಲಿ ೧೭೪ ರೂಪಾಯಿಯ ಉದ್ಯೋಗ ಖಾತರಿ ಯೋಜನೆಯ ಕೆಲಸಕ್ಕೆ ಯಾರೂ ಬಂದಿಲ್ಲ. ಅಂತಹ ಸಂದರ್ಭದಲ್ಲಿ ಗ್ರಾಮ ಪಂಚಾಯತಿ ಅಧ್ಯಕ್ಷರು ತನ್ನ ಗ್ರಾಮದ ಎಲ್ಲ ಜನರ ಹೆಸರಿನ ಮ್ಯಾಲೆ ಉದ್ಯೋಗ ಕಾರ್ಡನ್ನು ಮಾಡಿಸಿ ತನ್ನ ಬಳಿ ಇರಿಸಿಕೊಂಡಿದ್ದಾರೆ. ಉದ್ಯೋಗ ಕಾತರಿ ಯೋಜನೆಯ ಕಾಮಗಾರಿಗಳು ಮುಗಿದ ನಂತರ ಹಣ ಪಡೆಯುವುದರ ಸಲುವಾಗಿ ಜನರ ಜಾಬ್ ಕಾರ್ಡ್‌ಗಳನ್ನು ಬಳಸಿಕೊಂಡಿದ್ದಾರೆ. ಜನರನ್ನು ಬ್ಯಾಂಕಿಗೆ ಕರೆಯಿಸಿ ಹಣ ಬಿಡಿಸಿಕೊಂಡಿದ್ದಾರೆ. ಹಣವನ್ನು ಬಿಡಿಸಿಕೊಟ್ಟ ಜನರಿಗೆ ೫೦೦ ರೂಪಾಯಿಗಳನ್ನು ಕೊಡುತ್ತಿದ್ದರು. ಇಲ್ಲಿನ ಜನರು ಇಷ್ಟಕ್ಕೇ ಸುಮ್ಮನಾಗುತ್ತಿದ್ದರು. ಕೆಲವು ವರ್ಷಗಳ ನಂತರ ಗಣಿಗಾರಿಕೆ ನಿಂತಿತು. ಆಗ ಜನರಿಗೆ ಉದ್ಯೋಗ ಇಲ್ಲದಂತಾಯಿತು. ಜನರು ಉದ್ಯೋಗ ಖಾತರಿಯನ್ನೇ ಅವಲಂಬಿಸಬೇಕಾಗಿ ಬಂದಿತು. ಆ ಸಂದರ್ಭದಲ್ಲಿ ನಿರ್ಮಲರವರು ಗ್ರಾಮ

ಪಂಚಾಯತಿಯ ಅಧ್ಯಕ್ಷರಾಗಿದ್ದರು. ಆಗ ಅವರು ಹಲವಾರು ಬಗೆಯಲ್ಲಿ ಹಿಂಸೆಯನ್ನು ಅನುಭವಿಸಿದ್ದಾರೆ. ಇದಕ್ಕೆ ಕಾರಣ ಈ ಹಿಂದೆ ಇದ್ದಂತಹ ಗ್ರಾಮ ಪಂಚಾಯತಿ ಅಧ್ಯಕ್ಷರು. ಇವರು ಮಾಡಿದ ಕೆಲಸಕ್ಕೆ ನಿರ್ಮಲರವರು ಹಿಂಸೆಯನ್ನು ಅನುಭವಿಸದ್ದನ್ನು ವಿವರಿಸಿದ್ದಾರೆ.

ಒಟ್ಟಾರೆಯಾಗಿ ಉದ್ಯೋಗ ಖಾತರಿ ಯೋಜನೆಯಲ್ಲಿ ಹಲವಾರು ತೊಡಕುಗಳಿದ್ದು ಅವುಗಳಿಂದ ಮಹಿಳೆಯರಿಗೆ ಹೆಚ್ಚಿನ ರೀತಿಯಲ್ಲಿ ಹಿಂಸೆಗಳು ಸಂಭವಿಸುತ್ತಿರುವುದನ್ನು ಪ್ರಕರಣಗಳ ಮೂಲಕ ತಿಳಿದುಕೊಳ್ಳಲಾಗಿದೆ. ಅಂದರೆ ಯೋಜನೆಯ ಪ್ರತೀ ಹಂತದಲ್ಲಿಯೂ ಮಹಿಳೆಯರನ್ನು ಕಡೆಗಾಣಿಸಿರುವುದು ಕಂಡುಬರುತ್ತದೆ. ಕೆಲವು ಸಂದರ್ಭಗಳಲ್ಲಿ ಪುರುಷರು ಕೆಲಸವನ್ನು ಮಹಿಳೆಯರಿಗೆ ಹಂಚಿದ್ದಾರಾದರೂ ಅದರಿಂದ ಬಂದಂತಹ ಪ್ರತಿಫಲಕ್ಕೆ ಪುರುಷರೇ ಫಲಾನುಭವಿಗಳಾಗಿದ್ದಾರೆ. ಎಲ್ಲಾ ಕ್ಷೇತ್ರಗಳಲ್ಲಿ ಇರುವಂತೆ ದುಡಿಮೆಯ ಕ್ಷೇತ್ರದಲ್ಲಿಯೂ ಕೂಡ ಸಮಕಾಲೀನ ಪಿತೃ ಪ್ರಧಾನತೆಯು ಮಹಿಳೆಯರ ವಿಚಾರದಲ್ಲಿ ತನ್ನದೇ ಆದಂತಹ ಒಂದು ರಕ್ಷಣಾತ್ಮಕ ಹೊಂದಾಣಿಕೆಯನ್ನು ಮಾಡಿಕೊಂಡಿರುತ್ತದೆ. ಮಹಿಳೆಯರು ಉದ್ಯೋಗಗಳಲ್ಲಿ ತೊಡಗಬೇಕು ಆ ಮೂಲಕ ಅವರು ಸಬಲರಾಗಬೇಕು ಎಂದು ಹೇಳಿಕೊಳ್ಳುತ್ತಲೇ ತನ್ನ ಯಾಜಮಾನ್ಯದ ಬೇರುಗಳನ್ನು ಬಲಪಡಿಸಿಕೊಳ್ಳುತ್ತಿರುತ್ತದೆ. ಉದ್ಯೋಗದ ಸಂದರ್ಭದಲ್ಲಿ ತನ್ನ ಪ್ರತಿನಿಧಿಯಾಗಿ ಮಹಿಳೆಯನ್ನು ಪ್ರತಿಷ್ಠಾಪಿಸುವುದರ ಮೂಲಕ ತನ್ನ ಹಿತಾಸಕ್ತಿಗಳನ್ನು ಪೂರೈಸಿಕೊಳ್ಳುತ್ತಿರುತ್ತದೆ. ಇದಕ್ಕೆ ಮಹಿಳೆಯರು ಬಹಳ ಸುಲಭವಾಗಿ ಬಲಿಯಾಗುತ್ತಿದ್ದಾರೆ. ಉದ್ಯೋಗ ಖಾತರಿ ಯೋಜನೆಯ ಕಾಮಗಾರಿಗಳ ಅನುಷ್ಠಾನದ ಸಂದರ್ಭದಲ್ಲಾಗಲೀ, ಯೋಜನೆಯನ್ನು ರೂಪಿಸುವ ಹಂತದಲ್ಲಾಗಲೀ ಹಾಗೆಯೇ ಕಾಮಗಾರಿ ಸ್ಥಳಗಳಲ್ಲಾಗಲೀ ಮಹಿಳೆಯರನ್ನು ತುಂಬಾ ಕೀಳಾಗಿ ಕಾಣುತ್ತಿರುವುದು ಕಂಡುಬಂದಿದೆ. ಹಾಗೆಯೇ ದಲಿತ ಸಮುದಾಯದ ಮಹಿಳೆಯರ ವಿಚಾರದಲ್ಲಂತೂ ಈ ಅಸಮಾನತೆ ಎಂಬುದು ತುಂಬಾ ತೀವ್ರತೆಯನ್ನು ಪಡೆದುಕೊಂಡಿದೆ. ಪ್ರತೀ ಹಂತದಲ್ಲಿಯೂ ಪುರುಷಶಾಹಿ ಚಿಂತನೆಗಳು ಮಹಿಳೆಯರನ್ನು ಸದಾಕಾಲ ನಿರ್ದೇಶಿಸುತ್ತಾ ಬರಲಾಗಿದ್ದು ಅದರ ಮೇಲೆ ತನ್ನ ನಿಯಂತ್ರಣವನ್ನು ಸಾಧಿಸುತ್ತಲೇ ಬಂದಿದೆ.

ಉದ್ಯೋಗ ಖಾತರಿ ಯೋಜನೆಗೆ ಸಂಬಂಧಿಸಿದಂತೆ ಮತ್ತು ಮಹಿಳೆಯರ ದುಡಿಮೆಗೆ ಸಂಬಂಧಿಸಿದಂತೆ ಹಲವಾರು ಬಗೆಯ ಚರ್ಚೆಗಳು ನಡೆಯುತ್ತಲೇ ಇವೆ. ಇಲ್ಲಿ ಮುಖ್ಯವಾಗಿ ಇನ್ನೊಂದು ಅಂಶವನ್ನು ಗಮನಿಸಬೇಕಾಗುತ್ತದೆ. ಈ ಯೋಜನೆಯ ಕೆಲಸ ಅಸಂಘಟಿತ ವಲಯಕ್ಕೆ ಸೇರಿದುದಾಗಿದೆ. ಹಾಗಾಗಿ ಇಲ್ಲಿ ಉದ್ಯೋಗಿಗಳಿಗೆ ಯಾವುದೇ ಭದ್ರತೆಯ ಪ್ರಶ್ನೆ ಎದುರಾಗುವುದಿಲ್ಲ ಮತ್ತು ಈ ವಲಯದಲ್ಲಿ ಸಂಘಟಿತರಾಗಲೂ ವ್ಯವಸ್ಥೆ ಬಿಡುವುದಿಲ್ಲ. ಇದು ಕೆಲಸಗಳನ್ನು ರೂಪಿಸುವ ಹಂತದಿಂದ ಹಿಡಿದು ಸಮಾನ ಅವಕಾಶ, ಸಮಾನ ವೇತನ, ಸಮಾನ ಸೌಲಭ್ಯಗಳು ಹೀಗೆ ಎಲ್ಲ ಕಡೆಯೂ ಹರಡಿದೆ. ಹಾಗಾಗಿ ಮಹಿಳೆಯರು

ಸಂಘಟಿತರಾದರೂ ಸಹ ಅದು ಶಾಶ್ವತವಾಗಿ ನಿಲ್ಲುವಂತಹದ್ದಲ್ಲ. ಏಕೆಂದರೆ ಈ ಸಂಘಟಿತತೆಯನ್ನೂ ಸಹ ಒಡೆಯುವಂತಹ ಆಲೋಚನೆಗಳು ಸುತ್ತಮುತ್ತಲಿನಲ್ಲಿಯೇ ಇವೆ. ಇನ್ನೊಂದು ಅಂಶವೇನೆಂದರೆ ಉದ್ಯೋಗ ಖಾತರಿ ಯೋಜನೆಯ ಕಾಮಗಾರಿಗಳಲ್ಲಿ ಮಹಿಳೆಯರಿಗೆ ಸರಿಯಾದ ಸೌಲಭ್ಯಗಳು ದೊರೆಯದೇ ಇರುವುದನ್ನು ಮತ್ತು ಆ ಸೌಲಭ್ಯಗಳನ್ನು ಪಡೆಯುವಲ್ಲಿ ಮಹಿಳೆಯರೇ ಮುಂದಿರುವುದನ್ನು ಗಮನಿಸಬಹುದಾಗಿದೆ. ಅಂದರೆ ಸೌಲಭ್ಯಗಳು ದೊರೆಯದಿದ್ದಾಗ ಗ್ರಾಮ ಪಂಚಾಯತಿಯ ವಿರುದ್ಧ ಹೋರಾಟಕ್ಕಿಳಿದವರು ಮಹಿಳೆಯರು ಮಾತ್ರ, ಅದು ಸಂಘಟಿತ ನೆಲೆಯಲ್ಲಿ. ಇದು ಗಮನಾರ್ಹವಾದ ಸಂಗತಿಯಾಗಿದೆ.

ಉದ್ಯೋಗ ಖಾತರಿ ಯೋಜನೆಯ ಕಾಮಗಾರಿ ಸ್ಥಳಗಳಲ್ಲಿ ಮಹಿಳೆಯರ ಜೈವಿಕತೆಯನ್ನೇ ಪರಿಗಣನೆಗೆ ತೆಗೆದುಕೊಳ್ಳದಿರುವುದು ಕಂಡುಬರುತ್ತದೆ. ಮುಖ್ಯವಾಗಿ ಸರಕಾರದ ಕಾಯಿದೆಯಲ್ಲಿ ಗರ್ಭಿಣಿ ಮಹಿಳೆಯರಿಗೆ ಪ್ರತ್ಯೇಕವಾದಂತಹ ಸೌಲಭ್ಯಗಳನ್ನು ಒದಗಿಸಿಕೊಡಬೇಕು ಎಂದು ಹೇಳುತ್ತದೆ. ಆದರೆ ಸ್ಥಳೀಯ ಪಿತೃಪ್ರಧಾನ ವ್ಯವಸ್ಥೆ ಇದಾವುದನ್ನೂ ಗಮನಕ್ಕೆ ತಂದುಕೊಳ್ಳದೇ ತನ್ನ ಅಧಿಕಾರವನ್ನು ಚಲಾಯಿಸುತ್ತಿರುತ್ತದೆ. ಹಾಗಾಗಿ ಮಹಿಳೆಯರು ಈ ಸಂದರ್ಭದಲ್ಲಿ ಹಲವು ಬಗೆಯ ಸಮಸ್ಯೆಗಳಿಗೆ ಒಳಗಾಗುವುದನ್ನು ಕಾಣಬಹುದಾಗಿದೆ. ಕೃಷಿ ಪ್ರಧಾನ ಸಮಾಜಗಳಲ್ಲಿ ಹಾಗೂ ಅದಕ್ಕೂ ಪೂರ್ವದಲ್ಲಿ ಹಿಂದೆ ಅಲೆಮಾರಿ ಗುಂಪುಗಳಾಗಿದ್ದ ಸಂದರ್ಭದಲ್ಲಿ ಸ್ತ್ರೀ ಪುರುಷರಿಬ್ಬರೂ ಸಮಾನವಾಗಿ ಭಾಗವಹಿಸುತ್ತಿದ್ದರು. ಆ ಸಂದರ್ಭದಲ್ಲಿ ಮೇಲು ಕೀಳುಗಳಿಗೆ ಆಸ್ಪದವಿರಲಿಲ್ಲ. ತದನಂತರದಲ್ಲಿ ಮಹಿಳೆ ತನ್ನ ಜೈವಿಕ ಕಾರಣವಾಗಿ ಒಂದು ಸ್ಥಳದಲ್ಲಿ ನೆಲೆ ನಿಂತಿದ್ದರಿಂದ ಮನೆಗೆ ಮಾತ್ರ ಸೀಮಿತಳಾದಳು. ಕಾಲಾನಂತರದಲ್ಲಿ ಮಡಿ, ಮೈಲಿಗೆಗಳ ಪರಿಕಲ್ಪನೆಗಳು ಹುಟ್ಟಿದ್ದರಿಂದಾಗಿ ಮಹಿಳೆಯರು ಕೃಷಿ ಉಪಕರಣಗಳನ್ನೂ ಸಹ ಮುಟ್ಟದಂತೆ ಮತ್ತು ಭೂಮಿಯನ್ನು ಉಳುಮೆ ಮಾಡದಂತೆ ನಿರ್ಬಂಧಿಸಲಾಯಿತು. ಹೀಗೆ ಮುಂದುವರೆದ ನಿರ್ಬಂಧಗಳು ಆರ್ಥಿಕ ಕ್ಷೇತ್ರಕ್ಕೂ ಕಾಲಿಟ್ಟಿತು. ದುಡಿಮೆ ಎಂಬ ಕ್ಷೇತ್ರದಲ್ಲಿಯೂ ಲಿಂಗ ತಾರತಮ್ಯಗಳು ಹೆಚ್ಚಾಗತೊಡಗಿದವು. ಇಲ್ಲಿ ಮಹಿಳೆಯರು ಅಧಿಕಾರವನ್ನು ಚಲಾಯಿಸುವಂತಹ ಮತ್ತು ಪ್ರಮುಖ ನಿರ್ಣಯಗಳನ್ನು ತೆಗೆದುಕೊಳ್ಳುವಂತಹ ಜವಾಬ್ದಾರಿ ಹುದ್ದೆಗಳಿಂದ ದೂರವಿರಿಸಲಾಯಿತು. ಆ ಕಾರಣಕ್ಕಾಗಿ ಗ್ರಾಮ ಪಂಚಾಯತಿಗಳಲ್ಲಿ ಮಹಿಳಾ ಸದಸ್ಯರು ಇದ್ದಾಗ್ಯೂ ಕೂಡ ಅವರು ತಮ್ಮ ಹಕ್ಕು ಚಲಾವಣೆಯಿಂದ ಮತ್ತು ಅಧಿಕಾರದಿಂದ ದೂರವಿರುತ್ತಾರೆ ಮತ್ತು ಪ್ರಮುಖವಾದ ನಿರ್ಣಯಗಳನ್ನೂ ಸಹ ತೆಗೆದುಕೊಳ್ಳಲು ಸಾಧ್ಯವಾಗುವುದಿಲ್ಲ. ಇದಕ್ಕೆ ಮಹಿಳೆಯರು ಜವಾಬ್ದಾರರಲ್ಲ. ಬದಲಾಗಿ ಮಹಿಳೆಯರನ್ನು ಈ ಪಿತೃ ಪ್ರಧಾನ ಚಿಂತನೆಗಳು ಕಟ್ಟಿಹಾಕಲ್ಪಟ್ಟಿವೆ. ಆ ಕಾರಣಕ್ಕಾಗಿ ಮಹಿಳೆಯರು ಯಾವುದೇ ನಿರ್ಣಯಗಳನ್ನು ತೆಗೆದುಕೊಳ್ಳಬೇಕಾದರೂ ಪುರುಷರನ್ನು ಅವಲಂಬಿಸಿರುತ್ತಾರೆ.

ಗ್ರಾಮೀಣ ಭಾಗದ ಜನರ ಆರ್ಥಿಕ ಜೀವನಮಟ್ಟ ಸುಧಾರಿಸಲು ಸರಕಾರ ಹಲವು ಕಾರ್ಯ ಯೋಜನೆಗಳನ್ನು ರೂಪಿಸುತ್ತಲೇ ಬಂದಿದೆ. ಈ ರೂಪಿಸುವಿಕೆಯ ಸಂದರ್ಭದಲ್ಲಿಯೂ ಸಹ ಹಲವಾರು ತೊಡಕುಗಳನ್ನು ಎದುರಿಸಲಾಗಿದೆ. ಮುಖ್ಯವಾಗಿ ಉದ್ಯೋಗ ಖಾತರಿ ಯೋಜನೆ ಜಾರಿಗೆ ಬಂದಾಗಿನಿಂದ ಇಲ್ಲಿಯವರೆಗೆ ಹಲವು ಬದಲಾವಣೆಗಳಿಗೆ ಒಳಪಟ್ಟಿರುವುದನ್ನು ಗಮನಿಸಬಹುದು. ಈ ಕಾಯಿದೆ ಸಂಪೂರ್ಣವಾಗಿ ಲಿಂಗ ಸಮಾನತೆಯ ನೆಲೆಯಲ್ಲಿ ರೂಪುಗೊಂಡಿದೆ ಎಂದು ತಿಳಿದರೂ ಇದರ ಅನುಷ್ಠಾನದಲ್ಲಿ ಮಾತ್ರ ಹಲವು ತೊಡಕುಗಳನ್ನು ಎದುರಿಸುತ್ತಿದೆ. ಗ್ರಾಮೀಣ ಬಾಗಗಳಲ್ಲಿ ಪುರುಷಶಾಹಿ ವ್ಯವಸ್ಥೆ ತನ್ನ ಅಧಿಕಾರ ಮತ್ತು ಹಕ್ಕುಗಳಿಂದ ಇಡೀ ವ್ಯವಸ್ಥೆಯನ್ನು ತನ್ನ ಹಿಡಿತದಲ್ಲಿ ಇಟ್ಟುಕೊಂಡಿರುತ್ತದೆ. ಹಾಗಾಗಿ ಯಾವುದೇ ಯೋಜನೆಯಾಗಲಿ ಜಾರಿಯಾದರೂ ಅದು ಅನುಷ್ಠಾನದ ಸಂದರ್ಭದಲ್ಲಿ ಹಲವು ಲಿಂಗ ಅಸಮಾನತೆಗೆ ಒಳಗಾಗಿರುತ್ತದೆ. ಇದು ಗ್ರಾಮೀಣ ಪ್ರದೇಶದ ಅಭಿವೃದ್ಧಿಗೆ ಬಹು ದೊಡ್ಡ ತೊಡಕಾಗಿದೆ.

ವ್ಯವಸ್ಥೆಯಲ್ಲಿ ಪಿತೃ ಪ್ರಧಾನವ್ಯವಸ್ಥೆಯ ಕಾರಣವಾಗಿ ಮಹಿಳೆಯರು ಇಂದಿಗೂ ಸ್ವಾವಲಂಬಿಗಳಾಗಿ ಬದುಕಲು ಸಾಧ್ಯವಾಗುತ್ತಿಲ್ಲ. "ಸಿಲ್ವಿಯಾ ವಾಲ್ಬಿಯವರು ತಮ್ಮ 'ಥಿಯರೈಸಿಂಗ್ ಪೇಟ್ರಿಯಾರ್ಕಿ' ಎಂಬುದರಲ್ಲಿ ಪಿತೃ ಪ್ರಧಾನ ವ್ಯವಸ್ಥೆಯನ್ನು ಪುರುಷರು ಮಹಿಳೆಯರ ಮೇಲೆ ದಬ್ಬಾಳಿಕೆ ನಡೆಸುವ, ತುಳಿಯುವ ಮತ್ತು ಶೋಷಿಸುವಂತಹ ಸಾಮಾಜಿಕ ಸಂರಚನೆಯನ್ನು ಮತ್ತು ಆಚರಣೆಗಳನ್ನು ಹೊಂದಿರುವಂತಹ ವ್ಯವಸ್ಥೆ" ಎಂದು ಹೇಳುತ್ತಾರೆ. ಹಾಗೆಯೇ ಮಗ್ಗಿ ಹಮ್ ಎಂಬಾತ ಪಿತೃ ಪ್ರಧಾನತೆಯನ್ನು "ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಸಂಸ್ಥೆಗಳ ಮೂಲಕ ಮಹಿಳೆಯರನ್ನು ತುಳಿಯುವ ಪುರುಷ ಅಧಿಕಾರ ವ್ಯವಸ್ಥೆ-ಪುರುಷ ಪ್ರಧಾನತೆಗೆ ಮನೆಯ ಒಳಗೆ ಮತ್ತು ಹೊರಗೆ ಅಧಿಕಾರ ರಚನೆಯ ಸಂಪನ್ಮೂಲಗಳನ್ನು ಮತ್ತು ಪ್ರತಿಫಲಗಳನ್ನು ಪಡೆಯಲು ವಿಪುಲ ಅವಕಾಶವಿರುತ್ತದೆ ಎನ್ನುತ್ತಾನೆ."[1] ಈ ಪಿತೃ ಪ್ರಧಾನತೆಯ ಕಾರಣವಾಗಿ ವ್ಯವಸ್ಥೆಯಲ್ಲಿ ಇಂದಿಗೂ ಲಿಂಗ ಅಸಮಾನತೆಯ ಅಂಶಗಳು ಹೆಚ್ಚಾಗಿ ಕಂಡುಬರುತ್ತಿವೆ. ಮುಖ್ಯವಾಗಿ ಈ ಅಸಮಾನತೆ ಎಂಬುದು ಕೇವಲ ಕುಟುಂಬಕ್ಕೆ ಮಾತ್ರ ಸೀಮಿತವಾಗಿಲ್ಲ. ಬದಲಾಗಿ ಹಲವು ಕ್ಷೇತ್ರಗಳಲ್ಲಿ ವಿಸ್ತರಿಸಿಕೊಂಡಿದೆ. ಸಾಮಾಜಿಕ ವ್ಯವಸ್ಥೆಯಲ್ಲಿ ಮಹಿಳೆಯರನ್ನು ಎರಡನೇ ದರ್ಜೆಯವರನ್ನಾಗಿ ಪರಿಗಣಿಸಿ ಕೆಳಸ್ಥರದಲ್ಲಿಟ್ಟಿರುವುದು ಕಂಡುಬರುತ್ತಿದೆ. ಮಹಿಳೆಯರು ಯಾವುದೇ ಕ್ಷೇತ್ರಗಳಲ್ಲಿ ಪಾಲ್ಗೊಂಡರೂ ಆ ಕ್ಷೇತ್ರದಲ್ಲಿ ಅವರು ಪುರುಷನ ಅಡಿಯಾಳಾಗಿಯೇ ಇರಬೇಕಾಗುತ್ತದೆ. ಮಹಿಳೆಯರ ಶ್ರಮ ಮೌಲ್ಯವನ್ನು ಗುರುತಿಸಲಾಗುತ್ತಿಲ್ಲ. ಈ ಲಿಂಗ ಅಸಮಾನತೆ ಎಂಬುದು ಒಂದೇ ತೆರನಾಗಿರುವುದಿಲ್ಲ. ಏಕೆಂದರೆ ಸಮಾಜದಲ್ಲಿ ಭಿನ್ನವಾದ ಗುಂಪುಗಳಿಗೆ, ಜಾತಿಗಳಿಗೆ ಸೇರಿದ ಜನರಿರುತ್ತಾರೆ. ಇವರು ಭಿನ್ನವಾದ ಜೀವನಮಟ್ಟವನ್ನು ಹೊಂದಿರುತ್ತಾರೆ. ಹಾಗೆಯೇ ಇವರು ಸಮಾಜದ

ಆಗು ಹೋಗುಗಳಿಗೆ ಬೇರೆ ರೀತಿಯಾಗಿ ಸ್ಪಂದಿಸುತ್ತಿರುತ್ತಾರೆ. ಮುಖ್ಯವಾಗಿ ಭಿನ್ನ ಜಾತಿ ಸಮುದಾಯಗಲ್ಲಿಯೂ ಸಹ ಲಿಂಗ ಅಸವಮಾನತೆಯ ಅಂಶಗಳು ಭಿನ್ನವಾಗಿಯೇ ಗೋಚರಿಸುತ್ತಿರುತ್ತವೆ. ಲಿಂಗ ಅಸಮಾನತೆ ಎಂಬುದು ಒಂದೇ ತೆರನಾಗಿರುವುದಿಲ್ಲ ಎಂದು ಹೇಳಬಹುದು. ಹಾಗಾಗಿ ಮಹಿಳೆಯರು ಇಂದಿಗೂ ಹಲವು ವಿಧದಲ್ಲಿ ಸಮಸ್ಯೆಗಳಿಗೆ ಒಳಗಾಗಿರುವುದನ್ನು ಕಾಣಬಹುದಾಗಿದೆ.

ಉದ್ಯೋಗ ಖಾತರಿ ಯೋಜನೆಯ ಸಂದರ್ಭದಲ್ಲಿ ಯೋಜನೆಯನ್ನು ರೂಪಿಸುವಾಗ ಮೊದಲು ಗ್ರಾಮ ಸಭೆಗಳನ್ನು ಮಾಡಬೇಕಾಗುತ್ತದೆ. ಈ ಗ್ರಾಮಸಭೆಗಳನ್ನು ಪ್ರತಿಯೊಂದು ಗ್ರಾಮಗಳಲ್ಲಿಯೇ ನೆರವೇರಿಸಬೇಕಾಗುತ್ತದೆ. ಈ ಸಭೆಗಳಲ್ಲಿ ಮಹಿಳೆಯರೂ ಸಹ ಪಾಲ್ಗೊಂಡು ಗ್ರಾಮದ ಅಭಿವೃದ್ಧಿಗೆ ಕೈ ಜೋಡಿಸಬೇಕು ಎಂದು ಯೋಜನೆ ಹೇಳುತ್ತದೆ. ಆದರೆ ಹಲವು ಗ್ರಾಮ ಪಂಚಾಯತಿಗಳಲ್ಲಿ ಗ್ರಾಮ ಸಭೆಗಳೇ ನಡೆದಿಲ್ಲ. ಹಾಗೆಯೇ ಕೆಲವು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಗ್ರಾಮ ಸಭೆಗಳು ನಡೆದಿವೆ. ಆದರೆ ಈ ಸಭೆಗಳಲ್ಲಿ ಮಹಿಳೆಯರ ಭಾಗವಹಿಸುವಿಕೆಯ ಪ್ರಮಾಣ ತುಂಬಾ ಕಡಿಮೆ ಇದೆ. ಇದಕ್ಕೆ ಕಾರಣ ಮಹಿಳೆಯರಲ್ಲ. ಗ್ರಾಮೀಣ ಭಾಗದಲ್ಲಿ ಪುರುಷಶಾಹಿ ಚಿಂತನೆಗಳು ಹೆಚ್ಚಾಗಿ ಬಲಿಷ್ಠಗೊಂಡಿರುತ್ತವೆ. ಇವುಗಳ ಕಾರಣವಾಗಿ ಮಹಿಳೆಯರು ಕುಟುಂಬದಿಂದ ಆಚೆ ಬರುವುದೂ ಸಹ ತುಂಬಾ ಕಷ್ಟಕರವಾಗಿರುತ್ತದೆ. ಹಾಗಾಗಿ ಗ್ರಾಮದಲ್ಲಿನ ಪುರುಷರು, ಮಹಿಳೆಯರು ಈ ಗ್ರಾಮ ಸಭೆಗಳಲ್ಲಿ ಭಾಗವಹಿಸದಂತೆ ನೋಡಿಕೊಳ್ಳುತ್ತಾರೆ. ಒಂದು ವೇಳೆ ಭಾಗವಹಿಸಿದರೂ ಸಹ ಆ ಸಭೆಯಲ್ಲಿ ಮಹಿಳೆಯರ ಮಾತುಗಳಿಗೆ ಯಾವುದೇ ಮಾನ್ಯತೆ ದೊರೆಯುವುದಿಲ್ಲ. ಹಾಗೆ ದೊರೆಯದಂತೆ ವ್ಯವಸ್ಥೆ ಆ ಸಂದರ್ಭವನ್ನು ನೋಡಿಕೊಳ್ಳುತ್ತದೆ. ಇದು ಯೋಜನೆಯ ರೂಪಿಸುವಿಕೆಯ ಆರಂಭಿಕ ಹಂತ. ನಂತರದಲ್ಲಿ ಯೋಜನೆಯ ಅನುಷ್ಠಾನದ ಸಂದರ್ಭದಲ್ಲಿ ಈ ಲಿಂಗ ಅಸಮಾನತೆಯ ಅಂಶಗಳಿಗೆ ಮಹಿಳೆಯರು ಬಲಿಯಾಗಿದ್ದಾರೆ. ಜಾಬ್ ಕಾರ್ಡ್‌ಗಳನ್ನು ಮಾಡಿಸುವಲ್ಲಿ, ಕೆಲಸಗಳನ್ನು ವರ್ಗೀಕರಿಸುವಲ್ಲಿ ಮತ್ತು ಕೆಲಸದ ಸ್ಥಳಗಳಲ್ಲಿನ ಸೌಲಭ್ಯಗಳಿಗೆ ಸಂಬಂಧಿಸಿದಂತೆ ಮತ್ತು ಕೂಲಿಯ ವಿಷಯದಲ್ಲಿ ಹೀಗೆ ಹಲವು ಅಂಶಗಳಲ್ಲಿ ಲಿಂಗ ಅಸಮಾನತೆಯ ಅಂಶಗಳು ಹೆಚ್ಚಾಗಿ ಗೋಚರಿಸುತ್ತವೆ. ಈ ಅಸಮಾನತೆಯ ಕಾರಣವಾಗಿ ಮಹಿಳೆಯರು ಹಲವು ಸಮಸ್ಯೆಗಳಿಗೆ ಒಳಗಾಗಿದ್ದಾರೆ. ಮುಖ್ಯವಾಗಿ ಕುಟುಂಬದಿಂದ ಆಚೆ ಬಂದು ದುಡಿಯುವಂತಹ ಮಹಿಳೆಯರು ಹಲವು ಬಗೆಯ ಜವಾಬ್ದಾರಿಗಳನ್ನು ನಿಭಾಯಿಸಬೇಕಾಗುತ್ತಿರುತ್ತದೆ. ಈ ನಿಭಾಯಿಸುವಿಕೆಯಲ್ಲಿ ಏನಾದರೂ ವ್ಯತ್ಯಾಸಗಳು ಕಂಡುಬಂದರೆ ಸಮಾಜದ ನಿಂದನೆಗೆ ಮತ್ತು ಕುಟುಂಬದ ನಿಂದನೆಗೆ ಒಳಗಾಗಬೇಕಾಗುತ್ತದೆ. ಈ ಬಗೆಯ ಸಂದಿಗ್ಧ ಪರಿಸ್ಥಿತಿಯಲ್ಲಿ ಮಹಿಳೆಯರು ಜೀವಿಸುತ್ತಿದ್ದಾರೆ.

ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನದ ಸಂದರ್ಭದಲ್ಲಿಯಾಗಲೀ ಅಥವಾ ಕಾಮಗಾರಿ ಸ್ಥಳಗಳಲ್ಲಾಗಲೀ ಜಾತಿ ತಾರತಮ್ಯಗಳು ಅಧಿಕವಾಗಿ ಗೋಚರಿಸುತ್ತವೆ. ಜಾತಿಯ ಕಾರಣಕ್ಕಾಗಿ ಈ ಯೋಜನೆಯ ಸೌಲಭ್ಯಗಳಿಂದ ವಂಚಿತರಾದಂತಹ ಹಲವು ಜನರು ಗ್ರಾಮೀಣ ಬಾಗಗಳಲ್ಲಿ ಇರುವುದನ್ನು ಕಾಣುತ್ತೇವೆ. ಈ ಜಾತಿ ಪದ್ದತಿಯನ್ನು ಹೋಗಲಾಡಿಸುವುದಕ್ಕಾಗಿ ಹಲವು ವಿದ್ವಾಂಸರು, ಚಿಂತಕರು ಶ್ರಮಿಸಿದ್ದಾರೆ. ಅವರಲ್ಲಿ ಮುಖ್ಯವಾಗಿ ಅಂಬೇಡ್ಕರರ ಕೊಡುಗೆ ಅಪಾರವಾದುದು. ಅಂದರೆ ಹಲವಾರು ವರ್ಷಗಳಿಂದ ಗ್ರಾಮೀಣ ಭಾಗಗಳಲ್ಲಿ ಮತ್ತು ನಗರ ಪ್ರದೇಶಗಳಲ್ಲಿ ಈ ಜಾತಿ ವ್ಯವಸ್ಥೆ ಎಂಬುದು ಒಂದು ಪೆಡಂಭೂತವಾಗಿ ಕಾಡುತ್ತಿದೆ. ಇದನ್ನು ಹೋಗಲಾಡಿಸಲು ಡಾ.ಬಾಬಾಸಾಹೇಬ ಅಂಬೇಡ್ಕರ್ ಅವರು ಬಹಳಷ್ಟು ಶ್ರಮಿಸಿದ್ದರು. ಅಂದರೆ ಭಾರತೀಯ ಸಮಾಜವನ್ನು ಕಾಡುತ್ತಿದ್ದ ಜಾತಿ ಪದ್ದತಿ, ಅಸ್ಪೃಶ್ಯತೆ, ಬಡತನ ಮುಂತಾದ ಸಮಸ್ಯೆಗಳ ಬಗೆಗೆ ಆಳವಾಗಿ ಚಿಂತಿಸಿದ್ದರು. ಇವುಗಳ ಕಾರಣವಾಗಿ ಅಸಮಾನತೆ ಎಂಬುದು ಸಮಾಜದಲ್ಲಿ ತಾಂಡವವಾಡುತ್ತಿದೆ ಇದು ಸಂಪೂರ್ಣವಾಗಿ ನಿರ್ಮೂಲನೆಯಾಗಬೇಕು ಮತ್ತು ಹೊಸ ಸಮಾಜ ನಿರ್ಮಾಣವಾಗಬೇಕು ಎಂಬುದು ಅವರ ಆಶಯವಾಗಿತ್ತು. ಅವರು ಹೇಳುವಂತೆ "ಜಾತಿ ಪದ್ಧತಿ ಹಿಂದೂಗಳನ್ನು ಹಾಳುಗೆಡವಿದೆ. ವರ್ಣವ್ಯವಸ್ಥೆಯೊಂದು ಸೋರುವ ಪಾತ್ರೆ ಇದ್ದಂತೆ. ಸ್ವಾತಂತ್ರ್ಯ, ಸಮಾನತೆ ಹಾಗೂ ಭ್ರಾತೃತ್ವ ತತ್ವಗಳನ್ನು ಆಧರಿಸಿ ಹಿಂದೂ ಸಮಾಜ ಪುನರ್ ನಿರ್ಮಾಣವಾಗಬೇಕು"[9] ಎಂದು ಹೇಳಿದ್ದರು. ಮುಖ್ಯವಾಗಿ ಹಳ್ಳಿಗಳಲ್ಲಿ ಇರುವಂತಹ ಜಾತಿ ವ್ಯವಸ್ಥೆಯನ್ನು ಹೋಗಲಾಡಿಸಲು ಮತ್ತು ಆ ಕಾರಣಕ್ಕಾಗಿ ದಲಿತ ಸಮುದಾಯದವರು ಅನುಭವಿಸುತ್ತಿರುವ ಅಸ್ಪೃಶ್ಯತೆಯನ್ನು ಹೋಗಲಾಡಿಸಲು ಮೊದಲು ಶಿಕ್ಷಣದ ಅಗತ್ಯತೆ ಇದೆ ಎಂದು ಹೇಳಿದ್ದರು. ಈ ಜಾತಿ ತಾರತಮ್ಯಗಳು ಉದ್ಯೋಗ ಖಾತರಿ ಯೋಜನೆಯ ಕಾಮಗಾರಿಗಳ ಅನುಷ್ಠಾನದ ಸಂದರ್ಭದಲ್ಲಿ ಹೇರಳವಾಗಿ ಕಂಡುಬಂದಿರುವುದನ್ನು ಕಾಣಬಹುದಾಗಿದೆ. ಅದರಲ್ಲಿಯೂ ಕೆಳ ಜಾತಿಯ ಮಹಿಳೆಯರನ್ನು ಅಸ್ಪೃಶ್ಯರಂತೆಯೇ ಕಂಡಿರುವುದು ಹಲವು ಪ್ರಕರಣಗಳಿಂದ ವೇದ್ಯವಾಗುತ್ತದೆ. ಮುಖ್ಯವಾಗಿ ಇವರ ಅವಮಾನ ಶೋಷಣೆಗಳಿಗೆ ಮುಖ್ಯ ಕಾರಣ ಅನಕ್ಷರತೆ, ಶಕ್ತಿಹೀನತೆ ಮತ್ತು ಅಸಹಾಯಕತೆ. ಇದನ್ನು ತಮ್ಮ ಕರ್ಮವೆಂದು ಈ ಸಮುದಾಯಗಳು ಒಪ್ಪಿಕೊಂಡುಬಿಟ್ಟಿವೆ. ಈ ಸಮುದಾಯದ ಜನರಿಗೆ ತಮ್ಮ ಮೇಲೆ ಮೇಲ್ಜಾತಿಯ ಜನ ದಬ್ಬಾಳಿಕೆಯನ್ನು ಮಾಡುತ್ತಿದ್ದಾರೆ ಎಂಬುದು ತಿಳಿದಿದೆ. ಆದರೆ ಇದನ್ನು ಸಹಿಸಿಕೊಂಡು ಸುಮ್ಮನಿದ್ದರೆ ಮಾತ್ರ ಸಮಾಜದಲ್ಲಿ ಬದುಕಬಹುದು ಎಂಬ ಅಂಶವನ್ನು ಇವರು ಒಪ್ಪಿಕೊಂಡುಬಿಟ್ಟಿದ್ದಾರೆ. ಈ ಬಗೆಯ ಅನಿವಾರ್ಯತೆ ಸೃಷ್ಟಿಗೊಂಡಿದೆ. ಹಾಗಾಗಿ ಇವರು ತಮಗೆ ಆದಂತಹ ನೋವನ್ನು ನುಂಗಿಕೊಂಡು ಹಾಗೆಯೇ ಸುಮ್ಮನಿದ್ದಾರೆ. ಕೆಲವು ಸಂಘಟನೆಗಳು ಇವುಗಳ ವಿರುದ್ಧವಾಗಿ ಹೋರಾಡುತ್ತಿರುವುದು ಒಂದು ಬಗೆಯ ಸಕಾರಾತ್ಮಕ ಅಂಶವಾಗಿದೆ.

ಆದರೆ ಈ ಸಂಘಟನೆಗಳ ಹೋರಾಟಗಳು ನಿರಂತರತೆಯನ್ನು ಹೊಂದಿಲ್ಲದೇ ಇರುವುದು ಕಂಡುಬರುತ್ತದೆ. ಹಾಗಾಗಿ ಗ್ರಾಮೀಣ ಭಾಗಗಳಲ್ಲಿನ ಜನರು ತಮ್ಮ ಮೇಲೆ ನಡೆಯುವಂತಹ ದಬ್ಬಾಳಿಕೆಯನ್ನು ಮೌನವಾಗಿಯೇ ಸಹಿಸಿಕೊಂಡಿವೆ.

"ವರ್ಗ,ಜಾತಿ ಹಾಗೂ ಪಿತೃಪ್ರಧಾನ ವ್ಯವಸ್ಥೆಗಳ ಪರಾಧೀನತೆಯ ಮುಖಾಂತರ ಭಾರತದಲ್ಲಿ ಮಹಿಳೆಯರ ಪರಾಧೀನತೆ ತೀವ್ರಗೊಂಡಿದೆ. ಭಾರತೀಯ ಸಂದರ್ಭದಲ್ಲಿ ಜಾತಿ ವ್ಯವಸ್ಥೆ ಮಹಿಳೆಯ ಪರಾಧೀನತೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಜಾತಿ ಮೂಲದ ಶ್ರಮ ವಿಭಜನೆ, ಜಾತಿ ಪಂಚಾಯತಿ, ಜಾತಿ ಮೂಲದ ವೈಯಕ್ತಿಕ ಕಾನೂನುಗಳು ಮಹಿಳೆಯ ಪರಾಧೀನತೆಗೆ ಕೊಡುಗೆಯನ್ನು ಸಲ್ಲಿಸುತ್ತದೆ. ವಿವಾಹ, ವಿವಾಹ ವಿಚ್ಛೇದನೆ, ಮರು ವಿವಾಹ, ಉತ್ತರಾಧಿಕಾರ ಇತ್ಯಾದಿಗಳಲ್ಲಿ ಜಾತಿ ಆಧಾರಿತ ಕಾನೂನುಗಳು ಹಾಗೂ ನಿರ್ಬಂಧಗಳು ಮಹಿಳೆ ಪುರುಷನನ್ನು ಅವಲಂಬಿಸುವಂತೆ ಮಾಡಿ ನಿರ್ಗತಿಕಳನ್ನಾಗಿಸುತ್ತದೆ. ಈ ಜಾತಿಯ ಚೌಕಟ್ಟಿನಲ್ಲಿಯೇ ದಲಿತ ಮತ್ತು ಆದಿವಾಸಿ ಮಹಿಳೆಯರ ಶೋಷಣೆ ಇನ್ನೂ ತೀವ್ರವಾದದ್ದು; ಅವರಲ್ಲಿ ಬಹುತೇಕರು ಭೂ ರಹಿತ ಕೃಷಿ ಕಾರ್ಮಿಕರು, ಬಹುತೇಕ ಈ ಮಹಿಳೆಯರು ಅತ್ಯಾಚಾರ, ಲೈಂಗಿಕ ಆಕ್ರಮಣಗಳಿಗೆ ಬಲಿಯಾಗುತ್ತಾರೆ. ಹೀಗಾಗಿ ಅಂಬೇಡ್ಕರ್, ಜಾತಿ ವ್ಯವಸ್ಥೆ ಮಹಿಳೆಯನ್ನು ಶೋಷಿಸುವ ವ್ಯವಸ್ಥೆ ಎಂಬುದನ್ನು ಒತ್ತಿ ಹೇಳುತ್ತಾರೆ. ಇದು ಶ್ರೇಣೀಕೃತ ವ್ಯವಸ್ಥೆಯಾಗಿರುವುದರಿಂದ, ಮಹಿಳೆಯ ಸ್ಥಾನ ಹೆಚ್ಚು ಕೆಳಗೆ ಕೆಳಗೆ ಹೋದಂತೆ, ಆಕೆಯ ಶೋಷಣೆಯೂ ಹೆಚ್ಚು ಹೆಚ್ಚು ತೀವ್ರವಾಗುತ್ತಾ ಹೋಗುತ್ತದೆ"[5]. ಎಂದು ಹೇಳಿದ್ದಾರೆ. ಇದು ಸತ್ಯಕ್ಕೆ ಹತ್ತಿರವಾದದ್ದು ಏಕೆಂದರೆ ಉದ್ಯೋಗ ಖಾತರಿ ಯೋಜನೆಯ ಸಂದರ್ಭದಲ್ಲಿ ಗ್ರಾಮೀಣ ಭಾಗಗಳಲ್ಲಿನ ಜನರು ಅದರಲ್ಲಿಯೂ ಮಹಿಳೆಯರು ತುಂಬಾ ನೋವುಗಳನ್ನು ಅನುಭವಿಸುತ್ತಿದ್ದಾರೆ. ಮುಖ್ಯವಾಗಿ ಜಾತಿಯ ಕಾರಣವಾಗಿ, ವರ್ಗದ ಕಾರಣವಾಗಿ ಹೀಗೆ ಹಲವು ಬಗೆಯಲ್ಲಿ ಹಿಂಸೆಗೆ ಒಳಗಾಗುತ್ತಿದ್ದಾರೆ. ಈ ಹಿಂದೆ ನೀಡಿದಂತಹ ಪ್ರಕರಣಗಳಿಂದ ಈ ಅಂಶಗಳು ವೇದ್ಯವಾಗುತ್ತವೆ.

ದೇಶದಲ್ಲಿ ಜಾರಿಯಾಗಿರುವಂತಹ ಅಭಿವೃದ್ಧಿ ಯೋಜನೆಗಳು ಎಲ್ಲಾ ಸಮುದಾಯದ ಜನರಿಗೆ ತಲುಪುತ್ತಿವೆ ಎಂದು ಹೇಳಲಾಗುವುದಿಲ್ಲ. ಅಂದರೆ "ಒಂದೇ ಜಾತಿಗೆ, ಒಂದೇ ಸಮುದಾಯಕ್ಕೆ, ಒಂದೇ ಬುಡಕಟ್ಟಿಗೆ, ಒಂದೇ ಧರ್ಮಕ್ಕೆ ಸೇರಿದವರೆಲ್ಲರೂ ಸರಕಾರ ಕೊಡಮಾಡಿದ ಎಲ್ಲ ಸೌಲಭ್ಯಗಳನ್ನು ಪಡೆದಿರುತ್ತಾರೆ ಎಂದು ಹೇಳಲಾಗುವುದಿಲ್ಲ. ಸರಕಾರ ಕೊಡಮಾಡಿದ ಸೌಲಭ್ಯಗಳನ್ನು ಪಡೆದವರು ಆರ್ಥಿಕವಾಗಿ, ಸಾಮಾಜಿಕವಾಗಿ ಪ್ರಗತಿಗೆ ಒಳಗಾಗಿರುತ್ತಾರೆ; ಸರಕಾರದ ಸೌಲಭ್ಯಕ್ಕೆ ಒಳಗಾಗದೇ ಇದ್ದರೆ ಹಿಂದುಳಿಸಲ್ಪಟ್ಟ ವರ್ಗಕ್ಕೆ ಸೇರಿದವರಾಗಿರುತ್ತಾರೆ. ಸರಕಾರ ಕೊಡಮಾಡಿದ ಸೌಲಭ್ಯಗಳಿಗೆ ಒಳಗಾದವರೆಲ್ಲರೂ ಪ್ರಗತಿ ಹೊಂದುತ್ತಾರೆ ಎಂದೂ ಹೇಳಲಾಗುವುದಿಲ್ಲ. ಸೌಲಭ್ಯಗಳು ಅವರಿಗೆ ತಲುಪಿದರೂ, ಆ

ಸೌಲಭ್ಯಗಳು ಅವರನ್ನು ಸಬಲೀಕರಣಕ್ಕೆ ಒಳಗಾಗದಂತೆ ನೋಡಿಕೊಳ್ಳುವ ಜಾತಿ ಶ್ರೇಣೀಕೃತ ಸಮಾಜ, ವರ್ಗಶ್ರೇಣೀಕೃತ ಹಾಗೂ ಲಿಂಗಶ್ರೇಣೀಕೃತ ಸಮಾಜವು ನಿರಂತರ ಕ್ರಿಯಾಶೀಲವಾಗಿರುತ್ತವೆ ಎನ್ನುವುದನ್ನು ಮರೆಯಲಾಗುವುದಿಲ್ಲ. ಹಾಗೆಯೇ ಹಿಂದುಳಿಸಲ್ಪಟ್ಟ ವರ್ಗಗಳಿಗೆ ಸೇರಿದವರು ಸರಕಾರದ ಸೌಲಭ್ಯಗಳಿಗೆ ಒಳಗಾಗದೆ ಇದ್ದರೆ, ಅದಕ್ಕೆ ಅವರನ್ನೇ ಹೊಣೆಗಾರರನ್ನಾಗಿಸಲಾಗುವುದಿಲ್ಲ. ಸರಕಾರದ ಸೌಲಭ್ಯಗಳು ಅವರಿಗೆ ತಲುಪದಂತೆ ಮಾಡಲು ಜಾತಿಶ್ರೇಣೀಕೃತ, ವರ್ಗಶ್ರೇಣೀಕೃತ ಹಾಗೂ ಇವುಗಳಿಗೆ ಅನುಗುಣವಾಗಿರುವ ಲಿಂಗ ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆಗಳು ತಮ್ಮ-ತಮ್ಮ ರಾಜಕಾರಣಗಳನ್ನು ಮಾಡುತ್ತಿರುತ್ತವೆ ಎನ್ನುವುದನ್ನು ಮರೆಯಲಾಗುವುದಿಲ್ಲ"[೭]. ಈ ಇನ್ನಲೆಯಲ್ಲಿ ಉದ್ಯೋಗ ಖಾತರಿ ಯೋಜನೆಯಿಂದ ದೂರ ಉಳಿದಿರುವವರು ಮತ್ತು ಈ ಯೋಜನೆಯಲ್ಲಿ ಪಾಲ್ಗೊಂಡರೂ ಸಹ ಹಲವು ಬಗೆಯ ಲಿಂಗ ತಾರತಮ್ಯಗಳಿಗೆ ಒಳಗಾದಂತಹ ಮಹಿಳೆಯರನ್ನು ಹಿಂದುಳಿಸಲ್ಪಟ್ಟ ವರ್ಗದವರು ಎಂದು ಗುರುತಿಸಲಾಗಿದೆ. ಈ ವರ್ಗಕ್ಕೆ ಹೆಚ್ಚಾಗಿ ಮಹಿಳೆಯರೇ ಒಳಗಾಗಿರುವುದು ಮೇಲಿನ ಎಲ್ಲಾ ಪ್ರಕರಣಗಳಿಂದ ತಿಳಿಯಬಹುದಾಗಿದೆ. ಮುಖ್ಯವಾಗಿ ಉದ್ಯೋಗ ಖಾತರಿ ಯೋಜನೆಯಲ್ಲಿ ಪಾಲ್ಗೊಂಡ ಮಹಿಳೆಯರು ಒಂದೇ ಜಾತಿಗಾಗಲೀ, ಒಂದೇ ಸಮುದಾಯಕ್ಕಾಗಲೀ ಅಥವಾ ಒಂದೇ ಧರ್ಮಕ್ಕಾಗಲೀ ಸೇರಿದವರಲ್ಲ. ಇವರು ಭಿನ್ನ ಭಿನ್ನ ಜಾತಿ,ಜನಾಂಗ ಮತ್ತು ಧರ್ಮಗಳಿಗೆ ಸೇರಿದವರು. ಹಾಗಾಗಿ ಪ್ರತಿಯೊಂದು ಜಾತಿಗಳಲ್ಲಿ ಮತ್ತು ಸಮುದಾಯ, ಧರ್ಮಗಳಲ್ಲಿ ಮಹಿಳೆಯರು ಹಲವಾರು ಕಟ್ಟುಪಾಡುಗಳಿಗೆ ಒಳಗಾಗಿರುತ್ತಾರೆ. ಹಾಗೆಯೇ ಆ ಸಮುದಾಯಗಳಲ್ಲಿ ಮಹಿಳೆಯರು ಸಬಲರಾಗದಂತೆ ನೋಡಿಕೊಳ್ಳಲಾಗಿರುತ್ತದೆ. ಹಾಗಾಗಿ ಮಹಿಳೆಯರು ಇಂದಿಗೂ ಆಯಾ ಜಾತಿ,ಧರ್ಮ ಮತ್ತು ಸಮುದಾಯಗಳಲ್ಲಿ ಹಿಂದುಳಿಸಲ್ಪಟ್ಟವರೇ ಆಗಿರುತ್ತಾರೆ.

ಶೈಲಜ ಹಿರೇಮಠರವರು ತಮ್ಮ 'ಮಹಿಳೆ ದುಡಿಮೆ,ಉತ್ಪಾದನೆ, ಆರ್ಥಿಕ, ಸ್ವಾವಲಂಬನೆ ಇತ್ಯಾದಿ' ಎಂಬ ಲೇಖನದಲ್ಲಿ ಮಹಿಳೆಯರ ದುಡಿಮೆಗೆ ಮತ್ತು ಆ ದುಡಿಮೆಯ ಪ್ರತಿಫಲದ ಹಕ್ಕಿನ ಕುರಿತಂತೆ ಅಂದರೆ ಮಹಿಳೆಯರ ಹಣಕಾಸಿನ ಭಾಷೆಗೆ ಸಂಬಂಧಿಸಿದಂತೆ ಹಲವು ವಿಚಾರಗಳನ್ನು ಮಂಡಿಸಿದ್ದಾರೆ. "ಸ್ತ್ರೀ-ಪುರುಷ ಇಬ್ಬರಿಗೂ ಸರಿಸಮಾನ ವೇತನ ಬರಬೇಕು ಎನ್ನುವ ಕಾನೂನು ಇದ್ದರೂ ಇದುವರೆಗೆ ಅದು ಜಾರಿಯಲ್ಲಿಲ್ಲ ಯಾಕೆ? ಅದನ್ನು ಕಾನೂನಿನ ದೋಷ ಎನ್ನಬೇಕೆ? ಈ ಸಮಸ್ಯೆಯನ್ನು ಕಾನೂನಿನ ನೆಲೆಯಲ್ಲಿಟ್ಟು ನೋಡಬೇಕೆ? ಅಥವಾ ಸಾಮಜಿಕ ನೆಲೆಯಲ್ಲಿಟ್ಟು ನೋಡಬೇಕೆ? ಅಸಂಘಟಿತ ವಲಯಕ್ಕೆ ಸೇರಿದ ಮಹಿಳಾ ದುಡಿಮೆಗಾರರಿರಬಹುದು, ಸಂಘಟಿತ ವಲಯಕ್ಕೆ ಸೇರಿದ ಮಹಿಳಾ ದುಡಿಮೆಗಾರರಿರಬಹುದು ದುಡಿದ ಸಂಬಳವನ್ನು ಏನು ಮಾಡುತ್ತಾರೆ? ಪಡೆದ ಸಂಬಳದ ಮೇಲೆ ಹಕ್ಕನ್ನು ಉಳಿಸಿಕೊಂಡಿರುವರೇ? ಅವರು ವ್ಯವಹಾರದ ಭಾಷೆಯನ್ನು ಕಲಿತಿರುವರೇ? ಅವರಿಗೆ ಹಣಕಾಸಿನ

ಭಾಷೆ ಗೊತ್ತಿಲ್ಲವೆಂದರೆ ಸಮಾಜದಲ್ಲಿ ಅವರ ಸ್ಥಾನಮಾನವೇನು? ದುಡಿಮೆ ಸಬಲೀಕರಣಕ್ಕೆ ನಾಂದಿಯಾಗಲಿಲ್ಲವೆಂದರೆ ಲಿಂಗ ವ್ಯವಸ್ಥೆಯಲ್ಲಿ ಆಕೆ ಏನಾಗಿದ್ದಾಳೆ? ಹಣಕಾಸಿನ ಭಾಷೆಯ ಬಗ್ಗೆ ಆಕೆಗೆ ಆಸಕ್ತಿ ಇಲ್ಲವೇ? ಅಥವಾ ಅದು ಗೊತ್ತಾಗದಂತೆ ಅವಳನ್ನು ನಿಯಂತ್ರಿಸುತ್ತಿದೆಯೇ? ನಿಯಂತ್ರಿಸುತ್ತಿದ್ದರೆ ಯಾರು ನಿಯಂತ್ರಿಸುತ್ತಿದ್ದಾರೆ? ಈ ಸಮಸ್ಯೆಯನ್ನು ವ್ಯಕ್ತಿ ನೆಲೆಯಲ್ಲಿಟ್ಟು ನೋಡಬೇಕೆ, ಅರ್ಥವ್ಯವಸ್ಥೆಯಲ್ಲಿ ಲಿಂಗ ವ್ಯವಸ್ಥೆಯನ್ನಿಟ್ಟು ನೋಡಬೇಕೆ? ಎನ್ನುವುದನ್ನು ಪರಿಶೀಲಿಸಬೇಕಿದೆ". ಹೀಗೆ ಶೈಲಜ ಹಿರೇಮಠರವರು ಮಹಿಳೆಯರ ದುಡಿಮೆಗೆ ಸಂಬಂಧಿಸಿದಂತೆ ಹಲವಾರು ಪ್ರಶ್ನೆಗಳನ್ನು ಎತ್ತಿದ್ದಾರೆ. ಇದರಲ್ಲಿ ಮುಖ್ಯವಾಗಿ ಮಹಿಳೆಯರು ಹಣಕಾಸಿನ ಭಾಷೆಯಿಂದ ದೂರವಿರುವುದನ್ನು ಮತ್ತು ಅದಕ್ಕೆ ಇರುವಂತಹ ಕಾರಣಗಳ ಕುರಿತಾಗಿ ಚರ್ಚಿಸಬೇಕಾದ ಜರೂರಿದೆಯೆಂದು ತಿಳಿಸುತ್ತಾರೆ. ಈ ಪ್ರಶ್ನೆಯನ್ನು ಮುಂದಿಟ್ಟುಕೊಂಡು ಉದ್ಯೋಗ ಖಾತರಿ ಯೋಜನೆಯಲ್ಲಿ ಮಹಿಳೆಯರು ಈ ಹಣಕಾಸಿನ ಭಾಷೆಯಿಂದ ಅಥವಾ ಹಣಕಾಸಿನ ವ್ಯವಹಾರಗಳಿಂದ ಹೇಗೆ ಮತ್ತು ಏಕೆ ದೂರ ಸರಿದಿದ್ದಾರೆ ಎಂಬುದನ್ನು ತಿಳಿಯುವುದು ಮುಖ್ಯವಾಗುತ್ತದೆ.

ಉದ್ಯೋಗ ಖಾತರಿ ಯೋಜನೆಯು ಮುಖ್ಯವಾಗಿ ಮಹಿಳೆಯರಿಗೆ ಹಣಕಾಸಿನ ಬಾಷೆಯನ್ನು ಕಲಿಸಿಕೊಡುವುದರ ಮೂಲಕ ಅವರು ಸಬಲರಾಗುವುದರತ್ತ ಕೊಂಡೊಯ್ಯುತ್ತದೆ. ಅಂದರೆ ಗ್ರಾಮೀಣ ಭಾಗಗಳಲ್ಲಿ ಮಹಿಳೆಯರು ಶಿಕ್ಷಣದಿಂದ ವಂಚಿತರಾಗಿರುತ್ತಾರೆ ಹಾಗಾಗಿ ಇವರಿಗೆ ಹಣಕಾಸಿನ ಭಾಷೆಯಾದಂತಹ ಬ್ಯಾಂಕು, ಪಾಸ್‌ಬುಕ್ಕು, ಅಕೌಂಟು ಹೀಗೆ ಮುಂತಾದ ಬಾಷಿಕ ಪದಗಳ ಪರಿಚಯವೇ ಇಲ್ಲದಂತಹ ಸಂದರ್ಭದಲ್ಲಿ ಉದ್ಯೋಗ ಖಾತರಿ ಯೋಜನೆಯು ಮಹಿಳೆಯರ ಹೆಸರಲ್ಲಿ ಅಕೌಂಟನ್ನು ಮಾಡಿಸಲು ಮತ್ತು ಅವರ ಖಾತೆಗೆ ಬರುವಂತಹ ಹಣದ ಮೇಲೆ ಅವರಿಗೆ ಮಾತ್ರ ಅಧಿಕಾರ ಮತ್ತು ಹಕ್ಕು ಇರುವಂತೆ ಮಾಡಿದೆ. ಆದರೆ ಈ ಬಗೆಯ ಅಧಿಕಾರ ಮತ್ತು ಹಕ್ಕನ್ನು ಕೊಡಲು ಪುರುಷಶಾಹಿ ವ್ಯವಸ್ಥೆ ಸಿದ್ಧವಿಲ್ಲ. ಹಾಗಾಗಿ ಅವರನ್ನು ಈ ಬಗೆಯ ಚಟುವಟಿಕೆಗಳಿಂದ ದೂರ ಇಡಲಾಗುತ್ತಿದೆ. ಇದಕ್ಕೂ ಮುನ್ನ ಗ್ರಾಮೀಣ ಭಾಗಗಳಲ್ಲಿ ಸ್ತ್ರೀಶಕ್ತಿ ಸಂಘಗಳು ಮತ್ತು ಮಹಿಳಾ ಸಂಘಗಳು ಅಸ್ತಿತ್ವದಲ್ಲಿದ್ದವು ಹಾಗೆಯೇ ಇಂದಿಗೂ ಜಾರಿಯಲ್ಲಿವೆ. ಈ ಸಂಘಗಳಲ್ಲಿನ ಕೆಲವು ಮಹಿಳೆಯರು ಮಾತ್ರ ಈ ಬಗೆಯ ಹಣಕಾಸಿನ ಭಾಷೆಯನ್ನು ತಮ್ಮದಾಗಿಸಿಕೊಂಡಿರುತ್ತಾರೆ. ಮುಖ್ಯವಾಗಿ ಈ ಬಗೆಯ ಸಂಘಗಳಲ್ಲಿ ಸ್ವಲ್ಪ ಶಿಕ್ಷಣವನ್ನು ಪಡೆದಿರುವಂತಹ ಕೆಲವು ಮಹಿಳೆಯರು ಬ್ಯಾಂಕಿನ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುತ್ತಾರೆ. ಅವರೇ ಎಲ್ಲಾ ವಿಷಯಗಳಲ್ಲೂ ಮುಂದಿರುತ್ತಾರೆ. ಆದರೆ ಉಳಿದಂತಹ ಮಹಿಳೆಯರು ಈ ಬಗೆಯ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುವುದಿಲ್ಲ. ಆದರೆ ಉದ್ಯೋಗ ಖಾತರಿ ಯೋಜನೆಯು ಶಿಕ್ಷಣವನ್ನು ಪಡೆದಿರಲಿ ಅಥವಾ ಪಡೆಯದೇ ಇರಲಿ ಎಲ್ಲರಿಗೂ ಸರಿಸಮಾನವಾಗಿ ಬ್ಯಾಂಕಿನ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವಂತೆ ಮಾಡಿದೆ.

ಹಾಗಾಗಿ ಇದೊಂದು ವಿಶೇಷವಾಗಿ ಮಹಿಳೆಯರ ಆರ್ಥಿಕ ಭದ್ರತೆಯನ್ನು ಹೆಚ್ಚಿಸುವುದರತ್ತ ಗಮನಹರಿಸಿದೆ ಎಂದರೆ ತಪ್ಪಾಗಲಾರದು. ಈ ಬಗೆಯ ಹಣಕಾಸಿನ ಭಾಷೆ ಮತ್ತು ಹಣಕಾಸಿನ ವ್ಯವಹಾರಗಳಿಂದ ವಂಚಿತರನ್ನಾಗಿಸಿರುವುದು ಕೇವಲ ನಮ್ಮ ದೇಶಕ್ಕೆ ಮಾತ್ರ ಸೀಮಿತವಾಗಿಲ್ಲ. ಬದಲಾಗಿ ಮುಂದುವರೆದಂತಹ ದೇಶಗಳಲ್ಲಿಯೂ ಈ ಬಗೆಯ ಸಮಸ್ಯೆಗಳು ಇರುವುದು ಕಂಡುಬರುತ್ತದೆ.

ಉದ್ಯೋಗ ಖಾತರಿ ಯೋಜನೆಯಲ್ಲಿ ಜನರ ಬದಲಾಗಿ ಯಂತ್ರಗಳನ್ನು ಬಳಸುವಂತಹದ್ದನ್ನು ಮತ್ತು ಆ ಮೂಲಕ ಜನರಿಗೆ ವಂಚಿಸುತ್ತಿರುವುದನ್ನು ಕಾಣಲಾಗಿದೆ. ಆದರೆ ಗಾಂಧೀಜಿಯವರು ಈ ಯಂತ್ರ ನಾಗರೀಕತೆಯನ್ನು ವಿರೋಧಿಸುತ್ತಿದ್ದರು. ಅವರೇ ಹೇಳುವ ಹಾಗೆ "ನಾನು ಯಂತ್ರಗಳನ್ನು ಬೇಡ ಎನ್ನುವುದಿಲ್ಲ. ಆದರೆ ಶಾರೀರಿಕ ಶ್ರಮವನ್ನು ಕಡೆಗಣಿಸಿ ಯಂತ್ರವನ್ನೇ ಹೆಚ್ಚಾಗಿ ಅವಲಂಬಿಸುವುದು ತರವಲ್ಲ ಎಂದಷ್ಟೇ ಹೇಳುತ್ತೇನೆ. ಯಂತ್ರಗಳ ಬಳಕೆ ಹೆಚ್ಚಾದಂತೆಲ್ಲಾ ಮನುಕುಲ ಕೆಲಸವಿಲ್ಲದೇ ಬಳಲಬೇಕಾಗುತ್ತದೆ. ಯಂತ್ರಗಳ ಬಳಕೆಯ ಹಿಂದೆ ಮಾನವನ ಶ್ರಮವನ್ನು ಕಡಿಮೆ ಮಾಡುವುದಕ್ಕಿಂತಲೂ ಶೀಘ್ರಕಾಲದಲ್ಲಿ ಹೆಚ್ಚು ಪ್ರಮಾಣದಲ್ಲಿ ಲಾಭ ಗಳಿಸುವ ಹುನ್ನಾರವಿದೆ" ಎಂದು ಹೇಳಿದರು. ಉದ್ಯೋಗ ಖಾತರಿ ಯೋಜನೆಯಲ್ಲಿ ಯಂತ್ರಗಳನ್ನು ಬಳಕೆ ಮಾಡಬಾರದು ಎಂದು ಹೇಳಲಾಗುತ್ತದೆ. ಏಕೆಂದರೆ ಇವುಗಳ ಬಳಕೆಯಿಂದ ಜನರಿಗೆ ಕೆಲಸವಿಲ್ಲದಂತಾಗುತ್ತದೆ ಮತ್ತು ಜನರ ಆರ್ಥಿಕ ಜೀವನ ಮಟ್ಟ ಸುಧಾರಿಸುವುದಿಲ್ಲ ಎಂಬ ಕಾರಣಕ್ಕಾಗಿ. ಇದು ಗಾಂಧೀಜಿ ಪ್ರಣೀತ ಆಲೋಚನಾ ವಿಧಾನವಾಗಿದೆ. ಆದರೆ ಇದನ್ನು ಧಿಕ್ಕರಿಸಿ ಈ ಉದ್ಯೋಗ ಖಾತರಿ ಯೋಜನೆಯಲ್ಲಿ ಯಂತ್ರಗಳನ್ನು ಬಳಸುವುದರ ಮೂಲಕ ಜನರಿಗೆ ಕೆಲಸವಿಲ್ಲದಂತೆ ಮಾಡಲಾಗುತ್ತಿದೆ. ಹಾಗೆಯೇ ಇದರಿಂದ ಜನರನ್ನು ವಂಚಿಸುತ್ತಿದ್ದಾರೆ. ಗಾಂಧೀಜಿಯವರು ಯಂತ್ರ ನಾಗರೀಕತೆಯನ್ನು ವಿರೋಧಿಸುತ್ತಾರೆಯೇ ಹೊರತು ಯಂತ್ರಗಳ ನಿಷೇಧವನ್ನಲ್ಲ. ಇದರ ಬದಲಾಗಿ ಯಾವುದೇ ರೀತಿಯ ಶೋಷಣೆ ಇಲ್ಲದಿರುವ ಮಾನವ ಕೇಂದ್ರಿತವಾದ ಸ್ಥಳೀಯ ಆದ್ಯತೆಗಳಿಗೆ ಒತ್ತು ನೀಡುವ ಮತ್ತು ಸ್ಥಳೀಯರ ಶ್ರೇಯಸ್ಸಿಗಾಗಿ ಶ್ರಮಿಸುವ ಆರ್ಥಿಕ ವ್ಯವಸ್ಥೆಯನ್ನು ಗಾಂಧೀಜಿ ಸ್ವಾಗತಿಸುತ್ತಾರೆ. ಹೀಗೆ ಗಾಂಧೀಜಿಯವರು ಗ್ರಾಮೀಣ ಜನರ ಆರ್ಥಿಕ ಜೀವನ ಸುಧಾರಿಸುವುದಕ್ಕೆ ಯಂತ್ರಗಳು ಅಡ್ಡಿ ಪಡಿಸುತ್ತವೆ ಎಂದರೆ ಅದನ್ನು ವಿರೋಧಿಸುತ್ತಾರೆ ಎಂಬುದು ಅವರ ಮಾತಿನಿಂದ ತಿಳಿದುಬರುತ್ತದೆ. ಮುಖ್ಯವಾಗಿ ಗಾಂಧಿ ಮತ್ತು ಅಂಬೇಡ್ಕರ್ ಇಬ್ಬರೂ ಸಹಾ ಮಹಾನ್ ವ್ಯಕ್ತಿಗಳು. ಇವರಿಬ್ಬರ ಚಿಂತನೆಗಳನ್ನು ನಾವು ಒಪ್ಪಲೇ ಬೇಕಾಗುತ್ತದೆ. ಡಾ.ಮೋಗಳ್ಳಿ ಗಣೇಶ್‌ರವರು 'ದಲಿತರ ರಾಷ್ಟ್ರೀಯತೆ ಮತ್ತು ಗಾಂಧಿ ಅಂಬೇಡ್ಕರ್ ಯುಗ' ಎಂಬ ಲೇಖನದಲ್ಲಿ "ಗಾಂಧೀಜಿ ಮತ್ತು ಅಂಬೇಡ್ಕರ್ ಇವರಿಬ್ಬರ ದೃಷ್ಟಿಕೋನಗಳನ್ನು ರಾಷ್ಟ್ರೀಯ ಕಲ್ಪನೆಗಳಲ್ಲಿ ಹೋಲಿಸಿ ಭಿನ್ನವಾಗಿ ನೋಡಬಹುದು. ಗಾಂಧಿ ಅಂಬೇಡ್ಕರ್ ಇವರಿಬ್ಬರೂ

ನನ್ನ ಮಟ್ಟಿಗೆ ಇಪ್ಪತ್ತನೇ ಶತಮಾನದ ಬಹುದೊಡ್ಡ ಸೃಜನಶೀಲರೂ ಸಾಂಸ್ಕೃತಿಕ ವೀರರೂ ಹೌದು. ಸಮುದಾಯದ ಸಮಷ್ಠಿ ಧ್ಯಾನ ಚಿಂತನೆಯ ಪರಂಪರೆಯನ್ನು ನಿರೂಪಿಸುತ್ತಾ ಕಾಲದೇಶದ ಎಲ್ಲೆಗಳನ್ನೂ ನಿರೂಪಿಸುತ್ತಾ ಕಾಲದೇಶದ ಎಲ್ಲೆಗಳನ್ನೂ ನಿರ್ಜಾತಿ ನಿರ್ವರ್ಗೀಕರಣದಿಂದ ದಾಟುತ್ತಾ ಸಮುದಾಯದ ಮಿತಿಗಳನ್ನು ಮುರಿಯುವ ಹಾಗೆ ಆ ಸಮುದಾಯದ ಅಂತಃ ಸಾಕ್ಷಿಯನ್ನು ಬಲಪಡಿಸುವ ನಾಳಿನ ಆಶಯಗಳನ್ನು ಕಟ್ಟುವ ಮತ್ತು ಪರಂಪರೆಯ ಪುರಾಣಗಳನ್ನು ಹೊಸ ನಾದದಲ್ಲಿ ಬಿಂಬದಲ್ಲಿ ಮತ್ತೆ ಸೃಷ್ಟಿಸುವ ಯಾರೇ ಆದರೂ ಸಾಂಸ್ಕೃತಿಕ ವೀರರಾಗುತ್ತಾರೆ. ಒಂದು ಕಾಲಘಟ್ಟದ ಪುರಾಣವನ್ನು ಸೀಳಿ ಅದರೊಳಗೆ ತನ್ನ ಮತ್ತು ನಾಳಿನ ಹಾಗೂ ಹಿಂದಿನ ಎಲ್ಲ ಅನುಭವವನ್ನು ಹೊಸ ಛಾಪಿನಿಂದ ರೂಪಿಸುವವರೇ ಸಾಂಸ್ಕೃತಿಕ ವೀರರು. ಗಾಂಧಿ ಮತ್ತು ಅಂಬೇಡ್ಕರ್ ಆಧುನಿಕ ಭಾರತದ ಸಾಂಸ್ಕೃತಿಕ ವೀರರಾಗಿದ್ದು ಇವರಿಬ್ಬರನ್ನೂ ಪ್ರತ್ಯೇಕವಾಗಿಟ್ಟು ನೋಡುವುದು ಸೂಕ್ತವಲ್ಲ"[೧೦]. ಎಂದಿದ್ದಾರೆ. ಹೀಗೆ ಗಾಂಧಿ ಮತ್ತು ಅಂಬೇಡ್ಕರ್ ಇಬ್ಬರೂ ಸಹ ದೇಶದ ಮಹಾನ್ ಚಿಂತಕರು. ಇವರಿಬ್ಬರ ಚಿಂತನೆಗಳನ್ನು ದೇಶದ ಅಬಿವೃದ್ಧಿಗಾಗಿ ಅಳವಡಿಸಿಕೊಳ್ಳುವುದು ಮುಖ್ಯವಾಗಿರುತ್ತದೆ. ಮುಖ್ಯವಾಗಿ ಗಾಂಧೀಜಿಯವರ ದೇಶೀಯ ಚಿಂತನೆಗಳನ್ನು ಉದ್ಯೋಗ ಖಾತರಿ ಯೋಜನೆಯನ್ನು ರೂಪಿಸುವ ಸಂದರ್ಭದಲ್ಲಿ ಅಳವಡಿಸಿಕೊಂಡಿರುವುದು ಕಂಡುಬರುತ್ತದೆ. ಈ ಯೋಜನೆಗಳು ವಿಫಲತೆಯನ್ನು ಅನುಭವಿಸಿದಾಗ ಅಥವಾ ಸರಿಯಾಗಿ ಅನುಷ್ಠಾನಗೊಳ್ಳದಿದ್ದಾಗ ಅದಕ್ಕೆ ಕಾರಣಗಳನ್ನು ಹುಡುಕುತ್ತಾ ಸಾಗಿದರೆ ಅಂಬೇಡ್ಕರರ ಚಿಂತನೆಗಳು ಮುಖ್ಯವಾಗಿ ಗೋಚರಿಸುತ್ತವೆ. ಅಂದರೆ ಅಂಬೇಡ್ಕರರು ಈಗಾಗಲೇ ಗುರುತಿಸಿದಂತಹ ಅಂಶಗಳು ಮತ್ತೆ ಮತ್ತೆ ಪುನಾರಾವರ್ತಿತವಾಗುತ್ತಿವೆ. ಜಾತೀಯತೆ, ಅನಕ್ಷರತೆ, ಅಪೌಷ್ಠಿಕತೆ ಮುಂತಾದ ಕಾರಣಗಳಿಗಾಗಿ ಕೆಳ ಸಮುದಾಯದ ಜನರನ್ನು ಇಂದಿಗೂ ಅಸ್ಪೃಶ್ಯರಂತೆ ಕಾಣಲಾಗುತ್ತಿದೆ ಎಂಬುದನ್ನು ಈಗಾಗಲೇ ಅಂಬೇಡ್ಕರರು ತಿಳಿಸಿದ್ದಾರೆ. ಇದನ್ನು ಹೋಗಲಾಡಿಸುವುದು ಹೇಗೆ ಎಂಬುದನ್ನೂ ಸಹ ತಿಳಿಸಿಕೊಟ್ಟಿದ್ದಾರೆ. ಹಾಗಾಗಿ ಅಭಿವೃದ್ಧಿ ಯೋಜನೆಗಳನ್ನು ರೂಪಿಸುವ ಸಂದರ್ಭದಲ್ಲಿಯೇ ಗಾಂಧಿ ಮತ್ತು ಅಂಬೇಡ್ಕರ್ ಇವರಿಬ್ಬರ ಚಿಂತನೆಗಳನ್ನು ಅಳವಡಿಸಿಕೊಳ್ಳುವುದು ಸೂಕ್ತವೆನಿಸುತ್ತದೆ.

ಒಟ್ಟಾರೆಯಾಗಿ ಉದ್ಯೋಗ ಖಾತರಿ ಯೋಜನೆಯಲ್ಲಿ ಹಲವು ಬಗೆಯ ಲಿಂಗ ಅಸಮಾನತೆಯ ಅಂಶಗಳು ಕಂಡುಬಂದಿರುವುದನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಸಂಗ್ರಹಿಸಿದಂತಹ ಮಾಹಿತಿಯನ್ನು ಆಧರಿಸಿ ಪರಿಮಾಣಾತ್ಮಕ, ಗುಣಾತ್ಮಕ ಮತ್ತು ಲೈಂಗಿಕತಾವಾದಿಯಲ್ಲದ ಸಂಶೋಧನಾ ವಿಧಾನಗಳನ್ನು ಅಳವಡಿಸಿಕೊಳ್ಳುವುದರ ಮೂಲಕ ವಿಶ್ಲೇಷಣೆಗೆ ಒಳಪಡಿಸಿ ಸ್ಥೂಲವಾಗಿ ವಿವರಿಸಲಾಗಿದೆ. ಹಾಗಾಗಿ ಈ ಅಧ್ಯಾಯದಲ್ಲಿ ಸರಕಾರಿ ಧಾಖಲೆಗಳಲ್ಲಿ ಸೂಚಿಸಿರುವಂತಹ ದಾಖಲೆಗಳಿಗೂ ಮತ್ತು ಕ್ಷೇತ್ರಕಾರ್ಯದ ಮೂಲಕ

ಕಂಡುಕೊಂಡಂತಹ ಮಾಹಿತಿಗೂ ತುಂಬಾ ವ್ಯತ್ಯಾಸವಿರುವುದು ಕಂಡುಬರುತ್ತದೆ. ಮುಖ್ಯವಾಗಿ ಸರಕಾರಿ ದಾಖಲೆಗಳಲ್ಲಿನ ಅಂಕಿ ಅಂಶಗಳು ವಾಸ್ತವಕ್ಕೆ ಹತ್ತಿರವಿಲ್ಲ. ಅಂದರೆ ವಾಸ್ತವದಲ್ಲಿ ಗ್ರಾಮ ಪಂಚಾಯತಿಗಳಲ್ಲಿ ಜಾಬ್‌ಕಾರ್ಡ್‌ಗಳ ಸಂಖ್ಯೆಗೂ ಮತ್ತು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿನ ಗ್ರಾಮಗಳಿಗೆ ಭೇಟಿನೀಡಿದ ಸಂದರ್ಭದಲ್ಲಿ ಜನರನ್ನು ಮಾತನಾಡಿಸಿದಾಗ ಕಂಡುಬಂದಂತಹ ಮಾಹಿತಿಗಳಿಗೂ ತುಂಬಾ ವ್ಯತ್ಯಾಸವಿರುವುದು ಕಂಡುಬಂದಿದೆ. ಇದಕ್ಕೆಲ್ಲಾ ಮುಖ್ಯವಾಗಿ ಗ್ರಾಮಗಳಲ್ಲಿನ ಪಿತೃಪ್ರಧಾನ ಚಿಂತನೆಗಳು ಮುಖ್ಯವಾಗಿ ಕಾರಣೀಭೂತವಾಗಿವೆ. ಹಾಗಾಗಿ ಈ ಬಗೆಯ ವ್ಯತ್ಯಾಸಗಳನ್ನು ಕಂಡುಹಿಡಿಯುವುದು ಮತ್ತು ಲಿಂಗ ಸಮಾನತೆಯ ನೆಲೆಯಲ್ಲಿ ವಿಶ್ಲೇಷಣೆಗೆ ಒಳಪಡಿಸುವುದಕ್ಕೆ ಪರಿಮಾಣಾತ್ಮಕ, ಗುಣಾತ್ಮಕ ಮತ್ತು ಲೈಂಗಿಕತಾವಾದಿಯಲ್ಲದ ಸಂಶೋಧನಾ ವಿಧಾನಗಳು ಸಹಕಾರಿಯಾಗಿವೆ. ಈ ಹಿನ್ನಲೆಯಲ್ಲಿ ಈ ಸಂಶೋಧನಾ ವಿಧಾನಗಳನ್ನು ಅಳವಡಿಸಿಕೊಳ್ಳಲಾಗಿದೆ. ಆದರೆ ಈ ಯೋಜನೆಯು ಉತ್ತಮವಾದ ಯೋಜನಾ ನಿಯಮಗಳನ್ನು ಹೊಂದಿದ್ದರೂ ಸಹ ಗ್ರಾಮ ಮಟ್ಟದ ಸ್ಥಳೀಯ ಜನಪ್ರತಿನಿಧಿಗಳ ಮತ್ತು ಕೆಲವು ಅಧಿಕಾರಿ ವರ್ಗದವರ ನಿರ್ಲಕ್ಷ ಧೋರಣೆಯಿಂದ ಹಲವು ಲಿಂಗ ಅಸಮಾನತೆಯ ಅಂಶಗಳನ್ನು ಎದುರಿಸುವಂತಹ ಸಂದಿಗ್ಧತೆ ಎದುರಾಗಿದೆ. ಈ ಲಿಂಗ ಅಸಮಾನತೆಯು ಈ ಯೋಜನೆಯ ತೊಡಕು ಸಹ ಹೌದು.

## ಅಡಿ ಟಿಪ್ಪಣಿಗಳು

೧. ಬಡಿಗೇರ ಜಿ.ಎಲ್, ೨೦೦೫, ಭಾರತದಲ್ಲಿ ಗ್ರಾಮೀಣ ಅಭಿವೃದ್ಧಿ, ಚೇತನಾ ಬುಕ್ ಹೌಸ್, ಮೈಸೂರು, ಪು-೨೫

೨. ಠಾಕೂರದಾಸ್ ಬಂಗ್; ೧೯೯೮; ಗ್ರಾಮ ಸ್ವರಾಜ್ಯ ; ಕರ್ನಾಟಕ ಸರ್ವೋದಯ ಸಾಹಿತ್ಯ ಸಮಿತಿ; ಬೆಂಗಳೂರು; ಪು-೨೬,೨೭.

೩. ಅದೇ ; ಪು-೪೪

೪. ಗೀತಾ ಕೃಷ್ಣಮೂರ್ತಿ, ೨೦೦೯, ಮಹಿಳಾ ಹಕ್ಕುಗಳು ಮಾನವ ಹಕ್ಕುಗಳ ನೆಲೆಯಲ್ಲಿ, ಮಹಿಳಾ ಅಧ್ಯಯನ ಕೇಂದ್ರ, ಕ.ವಿ.ವಿ.ಹಂಪಿ, ಪು-೭೧.

೫. ಸೋಮಣ್ಣ ಜೆ; ೨೦೦೩; ಅಂಬೇಡ್ಕರ್ ಮತ್ತು ಸಾಮಾಜಿಕ ನ್ಯಾಯ; ಲಕ್ಷ್ಮಿ ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್, ಮೈಸೂರು. ಪು-೩.

೬. ಸರಸ್ವತಿ ದು. (ಸಂ); ನೀರದಾರಿ ದಲಿತ ಮಹಿಳಾ ಪ್ರಜ್ಞೆ ವಿಭಿನ್ನ ನೆಲೆಗಳಿಂದ; ೨೦೧೪; ಕವಿ ಪ್ರಕಾಶನ, ಉತ್ತರಕನ್ನಡ; ಪು-೪೨೪.

೭. ಶೈಲಜ ಹಿರೇಮಠ, ಅಕ್ಟೋಬರ್ ೨೦೧೪; ಪಂಚಾಯತ್ ರಾಜ್ ವ್ಯವಸ್ಥೆ: ರಾಜಕೀಯ ಮೀಸಲಾತಿ ಅನುಷ್ಠಾನ ಸಂದರ್ಭದಲ್ಲಿನ ತೊಡಕುಗಳು; ಹೊಸತು; ಪು-೩೪.

೮. ಶೈಲಜ ಹಿರೇಮಠ; ೨೦೧೨; ಮಹಿಳೆ ದುಡಿಮೆ,ಉತ್ಪಾದನೆ, ಆರ್ಥಿಕತೆ, ಸ್ವಾವಲಂಬನೆ ಇತ್ಯಾದಿ; ಮಹಿಳಾ ಅಧ್ಯಯನ ಸಂ-೧೨,ಸಂ-೨; ಪ್ರಸಾರಾಂಗ,ಕ.ವಿ.ವಿ,ಹಂಪಿ; ಪು-೩೯.

೯. ಮುಜಾಫರ್ ಅಸ್ಸಾದಿ; ೨೦೦೯; ಗಾಂಧಿಯ ಹಿಂದ್ ಸ್ವರಾಜ್, ಶತಮಾನದ ಸಂದರ್ಭದಲ್ಲಿಯ ವಿಮರ್ಶೆಗಳು; ವಿಸ್ಮಯ ಪ್ರಕಾಶನ ಮೈಸೂರು; ಪು-೫೫.

೧೦. ಚಿನ್ನಸ್ವಾಮಿ ಸೋಸಲೆ ಎನ್.(ಸಂ); ೨೦೧೦; ಡಾ.ಬಿ.ಆರ್.ಅಂಬೇಡ್ಕರ್ ಮತ್ತು ಸಮಕಾಲೀನ ದಲಿತರು; ಪ್ರಸಾರಾಂಗ,ಕನ್ನಡ ವಿಶ್ವವಿದ್ಯಾಲಯ,ಹಂಪಿ; ಪು-೨೮೧.

# ಅಧ್ಯಾಯ: ಎಂಟು

## ಸಮಾರೋಪ

### ಅಧ್ಯಯನದ ಫಲಿತಗಳು

## ಅಧ್ಯಾಯ–ಎಂಟು

# ಸಮಾರೋಪ

ಹೈದರಾಬಾದ್ ಕರ್ನಾಟಕ ಪ್ರದೇಶವು ಹಿಂದುಳಿದ ಪ್ರದೇಶವಾಗಿರುವುದರಿಂದ ಈ ಭಾಗದಲ್ಲಿನ ಜನರೂ ಸಹ ಹಿಂದುಳಿದಿದ್ದಾರೆ. ಈ ಭಾಗದಲ್ಲಿ ಮಹಿಳೆಯರು ಹೆಚ್ಚಿನ ರೀತಿಯಲ್ಲಿ ಸಮಸ್ಯೆಗಳನ್ನು ಅನುಭವಿಸುತ್ತಿದ್ದಾರೆ. ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹೀಗೆ ಹಲವಾರು ವಲಯಗಳಲ್ಲಿ ಸಮಸ್ಯೆಯನ್ನು ಅನುಭವಿಸುತ್ತಿದ್ದಾರೆ. ಹಾಗಾಗಿ ಇಲ್ಲಿನ ಜನರು ಆರ್ಥಿಕವಾಗಿ ತುಂಬಾ ಹಿಂದುಳಿದಿರುವುದರಿಂದ ಉದ್ಯೋಗವನ್ನರಸಿ ವಲಸೆ ಹೋಗುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಜನರ ಜೀವನ ಮಟ್ಟ ಸುಧಾರಿಸುವ ನಿಟ್ಟಿನಲ್ಲಿ ಉದ್ಯೋಗ ಖಾತರಿ ಯೋಜನೆಯು ಜಾರಿಯಲ್ಲಿದೆ. ಈ ಯೋಜನೆ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಈಗಾಗಲೇ ಜಾರಿಯಲ್ಲಿದೆ. ಆದರೂ ಜನರ ವಲಸೆ ತಪ್ಪಿಲ್ಲ ಮತ್ತು ಮಹಿಳೆಯರ ಮೇಲಿನ ಹಿಂಸೆ ತಪ್ಪಿಲ್ಲ. ಈ ನಿಟ್ಟಿನಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶದ ಮೂರು ಜಿಲ್ಲೆಗಳನ್ನು ಆಯ್ಕೆ ಮಾಡಿಕೊಂಡು ಕ್ಷೇತ್ರ ಅಧ್ಯಯನ ಕೈಗೊಂಡ ಸಂದರ್ಭದಲ್ಲಿ ಹಲವಾರು ಅಂಶಗಳು ಬೆಳಕಿಗೆ ಬಂದವು. ಮುಖ್ಯವಾಗಿ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಹಲವಾರು ಪ್ರಕರಣಗಳನ್ನು ಸಂದರ್ಶಿಸಿ ಮಾಹಿತಿಯನ್ನು ಸಂಗ್ರಹಿಸಿ ಅವುಗಳನ್ನು ವಿಶ್ಲೇಷಣೆಗೆ ಒಳಪಡಿಸಿದಾಗ ಉದ್ಯೋಗ ಖಾತರಿ ಯೋಜನೆಯು ಎಲ್ಲಿ ವಿಫಲತೆಯನ್ನು ಅನುಭವಿಸುತ್ತಿದೆ ಮತ್ತು ಲಿಂಗಸಂಬಂಧಿ ಅಂಶಗಳು ಎಲ್ಲಿ ಮರೆಯಾಗಿವೆ ಮತ್ತು ಆ ಕಾರಣಕ್ಕಾಗಿ ಮಹಿಳೆಯರು ಯಾವ ರೀತಿಯ ಹಿಂಸೆಯನ್ನು ಅನುಭವಿಸುತ್ತಿದ್ದಾರೆ ಎಂಬಂತಹ ವಿವರಗಳನ್ನು ಈಗಾಗಲೇ ಪ್ರಬಂಧದಲ್ಲಿ ವಿವರಿಸಲಾಗಿದೆ. ಮುಖ್ಯವಾಗಿ ಗಾಂಧೀಜಿಯವರ ಹಿಂದ್ ಸ್ವರಾಜ್ ಪರಿಕಲ್ಪನೆಯಂತೆ ಜಾರಿಗೆ ಬಂದಂತಹ ಈ ಯೋಜನೆಯು ವಾಸ್ತವದಲ್ಲಿ ತನ್ನ ಉದ್ದೇಶವನ್ನು ಪೂರೈಸಿಕೊಳ್ಳಲಾಗಿಲ್ಲ.

ಹಾಗೆಯೇ ಈ ಯೋಜನೆಯನ್ನು ರೂಪಿಸುವ ಹಂತದಿಂದ ಹಿಡಿದು ಕಾಮಗಾರಿಗಳು ಮುಕ್ತಾಯದ ಹಂತದವರೆಗೆ ಹಲವು ಬಗೆಯ ಲಿಂಗ ಅಸಮಾನತೆಯ ಅಂಶಗಳು ಇರುವುದು ಕಂಡುಬಂದಿದೆ. ಹಾಗೆಯೇ ಗ್ರಾಮೀಣ ಭಾಗಗಳಲ್ಲಿ ಇಂದಿಗೂ ಸಹ ಅಸ್ಪೃಶ್ಯತೆಯು ತಾಂಡವವಾಡುತ್ತಿದೆ. ಮತ್ತು ಈ ಕಾರಣವಾಗಿ ಕೆಳ ಜಾತಿಗಳು ತಮ್ಮ ಸ್ಥಾನಗಳಿಂದ ಪಲ್ಲಟಗೊಂಡಿರದೇ ಇರುವುದನ್ನು ಕಾಣಲಾಗಿದೆ. ಹೈದರಾಬಾದ್ ಕರ್ನಾಟಕ ಭಾಗಗಳಲ್ಲಿನ ಜನರಲ್ಲಿ ಈ ಜಾತಿಯ ವಿಷವರ್ತುಲದಲ್ಲಿ ಸಿಲುಕಿಕೊಂಡಿರುವುದು ಮತ್ತು ಆ ಕಾರಣಕ್ಕಾಗಿ ಅಭಿವೃದ್ಧಿ ಯೋಜನೆಗಳಿಂದ ವಂಚಿತರಾಗಿರುವುದು ಕಂಡುಬಂದಿದೆ. ಮುಖ್ಯವಾಗಿ ಈ ಯೋಜನೆಯಲ್ಲಿ ಹೆಚ್ಚಾಗಿ ಕೆಳ ಜಾತಿಯ ಜನರು ಅದರಲ್ಲಿಯೂ ಮಹಿಳೆಯರ ಪಾಲ್ಗೊಳ್ಳುವಿಕೆಯೇ ಅಧಿಕವಾಗಿರುವುದರಿಂದ ಇದರ ಫಲಾನುಭವಿಗಳಲ್ಲಿ ಹೆಚ್ಚಿನದಾಗಿ ಮಹಿಳೆಯರೇ ಇದ್ದಾರೆ. ಆದರೆ ಇವರಾರೂ ಕೂಡ ಆರ್ಥಿಕವಾಗಿ ಅಭಿವೃದ್ಧಿಯನ್ನು ಹೊಂದಿಲ್ಲ. ಸ್ಥಳೀಯ ಪಿತೃಪ್ರಧಾನ ಮೌಲ್ಯಗಳು ಮತ್ತು ಬಂಡವಾಳಶಾಹಿ ಮೌಲ್ಯಗಳು ಗ್ರಾಮ ಪಂಚಾಯತಿಗಳನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡಿರುವುದನ್ನು ಕಾಣಲಾಗಿದೆ. ಈ ಕಾರಣವಾಗಿ ಗ್ರಾಮೀಣ ಭಾಗಗಳಲ್ಲಿ ಇಂದಿಗೂ ಜಾತೀಯತೆ ಹಾಗೆಯೇ ಉಳಿದುಕೊಂಡು ಬಂದಿದೆ. ಉದ್ಯೋಗ ಖಾತರಿ ಯೋಜನೆಯು ರೂಪಿಸಿರುವ ನಿಯಮಗಳಂತೆ ಯಥಾವತ್ತಾಗಿ ಕೆಲಸಗಳನ್ನು ಅನುಷ್ಠಾನಕ್ಕೆ ತಂದರೆ ಜನರಿಗೆ ಯಾವುದೇ ಬಗೆಯ ತೊಂದರೆಯಾಗುವುದಿಲ್ಲ. ಆದರೆ ಇದು ಸಾಧ್ಯವಾಗುತ್ತಿಲ್ಲ. ಒಟ್ಟಾರೆಯಾಗಿ ಈ ಅಧ್ಯಯನದಿಂದ ಹಲವಾರು ಅಂಶಗಳು ಬೆಳಕಿಗೆ ಬಂದವು. ಅವುಗಳು ಅಧ್ಯಯನದ ಫಲಿತಗಳಾಗಿವೆ. ಅವು ಈ ಕೆಳಗಿನಂತಿವೆ.

**ಅಧ್ಯಯನದ ಫಲಿತಗಳು**

ಅಧ್ಯಯನದ ಫಲಿತಗಳನ್ನು ಮುಖ್ಯವಾಗಿ ಎರಡು ನೆಲೆಗಳಲ್ಲಿ ಗುರುತಿಸಿಕೊಳ್ಳಲಾಗಿದೆ. ಮೊದಲನೆಯದಾಗಿ ಉದ್ಯೋಗ ಖಾತರಿ ಯೋಜನೆಯು ಲಿಂಗ ಸಮಾನತೆಯ ನೆಲೆಯಲ್ಲಿ ರೂಪುಗೊಂಡಿರುವ ಬಗೆ ಮತ್ತು ಆ ಮೂಲಕ ಮಹಿಳೆಯರ ಸಬಲೀಕರಣಕ್ಕೆ ಹೇಗೆ ಕಾರಣವಾಗಿದೆ ಎಂಬುದನ್ನು ಗುರುತಿಸಲಾಗಿದೆ. ಎರಡನೆಯದಾಗಿ ಸ್ಥಳೀಯ ಪಿತೃಪ್ರಧಾನ ವ್ಯವಸ್ಥೆಯ ಕಾರಣವಾಗಿ ಈ ಯೋಜನೆಯ ಅನುಷ್ಠಾನದ ಸಂದರ್ಭದಲ್ಲಿ ಲಿಂಗ ಅಸಮಾನತೆಯ ನೆಲೆಗಳು ಹೇಗೆ ಸ್ಥಿರೀಕರಿಸಲ್ಪಟ್ಟಿವೆ ಮತ್ತು ಈ ಪಿತೃಪ್ರಧಾನ ಮೌಲ್ಯಗಳು ಮಹಿಳೆಯರ ಸ್ವಾತಂತ್ರ್ಯವನ್ನು ಹೇಗೆ ಹತ್ತಿಕ್ಕಲ್ಪಟ್ಟಿವೆ ಎಂಬಂತಹ ಅಂಶಗಳನ್ನು ಕ್ಷೇತ್ರಕಾರ್ಯದಲ್ಲಿ ಕಂಡುಬಂದಂತಹ ಮಾಹಿತಿಗಳನ್ನು ಆಧರಿಸಿ ಫಲಿತಗಳನ್ನು ಗುರುತಿಸಲಾಗಿದೆ.

೨೦೦೬ರಲ್ಲಿ ಜಾರಿಗೆ ಬಂದಂತಹ ಉದ್ಯೋಗ ಖಾತರಿ ಯೋಜನೆಯು ಹಲವು ಲಿಂಗ ಸಮಾನತೆಯ ಅಂಶಗಳನ್ನು ಹೊಂದಿರುವುದು ಮಹಿಳೆಯರಲ್ಲಿ ಹಲವು ಬಗೆಯ ಬದಲಾವಣೆಗೆ ಎಡೆಮಾಡಿಕೊಟ್ಟಿದೆ. ಮುಖ್ಯವಾಗಿ ಈ ಯೋಜನೆಯ ಕಾಮಗಾರಿಗಳಲ್ಲಿ

ಭಾಗವಹಿಸುವಂತಹ ಸ್ತ್ರೀ-ಪುರುಷರಿಗೆ ಸಮಾನವೇತನವನ್ನು ಕೊಡಲಾಗುತ್ತಿದೆ. ಈ ಕಾರಣವಾಗಿ ಉದ್ಯೋಗ ಖಾತರಿ ಯೋಜನೆಯಲ್ಲಿ ಮಹಿಳೆಯರು ಹೆಚ್ಚು ಹೆಚ್ಚು ಒಲವು ತೋರುತ್ತಿದ್ದಾರೆ ಹಾಗೂ ಈ ಯೋಜನೆಯಲ್ಲಿ ಪಾಲ್ಗೊಳ್ಳುತ್ತಿದ್ದಾರೆ.

ಈ ಯೋಜನೆಯು ಮಹಿಳೆಯರಿಗೆ ಹಕ್ಕಿನ ಪರಿಭಾಷೆಯನ್ನು ಕಲಿಸಿಕೊಟ್ಟಿದೆ. ಅಂದರೆ ಗ್ರಾಮೀಣ ಭಾಗಗಳಲ್ಲಿನ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಅನಕ್ಷರರಾಗಿರುತ್ತಾರೆ. ಆ ಕಾರಣಕ್ಕಾಗಿ ಇವರನ್ನು ವಂಚಿಸಿ ಕೆಲಸಗಳನ್ನು ಕೊಡುವುದರಲ್ಲಿ, ಕೂಲಿ ನೀಡುವುದರಲ್ಲಿ ವ್ಯತ್ಯಾಸಗಳೇನಾದರೂ ಕಂಡುಬಂದರೆ ಅಥವಾ ವಿಳಂಬವಾದರೆ, ಕೆಲಸದ ಸ್ಥಳಗಳಲ್ಲಿ ಮಹಿಳೆಯರಿಗೆಂದೇ ಇರುವಂತಹ ಸೌಲಭ್ಯಗಳನ್ನು ನೀಡದೇ ಇದ್ದಾಗ ಅವುಗಳನ್ನು ತಮ್ಮ ಹಕ್ಕಿನ ರೂಪದಲ್ಲಿ ಪ್ರಶ್ನಿಸುವಂತಹ ಅಧಿಕಾರವನ್ನು ಮತ್ತು ಆ ಮೂಲಕ ಸೌಲಭ್ಯಗಳನ್ನು ಪಡೆಯುವಂತಹ ಅವಕಾಶವನ್ನು ಕಲ್ಪಿಸಿಕೊಟ್ಟಿದೆ. ಹಾಗೆಯೇ ಮಹಿಳೆಯರು ಹೆಚ್ಚು ಹೆಚ್ಚು ಸಂಘಟಿತರಾಗುವಂತೆ ಮಾಡಿದೆ.

ಉದ್ಯೋಗ ಖಾತರಿ ಯೋಜನೆಯು ಮುಖ್ಯವಾಗಿ ಮಹಿಳೆಯರಿಗೆ ಹಣಕಾಸಿನ ಭಾಷೆಯನ್ನು ಕಲಿಸಿಕೊಟ್ಟಿದೆ. ಅಂದರೆ ಗ್ರಾಮೀಣ ಭಾಗಗಳಲ್ಲಿನ ಮಹಿಳೆಯರು ಕುಟುಂಬದ ಆಚೆಗಿನ ಹಣಕಾಸಿನ ವ್ಯವಹಾರದ ಬಗ್ಗೆ ಅಂದರೆ ಬ್ಯಾಂಕ್ ವ್ಯವಹಾರಗಳ ಬಗ್ಗೆ ಅರಿವನ್ನು ಪಡೆದುಕೊಂಡಿರುವುದಿಲ್ಲ. ಆದರೆ ಈ ಯೋಜನೆಯು ಮಹಿಳೆಯರಿಗೆ ಬ್ಯಾಂಕ್ ವ್ಯವಹಾರಗಳ ಬಗ್ಗೆ ಮತ್ತು ಹಣಕಾಸಿನ ನಿರ್ವಹಣೆಯ ಬಗೆಗೆ ತಿಳಿದುಕೊಳ್ಳುವಂತೆ ಮಾಡಿದೆ. ಸಮಾಜದ ಅತ್ಯಂತ ಕೆಳ ಸ್ತರದಲ್ಲಿರುವಂತಹ ಜಾತಿ ಸಮುದಾಯದ ಮಹಿಳೆಯರೂ ಸಹ ಇಂದು ಬ್ಯಾಂಕ್ ವ್ಯವಹಾರಗಳನ್ನು ನಿರ್ವಹಿಸುತ್ತಿದ್ದಾರೆ. ಆ ಕಾರಣಕ್ಕಾಗಿ ಈ ಯೋಜನೆಯ ಫಲಾನುಭವಿಗಳಾಗಿರುವಂತಹ ಮಹಿಳೆಯರು ಈ ಬ್ಯಾಂಕ್ ವ್ಯವಹಾರಗಳ ಬಗ್ಗೆ ಸಂಪೂರ್ಣವಾದಂತಹ ಅರಿವನ್ನು ಹೊಂದಿ ಸ್ವತಃ ತಾವೇ ವ್ಯವಹರಿಸುವುದನ್ನು ಕಲಿತಿದ್ದಾರೆ. ಇದರಿಂದ ಸಮಾಜದಲ್ಲಿ ತಮ್ಮ ಅಸ್ತಿತ್ವವನ್ನು ಗುರುತಿಸಿಕೊಳ್ಳುವಂತಾಗಿದೆ. ಈ ಎಲ್ಲಾ ಬದಲಾವಣೆಗಳು ಉದ್ಯೋಗ ಖಾತರಿ ಯೋಜನೆಯಿಂದ ಸಾಧ್ಯವಾಗಿದೆ.

ಉದ್ಯೋಗ ಖಾತರಿ ಯೋಜನೆಯ ಕಾಮಗಾರಿಗಳ ಸ್ಥಳಗಳಲ್ಲಿ ಮಹಿಳೆಯರಿಗೆಂದೇ ಪ್ರತ್ಯೇಕವಾದಂತಹ ಸೌಲಭ್ಯಗಳನ್ನು ಒದಗಿಸಿಕೊಟ್ಟಿದೆ. ಮುಖ್ಯವಾಗಿ ಚಿಕ್ಕ ಮಕ್ಕಳನ್ನು ನೋಡಿಕೊಳ್ಳಲು ಆಯಾಗಳನ್ನು ನೇಮಿಸುವುದು, ಶೆಲ್ಟರ್ ವ್ಯವಸ್ಥೆಯನ್ನು ಕಲ್ಪಿಸುವುದು, ಪ್ರತ್ಯೇಕವಾದಂತಹ ಶೌಚಾಲಯದ ವ್ಯವಸ್ಥೆಯನ್ನು ಮಾಡುವುದು ಹೀಗೆ ಹಲವು ಸೌಲಭ್ಯಗಳನ್ನು ಒದಗಿಸಿದೆ. ಈ ಎಲ್ಲಾ ಕಾರಣಗಳಿಗಾಗಿ ಮಹಿಳೆಯರು ಈ ಯೋಜನೆಯಲ್ಲಿ ಹೆಚ್ಚು ಹೆಚ್ಚು ಪಾಲ್ಗೊಳ್ಳುವಂತೆ ಮಾಡಿದೆ.

ಉದ್ಯೋಗ ಖಾತರಿ ಯೋಜನೆಯಲ್ಲಿ ಕಾಯಕಬಂಧು(ಮೇಸ್ತ್ರಿ)ಗಳನ್ನು ನೇಮಕ ಮಾಡುವುದರಲ್ಲಿ ಶೇ.೫೦ರಷ್ಟು ಮೀಸಲಾತಿಯನ್ನು ಮಹಿಳೆರಿಗೆ ನೀಡಲಾಗಿದೆ. ಅಂದರೆ ಸ್ತ್ರೀ–ಪುರುಷರಿಬ್ಬರಿಗೂ ಸಮಾನವಾದ ಮೀಸಲಾತಿಯನ್ನು ಕಲ್ಪಿಸಿಕೊಟ್ಟಿದೆ. ಈ ಕಾಯಕಬಂಧುಗಳ ಕಾರ್ಯ ಮುಖ್ಯವಾಗಿ ಜಾಬ್‌ಕಾರ್ಡ್‌ಗಳನ್ನು ಮಾಡಿಸುವುದು, ಉದ್ಯೋಗ ಖಾತರಿ ಯೋಜನೆಯ ಕೆಲಸಕ್ಕಾಗಿ ಅರ್ಜಿಯನ್ನು ಸಲ್ಲಿಸುವಂತೆ ಮಾಡುವುದು, ಕೆಲಸದ ಸ್ಥಳಗಳಲ್ಲಿ ಕೂಲಿಕಾರರ ಹಾಜರಾತಿಯನ್ನು ಹಾಕುವುದು ಹೀಗೆ ಹಲವು ಕಾರ್ಯಗಳನ್ನು ಮಾಡಬೇಕಾಗುತ್ತದೆ. ಈ ಮೇಸ್ತ್ರಿ ಕೆಲಸಗಳನ್ನು ಹಿಂದಿನಿಂದಲೂ ಪುರುಷರೇ ನಿರ್ವಹಿಸಿಕೊಂಡು ಬಂದಿರುವುದರಿಂದ ಮಹಿಳೆಯರಿಗೆ ಈ ಅವಕಾಶ ಇಲ್ಲದಂತಾಗಿತ್ತು. ಆದರೆ ಉದ್ಯೋಗ ಖಾತರಿ ಯೋಜನೆಯು ಕಾಯಕಬಂಧು ಕಾರ್ಯಕ್ಕೆ ಸ್ತ್ರೀ–ಪುರುಷರಿಬ್ಬರಿಗೂ ಸಮಾನವಾದ ಅವಕಾಶಗಳನ್ನು ಒದಗಿಸಿಕೊಟ್ಟಿರುವುದರಿಂದ ಮಹಿಳೆಯರು ಈ ಕೆಲಸಗಳನ್ನು ಸಮರ್ಥರಾಗಿ ಮಾಡಲು ಮುಂದಾಗಿದ್ದಾರೆ. ಇದು ಉತ್ತಮ ಬೆಳವಣಿಗೆಯಾಗಿದ್ದು, ಈ ಬದಲಾವಣೆಗೆ ಉದ್ಯೋಗ ಖಾತರಿ ಯೋಜನೆಯೇ ಕಾರಣವಾಗಿದೆ.

ಉದ್ಯೋಗ ಖಾತರಿ ಯೋಜನೆಯು ಗ್ರಾಮೀಣ ಬಾಗಗಳಲ್ಲಿ ಇರುವಂತಹ ವಿಧವೆ ಮಹಿಳೆಯರು, ಒಂಟಿ ಮಹಿಳೆಯರು, ದೇವದಾಸಿ ಮಹಿಳೆಯರು, ವೃದ್ಧ ಮಹಿಳೆಯರು ಹೀಗೆ ಎಲ್ಲಾ ವರ್ಗದ ಮಹಿಳೆಯರಿಗೆ ವಿಶೇಷವಾದಂತಹ ಸೌಲಭ್ಯಗಳನ್ನು ಒದಗಿಸಿಕೊಟ್ಟಿರುವುದರಿಂದ ಇವರು ಸ್ವಾವಲಂಬಿಗಳಾಗಿ ಜೀವಿಸುವುದಕ್ಕೆ ಅವಕಾಶ ಮಾಡಿಕೊಟ್ಟಿದೆ. ಹಾಗಾಗಿ ಇಂದಿಗೂ ಗ್ರಾಮೀಣ ಬಾಗಗಳಲ್ಲಿನ ಈ ಬಗೆಯ ಮಹಿಳೆಯರು ಸ್ವತಂತ್ರವಾಗಿ ಜೀವಿಸುವುದಕ್ಕೆ ಅವಕಾಶ ಮಾಡಿಕೊಟ್ಟಿದೆ.

ಹೀಗೆ ಉದ್ಯೋಗ ಖಾತರಿ ಯೋಜನೆಯು ಲಿಂಗ ಸಮಾನತೆಯ ಅಂಶಗಳನ್ನು ಒಳಗೊಂಡಿದ್ದು ಮಹಿಳೆಯರಿಗೆ ವಿಶೇಷವಾದಂತಹ ಅವಕಾಶಗಳನ್ನು ಮತ್ತು ಸೌಲಭ್ಯಗಳನ್ನು ಒದಗಿಸಿಕೊಡುವುದರ ಮೂಲಕ ಮಹಿಳೆಯರ ಸ್ವಾವಲಂಬಿ ಜೀವನಕ್ಕೆ ಎಡೆಮಾಡಿಕೊಟ್ಟಿದೆ. ಮೇಲಿನ ಎಲ್ಲ ಅಂಶಗಳು ಉದ್ಯೋಗ ಖಾತರಿ ಯೋಜನೆಯಲ್ಲಿನ ನಿಯಮಗಳನ್ನು ಮತ್ತು ಕ್ಷೇತ್ರಕಾರ್ಯದಲ್ಲಿ ಕಂಡುಬಂದಂತಹ ಅಂಶಗಳನ್ನಿಟ್ಟುಕೊಂಡು ವಿಶ್ಲೇಷಣೆಗೆ ಒಳಪಡಿಸಲಾಗಿ ಕಂಡು ಬಂದಂತಹ ಫಲಿತಗಳಾಗಿವೆ. ಆದರೆ ಈ ಯೋಜನೆಯ ಅನುಷ್ಠಾನದ ಸಂದರ್ಭವನ್ನು ಗಮನಿಸಿದಾಗ ವ್ಯವಸ್ಥೆಯಲ್ಲಿ ಪಿತೃಪ್ರಧಾನ ಮೌಲ್ಯಗಳು ತುಂಬಾ ಬಲಿಷ್ಠವಾಗಿದ್ದು ಅವುಗಳ ಕಾರಣವಾಗಿ ಮಹಿಳೆಯರು ಹೆಚ್ಚು ಹೆಚ್ಚು ತುಳಿತಕ್ಕೆ ಒಳಗಾಗಿರುವುದು ಕಂಡುಬಂದಿದೆ.

ಉದ್ಯೋಗ ಖಾತರಿ ಯೋಜನೆಯ ಕಾಮಗಾರಿಗಳನ್ನು ರೂಪಿಸುವ, ಅನುಷ್ಠಾನಕ್ಕೆ ತರುವ ಮತ್ತು ಕೆಲಸದ ಸ್ಥಳಗಳಲ್ಲಿ ಸ್ಥಳೀಯ ಪಿತೃಪ್ರಧಾನ ಮೌಲ್ಯಗಳ ಕಾರಣವಾಗಿ ಮಹಿಳೆಯರ

ಹಕ್ಕುಗಳು ಹತ್ತಿಕ್ಕಲ್ಪಟ್ಟಿವೆ. ಈ ಎಲ್ಲಾ ಸಂದರ್ಭಗಳಲ್ಲಿ ಪಿತೃಪ್ರಧಾನ ಮೌಲ್ಯಗಳು ಸ್ಥಿರೀಕರಿಸಲ್ಪಟ್ಟಿವೆ. ಉದ್ಯೋಗ ಖಾತರಿ ಯೋಜನೆಯನ್ನು ರೂಪಿಸುವ ಸಂದರ್ಭದಲ್ಲಿ ಗ್ರಾಮ ಸಭೆಗಳನ್ನು ಮಾಡಬೇಕಾಗುತ್ತದೆ. ಈ ಸಂದರ್ಭದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ತುಂಬಾ ಕಡಿಮೆ ಇದೆ. ಮತ್ತು ಶಿಕ್ಷಣವನ್ನು ಪಡೆದಂತಹ ಗ್ರಾಮ ಪಂಚಾಯತಿ ಮಹಿಳಾ ಸದಸ್ಯೆಯರೂ ಸಹ ಈ ಗ್ರಾಮ ಸಭೆಗಳಲ್ಲಿ ಪಾಲ್ಗೊಳ್ಳದೇ ಇರುವುದು ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ಕಂಡುಬಂದಿದೆ. ಇದಕ್ಕೆ ಮುಖ್ಯ ಕಾರಣ ಕುಟುಂಬದಲ್ಲಿನ ಅಧಿಕಾರ ವರ್ಗೀಕರಣ. ಅಂದರೆ ಕುಟುಂಬದಲ್ಲಿ ಪುರುಷನೇ ಉನ್ನತ ಸ್ಥಾನದಲ್ಲಿರುವುದರಿಂದ ಅವನ ನೇರ ಆಡಳಿತಕ್ಕೆ ಮಹಿಳೆಯರು ಒಳಪಟ್ಟಿರುತ್ತಾರೆ. ಹಾಗಾಗಿ ಮಹಿಳೆಯರಿಗೆ ಈ ಬಗೆಯ ಸಾರ್ವಜನಿಕವಾಗಿ ಸಭೆ ಸಮಾರಂಭಗಳಲ್ಲಿ ಗುರುತಿಸಿಕೊಳ್ಳುವಂತಹ ಸ್ವಾತಂತ್ರ್ಯ ಇರುವುದಿಲ್ಲ. ಇದು ಉದ್ಯೋಗ ಖಾತರಿ ಯೋಜನೆಯ ಕಾಮಗಾರಿಗಳನ್ನು ರೂಪಿಸುವ ಹಂತದಲ್ಲಿಯೂ ಗೋಚರಿಸುತ್ತಿದೆ.

ಅಧ್ಯಯನದ ವ್ಯಾಪ್ತಿ ಪ್ರದೇಶಗಳಲ್ಲಿನ ಗ್ರಾಮ ಪಂಚಾಯತಿಗಳಲ್ಲಿ ಈ ಯೋಜನೆಯಲ್ಲಿನ ಕಾಮಗಾರಿಗಳನ್ನು ಅನುಷ್ಠಾನಕ್ಕೆ ತರುವಂತಹ ಸಂದರ್ಭದಲ್ಲಿ ಬಹಳಷ್ಟು ಅವ್ಯವಹಾರ ನಡೆದಿರುವುದು ಕಂಡುಬಂದಿದೆ. ಇದು ಪುರುಷರು ತಮ್ಮ ಸ್ವಾರ್ಥಕ್ಕಾಗಿ ಮಾಡಿಕೊಂಡಂತಹದ್ದು. ಗ್ರಾಮ ಪಂಚಾಯತಿಗಳಲ್ಲಿ ನಡೆಯುವ ಭ್ರಷ್ಟಾಚಾರದ ಪರಿಣಾಮದಿಂದ ಮಹಿಳೆಯರ ಮೇಲೆ ತುಂಬಾ ಪರಿಣಾಮವನ್ನು ಬೀರುತ್ತದೆ. ಅಂದರೆ ಗ್ರಾಮೀಣ ಭಾಗದಲ್ಲಿನ ಮಹಿಳೆಯರು ಈ ಯೋಜನೆಯ ಪಾಲುದಾರರಾಗುವುದರ ಮೂಲಕ ಸಾರ್ವಜನಿಕ ವಲಯಕ್ಕೆ ತಮ್ಮನ್ನು ತಾವು ತೆರೆದುಕೊಂಡಿದ್ದರು. ಆದರೆ ಸ್ಥಳೀಯ ಪುರುಷಶಾಹಿ ವ್ಯವಸ್ಥೆಯ ಭ್ರಷ್ಟಾಚಾರದ ಕಾರಣವಾಗಿ ಮಹಿಳೆಯರು ಸಾಮಾಜಿಕ ಸಮಸ್ಯೆಗಳಿಗೆ ಸಿಲುಕಿಕೊಂಡಿದ್ದಾರೆ. ಅಂದರೆ ಈ ಯೋಜನೆಯಲ್ಲಿನ ಅವ್ಯವಹಾರಗಳ ಕಾರಣವಾಗಿ ಮಹಿಳೆಯರು ಪರಾವಲಂಬಿಗಳಾಗಿದ್ದಾರೆ. ಹಾಗಾಗಿ ವ್ಯವಸ್ಥೆಯಲ್ಲಿ ಇವರು ತಮ್ಮ ಅಸ್ತಿತ್ವವನ್ನೇ ಕಳೆದುಕೊಳ್ಳುತ್ತಿದ್ದಾರೆ. ಜೊತೆಗೆ ಗ್ರಾಮ ಪಂಚಾಯತಿಗಳಲ್ಲಿ ನಡೆಯುವ ಅವ್ಯವಹಾರಗಳ ಕಾರಣವಾಗಿ ಮಹಿಳೆಯರು ಈ ಯೋಜನೆಯ ಫಲಾನುಭವಿಗಳಾಗುವುದನ್ನೇ ತಡೆಯುತ್ತಿವೆ ಮತ್ತು ಮಹಿಳೆಯರ ಸ್ವಾವಲಂಬಿ ಬದುಕಿಗೆ ತಡೆಯನ್ನುಂಟು ಮಾಡುತ್ತಿವೆ.

ಯೋಜನೆಯು ಬಹಳಷ್ಟು ಮಾನವೀಯ ಮೌಲ್ಯಗಳನ್ನು ಹೊಂದಿದ್ದು, ಇವುಗಳಾವುವೂ ಯೋಜನೆಯ ಕಾಮಗಾರಿಗಳ ಅನುಷ್ಠಾನದಲ್ಲಿ ಕಂಡುಬರುವುದಿಲ್ಲ. ಮುಖ್ಯವಾಗಿ ಮಹಿಳೆಯರಿಗಾಗಿ ಚಿಕ್ಕ ಮಕ್ಕಳಿಗಾಗಿ ಒಂದು ಶೆಲ್ಟರ್ ವ್ಯವಸ್ಥೆ ಮತ್ತು ಆ ಮಕ್ಕಳನ್ನು ನೋಡಿಕೊಳ್ಳಲು ಆಯಾಗಳನ್ನು ನೇಮಿಸಬೇಕಾಗುತ್ತದೆ. ಆದರೆ ವಾಸ್ತವದಲ್ಲಿ ಕೆಲವು ಗ್ರಾಮ ಪಂಚಾಯತಿಗಳ ವ್ಯಾಪ್ತಿಗಳಲ್ಲಿ ಮಾತ್ರ ಈ ಬಗೆಯ ಸೌಲಭ್ಯಗಳನ್ನು ಒದಗಿಸಿಕೊಟ್ಟಿವೆ. ಆದರೆ ಹಲವು ಗ್ರಾಮ ಪಂಚಾಯತಿಗಳಲ್ಲಿ ಈ ಬಗೆಯ ಸೌಲಭ್ಯಗಳು ಮಹಿಳೆಯರಿಗೆ ಒದಗಿಸದೇ ಇರುವುದು

ಕಂಡುಬಂದಿದೆ. ಸ್ಥಳೀಯ ಮಟ್ಟದಲ್ಲಿನ ಪಿತೃಪ್ರಧಾನ ವ್ಯವಸ್ಥೆಯ ರಾಜಕಾರಣದ ಕಾರಣವಾಗಿ ಈ ಬಗೆಯ ಸೌಲಭ್ಯಗಳಿಂದ ಮಹಿಳೆಯರು ವಂಚಿತರಾಗಿದ್ದಾರೆ. ಹಾಗೆಯೇ ಕೆಲವು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಈ ಯೋಜನೆಯಲ್ಲಿ ವಿಧವೆಯರು, ಒಂಟಿ ಮಹಿಳೆಯರು, ದೇವದಾಸಿ ಮಹಿಳೆಯರು ಫಲಾನುಭವಿಗಳಾಗಿರುವುದು ಕಂಡುಬಂದಿದೆ. ಆದರೆ ಅಧ್ಯಯನ ವ್ಯಾಪ್ತಿಯಲ್ಲಿನ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ಈ ಮಹಿಳೆಯರಿಗೆ ಕೆಲಸಗಳು ದೊರೆತಿಲ್ಲ. ಕೆಲಸವನ್ನು ಪಡೆದಂತಹ ಮಹಿಳೆಯರಿಗೆ ಉದ್ಯೋಗ ಖಾತರಿ ಯೋಜನೆಯ ಕಾಮಗಾರಿಗಳಲ್ಲಿ ನಿರಂತರ ನೂರು ದಿನಗಳ ಕೆಲಸ ದೊರೆಯುತ್ತಿಲ್ಲ. ಹಾಗೆಯೇ ಕೆಲಸದ ಸ್ಥಳಗಳಲ್ಲಿ ಈ ಮಹಿಳೆಯರಿಗೆ ಯಾವುದೇ ಬಗೆಯ ಸ್ವಾತಂತ್ರ್ಯ ಇಲ್ಲದಿರುವುದು ಕಂಡುಬಂದಿದೆ. ಒಟ್ಟಾರೆಯಾಗಿ ಉದ್ಯೋಗದ ಭದ್ರತೆ ಮಹಿಳೆಯರಿಗೆ ದೊರೆಯದಂತೆ ಪಿತೃಪ್ರಧಾನ ವ್ಯವಸ್ಥೆ ನೋಡಿಕೊಳ್ಳುತ್ತಿದೆ.

ಮಹಿಳೆಯರ ಹಕ್ಕೊತ್ತಾಯಗಳು ಪಿತೃಪ್ರಧಾನ ಮೌಲ್ಯಗಳಡಿಯಲ್ಲಿ ಹತ್ತಿಕ್ಕಲ್ಪಡುತ್ತಿವೆ/ ದಮನಿಸಲ್ಪಟ್ಟಿವೆ. ಇದಕ್ಕೆ ಮುಖ್ಯ ಉದಾಹರಣೆಯೆಂದರೆ ಕೊಪ್ಪಳದಲ್ಲಿ ಕೂಲಿಕಾರರ ಮೇಲೆ ನಡೆದಂತಹ ಲಾಠಿಚಾರ್ಜ್ ಪ್ರಕರಣವೇ ಸಾಕ್ಷಿಯಾಗಿದೆ. ಈ ಪ್ರಕರಣ ನಡೆದು ಬಹಳಷ್ಟು ವರ್ಷಗಳಾದರೂ ಈ ಮಹಿಳೆಯರು ಉದ್ಯೋಗ ಖಾತರಿ ಯೋಜನೆಯಲ್ಲಿ ಕೆಲಸ ಮಾಡಲು ಹಿಂಜರಿಯುತ್ತಿದ್ದಾರೆ. ಮುಖ್ಯವಾಗಿ ಈ ಭಾಗದಲ್ಲಿ ರೂಪಿತಗೊಂಡ ರೈತ ಸಂಘಟನೆಯ ಕಾರಣವಾಗಿ ಮಹಿಳೆಯರು ತಮ್ಮ ಸ್ವಾತಂತ್ರವನ್ನು ಕಳೆದುಕೊಳ್ಳುವಂತಾಗಿದೆ. ಅಂದರೆ ಮಹಿಳೆಯರಿಗೆ ಇರುವಂತಹ ಸ್ವಾತಂತ್ರ್ಯವನ್ನು ರೈತ ಸಂಘಟನೆಯು ತನ್ನ ಹಿಡಿತಕ್ಕೆ ತೆಗೆದುಕೊಂಡಿತು. ಹಾಗೆಯೇ ಸ್ಥಳೀಯ ಸರಕಾರಿ ಅಧಿಕಾರಿಗಳು, ಚುನಾಯಿತ ಪ್ರತಿನಿಧಿಗಳು ಮತ್ತು ಕಾನೂನು ವ್ಯವಸ್ಥೆಯೂ ಸಹ ಮಹಿಳೆಯರ ಹಕ್ಕುಗಳನ್ನು ದಮನಿಸಿದವು. ಆ ಕಾರಣಕ್ಕಾಗಿ ಮಹಿಳೆಯರು ಈ ಯೋಜನೆಯಲ್ಲಿ ಪಾಲ್ಗೊಳ್ಳಲೂ ಯೋಚಿಸುವಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡಿದೆ.

ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನದ ಸಂದರ್ಭದಲ್ಲಿ ಕಾಮಗಾರಿ ಸ್ಥಳಗಳಲ್ಲಿ ಹಿಂದೂ–ಮುಸ್ಲೀಂ ಧರ್ಮದ ಹೆಣ್ಣುಮಕ್ಕಳಿಗೆ ಪ್ರತ್ಯೇಕ ಸಮಸ್ಯೆಗಳಿವೆ. ಉದ್ಯೋಗ ಖಾತ್ರಿ ಕೂಲಿಗಾಗಿ ಪ್ರತಿಭಟಿಸಿದ ಕೊಪ್ಪಳ ಭಾಗದ ಮುಸ್ಲಿಂ ಮಹಿಳೆಯೊಬ್ಬರನ್ನು ಮುಸ್ಲಿಂ ಧಾರ್ಮಿಕ ಪುರುಷರು ಧರ್ಮದಿಂದ ಹೊರಹಾಕಿದ್ದಾರೆ. ಅಂತೆಯೇ ಈ ಪ್ರತಿಭಟನೆಯಲ್ಲಿ ಭಾಗವಹಿಸಿದ ಹಿಂದೂ ಹೆಣ್ಣುಮಕ್ಕಳು ಇಂತಹ ಸಮಸ್ಯೆಯನ್ನು ಎದುರಿಸಿಲ್ಲ. ಮುಸ್ಲಿಂ ಧರ್ಮದ ಪ್ರಕಾರ ಉದ್ಯೋಗ ಖಾತ್ರಿಯಂತಹ ಕೆಲಸಕ್ಕೆ ಅದರಲ್ಲೂ ಮಹಿಳೆಯರು ಬಹಿರಂಗವಾಗಿ ದುಡಿಯಲು ಹೋಗಬಾರದು, ರೈತ ಸಂಘ, ಮಹಿಳಾ ಸಂಘದ ಪ್ರತಿಭಟನೆಯಲ್ಲಿ ಭಾಗವಹಿಸಬಾರದು ಎನ್ನುವುದು ಮುಸ್ಲಿಂ ಧಾರ್ಮಿಕ ಪುರುಷರ ನಿಲುವಾಗಿದೆ.

ನರೇಗಾ ಯೋಜನೆಯ ಜಾಬ್‌ಕಾರ್ಡ್ ಮತ್ತು ಬ್ಯಾಂಕ್‌ಖಾತೆ ಕುಟುಂಬದ ಮುಖ್ಯಸ್ಥರ ಹೆಸರಲ್ಲಿರಬೇಕೆಂದು ನಿಯಮವಿದೆ. ಈ ನಿಯಮದಂತೆ ಕುಟುಂಬದ ಮುಖ್ಯಸ್ಥ ಪುರುಷನೇ ಆಗಿರುವುದರಿಂದ ನರೇಗಾ ಯೋಜನೆಯಲ್ಲಿ ಮಹಿಳೆ ದುಡಿದರೂ ಅದರ ಕೂಲಿ ಗಂಡನ ಅಥವಾ ಮನೆಯ ಯಜಮಾನನ ಅಕೌಂಟಿಗೆ ಹೋಗುತ್ತದೆ. ಇದರಿಂದಾಗಿ ಕುಟುಂಬದ ಜವಾಬ್ದಾರಿಯನ್ನು ನಿಭಾಯಿಸುವ ಎಷ್ಟೋ ಹೆಣ್ಣುಮಕ್ಕಳಿಗೆ ನೇರವಾಗಿ ಹಣ ಸಂದಾಯವಾಗುವುದಿಲ್ಲ. ಹಲವು ಕಡೆಗಳಲ್ಲಿ ಮನೆಯ ಯಜಮಾನ ಯೋಜನೆಯಿಂದ ಬಂದಂತಹ ಹಣವನ್ನು (ಕುಡಿತ ಮುಂತಾದ ಚಟಗಳಿಗೆ) ತಾನೇ ಖರ್ಚು ಮಾಡುವುದು ಇದೆ. ಈ ಬಗ್ಗೆ ಅನೇಕ ಹೆಣ್ಣುಮಕ್ಕಳು ತಮ್ಮ ಕಷ್ಟಗಳನ್ನು ಹೇಳಿಕೊಂಡಿದ್ದಾರೆ. ಇದನ್ನು ಮನಗಂಡು ಕೆಲವು ಸಂಘಟನೆಗಳು ಮಹಿಳೆಯರ ಹೆಸರಲ್ಲಿ ಜಾಬ್‌ಕಾರ್ಡ್ ಮತ್ತು ಬ್ಯಾಂಕ್‌ಖಾತೆ ತೆರೆದಿರುವುದು ಕಂಡುಬಂದಿದೆ.

ಗ್ರಾಮ ಪಂಚಾಯ್ತಿಯಲ್ಲಿ ಮಹಿಳಾ ಸದಸ್ಯರು ಉದ್ಯೋಗ ಖಾತ್ರಿ ಕೆಲಸ ಮಾಡಿಸಿದಾಗ ಆಯಾ ಹಳ್ಳಿಯು ನೋಡುವ ಕ್ರಮಕ್ಕೂ, ಅದೇ ಪುರುಷ ಸದಸ್ಯರು ಕೆಲಸ ಮಾಡಿಸಿದಾಗ ನೋಡುವ ಕ್ರಮಕ್ಕೂ ಭಿನ್ನವಾಗಿದೆ. ಇಲ್ಲಿ ಮುಖ್ಯವಾಗಿ ಮಹಿಳೆ ನಿಯತ್ತಿನಿಂದ ಕೆಲಸ ಮಾಡಿದರೂ ಆಯಾ ಕೆಲಸದ ಮೇಲೆ ಕಂಪ್ಲೇಂಟ್ ಕೊಡುವುದು ಹೆಚ್ಚಾಗಿದೆ. ಲಂಚದ ರೂಪದಲ್ಲಿ ಯಾರಿಗೂ ಹಣ ಕೊಡದೆ ಕೆಲಸ ಮಾಡಿಸುವ ಸಂದರ್ಭ ಬಂದಾಗ ಹೆಚ್ಚು ಹೆಚ್ಚು ಕಂಪ್ಲೇಂಟ್ ಕೊಟ್ಟು ತೊಂದರೆ ಕೊಡುವ ಗಂಡಸರಿರುವುದು ಕಂಡುಬಂದಿದೆ. ಹೀಗೆ ಕೆಲಸ ಮಾಡುವುದಕ್ಕೆ ಹೆಚ್ಚು ವಿರೋಧವನ್ನು ಸೃಷ್ಟಿ ಮಾಡಿದರೆ ಮುಂದೆ ಮಹಿಳಾ ಸದಸ್ಯರು ಕಾಮಗಾರಿ ಕೆಲಸವೇ ಬೇಡವೆಂದು ಹಿಂದೆ ಸರಿಯುವ ಸಾಧ್ಯತೆಯೂ ಇದೆ. ಕೆಲಸ ಬೇಡ ಎಂದು ಹೇಳುವಂತಹ ವಾತಾವರಣವನ್ನು ಸೃಷ್ಟಿಸುವ ಕಾರಣಕ್ಕೂ ಈ ಬಗೆಯ ವಿರೋಧವನ್ನು ಪುರುಷ ಸದಸ್ಯರೆ ಸೃಷ್ಟಿಸಿರುವ ಸಾಧ್ಯತೆಗಳೂ ಕಂಡುಬಂದಿವೆ.

ಕೊಪ್ಪಳದಲ್ಲಿ ಕೂಲಿಕಾರರ ಮೇಲೆ ಲಾಠಿಚಾರ್ಜ್ ಪ್ರಕರಣ ಸಂಭವಿಸಿ ನಾಲ್ಕು ವರ್ಷಗಳು ಗತಿಸುತ್ತಾ ಬಂದರೂ ಕೃಷಿ ಕೂಲಿ ಕಾರ್ಮಿಕರು ಇಂದಿಗೂ ಭಯದ ವಾತಾವರಣದಲ್ಲಿ ಬದುಕುವಂತಹ ಸ್ಥಿತಿ ನಿರ್ಮಾಣವಾಗಿದೆ. ಕಾರಣ ತಪ್ಪು ಮಾಡದ ಅಮಾಯಕ ಕೂಲಿಕಾರ್ಮಿಕರು ದುಡಿದ ಕೂಲಿ ಕೇಳಿದ ತಪ್ಪಿಗೆ ಇಂದಿಗೂ ಕೋರ್ಟಿಗೆ ಅಲೆಯುವಂತಾಗಿದೆ. ನಾಲ್ಕು ವರ್ಷಗಳಿಂದ ಪ್ರತಿ ತಿಂಗಳು ತಪ್ಪದೇ ಕೋರ್ಟಿಗೆ ಹಾಜರಾಗಲು ಕೂಲಿಕಾರರು ಹೈರಾಣಾಗಿದ್ದಾರೆ. ಹೀಗಾಗಿ ಪ್ರತಿಸಲವು ಸಾಲ ಮಾಡಿ ಕೋರ್ಟಿಗೆ ಅಲೆಯುತ್ತಿರುವುದು ಒಂದು ಸಮಸ್ಯೆಯಾದರೆ, ಮತ್ತೊಂದು ಸಮಸ್ಯೆಯೆಂದರೆ ಈ ಭಾಗದಲ್ಲಿ ಬೇಸಿಗೆ ಸಮಯದಲ್ಲಿ ಕೂಲಿ ಕಾರ್ಮಿಕರಿಗೆ ದುಡಿಯಲು ಕೆಲಸವೇ ಇರುವುದಿಲ್ಲ. ಕಡ್ಡಾಯವಾಗಿ ಕೋರ್ಟಿಗೆ ಹಾಜರಾಗಬೇಕಿರುವುದರಿಂದ ದೂರದ ಊರುಗಳಿಗೆ ಕೂಲಿಗಾಗಿ ವಲಸೆ ಹೋಗುವುದು ಕೂಡ ಕಷ್ಟವಾಗಿದೆ.

ಉದ್ಯೋಗ ಖಾತ್ರಿ ಯೋಜನೆಯ ಕೆಲಸಗಳನ್ನು ಹಂಚುವಲ್ಲಿ ಜಾತಿ ಶ್ರೇಣೀಕರಣಕ್ಕೆ ಪೂರಕವಾದ ಕೆಲಸಗಳನ್ನು ಹಂಚುವುದು ಕಂಡುಬಂದಿದೆ. ಈ ಅನುಭವಗಳನ್ನು ದಲಿತ ಮಹಿಳೆಯರು ಹೇಳಿಕೊಂಡಿದ್ದಾರೆ. ಈ ಹೇಳಿಕೆಗಳನ್ನು ಸಂಶೋಧನೆಯಲ್ಲಿ ಬಳಸಿಕೊಳ್ಳಲಾಗಿದೆ. ಇದರಲ್ಲಿ ಕಂಡುಬರುವ ಮುಖ್ಯ ಅಂಶವೆಂದರೆ, ಗ್ರಾಮೀಣ ಭಾಗದಲ್ಲಿರುವ ಜಾತಿ ಪದ್ಧತಿಯ ಆಚರಣೆಯು ಉದ್ಯೋಗ ಖಾತ್ರಿ ಯೋಜನೆಯಲ್ಲಿಯೂ ಮುಂದುವರಿದಿರುವುದು ಕಾಣುತ್ತದೆ. ಅಂತೆಯೇ ದಲಿತರು ಮಾಡುವ ಕೆಲಸದಲ್ಲಿಯೇ ಮುಂದುವರೆಯುವಂತೆ ಕೆಲಸಗಳನ್ನು ಹಂಚುವ ರೀತಿಯನ್ನು ನೋಡಿದರೆ ಗ್ರಾಮ ಪಂಚಾಯತಿಗಳಲ್ಲಿ ಮೇಲು ಜಾತಿಗಳ ಪ್ರಾಭಲ್ಯ ಎದ್ದು ಕಾಣುತ್ತದೆ. ಅಂತೆಯೇ ಮೇಲು ಜಾತಿಯ ಕೂಲಿಕಾರರಿಗೆ ಹೊಲಕ್ಕೆ ಸಂಬಂಧಿಸಿದ ಕೆಲಸಗಳನ್ನು ಕೊಡುವುದು, ದಲಿತರಿಗೆ ಗ್ರಾಮದ ಹೊಲಸನ್ನು ಸ್ವಚ್ಚಮಾಡುವ ಕೆಲಸವನ್ನು ಕೊಡುವುದು ಕ್ಷೇತ್ರಕಾರ್ಯದಲ್ಲಿ ಹಲವು ಕಡೆಗಳಲ್ಲಿ ಗಮನಕ್ಕೆ ಬಂದಿದೆ. ಇದು ದಲಿತ ಹೊಸ ಪೀಳಿಗೆಯ ಮೇಲೆ ತುಂಬಾ ಪರಿಣಾಮ ಬೀರುತ್ತದೆ. ಇಲ್ಲಿಯೂ ದಲಿತ ಮಹಿಳೆಯರು ಈ ಕೆಲಸ ಮಾಡುವುದಕ್ಕೆ ಅನಿವಾರ್ಯ ಒಪ್ಪಿದರೆ, ದಲಿತ ಗಂಡಸರು ಇಂತಹ ಕೆಲಸಕ್ಕೆ ಬರುವವರ ಪ್ರಮಾಣ ಕಡಿಮೆ ಇರುವುದು ಕಂಡುಬರುತ್ತದೆ. ಇದನ್ನು ನೋಡಿದರೆ ದಲಿತ ಮಹಿಳೆಯರ ಸ್ಥಿತಿ ದಲಿತ ಗಂಡಸರಿಗಿಂತಲೂ ಶೋಚನೀಯ ಎನ್ನುವುದು ಈ ಪ್ರಕರಣಗಳಿಂದ ಕಂಡುಬರುತ್ತದೆ.

ಉದ್ಯೋಗ ಖಾತ್ರಿ ಯೋಜನೆಯು ಒಂದು ಕುಟುಂಬಕ್ಕೆ ನೂರು ದಿನಗಳ ಕೆಲಸದ ಕ್ರಮವೂ ಗ್ರಾಮೀಣ ಭಾಗದಲ್ಲಿ ಕೆಲವೊಮ್ಮೆ ಹೇಗೆ ಅಪ್ರಸ್ತುತವಾಗುತ್ತದೆ ಎನ್ನುವುದು ಈ ಅಧ್ಯಯನದಿಂದ ಕಂಡುಬಂದಿದೆ. ಕಾರಣ ಅವಿಭಕ್ತ ಕುಟುಂಬಗಳು ಇರುವಲ್ಲಿ ನೂರು ದಿನಗಳ ಕೂಲಿ ಬದುಕಿಗೆ ಸಾಕಾಗುವುದಿಲ್ಲ, ಗ್ರಾಮೀಣ ಭಾಗದಲ್ಲಿ ಈಗಲೂ ಅವಿಭಕ್ತ ಕುಟುಂಬಗಳಿವೆ. ಒಂದು ಕುಟುಂಬಕ್ಕೆ ನೂರು ದಿನದ ಕೆಲಸವೆಂದರೆ ಆಯಾ ಕುಟುಂಬದಲ್ಲಿ ಹತ್ತಾರು ಸದಸ್ಯರಿರುತ್ತಾರೆ. ಆಗ ಆ ಕುಟುಂಬದ ಜೀವನ ನಿರ್ವಹಣೆಗೆ ಒಬ್ಬ ಸದಸ್ಯರು ಕೆಲಸ ಮಾಡಿದರೆ ಹೇಗೆ ಸಾಲುತ್ತೆ ಎಂದು ಕೆಲವರು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಪ್ರಶ್ನೆ ಮಾಡಿದರು. ಅಂತೆಯೇ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಸದ್ಯಕ್ಕೆ ದಿನವೊಂದಕ್ಕೆ ೧೯೧ ರೂ.ಗಳನ್ನು ಕೂಲಿ ಕೊಡಲಾಗುತ್ತದೆ. ಆದರೆ ಈಗಿನ ಜೀವನಾವಶ್ಯಕ ವಸ್ತುಗಳ ಧರ ಹೆಚ್ಚಾಗಿರುವುದರಿಂದ ಈ ಕೂಲಿ ಜೀವನ ನಿರ್ವಹಣೆಗೆ ಸಾಕಾಗುವುದಿಲ್ಲ, ಈ ಕೂಲಿ ಧರವನ್ನು ಹೆಚ್ಚಿಸಬೇಕೆನ್ನುವುದನ್ನು ಮುಖ್ಯವಾಗಿ ದಲಿತ ಮಹಿಳೆಯರು ಹೇಳಿಕೊಂಡಿದ್ದಾರೆ. ಇಲ್ಲಿ ಕೂಲಿಯನ್ನು ಹೊರತು ಪಡಿಸಿ ಬೇರೆ ಆದಾಯಗಳು ದಲಿತ ಸಮುದಾಯಕ್ಕೆ ಇಲ್ಲದಿರುವುದರಿಂದ ದಲಿತ ಮಹಿಳೆಯರಿಗೆ ಈ ಸಮಸ್ಯೆ ಹೆಚ್ಚಾಗಿ ಕಾಡಿರುವುದು ಕಂಡುಬರುತ್ತದೆ.

ಉದ್ಯೋಗ ಖಾತ್ರಿ ಯೋಜನೆಯನ್ನು ದುರುಪಯೋಗ ಮಾಡಿಕೊಂಡ ಅನೇಕ ಪ್ರಕರಣಗಳಲ್ಲಿ ಗುತ್ತಿಗೆ ಆಧಾರದಲ್ಲಿ ಕೆಲಸ ಕೊಡುವುದೊಂದಿದೆ. ಉದಾಹರಣೆಗೆ ಹತ್ತು ಲಕ್ಷಮೊತ್ತದ

ಕೆಲಸವನ್ನು ಆಯಾ ಗ್ರಾಮದ ಗಂಡಸರಿಗೆ ಐದೋ ಆರು ಲಕ್ಷಕ್ಕೆ ಗುತ್ತಿಗೆ ನೀಡಲಾಗುತ್ತದೆ. ಹೀಗೆ ಗುತ್ತಿಗೆ ಆಯಾ ಊರಿನ ಜನರ ಹೊಂದಾಣಿಕೆಯಿಂದ ನಡೆದಿರುತ್ತದೆ. ಹೀಗೆ ಗುತ್ತಿಗೆ ಹಿಡಿದ ಕಾರಣ ಕೇವಲ ಗಂಡಸರು ಹೆಚ್ಚು ಅವಧಿ ನಿರಂತರ ಕೆಲಸ ಮಾಡಿ ಆಯಾ ಕೆಲಸವನ್ನು ಮುಗಿಸಿಕೊಡುತ್ತಾರೆ. ಆದರೆ ನಿಯಮಾನುಸಾರ ಹತ್ತು ಲಕ್ಷದ ಕೆಲಸಕ್ಕೆ ಬೇಕಾದ ದಾಖಲಾತಿಗಳನ್ನು ಗ್ರಾಮಪಂಚಾಯತಿ ಸೃಷ್ಟಿ ಮಾಡುತ್ತದೆ. ಹೀಗೆ ಗುತ್ತಿಗೆ ಕೆಲಸವನ್ನು ಗಂಡಸರು ಬೆಳಗಿನ ೩-೪ ಗಂಟೆಗೆ ಹೋಗುವುದಿದೆ, ಅಥವಾ ಬೆಳದಿಂಗಳ ದಿನಮಾನಗಳಲ್ಲಿ ರಾತ್ರಿಯೂ ಕೆಲಸ ಮಾಡುತ್ತಾರೆ. ಇಂತಹ ಗುತ್ತಿಗೆ ಕೂಲಿಯಲ್ಲಿ ಒಟ್ಟಾರೆ ಮಹಿಳೆಯರ ಭಾಗವಹಿಸುವಿಕೆ ಶೂನ್ಯವಾಗಿದೆ. ಕಾರಣ ರಾತ್ರಿ ಹೊತ್ತು ಕೆಲಸ ಮಾಡುವುದು ಒಂದು ಕಾರಣವಾದರೆ, ಗಂಡಸರು ಬೇಗ ಕೆಲಸ ಮುಗಿಸುವುದರಿಂದಾಗಿ ಕೂಲಿಯ ಹಣವೂ ನಿಗದಿಪಡಿಸಿದ್ದಕ್ಕಿಂತ ಹೆಚ್ಚು ಹಂಚಿಕೆಯಾಗುವ ಸಾದ್ಯತೆ ಇದೆ. ಹೀಗಾಗಿ ಗಂಡಸರು ಅವರ ಮನೆಯ ಹೆಣ್ಣುಮಕ್ಕಳನ್ನು ಈ ಗುತ್ತಿಗೆ ಕೆಲಸಕ್ಕೆ ಕರೆದುಕೊಳ್ಳುವುದಿಲ್ಲ. ಹೀಗಿದ್ದೂ ಮಹಿಳೆಯರು ಈ ಕೆಲಸದಲ್ಲಿ ಭಾಗವಹಿಸಿದಂತೆ ದಾಖಲೆಗಳನ್ನು ಸೃಷ್ಟಿ ಮಾಡುತ್ತಾರೆ. ಹೀಗೆ ಗುತ್ತಿಗೆ ಆಧಾರದ ದುಡಿಮೆ ಕಾನೂನು ಬಾಹಿರ ಹೇಗೋ, ಅದು ಗಂಡಸರನ್ನು ಮಾತ್ರ ಒಳಗೊಳ್ಳುವ ಪುರುಷ ಪ್ರಧಾನ ವ್ಯವಸ್ಥೆಯನ್ನು ಪೋಷಿಸುವ ಜಮೀನ್ದಾರಿ ವ್ಯವಸ್ಥೆಯ ಪಳೆಯುಳಿಕೆಯಂತಿದೆ.

ಬಳ್ಳಾರಿ, ಕೊಪ್ಪಳ ಮತ್ತು ರಾಯಚೂರು ಜಿಲ್ಲೆಗಳಲ್ಲಿನ ಬಹುತೇಕ ಜನರಿಗೆ ಇಂದಿಗೂ ಈ ಯೋಜನೆಯ ಬಗೆಗೆ ಅರಿವು ಇಲ್ಲ. ಹಾಗಾಗಿ ಗ್ರಾಮ ಪಂಚಾಯತಿಗಳು ನಡೆಸುವ ಗ್ರಾಮ ಸಭೆಗಳಲ್ಲಿ ಮಹಿಳೆಯರ ಭಾಗವಹಿಸುವಿಕೆಯ ಪ್ರಮಾಣ ತುಂಬಾ ಕಡಿಮೆ ಇದೆ. ಮತ್ತು ಈ ಭಾಗದ ಜನರು ಕೆಲಸವನ್ನರಸಿ ಬೇರೆ ಊರುಗಳಿಗೆ ವಲಸೆ ಹೋಗುತ್ತಿರುವುದು ಇಂದಿಗೂ ಕಂಡುಬರುತ್ತಿದೆ.

ಯೋಜನೆಯ ಅನುಷ್ಠಾನದ ಸಂದರ್ಭದಲ್ಲಿ ಗ್ರಾಮಪಂಚಾಯತಿ ಅಧಿಕಾರಿಗಳು ಮತ್ತು ಚುನಾಯಿತ ಪ್ರತಿನಿಧಿಗಳು ಮಹಿಳೆಯರ ವಿಷಯದಲ್ಲಿ ಅಮಾನವೀಯವಾಗಿ ವರ್ತಿಸುವುದು ವ್ಯಾಪಕವಾಗಿ ಕಂಡುಬಂದಿದೆ. ಜೊತೆಗೆ ಯೋಜನೆಯ ಅನೇಕ ಕಾಮಗಾರಿ ಸ್ಥಳಗಳಲ್ಲಿ ಮಹಿಳೆಯರಿಗೆ ನಿಯಮದ ಪ್ರಕಾರ ಯಾವುದೇ ಸೌಲಭ್ಯಗಳು ಒದಗಿಸಿಲ್ಲದಿರುವುದು ಕಂಡುಬಂದಿದೆ. (ಹೆಣ್ಣುಮಕ್ಕಳು ಕೆಲಸ ಮಾಡುವಲ್ಲಿ ಪ್ರತ್ಯೇಕ ಶೌಚಾಲಯದ ನಿರ್ಮಾಣ, ಚಿಕ್ಕ ಮಕ್ಕಳಿದ್ದರೆ ಆ ಮಕ್ಕಳನ್ನು ನೋಡಿಕೊಳ್ಳುವ ಶೆಲ್ಟರ್ ವ್ಯವಸ್ಥೆ ಇತ್ಯಾದಿ). ಉದ್ಯೋಗ ಖಾತರಿ ಯೋಜನೆಯಲ್ಲಿ ಸಮಯಕ್ಕೆ ಸರಿಯಾಗಿ ಕೂಲಿ ಪಾವತಿಯಾಗುತ್ತಿಲ್ಲ. ಆ ಕಾರಣಕ್ಕಾಗಿ ಕುಟುಂಬಗಳಲ್ಲಿ ಮಹಿಳೆಯರು ಪುರುಷರಿಂದ ಹಿಂಸೆಯನ್ನು ಅನುಭವಿಸುತ್ತಿದ್ದಾರೆ.

ದಲಿತ ಮಹಿಳೆ ಮತ್ತು ದಲಿತೇತರ ಮಹಿಳೆಯರ ಸಮಸ್ಯೆಗಳು ತುಂಬಾ ವಿಭಿನ್ನವಾಗಿವೆ. ಅಂದರೆ ಯೋಜನೆಯ ಕಾಮಗಾರಿಗಳ ಕೆಲಸದ ಸ್ಥಳಗಳಲ್ಲಿ ಕೆಲಸಗಳ ಹಂಚಿಕೆ ಮಾಡುವಂತಹ

ಸಂದರ್ಭದಲ್ಲಿಯೂ ದಲಿತ ಮಹಿಳೆಯರಿಗೆ ಮತ್ತು ದಲಿತೇತರ ಮಹಿಳೆಯರಿಗೆ ಕೆಲಸಗಳನ್ನು ಪ್ರತ್ಯೇಕವಾಗಿಯೇ ವಿಂಗಡಿಸಲಾಗಿರುತ್ತದೆ. ಮುಖ್ಯವಾಗಿ ಗ್ರಾಮಗಳಲ್ಲಿನ ಚರಂಡಿ ಸ್ವಚ್ಛ ಮಾಡುವಂತಹ, ಸ್ಮಶಾನಗಳನ್ನು ಸ್ವಚ್ಛ ಮಾಡುವ ಕೆಲಸಗಳನ್ನು ದಲಿತ ಮಹಿಳೆಯರಿಗೆ ವಹಿಸಿದರೆ, ಗಿಡಗಳನ್ನು ನೆಡುವುದು, ಚೆಕ್ ಡ್ಯಾಮ್‌ಗಳನ್ನು ನಿರ್ಮಿಸುವ ಕೆಲಸಗಳಿಗೆ ದಲಿತೇತರ ಮಹಿಳೆಯರಿಗೆ ಕೆಲಸಗಳನ್ನು ವಹಿಸುತ್ತಿರುವುದು ಕಂಡುಬಂದಿದೆ. ಹೀಗೆ ಮಾಡುತ್ತಿರುವುದರಿಂದ ಸಾಂಪ್ರದಾಯಿಕವಾಗಿ ಹಿಂದಿನಿಂದಲೂ ನಡೆದುಕೊಂಡು ಬಂದಂತಹ ಜಾತಿಯಾಧಾರಿತ ಕೆಲಸಗಳನ್ನು ಪುನರ್ ಸೃಷ್ಠಿಸುವಂತಾಗುತ್ತಿದೆ ಮತ್ತು ಹೀಗೆ ಕೆಲಸಗಳನ್ನು ವರ್ಗೀಕರಿಸುವುದರ ಹಿಂದಿನ ಮತ್ತೊಂದು ರಾಜಕಾರಣವೆಂದರೆ ಮಹಿಳೆಯರನ್ನು ಈ ಉದ್ಯೋಗ ಖಾತರಿ ಯೋಜನೆಯ ಕೆಲಸಗಳಿಂದ ವಂಚಿತರನ್ನಾಗಿ ಮಾಡುತ್ತಿರುವುದು. ಈ ಎಲ್ಲಾ ಬೆಳವಣಿಗೆಗಳ ಹಿಂದೆ ಪಿತೃಪ್ರಧಾನ ವ್ಯವಸ್ಥೆ ಕಾರ್ಯ ನಿರ್ವಹಿಸುತ್ತಿದೆ. ಒಟ್ಟಾರೆಯಾಗಿ ಉದ್ಯೋಗ ಖಾತರಿ ಯೋಜನೆಯಲ್ಲಿ ಮಹಿಳೆ ಹೇಗೆ ಲಿಂಗದ ನೆಲೆಯಲ್ಲಿ ಅವಗಣನೆಗೆ ಒಳಗಾಗಿದ್ದಾಳೆ ಎಂದು ತಿಳಿಸಿದರೂ ಅದು ಜಾತಿ ವ್ಯವಸ್ಥೆಯ ಮೇಲು ಕೀಳಿನ ಮಧ್ಯೆಯೂ ಮಹಿಳೆಯು ಭಿನ್ನವಾದ ಸಮಸ್ಯೆಗಳನ್ನು ಎದುರಿಸುತ್ತಿದ್ದಾಳೆ ಎಂಬುದನ್ನು ಗುರುತಿಸಲಾಗಿದೆ.

ಸರಕಾರೇತರ ಸ್ವಯಂ ಸೇವಾ ಸಂಸ್ಥೆಗಳು ಈ ಮೂರೂ ಜಿಲ್ಲೆಗಳಲ್ಲಿನ ಜನರಿಗೆ ಯೋಜನೆಯ ಕುರಿತಾದ ಅರಿವನ್ನು ಮೂಡಿಸುವ ಮತ್ತು ಈ ಯೋಜನೆಯಲ್ಲಿ ಫಲಾನುಭವಿಗಳಾಗುವಂತೆ ಮಾಡಲು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆ. ಆ ಮೂಲಕ ಮಹಿಳೆಯರು ಈ ಯೋಜನೆಯಲ್ಲಿ ಭಾಗವಹಿಸುವಂತಾಗಲು ತಕ್ಕಮಟ್ಟಿಗೆ ಸಾಧ್ಯವಾಗಿದೆ. ಒಟ್ಟಾರೆಯಾಗಿ ಯೋಜನೆಯ ನಿಯಮದಲ್ಲಿ ಇರುವಮತಹ ಲಿಂಗ ಸಮಾನತೆಯ ಅಂಶಗಳು ಈ ಯೋಜನೆಯ ಅನುಷ್ಠಾನದ ಸಂದರ್ಭದಲ್ಲಿ ಕಂಡುಬರುತ್ತಿಲ್ಲ. ಇದಕ್ಕೆ ವ್ಯವಸ್ಥೆಯಲ್ಲಿನ ಪಿತೃಪ್ರಧಾನ ಮೌಲ್ಯಗಳೇ ಕಾರಣವಾಗಿವೆಯೇ ಹೊರತು ಯೋಜನೆಯಲ್ಲ.

# ಅನುಬಂಧಗಳು

1. ಅಧ್ಯಯನ ಕ್ಷೇತ್ರದ ವಕ್ತೃಗಳ ವಿವರ
2. ಆಕರ ಗ್ರಂಥಗಳು
    - 2.1. ದಿನಪತ್ರಿಕೆಗಳು
    - 2.2. ಮಾಸಪತ್ರಿಕೆಗಳು
    - 2.3. ಇಂಗ್ಲೀಷ್ ಕೃತಿಗಳು
    - 2.4. ಇಂಗ್ಲೀಷ್ ಲೇಖನಗಳು
3. ಛಾಯಾಚಿತ್ರಗಳು.

# ಅಧ್ಯಯನ ಕ್ಷೇತ್ರದ ವಕ್ತೃಗಳ ವಿವರ

ಅಧ್ಯಯನ ಕ್ಷೇತ್ರದ ವ್ಯಾಪ್ತಿಯನ್ನು ಮುಖ್ಯವಾಗಿ ಮೂರು ಜಿಲ್ಲೆಗಳಿಗೆ ಸೀಮಿತಗೊಳಿಸಿಕೊಳ್ಳಲಾಗಿದೆ. ಈ ಮೂರೂ ಜಿಲ್ಲೆಗಳಲ್ಲಿನ ಎಲ್ಲಾ ತಾಲೂಕುಗಳನ್ನು ಒಳಗೊಂಡಂತೆ ಪ್ರತೀ ತಾಲೂಕಿನಿಂದ ಐದು ಗ್ರಾಮ ಪಂಚಾಯತಿಗಳನ್ನು ಅಧ್ಯಯನಕ್ಕೆ ಒಳಪಡಿಸಿಕೊಳ್ಳಲಾಗಿದೆ. ಒಟ್ಟು ಮೂರೂ ಜಿಲ್ಲೆಗಳಲ್ಲಿನ 80 ಗ್ರಾಮ ಪಂಚಾಯತಿಗಳಲ್ಲಿ ಕ್ಷೇತ್ರಕಾರ್ಯವನ್ನು ಕೈಗೊಳ್ಳುವುದರ ಮೂಲಕ ಉದ್ಯೋಗ ಖಾತರಿ ಯೋಜನೆಯ ಫಲಾನುಭವಿಗಳು, ಚುನಾಯಿತ ಪ್ರತಿನಿಧಿಗಳು, ಸರಕಾರಿ ಅಧಿಕಾರಿಗಳು ಮತ್ತು ಸರಕಾರೇತರ ಸಂಘಸಂಸ್ಥೆಗಳ ಸದಸ್ಯರನ್ನು ಒಳಗೊಂಡಂತೆ ಸುಮಾರು 2000ಕ್ಕೂ ಹೆಚ್ಚು ವಕ್ತೃಗಳನ್ನು ಸಂದರ್ಶಿಸಿ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಪ್ರಬಂಧದ ಮಿತಿಯ ಕಾರಣವಾಗಿ ಇಲ್ಲಿ ಕೇವಲ 200 ವಕ್ತೃಗಳ ಮಾಹಿತಿಯನ್ನು ನೀಡಲಾಗಿದೆ.

**ರಾಯಚೂರು ಜಿಲ್ಲೆ**

| ಕ್ರಸಂ. | ಹೆಸರು | ವಯಸ್ಸು | ಶಿಕ್ಷಣ | ಜಾತಿ | ಊರು | ಗ್ರಾಮ ಪಂಚಾಯತಿ |
|---|---|---|---|---|---|---|
| ೦೧. | ಮರಿಯಮ್ಮ | ೪೫ | ಇಲ್ಲ | ಹರಿಜನ | ಯರಗೇರಾ | ಯರಗೇರಾ |
| ೦೨. | ಜಯರಾಜ್ | ೪೨ | ೪ನೇ ತರಗತಿ | ಹರಿಜನ | ಯರಗೇರಾ | ಯರಗೇರಾ |
| ೦೩. | ಅಂಜಿನಪ್ಪ | ೨೭ | ಎಂ.ಎ. | ನಾಯಕ | ಉಪ್ಪರಾಳ್ | ಯರಗೇರಾ |
| ೦೪. | ಭೀಮಣ್ಣ | ೩೦ | ೧೦ನೇ ತರಗತಿ | ದಾಸರು | ಉಪ್ಪರಾಳ್ | ಯರಗೇರಾ |
| ೦೫. | ಇಂಜಮ್ಮ | ೪೦ | ಇಲ್ಲ | ನಾಯಕ | ಪುಚ್ಚಲದಿನ್ನಿ | ಜಂಬಲದಿನ್ನಿ |
| ೦೬. | ವೀರೇಶ | ೨೫ | ಇಲ್ಲ | ಕುರುಬರು | ಪುಚ್ಚಲದಿನ್ನಿ | ಜಂಬಲದಿನ್ನಿ |
| ೦೭. | ಹುಲಿಗೆಮ್ಮ | ೬೫ | ಇಲ್ಲ | ಹರಿಜನ | ಜಂಬಲದಿನ್ನಿ | ಜಂಬಲದಿನ್ನಿ |
| ೦೮. | ಮರಿಯಮ್ಮ | ೩೮ | ಇಲ್ಲ | ಹರಿಜನ | ಗಿಲ್ಲೆಸೂಗೂರು | ಗಿಲ್ಲೆಸೂಗೂರು |
| ೦೯. | ಮೇಗರಾಜ | ೩೦ | ೧೦ನೇ ತರಗತಿ | ನಾಯಕ | ಗಿಲ್ಲೆಸೂಗೂರು | ಗಿಲ್ಲೆಸೂಗೂರು |
| ೧೦. | ತಪ್ಪಿಟನರಸಮ್ಮ | ೬೫ | ಇಲ್ಲ | ಹರಿಜನ | ಗುಂಜಳ್ಳಿ | ಗುಂಜಳ್ಳಿ |
| ೧೧. | ಬೋಡೆಮ್ಮ | ೬೫ | ಇಲ್ಲ | ಹರಿಜನ | ಗುಂಜಳ್ಳಿ | ಗುಂಜಳ್ಳಿ |

| | | | | | | |
|---|---|---|---|---|---|---|
| ೧೨. | ಭೀಮಣ್ಣ | ೩೫ | ೫ನೇ ತರಗತಿ | ನಾಯಕ | ಗುಂಜಳ್ಳಿ | ಗುಂಜಳ್ಳಿ |
| ೧೩. | ಡಿ.ಚಿನ್ನಿ | ೪೦ | ಇಲ್ಲ | ಹರಿಜನ | ಗಾಣದಾಳ್ | ಗಾಣದಾಳ್ |
| ೧೪. | ಪ್ರೇಮಮ್ಮ | ೩೮ | ಇಲ್ಲ | ಹರಿಜನ | ಗಾಣದಾಳ್ | ಗಾಣದಾಳ್ |
| ೧೫. | ಪಾರ್ವತಮ್ಮ | ೪೦ | ಇಲ್ಲ | ನಾಯಕ | ಗಾಣದಾಳ್ | ಗಾಣದಾಳ್ |
| ೧೬. | ಮಂಜುನಾಥ | ೩೫ | ಪಿ.ಯು.ಸಿ. | ಕಬ್ಬೇರ | ಮಾಡಗಿರಿ | ಮಾಡಗಿರಿ |
| ೧೭. | ರುಕ್ಕಪ್ಪ | ೪೫ | ೪ನೇ ತರಗತಿ | ಹರಿಜನ | ಮಾಡಗಿರಿ | ಮಾಡಗಿರಿ |
| ೧೮. | ಸಾಬಮ್ಮ | ೪೦ | ಇಲ್ಲ | ನಾಯಕ | ಮಾಡಗಿರಿ | ಮಾಡಗಿರಿ |
| ೧೯. | ಟಕರಮ್ಮ | ೫೦ | ಇಲ್ಲ | ಲಮಾಣಿ | ಮುರ್ಕಿಗುಡ್ಡತಾಂಡ | ನವಲಕಲ್ |
| ೨೦. | ಗೌರಮ್ಮ | ೪೦ | ೮ನೇ ತರಗತಿ | ಬಡಿಗೇರ | ಹುಣಚೇಡ | ನವಲಕಲ್ |
| ೨೧. | ರೇಣಮ್ಮ | ೪೦ | ಇಲ್ಲ | ನಾಯಕ | ಸಿರಿವಾರ | ಸಿರಿವಾರ |
| ೨೨. | ನರಸಪ್ಪ | ೫೦ | ಇಲ್ಲ | ಕುರುಬರು | ಸಿರಿವಾರ | ಸಿರಿವಾರ |
| ೨೩. | ಭೀಮಶಂಕರ್ | ೫೦ | ಇಲ್ಲ | ಛಲವಾದಿ | ಹಿರೇಕೊಟ್ನೆಕಲ್ | ಹಿರೇಕೊಟ್ನೆಕಲ್ |
| ೨೪. | ನರಸಮ್ಮ | ೪೫ | ಇಲ್ಲ | ಹರಿಜನ | ಹಿರೇಕೊಟ್ನೆಕಲ್ | ಹಿರೇಕೊಟ್ನೆಕಲ್ |
| ೨೫. | ನಾಗಮ್ಮ | ೫೦ | ಇಲ್ಲ | ಬೋವಿ | ಪೋತ್ನಾಳ್ | ಪೋತ್ನಾಳ್ |
| ೨೬. | ಶ್ರೀದೇವಿ | ೨೭ | ಇಲ್ಲ | ಕೊರವರು | ಪೋತ್ನಾಳ್ | ಪೋತ್ನಾಳ್ |
| ೨೭. | ರಫೀಕ್ | ೩೦ | ಇಲ್ಲ | ಮುಸ್ಲಿಂ | ಪೋತ್ನಾಳ್ | ಪೋತ್ನಾಳ್ |
| ೨೮. | ನಿಂಗನಗೌಡ | ೪೫ | ೫ನೇ ತರಗತಿ | ಲಿಂಗಾಯತ | ಪಿಲ್ಲಿಗುಂಡ | ಮುಸ್ಟೂರು |
| ೨೯. | ನಾಗರತ್ನ | ೩೫ | ಇಲ್ಲ | ಹರಿಜನ | ಶಿವಂಗಿ | ಮುಸ್ಟೂರು |
| ೩೦. | ರೇಣುಕಾ | ೨೨ | ಇಲ್ಲ | ನಾಯಕ | ಜಾಗೀರ್‌ಜಾಡಲದಿನ್ನಿ | ಜಾಡಲದಿನ್ನಿ |
| ೩೧. | ತಿಮ್ಮವ್ವ | ೩೨ | ಇಲ್ಲ | ಬೋವಿ | ಜಾಗೀರ್‌ಜಾಡಲದಿನ್ನಿ | ಜಾಡಲದಿನ್ನಿ |
| ೩೨. | ಸಾಬಗೌಡ | ೩೨ | ಪಿ.ಯು.ಸಿ. | ನಾಯಕ | ಜಾಗೀರ್‌ಜಾಡಲದಿನ್ನಿ | ಜಾಡಲದಿನ್ನಿ |
| ೩೩. | ಹನುಮಂತಿ | ೩೮ | ಇಲ್ಲ | ನಾಯಕ | ಬಿ.ಗಣೆಕಲ್ | ಬಿ.ಗಣೆಕಲ್ |
| ೩೪. | ಶರಣಮ್ಮ | ೨೫ | ಇಲ್ಲ | ಕಬ್ಬೇರು | ಅರಕೇರ | ಅರಕೇರ |
| ೩೫. | ಇಬ್ರಾಹೀಂ | ೩೫ | ೫ನೇ ತರಗತಿ | ಮುಸ್ಲಿಂ | ಅರಕೇರ | ಅರಕೇರ |
| ೩೬. | ಮಲ್ಲಪ್ಪ | ೫೫ | ಇಲ್ಲ | ಕುಂಬಾರ | ಗುಂಡಗುರ್ತಿ | ಜೇರಬಂಡಿ |
| ೩೭. | ಗುರುಪಾದ | ೩೨ | ೪ನೇ ತರಗತಿ | ಉಪ್ಪಾರ | ಗುಂಡಗುರ್ತಿ | ಜೇರಬಂಡಿ |
| ೩೮. | ಮಲ್ಲಮ್ಮ | ೪೭ | ಇಲ್ಲ | ಹರಿಜನ | ಗುಂಡಗುರ್ತಿ | ಜೇರಬಂಡಿ |
| ೩೯. | ಅಂಬಮ್ಮ | ೪೦ | ಇಲ್ಲ | ನಾಯಕ | ಗೌಡನಬಾವಿ | ಗೌಡನಬಾವಿ |
| ೪೦. | ಬಸವರಾಜ | ೩೫ | ಬಿ.ಎ. | ಲಿಂಗಾಯತ | ಗೌಡನಬಾವಿ | ಗೌಡನಬಾವಿ |
| ೪೧. | ಖಾಜಾಬೀ | ೩೫ | ಇಲ್ಲ | ಮುಸ್ಲಿಂ | ರಾಗಲಪರ್ವಿ | ರಾಗಲಪರ್ವಿ |
| ೪೨. | ಭೀಮವ್ವ | ೪೫ | ಇಲ್ಲ | ಮಾದಿಗ | ರಾಗಲಪರ್ವಿ | ರಾಗಲಪರ್ವಿ |
| ೪೩. | ಮೌನೇಶ್ | ೩೦ | ೩ನೇ ತರಗತಿ | ಗಾಣಿಗರು | ಬಳಗನೂರು | ಬಳಗನೂರು |
| ೪೪. | ಕಾಶಿಂಬಿ | ೨೮ | ಇಲ್ಲ | ಪಿಂಜಾರು | ಬಳಗನೂರು | ಬಳಗನೂರು |
| ೪೫. | ಯಮನಮ್ಮ | ೩೭ | ಇಲ್ಲ | ಕಮ್ಮಾರ್ | ಬಳಗನೂರು | ಬಳಗನೂರು |
| ೪೬. | ಅನಿತಾ | ೩೦ | ಇಲ್ಲ | ಹರಿಜನ | ರಾಮತ್ನಾಳ್ | ರಾಮತ್ನಾಳ್ |
| ೪೭. | ಕರಿಲಿಂಗಮ್ಮ | ೪೯ | ಇಲ್ಲ | ಉಪ್ಪಾರ | ರಾಮತ್ನಾಳ್ | ರಾಮತ್ನಾಳ್ |

| | | | | | | |
|---|---|---|---|---|---|---|
| ೪೮. | ಸಿಂಗಣ್ಣ | ೨೮ | ೩ನೇ ತರಗತಿ | ಕಬ್ಬೇರ್ | ಗಿಣಿವಾರ | ಬಾದರ್ಲಿ |
| ೪೯. | ಅಂಬಮ್ಮ | ೩೩ | ಇಲ್ಲ | ಹರಿಜನ | ವಳಬಳ್ಳಾರಿ | ಬಾದರ್ಲಿ |
| ೫೦. | ಬಸಮ್ಮ | ೩೪ | ಇಲ್ಲ | ನಾಯಕ | ಯಲಗಟ್ಟ | ರೋಡಲಬಂಡ (ತವಗ) |
| ೫೧. | ಯಲ್ಲಪ್ಪ | ೩೮ | ಇಲ್ಲ | ಕಬ್ಬೇರು | ಯಲಗಟ್ಟ | ರೋಡಲಬಂಡ (ತವಗ) |
| ೫೨. | ಶಕುಂತಲಾ | ೨೮ | ಇಲ್ಲ | ಹರಿಜನ | ಗೋರೆಬಾಳ | ಗೋರೆಬಾಳ |
| ೫೩. | ಬಂದೇನವಾಜ | ೩೨ | ಇಲ್ಲ | ಮುಸ್ಲಿಂ | ಗೋರೆಬಾಳ | ಗೋರೆಬಾಳ |
| ೫೪. | ಶಂಕರಮ್ಮ | ೨೮ | ಇಲ್ಲ | ಮಡಿವಾಳ | ಮಾಚನೂರು | ಗೌಡೂರು |
| ೫೫. | ರಂಗನಾಥ | ೪೨ | ಇಲ್ಲ | ನಾಯಕ | ಗೌಡೂರು | ಗೌಡೂರು |
| ೫೬. | ನೀಲಮ್ಮ | ೨೯ | ಇಲ್ಲ | ಅಗಸರು | ಸುಂಕಲ್ | ರೋಡಲಬಂಡ (ಯುಕೆಪಿ) |
| ೫೭. | ಶಮೀಮ್‌ಬಾನು | ೪೪ | ಇಲ್ಲ | ಮುಸ್ಲಿಂ | ಚಿಕ್ಕುಪ್ಪೇರಿ | ರೋಡಲಬಂಡ (ಯುಕೆಪಿ) |
| ೫೮. | ಯಲ್ಲಮ್ಮ | ೬೦ | ಇಲ್ಲ | ಹರಿಜನ | ಹಟ್ಟಿ(ಸಿಟಿ) | ಹಟ್ಟಿ |
| ೫೯. | ನಿಂಗಯ್ಯ | ೩೦ | ೭ನೇ ತರಗತಿ | ಉಪ್ಪಾರ | ಹಟ್ಟಿ(ಸಿಟಿ) | ಹಟ್ಟಿ |

**ಬಳ್ಳಾರಿ ಜಿಲ್ಲೆ**

| ಕ್ರಸಂ. | ಹೆಸರು | ವಯಸ್ಸು | ಶಿಕ್ಷಣ | ಜಾತಿ | ಊರು | ಗ್ರಾಮ ಪಂಚಾಯತಿ |
|---|---|---|---|---|---|---|
| ೦೧. | ರಾಮಾಂಜಿನಿ | ೪೫ | ಇಲ್ಲ | ಬೋವಿ | ಸಂಗನಕಲ್ | ಸಂಗನಕಲ್ |
| ೦೨. | ಲಕ್ಷ್ಮಿದೇವಿ | ೩೩ | ಇಲ್ಲ | ದಾಸರು | ಸಂಗನಕಲ್ | ಸಂಗನಕಲ್ |
| ೦೩. | ಆನಂದ | ೪೦ | ಇಲ್ಲ | ಹರಿಜನ | ಜಾಲಿಹಾಳ್ | ಗೋನಾಳ್ |
| ೦೪. | ಸುವರ್ಣ | ೫೦ | ೩ನೇ ತರಗತಿ | ನಾಯಕ | ಜಾಲಿಹಾಳ್ | ಗೋನಾಳ್ |
| ೦೫. | ಸಾವಿತ್ರಿ | ೩೦ | ಇಲ್ಲ | ನೇಕಾರ | ಶಿವಪುರಕ್ಯಾಂಪ್ | ಮೋಕಾ |
| ೦೬. | ಶೈಲಜಾ | ೨೮ | ೫ನೇ ತರಗತಿ | ಜಂಗಮ | ಹಳೆಮೋಕಾ | ಮೋಕಾ |
| ೦೭. | ಸುರೇಶ | ೩೫ | ೫ನೇ ತರಗತಿ | ಕುರುಬರು | ಬೆಣಕಲ್ | ಯರಗುಡಿ |
| ೦೮. | ವಸಂತಮ್ಮ | ೩೦ | ೪ನೇ ತರಗತಿ | ಲಿಂಗಾಯತರೆಡ್ಡಿ | ಯರಗುಡಿ | ಯರಗುಡಿ |
| ೦೯. | ಅಕ್ಷತಾ | ೨೧ | ೫ನೇ ತರಗತಿ | ಬ್ರಾಹ್ಮಣ | ಯರಗುಡಿ | ಯರಗುಡಿ |
| ೧೦. | ದಸ್ತಗಿರಿಸಾಬ್ | ೪೪ | ೩ನೇ ತರಗತಿ | ಮುಸ್ಲಿಂ | ಸಿರಿವಾರ | ಸಿರವಾರ |
| ೧೧. | ಮಹಮ್ಮದ್ ಅಲಿ | ೪೦ | ಇಲ್ಲ | ಮುಸ್ಲಿಂ | ನರಸಿಂಗಪುರ | ನರಸಿಂಗಪುರ |
| ೧೨. | ಎಂ.ನಿರ್ಮಲಾ | ೩೦ | ೧೦ನೇ ತರಗತಿ | ನಾಯಕ | ನರಸಿಂಗಪುರ | ನರಸಿಂಗಪುರ |
| ೧೩. | ಮಾಬುಹುನ್ನಿ | ೫೦ | ಇಲ್ಲ | ಮುಸ್ಲಿಂ | ಕೃಷ್ಣನಗರ | ಕೃಷ್ಣನಗರ |
| ೧೪. | ಹನುಮಂತ | ೩೫ | ಇಲ್ಲ | ಕುರುಬರು | ಕೃಷ್ಣನಗರ | ಕೃಷ್ಣನಗರ |
| ೧೫. | ಜಯಮ್ಮ | ೩೦ | ೭ನೇ ತರಗತಿ | ಹರಿಜನ | ತೋರಣಗಲ್ | ತೋರಣಗಲ್ |
| ೧೬. | ನರಸಪ್ಪ | ೫೦ | ಇಲ್ಲ | ನಾಯಕ | ತೋರಣಗಲ್ | ತೋರಣಗಲ್ |
| ೧೭. | ಹನುಮಕ್ಕ | ೩೫ | ಇಲ್ಲ | ನಾಯಕ | ಮುರಾರಿಪುರ | ಭುಜಂಗನಗರ |
| ೧೮. | ಕುಮಾರಸ್ವಾಮಿ | ೪೦ | ೧೦ನೇ ತರಗತಿ | ಲಿಂಗಾಯತ | ರುಭುಜಂಗನಗರ | ಭುಜಂಗನಗರ |
| ೧೯. | ಚನ್ನಬಸಮ್ಮ | ೫೦ | ಇಲ್ಲ | ಲಿಂಗಾಯತ | ತಾರಾನಗರ | ತಾರಾನಗರ |

| | | | | | | |
|---|---|---|---|---|---|---|
| ೨೦. | ಗಂಗಾಧರ | ೩೦ | ೩ನೇ ತರಗತಿ | ಕಬ್ಬೇರು | ನಾಗಲಪುರ | ತಾರಾನಗರ |
| ೨೧. | ದೊಡ್ಡದ್ದಿ ಓಬಯ್ಯ | ೫೪ | ಇಲ್ಲ | ನಾಯಕ | ಸೂಲದಹಳ್ಳಿ | ಸೂಲದಹಳ್ಳಿ |
| ೨೨. | ಜೆ.ರುಕ್ಕಮ್ಮ | ೫೦ | ಇಲ್ಲ | ಗೊಲ್ಲರು | ಸೂಲದಹಳ್ಳಿ | ಸೂಲದಹಳ್ಳಿ |
| ೨೩. | ರೇಣುಕಾ | ೪೦ | ಇಲ್ಲ | ನಾಯಕ | ಬೆಳಗಟ್ಟ | ಬೆಳಗಟ್ಟ |
| ೨೪. | ಮಲ್ಲಿಕಾರ್ಜುನ | ೩೫ | ೧೦ನೇ ತರಗತಿ | ಕಮ್ಮಾರ್ | ಬೆಳಗಟ್ಟ | ಬೆಳಗಟ್ಟ |
| ೨೫. | ರಂಗಣ್ಣ | ೫೫ | ಇಲ್ಲ | ನಾಯಕ | ಬಣವಿಕಲ್ | ಬಣವಿಕಲ್ |
| ೨೬. | ದಂಡೆಮ್ಮ | ೪೫ | ಇಲ್ಲ | ಹರಿಜನ | ಬಣವಿಕಲ್ | ಬಣವಿಕಲ್ |
| ೨೭. | ವಾಲ್ಯನಾಯ್ಕ್ | ೩೫ | ಇಲ್ಲ | ಲಮಾಣಿ | ಚಿಕ್ಕಜೋಗಿಹಳ್ಳಿತಾಂಡ | ಮಾಕನಡಕ |
| ೨೮. | ಲಲಿತಾಬಾಯಿ | ೩೫ | ಇಲ್ಲ | ಲಮಾಣಿ | ಚಿಕ್ಕಜೋಗಿಹಳ್ಳಿತಾಂಡ | ಮಾಕನಡಕ |
| ೨೯. | ಜಯರಾಮಪ್ಪ | ೪೦ | ಇಲ್ಲ | ಮಡಿವಾಳ | ಚೌಡಾಪುರ | ಚೌಡಾಪುರ |
| ೩೦. | ಓಬಕ್ಕ | ೩೦ | ಇಲ್ಲ | ಹರಿಜನ | ಚೌಡಾಪುರ | ಚೌಡಾಪುರ |
| ೩೧. | ಗೂಗ್ಲಿಬಾಯಿ | ೫೦ | ಇಲ್ಲ | ಲಮಾಣಿ | ಬಸರಳ್ಳಿತಾಂಡ | ಹಿರೇಮಲ್ಲನಕೆರೆ |
| ೩೨. | ದಂಜ್ಯನಾಯ್ಕ | ೫೫ | ಇಲ್ಲ | ಲಮಾಣಿ | ಬಸರಳ್ಳಿತಾಂಡ | ಹಿರೇಮಲ್ಲನಕೆರೆ |
| ೩೩. | ಲಂಕೇಶ | ೩೮ | ಪಿ.ಯು.ಸಿ. | ಲಮಾಣಿ | ಸೋವೇನಹಳ್ಳಿತಾಂಡ | ಸೋವೇನಹಳ್ಳಿ |
| ೩೪. | ಕವಿತಾ | ೨೫ | ಪಿ.ಯು.ಸಿ. | ಲಮಾಣಿ | ಮುದ್ಲಾಪುರ ಹೊಸತಾಂಡ | ಸೋವೇನಹಳ್ಳಿ |
| ೩೫. | ರತ್ನಬಾಯಿ | ೩೧ | ಇಲ್ಲ | ಲಮಾಣಿ | ಗೋವಿಂದಪುರತಾಂಡ೨ | ಸೋಗಿ |
| ೩೬. | ಸಿದ್ದಚಾರಿ | ೩೨ | ಬಿ.ಎ. | ಬಡಿಗೇರ್ | ಸೋಗಿ | ಸೋಗಿ |
| ೩೭. | ಪ್ರಕಾಶರೆಡ್ಡಿ | ೩೦ | ಬಿ.ಎ. | ಲಿಂಗಾಯತ | ಪಶ್ಚಿಮಕಾಲ್ವಿ | ಪಶ್ಚಿಮಕಾಲ್ವಿ |
| ೩೮. | ಲಕ್ಷ್ಮೀಬಾಯಿ | ೩೫ | ಇಲ್ಲ | ಲಮಾಣಿ | ಅಂಕ್ಲಿತಾಂಡ | ಪಶ್ಚಿಮಕಾಲ್ವಿ |
| ೩೯. | ರತ್ನಮ್ಮ | ೪೦ | ಇಲ್ಲ | ನಾಯಕ | ಹೊಳಗುಂದಿ | ಹೊಳಗುಂದಿ |
| ೪೦. | ಆನಂದ | ೩೬ | ಇಲ್ಲ | ಕುರುಬರು | ಹೊಳಗುಂದಿ | ಹೊಳಗುಂದಿ |
| ೪೧. | ಲಕ್ಷ್ಮೀಬಾಯಿ | ೫೩ | ಇಲ್ಲ | ಲಮಾಣಿ | ಕೋಗಳಿತಾಂಡ | ಕೋಗಳಿ |
| ೪೨. | ರವಿನಾಯ್ಕ | ೩೦ | ೩ನೇ ತರಗತಿ | ಲಮಾಣಿ | ಕೋಗಳಿತಾಂಡ | ಕೋಗಳಿ |
| ೪೩. | ಹೂಗಾರ ತಿಪ್ಪಣ್ಣ | ೨೮ | ಇಲ್ಲ | ಹೂಗಾರ | ಹಂಪಸಾಗರ | ಹಂಪಸಾಗರ |
| ೪೪. | ಬಾಳಮ್ಮ | ೫೮ | ಇಲ್ಲ | ಬಡಿಗೇರ | ಹಂಪಸಾಗರ | ಹಂಪಸಾಗರ |
| ೪೫. | ಜಯಮ್ಮ | ೨೫ | ಇಲ್ಲ | ಮಾದಿಗ | ಕಡ್ಲಬಾಳ | ಕಡ್ಲಬಾಳ |
| ೪೬. | ರಾಘವೇಂದ್ರ | ೩೦ | ೧೦ನೇ ತರಗತಿ | ಕುರುಬರು | ಆನಂದದೇವನಹಳ್ಳಿ | ಕಡ್ಲಬಾಳ |
| ೪೭. | ಕೊಟ್ರಮ್ಮ | ೪೫ | ಇಲ್ಲ | ಮಡಿವಾಳ | ಅಲಬೂರು | ಅಲಬೂರು |
| ೪೮. | ಹನುಮಂತಪ್ಪ | ೨೬ | ಇಲ್ಲ | ಹರಿಜನ | ಅಲಬೂರು | ಅಲಬೂರು |
| ೪೯. | ಶ್ರೀನಿವಾಸ | ೨೮ | ೩ನೇ ತರಗತಿ | ಅಂಬಿಗರು | ವಲ್ಲಭಪುರ | ಚಿಂತ್ರಪಳ್ಳಿ |
| ೫೦. | ಶಾಹೀನಾಬಾನುಭೀ | ೨೮ | ಇಲ್ಲ | ಮುಸ್ಲಿಂ | ಸೋನಿಯಾಗಾಂಧಿನಗರ | ಚಿಂತ್ರಪಳ್ಳಿ |
| ೫೧. | ವಿರುಪಮ್ಮ | ೫೦ | ಇಲ್ಲ | ನಾಯಕ | ಬೈಲವದ್ದಿಗೇರಿ | ಬೈಲವದ್ದಿಗೇರಿ |
| ೫೨. | ಪಂಪಾಪತಿ | ೩೦ | ಪಿ.ಯು.ಸಿ. | ಕುರುಬರು | ಬೈಲವದ್ದಿಗೇರಿ | ಬೈಲವದ್ದಿಗೇರಿ |
| ೫೩. | ಹನುಮಕ್ಕ | ೩೫ | ಇಲ್ಲ | ನಾಯಕ | ಅಯ್ಯನಹಳ್ಳಿ | ಡಣಾಪುರ |
| ೫೪. | ನೆವಾರರಾಮಚಂದ್ರ | ೨೮ | ಇಲ್ಲ | ಈಡಿಗರು | ಅಯ್ಯನಹಳ್ಳಿ | ಡಣಾಪುರ |
| ೫೫. | ಗಂಟೆ ತಿಮ್ಮಕ್ಕ | ೬೫ | ಇಲ್ಲ | ಲಿಂಗಾಯತರು | ಭುವನಹಳ್ಳಿ | ಗಾದಿಗನೂರು |
| ೫೬. | ಸಣ್ಣಹುಲುಗಪ್ಪ | ೩೫ | ೩ನೇ ತರಗತಿ | ಉಪ್ಪಾರ | ಗಾದಿಗನೂರು | ಗಾದಿಗನೂರು |
| ೫೭. | ಕನಕಮ್ಮ | ೩೦ | ಇಲ್ಲ | ಲಿಂಗಾಯತ | ಹಂಪಿ | ಹಂಪಿ |

| | | | | | | |
|---|---|---|---|---|---|---|
| ೫೮. | ವಿ.ಗೋವಿಂದ | ೩೬ | ಇಲ್ಲ | ಹರಿಜನ | ಕಡ್ಡಿರಾಂಪೂರ | ಹಂಪಿ |
| ೫೯. | ಯರಿಯಮ್ಮ | ೩೮ | ಇಲ್ಲ | ಹರಿಜನ | ಪಾಪಿನಾಯಕನಹಳ್ಳಿ | ಪಾಪಿನಾಯಕನಹಳ್ಳಿ |
| ೬೦. | ಕುರಿ ಲಕ್ಷ್ಮಪ್ಪ | ೪೫ | ಇಲ್ಲ | ನಾಯಕ | ಇಂಗಳಗಿ | ಪಾಪಿನಾಯಕನಹಳ್ಳಿ |
| ೬೧. | ವೀರೇಶ | ೨೫ | ಇಲ್ಲ | ಬ್ಯಾಗಾರ್ | ಬಾಗೇವಾಡಿ | ಬಾಗೇವಾಡಿ |
| ೬೨. | ಹುಚ್ಚಮ್ಮ | ೫೫ | ಇಲ್ಲ | ಲಿಂಗಾಯತ | ಬಾಗೇವಾಡಿ | ಬಾಗೇವಾಡಿ |
| ೬೩. | ಕಾಸಿಂಭೀ | ೪೬ | ಇಲ್ಲ | ಮುಸ್ಲಿಂ | ರಾರಾವಿ | ರಾರಾವಿ |
| ೬೪. | ವೆಂಕಟೇಶ | ೩೦ | ೫ನೇ ತರಗತಿ | ನಾಯಕ | ರಾರಾವಿ | ರಾರಾವಿ |
| ೬೫. | ನೀಲಮ್ಮ | ೫೦ | ಇಲ್ಲ | ಬಾರಕೇರು | ಹಳಿಗನೂರು | ರಾರಾವಿ |
| ೬೬. | ನಾಗರಾಜ | ೩೫ | ಇಲ್ಲ | ಕೊರಚ | ಸಿರಿಗೇರಿ | ಸಿರಿಗೇರಿ |
| ೬೭. | ಆದೆಮ್ಮ | ೪೫ | ಇಲ್ಲ | ನಾಯಕ | ಸಿರಿಗೇರಿ | ಸಿರಿಗೇರಿ |
| ೬೮. | ಗುಂಡಮ್ಮ | ೫೫ | ಇಲ್ಲ | ಭಲವಾದಿ | ಹಚ್ಚೊಳ್ಳಿ | ಹಚ್ಚೊಳ್ಳಿ |
| ೬೯. | ನರಸಪ್ಪ | ೫೦ | ಇಲ್ಲ | ನಾಯಕ | ಹಚ್ಚೊಳ್ಳಿ | ಹಚ್ಚೊಳ್ಳಿ |
| ೭೦. | ಮಾರೆಮ್ಮ | ೬೦ | ಇಲ್ಲ | ಹರಿಜನ | ಶ್ರೀಧರಗಡ್ಡೆ | ಕುಡುದ್ರಾಳ್ |
| ೭೧. | ಮಾರೆಪ್ಪ | ೪೦ | ಇಲ್ಲ | ನಾಯಕ | ಶ್ರೀಧರಗಡ್ಡೆ | ಕುಡುದ್ರಾಳ್ |

**ಕೊಪ್ಪಳ ಜಿಲ್ಲೆ**

| ಕ್ರ.ಸಂ. | ಹೆಸರು | ವಯಸ್ಸು | ಶಿಕ್ಷಣ | ಜಾತಿ | ಊರು | ಗ್ರಾಮ ಪಂಚಾಯತಿ |
|---|---|---|---|---|---|---|
| ೦೧. | ಸುಮಂಗಲಮ್ಮ | ೪೨ | ಇಲ್ಲ | ಜಂಗಮ | ಮೆತ್ತಗಲ್ | ಹಾಸಗಲ್ |
| ೦೨. | ಕಾಂತೆಪ್ಪ | ೩೦ | ಎಸ್.ಎಸ್.ಎಲ್.ಸಿ | ಗಾಣಿಗರು | ಮತ್ತಗಲ್ | ಹಾಸಗಲ್ |
| ೦೩. | ನಿಂಗಮ್ಮ | ೭೦ | ಇಲ್ಲ | ಕುರುಬರು | ಬೂದುಗುಂಪಾ | ಬೂದುಗುಂಪಾ |
| ೦೪. | ತಾಹಿರಾಬೇಗಂ | ೫೦ | ಇಲ್ಲ | ಮುಸ್ಲಿಂ | ಬೂದುಗುಂಪಾ | ಬೂದುಗುಂಪಾ |
| ೦೫. | ಹನುಮಂತಪ್ಪ | ೫೦ | ೭ನೇ ತರಗತಿ | ಕುರುಬರು | ಬೂದುಗುಂಪಾ | ಬೂದುಗುಂಪಾ |
| ೦೬. | ನಾಗರತ್ನ | ೨೮ | ಇಲ್ಲ | ಬೋವಿ | ವಣಬಳ್ಳಾರಿ | ಇಂದರಗಿ |
| ೦೭. | ಇಂದ್ರೇಶ | ೩೨ | ೭ನೇ ತರಗತಿ | ಕುರುಬರು | ಇಂದರಗಿ | ಇಂದರಗಿ |
| ೦೮. | ದುರುಗಪ್ಪ | ೩೦ | ಇಲ್ಲ | ಕುರುಬರು | ಇಂದರಗಿ | ಇಂದರಗಿ |
| ೦೯. | ಖಾಸಿಂಸಾಬ್ | ೪೮ | ಇಲ್ಲ | ಮುಸ್ಲಿಂ | ಚಿಕ್ಕಬಗನಾಳ್ | ಹಿರೇಬಗನಾಳ್ |
| ೧೦. | ರತ್ನವ್ವನಾಯಕ | ೩೩ | ೫ನೇ ತರಗತಿ | ನಾಯಕ | ಚಿಕ್ಕಬಗನಾಳ್ | ಹಿರೇಬಗನಾಳ್ |
| ೧೧. | ಮಂಜುನಾಥ | ೨೫ | ೫ನೇ ತರಗತಿ | ಲಿಂಗಾಯತ | ವಡ್ಡರಹಟ್ಟಿ | ಇರಕಲ್‌ಗಡಾ |
| ೧೨. | ಅನುಸೂಯ | ೪೮ | ಇಲ್ಲ | ಕುರುಬರು | ಇರಕಲ್‌ಗಡಾ | ಇರಕಲ್‌ಗಡಾ |
| ೧೩. | ಅನ್ನಪೂರ್ಣಮ್ಮ | ೩೩ | ಇಲ್ಲ | ನಾಯಕ | ಇರಕಲ್‌ಗಡಾ | ಇರಕಲ್‌ಗಡಾ |
| ೧೪. | ಮದ್ಯಾನಮ್ಮ | ೪೫ | ಇಲ್ಲ | ನಾಯಕ | ಮುಕ್ಕುಂಪಿ | ಚಿಕ್ಕಬೆಣಕಲ್ |
| ೧೫. | ಗಾಳೆಪ್ಪ | ೫೦ | ಇಲ್ಲ | ಭೋವಿ | ಚಿಕ್ಕಬೆಣಕಲ್ | ಚಿಕ್ಕಬೆಣಕಲ್ |
| ೧೬. | ಜಯಲಕ್ಷ್ಮಿ | ೩೦ | ೭ನೇ ತರಗತಿ | ಗೊಲ್ಲರು | ಮಲ್ಲಾಪೂರ | ಮಲ್ಲಾಪೂರ |
| ೧೭. | ರಾಜಣ್ಣ | ೪೦ | ಇಲ್ಲ | ಲಮಾಣಿ | ಮಲ್ಲಾಪೂರ | ಮಲ್ಲಾಪೂರ |
| ೧೮. | ಸೋಮಮ್ಮ | ೫೦ | ಇಲ್ಲ | ನಾಯಕ | ಕೇಸಕ್ಕಿಹಂಚಿನಾಳ್ | ಕೇಸರಹಟ್ಟಿ |
| ೧೯. | ಮಲ್ಲಿಕಾರ್ಜುನ | ೩೦ | ಇಲ್ಲ | ಲಿಂಗಾಯತ | ಕೇಸರಹಟ್ಟಿ | ಕೇಸರಹಟ್ಟಿ |
| ೨೦. | ಗಂಗಮ್ಮ | ೩೩ | ಇಲ್ಲ | ನಾಯಕ | ತಿರುಮಲಪುರ | ಆನೆಗುಂದಿ |
| ೨೧. | ರಾಮಾಂಜಿ | ೨೮ | ೭ನೇ ತರಗತಿ | ಹರಿಜನ | ಸಣಾಪುರ | ಆನೆಗುಂದಿ |
| ೨೨. | ತಿಪ್ಪಣ್ಣ | ೪೪ | ೫ನೇ ತರಗತಿ | ಕುರುಬರು | ಸಂಗಾಪುರ | ಸಂಗಾಪುರ |
| ೨೩. | ಮಂಜುಳಾ | ೩೫ | ೫ನೇ ತರಗತಿ | ಹರಿಜನ | ಸಂಗಾಪುರ | ಸಂಗಾಪುರ |

| | | | | | | |
|---|---|---|---|---|---|---|
| ೨೪. | ಹನುಮವ್ವ ಸೂಡಿ | ೪೮ | ಇಲ್ಲ | ಲಿಂಗಾಯತ | ಕುಂಬಳವತಿ | ಬೆನಕನಾಳ್ |
| ೨೫. | ಲಕ್ಷ್ಮವ್ವ | ೨೪ | ಇಲ್ಲ | ಕುರುಬರು | ಕುಂಬಳವತಿ | ಬೆನಕನಾಳ್ |
| ೨೬. | ದ್ಯಾಮಣ್ಣ ಬಂಡಿ | ೩೬ | ೫ನೇ ತರಗತಿ | ಲಿಂಗಾಯತ | ಹಿರೇಮನ್ನಾಪುರ | ಹಿರೇಮನ್ನಾಪುರ |
| ೨೭. | ಹುಲಿಗೆಮ್ಮ ಮಾದರ | ೪೨ | ಇಲ್ಲ | ಮಾದಿಗ | ಹಿರೇಮನ್ನಾಪುರ | ಹಿರೇಮನ್ನಾಪುರ |
| ೨೮. | ದ್ಯಾಮಣ್ಣಕಾತರಾಳ | ೪೦ | ಇಲ್ಲ | ನಾಯಕ | ಸೇಬಿನಕಟ್ಟಿ | ಕಬ್ಬರಗಿ |
| ೨೯. | ನೀಲಮ್ಮಸಂಗಪ್ಪ | ೪೫ | ಇಲ್ಲ | ಲಿಂಗಾಯತ | ಮನ್ನೇರಾಳ | ಕಬ್ಬರಗಿ |
| ೩೦. | ಶರಣಮ್ಮಮೇಟಿ | ೨೬ | ೩ನೇ ತರಗತಿ | ಲಿಂಗಾಯತ | ಕನ್ನಾಳ | ಸಂಗನಾಳ್ |
| ೩೧. | ಪೀರಸಾಬ್ | ೨೫ | ಇಲ್ಲ | ಮುಸ್ಲಿಂ | ಸಂಗನಾಳ್ | ಸಂಗನಾಳ್ |
| ೩೨. | ರೇಣುಕಮ್ಮ | ೩೮ | ಇಲ್ಲ | ನಾಯಕ | ಶಾಖಾಪುರ | ಕೊರಡಕೆರೆ |
| ೩೩. | ಯಮನೂರು | ೩೫ | ಇಲ್ಲ | ಕೊರವರು | ಶಾಖಾಪುರ | ಕೊರಡಕೆರೆ |
| ೩೪. | ಹನುಮವ್ವ | ೫೦ | ಇಲ್ಲ | ಲಮಾಣಿ | ಚಿಕ್ಕೊಪ್ಪ | ಬಳೂಟಗಿ |
| ೩೫. | ಬಸವರಾಜ | ೨೨ | ೫ನೇ ತರಗತಿ | ಕುರುಬರು | ಚಿಕ್ಕೊಪ್ಪ | ಬಳೂಟಗಿ |
| ೩೬. | ಈರಪ್ಪ | ೪೦ | ಇಲ್ಲ | ಕುರುಬರು | ತಮ್ಮರಗುದ್ದಿ | ಬಂಡಿ |
| ೩೭. | ಬಸವ್ವ ವೀರಪ್ಪಗೌಡ | ೩೦ | ೩ನೇ ತರಗತಿ | ಲಿಂಗಾಯತ | ತಮ್ಮರಗುದ್ದಿ | ಬಂಡಿ |
| ೩೮. | ರೇಖಾ | ೪೫ | ೩ನೇ ತರಗತಿ | ಬಡಿಗೇರ | ಮಸಬಹಂಚಿನಾಳ್ | ಬೆಣಕಲ್ |
| ೩೯. | ಶಾಂತಮ್ಮ | ೫೦ | ಇಲ್ಲ | ಲಿಂಗಾಯತ | ಮಸಬಹಂಚಿನಾಳ್ | ಬೆಣಕಲ್ |
| ೪೦. | ಯಲ್ಲವ್ವ | ೩೦ | ಇಲ್ಲ | ಹರಿಜನ | ಕೋಳಿಹಾಳ್ | ಬೇವೂರು |
| ೪೧. | ಮಯಲಾರಗೌಡ | ೩೮ | ೫ನೇ ತರಗತಿ | ಲಿಂಗಾಯತ | ಕೋಳಿಹಾಳ್ | ಬೇವೂರು |
| ೪೨. | ರೇಣಕವ್ವ | ೨೩ | ೩ನೇ ತರಗತಿ | ಹರಿಜನ | ನಿಲೋಗಲ್ | ಹಿರೇವಂಕಲಕುಂಟ |
| ೪೩. | ಕರಿಯಪ್ಪ | ೪೮ | ಇಲ್ಲ | ನಾಯಕ | ಹಿರೇವಂಕಲಕುಂಟ | ಹಿರೇವಂಕಲಕುಂಟ |

| ಕ್ರಸಂ. | ಹೆಸರು | ವಯಸ್ಸು | ಹುದ್ದೆ |
|---|---|---|---|
| ೦೧. | ತಿಮ್ಮಪ್ಪ | ೩೬ | ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಜೇಗರಕಲ್ |
| ೦೨. | ತಾರಾ | ೩೫ | ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಕಪ್ಪಗಲ್ |
| ೦೩. | ಖಾಲಿದ್ ಅಹಮ್ಮದ್ | ೩೪ | ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಪೋತ್ನಾಳ್ |
| ೦೪. | ವೀರೇಶ | ೨೯ | ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗೋರ್ಕಲ್ |
| ೦೫. | ಮಲ್ಲಯ್ಯ | ೨೯ | ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗಣದಿನ್ನಿ |
| ೦೬. | ಎಂ.ಡಿ.ಇಸಾಕ್ | ೩೦ | ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಚಿಕ್ಕೊಟ್ನೆಕಲ್ |
| ೦೭. | ಅಣ್ಣಾರಾವ್‌ನಾಯಕ | ೪೦ | ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಕೊಪ್ಪೂರು |
| ೦೮. | ಅನ್ನಪೂರ್ಣ | ೩೨ | ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಇಡಪನೂರು |
| ೦೯. | ರೇಖಾ | ೩೦ | ಪಂಚಾಯತ್ ಅಭಿವೃದ್ಧಿ ಅಧಿಕಾರಿ, ತಲಮಾರಿ |
| ೧೦. | ಬಸಯ್ಯ ಹಿರೇಮಠ | ೪೦ | ತಾಲೂಕು ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಮಾನ್ವಿ |
| ೧೧. | ಬಸಣ್ಣನಾಯಕ | ೨೮ | ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಬಿ.ಗಣೇಕಲ್ |
| ೧೨. | ವಿ.ವಿ.ಜೋತ್ಸ್ನಾ | ೩೨ | ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ |

| | | | |
|---|---|---|---|
| | | | ಅಧಿಕಾರಿ, ರಾಯಚೂರು |
| ೧೩. | ಕೊಪ್ಪಾದ | ೫೭ | ತಾಲೂಕು ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ರಾಯಚೂರು |
| ೧೪. | ಮಂಜುಳಾ ರಾಣಿ | ೩೧ | ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಪಾಪಿನಾಯಕನಹಳ್ಳಿ |
| ೧೫. | ರಾಜೇಶ್ವರಿ | ೩೨ | ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಹಂಪಿ |
| ೧೬. | ಪರಶುರಾಮ | ೪೦ | ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಸಂಗನಕಲ್ಲ |
| ೧೭. | ಟಿ.ಎಂ.ವಿಜಯಭಾಸ್ಕರ | ೫೨ | ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು |
| ೧೮. | ಸುರೇಶ ಉಪ್ಪಾರ | ೨೮ | ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಮಲ್ಲಾಪೂರ |
| ೧೯. | ಮಹೇಶಕುಮಾರ್ | ೩೮ | ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಚಿಕ್ಕಬೆಣಕಲ್ |
| ೨೦. | ಜಿ.ಎನ್.ನಾಗರಾಜ್ | ೫೮ | ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘದ ರಾಜ್ಯ ಉಪಾಧ್ಯಕ್ಷರು |
| ೨೧. | ನಿತ್ಯಾನಂದ | ೬೦ | ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘದ ರಾಜ್ಯ ಅಧ್ಯಕ್ಷರು |
| ೨೨. | ಹನುಮಂತಪ್ಪ ಹೊಳೆಯಾಚಿ | ೫೨ | ಕರ್ನಾಟಕ ರಾಜ್ಯ ರೈತ ಸಂಘ, ಕೊಪ್ಪಳ ಜಿಲ್ಲಾ ಅಧ್ಯಕ್ಷರು |
| ೨೩. | ಚಾಮರಸ ಮಾಲಿಪಾಟೀಲ | ೬೦ | ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯ ಅಧ್ಯಕ್ಷರು |
| ೨೪. | ಗುರುರಾಜ | ೩೭ | ಗ್ರಾಮೀಣ ಕೂಲಿಕಾರರ ಸಂಘದ ತಾಲೂಕು ಕಾರ್ಯಕರ್ತರು, ಮಾನ್ವಿ |
| ೨೫. | ಬಸವರಾಜ | ೩೫ | ಗ್ರಾಮೀಣ ಕೂಲಿಕಾರರ ಸಂಘದ ತಾಲೂಕು ಕಾರ್ಯಕರ್ತರು, ರಾಯಚೂರು |
| ೨೬. | ಮುದ್ದುರಂಗಪ್ಪ | ೩೨ | ಗ್ರಾಮೀಣ ಕೂಲಿಕಾರರ ಸಂಘದ ತಾಲೂಕು ಕಾರ್ಯಕರ್ತರು, ದೇವದುರ್ಗ |
| ೨೭. | ಕರಿಯಪ್ಪ ಹಚ್ಚೊಳ್ಳಿ | ೫೫ | ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘದ ರಾಯಚೂರು ಜಿಲ್ಲಾ ಅಧ್ಯಕ್ಷರು |
| ೨೮. | ಕೆ.ನೀಲ | ೪೮ | ಮಹಿಳಾ ಜನವಾದಿ ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿಗಳು, ಗುಲಬರ್ಗಾ |
| ೨೯. | ನರಸಮ್ಮ | ೫೦ | ಜಾಗೃತಿ ಮಹಿಳಾ ಸಂಘಟನೆಯ ಕಾರ್ಯಕರ್ತೆ, ಮಾನ್ವಿ |

# ಆಕರ ಗ್ರಂಥಗಳು


೧. ಅಮರೇಶ ನುಗಡೋಣಿ(ಸಂ)., ೨೦೦೮, ಕನ್ನಡ ಸಂಶೋಧನೆಯ ವೈಧಾನಿಕತೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨. ಅಮರೇಶ ನುಗಡೋಣಿ, ೨೦೦೩, ಹೈದರಾಬಾದ್-ಕರ್ನಾಟಕ ಹಾಡು-ಪಾಡು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩. ಅಮರೇಶ ನುಗಡೋಣಿ, ೨೦೦೦, ರಾಯಚೂರು ಜಿಲ್ಲೆಯಲ್ಲಿ ಹೈದರಾಬಾದ್ ಕರ್ನಾಟಕ ವಿಮೋಚನ ಚಳುವಳಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪. ಅನುಸೂಯ ಕಾಂಬಳೆ, ೧೯೯೯, ವಿಚಾರ ಸಾಹಿತ್ಯ ಹೆಣ್ಣು, ವೈಚಾರಿಕತೆ; ಸಾಹಿತ್ಯ ಪ್ರಕಾಶನ, ರಾಯಭಾಗ.

೫. ಅನಂತಮೂರ್ತಿ ಯು.ಆರ್., ೨೦೦೭, ಹಿಂಸೆಯ ಎಡ-ಬಲ, ಅಭಿನವ ಪ್ರಕಾಶನ, ಬೆಂಗಳೂರು.

೬ ಅನಂತರಾಮರಾವ್, ೨೦೦೬, ಸುವರ್ಣ ಕರ್ನಾಟಕ ದರ್ಶನ, ವಿದ್ಯಾ ಪಬ್ಲಿಕೇಷನ್, ಮಂಗಳೂರು.

೭. ಅಯ್ಯರ್ ಮತ್ತು ಪ್ರಸಾದ., ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ ೧೯೯೩, ಪಾರು ಪ್ರಕಾಶನ, ಗದಗ

೮ ಅಜೀಜ್ ಅಬ್ದುಲ್ ಮತ್ತು ವಾಸುಕಿ ಕೆ.ಜಿ(ಸಂ), ೧೯೯೭, ಕರ್ನಾಟಕದ ಆರ್ಥಿಕತೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೯. ಅಂಜನಪ್ಪ ಬಿ.ಹೆಚ್., ೨೦೦೬, ಮಹಿಳೆ ಮತ್ತು ದುಡಿಮೆ, ಸೃಷ್ಟಿ ಪಬ್ಲಿಕೇಷನ್, ಬೆಂಗಳೂರು.

೧೦. ಅರಳಿನಾಗರಾಜ ಮು.ನ್ಯಾ(ಸಂ), ೨೦೦೭, ಜನಸಾಮಾನ್ಯರಿಗಾಗಿ ಕಾನೂನು ಮಾಹಿತಿ, ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಬೆಂಗಳೂರು.

೧೧ ಆಶಾದೇವಿ ಎಂ.ಎಸ್., ೨೦೦೫, ಸ್ತ್ರೀಮತವನ್ನುರಿಸಲಾದಿತೇ?, ಅಕ್ಷರ ಪ್ರಕಾಶನ, ಸಾಗರ.

೧೧. ಆಂದನೂರು ಶೋಭ, ೧೯೮೮, ಮಹಿಳೆಯ ಮುನ್ನಡೆ, ಮಾನಸಿ ಪ್ರಕಾಶನ, ಬೆಂಗಳೂರು.

೧೨ ಇಂದಿರಾ ಆರ್., ೧೯೯೫, ಭಾರತೀಯ ಸಮಾಜ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೧೩ ಇಂದಿರಾ ಆರ್., ೨೦೦೨, ಮಹಿಳೆ ಸಮಾಜ ಮತ್ತು ಸಂಸ್ಕೃತಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೪ ಇಂದಿರಾ ಆರ್., ೨೦೦೦, ಮಹಿಳೆ ಮತ್ತು ಕೌಟುಂಬಿಕ ಹಿಂಸೆ, ರಾಘವ ಟ್ರಸ್ಟ್, ಮೈಸೂರು.

೧೫. ಇಂದಿರಾ ಜೈಪ್ರಕಾಶ್., ೨೦೦೯, ಸ್ತ್ರೀವಾದಿ ಮನೋವಿಜ್ಞಾನ, ಮಹಿಳಾ ಅಧ್ಯಯನ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೬ ಇಬ್ರಾಹೀಮ್ ಸಈದ್, ೨೦೧೧, ಮಹಿಳೆ ಮತ್ತು ಸಮಾಜ, ಶಾಂತಿ ಪ್ರಕಾಶನ, ಮಂಗಳೂರು.

೧೭ ಈಶ್ವರಚಂದ್ರ(ಅನು)., ೨೦೧೦, ಭಾರತದಲ್ಲಿ ಪಂಚಾಯತಿರಾಜ್, ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ, ಹೊಸದೆಹಲಿ.

೧೮ ಉಷಾ ಎಂ., ೨೦೦೫, ಮಹಿಳೆ ಮತ್ತು ಜಾತಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೯. ಉಷಾ ಎಂ., ೨೦೦೪, ಮಹಿಳಾ ಚಳುವಳಿಗಳು ಮತ್ತು ಮಹಿಳಾ ವಿಷಯಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೦. ಉಷಾ ಎಂ(ಸಂ), ೨೦೦೩, ಮಹಿಳಾ ಅಧ್ಯಯನ ಸಂಚಿಕೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೧. ಉಷಾ ಎಂ., ೨೦೧೨, ಭಾಷಾಂತರ ಮತ್ತು ಲಿಂಗ ರಾಜಕಾರಣ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೨. ಉಷಾ ಎಂ(ಸಂ), ೨೦೦೭, ಆಧುನಿಕ ಮಹಿಳಾ ಸಾಹಿತ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೩. ಉಷಾ ಎಂ.(ಸಂ), ೨೦೦೪, ಮಹಿಳಾ ಅಧ್ಯಯನ, ಸಂಪುಟ-೫, ಸಂಚಿಕೆ-೧-೨, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೪. ಒಡೆಯರ್ ಡಿ.ಹೆಗಡೆ., ೨೦೦೬, ನೋಬೆಲ್ ಅರ್ಥಶಾಸ್ತ್ರಜ್ಞ ಅಮರ್ತ್ಯ ಕೆ.ಸೇನ್, ಅರ್ಜುನ್ ಪಬ್ಲಿಷಿಂಗ್ ಹೌಸ್, ರಾಮಕೃಷ್ಣನಗರ, ಮೈಸೂರು.

೨೫. ಒಡೆಯರ್ ಡಿ.ಹೆಗಡೆ., ಚಂದ್ರಶೇಖರ್ ಕೆ.ಬಿ., ಸೋಮಶೇಖರಯ್ಯ, ರಂಗೇಗೌಡ ಎಂಹೆಚ್, ೨೦೦೮, ಮಹಿಳೆ ಮತ್ತು ಸಾಮಾಜಿಕ ಅಭಿವೃದ್ಧಿ, ಅರ್ಜುನ್ ಪಬ್ಲಿಷಿಂಗ್ ಹೌಸ್, ರಾಮಕೃಷ್ಣನಗರ, ಮೈಸೂರು.

೨೬. ಒಡೆಯರ್ ಡಿ.ಹೆಗಡೆ., ೨೦೦೬, ಮಹಿಳಾ ಹಕ್ಕುಗಳು, ಅರ್ಜುನ್ ಪಬ್ಲಿಷಿಂಗ್ ಹೌಸ್, ರಾಮಕೃಷ್ಣನಗರ, ಮೈಸೂರು.

೨೭. ಒಡೆಯರ್ ಡಿ.ಹೆಗಡೆ., ೨೦೧೦, ಮಹಿಳಾ ಅಧ್ಯಯನಗಳು, ಮುತ್ತು ಎಂಟರ್‌ಪ್ರೈಸಸ್, ಮೈಸೂರು.

೨೮. ಒಡೆಯರ್ ಡಿ. ಹೆಗಡೆ., ೨೦೦೭, ಭಾರತದಲ್ಲಿ ಮಹಿಳಾ ರಾಜಕೀಯ ಪ್ರಾತಿನಿಧ್ಯ, ಅರ್ಜುನ್ ಪಬ್ಲಿಷಿಂಗ್ ಹೌಸ್, ಮೈಸೂರು.

೨೯. ಕವಿತಾ ರೈ, ೨೦೦೭, ಅರಿವಿನ ನಡೆ, ಲೋಹಿಯಾ ಪ್ರಕಾಶನ, ಬಳ್ಳಾರಿ.

೩೦. ಕರ್ನಾಟಕದ ಮಾನವ ಅಭಿವೃದ್ಧಿ ವರದಿ, ೨೦೦೫, ಕರ್ನಾಟಕ ಸರ್ಕಾರ.

೩೧. ಕವಿತಾ ರೈ, ೨೦೦೭, ವಿವಾಹ ಮತ್ತು ಕುಟುಂಬ, ಮಂಟಪ ಮಾಲೆ ೧೪೯, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೨. ಕವಿತಾ ರೈ ಬಿ.ಆರ್., ೨೦೦೫, ಮಹಿಳಾ ಅಸ್ತಿತ್ವದ ಸಂಕಥನ, ಸಿ.ವಿ.ಜಿ, ಬೆಂಗಳೂರು.

೩೩. ಕವಿತಾ ರೈ., ೨೦೦೯, ಮಹಿಳೆ: ಅಸ್ತಿತ್ವದ ಸಂಕಥನ, ಪ್ರಗತಿ ಗ್ರಾಫಿಕ್ಸ್, ಬೆಂಗಳೂರು.

೩೪. ಕಮಲ ಎಂ.ಆರ್., ೨೦೦೮, ಕಪ್ಪು ಹಕ್ಕಿಯ ಬೆಳಕಿನ ಹಾಡು, ಕಥನ ಪ್ರಕಾಶನ, ಬೆಂಗಳೂರು.

೩೫. ಕಬ್ಬೂರ ಕೆ.ಎಸ್., ೧೯೯೨, ಭಾರತದಲ್ಲಿ ಪ್ರಜಾಪ್ರಭುತ್ವ, ಪ್ರಸಾರಾಂಗ, ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.

೩೬. ಕಿಶೋರಿನಾಯಕ ಕೆ(ಸಂ), ೨೦೦೭, ಮಹಿಳಾ ಅಧ್ಯಯನ: ಸಾಧ್ಯತೆಗಳು ಮತ್ತು ಸವಾಲುಗಳು, ಮಹಿಳಾ ಅಧ್ಯಯನ ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳೂರು.

೩೭. ಕಿಶೋರಿ ನಾಯಕ್ ಕೆ, ೧೯೯೯, ಸ್ತ್ರೀವಾದಿ ನೆಲೆಗಳು ಹಾಗೂ ನಿಲುವುಗಳು, ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು.

೩೮. ಕುಮಾರಪ್ಪ ಜೆ(ಅನು), ೨೦೦೪, ಮಾತೆಯರು ಮಾನ್ಯರಾಗಿದ್ದಾಗ, ನವಕರ್ನಾಟಕ ಪ್ರಕಾಶನ, ಬೆಂಗಳೂರು.

೩೯. ಕೇಶವಶರ್ಮ ಕೆ, ೨೦೦೫, ಸ್ತ್ರೀವಾದಿ ಆಖ್ಯಾನ, ಸಾರಾ ಎಂಟರ್‌ಪ್ರೈಸಸ್, ಮೈಸೂರು.

೪೦. ಕೃಷ್ಣಮೂರ್ತಿ ಮತ್ತೂರು, ೨೦೦೨, ಗಾಂಧಿ ಉಪನಿಷತ್, ಎಂ.ಪಿ.ಬಿರ್ಲಾ ಪೌಂಡೇಶನ್ ರೇಸ್‌ಕೋರ್ಸ್, ಬೆಂಗಳೂರು.

೪೧. ಕೃಷ್ಣಯ್ಯಗೌಡ ಎಚ್.ಆರ್., ೨೦೦೬, ಗ್ರಾಮೀಣ ಅಭಿವೃದ್ಧಿ ಮತ್ತು ಸಹಕಾರ, ಸ್ಪಂದನ ಪ್ರಕಾಶನ,

೪೨. ಕೈಪಿಡಿ, ೨೦೦೬, ಕರ್ನಾಟಕ, ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ, ಬೆಂಗಳೂರು, ಕರ್ನಾಟಕ ಸರ್ಕಾರ.

೪೩. ಕೊಪ್ಪಳ ಜಿಲ್ಲೆ ಅಂಕಿ-ಅಂಶಗಳ ನೋಟ, ೨೦೦೮-೨೦೦೯, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು, ಕೊಪ್ಪಳ.

೪೪. ಗಣೇಶ್ ಮೊಗಳ್ಳಿ, ೨೦೦೪, ದಲಿತರು ಮತ್ತು ಜಾಗತೀಕರಣ, ಪ್ರಸಾರಾಂಗ, ಕವಿವಿ, ಹಂಪಿ.

೪೫. ಗಾಯತ್ರಿ ನಾವಡ, ೨೦೦೩, ಮಹಿಳಾ ಸಂಕಥನ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೪೬. ಗಾಯಿತ್ರಿ ನಾವಡ, ೨೦೦೩, ಮಹಿಳಾ ಸಂಕಥನ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೪೭. ಗಾಯತ್ರಿ ಎನ್, ೨೦೧೨, ಮಹಿಳಾ ಮೀಸಲಾತಿ ಮತ್ತು ಲಿಂಗ ರಾಜಕಾರಣ, ಲಡಾಯಿ ಪ್ರಕಾಶನ, ಗದಗ.

೪೮. ಗಾಂಧಿ ಎಂ.ಕೆ., ೧೯೮೭, ನನ್ನ ಕಲ್ಪನೆಯ ಸಮಾಜವಾದ, ಎಸ್.ಆರ್.ಕುಲಕರ್ಣಿ(ಅನು), ಭಾರತೀಯ ವಿದ್ಯಾಭವನ, ಬೆಂಗಳೂರು.

೪೯. ಗೀತಾ ಕೆ.ಎಸ್., ೨೦೦೮, ಮಹಿಳೆ ಕಾನೂನು ಮತ್ತು ನ್ಯಾಯ, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.

೫೦. ಗೀತಾಕೃಷ್ಣಮೂರ್ತಿ, ೨೦೦೭, ಮಹಿಳೆ ಸಮಾಜ ಕಾನೂನು, ನವ ಕರ್ನಾಟಕ ಪ್ರಕಾಶನ, ಬೆಂಗಳೂರು.

೫೧. ಗೀತಾ ಕೃಷ್ಣಾಮೂರ್ತಿ, ೨೦೦೯, ಮಹಿಳಾ ಹಕ್ಕುಗಳು: ಮಾನವ ಹಕ್ಕುಗಳ ನೆಲೆಯಲ್ಲಿ, ಮಹಿಳಾ ಅಧ್ಯಯನ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೫೨. ಗೀತಾ ಎಸ್.ಕೆ., ೨೦೧೧, ಮಹಿಳಾ ವಿಮೋಚನೆಯ ಹೋರಾಟಗಳ ನೂರು ವರ್ಷಗಳು, ಚಿಂತನ ಪುಸ್ತಕ, ಬೆಂಗಳೂರು.

೫೩. ಗಾಯಿತ್ರಿ ಎನ್., ೧೯೯೧, ಮಹಿಳೆ ಬಿಡುಗಡೆಯ ಹಾದಿಯಲ್ಲಿ, ನವಕರ್ನಾಟಕ ಪ್ರಕಾಶನ, ಬೆಂಗಳೂರು.

೫೪. ಗೋಪಾಲರಾವ್ ಎಂ.ವೈ., ೨೦೦೦, ಭಾರತೀಯ ನಾರಿ ಅಂದು-ಇಂದು, ಭೈರವ ಪ್ರಕಾಶನ, ಚಿಕ್ಕಮಗಳೂರು.

೫೫. ಗೋಪಾಲ್‌ರಾವ್ ಹೇಜೀಬ್, ೨೦೦೧, ಹೈದ್ರಾಬಾದ್ ಮುಕ್ತಿ ಸಂಘರ್ಷ, ರಾಷ್ಟ್ರೋತ್ಥಾನ ಸಾಹಿತ್ಯ, ಬೆಂಗಳೂರು.

೫೬. ಚಂದ್ರಶೇಖರ ಟಿ.ಆರ್., ೨೦೦೧, ಮಹಿಳೆ ಆರ್ಥಿಕತೆ ಮತ್ತು ಅಭಿವೃದ್ಧಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೫೭. ಚಂದ್ರಶೇಖರ್ ಟಿ.ಆರ್., ೧೯೯೯, ಅಮರ್ತ್ಯಸೇನ್ ಅಭಿವೃದ್ಧಿ ಅಧ್ಯಯನಗಳು, ಕ್ರೈಸ್ಟ್ ಕಾಲೇಜ್, ಬೆಂಗಳೂರು.

೫೮. ಚಂದ್ರಶೇಖರ ಟಿ.ಆರ್., ೨೦೦೩, ಕರ್ನಾಟಕ ಅಭಿವೃದ್ಧಿಯ ಸಾಮಾಜಿಕ ನೆಲೆಗಳು, ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು.

೫೯. ಚಂದ್ರಶೇಖರ್ ಟಿ.ಆರ್., ೧೯೯೯, ಕರ್ನಾಟಕ ಅಭಿವೃದ್ಧಿ ಮಾಹಿತಿ ಕೋಶ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬೦. ಚಂದ್ರಶೇಖರ್ ಟಿ.ಆರ್., ೨೦೧೧, ಬಿಜಾಪುರ ಜಿಲ್ಲೆ ಅಭಿವೃದ್ಧಿ ಮತ್ತು ದುಃಸ್ಥಿತಿ ಒಂದು ಅಧ್ಯಯನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬೧. ಚಂದ್ರಶೇಖರ್ ಟಿ.ಆರ್.(ಸಂ), ೧೯೯೯, ಜಿಲ್ಲಾ ಅಭಿವೃದ್ಧಿ ಅಧ್ಯಯನ ಕೊಪ್ಪಳ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬೨. ಚಂದ್ರಶೇಖರ್ ಟಿ.ಆರ್(ಸಂ), ೨೦೦೫, ದಲಿತ ಅಧ್ಯಯನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬೩. ಚಂದ್ರಶೇಖರ್ ಟಿ.ಆರ್., ೨೦೦೩, ಕರ್ನಾಟಕ ಅಭಿವೃದ್ಧಿಯ ಸಾಮಾಜಿಕ ನೆಲೆಗಳು, ಸಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು.

೬೪. ಚಂದ್ರಶೇಖರ ಟಿ.ಆರ್., ೨೦೧೨, ಕರ್ನಾಟಕ ಜನಗಣತಿ, ೨೦೧೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬೫. ಚಂದ್ರಶೇಖರ ಟಿ.ಆರ್., ೨೦೧೪, ಅಭಿವೃದ್ಧಿ ಮತ್ತು ಸಾಮಾಜಿಕ ನ್ಯಾಯ, ಗಾಯತ್ರಿ ಪ್ರಕಾಶನ, ಬಳ್ಳಾರಿ.

೬೬. ಚಂದ್ರಶೇಖರ್ ಟಿ.ಆರ್ ಮತ್ತು ಚಂದ್ರಪೂಜಾರಿ ಎಂ(ಸಂ), ೨೦೦೩, ಅಭಿವೃದ್ಧಿ ಅಧ್ಯಯನ, ಸಂಪುಟ-೨, ಸಂಚಿಕೆ-೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬೭. ಚಂದ್ರಶೇಖರ್ ಟಿ.ಆರ್., ೨೦೧೧, ಹಕ್ಕು-ಹಂಗು ಅಭಿವೃದ್ಧಿ ಅಧ್ಯಯನ ಪ್ರಬಂಧಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬೮. ಚಂದ್ರಶೇಖರ್ ಟಿ.ಆರ್., ೨೦೦೧, ಗ್ರಾಮೀಣಾಭಿವೃದ್ಧಿ ಮತ್ತು ವಿಕೇಂದ್ರಿಕರಣ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬೯. ಚಂದ್ರಶೇಖರ್ ಟಿ.ಆರ್., ೨೦೦೭, ಕರ್ನಾಟಕ ಅಭಿವೃದ್ಧಿಯ ಆಕೃತಿ, ಪಲ್ಲವ ಪ್ರಕಾಶನ, ಚನ್ನಪಟ್ಟಣ.

೭೦. ಚಂದ್ರಶೇಖರ್ ಟಿ.ಆರ್., ೨೦೧೦, ಲಿಂಗ ಸಂಬಂಧಗಳು ಮತ್ತು ಅಭಿವೃದ್ಧಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೭೧. ಚಂದ್ರಶೇಖರ ಟಿ.ಆರ್., ೨೦೦೦, ವಿಕೇಂದ್ರೀಕರಣ ತತ್ವ ಮತ್ತು ಆಚರಣೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೭೨. ಚಂದ್ರಶೇಖರ್ ಎಸ್., ೨೦೦೬, ವಿಕೇಂದ್ರೀಕರಣ ತತ್ವ ಮತ್ತು ಆಚರಣೆ, ಪ್ರಸಾರಾಂಗ, ಕವಿವಿ, ಹಂಪಿ.

೭೩. ಚಂದ್ರಶೇಖರ್ ಎಸ್., ೨೦೦೬, ಆಧುನಿಕ ಕರ್ನಾಟಕ ಆಂದೋಲನಗಳು, ನಮ್ಮ ಪ್ರಕಾಶನ, ಬಿಳಿಗೆರೆ.

೭೪. ಚಂದ್ರಶೇಖರ್ ಆರ್.ವಿ., ೨೦೧೦, ಸಮಕಾಲೀನ ಮಹಿಳೆ ಮತ್ತು ಆರೋಗ್ಯ, ಅನ್ನದಾನಿ ಭೈರವ ಪ್ರಕಾಶನ, ಬೆಂಗಳೂರು.

೭೫. ಚಂದ್ರಶೇಖರ್ ಟಿ.ಆರ್., ೨೦೦೯, ಜನರನ್ನು ಒಳಗೊಳ್ಳುವ ಅಭಿವೃದ್ಧಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೭೬. ಚನ್ನಣ್ಣ ವಾಲೀಕಾರ., ೧೯೯೮, ಹೈದ್ರಾಬಾದ್-ಕರ್ನಾಟಕ ಪ್ರದೇಶದ ಗ್ರಾಮ ದೇವತೆಗಳ ಜಾನಪದೀಯ ಅಧ್ಯಯನ, ದಲಿತ ಬಂಡಾಯ ಸಾಹಿತ್ಯ ಪ್ರಕಾಶನ ಕೇಂದ್ರ, ಗುಲಬರ್ಗಾ.

೭೭. ಚಲವಾದಿ ಎಂ.ಆರ್., ೨೦೧೦, ಹೈದ್ರಾಬಾದ್ ಕರ್ನಾಟಕ ದಲಿತ ಸಾಹಿತ್ಯ, ಸಾಕ್ಷಿ ಪ್ರತಿಷ್ಠಾನ, ಹುಮನಾಬಾದ.

೭೮. ಚಂದ್ರಶೇಖರ್ ಬಿ.ಎಸ್., ೨೦೦೧, ಸಮಾಜ ವಿಜ್ಞಾನಗಳಲ್ಲಿ ಸಂಶೋಧನಾ ವಿಧಾನಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೭೯. ಚಂದ್ರಕಾಂತ ಪೋಕಳೆ(ಅನು), ೨೦೦೯, ಚಾರ್ವಾಕನಿಂದ ಮಾರ್ಕ್ಸ್‌ವರೆಗೆ, ಕ್ರಿಯಾ ಪ್ರಕಾಶನ,

೮೦. ಚಂದ್ರಪೂಜಾರಿ ಎಂ., ೨೦೦೫, ಸಮಾಜ ಸಂಶೋಧನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೮೧. ಚಂದ್ರಪೂಜಾರಿ ಎಂ., ೨೦೦೫, ಸಂಶೋಧಕರು ಮತ್ತು ಕ್ಷೇತ್ರಕಾರ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,

೮೨. ಚಂದ್ರಪೂಜಾರಿ ಎಂ., ೨೦೦೮, ಸಂಶೋಧನಾ ಜವಾಬ್ದಾರಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೮೩. ಚಂದ್ರಪೂಜಾರಿ ಎಂ., ೨೦೦೫, ಸಂಶೋಧನಾ ಪ್ರಸ್ತಾವ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೮೪. ಚಂದ್ರಪೂಜಾರಿ ಎಂ.(ಸಂ), ೨೦೧೦, ಅಭಿವೃದ್ಧಿ ಅಧ್ಯಯನ, ಸಂಪುಟ–೮, ಸಂಚಿಕೆ–೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೮೫. ಚಂದ್ರಪೂಜಾರಿ ಎಂ(ಸಂ), ೨೦೦೭, ಅಭಿವೃದ್ಧಿ ಅಧ್ಯಯನ, ಸಂಪುಟ–೬, ಸಂಚಿಕೆ–೨, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೮೬. ಚಂದ್ರಪೂಜಾರಿ ಎಂ., ೨೦೧೦, ಯಾಕೀಗ ಭೂಮಿ ಪ್ರಶ್ನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೮೭. ಚಂದ್ರಪೂಜಾರಿ ಎಂ., ೨೦೧೨, ಪರ್ಯಾಯ ಸಮಾಜ ವಿಜ್ಞಾನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೮೮. ಚಂದ್ರಪೂಜಾರಿ ಎಂ., ೨೦೧೦, ಕರ್ನಾಟಕದ ಪಂಚವಾರ್ಷಿಕ ಯೋಜನೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೮೯. ಚಂದ್ರಪೂಜಾರಿ ಎಂ., ೨೦೧೪, ಬಡತನ ಮತ್ತು ಪ್ರಜಾಪ್ರಭುತ್ವ, ಗಾಯತ್ರಿ ಪ್ರಕಾಶನ, ಬಳ್ಳಾರಿ.

೯೦. ಚಂದ್ರಪೂಜಾರಿ ಎಂ., ೨೦೦೮, ದೇಶೀಯತೆಯ ನೆರಳಲ್ಲಿ ವಿಕೇಂದ್ರೀಕರಣ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೯೧. ಚಂದ್ರಪೂಜಾರಿ ಎಂ., ೨೦೧೪, ಬದಲಾಗುತ್ತಿರುವ ಕರ್ನಾಟಕ, ಗಾಯಿತ್ರಿ ಪ್ರಕಾಶನ, ಬಳ್ಳಾರಿ.

೯೨. ಚಂದ್ರಪೂಜಾರಿ ಎಂ., ೨೦೧೪, ಅಭಿವೃದ್ಧಿ ಮತ್ತು ರಾಜಕೀಯ, ಪಲ್ಲವ ಪ್ರಕಾಶನ, ಚನ್ನಪಟ್ಟಣ.

೯೩. ಚಂದ್ರಪೂಜಾರಿ ಎಂ., ೨೦೦೪, ಜನಾಯೋಜನೆ ಹೈದ್ರಾಬಾದ್ ಕರ್ನಾಟಕದ ಅನುಭವಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೯೪. ಚಂಡಾಲ, ೧೯೯೨, ಕರ್ನಾಟಕ ಚಳುವಳಿಗಳು ಮತ್ತು ಅಂಬೇಡ್ಕರ್, ಚೈತ್ರ ಪ್ರಕಾಶನ, ಚಿಕ್ಕತಿರುಪತಿ, ಕೋಲಾರ.

೯೫. ಚಿನ್ನಸ್ವಾಮಿ ಸೋಸಲೆ ಎನ್., ೨೦೦೮, ಭಾರತೀಯ ಸಮಾಜ ಮತ್ತು ದಲಿತರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೯೬. ಜಯಶೀಲ, ಮಹಿಳೆ ಮತ್ತು ಅಭಿವೃದ್ಧಿ.

೯೭. ಜವರಯ್ಯ ಮಾ.ನ., ೧೯೯೫, ಅಂಬೇಡ್ಕರ್ ಮತ್ತು ಸಾಮಾಜಿಕ ನ್ಯಾಯ, ಸಿದ್ದಾರ್ಥ ಗ್ರಂಥಮಾಲೆ, ಮೈಸೂರು.

೯೮. ಜೆರಾಲ್ಡಿನ್ ಫೋರ್ಬ್ಸ್, ಶ್ರೀಮತಿ ಎಚ್.ಎಸ್.(ಅನು), ೨೦೦೧, ಆಧುನಿಕ ಭಾರತದಲ್ಲಿ ಮಹಿಳೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೯೯. ಜ್ಯೋತಿ ಶಶಿಕುಮಾರ್, ೨೦೦೭, ಮಹಿಳಾ ಸಾಮಾಜಿಕತೆ, ಮಹಿಳಾ ಅಧ್ಯಯನ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೦೦. ಜೋಗನ್ ಶಂಕರ್, ೧೯೯೫, ಗ್ರಾಮ ಸಮಾಜ, ಜೀವ ಪ್ರಕಾಶನ, ಮೈಸೂರು.

೧೦೧. ದಸ್ತಗಿರಿಸಾಬ್‌ದಿನ್ನಿ(ಸಂ), ೨೦೦೪, ಜಾಗತೀಕರಣ ಮತ್ತು ಸಂಸ್ಕೃತಿ, ಕನಸು ಪ್ರಕಾಶನ.

೧೦೨. ದಿಬ್ಬದ ಶಾಂತಿನಾಥ, ೨೦೦೫, ವೈಚಾರಿಕ ಲೇಖನಗಳು, ಪ್ರಸಾರಾಂಗ, ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲ್ಬರ್ಗಾ.

೧೦೩. ಧರಣಿದೇವಿ ಮಾಲಗತ್ತಿ, ೧೯೯೮, ಸ್ತ್ರೀವಾದ ಮತ್ತು ಭಾರತೀಯತೆ, ಚೇತನಬುಕ್ ಹೌಸ್, ಮೈಸೂರು.

೧೦೪. ದೇಜಗೌ, ೧೯೮೯, ಸಮಾಜವಾದಿ ರಾಮಮನೋಹರ ಲೋಹಿಯಾ, ಸಹ್ಯಾದ್ರಿ ಪ್ರಕಾಶನ.

೧೦೫.ನಂಜಮಣ್ಣಿ ಎಂ., ೨೦೦೩, ಭಾರತೀಯ ಸಾಮಾಜಿಕ ಸಂಸ್ಥೆಗಳು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

೧೦೬.ನೀಲಾ ಕೆ., ೨೦೦೧, ಬದುಕು ಬಂದೀಖಾನೆ, ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ, ಕರ್ನಾಟಕ ರಾಜ್ಯ ಸಮಿತಿ.

೧೦೭.ನಿರುಪಮಾ, ೧೯೯೬, ಧರ್ಮಶಾಸ್ತ್ರಗಳು, ಸ್ತ್ರೀ ಹಾಗೂ ಶೋಷಣೆ, ಸ್ವತಂತ್ರ ಮುದ್ರಣಾಲಯ, ಚಾಮರಾಜಪೇಟೆ, ಬೆಂಗಳೂರು.

೧೦೮.ನೀಲಾ ಕೆ., ೨೦೦೯, ನೆಲದ ಪಿಸುಮಾತು, ಚಿಂತನ ಪುಸ್ತಕ, ಬೆಂಗಳೂರು.

೧೦೯.ನೇಮಿಚಂದ್ರ(ಸಂ), ೨೦೦೫, ಮಹಿಳಾ ಲೋಕ, ನವಕರ್ನಾಟಕ ಪ್ರಕಾಶನ, ಬೆಂಗಳೂರು.

೧೧೦.ಠಾಕೂರದಾಸ್ ಬಂಗ್, ೧೯೯೮, ಗ್ರಾಮಸ್ವರಾಜ್ಯ, ಕರ್ನಾಟಕ ಸರ್ವೋದಯ ಸಾಹಿತ್ಯ ಸಮಿತಿ, ಬೆಂಗಳೂರು.

೧೧೧.ಡೊಮಿನಿಕ್ ಡಿ., ೨೦೦೭, ಜಾಗತೀಕರಣದ ಐಡಿಯಾಲಜಿ ಮತ್ತು ಮಾನವ ಹಕ್ಕುಗಳು, ಸಖಿ ಪ್ರಕಾಶನ, ಹೊಸಪೇಟೆ.

೧೧೨.ಪ್ರೀತಿಶುಭಚಂದ್ರ, ೨೦೦೨, ಮಹಿಳಾ ಅಧ್ಯಯನ ತಾತ್ವಿಕ ನೆಲೆಗಳು ಮತ್ತು ಮಹಿಳಾ ಚಳುವಳಿಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೧೩.ಪ್ರಭಾಕರ ಶಿಶಿಲ, ೧೯೯೭, ಅಭಿವೃದ್ಧಿ ಮತ್ತು ಯೋಜನಾ ಅರ್ಥಶಾಸ್ತ್ರ, ಕಲಾ ಪ್ರಕಾಶನ, ಬೆಂಗಳೂರು.

೧೧೪.ಪ್ರಭಾವತಿ ಎಸ್.ವಿ., ೨೦೦೬, ಜಾಗತೀಕರಣ ಮತ್ತು ಮಹಿಳೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೧೧೫.ಪ್ರಾದೇಶಿಕ ಅಸಮತೋಲನ ನಿವಾರಣಾ ಉನ್ನತಾಧಿಕಾರ ಸಮಿತಿ, ಅಂತಿಮ ವರದಿ ಜೂನ್ ೨೦೦೨, ಕರ್ನಾಟಕ ಸರಕಾರ.

೧೧೬.ಬಸವರಾಜ ಟಿ.ಕುಮ್ನೂರ, ೨೦೧೧, ಡಾ.ನಂಜುಂಡಪ್ಪನವರ ವರದಿ ಮತ್ತು ಕಲಂ ೩೭೧, ಎಸ್.ಎಸ್.ಭಾವಿಕಟ್ಟಿ ಪ್ರಕಾಶನ, ಗುಲಬರ್ಗಾ.

೧೧೭.ಬಡಿಗೇರ ಜಿ.ಎಲ್., ೨೦೦೫, ಭಾರತದಲ್ಲಿ ಗ್ರಾಮೀಣ ಅಭಿವೃದ್ಧಿ, ಚೇತನ ಬುಕ್‌ಹೌಸ್, ಮೈಸೂರು.

೧೧೮.ಬಳ್ಳಾರಿ ಜಿಲ್ಲಾ ಗೆಜೆಟಿಯರ್

೧೧೯.ಬರಗೂರು ರಾಮಚಂದ್ರಪ್ಪ., ೨೦೦೫, ಸಂಸ್ಕೃತಿ : ಶ್ರಮ ಮತ್ತು ಸೃಜನಶೀಲತೆ, ಅಂಕಿತ ಪ್ರಕಾಶನ, ಬೆಂಗಳೂರು.

೧೨೦.ಬಾದಾಮಿ ಎಸ್.ಎಸ್., ೨೦೦೦, ಆರ್ಥಿಕ ಚಿಂತನೆ, ಸ್ವಾಗತ ಸಮಿತಿ ಅಖಿಲ ಭಾರತ ೬೮ನೇ ಕನ್ನಡ ಸಾಹಿತ್ಯ ಸಮ್ಮೇಳನ, ಬಾಗಲಕೋಟೆ.

೧೨೧.ಭಾರತದ ಗ್ಯಾಸೆಟಿಯರ್, ೧೯೮೭, ಭಾರತದ ದೇಶಕೋಶ, ಸಂಪುಟ ೩, ಭಾಗ-೨, ಅರ್ಥವ್ಯವಸ್ಥೆ ಮತ್ತು ಉದ್ಯಮಗಳು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ಬೆಂಗಳೂರು.

೧೨೨.ಬಾಲನ್ ಎಸ್., ೨೦೧೩, ಕನಿಷ್ಠ ವೇತನದ ಹೆಸರಿನಲ್ಲಿ 'ಹಸಿವಿನ ವೇತನ'ವನ್ನು ನಿಗದಿಗೊಳಿಸಿರುವ ಕರ್ನಾಟಕ ಸರ್ಕಾರ, ಕರ್ನಾಟಕ ಶ್ರಮಿಕಶಕ್ತಿ, ಬೆಂಗಳೂರು.

೧೨೩.ಬಾಲನ್ ಎಸ್., ಗುತ್ತಿಗೆ ಕಾರ್ಮಿಕ ಪದ್ಧತಿ ಹೊಸ ರೂಪದ ಜೀತಗಾರಿಕೆ, ಕರ್ನಾಟಕ ಶ್ರಮಿಕಶಕ್ತಿ, ಬೆಂಗಳೂರು.

೧೨೪.ಬಾಲಚಂದ್ರ ಜಯಶೆಟ್ಟಿ, ೨೦೦೬, ಹೈದರಾಬಾದ್ ಕರ್ನಾಟಕದ ವಿಮೋಚನಾ ಚಳುವಳಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೧೨೫.ಭಾರತಿ ಹಾದಿಗೆ ಬಿ.ಎಂ., ೨೦೦೫, ಭಾರತೀಯ ಸಮಾಜದ ರಚನೆ ಮತ್ತು ಬದಲಾವಣೆ, ಚೇತನ್ ಬುಕ್ ಹೌಸ್, ಮೈಸೂರು.

೧೨೬.ಭೈರಪ್ಪ ಕೆ., ೧೯೯೭, ಭಾರತದಲ್ಲಿ ಗ್ರಾಮೀಣಾಭಿವೃದ್ಧಿ, ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ, ಕಲಬುರ್ಗಿ

೧೨೭.ಮಲ್ಲಿಕಾಘಂಟಿ(ಸಂ), ೨೦೦೮, ಸಂಸ್ಕೃತಿ ಮಹಿಳಾ ಮಾಲಿಕೆ, ಸಂಪುಟ-೫, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೧೨೮.ಮಂಗಳಾ ಪ್ರಿಯದರ್ಶಿನಿ, ೨೦೦೭, ಸ್ತ್ರೀವಾದ ಮತ್ತು ಮಹಿಳಾ ಅಧ್ಯಯನ ಒಂದು ಪ್ರವೇಶಿಕೆ, ಮಹಿಳಾ ಅಧ್ಯಯನ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೨೯.ಮಹೇಶ ಹೆಚ್(ಸಂ), ೧೯೯೯, ಲಿಂಗ ಸೂಕ್ಷ್ಮತೆ ಮತ್ತು ನ್ಯಾಯ, ಐ.ಸಿ.ಆರ್.ಎ., ಬೆಂಗಳೂರು.

೧೩೦.ಮಧುಕೇಶ್ವರ(ಅನು), ಹೇಮಲತಾ ಎಚ್.ಎಂ. ಭಾರತದ ಮಹಿಳೆಯರು, ಬದುಕು ಮತ್ತು ಹೋರಾಟ, ಸಮತಾ ಅಧ್ಯಯನ ಕೇಂದ್ರ, ಮೈಸೂರು.

೧೩೧.ಮಹಾಬಲೇಶ್ವರಪ್ಪ ಬಿ.ಸಿ., ೧೯೯೭, ಹೈದರಾಬಾದ್ ಕರ್ನಾಟಕದಲ್ಲಿ ರಾಜಕೀಯ ಚಳುವಳಿಗಳು, ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.

೧೩೨.ಮಾಲಗತ್ತಿ ಅರವಿಂದ, ೧೯೯೧, ಡಾ.ಅಂಬೇಡ್ಕರರ ವಿಚಾರಧಾರೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

೧೩೩. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ೨೦೦೮, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ-ಕರ್ನಾಟಕ ಸರಕಾರದ ಆದೇಶಗಳು, ಸುತ್ತೋಲೆಗಳು ಮತ್ತು ಮಾರ್ಗಸೂಚಿಗಳು, ಜಿಲ್ಲಾ ಪಂಚಾಯತ್ ಗುಲ್ಬರ್ಗಾ.

೧೩೪. ಮುಡಬಿ ಬಾಬುರಾವ್., ೨೦೦೫, ಮಹಿಳಾ ಸಬಲೀಕರಣ ಮತ್ತು ಅಂಬೇಡ್ಕರ್ ದೃಷ್ಟಿಕೋನ, ಲಕ್ಷ್ಮಿ ಪ್ರಕಾಶನ, ಬೆಂಗಳೂರು.

೧೩೫. ಮುಜಾಫರ್ ಅಸ್ಸಾದಿ, ೨೦೦೯, ಕರ್ನಾಟಕದಲ್ಲಿ ಐಡೆಂಟಿಟಿ ರಾಜಕೀಯ ರೈತ ಹೋರಾಟ ಹಾಗೂ ಸಾಮಾಜಿಕ ಚಳವಳಿ, ಪ್ರಗತಿ ಗ್ರಾಫಿಕ್ಸ್, ಬೆಂಗಳೂರು.

೧೩೬. ಮುರಳೀಧರನ್ ವೈ.ಜಿ., ೨೦೧೩, ಭ್ರಷ್ಟಾಚಾರದ ಸುಳಿಯಲ್ಲಿ ಭಾರತ, ನವ ಕರ್ನಾಟಕ ಪ್ರಕಾಶನ, ಬೆಂಗಳೂರು.

೧೩೭. ಮೂರ್ತೀಶ್ವರಯ್ಯ ಬೆ.ಕಾ., ೨೦೦೦, ಮಹಿಳೆ ಸಮಾಜ ಮತ್ತು ಕಾನೂನು, ಸಪ್ನ ಬುಕ್‌ಹೌಸ್, ಬೆಂಗಳೂರು.

೧೩೮. ಮೀನಾಕ್ಷಿ ಬಾಳಿ ಮತ್ತು ನೀಲ ಕೆ(ಸಂ), ೨೦೧೦, ನೆಲದ ನಂಟು, ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ, ಕರ್ನಾಟಕ ರಾಜ್ಯ ಸಮಿತಿ.

೧೩೯. ಮೋಹನ್‌ಕೃಷ್ಣ ರೈ ಕೆ., ೨೦೦೪, ಪ್ರಭುತ್ವ ಮತ್ತು ಜನತೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೪೦. ಮೀರಾ ಎಲ್.ಜಿ.(ಅನು), ೧೯೯೭, ಮಾನುಷಿಯ ಮಾತು, ಅಕ್ಷರ ಪ್ರಕಾಶನ, ಹೆಗ್ಗೋಡು.

೧೪೧. ಮೈತ್ರೇಯ ಮುಖ್ಯೋಪಾಧ್ಯಾಯ, ೧೯೮೫, ಬೆಳ್ಳಿಯ ಸಂಕೋಲೆಗಳು, ವೈದೇಹಿ (ಅನು), ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ.

೧೪೨. ಮೃತ್ಯುಂಜಯ ಹೊರಕೇರಿ ಮತ್ತು ಬಸವಲಿಂಗ ಸೊಪ್ಪಿಮಠ(ಸಂ), ೨೦೦೫, ರಾಯಚೂರು ಜಿಲ್ಲಾದರ್ಶನ, ಪ್ರಸಾರಾಂಗ, ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲ್ಬರ್ಗಾ.

೧೪೩. ಮೋಹನ್ ಜಿ.ಎನ್(ಅನು), ೨೦೧೨, ಬರ ಅಂದ್ರೆ ಎಲ್ಲರಿಗೂ ಇಷ್ಟ, ಅಭಿನವ ಪ್ರಕಾಶನ, ಬೆಂಗಳೂರು.

೧೪೪. ರಂಗಸ್ವಾಮಿ ಎ.(ಸಂ), ೨೦೧೧, ಕರ್ನಾಟಕದಲ್ಲಿ ಮಹಿಳಾ ಚಳುವಳಿಗಳು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು.

೧೪೫. ರವೀಂದ್ರನಾಥ ಕೆ(ಸಂ), ೨೦೦೫, ಬಳ್ಳಾರಿ ಜಿಲ್ಲಾ ದರ್ಶನ, ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.

೧೪೬.ರಹಮತ್ ತರೀಕೆರೆ(ಸಂ), ೨೦೦೦, ಧರ್ಮ: ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ ೩, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೪೭.ರಹಮತ್ ತರೀಕೆರೆ., ೨೦೦೯, ಕನ್ನಡ ಸಂಶೋಧನೆ ತಾತ್ವಿಕ ವಿಚಾರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೪೮.ರಹಮತ್ ತರೀಕೆರೆ, ೧೯೯೯, ವಸಾಹತು ಪ್ರಜ್ಞೆ ಮತ್ತು ವಿಮೋಚನೆ, ಬೆಳ್ಳಿಚುಕ್ಕಿ ಟ್ರಸ್ಟ್, ಬೆಂಗಳೂರು.

೧೪೯.ರತ್ನಮ್ಮ ಕೆ.ಎಸ್., ೨೦೦೫, ಮಹಿಳಾ ಮೀಸಲಾತಿ, ಈಶ್ವರಿ ಪ್ರಕಾಶನ, ಮೈಸೂರು.

೧೫೦.ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆ–೨೦೦೫, ಕರ್ನಾಟಕ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ, ಜಿಲ್ಲಾ ಪಂಚಾಯತ್, ರಾಯಚೂರು.

೧೫೧.ರವೀಂದ್ರನಾಥ ಕೆ.(ಸಂ), ೨೦೦೮, ಅಧ್ಯಯನದ ವಿಧಿ–ವಿಧಾನಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೫೨.ರಝಾಕ ಉಸ್ತಾದ, ೨೦೧೧, ಹೈದರಾಬಾದ್–ಕರ್ನಾಟಕ ಕಥೆ–ವ್ಯಥೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೧೫೩.ರಾಮಸ್ವಾಮಿ ಎಸ್.ಆರ್., ೨೦೦೦, ಸರ್ದಾರ ವಲ್ಲಭಬಾಯಿ ಪಟೇಲ್, ಸ್ವಪ್ನ ಬುಕ್ ಹೌಸ್, ಬೆಂಗಳೂರು.

೧೫೪.ರಾಜಶೇಖರ್ ಜಿ., ೧೯೮೧, ತೆಲಂಗಾಣ ರೈತ ಹೋರಾಟ, ಸಮುದಾಯ ಪ್ರಕಾಶನ, ಬೆಂಗಳೂರು.

೧೫೫.ರಾಮಣ್ಣ ಜಿ.ಟಿ. ಮತ್ತು ಇತರರು, ೨೦೧೧, ಮಾನವ ಹಕ್ಕುಗಳು, ಮಾಹಿತಿ ಹಕ್ಕುಗಳ ಅಧಿನಿಯಮ ಮತ್ತು ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ, ಹೇಮಂತ ಸಾಹಿತ್ಯ, ಬೆಂಗಳೂರು.

೧೫೬.ರೇಣುಕಾರ್ಯ ಸಿ.ಕೆ., ೨೦೦೬, ಮಹಿಳೆ ಮತ್ತು ಅಭಿವೃದ್ಧಿ, ಶ್ರೀಮತಿ ಯಶೋಧಾ ರಾಗೌ ಟ್ರಸ್ಟ್, ಮೈಸೂರು.

೧೫೭.ವಿಜಯಶ್ರೀ ಸಬರದ, ೨೦೦೫, ಮಹಿಳಾ ಶೋಷಣೆ, ಸವಾಲುಗಳು, ಪ್ರಸಾರಾಂಗ, ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲ್ಬರ್ಗಾ.

೧೫೮.ವಿಠಲರಾವ್ ಟಿ.ಗಾಯಕ್ವಾಡ(ಅನು), ೨೦೦೯, ಭಾರತೀಯ ಸ್ತ್ರೀ–ಜೀವನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೫೯. ವೆಂಕೋಬರಾವ್, ೨೦೦೦, ನ್ಯಾಯಕ್ಕಾಗಿ ಮಹಿಳೆಯರ ಹೋರಾಟ, ದಿವ್ಯಚಂದ್ರ ಪ್ರಕಾಶನ, ಬೆಂಗಳೂರು.

೧೬೦. ವೆಂಕಟೇಶ ಸಿ.ಡಿ(ಸಂ), ೨೦೧೦, ಮಹಿಳಾ ಅಧ್ಯಯನದ ನೆಲೆಗಳು, ಶ್ರೀ ಶಿರಡಿ ಸಾಯಿ ಎಂಟರ್ ಪ್ರೈಸಸ್, ಬೆಂಗಳೂರು.

೧೬೧. ವೆಂಕಟೇಶ ಕೆ ಮತ್ತು ಸರೋಜಾ ಬಿ(ಸಂ), ೨೦೦೬, ಹೈದ್ರಾಬಾದ್ ಕರ್ನಾಟಕ ವರ್ತಮಾನದ ತಲ್ಲಣಗಳು, ಪಲ್ಲವ ಪ್ರಕಾಶನ, ಬಳ್ಳಾರಿ.

೧೬೨. ಶಂಕರ್ ಆರ್.ಕೆ(ಸಂ), ೨೦೧೩, ಮಹಾತ್ಮಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆ, ೨೦೦೫, ಅಬ್ದುಲ್ ನಜೀರ್‌ಸಾಬ್ ರಾಜ್ಯ ಗ್ರಾಮೀಣ ಅಭಿವೃದ್ಧಿ ಸಂಸ್ಥೆ, ಮೈಸೂರು.

೧೬೩. ರೋಮಿಲಾ ಥಾಪರ್(ಅನು), ದೀಕ್ಷಿತ್ ಎಂ.ಆರ್., ೧೯೯೯, ಚಾರಿತ್ರಿಕ ವ್ಯಾಖ್ಯಾನಗಳು ಮತ್ತು ಭಾರತೀಯ ಸಮಾಜದ ಧರ್ಮ ನಿರಪೇಕ್ಷಿಕರಣ, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.

೧೬೪. ಲೆನಿನ್ ಆಯ್ದ ಕೃತಿಗಳು, ಸಂಪುಟ ೪, ೧೯೨೦-೧೯೨೩, ಪ್ರಗತಿ ಪ್ರಕಾಶನ, ಸೋವಿಯತ್ ಒಕ್ಕೂಟ ಮಾಸ್ಕೊ, ನವ ಕರ್ನಾಟಕ ಪಬ್ಲಿಕೇಶನ್ಸ್, ಬೆಂಗಳೂರು.

೧೬೫. ವಂದನಾಶಿವ, ಮಾಧವ ಐತಾಳ(ಅನು), ೨೦೦೭, ಭತ್ತದ ಚಿಲುಮೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೬೬. ವಸಂತ ಬನ್ನಾಡಿ, ೧೯೯೫, ಸಂಸ್ಕೃತಿ ಚಿಂತನೆ, ಅರಿವು ಬರಹ ಪ್ರಕಾಶನ.

೧೬೭. ವಸಂತರಾಜ ಎನ್.ಕೆ, ೨೦೦೯, ಹಸಿವಿನ ಸಾಮ್ರಾಜ್ಯಕ್ಕೆ ಕೊನೆಯಂತು? ಚಿಂತನ ಪುಸ್ತಕ, ಬೆಂಗಳೂರು.

೧೬೮. ವಗ್ಗಿ ವೈ.ಎಸ್.(ಸಂ), ೨೦೦೯, ಜಾಗತೀಕರಣ ಮತ್ತು ಭಾರತದ ಅಭಿವೃದ್ಧಿ, ವಗ್ಗಿ ಪ್ರಕಾಶನ, ಗುಲಬರ್ಗಾ.

೧೬೯. ಶಮಂತ್, ೨೦೦೧, ದುಡಿತ ಮಿಡಿತ, ಐ.ಬಿ.ಎಚ್.ಪ್ರಕಾಶನ, ಬೆಂಗಳೂರು.

೧೭೦. ಶಶಿಕಲಾ ಎಸ್.ಡಿ. ಮತ್ತು ರತ್ನಮ್ಮ ಕೆ.ಎಸ್(ಸಂ), ೨೦೦೪, ವಿಜಯಾನ್ವೇಷಣ, ಡಾ.ವಿಜಯಾದಬ್ಬೆ ಅಭಿನಂದನ ಗ್ರಂಥ ಸಮಿತಿ, ಮೈಸೂರು.

೧೭೧. ಶಿವಚಿತ್ತಪ್ಪ ಕೆ.(ಸಂ), ೨೦೦೬, ಮಹಿಳಾ ಸಬಲೀಕರಣದ ವಿಭಿನ್ನ ನೆಲೆಗಳು, ವಾಸುದೇವ ಸೇಡಂ, ವಿಠೋಬ ಭೀಮಣ್ಣ ಎಚ್., ಗ್ರಾಮೀಣ ಕೃಷಿ ಅಭಿವೃದ್ಧಿಯಲ್ಲಿ ಮಹಿಳಾ ಕಾರ್ಮಿಕರ ಸಮಸ್ಯೆಗಳು.

೧೭೨. ಶಿವಾನಂದ ಎಸ್.ವಿರಕ್ತಮಠ(ಸಂ), ೨೦೦೪, ಮಹಿಳಾ ಅಧ್ಯಯನ, ಸಂಪುಟ-೬, ಸಂಯುಕ್ತ ಸಂಚಿಕೆ ೧-೨, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೭೩. ಶಿವಾನಂದ ಎಸ್.ವಿರಕ್ತಮಠ, ೨೦೧೦, ಮಹಿಳೆ ಮತ್ತು ಧರ್ಮ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೭೪. ಶಿವರಾಮಯ್ಯ, ೨೦೦೩, ದನಿ ಇಲ್ಲದವರ ದನಿ, ಶಕ್ತಿ ಪ್ರಿಂಟರ್ಸ್, ಬೆಂಗಳೂರು.

೧೭೫. ಶಿರಗಾನಹಳ್ಳಿ ಶಾಂತನಾಯಕ., ೨೦೦೪, ಮನು ಹಿಟ್ಲರ್ ಅಂಬೇಡ್ಕರ್: ಒಂದು ಚಿಂತನೆ, ಅರಾ ಪ್ರಿಂಟರ್ಸ್, ಮೈಸೂರು.

೧೭೬. ಶಿವರಾಮ ಆಸುಂಡಿ., ೨೦೧೦, ಹೈದರಾಬಾದ್ ಕರ್ನಾಟಕ ಸಮೂಹ ಮಾಧ್ಯಮ, ಶ್ರೀಸಿದ್ಧಲಿಂಗೇಶ್ವರ ಬುಕ್ ಡಿಪೋ, ಗುಲಬರ್ಗಾ.

೧೭೭. ಶ್ರೀಧರ ಎ., ೨೦೧೦, ಯಾರಿಗೆ ಪ್ರಜಾಪ್ರಭುತ್ವ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೭೮. ಶ್ರೀಮತಿ ಎಚ್.ಎಸ್., ೨೦೦೧, ಮಹಿಳಾ ಅಧ್ಯಯನ ವಿಶೇಷ ಸಂಚಿಕೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೭೯. ಶ್ರೀಮತಿ ಎಚ್.ಎಸ್., ೨೦೦೪, ಹೆಣ್ಣು ಹೆಂಗಸು, ಬ್ಯಾಲದಕೆರೆ ಪ್ರಕಾಶನ, ಬ್ಯಾಲದಕೆರೆ, ಮಂಡ್ಯ ಜಿಲ್ಲೆ.

೧೮೦. ಶ್ರೀಮತಿ ರತ್ನಶೀಲ ಶಿವಲಿಂಗಪ್ಪಗುರಡ್ಡಿ, ೨೦೦೪, ಕರ್ನಾಟಕ ಏಕೀಕರಣ ಹೋರಾಟ ಮತ್ತು ಮಹಿಳೆ, ಕನ್ನಡ ಜಾಗೃತಿ ಪುಸ್ತಕಮಾಲೆ, ಬೆಳಗಾವಿ.

೧೮೧. ಶ್ರೀಮತಿ ಎಚ್.ಎಸ್., ೨೦೦೪, ಸ್ತ್ರೀವಾದ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೮೨. ಶ್ರೀಮತಿ ಎಚ್.ಎಸ್(ಸಂ), ೨೦೦೭, ಮಹಿಳಾ ಆರ್ಥಿಕತೆ, ಮಹಿಳಾ ಅಧ್ಯಯನ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೮೩. ಶ್ರೀಮತಿ ಎಚ್.ಎಸ್(ಸಂ), ೨೦೦೦, ಮಹಿಳಾ ಅಧ್ಯಯನ, ಸಂಪುಟ-೨, ಸಂಚಿಕೆ-೨, ದಕ್ಷಿಣಾಯನ ಸಂಚಿಕೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೮೪. ಶ್ರೀಮತಿ ಎಚ್.ಎಸ್, ೨೦೧೨, ಸ್ತ್ರೀವಾದಿ ಸಂಶೋಧನೆ ವಿಧಿ-ವಿಧಾನಗಳು, ಬರಹ ಪಬ್ಲಿಷಿಂಗ್ ಹೌಸ್-ಬೆಂಗಳೂರು.

೧೮೫. ಶ್ರೀಮತಿ ಎಚ್.ಎಸ್., ೨೦೧೨, ಸ್ತ್ರೀವಾದ: ತಾತ್ವಿಕತೆ, ಪ್ರಗತಿ ಗ್ರಾಫಿಕ್ಸ್, ಬೆಂಗಳೂರು.

೧೮೬. ಶ್ರೀಮತಿ ಎಚ್.ಎಸ್., ೨೦೧೨, ಸ್ತ್ರೀವಾದ: ಆನ್ವಯಿಕತೆ, ಪ್ರಗತಿ ಗ್ರಾಫಿಕ್ಸ್, ಬೆಂಗಳೂರು.

೧೮೭. ಶ್ರೀಮತಿ ಎಚ್.ಎಸ್(ಸಂ), ೨೦೦೬, ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೮೮. ಶ್ರೀಮತಿ ಎಚ್.ಎಸ್ ಮತ್ತು ಶಿವಾನಂದ ಎಸ್.ವಿರಕ್ತಮಠ, ೨೦೦೭, ಮಹಿಳೆ ದುಡಿಮೆ ಮತ್ತು ಬಿಡುವು, ಮಹಿಳಾ ಅಧ್ಯಯನ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೮೯. ಶ್ರೀಮತಿ ಎಚ್.ಎಸ್.(ಅನು), ೨೦೧೦, ಹೆಣ್ಣುತನ ಎಂಬ ಕಣ್ಕಟ್ಟು, ಪ್ರಗತಿ ಗ್ರಾಫಿಕ್ಸ್, ಬೆಂಗಳೂರು.

೧೯೦. ಶ್ರೀಮತಿ ಎಚ್.ಎಸ್.(ಅನು), ಸಿಮೋನ ದ ಬೋವಾ, ೨೦೦೮, ದ ಸೆಕೆಂಡ್ ಸೆಕ್ಸ್, ಅಧ್ಯಯನ ಮಂಡಲ, ಬೆಂಗಳೂರು.

೧೯೧. ಶ್ರೀಮತಿ ಎಚ್.ಎಸ್.(ಅನು), ೨೦೦೯, ಸ್ತ್ರೀವಾದಿ ಭಾಷಾಶಾಸ್ತ್ರ ಪ್ರವೇಶಿಕೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೯೨. ಶ್ರೀಮತಿ ಎಚ್.ಎಸ್. ಮತ್ತು ಶಿವಾನಂದ ಎಸ್.ವಿರಕ್ತಮಠ(ಸಂ), ೨೦೦೭, ಹೆಣ್ಣು ಮತ್ತು ಭಾಷೆ, ಮಹಿಳಾ ಅಧ್ಯಯನ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೯೩. ಶೇಷಾದ್ರಿ ಬಿ. ಮತ್ತು ಚಂದ್ರಶೇಖರ್ ಟಿ.ಆರ್(ಸಂ), ೧೯೯೮, ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೯೪. ಶೈಲಜ ಹಿರೇಮಠ(ಸಂ), ೨೦೦೬, ಮಹಿಳಾ ಅಧ್ಯಯನ, ಸಂಪುಟ–೮, ಸಂಚಿಕೆ–೧, ಪ್ರಸಾರಾಂಗ, ಕ.ವಿ.ವಿ.ಹಂಪಿ.

೧೯೫. ಶೈಲಜ ಹಿರೇಮಠ, ೨೦೦೪, ಮಾತೃಪ್ರಧಾನ ಪರಿಕಲ್ಪನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೯೬. ಶೈಲಜ ಹಿರೇಮಠ (ಸಂ), ೨೦೦೭, ಮಹಿಳಾ ಅಧ್ಯಯನ, ಜನವರಿ–ಜೂನ್, ಸಂಪುಟ–೯, ಸಂಚಿಕೆ–೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೯೭. ಶೈಲಜ ಹಿರೇಮಠ, ೧೯೯೯, ಪಾತರದವರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೯೮. ಶೈಲಜ ಹಿರೇಮಠ, ೨೦೦೩, ಸ್ತ್ರೀಕಥನ, ಭುವನ ಪ್ರಕಾಶನ, ಹೊಸಪೇಟೆ.

೧೯೯. ಶೈಲಜಾ ಹಿರೇಮಠ, ೨೦೧೧ ಹರದೇಶಿ–ನಾಗೇಶಿ: ಕಲೆ ಮತ್ತು ಕಲಾವಿದರು ಲಿಂಗ ಸಂಬಂಧಿ ಅಧ್ಯಯನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೦೦. ಶೈಲಜ ಹಿರೇಮಠ., ೨೦೧೦, ಮಹಿಳಾ ಅಧ್ಯಯನ, ಸಂಪುಟ-೧೨, ಸಂಚಿಕೆ-೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೦೧. ಶೈಲಜ ಹಿರೇಮಠ, ೨೦೧೦, ಮಹಿಳಾ ಅಧ್ಯಯನ, ಸಂಪುಟ-೧೨, ಸಂಚಿಕೆ-೨, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೦೨. ಶೈಲಜ ಹಿರೇಮಠ(ಸಂ), ೨೦೦೭, ಮಹಿಳಾ ಅಧ್ಯಯನ, ಸಂಪುಟ-೯, ಸಂಚಿಕೆ-೨, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೦೩. ಶೈಲಜ ಹಿರೇಮಠ, ೨೦೧೨, ಮಹಿಳಾ ಕಾರ್ಮಿಕರು, ಶ್ರೀರಾಜೇಂದ್ರ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್, ಮೈಸೂರು.

೨೦೪. ಶೈಲಜ ಎಂ.ಸಿ. ಮತ್ತು ಇತರರು, ೨೦೦೬, ದುಡಿಯುವ ಕೈಗಳಿಗೆ ಉದ್ಯೋಗ, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಮೈಸೂರು.

೨೦೫. ಶೋಭಾ ಹೆಚ್.ಜಿ., ೨೦೦೪, ಸಾಮಾಜಿಕ ಪಿಡುಗುಗಳ ಮಧ್ಯ ಹೆಣ್ಣು, ಸ್ತ್ರೀ ಜಾಗೃತಿ ಪ್ರಕಾಶ, ಗಾಂಧಿಬಜಾರ್, ಬೆಂಗಳೂರು.

೨೦೬. ಷರೀಪಾ ಕೆ., ೨೦೧೧, ಬತ್ತಳಿಕೆ, ಕನ್ನಡ ನಾಡು ಪ್ರಕಾಶನ, ಗುಲಬರ್ಗಾ.

೨೦೭. ಸರೋಜ ಕೆ., ೨೦೦೮, ಮಹಿಳಾ ಆರೋಗ್ಯ: ಒಂದು ಮರು ಚಿಂತನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೦೮. ಸರಸ್ವತಿ ದು.(ಅನು), ೨೦೦೬, ಕನಿಷ್ಠ ವೇತನಗಳಿಗೆ ಸಂಬಂಧಪಟ್ಟ ಕಾನೂನು, ಪ್ರಕಟಣೆ ಆಲ್ಟರನೇಟಿವ್ ಲಾ ಫೋರಂ, ಬೆಂಗಳೂರು.

೨೦೯. ಸಬಿಹಾ ಭೂಮೀಗೌಡ(ಸಂ), ೨೦೦೮, ಮಹಿಳೆ ಸಂಘಟನೆ ಹೋರಾಟ, ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೨೧೦. ಸಬಿಹಾ ಭೂಮೀಗೌಡ(ಸಂ), ೨೦೧೨, ದಶಕದ ಮಹಿಳಾ ಸಾಹಿತ್ಯದಲ್ಲಿ ಪ್ರತಿರೋಧದ ನೆಲೆಗಳು, ಚಿಂತನ ಪುಸ್ತಕ, ಬೆಂಗಳೂರು.

೨೧೧. ಸಬಿಹಾ ಭೂಮೀಗೌಡ(ಸಂ), ೨೦೦೬, ಮಹಿಳಾ ಸಾಹಿತ್ಯ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೨೧೨. ಸಾರಾ ಅಬುಬಕರ್, ೨೦೦೭, ಸಾಹಿತ್ಯ ಸಂಸ್ಕೃತಿ ಮತ್ತು ಮಹಿಳೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೧೩. ಸಿದ್ಧಗಂಗಮ್ಮ(ಸಂ), ೨೦೧೦, ಅಭಿವೃದ್ಧಿ ಅಧ್ಯಯನ, ಸಂಪುಟ-೮ ಸಂಚಿಕೆ-೨, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೧೪.ಸುಬ್ರಹ್ಮಣ್ಯ ಜಿ., ೧೯೮೮, ಭಾರತೀಯ ಸಮಾಜದ ಸಮಾಜಶಾಸ್ತ್ರ, ಸುಭಾಷ್ ಪಬ್ಲಿಕೇಷನ್ಸ್, ಬೆಂಗಳೂರು.

೨೧೫.ಸುಬ್ಬಣ್ಣಮೂರ್ತಿ ಜಿ.(ಅನು), ೨೦೧೦, ಕುಟುಂಬ ವ್ಯವಸ್ಥೆ ಮಾರ್ಕ್ಸ್‌ವಾದ-ಸ್ತ್ರೀವಾದ, ಪಲ್ಲವ ಪ್ರಕಾಶನ, ಚನ್ನಪಟ್ಟಣ.

೨೧೬.ಸೇತುರಾವ್ ಎಸ್(ಅನು), ೨೦೦೬, ಉದ್ಯೋಗ ಖಾತರಿ ಕಾಯಿದೆ ಒಂದು ಪರಿಚಯ ಹೊತ್ತಿಗೆ, ನ್ಯಾಷನಲ್‌ಬುಕ್ ಟ್ರಸ್ಟ್, ಇಂಡಿಯಾ, ಹೊಸದೆಹಲಿ.

೨೧೭.ಹಾಲತಿ ಸೋಮಶೇಖರ್., ೨೦೦೭, ಮಹಿಳಾ ಚಳುವಳಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆ, ವಿಸ್ಮಯ ಪ್ರಕಾಶನ, ಮೈಸೂರು.

೨೧೮.ಹೇಮಲತಾ ಎಚ್.ಎಂ., ೨೦೦೯, ಮಹಿಳಾ ಅಧ್ಯಯನ ೬, ಡಿ.ವಿ.ಕೆ.ಮೂರ್ತಿ ಪ್ರಕಾಶಕರು, ಮೈಸೂರು.

೨೧೯.ಹೇಮಲತಾ ಎಚ್.ಎಂ., ೨೦೦೭, ಮಹಿಳಾ ಅಧ್ಯಯನ-೨, ಡಿ.ವಿ.ಕೆ.ಮೂರ್ತಿ ಪ್ರಕಾಶಕರು, ಮೈಸೂರು.

**ದಿನ ಪತ್ರಿಕೆಗಳು**

೧. ಈರಣ್ಣ ತೋಟದ್(ಲೇ), ನರೇಗಾ ಹಳೇ ಹುಳುಕು ಲೋಕಾ ತನಿಖೆ ಬಿರುಸು(ಸಿಎಜಿ ವರದಿ), ವಿಜಯ ಕರ್ನಾಟಕ, ೨೬ ಡಿಸೆಂಬರ್ ೨೦೧೪.

೨. ಉದ್ಯೋಗ ಖಾತ್ರಿಯಲ್ಲಿ ಭಾರಿ ಅಕ್ರಮದ ಶಂಕೆ(ಸಿಎಜಿ ವರದಿ), ವಿಜಯ ಕರ್ನಾಟಕ, ೩೧ ಜುಲೈ, ೨೦೧೩.

೩. ಉದ್ಯೋಗ ಖಾತ್ರಿಯಲ್ಲಿ ಜೆಸಿಬಿ ಬಳಕೆಗೆ ಗ್ರೀನ್ ಸಿಗ್ನಲ್, ಸಂಯುಕ್ತ ಕರ್ನಾಟಕ, ೨೧ ಆಗಸ್ಟ ೨೦೦೯.

೪. ಉದ್ಯೋಗ ಖಾತ್ರಿ ಯೋಜನೆ ಹಣ ಅಕ್ರಮಕ್ಕೆ ಬ್ರೇಕ್, ಸಂಯುಕ್ತ ಕರ್ನಾಟಕ, ೧ ಮಾರ್ಚ್ ೨೦೧೨.

೫. ಉದ್ಯೋಗ ಖಾತ್ರಿ: ಮಹಿಳೆ ಹೆಸರಲ್ಲೇ ಖಾತೆ, ಪ್ರಜಾವಾಣಿ, ೧೫ ಜೂನ್ ೨೦೧೩.

೬. ಉದ್ಯೋಗ ಖಾತ್ರಿ ಯೋಜನೆ ಹಣ ಬಳಕೆಯಲ್ಲಿ ಅಕ್ರಮದ ಘಾಟು, ವಿಜಯವಾಣಿ, ೩೧ ಜುಲೈ ೨೦೧೩.

೭. ಉದ್ಯೋಗ ಖಾತ್ರಿ ಯೋಜನೆಗೆ ಮಿನಿಗುತ್ತಿಗೆ, ವಿಜಯ ಕರ್ನಾಟಕ, ೨೧ ಜನವರಿ ೨೦೧೦.

೮. ಉದ್ಯೋಗ ಖಾತೆ ಪುಸ್ತಕ ಪೂಜೆಗೆ 'ಖಾತ್ರಿ', ವಿಜಯ ಕರ್ನಾಟಕ, ೧ ಫೆಬ್ರವರಿ ೨೦೦೯.

೯. ಉದ್ಯೋಗ ಖಾತ್ರಿಯಲ್ಲಿ ದೋಷ: ತನಿಖೆ, ವಿಜಯ ಕರ್ನಾಟಕ, ೨೧ ನವೆಂಬರ್ ೨೦೦೮.

೧೦. ಉದ್ಯೋಗ ಖಾತ್ರಿ ಉದ್ರಿ ಖಾತೆ, ವಿಜಯ ಕರ್ನಾಟಕ, ೨೦ ನವೆಂಬರ್ ೨೦೦೯.

೧೧. ಉದ್ಯೋಗ ಖಾತ್ರಿ ಸಮರ್ಪಕ ಜಾರಿಗೆ ಸಲಹಾ ಸಮಿತಿ, ಕನ್ನಡ ಪ್ರಭ, ೨೪ ನವೆಂಬರ್ ೨೦೦೮.

೧೨. ಕೃಷ್ಣ ಎನ್.ಲಮಾಣಿ(ಲೇ), ಕೆಲ್ಸ ಕೊಟ್ಟಿಲ್ಲ; ಗುಳೆ ತಪ್ಪಿಲ್ಲ, ವಿಜಯ ಕರ್ನಾಟಕ, ೨೭ ಡಿಸೆಂಬರ್, ೨೦೧೨.

೧೩. ಕೂಲಿ ಕೇಳಿದ್ದಕ್ಕೆ ಲಾಠಿ ಏಟು, ವಿಜಯ ಕರ್ನಾಟಕ, ೨೬ ಮಾರ್ಚ್ ೨೦೧೧.

೧೪. 'ಖಾತರಿ' ಸರಿಯಾಗಿ ಜಾರಿ ಮಾಡದಿದ್ರೆ ಹಣಕ್ಕೆ ಕತ್ತರಿ, ಉದಯವಾಣಿ, ೧೫ ಜೂನ್ ೨೦೧೩.

೧೫. ಗಿರೀಶ್ ಕೆ.ಎಸ್.(ಲೇ), ಅವಿಶ್ವಾಸದ ಅಡ್ಜಸ್ಟ್‌ಮೆಂಟ್, ಪ್ರಜಾವಾಣಿ ವಿಶೇಷ ಸೋಮವಾರ ೨೮, ಜುಲೈ ೨೦೧೪.

೧೬. ಚಂದ್ರಹಾಸ ಹಿರೇಮಳಲಿ(ಲೇ), ಅಭಿವೃದ್ಧಿ ಕಾಯಕದ ಬಂಧು, ಪ್ರಜಾವಾಣಿ ವಿಶೇಷ ಸೋಮವಾರ ೨೮, ಜುಲೈ ೨೦೧೪.

೧೭. ಚಿದಂಬರ ಪ್ರಸಾದ(ಲೇ), ಗುಳೆ ಕಾರ್ಮಿಕರ ಮತ್ತೊಂದು ದುರಂತ ಪಯಣ, ಪ್ರಜಾವಾಣಿ, ೧೭ ನವೆಂಬರ್ ೨೦೧೩.

೧೮. ಛಾಯಾದೇಗಾಂವ್ಕರ್(ಲೇ), ಅಭಿವೃದ್ಧಿಯ ಕಡೆಗೆ ಸಾಗುತ್ತಿದ್ದರೂ ಹಿಂದುಳಿದ ಹೈದ್ರಾಬಾದ್ ಕರ್ನಾಟಕ, ಸಂಯುಕ್ತ ಕರ್ನಾಟಕ, ೧೭ ಮಾರ್ಚ್ ೨೦೦೫.

೧೯. ನರಸಿಂಹಮೂರ್ತಿ ಕೆ(ಲೇ), ಜಾಬ್‌ಕಾರ್ಡ್ ಪರಿಷ್ಕರಣೆ, ಪ್ರಜಾವಾಣಿ ವಿಶೇಷ ಸೋಮವಾರ, ೧೪ ಜುಲೈ, ೨೦೧೪.

೨೦. ನರಸಿಂಹಮೂರ್ತಿ ಕೆ. (ಲೇ), ಗ್ರಾಮ ಸಭೆಯ ನಿರ್ಣಯವೂ, ನೀಲಗಿರಿ ನಾಟಿಯೂ..., ಪ್ರಜಾವಾಣಿ ವಿಶೇಷ ಸೋಮವಾರ ೬ ಅಕ್ಟೋಬರ್ ೨೦೧೪.

೨೧. ನರಸಿಂಹಮೂರ್ತಿ ಕೆ (ಲೇ), ಗ್ರಾಮಸ್ಥರನ್ನು ಮರೆತ ಗ್ರಾಮ ಸಭೆಗಳು, ಪ್ರಜಾವಾಣಿ ವಿಶೇಷ, ಸೋಮವಾರ ೨೦ ಅಕ್ಟೋಬರ್ ೨೦೧೪.

೨೨. ನರಸಿಂಹಮೂರ್ತಿ ಕೆ (ಲೇ), ಮಿಟ್ಟೂರಿನ ಪಂಚಾಯತ್ ವಸಂತ, ಪ್ರಜಾವಾಣಿ ವಿಶೇಷ ಸೋಮವಾರ, ೨೦ ಜನವರಿ ೨೦೧೪.

೨೩. ನೀಲಾ ಕೆ. (ಲೇ), ಬರದ ಬವಣೆ: ಮೋಜು, ಮೇಜವಾನಿಯಲ್ಲಿ ಸರಕಾರ, ವಿಜಯ ಕರ್ನಾಟಕ, ೧೩ ಏಪ್ರಿಲ್ ೨೦೧೨.

೨೪. ನೀಲಾ ಕೆ (ಲೇ), ಒಲ್ಲದ ಮನಸ್ಸಿನ ಯೋಜನೆಗಳು, ವಿಜಯ ಕರ್ನಾಟಕ, ೨೮ ಸೆಪ್ಟೆಂಬರ್, ೨೦೧೩.

೨೫. ನೀಲಾ ಕೆ.(ಲೇ), ಉದ್ಯೋಗ ಖಾತ್ರಿ ಇದ್ದೂ ವಲಸೆ ಯಾಕ್ರಿ? ವಿಜಯ ಕರ್ನಾಟಕ, ೧೬ ಅಕ್ಟೋಬರ್ ೨೦೧೪.

೨೬. ಪ್ರಶಾಂತ ಮಿರ್ಲೆ ವಿ (ಲೇ), ಉದ್ಯೋಗ ಖಾತರಿಯೋ, ಗುತ್ತಿಗೆ ಖಾತರಿಯೋ? ಪ್ರಜಾವಾಣಿ, ೨೦ ಜನವರಿ ೨೦೧೦.

೨೭. ಪ್ರವೀಣ ಕುಲಕರ್ಣಿ(ಲೇ), ಗಣಿ 'ಕಂದಕ'ದಿಂದ ಗಗನಚುಂಬಿ ನಗರಿಗೆ, ಪ್ರಜಾವಾಣಿ, ೩ ಜನವರಿ ೨೦೧೩.

೨೮. ಬಸವರಾಜ್ ಸಂಪಳ್ಳಿ (ಲೇ), 'ಗುರಿ ಸಾಧನೆ'ಯ ಆತಂಕ, ಪ್ರಜಾವಾಣಿ ವಿಶೇಷ, ಸೋಮವಾರ ೭ ಜುಲೈ ೨೦೧೪.

೨೯. ಬಾರಕೋಲು ಬೀಸಿದ ರೈತರು, ವಿಜಯ ಕರ್ನಾಟಕ, ೧೨ ಏಪ್ರಿಲ್ ೨೦೧೧.

೩೦. ಭರತ್ ಝುಂಜನ್‌ವಾಲಾ(ಲೇ), ಉದ್ಯೋಗ ಖಾತ್ರಿ ಯೋಜನೆ ಬದುಕಿಗೇ ಕತ್ತರಿ ಹಾಕೀತು, ಸಂಯುಕ್ತ ಕರ್ನಾಟಕ, ೨೪ ಮೇ ೨೦೦೯.

೩೧. ಭೀಮಣ್ಣ ಗಜಾಪುರ(ಲೇ), ಕೂಸು ಸಮೇತ ಹೆತ್ತವರ ಗುಳೆ, ಕನ್ನಡ ಪ್ರಭ, ೮ ಆಗಸ್ಟ್, ೨೦೧೨

೩೨. ಮತ್ತೀಹಳ್ಳಿ ಮದನ ಮೋಹನ(ಲೇ), ಆಡಳಿತಾತ್ಮಕ ಗೊಂದಲದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆ, ಪ್ರಜಾವಾಣಿ ವಿಶೇಷ(ಸೋಮವಾರ) ೧೪ ಜುಲೈ ೨೦೧೪

೩೩. ಮತ್ತೀಹಳ್ಳಿ ಮದನ ಮೋಹನ (ಲೇ), ಅಧಿಕಾರಿಗಳಿಂದ ಶಾಸಕರಿಗಾಗಿ ಯೋಜನೆ, ಪ್ರಜಾವಾಣಿ ವಿಶೇಷ ಸೋಮವಾರ ೧೩ ಅಕ್ಟೋಬರ್ ೨೦೧೪.

೩೪. ಮಹೇಶ್ ಎಂ.(ಲೇ), ಉದ್ಯೋಗ ಖಾತ್ರಿ: ಅನುಷ್ಠಾನ ಹೊಣೆ ಹಂಚಿಕೆ, ಪ್ರಜಾವಾಣಿ, ೧೩ ಆಗಸ್ಟ್ ೨೦೧೨.

೩೫. ಮುರಳಿಧರ್ ವೈ.ಜಿ.(ಲೇ), ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಹಾಗೂ ಮಾಹಿತಿ ಹಕ್ಕು, ಉದಯವಾಣಿ, ೩ ಡಿಸೆಂಬರ್ ೨೦೦೮.

೩೬. ಯಮನಪ್ಪ ಪವಾರ(ಲೇ), ಮನೆ ಕೆಲಸಕ್ಕೂ ಸಿಗಲಿದೆ ನರೇಗಾ ಹಣ, ವಿಜಯ ಕರ್ನಾಟಕ, ೨೬ ಡಿಸೆಂಬರ್ ೨೦೧೩.

೩೭. ರವೀಂದ್ರಭಟ್(ಲೇ), ಗ್ರಾಮ ಸ್ವರಾಜ್ಯದ ಕನಸು ಚಿಗುರೀತೆ? ಪ್ರಜಾವಾಣಿ ವಿಶೇಷ, ಸೋಮವಾರ ೧೦, ನವೆಂಬರ್ ೨೦೧೪

೩೮. ರವೀಂದ್ರಭಟ್ಟ(ಸಂದರ್ಶಕ), ಸಾಮಾಜಿಕ ಕ್ರಾಂತಿ ಕಡಿಮೆ ಸಾಧನೆಯಲ್ಲ, ಪ್ರಜಾವಾಣಿ ವಿಶೇಷ ಸೋಮವಾರ ೨೦ ಜನವರಿ, ೨೦೧೪.

೩೯. ರವೀಂದ್ರಭಟ್ಟ (ಲೇ), ತಾ.ಪಂ.ಗೆ ಬೇಕು ಶಕ್ತಿ ವರ್ಧಕ, ಪ್ರಜಾವಾಣಿ ವಿಶೇಷ ಸೋಮವಾರ ೧೫ ಸೆಪ್ಟೆಂಬರ್ ೨೦೧೪.

೪೦. ವಿಲ್ಫ್ರೆಡ್ ಡಿಸೋಜ(ಲೇ), ಪಂಚಾಯಿತಿಗೆಷ್ಟು ಹಂತ? ಪ್ರಜಾವಾಣಿ ವಿಶೇಷ ಸೋಮವಾರ ೧೫ ಸೆಪ್ಟೆಂಬರ್ ೨೦೧೪.

೪೧. ವಿಜಯಲಕ್ಷ್ಮಿ ಹಾವೇರಿ(ಲೇ), ಯಲವಿಗೆ ಯಶಸ್ಸಿನ ಕತೆ, ಪ್ರಜಾವಾಣಿ ವಿಶೇಷ, ಸೋಮವಾರ ೧೩, ಅಕ್ಟೋಬರ್ ೨೦೧೪.

೪೨. ವಿರೂಪಾಕ್ಷ ಹೊಕ್ರಾಣಿ(ಲೇ), ಅಕ್ರಮ ಖಾತ್ರಿ ಯೋಜನೆ, ವಿಜಯ ಕರ್ನಾಟಕ ೪ ಜುಲೈ ೨೦೧೧.

೪೩. ವಿವೇಕ ಮಹಾಲೆ(ಲೇ), ಉದ್ಯೋಗ ಖಾತ್ರಿ ಯೋಜನೆ ಅಧಿಕಾರಿಗಳ ನಿದ್ದೆಗೆಡಿಸಿರುವ ಲೆಕ್ಕಪರಿಶೋಧನೆ, ಸಂಯುಕ್ತ ಕರ್ನಾಟಕ, ೨೩ ಜೂನ್ ೨೦೧೦.

೪೪. ಶಶಿಧರ ಮೇಟಿ(ಲೇ), ಬಗೆದಷ್ಟು ಹೊರ ಬರುತ್ತಿವೆ ಖಾತ್ರಿ ಹಗರಣ, ಕನ್ನಡ ಪ್ರಭ, ೨ ಆಗಸ್ಟ್, ೨೦೧೩.

೪೫. ಶಶಿಧರಮೇಟಿ(ಲೇ), ನರೇಗಾ ಕಾರ್ಮಿಕರಿಗೆ ನೇರ ಹಣ, ಕನ್ನಡ ಪ್ರಭ, ೨೩ ನವೆಂಬರ್ ೨೦೧೨

೪೬. ಶಾರದಾ ಗೋಪಾಲ(ಲೇ), ಸ್ತ್ರೀ ಸಬಲೀಕರಣದತ್ತ ಒಂದೊಂದೇ ಹೆಜ್ಜೆ, ಪ್ರಜಾವಾಣಿ, ೨೮ ಡಿಸೆಂಬರ್ ೨೦೧೦.

೪೭. ಶ್ಯಾಮ್ ಕಶ್ಯಪ್(ಲೇ), ಒಂದು ಕೊಂಡಿ ಸರಪಳಿಯ ಬಲ ಪಡಿಸಬಹುದೇ? ಪ್ರಜಾವಾಣಿ ವಿಶೇಷ ಸೋಮವಾರ ೭, ಜುಲೈ ೨೦೧೪.

೪೮. ಶಿವಕುಮಾರ್ ಬೆಳ್ಳಿತಟ್ಟೆ(ಲೇ), ಕೇಂದ್ರ-ರಾಜ್ಯ ಸರಕಾರದ ನಡುವೆ ಜಟಾಪಟಿ 'ಖಾತ್ರಿ', ಕನ್ನಡ ಪ್ರಭ ೨೦ ಅಕ್ಟೋಬರ್ ೨೦೧೨.

೪೯. ಶೇಷಮೂರ್ತಿ ಅವಧಾನಿ(ಲೇ), ಖಾತ್ರಿ ನಕಲಿ ತಡೆಗೆ ನಡೆದಿದೆ ರಾಜ್ಯಾದ್ಯಂತ ಕಾರ್ಡ್ ಪರಿಷ್ಕರಣೆ, ಕನ್ನಡ ಪ್ರಭ, ೧೭ ಜುಲೈ ೨೦೧೦.

೫೦. ಶ್ರೀರಾಮ್ ಎಂ.ಎಸ್(ಲೇ), ನರೇಗಾ, ರೂ.ಗೊಂದು ಕಿಲೋ ಅಕ್ಕಿ ಇತ್ಯಾದಿ, ವಿಜಯ ಕರ್ನಾಟಕ, ೪ ಜುಲೈ ೨೦೧೩.

೫೧. ಸಂತೋಷ ಈ.ಚಿನಗುಡಿ(ಲೇ), ಉದ್ಯೋಗ ಖಾತರಿ: ರೂ.೧೭೧ ಕೋಟಿ ಬಾಕಿ, ಪ್ರಜಾವಾಣಿ, ೨೪ ಫೆಬ್ರವರಿ ೨೦೧೩.

೫೨. ಸಂತೋಷಕುಮಾರ್ ಕೆ.ಎಂ.(ಲೇ), ದುಡಿಯುವ ಕೈಗಳಿಗೆ ಸಿಗಲಿಲ್ಲ 'ಉದ್ಯೋಗ ಖಾತ್ರಿ', ಪ್ರಜಾವಾಣಿ, ೨ ಮಾರ್ಚ್ ೨೦೦೯.

೫೩. ಸುರೇಶ ಕೆ.ಪಿ.(ಲೇ), ವಿಕೇಂದ್ರೀಕೃತ ಭ್ರಷ್ಟಾಚಾರ, ಪ್ರಜಾವಾಣಿ ವಿಶೇಷ, ಸೋಮವಾರ ೨೪, ಫೆಬ್ರವರಿ ೨೦೧೪.

೫೪. ಸುಭಾಸ್ ಧೂಪದಹೊಂಡ(ಲೇ), ಉದ್ಯೋಗ ಖಾತ್ರಿ: ಕೂಲಿ ಹಣಕ್ಕೆ ಕತ್ರಿ?, ವಿಜಯವಾಣಿ, ೨೮ ಮಾರ್ಚ್ ೨೦೧೩.

೫೫. ಸುದರ್ಶನ್ ಚನ್ನಂಗಿಹಳ್ಳಿ(ಲೇ), ಗ್ರಾಮ ಪಂಚಾಯಿತಿ ಸಾಧನೆ ಉತ್ತರ ಕನ್ನಡ ಫಸ್ಟ್; ಯಾದಗಿರಿ ಲಾಸ್ಟ್, ವಿಜಯ ಕರ್ನಾಟಕ, ೯ ಸೆಪ್ಟೆಂಬರ್, ೨೦೧೩.

೫೬. ಹೈದರಾಬಾದ್ ವಿಮೋಚನ ಸ್ವರ್ಣ ಮಹೋತ್ಸವ, ಸಂಯುಕ್ತ ಕರ್ನಾಟಕ, ವಿಶೇಷ ಪುರವಣಿ, ೧೭ ಸೆಪ್ಟೆಂಬರ್ ೧೯೯೮.

೫೭. ಎಂಜಿಎನ್ಆರ್ಇಜಿಎಗೆ ಧನ್ಯವಾದಗಳು. ಇನ್ನು ಮುಂದೆ ಜೀತ ಪದ್ಧತಿ ಇಲ್ಲ, ಪ್ರಜಾವಾಣಿ, ೧೪ ಮೇ ೨೦೧೩.

**ಮಾಸ ಪತ್ರಿಕೆಗಳು**

೧. ಅಮರ್ತ್ಯಸೇನ್(ಲೇ), ಅಮೂಲಾಗ್ರ ಯೋಜನೆಯ ಅವಶ್ಯಕತೆ, ಯೋಜನಾ, ಏಪ್ರಿಲ್, ೨೦೦೫.

೨. ಅಬುಸುತೇಹ್ ಶರೀಫ್ (ಲೇ), ಭಾರತದಲ್ಲಿ ಮಾನವಾಭಿವೃದ್ಧಿ ಅಂದು–ಇಂದು, ಯೋಜನಾ, ಆಗಸ್ಟ್ ೨೦೦೭

೩. ಅರಿಂದ ಬಸು(ಲೇ), ಪಂಚಾಯತ್‌ರಾಜ್ ಮುಖೇನ ಬಡವರ ಸಬಲೀಕರಣ, ಯೋಜನಾ, ಅಕ್ಟೋಬರ್, ೨೦೦೫..

೪. ಇಂದುಮತಿ(ಲೇ), ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ, ಯೋಜನಾ, ಏಪ್ರಿಲ್, ೨೦೦೫.

೫. ಈಶ್ವರದೈತ್ತೋಟ(ಲೇ), ಕರ್ನಾಟಕದಲ್ಲಿ ಉದ್ಯೋಗ ಖಾತರಿ ಯೋಜನೆ, ಯೋಜನಾ ಆಗಸ್ಟ್, ೨೦೦೮.

೬. ಓಂಕಾರ ಕಾಕಡೆ(ಲೇ), ಗ್ರಾಮಾಭಿವೃದ್ಧಿ ಯೋಜನೆಗಳ ಅನುಷ್ಠಾನದಲ್ಲಿ ಮಾಧ್ಯಮಗಳು, ಯೋಜನಾ ಡಿಸೆಂಬರ್ ೨೦೦೯.

೭. ಓಂಕಾರ ಕಾಕಡೆ(ಲೇ), ಲಿಂಗಾಧಾರಿತ ಬಜೆಟ್-ಮಹಿಳಾ ಸಬಲೀಕರಣ, ಯೋಜನಾ, ಮಾರ್ಚ್ ೨೦೧೦.

೮. ಕುಮಾರ್ ಡಿ.ಕೆ.ಎಂ.(ಲೇ), ಜೈವಿಕ ವೈವಿಧ್ಯತೆ ಕಾಪಾಡುವಲ್ಲಿ ಗ್ರಾಮ ಪಂಚಾಯಿತಿಗಳ ಪಾತ್ರ, ಯೋಜನಾ, ಮೇ.೨೦೦೬.

೯. ಕುಮಾರ್ ಪಿ.(ಸಂ), ಕರ್ನಾಟಕ ವಿಕಾಸ, ಮಾರ್ಚ್ ೨೦೧೩

೧೦. ಕುಮಾರ್ ಪಿ(ಸಂ), ಕರ್ನಾಟಕ ವಿಕಾಸ, ಏಪ್ರಿಲ್ ೨೦೧೩

೧೧. ಕುಮಾರ್‌ದಾಸ್ ಹಾಲಾಡಿ(ಲೇ), ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಕೊರಗ ಮಹಿಳೆಯರ ಮಾದರಿ ಪುನರ್ವಸತಿ ಕೆಲಸ, ನಮ್ಮ ದನಿ, ಫೆಬ್ರವರಿ ೨೦೧೦.

೧೨. ಗಣೇಶನ್ ಎಸ್.(ಲೇ), ಬದಲಾಗದ ಗ್ರಾಮೀಣ ಬದುಕು, ಯೋಜನಾ, ಜುಲೈ ೨೦೦೯.

೧೩. ಗೋಪಿನಾಥ್ ಘೋಷ್(ಲೇ), ಪಾರದರ್ಶಕತೆ ಮತ್ತು ಹೊಣೆಗಾರಿಕೆಗೆ ಸಮುದಾಯದ ನಿಗಾ ಮತ್ತು ಗ್ರಾಮ ಸಭೆಗಳ ಹಿಡಿತ ಅಗತ್ಯ, ಯೋಜನಾ, ಆಗಸ್ಟ್ ೨೦೦೮.

೧೪. ಚಂದ್ರಶೇಖರ್ ಟಿ.ಆರ್.(ಲೇ), ಯೋಜನಾ ಆಯೋಗ: ಗ್ರಾಮೀಣ ಅಭಿವೃದ್ಧಿ ಮತ್ತು ಜಿಲ್ಲಾ ಯೋಜನಾ ಸಮಿತಿಗಳು, ಯೋಜನಾ, ಜನವರಿ ೨೦೦೫.

೧೫. ಚಂದ್ರಶೇಖರ್ ಟಿ.ಆರ್(ಲೇ), ಲಿಂಗ ಸಮಾನತೆ ಮತ್ತು ಅಭಿವೃದ್ಧಿ, ಹೊಸತು ಮಾರ್ಚ್, ೨೦೧೨.

೧೬. ಚಂದ್ರಮತಿ ಸೋಂದಾ(ಲೇ), ಕೃಷಿಕೂಲಿಕಾರ ಮಹಿಳೆಯ ಬವಣೆ-ಒಂದು ಅನಿಸಿಕೆ, ನಮ್ಮ ಮಾನಸ, ಮೇ.೨೦೧೨.

೧೭. ಛಾಯ ಕೆ.ದೇಗಾಂವಕರ್ ಮತ್ತು ವಿಠೋಬ ಭೀಮಣ್ಣ (ಲೇ), ಗ್ರಾಮೀಣ ಕೃಷಿ ಅಭಿವೃದ್ಧಿಯಲ್ಲಿ ಮಹಿಳಾ ಕಾರ್ಮಿಕರ ಸಮಸ್ಯೆಗಳು, ಯೋಜನಾ, ಸೆಪ್ಟೆಂಬರ್ ೨೦೦೬.

೧೮. ಜಯಶೀಲ(ಲೇ), ಗ್ರಾಮೀಣಾಭಿವೃದ್ಧಿಯಲ್ಲಿ ಸ್ವಸಹಾಯ ಸಂಘಗಳ ಮಹತ್ವ, ಯೋಜನಾ, ನವೆಂಬರ್ ೨೦೦೫.

೧೯. ಜಾನ್‌ಡ್ರೇಜೆ(ಲೇ), ಉದ್ಯೋಗ ಭರವಸೆ ಆಶೋತ್ತರಗಳು ಮತ್ತು ವಾಸ್ತವ, ಯೋಜನಾ ಏಪ್ರಿಲ್, ೨೦೦೫.

೨೦. ಜಾನ್‌ಡ್ರೇಜ್ ಮತ್ತು ಸಿದ್ಧಾರ್ಥ(ಲೇ), ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆಯಡಿ ಭ್ರಷ್ಟಾಚಾರ: ಮಿಥ್ಯೆ ಮತ್ತು ಸತ್ಯ, ಯೋಜನಾ, ಆಗಸ್ಟ್, ೨೦೦೮.

೨೧. ದಾಸನೂರು ಕೂಸಣ್ಣ(ಲೇ), ಗ್ರಾಮ ಪಂಚಾಯತ್‌ಗಳ ಆರ್ಥಿಕ ಸಂರಚನೆ; ಪರಿಕಲ್ಪನೆ ಮತ್ತು ನೈಜತೆ, ಯೋಜನಾ, ಜೂನ್ ೨೦೧೧.

೨೨. ದೇವಿಕಾ ಜೈನ್(ಲೇ), ಸರ್ಕಾರಿ ನೀತಿಯಲ್ಲಿ ಲಿಂಗ ವಿಭಜನೆಯಿಂದ ಪಾಠ, ಯೋಜನಾ ಏಪ್ರಿಲ್, ೨೦೦೭.

೨೩. ದೇವೇಂದ್ರ ಬಾಬು ಎಂ ಮತ್ತು ಜಯರಾಮಯ ಎನ್(ಲೇ)., ವಿಕೇಂದ್ರೀಕೃತ ಯೋಜನೆಗಳಲ್ಲಿ ಪಂಚಾಯತ್‌ಗಳ ಪಾತ್ರ; ಕರ್ನಾಟಕದ ಅನುಭವ, ಯೋಜನಾ, ಜುಲೈ, ೨೦೦೬.

೨೪. ನಂಜುಂಡಪ್ಪ ಡಿ.ಎಂ.(ಲೇ), ಕರ್ನಾಟಕದ ಅಭಿವೃದ್ಧಿ, ಯೋಜನಾ, ಜನವರಿ ೨೦೦೭.

೨೫. ನಾಯ್ಕ್ ಎಂ.ಬಿ(ಲೇ), ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ; ಪಂಚಾಯತಿ ರಾಜ್ ವಾರ್ತಾ ಪತ್ರ, ಮೇ, ೨೦೦೮.

೨೬. ಪಾರ್ಥ ಜೆ.ಶಾ ಮತ್ತು ಸೌಮ್ಯ ಹೆಚ್.ಬಿ.(ಲೇ), ನೀರಿನ ಸಮಸ್ಯೆಗಳು, ಯೋಜನಾ, ಜೂನ್ ೨೦೦೫.

೨೭. ಪ್ರದೀಪ್ ಬೈಸಾಬ್(ಲೇ), ಒರಿಸ್ಸಾ: ಲೆಕ್ಕ ಪರಿಶೋಧನೆ: ಬದಲಾದ ಚಿತ್ರಣ, ಯೋಜನಾ, ಆಗಸ್ಟ್, ೨೦೦೮.

೨೮. ಭಾಸ್ಕರ್‌ರಾವ್ ಎಂ.ಕೆ(ಲೇ), ಹೈದರಬಾದ್-ಕರ್ನಾಟಕದಲ್ಲಿ ವ್ಯಥೆಯೇ ಕಥೆ, ಯೋಜನಾ ಡಿಸೆಂಬರ್ ೨೦೧೧.

೨೯. ಭ್ರಷ್ಟತೆಯೇ ಮೂರ್ತಿವೆತ್ತ ಯೋಜನೆ–ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ (ಎನ್‌ಆರ್‌ಇಜಿಎಸ್), ಕಾರ್ಮಿಕ ದೃಷ್ಟಿಕೋನ, ಮೇ, ೨೦೧೦.

೩೦. ಮಾಂಟೆಕ್‌ಸಿಂಗ್ ಆಹ್ಲುವಾಲಿಯಾ(ಲೇ), ಅಭಿವೃದ್ಧಿ ನೀತಿಗಳು, ಯೋಜನಾ, ಜನವರಿ ೨೦೦೫.

೩೧. ಮ್ಯಾಥ್ಯು ಪಿ.ಎಂ.(ಲೇ), ಮಾನವ ಸಂಪನ್ಮೂಲ ಅಭಿವೃದ್ಧಿ ದೃಷ್ಟಿಕೋನ, ಯೋಜನಾ, ನವೆಂಬರ್ ೨೦೦೯.

೩೨. ಮೋಸೆಸ್ ಚಲೈ(ಲೇ), ಅಭಿವೃದ್ಧಿ ಸಾಧನೆಗೊಂದು ಪರ್ಯಾಯ ಕಾರ್ಯತಂತ್ರ-ಈಶಾನ್ಯ ಮಾದರಿ, ಯೋಜನಾ, ಡಿಸೆಂಬರ್, ೨೦೦೫

೩೩. ಯೋಜನಾ ಸಂಪಾದಕೀಯ ತಂಡ(ಲೇ), 'ಲಿಂಗ ಸಮಾನತೆಗೆ ಬಜೆಟ್ ಮುನ್ನಡೆಯ ಹಾದಿಯಲ್ಲಿ, ಅಕ್ಟೋಬರ್ ೨೦೦೬.

೩೪. ಯೋಗೇಂದ್ರ ಕೆ.(ಲೇ), ಆಡಳಿತ ಮತ್ತು ಅಭಿವೃದ್ಧಿ, ಯೋಜನಾ, ಆಗಸ್ಟ್ ೨೦೦೫.

೩೫. ರಘುವಂಶ ಪ್ರಸಾದಸಿಂಗ್(ಲೇ), ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆ-೨೦೦೫, ಯೋಜನಾ ಆಗಸ್ಟ್ ೨೦೦೮.

೩೬. ರಾಜೀವ್‌ಥಿಯೋಡರ್(ಲೇ), ಭಾರತದಲ್ಲಿ ಗ್ರಾಮೀಣಾಭಿವೃದ್ಧಿ, ಯೋಜನಾ, ಮೇ ೨೦೦೫.

೩೭. ರಿತಿಕಾ ಖೇರ್(ಲೇ), ಒರಿಸ್ಸಾ:ಭ್ರಷ್ಟಾಚಾರ-ಎನ್.ಆರ್.ಇ.ಜಿ.ಎ. ಸಾಧನೆಗೆ ಸಂಚಕಾರ, ಯೋಜನಾ, ಆಗಸ್ಟ್, ೨೦೦೮.

೩೮. ರೇಣುಕಾಂಬ ಪಿ.ಸಿ(ಲೇ), ಮಹಿಳಾ ಸಶಕ್ತೀಕರಣದ ಕಾರ್ಯಕ್ರಮಗಳು, ಯೋಜನಾ,. ಮಾರ್ಚ್, ೨೦೦೮.

೩೯. ಲಲಿತ್‌ಮಾಥುರ್(ಲೇ), ಉದ್ಯೋಗ ಖಾತರಿ ಕಾಯ್ದೆಯ ಅಪಾರ ಸಾಮರ್ಥ್ಯ-ಭರವಸೆಗಳ ಪೂರೈಕೆ, ಯೋಜನಾ, ಆಗಸ್ಟ್, ೨೦೦೮.

೪೦. ವಂದನಾ ಶಿವ(ಲೇ), ಜಲ: ಸಮುದಾಯ ಆಸ್ತಿ, ಆದಿ-ಅಂತ್ಯ, ಯೋಜನಾ, ಜೂನ್ ೨೦೦೫.

೪೧. ಶಾರದಾ ಗೋಪಾಲ(ಲೇ), ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆ ಮತ್ತು ಮಹಿಳಾ ಸಬಲೀಕರಣ, ನಮ್ಮ ಮಾನಸ, ಏಪ್ರಿಲ್, ೨೦೧೨.

೪೨. ಶುಭ್ರಸಿಂಗ್(ಲೇ), ರಾಷ್ಟ್ರೀಯ ಗ್ರಾಮೀಣ ಆರೋಗ್ಯ ದೀಕ್ಷೆ, ಯೋಜನಾ, ಜುಲೈ ೨೦೦೫

೪೩. ಸಂತೋಷ ಮೆಹ್ರೋತ್ರ(ಲೇ), ಉದ್ಯೋಗ ಖಾತ್ರಿ, ಯೋಜನಾ, ಏಪ್ರಿಲ್ ೨೦೦೫.

೪೪. ಸುಧಾಮನ್ ಕೆ.ಆರ್(ಲೇ), ಕೇಂದ್ರ ಬಜೆಟ್‌ನಲ್ಲಿ ಗ್ರಾಮೀಣ ಭಾರತದ ಅಭಿವೃದ್ಧಿಗೆ ಹೊಸ ಸ್ವರೂಪ, ಯೋಜನಾ, ಮಾರ್ಚ್ ೨೦೦೫.

೪೫. ಸುಳಕೂಡೆ ಎಸ್.ಆರ್.(ಲೇ), ಗ್ರಾಮೀಣ ಅಭಿವೃದ್ಧಿಯಲ್ಲಿ ಯೋಜನೆ ತಯಾರಿಕೆಯ ಮಹತ್ವ, ಯೋಜನಾ, ಮೇ ೨೦೦೭.

೪೬. ಸುಳಕೂಡೆ ಎಸ್.ಆರ್.(ಲೇ), ಮಾಹಿತಿ ಹಕ್ಕು ಮತ್ತು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆ-೨೦೦೫, ಯೋಜನಾ, ಡಿಸೆಂಬರ್ ೨೦೦೭.

೪೭. ಸೌಮ್ಯ ಕಿಡಾಂಬಿ(ಲೇ), ಆಂಧ್ರಪ್ರದೇಶ: ಸಾಮಾಜಿಕ ಲೆಕ್ಕ ಪರಿಶೋಧನೆ ಮೂಲಕ ಉತ್ತರದಾಯಿತ್ವದ ಹೊಣೆಗಾರಿಕೆ, ಯೋಜನಾ, ಆಗಸ್ಟ್ ೨೦೦೮.\

೪೮. ಹೇಮಲತಾ ಎಚ್.ಎಂ. ಮತ್ತು ಸರೋಜಾಸಂತಿ(ಲೇ)., ಪಂಚಾಯತ್ ರಾಜ್ಯದಲ್ಲಿ ಮಹಿಳಾ ಸಹಭಾಗಿತ್ವ, ಯೋಜನಾ, ಫೆಬ್ರವರಿ ೨೦೦೭.

೪೯. ದೇವಿಕಾ ಪಾಲ್(ಲೇ), ಮಹಿಳೆಯರ ಅಭಿವೃದ್ಧಿಯಲ್ಲಿ ಯೋಜನೆಗಳ ಪಾತ್ರ, ಯೋಜನಾ, ಜನವರಿ ೨೦೦೫.

## ಇಂಗ್ಲೀಷ್ ಕೃತಿಗಳು

1. Bagchi K.K, 2011, Mahatma Gandhi National Rural Employment Guarantee act (MNREGA)As right to employment, Abhijeet publications, Delhi

2. Bigi Thomas, 2014, NREGA and Quality of life of Beneficiaries, Allied Publishers.

3. Dash H.K., P.K.Sahoo and J.Biswal, Aquacultural potential of Derelict waterbodies-A case study, Agricultural Economics Research Review, Vol 21 July-December-2008.

4. Government of India Ministry of Rural Development, 2012, Mahatma Gandhi NREGA Sameeksha: Mahatma Gandhi Rastriya Grameen Rozgar Guarantee Adhiniyam, 2005 par sodh Adhyayanon ka sankalan(2006-2012).

5. Hickey S. and Mohan G., 2005, Relocating Participation within a Redical politics of Development, Development and Change, Vol-36, 2.

6. Jena J.K. and Das P.C., 2006, Carp culture. InbÀ Handbbok of Fisheries and Aquaculture, Indian council of Agricultural Research, New Delhi.

7. Kyatanagoudar Shweta, Attitude of Rural People about National Rural Employment Guarantee Act, publisher, Lap Lambert Academic publishing.

8. Michel J Murray and Mathew Forstater Palgrave Macmillan, 2013, Employment Guarantee Schemes: Job Creation and Policy in Developing countries and emerging Markets, Business and Economics.

9. Mahesh Sharma, 2010, Nrega (National Rural Employment Guarantee Act), Publisher, prabhat prakashan.

10. Ministry of Rural Development, 2009, Guidelines on convergence with National Rural Employment Guarantee scheme, Government of India, New Delhi.

11. Sudha V.menon, 2008, National Rural Employment Guarantee Act: Issues, Challenges and Experiences, Publisher, ICFAI University press.

12. Singh S.R., 2011, National Rural Employment Guarantee Act(NREGA): Issues and Challenges, Publisher, Aphpulishing corporation.

13. Sharma A., 2009, Evaluating performance of National Rural Employment Guarantee Act, NCAER-PIF Study, National council of Applied Economic Research, New Delhi.

## ಇಂಗ್ಲೀಷ್ ಲೇಖನಗಳು

1. Ambasta P, Vijay Shankar P.S., Shah M., Two years of NREGA: The Road Ahead, Economic and Political Weekly, February 23, 2008.

2. Bharat Bhatti, Aadhaar-Enabled payments for NREGA workers, Economics and political weekly, December 8, 2012 Vol XLVII No-49.

3. Bela Bhatia and Jean Dreze, Employment Guarantee in Jharkhand: Ground Realities, Economics and political weekly, july 22, 2006.

4. Jha R.S. Bhattacharya, R.Gaiha and S.Shankar, 2009, "Capture" of antipoverty programs: An analysis of the National Rural Employment Guarantee Scheme in India" Journal of Asian Economics.

5. Krishnamurty J., Employment Guarantee and Crisis Response, Economic and political weekly, march 4, 2006.

6. Kaustav Banerjee and Partha Saha, The NREGA, the Maoists and the Developmental woes of the Indian State, Economics and political weekly, july 10, 2010 VOL XNV No.28

7. Lalit Mathur, Employment Guarantee: Progress sfo for, Economic and political weekly, December 29, 2007.

8. panchanan Das, wage in equality in india, Decomposition by Sector, Gender and Activity Status, Economic and political weekly, December 15.2012 VOL XL VII NO 50

9. Papola T.S. Employment guarantee; A universal programme is feasible, economic and political weekly,2005

10. Reetika Khera, Right to food Act: Beyond cheap promises, Economic and political weekly, July 18, 2009 Vol XLIV No-29.

11. Siddartha and Anish Vanaik, CAG Report on NREGA: Fact and Fiction, Economic and political weekly, june 21, 2008.

12. Shetty S.L., Radicalism of NREGA, Economic and Political weekly, June 7, 2008.

# ಛಾಯಾಚಿತ್ರಗಳು



ಕೃಷಿಹೊಂಡ ನಿರ್ಮಾಣ ಕಾರ್ಯದಲ್ಲಿ ತೊಡಗಿರುವ ಗಾಣದಾಳು ಗ್ರಾಮದ ಮಹಿಳಾ ಮತ್ತು ಪುರುಷ ಕೂಲಿಕಾರರು



ಜಾನೇಕಲ್ ಗ್ರಾಮದ ಕಾಲುವೆ ಹೂಳುತೆಗೆಯುವ ಕಾಮಗಾರಿಯ ಭೂಮಾಪನ ಮಾಡುತ್ತಿರುವ
ಅಧಿಕಾರಿಗಳು ಮತ್ತು ಕೂಲಿಕಾರರು



ಬಾಗಲವಾಡ ಗ್ರಾಮದಲ್ಲಿ ಕಾಲುವೆ ನಿರ್ಮಾಣ ಕಾರ್ಯದಲ್ಲಿ ತೊಡಗಿರುವ ಮಹಿಳಾ ಮತ್ತು ಪುರುಷ ಕೂಲಿಕಾರರು



ಮಾಡಗಿರಿ ಗ್ರಾಮದ  ಕೂಲಿಕಾರರು ಬದು ನಿರ್ಮಾಣ ಕಾಮಗಾರಿಯಲ್ಲಿ ತೊಡಗಿರುವುದು



ಕಾಲುವೆ ನಿರ್ಮಾಣ ಕಾಮಗಾರಿಯಲ್ಲಿ ತೊಡಗಿರುವ ಹಿರೇಕೊಟ್ನೆಕಲ್ ಗ್ರಾಮದ ಕೂಲಿಕಾರರು



ಉದ್ಯೋಗ ಖಾತರಿ ಯೋಜನೆ ಕಾಮಗಾರಿಯ ಸಲಕರಣೆಗಳೊಂದಿಗೆ ಅಧಿಕಾರಿಗಳು ಮತ್ತು ಬಾಗಲವಾಡ ಗ್ರಾಮದ ಕೂಲಿಕಾರರು



ಕೃಷಿಹೊಂಡ ನಿರ್ಮಾಣ ಕಾಮಗಾರಿಯಲ್ಲಿ ತೊಡಗಿರುವ ನವಲಕಲ್ ಗ್ರಾಮದ ಕೂಲಿಕಾರರು



ಗೌಡನಭಾವಿ ಗ್ರಾಮದಲ್ಲಿ ಕೃಷಿಹೊಂಡ ಕಾಮಗಾರಿಯ ಅಳತೆಯಲ್ಲಿ ನಿರತರಾದ ಅಧಿಕಾರಿಗಳು



ಕಾಲುವೆ ಹೂಳುತೆಗೆಯುವ ಕಾಮಗಾರಿಯಲ್ಲಿ ತೊಡಗಿರುವ ಯರ್ರಗುಡಿ ಗ್ರಾಮದ ಕೂಲಿಕಾರರು



ಸಿರವಾರ ಗ್ರಾಮದಲ್ಲಿ ಕಾಲುವೆ ಹೂಳು ತೆಗೆಯುತ್ತಿರುವ ಕೂಲಿಕಾರರು



ಹಳ್ಳದಲ್ಲಿ ಗಿಡಗಂಟೆಗಳನ್ನು ಸ್ವಚ್ಛಗೊಳಿಸುತ್ತಿರುವ ಸಂಗನಕಲ್ ಗ್ರಾಮದ ಮಹಿಳಾ ಕೂಲಿಕಾರರು



ಹಚ್ಚೊಳ್ಳಿ ಗ್ರಾಮದ ಸ್ಮಶಾನದಲ್ಲಿ ಜಂಗಲ್ ಕಟ್ಟಿಂಗ್ ಮಾಡುತ್ತಿರುವ ಕೂಲಿಕಾರರು



ಮಾಕನಡಕ ಗ್ರಾಮದಲ್ಲಿ ಜಂಗಲ್ ಕಟ್ಟಿಂಗ್ ಕಾಮಗಾರಿಯಲ್ಲಿ ತೊಡಗಿರುವ ಮಹಿಳಾ ಕೂಲಿಕಾರರು



ಜಂಗಲ್ ಕಟ್ಟಿಂಗ್ ಕಾಮಗಾರಿಯಲ್ಲಿ ತೊಡಗಿರುವ ಸೂಲದಹಳ್ಳಿ ಗ್ರಾಮದ ಮಹಿಳಾ ಮತ್ತು ಪುರುಷ ಕೂಲಿಕಾರರು



ವ್ಯಾಸನಕೆರೆ ಗ್ರಾಮದಲ್ಲಿ ಕೆರೆ ನಿರ್ಮಾಣ ಕಾಮಗಾರಿಗಾಗಿ ಸಿದ್ಧಗೊಂಡಿರುವ ಕೂಲಿಕಾರರು



ಶಿರಿಗೇರಿ ಗ್ರಾಮದಲ್ಲಿ ಕೆರೆ ನಿರ್ಮಾಣ ಕಾಮಗಾರಿಯಲ್ಲಿ ತೊಡಗಿರುವ ಕೂಲಿಕಾರರು



ಚೆಕ್‌ಡ್ಯಾಮ್ ನಿರ್ಮಾಣ ಕಾಮಗಾರಿಯಲ್ಲಿ ನಿರತ ಮುಕ್ಕುಂಪಿ ಗ್ರಾಮದ ಕೂಲಿಕಾರರು



ಕೊರಡಕೆರೆ ಗ್ರಾಮದಲ್ಲಿ ಕೃಷಿಹೊಂಡ ಕಾಮಗಾರಿಯಲ್ಲಿ ನಿರತರಾದ ಕೂಲಿಕಾರರು



ತುಮ್ಮರಗುದ್ದಿ ಗ್ರಾಮದಲ್ಲಿ ಉದ್ಯೋಗ ಖಾತರಿ ಯೋಜನೆಯಲ್ಲಿ ನಿರ್ಮಾಗೊಂಡ ಕೃಷಿಹೊಂಡ



ಕಾಲುವೆ ನಿರ್ಮಾಣ ಕಾರ್ಯದಲ್ಲಿ ನಿರತರಾದ ಕೇಸಕ್ಕಿ ಹಂಚಿನಾಳ ಗ್ರಾಮದ ಕೂಲಿಕಾರರು



ಬಂಡಿ ಗ್ರಾಮದಲ್ಲಿ ಗಿಡಗಂಟೆಗಳನ್ನು ಸ್ವಚ್ಛಗೊಳಿಸುವ ಕಾರ್ಯದಲ್ಲಿ ತೊಡಗಿರುವ ಕೂಲಿಕಾರರು



ಹಿರೇಬಗನಾಳ್ ಗ್ರಾಮದಲ್ಲಿ ಜಂಗಲ್ ಕಟ್ಟಿಂಗ್ ಕಾರ್ಯದಲ್ಲಿ ತೊಡಗಿರುವ ಕೂಲಿಕಾರರು

ಮಹಿಳಾ ಅಧ್ಯಯನ ವಿಭಾಗ